
ಕರ್ಮವೀರ

ಪಾವಳಿ ೧೯೮೭
ಷಾಂಕ



ರೂ. ೧೦.

ದೀಪಾವಳಿಯ ಹಾರ್ದಿಕ ಶುಭಾಶಯಗಳೊಂದಿಗೆ :



ಸಿಹಿ ಉದ್ಯಮ

ಮತ್ತು

ಸಾಹಿತ್ಯೋದ್ಯಮ

ಎರಡರಲ್ಲೂ ಯಶಸ್ಸು ಸಾಧಿಸಿರುವ ಶಿವಮೊಗ್ಗೆಯ

ಶ್ರೀ ಯು. ವಿ. ಮಂಜುನಾಥ ಐತಾಳ


ಇವರ ಪರಿಪಕ್ವ ಅನುಭವ ಮಾರ್ಗದರ್ಶನದಲ್ಲಿ ಎಲ್ಲರ ಅಭಿಮಾನಕ್ಕೆ ಪಾತ್ರನಾಗಿ ಯಶಸ್ಸು ಗಳಿಸುತ್ತಿರುವ ನಮ್ಮ ಸಂಸ್ಥೆಗಳು :-

- **ವೆಂಕಟೇಶ ಸ್ವೀಟ್ ಹೌಸ್**
  ಬಿ.ಹೆಚ್. ರಸ್ತೆ ಶಿವಮೊಗ್ಗ
- **ಬಾಲಾಜಿ ಬೇಕರಿ**
  ಬಿ.ಹೆಚ್. ರಸ್ತೆ ಶಿವಮೊಗ್ಗ
- **ಶ್ರೀ ವೆಂಕಟೇಶ್ವರ ಸ್ವೀಟ್ ಹೌಸ್**
  ಶ್ರೀನಿಧಿ ಕಾಂಪ್ಲೆಕ್ಸ್, ನೆಹರೂ ರಸ್ತೆ, ಶಿವಮೊಗ್ಗ
- **ಶ್ರೀ ರಾಮನಾಥ ಟ್ರೇಡಿಂಗ್ ಕಂಪನಿ**
  ಹೇಮಾವತಿ ಬಿಲ್ಡಿಂಗ್, ಬಲ್ಮಠ, ಮಂಗಳೂರು
- **ತಮಸೋಮಾ ಪ್ರಕಾಶನ ಸಂಸ್ಥೆ**
  "ಉಷಾಮಹಿ" ದಿನಪತ್ರಿಕೆ, "ತಮಸೋಮಾ" ಮಾಸಪತ್ರಿಕೆ
  ಕಸ್ತೂರಿ ಬಾ ರಸ್ತೆ, ಶಿವಮೊಗ್ಗ

ಸಿಹಿ ಮತ್ತು ಸಾಹಿತ್ಯ ರಸ ಸ್ವಾದನೆಗೆ ಸದಾ ಭೇಟಿ ಕೊಡಿ, ನಮ್ಮ ಸಿಹಿ ಸಂಸ್ಥೆಗಳ ಸಂದರ್ಶನ ನಿಮ್ಮ ದಿನಚರಿಯಲ್ಲಿ ಒಂದಾಗಲಿ.

ಕೆ. ಎಲ್. ಉಪಾಧ್ಯಾಯ ಯು. ವಿ. ಮಂಜುನಾಥ ಐತಾಳ


MILTON
MILTON
Part of your everyday life


deebee's
VICTORIA ROAD HUBLI-20
The Family Shop
For HI Fashioned
Clothing
deebee's
ಡೀಬೀಸ್
ಉತ್ತಮ ದರ್ಜೆಯ ಫ್ಯಾಶನೇಬಲ್
ಬಟ್ಟೆಗಳಿಗಾಗಿ ಒಂದೇ ಒಂದು ಸ್ಥಳ
ವಿಕ್ಟೋರಿಯಾ ರೋಡ ಹುಬ್ಬಳ್ಳಿ Ph.67232
Aditya /GANESH.ADS


ದೀಪಾವಳಿಯ
ಶುಭಾಶಯಗಳು
ದೀಪಾವಳಿಯ ಜ್ಯೋತಿಯೊಡನೆ
ಉಳಿತಾಯದ ಜ್ಯೋತಿಯನ್ನು
ನಿಮ್ಮ ಮನೆಗೆ ಸ್ವಾಗತಿಸಿ
ಕರ್ಣಾಟಕ ಬ್ಯಾಂಕ್ ಲಿ
ಪ್ರಧಾನ ಕಛೇರಿ:
ಮಂಗಳೂರು-575003

कर्मण्येवाधिकारस्ते मा फलेषु कदाचन

ಕರ್ಮವೀರ

ದೀಪಾವಳಿ ವಿಶೇಷಾಂಕ

1987

ಲೋಕ ಶಿಕ್ಷಣ ಟ್ರಸ್ಟಿನ ಪ್ರಕಟನೆ

ವ್ಯವಸ್ಥಾಪಕ ಸಂಪಾದಕರು
ಕೆ. ಶಾಮರಾವ್

ಸಂಪಾದಕ
ಆರ್. ಎ. ಉಪಾಧ್ಯ

ನಿರ್ವಹಣೆ:
ಎಸ್ಕೆ. ಶಾಮಸುಂದರ
ಎಂ. ಎಲ್. ದೇಶೀಕರ್

ಜಾಹೀರಾತು
ಎಸ್. ಜಿ. ಕಾಶೀಕರ
ಎಸ್. ಆರ್. ಗುರುರಾಜರಾವ್

ಪ್ರಸಾರಾಂಗ
ಎಸ್. ಕೆ. ಕಾಟೋಟಿ

ಮುದ್ರಕ ಹಾಗೂ ಪ್ರಕಾಶಕ
ಎನ್. ಎಚ್. ವಡವಿ
ಸಂಯುಕ್ತ ಕರ್ನಾಟಕ
ಹುಬ್ಬಳ್ಳಿ–ಬೆಂಗಳೂರು

ಮುಖಚಿತ್ರ:
ಕಾಳಿಂಗ ಮರ್ದನ ಶ್ರೀಕೃಷ್ಣ

ವರ್ಣಪಾರದರ್ಶಿಕೆ:
ದೇವಯಾನೀ ಬ್ಯಾನರ್ಜಿ

ನಿವೇದನೆ

ಆಷಾಢದ ಪ್ರಥಮ ದಿನದಿಂದ ಕಾರ್ಮೋಡಗಳು ಸಾಲುಗಟ್ಟಿ ಬರುವದನ್ನು ನಿರೀಕ್ಷಿಸುತ್ತ, ಸಮೃದ್ಧಿಯ ಕನಸು ಕಾಣುತ್ತ ನಿಂತವರಿಗೆ ದಿಗಂತದಲ್ಲಿ ಗೋಚರಿಸಿದ್ದು ತಮ್ಮ ಭವಿಷ್ಯದ ಸೋಲಿನ ಕಾರ್ಮೋಡ. ಅದೀಗ ಏರುತ್ತ ಬಂದು ತಲೆಯ ಮೇಲೆಯೇ ನಿಂತಿದೆ. ಈ ಸಮಯದಲ್ಲಿ, ಹಸಿರಾಗಿ ಕಂಗೊಳಿಸಬೇಕಾಗಿದ್ದ ಭೂ ತಾಯಿ, ಮುಖ ಸುಕ್ಕುಗಟ್ಟಿ, ರಕ್ತ ಒಣಗಿ ಕ್ಷಯ ಬಡಿದ ರೋಗಿಯಂತೆ ಕಾಣತೊಡಗಿದ್ದಾಳೆ. ನಮ್ಮೆಲ್ಲರ ಹೊಟ್ಟೆ ತುಂಬಿಸಲು ಬೆವರು ಸುರಿಸುವ ಆ ಭೂ ಪುತ್ರ ಭಿಕ್ಷುಕನಂತೆ ತುತ್ತಿಗಾಗಿ ಪ್ರಭುವಿನ ಮುಂದೆ ಕೈಚಾಚುತ್ತಿದ್ದಾನೆ, ಅನ್ನದಾತ ಅನ್ನಾನ್ನಗತಿಕನಾಗಿದ್ದಾನೆ. ಹುಟ್ಟಿಸಿದ ದೇವರಿಗೆ ಹುಲ್ಲು ಮೇಯಿಸಲು ಸಹ ಸಾಧ್ಯವಾಗುತ್ತಿಲ್ಲ. ಲಕ್ಷೋಪಲಕ್ಷ ಧೇನುಗಳು ಖಂಡವೂ ಇಲ್ಲದೆ, ಮಾಂಸವೂ ಇಲ್ಲದೆ, ಕೇವಲ ಚರ್ಮ ಮೂಳೆಗಳ ರೂಪುಗಳಾಗಿ 'ಸತ್ತರೇ ಸುಖ' ಎನ್ನುವ ಸ್ಥಿತಿಯಲ್ಲಿವೆ. ಇದು ಒಂದೆಡೆಯ ಚಿತ್ರ. ಇನ್ನೊಂದು ಇದಕ್ಕಿಂತ ಭೀಕರ. ಹಿಮಾಲಯದ ಕೆಳಗಿನ ಬಯಲುಗಳಲ್ಲೆಲ್ಲ ಗಂಗೆಯರ ರುದ್ರತಾಂಡವ. ಅವರ ಹೆಜ್ಜೆ ಬಿದ್ದೆಡೆಯಲ್ಲಿ ಅವರ ಆಘಾತಕ್ಕೆ ಸಿಕ್ಕವರ ನರಳಾಟ–ಕೂಗಾಟ. ಎಲ್ಲೆಲ್ಲೂ ಪ್ರಳಯ ಸದೃಶ ದೃಶ್ಯ. ಒಂದೆಡೆ ಪ್ರಾಣ ಬಿಡುವವರ ಬಾಯಿಗೆ ಸುರಿಯಲು ನೀರಿಲ್ಲ; ಇನ್ನೊಂದೆಡೆ ಬರಿ ನೀರು ಕುಡಿದು ಹೆಣವಾಗಿ ಬಿದ್ದವರ ರಾಶಿ. "ಪ್ರಭವನಾಮ ಸಂವತ್ಸರದಲ್ಲಿ ಶುಭಗ್ರಹರಿಗೆ ಅಧಿಕಾರ ಬಾಹುಳ್ಯವಿರುವದರಿಂದ ಮಳೆ ಸರಿಯಾಗಿ ಸುರಿದು, ಬಾವಿ, ಕೆರೆ, ಕೊಳ್ಳ, ಜಲಾಶಯಗಳು ಜಲ ಭರಿತವಾಗಿ, ಭೂಮಿಯಲ್ಲಿ ದವಸ ಧಾನ್ಯ, ಪೈರು ಅಧಿಕವಾಗಿ ಬೆಳೆದು ಎಲ್ಲೆಡೆ ಜನ ಸುಖ ಸಂತೋಷದಿಂದ ಇರುವರು" ಎಂಬ ಜ್ಯೋತಿಷಿಗಳ ವಾಣಿಯನ್ನು ನೆನೆಸಿಕೊಂಡರೇ ಹೊಟ್ಟೆ ಉರಿಯುತ್ತದೆ. ಅದು ನಿಜವಾದದ್ದಾದರೂ ಎಲ್ಲಿ? ದೇಶದ ಅರ್ಧಕ್ಕಿಂತ ಹೆಚ್ಚು ಭಾಗ ದುರ್ಭಿಕ್ಷದ ಪಕ್ಷವಾತ ಬಡಿದು ನರಳುತ್ತಿದೆ. ಮುನಿದ ನಿಸರ್ಗವನ್ನು ಸಾಂತ್ವನಗೊಳಿಸುವ ದಾರಿಯಂತೂ ಇಲ್ಲ. ಆದರೆ ಕೋಪಕ್ಕೆ ಬಲಿಯಾದವರ ಕಣ್ಣೀರನ್ನು ಒರೆಸುವ ಸಾಮರ್ಥ್ಯ ಇದೆ. ಇದೇ ಈಗ ನಾವು ಮಾಡಬಹುದಾದ ಪರಮ ಪುಣ್ಯದ ಕಾರ್ಯ. ಪಟಾಕ್ಷಿಗಳ ಸದ್ದಿನಲ್ಲಿ ಆರ್ತರ ಮೊರೆ ಮುಚ್ಚಿಹೋಗುವಂತೆ ಮಾಡುವದು ಬೇಡ. ಜೀವಚ್ಛವವಾಗಿರುವ ನಮ್ಮ ಜೀವದಾತರನ್ನು ಬದುಕಿಸಲು ಮುಂದಾಗಬೇಕು. ಕೇವಲ 'ಮನ'ದಿಂದಲ್ಲ, ತನು ಧನಗಳೊಂದಿಗೆ ಅವರ ಋಣ ತೀರಿಸಲು ಧಾವಿಸಬೇಕು. ಅದರಿಂದ ಸಿಗುವ ಸಂತಸ, ದೀಪಾವಳಿ ಉತ್ಸವದ ಕ್ಷಣಿಕ ಆನಂದಕ್ಕಿಂತ ಸಹಸ್ರಪಟ್ಟು ಜಾಸ್ತಿಯಾದೀತು. ಆತ್ಮಪ್ರೇರಣೆಯಂತೆ ನಡೆದ ತೃಪ್ತಿಯನ್ನು ತಂದೀತು. ಕನ್ನಡ ಕುಲ ಬಾಂಧವರೆಲ್ಲರೂ ಈ ಪವಿತ್ರ ಕಾರ್ಯಕ್ಕೆ ತಮ್ಮನ್ನು ಅರ್ಪಿಸಿಕೊಂಡು, ಸಂತ್ರಸ್ತ ಕೋಟಿಯಲ್ಲಿ "ರಕ್ಷಕರು ಇದ್ದಾರೆ" ಎಂಬ ವಿಶ್ವಾಸ ಹುಟ್ಟಿಸುವಿರೆಂದು ನಂಬಿದ್ದೇವೆ.


ಐದಾರು ವರ್ಷಗಳಿಂದ ಹಿಮಲೋಕದ ಪ್ರಾಣಿಯಂತೆ ಬರೀ ಶ್ವಾಸೋಚ್ಛ್ವಾಸ ಮಾಡುತ್ತ ದೀರ್ಘಕಾಲ ನಿದ್ರೆಯಲ್ಲಿದ್ದು ವರ್ಷಕ್ಕೊಮ್ಮೆ ಮುಖತೋರಿಸುತ್ತಿರುವ 'ಕರ್ಮವೀರ' ಮತ್ತಷ್ಟು ಅಲಂಕಾರದೊಂದಿಗೆ ಮೊದಲಿನಂತೆ ಪ್ರತಿವಾರ ಕಾಣಿಸಿಕೊಳ್ಳುವ ದಿನ ದೂರವಿಲ್ಲ. ಅದಕ್ಕೆ ಬೇಕಾದ ಸಿದ್ಧತೆಗಳು ನಡೆಯುತ್ತಿವೆ. ಹಿರಿಯ ಚೇತನಗಳ ಹಾಗೂ ಸಹೃದಯಿಗಳ ಆಶೀರ್ವಾದದಿಂದ ಅದು ಲೋಕ ಶಿಕ್ಷಣದ ತನ್ನ ಮೂಲ ಧ್ಯೇಯವನ್ನು ಈಡೇರಿಸಲು ಮತ್ತೊಮ್ಮೆ ವಚನಬದ್ಧವಾಗಲಿದೆ.

ಈ ಸಂಚಿಕೆಯಲ್ಲಿ, ಬಗೆಬಗೆಯ ಪ್ರಕಾರದ ಸಾಹಿತ್ಯವನ್ನು ತುಂಬಿ ಶ್ರೀಮಂತಗೊಳಿಸಲು ಕಾರಣರಾದ ಲೇಖಕರಿಗೆ ಹಾಗೂ ಜಾಹೀರಾತುಗಳನ್ನು ನೀಡಿ ಸಹಕರಿಸಿದವರಿಗೆ ಅನಂತ ಕೃತಜ್ಞತೆಗಳು.

—ಸಂಪಾದಕ

ಪರಿವಿಡಿ

ಚಿತ್ರಲೇಖನ



ಕರ್ನಾಟಕದ ಜೀವನದಿ : ತುಂಗಭದ್ರಾ 14

● ವೇಣುಗೋಪಾಲ ಸೊರಬ

ಶಂಕರಾಚಾರ್ಯರು ಸ್ಥಾಪಿಸಿದ ಶೃಂಗೇರಿಪೀಠ

● ಪ್ರೊ॥ ಜಿ. ಡಿ. ನಾಡಕರ್ಣಿ

ವಾಙ್ಮಯ ವಿಭೂತಿ ರಾಘವೇಂದ್ರ ಯತಿಗಳು

● ಪಂಡಿತ ಪಂಢರಿನಾಥಾಚಾರ್ಯ ಗಲಗಲಿ



31 ಮಥುರಾ : ಶ್ರೀಕೃಷ್ಣನ ಆಡುಂಬೊಲ

● ಸೇತೂರಾವ್ ಶ್ರೀನಿವಾಸ್

ಶ್ರೀಕೃಷ್ಣ (ತತ್ತ್ವ) ವಸ್ತು ವಿಕಾಸ

● ಪಂಡಿತ ಜಯತೀರ್ಥಾಚಾರ್ಯ ವಾ. ಮಳಗಿ

73 ಮೈಸೂರು ವೀಣಾ ಪರಂಪರೆ

● ಲಯನ್ ವಿದ್ವಾನ್ ಆರ್. ಕೆ. ಸೂರ್ಯನಾರಾಯಣ್



ಪುರುಷ ಸರಸ್ವತಿ ಡಾ. ದೊರೆಸ್ವಾಮಿ ಅಯ್ಯಂಗಾರ್ 85

● ರಾವು.

ವಿಶೇಷ ಲೇಖನ

ನಾನೇಕೆ ಬರೆಯುತ್ತೇನೆ	...	ಡಾ. ಹಾ. ಮಾ. ನಾಯಕ	121
ಕನ್ನಡ ಚಳವಳಿ ಆದದ್ದು : ಆಗಬೇಕಾದ್ದು.	...	ಡಾ. ಎಂ. ಚಿದಾನಂದಮೂರ್ತಿ	138
ಚಾಲುಕ್ಯ ವಾಸ್ತು-ಶಿಲ್ಪ	...	ಲಕ್ಷ್ಮಣ ತೆಲಗಾವಿ	148
ಫ್ಯಾಷನ್ಸ್	...	ರೂಪಾ ಈರೇಶನವರ	172
ಪಕ್ಷಿಗಳಿರಲಿ ನಾಡೆಲ್ಲ	...	ಡಾ॥ ಎನ್. ಎ. ಮಧ್ಯಸ್ಥ	202
ವನ್ಯಜೀವಿಗಳ ಅಳಿವು-ಉಳಿವು	...	ಪಾಂಡುರಂಗ ಹೆಗಡೆ	208
ವೈಶೇಷಿಕ ದರ್ಶನ	...	ಡಾ. ಪಿ. ಎಸ್. ರಾಮಾನುಜಂ	215
ಕನ್ನಡ ರಂಗಭೂಮಿ : ಎಂಬತ್ತರ ಒಲವುಗಳು	...	ಕ. ವೆಂ. ರಾಜಗೋಪಾಲ	257
ಬಣ್ಣದ ಬದುಕಿಗೆ ಮೆರಗು ನೀಡಿದ ಜಯಮ್ಮ	...	ಹಂ. ವೆಂ. ಸೀತಾರಾಮಯ್ಯ	282

ಪರಿವಿಡಿ

ಕಥೆ

ವಗಡೂ ಪರಬನ ಅಶ್ವಮೇಧ	ಜಯಂತ ಕಾಯ್ಕಿಣಿ	66
ತಲ್ಲಣ	ಪ್ರೇಮಾ ಭಟ್	98
ವ್ಯಭಿಚಾರ	ಡಾ॥ ಬೆಸಗರಹಳ್ಳಿ ರಾಮಣ್ಣ	115
ಅಮೃತೋಮಾ ..	ರಾಜಶೇಖರ ಭೂಸನೂರಮಠ	130
ಹೆಸರಿಲ್ಲದ ಬಳ್ಳಿ	ಗೀತಾ ನಾಗಭೂಷಣ	155
ರಾಘಣ್ಣ ಮಾಮಲೆದಾರನಾದದ್ದು	ಡಾ॥ ರಾ. ಯ. ಧಾರವಾಡಕರ	162
12155	ನಾಗತಿಹಳ್ಳಿ ಚಂದ್ರಶೇಖರ	194
ಘನತೆಯ ರಕ್ಷಣೆ	ಆದ್ಯ ರಾಮಾಚಾರ್ಯ	246

ಕವಿತೆ

ದೊಡ್ಡವರು	ಪುತಿನ	13
ಪಂಡಿತ ಪ್ರಾಧ್ಯಾಪಕನ ದಿನಚರಿ	ವಿನಾಯಕ	53
ಜೀನಿಯಾ ಮತ್ತು ಜರ್ಬರಾ	ಚೆನ್ನವೀರ ಕಣವಿ	65
ವಚನಾರಾಮ	ಸಿದ್ಧಯ್ಯ ಪುರಾಣಿಕ	97
ಸ್ವರ್ಗಕ್ಕೆ	ಜಿ. ಎಸ್. ಶಿವರುದ್ರಪ್ಪ	113
ಭಾಗ್ಯವಂತರು	ಬಿ. ಆರ್. ಲಕ್ಷ್ಮಣರಾವ್	129
ಗಿರಿಜನರು	ಬಿ. ಸಿ. ಸ್ವಾಮಿ	152
ಆಶಯ	ಮಾಲತಿ ಪಟ್ಟಣಶೆಟ್ಟಿ	153
ಬೆಂಕಿರಾಯ	ಸುಮತೀಂದ್ರ ನಾಡಿಗ	161
ಸ್ವಾತಂತ್ರ್ಯೋತ್ಸವ; ನಲವತ್ತು	ಕಾಳೇಗೌಡ ನಾಗವಾರ	193
ನನ್ನ ಪುಟ್ಟ ಪ್ರಪಂಚ	ಸುಬ್ರಾಯ ಚೊಕ್ಕಾಡಿ	207
ಜವರಾಯನಿಗೆ	ದ. ಲ. ಕೆರೂರ	217
ಹಸಿರು ಚಿನ್ನಾವ	ಶಿವಶಂಕರ ಕಣಾಜನವರ	218
ಪ್ರೀತಿ	ಕನ್ನಿಕಾ ಹೆಗಡೆ	245
ಪರಸ್ಪರ	ಶ್ರೀಕೃಷ್ಣ ಚೆನ್ನಂಗೋಡ್	255
ಪೂರ್ಣಪ್ರಜ್ಞ ವಚನಗಳು	ಶ್ರೀ ಮುಜಗಂ	266
ಹುಡುಗ– ಒಂದು, ಎರಡು	ಎಚ್. ಎಸ್. ವೆಂಕಟೇಶಮೂರ್ತಿ	281

ವಿಡಂಬನೆ

ಪಿತೃಲೋಕದವರೊಡನೆ ನನ್ನ ಸಂಭಾಷಣೆ	ಲಾಂಗೂಲಾಚಾರ್ಯ	60
ಫುಟ್‌ಬಾಲ್ ಬಸೆಟ್ಟಿ	ಎಂ. ಕೆ. ಗೋಪಿನಾಥ್	91
ದೇವಲೋಕದ ಮೇಲೆ ಮಾನವರ ದಾಳಿ	ಶಂ. ಬಾ. ಮುನಗೋಳಿ	105
ಪ್ರಣಯ ಪತ್ರಗಳು	ಎಸ್ಕೆ	143
ವಿವಾಹ ಸದನ	ಎಂ. ಎಸ್. ನರಸಿಂಹಮೂರ್ತಿ	221
ಇಕ್ಕಟ್ಟಿನ ಬಿಕ್ಕಟ್ಟು	ಟಿ. ಸುನಂದಮ್ಮ	251

ಬಾಲಪ್ರಪಂಚ

ಮಾನವನಾಗು	ಶಂ. ಗು. ಬಿರಾದಾರ	185
ದಿಲ್‌ದಾರ್-ನೌಷಾದ್	ಅನುರಾಧಾ	186
ಆಮೆ ಮತ್ತು ಹಂಸಗಳು	ಟಿ. ಎಸ್. ನಾಗರಾಜಶೆಟ್ಟಿ	188
ಜಾಣ ಗಿಳಿ	ಸಂಪಟೂರು ವಿಶ್ವನಾಥ್	189
ನೀ ಕೊಡುವೆಯಾದರೆ	ಸಂಗಮೇಶ ಹೊಸಮನಿ	191

ಏಕಾಂಕ ನಾಟಕ

ಕುಂಟ ಕಾಲಿಗೆ ವೈದ್ಯ	ಅನಂತ ಕಲ್ಲೋಳ	267

ಓದುಗರ ಅಂಕಣ

ಸಾಲ ಎತ್ತುವ ಕಲೆ		178

ಚಿತ್ರಪ್ರಪಂಚ

ಹೊಸ ನೀರಾಗಿ ಬಂದ ಈ ಹುಡುಗ	ಮುಳ್ಳಹಳ್ಳಿ ಸೂರಿ	289
ತಾರಾ–ಎತ್ತರಕ್ಕೇರಿದ ನಕ್ಷತ್ರ	ಸುಹಾಸ್	293
ಬ್ರಿಜ್ ಸಿನಿಮಾಗಳು ಇಂದು ದಡ ಕಳೆದುಕೊಂಡಿವೆ	ಕಾಶೀನಾಥ್	297
ಬದುಕು ಭ್ರಮೆಯಲ್ಲ	ಹಂಸಲೇಖಾ	303
ಬಣ್ಣದ ಸನ್ಯಾಸಿ-ವಿನೋದ ಖನ್ನಾ	ವಸಂತ ಕಲಕೋಟಿ	311
ವರ್ಷ ಭವಿಷ್ಯ	ಎನ್. ಕೆ. ಜೋಗಳೇಕರ	225

ವ್ಯಂಗ್ಯ ಚಿತ್ರಗಳು : ನಾಡಿಗ್, ಕೆ. ಆರ್. ಸ್ವಾಮಿ, ಎಚ್. ಬಿ. ಮಂಜುನಾಥ್, ಪ್ರೇಂಕುಮಾರ್, ವಿ. ಗೋಪಾಲ್, ಎಂ. ವಿಶ್ವನಾಥ್, ಸುಬ್ರಹ್ಮಣ್ಯ.

ಚುಟುಕುಗಳು : ಎಂ. ಅಕಬರ ಅಲಿ, ಡಾ॥ ಪಂಚಾಕ್ಷರೀ ಹಿರೇಮಠ, ಎಚ್. ಡುಂಡಿರಾಜ್, ಮಣ್ಣಿನಮಗ

ಕಲೆ : ಪಿ. ಆರ್. ಪಾಟೀಲ, ಎಂ. ಎಸ್. ನಸಿಫರ್

ದೀಪಾವಳಿ ಹಾರ್ದಿಕ ಶುಭಾಶಯಗಳು

Siddheshwar
HUBLI

ಸಿದ್ಧೇಶ್ವರ ಆ್ಯಂಡ ಕಂಪನಿ (ಹುಬ್ಬಳ್ಳಿ) ಪ್ರಾ. ಲಿ


ಪುಣೆ-ಬೆಂಗಳೂರ ರೋಡ, ಹುಬ್ಬಳ್ಳಿ-೫೮೦೦೨೪.

ತಂತಿ ; 'ಸ್ಟೀಲಸೇಫ'

ಫೋನ :63078/9

ಶ್ರೇಷ್ಠಮಟ್ಟದ ಉಕ್ಕಿನ ತಿಜೋರಿ ಕಪಾಟುಗಳು ಮತ್ತು
ಎಲ್ಲ ತರಹದ ಬ್ಯಾಂಕ ಆಫೀಸುಗಳಿಗಾಗಿ
ಸ್ಟೀಲ ಫರ್ನಿಚರ ತಯಾರಕರು.

೨೦ ವರ್ಷಗಳ ನಿರಂತರ ಅಭಿವೃದ್ಧಿಯ ಮೈಲುಗಲ್ಲು.



M.K Publicity

ದೊಡ್ಡವರು

ತಿರೆಗೆ ತಮ್ಮ ಸಿರಿಯ ತೆತ್ತು
ಕರಿಯ ಮೋಡ ಸುರಿದು ಹೋದವು
ಮಳೆಯ ಸುರಿದು
ಬೆಳೆಯ ಬೆಳೆದು
ನೆಲದೊಳೆಲ್ಲು ಹಸಿರ ಮೆರೆದು
ಬಳಿಯ ಹಾಯಿ ದೋಣಿಯೊಳಗೆ
ತೇಲಿ ಹೋದವು.
ಬರು ವೇಳೆ ಕಾಳಿಯಂತೆ
ಕನಲಿ ಬಂದವು
ಮಿಂಚು ಮಿನುಗು
ಸಿಡಿಲು ಗುಡುಗು
ಬೀಸುಗಾಳಿ
ವೈಹಾಳಿ.
ಭೀತಿ ತಂದವು.
ಹೋಗುವಂದು ತಂಪುಸೊಂಪು
ಹೊಲಗದ್ದೆಗು ಹೊನ್ನ ಪೆಂಪು
ಮೊದಲು ದಿಗಿಲು ಭುಗಿಲು ಕ್ರಾಂತಿ
ಕೊನೆಗೂ ಸುಖ ಸಮೃದ್ಧಿ ಕಾಂತಿ
ಸದ್ದು ಮಾಡಿಕೊಂಡು ಬಂದು ಸದ್ದಿಲ್ಲದೆ ಹೋದವು
ಸುದ್ದಿಯೇ ಇಲ್ಲದಂತೆ
ಗದ್ದುಗೆಗಳ ಬಯಸದಂತೆ
ಎದ್ದು ಹೋದವಯ್ಯ ಮೋಡ
ಶುಭ್ರವಾಗುತ
ನಾಡ ಜನಕೆ ಹೊಚ್ಚ ಹೊಸ
ಬದುಕ ನೀಡುತ.

ಕರಿಯ ಮುಗಿಲ ಹಿಂದಿನಂತೆ
ಕೆರಳಿ ಬಾರದು ಹೋದರಣ್ಣ
ಪರರಾಳಿಕೆ ಬೇಗೆ ನಂದಿ
ನಾಡಿದಾಗೆ ಆನಂದಿ
ಕ್ರಾಂತಿವೀರ ಮಹಾಪುರುಷರೆಮ್ಮ ನಾಡೊಳು.
ಕಣಸಿಗಾಗಿ ಕನಲಿದರು
ಸೆಣಸಿದವರ ಮಣಿಸಿದರು
ಕಣಕಣದೊಳು ಜೀವ ತುಂಬಿ
ಹರಣದೊಸಗೆ ಮೆರೆಸಿದರು
ಬಳಿ ಮಾಗಿತೆಲ್ಲು ತೆರಳಿದರು.
ನಾಡ ಶುಭವನೊಂದೆ ಬಯಸಿ
ಈಡು ಮಾಡಿ ತಮ್ಮ ಬದುಕ
ಹಾದ ಹುಟ್ಟು ಕೀಡಗೆದ್ದು
ನಡೆದ ಧೀರರ
ಜೋಡಿಸುತ್ತ ಕರವ ತಲೆಗೆ
ಸೂಡಿ ಹಾಡಿ ಹರಸಿ ನೆನೆವ
ರೂಢಿಸುತ್ತಲವರು ಗಳಿಸಿ
ಕೊಟ್ಟ ವರಗಳ

ಕರ್ನಾಟಕದ ಜೀವ ನದಿ



ತುಂಗಭದ್ರಾ

ಒಂದು ನದಿಕಣಿವೆಯೆಂದರೆ ತಾನೇ ಒಂದು ಜೀವನ ವಿಧಾನ.
ಶತಮಾನಗಳು ಕಳೆದಂತೆ, ಆ ಜೀವನ ವಿಧಾನವೂ ಬದಲಾಗುತ್ತಾ
ಹೋಗುತ್ತದೆ. ಆದರೆ ನದಿ ಮಾತ್ರ ತನ್ನದೇ ಪಾತ್ರದಲ್ಲಿ ಮುಂದುವರಿಯುತ್ತದೆ.
ಇಡೀ ಒಂದು ಸಂಸ್ಕೃತಿಯ ತೊಟ್ಟಿಲಾಗಿ ಮಾನವ ಜನಾಂಗದ ಪಲವು
ಉತ್ಕೃಷ್ಟ ಮಾದರಿಗಳನ್ನು ರೂಪಿಸಿದ ಹಲವು ಜೀವ ನದಿಗಳು,
ಮಾನವ ಇತಿಹಾಸದಲ್ಲಿ ತಮ್ಮದೇ ಆದ ಪಾತ್ರವಹಿಸಿವೆ.
ಇಂತಹ ನದಿಯ ಬಗ್ಗೆ ನಾವು ಹೆಮ್ಮೆ ತಳೆಯುವುದಷ್ಟೇ ಅಲ್ಲದೆ,
ಅದರ ನೀರನ್ನು ಬಳಕೆಗೆ ಯೋಗ್ಯವಾಗಿ ಮಾಡಿಟ್ಟುಕೊಳ್ಳಬೇಕಾದದ್ದು
ನಮ್ಮೆಲ್ಲರ ಆದ್ಯ ಕರ್ತವ್ಯ.



ಲೇಖನ :
ವೇಣುಗೋಪಾಲ ಸೊರಬ

ಛಾಯಾಚಿತ್ರಗಳು :
ಡಾ|| ಭರತ್ ಕ್ಷತ್ರಿ

ತರಳ ತರಂಗ ಮುದ್ರೆಯನ್ ಅನೇಕ ಮುನೀಂದ್ರ ಮನಸ್ಸು ಭದ್ರೆಯಂ
ಪರಮಸುಧಾರಸಾರ್ದ್ರೆಯನ್ ಅಪಾರಗಭೀರ ಸಮುದ್ರೆಯಂ, ಪರಾ
ಪರ ಸುಖ ಸಿದ್ರೆಯಂ ದುರಿತ ಮಾಲೆಗುಪದ್ರೆಯನ್, ಅತ್ಯನೂನ ವಿ-
ಸ್ತರ ಸುಕೃತಾರ್ಥೀಯಂ ನೆರೆ ನಿರೀಕ್ಷಿಸು, ಪಾರ್ವತಿ ತುಂಗಭದ್ರೆಯಂ

ಹರಿಹರ ಕವಿಯ 'ಗಿರಿಜಾಕಲ್ಯಾಣ'ದ ಈ ಪದ್ಯ ತುಂಗಭದ್ರಾ ನದಿಯ ಬಗ್ಗೆ ಕವಿಗಿರುವ ಪ್ರೇಮದ ಒಂದು ದಾಖಲೆ. ಹಿಮಾಲಯದ ತಪ್ಪಲಲ್ಲಿ ನಡೆಯುವ ಗಿರಿಜಾಕಲ್ಯಾಣವನ್ನು ತುಂಗಭದ್ರಾತೀರಕ್ಕೆ ತಂದಿರುವುದರಲ್ಲೇ ಕವಿಗೆ, ಈ ನದಿಯ ಬಗೆಗಿರುವ ವಿಶಿಷ್ಟ ಪ್ರೇಮವನ್ನು ನಾವು ಕಂಡುಕೊಳ್ಳಬಹುದು.

ಹರಿಹರನ ಸೋದರಳಿಯನಾದ ರಾಘವಾಂಕ ಕೂಡ, ಪ್ರಾಸಂಗಿಕವಾಗಿ, ತನ್ನ ಹರಿಶ್ಚಂದ್ರ ಕಾವ್ಯದಲ್ಲಿ ತುಂಗಭದ್ರೆ ಹಾಗೂ ಪಂಪಾಪತಿ ವಿರೂಪಾಕ್ಷನನ್ನು ವರ್ಣಿಸಿರುವುದು, ಆತನ ಕನ್ನಡನಾಡಿನ ಅಭಿಮಾನಕ್ಕೆ ಕೈಗನ್ನಡಿಯಾಗಿದೆ. ಆದರೆ, ರಾಘವಾಂಕನ ವರ್ಣನೆಯಲ್ಲಿ ತುಂಗಭದ್ರೆ ಕೇವಲ 'ಒಮ್ಮೆ ಕಂಡ ಜೀವರ ಭವ ವ್ಯಜದ ಬೆಂಬಡಿಗೆ' ಯಾಗಿ, ಇಂತಹ ಹಲವು ಪಾತಕಗಳನ್ನು ಕಳೆವ ಶೂಲವಾಗಿ ಚಿತ್ರಿತವಾಗಿದ್ದಾಳೆ. ರಾಘವಾಂಕ ಇನ್ನೂ ಮುಂದೆ ಹೋಗಿ, 'ಉಳಿದ ದುರಿತವನುರುಹಿ ಸುಡುವ ಕಿಚ್ಚು' ಎಂದು, ತುಂಗಭದ್ರೆಯನ್ನು ವರ್ಣಿಸಿದ್ದಾನೆ. ಅಂದರೆ ಬಹುಮಟ್ಟಿಗೆ, ಹರಿಹರ-ರಾಘವಾಂಕ ಇಬ್ಬರಿಗೂ ತುಂಗಭದ್ರೆ ಪಾಪಹರ ನದಿಯಾಗಿ ಮಾತ್ರವೇ ಕಂಡು ಬರುತ್ತಾಳೆ. ಈ ಇಬ್ಬರೂ ಕವಿಗಳು, ತಮ್ಮ ಕಾಲದಲ್ಲಿ ತಾವು ಕಂಡುಂಡ ನದಿಯ ಪ್ರಾಕೃತಿಕ ಸೌಂದರ್ಯವನ್ನು ವರ್ಣಿಸಿದ್ದರೆ ಇಂದಿಗೂ ನಮಗೆ ಅದೊಂದು ದಾಖಲೆಯಾಗಿ ಉಳಿದು ಬರುತ್ತಿತ್ತು.

ಮಹಾಕಾವ್ಯಗಳಲ್ಲಿ ತುಂಗಭದ್ರಾ ನದಿ, ಹರಿಹರ-ರಾಘವಾಂಕರಲ್ಲಿ ಮಾತ್ರವೇ ಪ್ರಸ್ತಾಪಿಸಲ್ಪಟ್ಟಿಲ್ಲ. ನಮ್ಮ ಆದಿಕಾವ್ಯವಾದ ರಾಮಾಯಣದಲ್ಲಿ ಕೂಡ, ತುಂಗಭದ್ರಾ ನದಿಯ ಉಲ್ಲೇಖವಿರುವುದು ಗಮನಾರ್ಹ. ರಾಮಾಯಣದಲ್ಲಿ ತುಂಗಭದ್ರೆಯನ್ನು ಪಂಪಾ ನದಿಯೆಂದು ಉಲ್ಲೇಖಿಸಲಾಗಿದೆ. ಒಂದು ಕಾಲಕ್ಕೆ ಕೃಷ್ಣಾನದಿ 'ಪೆದ್ದೊರೆ' ಎನಿಸಿತ್ತು. ಹಾಗೆಯೇ ತುಂಗಭದ್ರೆಯೂ 'ಪಂಪಾ' ಎಂಬ ಹೆಸರು ಪಡೆದಿದ್ದರೆ ಆಶ್ಚರ್ಯವಿಲ್ಲ. ಆದರೆ ತುಂಗಭದ್ರೆ ಎಂಬ ಹೆಸರು ಯಾವಾಗ ಪ್ರಚಾರಕ್ಕೆ ಬಂದಿತು ತಿಳಿದು ಬಂದಿಲ್ಲ.

ಚಾರಿತ್ರಿಕ ಮತ್ತು ಮಹಾಕಾವ್ಯದ ಕಾಲದಲ್ಲೇ ಅಲ್ಲದೆ, ಅದಕ್ಕೂ ಹಿಂದಿನಿಂದಲೂ ತುಂಗಭದ್ರಾ ಕಣವೆ ನಾಗರಿಕತೆಯ ತೊಟ್ಟಿಲಾಗಿತ್ತು ಎಂಬ ಬಗ್ಗೆ ಪ್ರಸಿದ್ಧವಾಗಿದೆ. ಅನೇಕ ಸಂಸ್ಕೃತಿಗಳು ಈ ನದಿಯ ದಡೆಯ ಮೇಲೆ ಬೆಳೆದು ಬಂದವೆಂದು ಚರಿತ್ರಕಾರರು ಹೇಳುತ್ತಾರೆ. ಈ ಸಂಸ್ಕೃತಿಗಳು ಪ್ರಾಗಿತಿಹಾಸ ಕಾಲಕ್ಕೆ ಸೇರಿದ್ದವೆಂದು ತಿಳಿದು ಬರುತ್ತದೆ. ಸಂಸ್ಕೃತಿಗಳ ಪಳೆಯುಳಿಕೆಗಳನ್ನು ಈಗಲೂ, ನಿಟ್ಟೂರು ಮತ್ತು ಹಂಪೆ ಸಾಗರಗಳಲ್ಲಿ ಕಾಣಬಹುದಾಗಿದೆ.

ಒಂದು ನದಿಕಣವೆಯೆಂದರೆ ತಾನೇ ಒಂದು ಜೀವನ ವಿಧಾನ. ಶತಮಾನಗಳು ಕಳೆದಂತೆ, ಆ ಜೀವನ ವಿಧಾನವೂ ಬದಲಾಗುತ್ತಾ ಹೋಗುತ್ತದೆ. ಆದರೆ ನದಿ ಮಾತ್ರ ತನ್ನದೇ ಪಾತ್ರದಲ್ಲಿ ಮುಂದುವರಿಯುತ್ತದೆ. ಇಡೀ ಒಂದು ಸಂಸ್ಕೃತಿಯ ತೊಟ್ಟಿಲಾಗಿ, ಮಾನವ ಜನಾಂಗದ ಹಲವು ಉತ್ಕೃಷ್ಟ ಮಾದರಿಗಳನ್ನು ರೂಪಿಸಿದ ಹಲವು ಜೀವನದಿಗಳು, ಮಾನವೇತಿಹಾಸದಲ್ಲಿ ತಮ್ಮದೇ ಆದ ಪಾತ್ರ ವಹಿಸಿವೆ ಗಂಗಾ, ಯೂಫ್ರಟಿಸ್, ಟೈಗ್ರಿಸ್ ನದಿಗಳು, ಥೇಮ್ಸ್, ಸೀನ್, ವೋಲ್ಗಾ–ಹೀಗೆ ಹಲವು ಹತ್ತು ನದಿಗಳನ್ನು ಹೆಸರಿಸಬಹುದು. ತುಂಗಭದ್ರಾ ನದಿ, ಆ ನದಿಗಳಿಗೆ ಹೋಲಿಸಿದರೆ, ಅಂತಹ ಬಲಿಷ್ಠ ನದಿಯೇನಲ್ಲ. ಆದರೂ, ಕನ್ನಡ ನಾಡಿನ ಪಾಲಿಗೆ, ತುಂಗಭದ್ರಾ ನದಿ ಅಷ್ಟೇ ಮಹತ್ತರ ಪಾತ್ರವಹಿಸಿದೆ. ಈ ಮೊದಲೇ ತಿಳಿಸಿದಂತೆ, ಪ್ರಾಗಿತಿಹಾಸ ಕಾಲದಿಂದ ಹಿಡಿದು, ಜಾಗತಿಕ ಜನಜೀವನದಲ್ಲೂ ಕೂಡ ತನ್ನದೇ ಆದ ಮಹತ್ವದ ಪಾತ್ರವನ್ನು ವಹಿಸಿದೆ. ಇಲ್ಲಿ ಸಂಸ್ಕೃತಿ ಮತಧರ್ಮ, ಜಿಜ್ಞಾಸೆ, ವಿಚಾರ ಮಥನ, ಭಾಷೋದ್ದೀಪನ ಹೀಗೆ ಪ್ರತಿಯೊಂದು ಕ್ಷೇತ್ರದಲ್ಲಿಯೂ ವಾಣಿಜ್ಯ ವ್ಯವಹಾರ, ರಾಜಕಾರಣ ಮತ್ತು ವಿದ್ಯುದೀಕರಣ ಹೀಗೆ ಪ್ರತಿಯೊಂದು ಜೀವನ ವಿಧಾನದಲ್ಲಿಯೂ ತನ್ನದೇ ಆದ ಪ್ರಭಾವವನ್ನು ಬೀರಿದೆ. ಇಂತಹ ನದಿಯ ಬಗ್ಗೆ ನಾವು ಹೆಮ್ಮೆ ತಳೆಯುವುದಷ್ಟೇ ಅಲ್ಲದೆ, ಅದರ ನೀರನ್ನು ಬಳಕೆಗೆ ಯೋಗ್ಯವಾಗಿ ಮಾಡಿಟ್ಟುಕೊಳ್ಳಬೇಕಾದದ್ದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

ಉಗಮ

ಚಿಕ್ಕಮಗಳೂರು ಜಿಲ್ಲೆಯ ಕಳಸ ಎಂಬ ಊರಿನಿಂದ ೨೪ ಕಿ. ಮೀ. ದೂರದಲ್ಲಿ ಪಶ್ಚಿಮಕ್ಕೆ ಪಶ್ಚಿಮ ಘಟ್ಟಗಳು ಹಾದು ಹೋಗುತ್ತವೆ. ಇಲ್ಲಿನ ಒಂದು ಸಾನು ಪ್ರದೇಶ, ಗಂಗಾಮೂಲ ಎಂಬ ಹೆಸರು ಪಡೆದಿದೆ. ಸಾವಿರದ ಇನ್ನೂರು ಮೀಟರು ಎತ್ತರ ಉಳ್ಳ ಇದೊಂದು ಸುಂದರ ಪರ್ವತ ಪ್ರದೇಶ. ನೋಡುವುದಕ್ಕೆ ರುದ್ರ ರಮಣೀಯ. ಇಲ್ಲಿನ ವರಾಹ ಪರ್ವತದಲ್ಲಿಯೇ ತುಂಗಾ ಮತ್ತು ಭದ್ರಾನದಿಗಳು ಉಗಮಿಸುತ್ತವೆ.

ಬ್ರಹ್ಮಾಂಡ ಪುರಾಣ, ಭಾಗವತ ಪುರಾಣಗಳಲ್ಲಿ ತುಂಗಭದ್ರಾ ನದಿಯ ಪ್ರಸ್ತಾಪ ಬರುತ್ತದೆ. ಬ್ರಹ್ಮಾಂಡ ಪುರಾಣದಲ್ಲಿ 'ತುಂಗಭದ್ರಾ ಮಹಾತ್ಮ್ಯೆ' ಎಂಬ ಭಾಗದಲ್ಲಿ, ಈ ನದಿಯ ಹುಟ್ಟಿನ ವಿಷಯ, ಹೀಗೆ ನಿರೂಪಿಸಲಾಗಿದೆ:

ಕಶ್ಯಪ ಋಷಿ ಮತ್ತು ದಿತಿ ದೇವಿಯರ ಮಗನಾದ ಹಿರಣ್ಯಾಕ್ಷ ಭೂಮಿಯನ್ನು ಪಾತಾಳಕ್ಕೆ ತೆಗೆದುಕೊಂಡು ಹೋದನು. ಆಗ, ವಿಷ್ಣು ತನ್ನ ಭಕ್ತಾದಿಗಳ ಮೊರೆಗೆ ಕಿವಿಗೊಟ್ಟು ವರಾಹರೂಪ ಧರಿಸಿ, ಭೂಮಿಯನ್ನು ಮೇಲಕ್ಕೆ ಹೊತ್ತು ತಂದನು, ಆಯಾಸಗೊಂಡ, ವರಾಹರೂಪದ ವಿಷ್ಣುವು ವರಾಹ ಪರ್ವತದ ಮೇಲೆ ನಿಂತುಕೊಂಡನು. ಆಗ ಅವನ ಎರಡೂ ದಾಡೆಗಳಿಂದ, ಅವನ ಬೆವರು ಎರಡು ಧಾರೆಯಾಗಿ ಹರಿದು ಬಂದಿತು. ಎಡ ದಾಡೆಯಿಂದ ಹರಿದದ್ದೇ ತುಂಗಾ ಎಂತಲೂ, ಬಲದಾಡೆಯಿಂದ ಹರಿದದ್ದನ್ನು ಭದ್ರಾ ಎಂತಲೂ ಕರೆಯಲಾಯಿತು.

ಈ ದಾಡೆಗಳ, ಅಂದರೆ ವರಾಹ ಪರ್ವತದ ಎರಡು ಕೋಡುಗಳ ಆಕೃತಿಯನ್ನು ಅನುಸರಿಸಿ, ಅವುಗಳಿಂದ ಹೊರಟ ನದಿಗಳಿಗೆ 'ತುಂಗಾ' ಮತ್ತು 'ಭದ್ರಾ' ಎಂಬ ಹೆಸರುಗಳು ಬಂದಹಾಗೆ ತಿಳಿದು ಬರುತ್ತದೆ. ಎಡಗಡೆಯ ಕೋಡು ಚಾಚಿಕೊಂಡಿದೆ ಎಂತಲೂ, ಬಲಗಡೆಯ ಕೋಡು ಶಕ್ತಿಶಾಲಿಯಾಗಿರುವುದಾಗಿಯೂ ಆದ್ದರಿಂದ. ಎಡಗಡೆಯಿಂದ ಹೊರಟ ನದಿಗೆ ತುಂಗಾ ಎಂದೂ ಬಲಗಡೆಯಿಂದ ಹೊರಟದ್ದಕ್ಕೆ ಭದ್ರಾ ಎಂದೂ ಕರೆಯುತ್ತಾರೆ.

ಗಂಗಾ ಮೂಲದ ವರಾಹಪರ್ವತ, ಒಂದು ರುದ್ರಗಂಭೀರ ಸ್ಥಳ. ಒಂದು ಕಾಲಕ್ಕೆ ಇಲ್ಲಿ ತಪಸ್ವಿಗಳು ಅಧಿಕ ಸಂಖ್ಯೆಯಲ್ಲಿ ಕಂಡು ಬರುತ್ತಿದ್ದರು.



ಗಂಗಾ ಮೂಲದಿಂದ ಹೊರಟ ತುಂಗಾ, ಈಶಾನ್ಯ ದಿಕ್ಕಿನಲ್ಲಿ ಹರಿದು, ಬಗ್ಗುಂಜಿಯಲ್ಲಿ ವಾಯುವ್ಯ ದಿಕ್ಕಿಗೆ ಹರಿದು ತೀರ್ಥ ಹಳ್ಳಿಯನ್ನು ಸೇರುತ್ತದೆ. ಅಲ್ಲಿಂದ ಮುಂದೆ ಮತ್ತೆ ಈಶಾನ್ಯದ ಕಡೆಗೆ ಹರಿದು, ಶಿವಮೊಗ್ಗೆಯನ್ನು ದಾಟಿ, ಕೂಡಲಿಯನ್ನು ಸೇರುತ್ತದೆ. ಈ ನದಿಗೆ ಸುಮಾರು ೯೫ ಹಳ್ಳಗಳು ಸೇರುತ್ತವೆ.

ತುಂಗಾ ನದಿಯ ದಡದ ಮೇಲಿರುವ ಮುಖ್ಯಸ್ಥಳಗಳಲ್ಲಿ ಕೊಪ್ಪ, ಶೃಂಗೇರಿ, ಹರಿಹರಪುರ, ತೀರ್ಥಹಳ್ಳಿ ಮತ್ತು ಶಿವಮೊಗ್ಗ, ಪ್ರಸಿದ್ಧವಾದವು.

ಆದಿ ಶಂಕರಾಚಾರ್ಯರು ತಮ್ಮ ತಪೋ ಮಹಿಮೆಯಿಂದ ಶೃಂಗೇರಿಯನ್ನು ಮಹಿಮಾನ್ವಿತ ಸ್ಥಳವನ್ನಾಗಿ ಮಾಡಿದ್ದಾರೆ. ಅವರು ಸ್ಥಾಪಿಸಿದ ಅದ್ವೈತ ಪೀಠ ಮತ್ತು ಶಾರದಾ ಮಾತೆಯ ಮಂದಿರ ಇವು ಜಗತ್ಪ್ರಸಿದ್ಧವಾಗಿವೆ. ಇಲ್ಲಿನ ನರಸಿಂಹ ವನ ಮತ್ತು ವಿದ್ಯಾಶಂಕರ ದೇವಾಲಯಗಳೂ ಕೂಡ, ಯಾತ್ರಾರ್ಥಿಗಳ ಮನಸ್ಸಿನಲ್ಲಿ ಸದಾಕಾಲ ಉಳಿದು ಬರುವಂಥ ಪವಿತ್ರ ಸ್ಥಳಗಳೇ ಆಗಿವೆ

ತಿಳಿನೀರಿನ, ಮಂದಗಮನದ ತುಂಗಾನದಿ, ಈ ಕ್ಷೇತ್ರಕ್ಕೆ ನಿರಂತರವಾದ ಶೋಭೆಯನ್ನು ತಂದುಕೊಟ್ಟಿದೆ. ಈ ಸ್ಥಳದಲ್ಲಿ ಕಂಡು ಬರುವ ಮೀನುಗಳನ್ನು ಯಾರೂ ಹಿಡಿಯುವ ಹಾಗಿಲ್ಲ. ತುಂಗಾ ನದಿಯ ಪಾತ್ರದಲ್ಲಿ ಇದೊಂದು ಅತ್ಯಂತ ರಮಣೀಯವಾದ ಸ್ಥಳವಾಗಿದೆ.

ತೀರ್ಥಹಳ್ಳಿಯಲ್ಲಿ ಕಂಡು ಬರುವ ಸೌಂದರ್ಯವೇ ಬೇರೆ. ಇಲ್ಲಿ ನದಿ, ಬಂಡೆಗಳಿಂದ ಕೂಡಿದ ಪಾತ್ರದಲ್ಲಿ ಹರಿಯುತ್ತದೆ. ಈ ಬಂಡೆಗಳಿಂದಾಗಿಯೋ ಪರಶುರಾಮತೀರ್ಥವೂ ಪ್ರಕೃತಿ ಸಹಜವಾಗಿ ಉಂಟಾಗಿದೆ. ಪುರಾಣಗಳ ಪ್ರಕಾರ, ಪರಶುರಾಮ ತನ್ನ ರಕ್ತಸಿಕ್ತ ಕೊಡಲಿಯನ್ನು ಇಲ್ಲಿ ತೊಳೆದನೆಂದು ಪ್ರತೀತಿ. ಇಲ್ಲಿನ ತೀರ್ಥರಾಮೇಶ್ವರನ ಗುಡಿ, ಸಾಕಷ್ಟು ಪ್ರಾಚೀನವಾಗಿದೆ. ವರ್ಷಕ್ಕೊಮ್ಮೆ ಇಲ್ಲಿ ನಡೆಯುವ ಎಳ್ಳಮಾವಾಸ್ಯೆ ಜಾತ್ರೆ, ಈ ಪ್ರಾಂತ್ಯದ ಅತ್ಯಂತ ಮಹತ್ವದ ಘಟನೆ.

ತೀರ್ಥಹಳ್ಳಿಯ ಸಮೀಪದಲ್ಲಿಯೇ, ಮಂಡಗದ್ದೆ ಎನ್ನುವ ಪಕ್ಷಿಧಾಮವಿದೆ. ಇದು ಇತ್ತೀಚಿನ ದಿನಗಳಲ್ಲಿ ಪ್ರಸಿದ್ಧಿಗೆ ಬಂದಿದ್ದರೂ ಇಲ್ಲಿಗೆ ಧಾವಿಸುವ ಪಕ್ಷಿ ವೀಕ್ಷಕರ ಸಂಖ್ಯೆ ದಿನೇ ದಿನೇ ಬೆಳೆಯುತ್ತಿದೆ.

ತೀರ್ಥಹಳ್ಳಿಯಿಂದ ಶಿವಮೊಗ್ಗೆಯ ಕಡೆಗೆ ಹರಿಯುವಾಗ ತುಂಗಾ ಸಕ್ಕರೆ ಬಯಲನ್ನು ಹಾದು ಹೋಗುತ್ತದೆ. ಇಲ್ಲಿನ ವೈಶಿಷ್ಟ್ಯವೆಂದರೆ, ಏಳುಸೀಳು. ಮರಳುಗುಡ್ಡೆ ಮತ್ತು ಮರಗಳಿಂದಾದ ಈ ಏಳು ಸೀಳು ಒಂದು ಆಕರ್ಷಕ ಪ್ರದೇಶ. ರಾಷ್ಟ್ರಕವಿ ಕುವೆಂಪುರವರು ಏಳುಸೀಳನ್ನು ಕುರಿತು ಎರಡು ಸಾನೆಟ್ಟುಗಳನ್ನು ಬರೆದಿರುವರು.

ತುಂಗಾನದಿ ಶಿವಮೊಗ್ಗೆಯನ್ನು ತಲುಪುವ ಮೊದಲು, ಗಾಜನೂರು ಎಂಬ ಸ್ಥಳದಲ್ಲಿ ಅಣೆಯನ್ನು ನಿರ್ಮಿಸಲಾಗಿದೆ. ಶಿವಮೊಗ್ಗೆಯಿಂದ ಸುಮಾರು ಹತ್ತು ಕಿ. ಮಿ. ದೂರದಲ್ಲಿರುವ ಈ ಅಣೆಕಟ್ಟೆಯಿಂದ ಕೃಷಿಕೆಲಸಗಳಿಗೆ, ಪ್ರಮುಖವಾಗಿ ನೀರನ್ನು ಬಳಸಲಾಗುತ್ತಿದೆ. ಪ್ರವಾಸಿಗರಿಗೆ ಇದೊಂದು ಆಕರ್ಷಕ ಸ್ಥಳವಾಗಿದೆ.

ಮಂದಗಮನದಲ್ಲಿ ಹರಿಯುವ ತುಂಗೆಯ ನೀರು ಶುಚಿರುಚಿಗಳಿಗೆ ಹೆಸರಾಗಿದೆ. ಈ ನೀರಿನ ರುಚಿಗೆ ಮುಖ್ಯ ಕಾರಣವೆಂದರೆ, ಈ ನದಿ ಅನೇಕ ಬಗೆಯ ಬಂಡೆಗಳ ಮೇಲೆ ಹರಿಯುವುದರಿಂದ, ಈ ನೀರು ಅನೇಕ ಬಗೆಯ ಖನಿಜಗಳಿಂದ ಕೂಡಿದೆ. ಆದ್ದರಿಂದಲೇ 'ತುಂಗಾಪಾನ' ಎಂಬ ಪ್ರಸಿದ್ಧ ಮಾತು ಬಳಕೆಗೆ ಬಂದಿದೆ.



ಶೃಂಗೇರಿ ಮಠದ ಒಂದು ದೃಶ್ಯ



ಶೃಂಗೇರಿ ಮಠದ ಇನ್ನೊಂದು ದೃಶ್ಯ

ಭದ್ರಾ

ಗಂಗಾಮೂಲದಿಂದ ಹೊರಟ ಭದ್ರಾನದಿ ಮೊದಲು ಪೂರ್ವದಿಕ್ಕಿಗೆ ಹರಿಯುತ್ತದೆ. ಸಂಗಮೇಶ್ವರ ಎನ್ನುವಲ್ಲಿ, ಈ ನದಿಯ ಪ್ರಮುಖ ಉಪನದಿಯಾದ ಆನೆ ಬಿದ್ದಹಳ್ಳ ದಕ್ಷಿಣದಿಂದ ಹರಿದು ಬಂದು ಕೂಡಿಕೊಳ್ಳುತ್ತದೆ. ಇಲ್ಲಿಂದ ಮುಂದೆ ನದಿ ತೀವ್ರ ಈಶಾನ್ಯ ದಿಕ್ಕಿಗೆ ಹರಿಯುತ್ತದೆ. ಹೀಗೆ ಬಾಳೆಹೊನ್ನೂರಿನವರೆಗೂ ಹರಿದು ಬರುವ ಭದ್ರಾ, ಬಂಡೆಯು ಎಂಬ ಹಳ್ಳಿಯನ್ನು ದಾಟುವಾಗ, ಜಾಗರಕಣಿವೆ ಬಳಿ ಹರಿಯುತ್ತದೆ. ಜಾಗರಕಣಿವೆಯ ಹಳ್ಳ ಹೆಬ್ಬೆಯ ಬಳಿ ಸೋಮವಾಹಿನಿಯೊಡನೆ, ಭದ್ರೆಯನ್ನು ಕೂಡಿಕೊಳ್ಳುತ್ತದೆ. ಕಲ್ಲತ್ತಗಿರಿ ಮತ್ತು ಕಲ್‌ದುರ್ಗ ಹಳ್ಳಗಳು, ಈ ನದಿಯನ್ನು ಲಕ್ಕವಳ್ಳಿಯಲ್ಲಿ ಕೂಡಿಕೊಳ್ಳುತ್ತವೆ. ಮುಂದೆ ಭದ್ರಾವತಿ ಮತ್ತು ಹೊಳೆಹೊನ್ನೂರುಗಳನ್ನೂ ದಾಟಿ, ಭದ್ರಾ ಕೂಡಲಿಯಲ್ಲಿ ತುಂಗಾನದಿಯ ಜತೆ ಸಂಗಮಿಸುತ್ತದೆ.

ಭದ್ರಾನದಿಯ ದಂಡೆಗಳು ಎತ್ತರವಾಗಿವೆ. ಇದರ ಪರಿಣಾಮವಾಗಿ, ನೀರಾವರಿಗೆ ಈ ನದಿ ಅಷ್ಟೊಂದು ಅನುಕೂಲಕರವಾಗಿರಲಿಲ್ಲವೆಂದು ಹೇಳುತ್ತಾರೆ. ಆದರೂ ಬಹಳ ಹಿಂದೆಯೇ ಈ ನದಿಗೆ ಅಡ್ಡಲಾಗಿ ೧೮ ಅಣೆಕಟ್ಟುಗಳನ್ನು ಕಟ್ಟಲಾಗಿದ್ದು, ನೀರಾವರಿಗೆ ಅನುಕೂಲ ಕಲ್ಪಿಸಲಾಗಿತ್ತು.

ಭದ್ರಾನದಿಯ ನೀರು ತುಂಗಾನೀರಿನಷ್ಟು ಶುಚಿ ರುಚಿಗೆ ಪ್ರಸಿದ್ಧವಾಗಿಲ್ಲ, ಇದಕ್ಕೆ ಕಾರಣ, ಈನದಿ ಕಾಡುಗಳ ಮೂಲಕ ಹರಿದು ಬರುವುದು.

ಕಳಸ, ಖಾಂಡ್ಯ ನರಸಿಂಹರಾಜಪುರ, ಲಕ್ಕವಳ್ಳಿ ಭದ್ರಾವತಿ ಮತ್ತು ಹೊಳೆಹೊನ್ನೂರುಗಳು, ಈ ನದಿ ಪಾತ್ರದಲ್ಲಿನ ಮುಖ್ಯಸ್ಥಳಗಳು, ಲಕ್ಕವಳ್ಳಿಯಲ್ಲಿ ಈಗ ದೊಡ್ಡದಾದ ಭದ್ರಾ ಜಲಾಶಯವನ್ನು ನಿರ್ಮಿಸಲಾಗಿದೆ, ಅಲ್ಲದೇ, ೬೦ರ ದಶಕದಲ್ಲಿಯೇ ಇಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಶಿಕ್ಷಣಕೇಂದ್ರವನ್ನು ತೆರೆಯಲಾಗಿದ್ದು ಇದೀಗ ಇಲ್ಲಿ ರಾಷ್ಟ್ರಕವಿ ಕುವೆಂಪು ಹೆಸರಿನ ನೂತನ ವಿಶ್ವವಿದ್ಯಾನಿಲಯವೊಂದು ಅಸ್ತಿತ್ವಕ್ಕೆ ಬರಲಿದೆ,

ಭದ್ರಾನದಿಯ ಎಡ ದಡದಲ್ಲಿರುವ ಬಾಳೆಹೊನ್ನೂರು (ಚಿಕ್ಕಮಗಳೂರು) ಪ್ರಸಿದ್ಧ ವೀರಶೈವ ಕ್ಷೇತ್ರವಾಗಿದೆ. ಹೊಳೆಹೊನ್ನೂರಿನಲ್ಲಿ ಮಾಧ್ವಯತಿಯ ವೃಂದಾವನವಿದೆ.

ಈಗ ಕಾರ್ಖಾನೆಗಳ ನಗರವಾಗಿ ಬೆಳೆದಿರುವ ಭದ್ರಾವತಿ ಹಿಂದೆ ಬೆಂಕಿಪುರವೆಂದು ಪ್ರಸಿದ್ಧವಾಗಿತ್ತು. ಇಲ್ಲಿನ ಶ್ರೀನರಸಿಂಹಸ್ವಾಮಿ ದೇವಸ್ಥಾನ, ಹೊಯ್ಸಳರ ಕಾಲದ ಶಿಲ್ಪ ವೈಭವದಿಂದ ಕೂಡಿದೆ.

ಶಂಕರಾಚಾರ್ಯರು ಸ್ಥಾಪಿಸಿದ ಶೃಂಗೇರಿ ಪೀಠ

ಪ್ರೊ. ಜಿ. ಡಿ. ನಾಡಕರ್ಣಿ



ಆದಿ ಶಂಕರಾಚಾರ್ಯರು

ಅಹಂ ಬ್ರಹ್ಮಾಸ್ಮಿ !

ತತ್ತ್ವಮಸಿ !

–ಪ್ರಪಂಚದ ಮಾಯೆಯನ್ನು ಗೆದ್ದ ಜ್ಞಾನಿಗಳ ಧೀರ ನುಡಿಗಳಿವು ! "ಬ್ರಹ್ಮ ಸತ್ಯಂ, ಜಗನ್ಮಿಥ್ಯಾ: ಜೀವೋ ಬ್ರಹ್ಮೈವ ನಾಪರಃ" ಎಂಬ ಮಹಾ ಸತ್ಯದ ಅನುಭವವನ್ನು ತಾವು ಸ್ವತಃ ಮಾಡಿಕೊಂಡು, ಮಿಥ್ಯಾ ಪ್ರಪಂಚದಲ್ಲಿ ತೊಳಲಾಡುವ ಅಜ್ಞಾನಿಗಳಿಗೆ ಜಗದ್ಗುರು ಆದಿ ಶ್ರೀ ಶಂಕರಾಚಾರ್ಯರು ಬೋಧಿಸಿದ ಅಮೃತಾನುಭವವು ದಕ್ಷಿಣ ಭಾರತದ ಜನತೆಗೆ ಇಂದಿಗೂ ಅವರೇ ಸ್ಥಾಪಿಸಿದ ದಕ್ಷಿಣ ಆಮ್ನಾಯ ಶೃಂಗೇರಿ ಪೀಠದಿಂದ ದೊರೆಯುತ್ತಲಿದೆ.

ಪ್ರಶಾಂತವಾಗಿ ತುಂಬಿ ಹರಿಯುವ ತುಂಗಭದ್ರಾ ನದಿ; ಅವಳು ತನ್ನ ಪಾವಿತ್ರ್ಯ, ಮಾಧುರ್ಯಗಳಿಂದ ತನ್ನ ದಂಡೆಯ ಮೇಲಿನ ಅಸಂಖ್ಯಾತ ಜನರಿಗೆ ತುಷ್ಟಿ-ಪುಷ್ಟಿಗಳನ್ನು ಒದಗಿಸುತ್ತ ನಿರಂತರ ಪ್ರವಹಿಸುತ್ತಿದ್ದಾಳೆ. "ಗಂಗಾಸ್ನಾನ ತುಂಗಾಪಾನ" ಎಂಬುದು ಮನೆಮಾತಾಗಿದೆ. ಅಂಥ ಪಾವನೆಯ ದಂಡೆಯ ಮೇಲೆ ಶ್ರೀ ಶಂಕರಾಚಾರ್ಯರು ಎಂಟನೆಯ ಶತಮಾನದಲ್ಲಿಯೇ ಸ್ಥಾಪಿಸಿದ ಶ್ರೀ ಶೃಂಗೇರಿ ಜಗದ್ಗುರು ಪೀಠವಿದೆ. ಕರ್ಮಕಾಂಡಿಗಳಾದ ಪಂಡಿತ ಶ್ರೇಷ್ಠ ಮಂಡನಮಿಶ್ರರು ಶ್ರೀಶಂಕರರ ಜೊತೆಗೆ ವಾದದಲ್ಲಿ ಪರಾಜಿತರಾಗಿ, ಸಂತೋಷದಿಂದ ಶ್ರೀ ಶಂಕರರ ಶಿಷ್ಯೋತ್ತಮರಾದರು. ಶ್ರೀಶಂಕರರು ಅವರನ್ನು ತಮ್ಮ ಆಪ್ತ ನಾಲ್ಕು ಶಿಷ್ಯರಲ್ಲಿ ಒಬ್ಬರನ್ನಾಗಿ ಪರಿಗ್ರಹಿಸಿ, ಸನ್ಯಾಸದ ನಂತರದಲ್ಲಿ ಮಂಡನಮಿಶ್ರರಿಗೆ ಸುರೇಶ್ವರಾಚಾರ್ಯ ಎಂಬ ನೂತನ ನಾಮಕರಣಮಾಡಿ ಅವರ ಸಾಮರ್ಥ್ಯವನ್ನು ಅರಿತ ಶ್ರೀ ಶಂಕರರು ಅವರನ್ನೇ ತಾವು ಮೊಟ್ಟಮೊದಲು ಸ್ಥಾಪಿಸಿದ ದಕ್ಷಿಣದ ಶೃಂಗೇರಿಪೀಠಕ್ಕೆ ಪ್ರಥಮ ಜಗದ್ಗುರುಗಳನ್ನಾಗಿ ನೇಮಿಸಿದರು. ಅಂದಿನಿಂದ ಇಂದಿನ ಪೀಠಸ್ಥರವರೆಗೂ ಗುರುಪರಂಪರೆ ಅವಿಚ್ಛಿನ್ನವಾಗಿ ನಡೆದುಕೊಂಡು ಬಂದಿದೆ. ಸಾಮಾನ್ಯರ ಅಜ್ಞಾನವನ್ನು ನಿವಾರಿಸುವ ಜ್ಞಾನದ ಅಚಲ ದೀಪಸ್ತಂಭವಾಗಿ ನಿಂತುಕೊಂಡಿದೆ ಶ್ರೀ ಶೃಂಗೇರಿಪೀಠ !

ದಕ್ಷಿಣದಲ್ಲಿ ಆಮ್ನಾಯ ಪೀಠವನ್ನು ಸ್ಥಾಪಿಸಿ, ಅದರ ಮೂಲಕ ವೈದಿಕ ಧರ್ಮೋದ್ಧಾರದ ಕಾರ್ಯವನ್ನು ಸಾಗಿಸಬೇಕೆಂದು ಶ್ರೀಶಂಕರರು ವಿಚಾರಮಗ್ನರಾಗಿ ಕುಳಿತ್ತಿದ್ದರು. ಮಧ್ಯಾಹ್ನದ ಬಿಸಿಲು ಸುಡುತ್ತಿತ್ತು. ಎದುರಿಗೆ ನೀರಿನಿಂದ ತುಂಬಿದ ಸರೋವರವು ಕಂಗೊಳಿಸುತ್ತಿತ್ತು. ಸಣ್ಣ-ದೊಡ್ಡ ಕಪ್ಪೆಗಳು ನೀರಿನಿಂದ ಹೊರಗೆ ಬಂದು ಆಟವಾಡುತ್ತಿದ್ದವು. ಆದರೆ, ಆ ಬಿರುಬಿಸಿಲಿನ ತಾಪಕ್ಕೆ ಕಪ್ಪೆಯ ಮರಿಗಳು ಕಳವಳಿಸಿದಾಗ, ಒಂದು ಕೃಷ್ಣ ಸರ್ಪವು ಬಂದು ಆ ಕಪ್ಪೆಯ ಮರಿಗಳ ಮೇಲೆ ತನ್ನ ಹೆಡೆಯನ್ನು ಬಿಚ್ಚಿ ಅವುಗಳಿಗೆ ನೆರಳನ್ನುಂಟು ಮಾಡುತ್ತಿತ್ತು ! ಕಪ್ಪೆ-ಹಾವು ಇವುಗಳಲ್ಲಿರುವ ನೈಸರ್ಗಿಕ ವೈರವು ಈ ಸ್ಥಳದಲ್ಲಿ ಇಲ್ಲದುದನ್ನು ಕಂಡು ಇದು ಹಿಂದೆ ಒಬ್ಬ ಋಷಿಶ್ರೇಷ್ಠನ ತಪೋಭೂಮಿಯಾಗಿರಬೇಕೆಂದು ಶ್ರೀಶಂಕರರು ನಿರ್ಧರಿಸಿದರು. ಮತ್ತು ಇದೇ ಸ್ಥಳದಲ್ಲಿಯೇ ದಕ್ಷಿಣ ಆಮ್ನಾಯ ಪೀಠವನ್ನು ಸ್ಥಾಪಿ

ಸಲು ಆಗಲೇ ನಿರ್ಧರಿಸಿದರು. ಆಗಲೇ ಶೃಂಗೇರಿಯ ಶಾರದಾಪೀಠ ನಿರ್ಮಾಣದ ವಿಚಾರವು ಶ್ರೀಶಂಕರರಲ್ಲಿ ಮೂರ್ತಸ್ವರೂಪ ಪಡೆಯಿತು. ಸ್ವಲ್ಪೇ ಕಾಲದಲ್ಲಿ ಅಲ್ಲಿಯೇ ಪ್ರಖ್ಯಾತ ಶ್ರೀಶಂಕರರ ದಕ್ಷಿಣಾಮ್ನಾಯ ಶಾರದಾ ಪೀಠವು ತಲೆ ಎತ್ತಿತ್ತು! ಆ ಸ್ಥಳವು ಪ್ರಶಾಂತವೂ, ನಿರ್ವೈರವೂ ಆಗುವುದಕ್ಕೆ ಕಾರಣವಿತ್ತು. ಹಿಂದೆ ವಿಭಾಂಡಕ ಋಷಿಗಳು ಋಷ್ಯಶೃಂಗರನ್ನು ಪಡೆದು ಶ್ರೀ ಮಲ್ಲಿಕಾರ್ಜುನನ ಲಿಂಗದಲ್ಲಿ ಐಕ್ಯವಾದ ಪುರಾಣ ಪ್ರಸಿದ್ಧ ಸ್ಥಾನವದು! ಋಷ್ಯಶೃಂಗರ ಸ್ಥಾನವಾಗಿದ್ದುದರಿಂದ ಅದಕ್ಕೆ ಶೃಂಗಗಿರಿ (ಶೃಂಗೇರಿ) ಎಂದು ಕರೆಯುವುದು ವಾಡಿಕೆಯಾಯಿತು.

ಶ್ರೀಶಂಕರ ಮತ್ತು ಮಂಡನಮಿಶ್ರರ ವಾದದಲ್ಲಿ ಮಂಡನಮಿಶ್ರರ ಪತ್ನಿ ಉಭಯಭಾರತಿಯು ಮಧ್ಯಸ್ಥಳಾಗಿದ್ದಳು. ಅವಳು ವಿದ್ಯಾಧಿದೇವತೆ ಸರಸ್ವತಿಯ ಅಪರಾವತಾರ! ಮಂಡನಮಿಶ್ರರು ವಾದದಲ್ಲಿ ಸೋತಾಗ ಅವಳು ಶಾಪವಿಮೋಚಿತಳಾಗಿ ಸತ್ಯಲೋಕಕ್ಕೆ ಹೋಗಲು ಬಯಸಿದಳು. ಆದರೆ, ಶ್ರೀಶಂಕರರು ಅವಳಿಗೆ ಬಿನ್ನವಿಸಿ, ತಮ್ಮ ಆಮ್ನಾಯಪೀಠದಲ್ಲಿ "ಶಾರದಾಂಬಾ" ಎಂಬ ಹೆಸರಿನಿಂದ ನೆಲಸಿ, ಧರ್ಮರಕ್ಷಣೆ-ಪ್ರಚಾರಗಳ ಕಾರ್ಯದಲ್ಲಿ ನೆರವಾಗಲು ಅವಳನ್ನು ಒಪ್ಪಿಸಿದರು. ಅಂದಿನಿಂದ ಶೃಂಗೇರಿಯಲ್ಲಿ ಶ್ರೀ ಶಾರದಾಂಬಾ ದೇವಿಯ ಅರ್ಚನೆಯ ಜೊತೆಗೆ, ಶ್ರೀ ಗೋವಿಂದ ಭಗವತ್ಪಾದರು ಅನುಗ್ರಹಿಸಿದ ಶ್ರೀಚಂದ್ರಮೌಳೀಶ್ವರ ಹಾಗೂ ಶ್ರೀ ರತ್ನಗರ್ಭ ಗಣಪತಿ ಇವರ ಪೂಜೆಯೂ ನಿತ್ಯ ನಡೆಯುವಂತೆ ವ್ಯವಸ್ಥೆ ಮಾಡಿದರು. ಶ್ರೀ ಸುರೇಶ್ವರಾಚಾರ್ಯರು ಶೃಂಗೇರಿಪೀಠದ ಮೊದಲ ಜಗದ್ಗುರುಗಳಾದರು. ಬದಿಯಲ್ಲಿ ಸೂಸಿ ಹರಿಯುವ ತುಂಗಭದ್ರೆಯ ಅವಿಚ್ಛಿನ್ನ ಪ್ರವಾಹದಂತೆ, ಎಂಥ ಪಾಪಿಯನ್ನೂ ಉದ್ಧರಿಸಬಲ್ಲ ಅದ್ವೈತ ದರ್ಶನದ ಜ್ಞಾನಪ್ರವಾಹವೂ ಇಂದಿಗೂ, ಮುಂದೆಯೂ ಕೂಡ ಪ್ರವಹಿಸುತ್ತಲಿದೆ!

ಆದಿ ಶಂಕರರು ಯಾವ ಹೊಸಧರ್ಮವನ್ನು ಸ್ಥಾಪಿಸಲಿಲ್ಲ; ಆ ಕಾಲಕ್ಕೆ ಚಾರ್ವಾಕ, ಬೌದ್ಧಮತಗಳ ಪ್ರಹಾರದಿಂದ ಕಳೆಗುಂದುತ್ತಿದ್ದ ಪ್ರಾಚೀನ ವೈದಿಕದರ್ಶನವನ್ನು ಪುನಃಪ್ರತಿಷ್ಠಾಪಿಸಿದರು. ಅವರು ಯಾವ ಸ್ವತಂತ್ರ ಗ್ರಂಥವನ್ನೂ (ಅದ್ವೈತ ದರ್ಶನದ ಮಂಡನೆಗಾಗಿ) ರಚಿಸಲಿಲ್ಲ. ಅವರು ಯಾವ ಸ್ವಕಪೋಲ ಕಲ್ಪಿತ ಮಾತನ್ನು ಹೇಳಿಲ್ಲ.

ಪ್ರಸ್ಥಾನತ್ರಯಿ ಎಂದು ಹೆಸರಾದ ಉಪನಿಷತ್, ಬ್ರಹ್ಮಸೂತ್ರ ಮತ್ತು ಭಗವದ್ಗೀತೆಗಳಿಗೆ ಭಾಷ್ಯವನ್ನು ಬರೆಯುವುದರ ಮೂಲಕ ಜ್ಞಾನದ ಆಧಾರದ ಮೇಲೆ ನಿಂತಿರುವ ಪ್ರಾಚೀನ ಅದ್ವೈತದರ್ಶನವನ್ನು ಪುನಃ ಪ್ರಚಾರಕ್ಕೆ ತಂದರು. ಉಪನಿಷತ್ಕಾಲದ ಋಷಿಗಳು ಕಂಡ ದರ್ಶನವನ್ನು ಸಂಗ್ರಹಿಸಿ ಸುವ್ಯವಸ್ಥಿತವಾಗಿ ತಮ್ಮ ಭಾಷ್ಯದ ಮೂಲಕ ನಿರೂಪಿಸಿದರು. ಬೌದ್ಧಧರ್ಮವು ಹಿಮ್ಮೆಟ್ಟುವದಕ್ಕೆ ಮುಖ್ಯ ಕಾರಣರಾದ ಶ್ರೀ ಶಂಕರರನ್ನು ಅವರ ದರ್ಶನವನ್ನು ಸರಿಯಾಗಿ ತಿಳಿದುಕೊಳ್ಳದೆ, ನಿರ್ಗುಣ ಬ್ರಹ್ಮ ಮತ್ತು ಬೌದ್ಧರ ಶೂನ್ಯವಾದಗಳಲ್ಲಿಯ ಅಂತರವನ್ನು ತಿಳಿಯದೆ, ಶ್ರೀ ಶಂಕರರನ್ನು ಪ್ರಚ್ಛನ್ನ ಬೌದ್ಧರೆಂದು ಕೆಲವರು ತಪ್ಪಾಗಿ ಭಾವಿಸುವುದುಂಟು. ಅದು ಸರಿಯಲ್ಲ; ಶ್ರೀ ಶಂಕರರು ಹೇಳಿದಂತೆ, ಪರಬ್ರಹ್ಮನು ಶುದ್ಧ, ನಿತ್ಯ, ನಿರ್ವಿಕಲ್ಪ, ನಿರ್ಲೇಪ, ನಿರವಯವ, ನಿರಂಜನ, ಶಾಶ್ವತ, ಆದಿಮಧ್ಯಾಂತರಹಿತ, ನಾಮರೂಪ ರಹಿತನಾಗಿದ್ದಾನೆ. ದೇಶ-ಕಾಲಗಳಿಗೆ ಅತೀತನಾದ ಸರ್ವವ್ಯಾಪಿ ಪರಬ್ರಹ್ಮನೊಬ್ಬನೇ ನಿಜವಾದ ಸದ್ವಸ್ತು; ಉಳಿದುದೆಲ್ಲ ಮಿಥ್ಯೆ. ಆದರೂ, ಅಜ್ಞಾನದ ಪರಿಣಾಮವಾಗಿ, ಮಾಯೆಯ ಪ್ರಭಾವದಿಂದ, ಅಸ್ತಿತ್ವವೇ ಇಲ್ಲದ ಜಗತ್ತು ಸತ್ಯವೆಂಬಂತೆ ಭಾಸವಾಗುತ್ತದೆ. ನಸುಗತ್ತಲೆಯಲ್ಲಿಯ ಹಗ್ಗವು ಹಾವಿನಂತೆ ಕಾಣುತ್ತದೆ. ಬೆಳಕು ಬಂದೊಡನೆಯೆ, ಅದು ಹಾವಲ್ಲ, ಹಗ್ಗ ಎಂಬ ಜ್ಞಾನಪ್ರಾಪ್ತಿಯಾಗುವದಿಲ್ಲವೆ? ಹಾಗೆಯೇ, ಜ್ಞಾನದೀಪದ ಸಹಾಯದಿಂದ ನಾವು ಜಗತ್ತನ್ನು ವೀಕ್ಷಿಸಿದರೆ, ಅದಕ್ಕೆ ನಾಮ - ರೂಪಾತ್ಮಕವಾದ ಅಸ್ತಿತ್ವ ಮಾತ್ರ ಇದ್ದುದು ಅನುಭವಕ್ಕೆ ಬರುತ್ತದೆ. ಮಣ್ಣಿನಿಂದ ಸಿದ್ಧವಾದ ಗಡಿಗೆ - ಮಡಿಕೆಗಳೆಲ್ಲ ನೋಡಲು ಆಕಾರ ಹೊಂದಿದ್ದರೂ, ನಿಜವಾಗಿ ಅವು ಮಣ್ಣೇ ಹೊರತು ಮತ್ತೊಂದಲ್ಲ (ಮೃತ್ತಿಕೈವ ಸತ್ಯಂ!) ಅಥವಾ ಬಂಗಾರದ ಆಭರಣಗಳೆಲ್ಲ ಬದಲಾಗುವ ನಾಮರೂಪಗಳು; ಅವುಗಳಲ್ಲಿ ಯಾವಾಗಲೂ ಇರುವ ಬಂಗಾರ ಮಾತ್ರ ಶಾಶ್ವತ! ಅದರಂತೆ ಜಗತ್ತು ಭೇದದಿಂದ ಕೂಡಿದಂತೆ, ನಾನಾರೂಪದಲ್ಲಿ ಕಂಡರೂ, ಅದು ಅಜ್ಞಾನದ ವಿಲಾಸ ಮಾತ್ರ. ಜ್ಞಾನಿಗೆ ಎಲ್ಲವೂ ಬ್ರಹ್ಮಸ್ವರೂಪವಾಗಿಯೇ ಅನುಭವಕ್ಕೆ ಬರುತ್ತದೆ. ಅಂತೆಯೇ ಅವನು "ಸರ್ವಂ ಖಲ್ವಿದಂ ಬ್ರಹ್ಮ" ಎಂದೇ ಉದ್ಗಾರ ತೆಗೆಯುತ್ತಾನೆ. ಅಹಂ ಬ್ರಹ್ಮಾಸ್ಮಿ, ತತ್ತ್ವಮಸಿ ಎಂಬ ಮಹಾವಾಕ್ಯಗಳನ್ನು ತನ್ನ ಅನುಭವಕ್ಕೆ ತಂದುಕೊಂಡು ಸ್ವಸ್ವರೂಪಾನಂದದಲ್ಲಿ ಮಗ್ನನಾಗಿರುತ್ತಾನೆ. ಹೀಗೆ ಎಲ್ಲ ಭೇದವು ಕೇವಲ ತೋರಿಕೆಯದು; ತನ್ನನ್ನು ಬಿಟ್ಟು ಪ್ರಪಂಚದಲ್ಲಿ ಇನ್ನೊಂದಿಲ್ಲ - ಒಂದೇ ಚೈತನ್ಯವು ನಾನಾರೂಪದಲ್ಲಿ ಪ್ರಕಟವಾದಂತೆ ಭಾಸವಾಗುತ್ತದೆ-ಎಂಬ ಉದಾತ್ತ, ವ್ಯಾಪಕದರ್ಶನದಿಂದ ಇಂದಿನ ಅನ್ಯಾಯ, ಮೋಸ, ಹಿಂಸೆ ಮೊದಲಾದವು ಸುಲಭವಾಗಿ ನಿವಾರಿಸಲ್ಪಟ್ಟು, ಸುಖಮಯವಾದ ಹೊಸ ಪ್ರಪಂಚವು ಉದಯಿಸುವುದು ಸಾಧ್ಯ. ಇಂಥ ಘನವಾದ ಸಂದೇಶವನ್ನು ಜನತೆಗೆ ಇಂದಿಗೂ, ಮುಂದೆಯೂ ಬೀರುತ್ತ ನಿಂತಿದೆ ತುಂಗಭದ್ರೆಯ ಮಡಿಲಲ್ಲಿರುವ ಶ್ರೀ ಶೃಂಗೇರಿಪೀಠ!



ಶ್ರೀ ಶೃಂಗೇರಿ ಶಾರದಾಂಬ



ಹರಿಹರೇಶ್ವರ ದೇವಾಲಯದ
"ದ್ವಾರಪಾಲಕ"—ತೈಲಚಿತ್ರ



ಶ್ರೀ ವಿದ್ಯಾಶಂಕರ ದೇವಾಲಯ



ತುಂಗಾ ನದಿಯ ಬಳಿ ಶೃಂಗೇರಿ



ದೇವಾಲಯದ ಶಿಲ್ಪ, ಶೃಂಗೇರಿ

ಒಂದೇ ಸ್ಥಳದಲ್ಲಿ ಹುಟ್ಟಿ, ಸುಮಾರು ೫೦ ಮೈಲಿಗಳ ದೂರ, ಪ್ರತ್ಯೇಕವಾಗಿ ಹರಿದು, ಕೂಡಲಿಯಲ್ಲಿ ಸಂಗಮಿಸುವ ಈ ಅವಳಿ ನದಿಗಳು, ಮುಂದೆ ತುಂಗಭದ್ರೆಯಾಗಿ ಹರಿಯುತ್ತದೆ. ಆಂಧ್ರ ಪ್ರದೇಶದ ಕರ್ನೂಲಿನ ಆಚೆ ಈ ನದಿ ಕೃಷ್ಣಾನದಿಯನ್ನು ಕೂಡಿಕೊಳ್ಳುವ ವೇಳೆಗೆ, ಇದೊಂದು ದೊಡ್ಡನದಿಯೇ ಆಗಿ ಬೆಳೆದು ಬರುತ್ತದೆ.

ಬಲಗಡೆಯಿಂದ ಭದ್ರಾ ಮತ್ತು ಎಡಗಡೆಯಿಂದ ತುಂಗಾ, ಅಕ್ಕತಂಗಿಯರ ಹಾಗೆ ಕೂಡುವ ಕೂಡಲಿ ಒಂದು ಮೋಹಕ ಸ್ಥಳ. ಈ ಎರಡು ನದಿಗಳ ನೀರು, ಯಾವುದು ಹೆಚ್ಚು ಯಾವುದು ಕಡಿಮೆ ಎಂಬ ಸಂಶಯ ಹುಟ್ಟದ ರೀತಿಯಲ್ಲಿ ಒಂದರೊಡನೊಂದು ಮಿಳಿತವಾಗುವ ರೀತಿ ಹೃದಯಂಗಮವಾಗಿದೆ.

ಇಲ್ಲಿರುವ ಶಾರದಾಮಾತೆಯ ಮಂದಿರ ಅಪೂರ್ವವಾಗಿದೆ. ಇದಕ್ಕೆ ಕಾರಣ, ಇಲ್ಲಿನ ಶಾರದಾಮಾತೆಯ ಮೂರ್ತಿ ನಿಂತುಕೊಂಡಿರುವ ಭಂಗಿಯಲ್ಲಿರುವುದು. ಪ್ರಾಚೀನವಾದ ಬ್ರಹ್ಮದೇವ, ನರಸಿಂಹ ಮತ್ತು ರಾಮೇಶ್ವರ ದೇವಸ್ಥಾನಗಳೂ, ಶೃಂಗೇರಿ ಮತ್ತು ಮಾಧ್ವ ಮಠಗಳೂ ಇಲ್ಲಿವೆ.

ಕೂಡಲಿಯಿಂದ ಹೆಚ್ಚೂ ಕಡಿಮೆ, ತುಂಗಭದ್ರಾ ಉತ್ತರಾಭಿಮುಖವಾಗಿಯೇ ಹರಿಯುತ್ತದೆ. ಕೂಡಲಿಯಿಂದ ಸುಮಾರು ೨೦ ಮೈಲಿ ದೂರವಿರುವ ಹೊನ್ನಾಳಿಯನ್ನು ತಲುಪುವ ವೇಳೆಗೆ, ತುಂಗಭದ್ರಾ ಮೂರು ಬಾರಿ ತನ್ನನ್ನು ತಾನೇ ಸುತ್ತಿ ಹಾಕಿಕೊಂಡು ಮುಂದು ವರಿಯುತ್ತದೆ.

ತುಂಗಭದ್ರಾ ನದಿಯ ಪ್ರಮುಖ ಉಪನದಿಗಳೆಂದರೆ, ಕುಮುದ್ವತಿ, ವರದಾ, ಸ್ಯಾಗಲ ಹಳ್ಳ, ಸೂಳೆಕೆರೆಹಳ್ಳ, ಚಿಕ್ಕಹಗರಿ, ಹಗರಿ(ವೇದಾವತಿ), ಹಂಪಾಪಟ್ಣ ಹಳ್ಳ, ರಾಮಪ್ಪವಂಕ ಕನಕನಾಲಾ, ಮಸ್ಕಿನಾಲಾ, ಹಾಗೂ ' ರೇಹಳ್ಳ. ಹೊನ್ನಾಳಿಯಿಂದ ಮುಂದೆ ನದಿಯ ಪಾತ್ರ ಸಾಕಷ್ಟು ವಿಸ್ತಾರವಾಗುತ್ತಾ ಹೋಗುತ್ತದೆ. ಈ ನದಿ, ಬಹುಮಟ್ಟಿಗೆ ಸಮತಟ್ಟಾದ ನೆಲದಲ್ಲೇ ಹರಿಯುತ್ತದೆ. ಆದ್ದರಿಂದ ಈ ನದಿ ಪಾತ್ರದಲ್ಲಿ ಎಲ್ಲಿಯೂ ಯಾವುದೇ ಜಲಪಾತಗಳಿಲ್ಲ: ಹಂಪೆಯ ಪ್ರದೇಶದಲ್ಲಿ ಮಾತ್ರವೇ ಈ ನದಿ ಬಹಳಷ್ಟು ಬಂಡೆಗಲ್ಲುಗಳ ಮೂಲಕ ಹರಿದು ಹೋಗುತ್ತದೆ. ಅದರಲ್ಲಿಯೂ ಹೊಸಪೇಟೆಯಿಂದ ಮೇಲಕ್ಕೆ ವಲ್ಲಭಪುರದ ವರೆಗೆ ಸಾಮಾನ್ಯವಾಗಿ ಕಡಿದಾದ ದಂಡೆಗಳಿವೆ.

ಕೂಡಲಿಯಿಂದ ಮುಂದೆ, ಹರಿಹರ, ಕುರುವತ್ತಿ, ಮೈಲಾರ, ಗಳಗನಾಥ, ಹಂಪೆ, ಆನೆಗೊಂದಿ, ಮಾರ್ಕಂಡ ಮತ್ತು ಮಂತ್ರಾಲಯ ಇವು ಈ ನದಿ ಪಾತ್ರದಲ್ಲಿ ಕಂಡುಬರುವ ಪುಣ್ಯ ಕ್ಷೇತ್ರಗಳು. ಇವುಗಳಲ್ಲೆಲ್ಲ ಹರಿಹರ, ಮೈಲಾರ, ಹಂಪೆಗಳು ಅತ್ಯಂತ ಪ್ರಸಿದ್ಧ ಕ್ಷೇತ್ರಗಳಾಗಿವೆ.

ಹರಿಹರದಲ್ಲಿನ ಹರಿಹರೇಶ್ವರಸ್ವಾಮಿ ದೇವಾಲಯ, ಹೊಯ್ಸಳ ವಾಸ್ತುಶಿಲ್ಪದ ಒಂದು ಭವ್ಯ ಉದಾಹರಣೆಯಾಗಿದೆ. ಈ ದೇವಾಲಯದ ಮುಂಭಾಗದಲ್ಲಿರುವ ಎರಡು ದೀಪದ ಸ್ತಂಭಗಳ ತುಂಬ ಆಕರ್ಷಕ ರಚನೆಗಳಾಗಿವೆ. ಮೈಲಾರದಲ್ಲಿ ನಡೆಯುವ ಜಾತ್ರೆ ಈ ಭಾಗದಲ್ಲಿ ಅತ್ಯಂತ ಪ್ರಸಿದ್ಧವಾಗಿದೆ.



ಹರಿಹರದಲ್ಲಿ ತುಂಗಭದ್ರಾ



ಹರಿಹರೇಶ್ವರ ದೇವಾಲಯದ ಒಂದು ದೃಶ್ಯ

ಹಂಪೆ, ಪೌರಾಣಿಕವಾಗಿ, ಚಾರಿತ್ರಿಕವಾಗಿ, ಸಾಂಸ್ಕೃತಿಕವಾಗಿ ಪ್ರಾಧಾನ್ಯ ಪಡೆದ ಸ್ಥಳ. ಕನ್ನಡಿಗರ ಅಧಿದೈವವೆನಿಸಿದ ಹನುಮಂತ, ಇಲ್ಲಿನ ಸಮೀಪದ ಕಿಷ್ಕಿಂಧೆಗೆ ಸೇರಿದವನು. ವಾಲಿಸುಗ್ರೀವರು ಇದೇ ನೆಲಕ್ಕೆ ಸೇರಿದವರು. ವಿದ್ಯಾರಣ್ಯರು, ಹರಿಹರ ಬುಕ್ಕ ಇವರಿಗೆ ಮಾರ್ಗದರ್ಶನ ನೀಡಿ, ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ನೆರವಾದದ್ದೂ ಈ ಸ್ಥಳದಲ್ಲಿಯೇ. ಕರ್ನಾಟಕ ಸಂಗೀತ ಪಿತಾಮಹರೆನಿಸಿದ ಪುರಂದರದಾಸರು ತಮ್ಮ ಅನೇಕ ದೇವರನಾಮಗಳನ್ನು ಹಾಡಿ ಪ್ರಚುರ ಪಡಿಸಿದುದು ಇಲ್ಲಿಯೇ. ಈಗಲೂ, ತುಂಗಭದ್ರಾ ನದಿಯ ದಂಡೆಯ ಮೇಲೆ ಪುರಂದರದಾಸರ ಮಂಟಪ ಎನ್ನುವ ಒಂದು ಕಲ್ಲುಮಂಟಪವಿದೆ. ಇತ್ತೀಚೆಗೆ, ಇಲ್ಲಿ ಪುರಂದರದಾಸರ ಆರಾಧನೋತ್ಸವವನ್ನು ಪ್ರತಿ ವರ್ಷವೂ ನಡೆಸುತ್ತಿರುವುದು ಒಂದು ಶ್ಲಾಘನೀಯ ಕಾರ್ಯವಾಗಿದೆ.

ಹಂಪೆಯ ಬಳಿಯಲ್ಲಿಯೇ ನದಿಯ ಮಧ್ಯದಲ್ಲಿ ನಡುಗಡ್ಡೆಯೊಂದರಲ್ಲಿ ಒಂಬತ್ತು ಜನ ಮಾಧ್ವ ಯತಿಗಳು ವೃಂದಾವನಸ್ಥರಾಗಿದ್ದಾರೆ. ಈ ಸ್ಥಳ 'ನವವೃಂದಾವನ' ಎಂದು ಖ್ಯಾತಿ ಪಡೆದಿದೆ.

ಹಂಪೆಯ ರೀತಿಯಲ್ಲಿಯೇ ಮೆರೆದ ಇನ್ನೊಂದು ವಿಖ್ಯಾತ ಪಟ್ಟಣ ಆನೆಗೊಂದಿ. ಈ ಪಟ್ಟಣವೂ ತುಂಗಭದ್ರಾ ನದಿಯ ದಂಡೆಯ ಮೇಲೆ ಇದೆ.



ರಾಯಚೂರಿನ ಬಳಿಯ ಇನ್ನೊಂದು ಪ್ರಮುಖಸ್ಥಳ. 'ಪ್ರೇಮಾಯತನ'. ಕರ್ನಾಟಕದ ಅದ್ವಿತೀಯ ವಿಚಾರವಂತರಲ್ಲಿ ಒಬ್ಬರಾಗಿದ್ದ ಪಂಡಿತ ತಾರಾನಾಥರು ಈ 'ಪ್ರೇಮಾಯತನ' ಆಶ್ರಮ ಕಟ್ಟಿಕೊಂಡಿದ್ದರು. ವಿಚಾರವಂತರ ಪಾಲಿಗೆ ಇದೊಂದು ಆಕರ್ಷಕ ಸ್ಥಳವಾಗಿದ್ದಿತು.

ತುಂಗಭದ್ರಾನದಿಯ ಮೇಲಿನ ಇನ್ನೊಂದು ಪವಿತ್ರ ಕ್ಷೇತ್ರ ಮಂತ್ರಾಲಯ. ಈಚಿನ ದಿನಗಳಲ್ಲಿ ಮಂತ್ರಾಲಯದ ಹೆಸರನ್ನು ಕೇಳದ ಕನ್ನಡಿಗನೇ ಇಲ್ಲ. ಈ ಕ್ಷೇತ್ರದ ಪಾವಿತ್ರ್ಯಕ್ಕೆ ತುಂಗಭದ್ರಾ ನೀಡಿರುವ ರಮಣೀಯತೆ ಅದ್ಭುತವಾದದ್ದು.

ತುಂಗಭದ್ರಾ ನದಿಯ ದಂಡೆಯ ಮೇಲೆ ಬೆಳೆದು ಅಭಿವೃದ್ಧಿ ಹೊಂದಿರುವ ಪಟ್ಟಣಗಳೆಂದರೆ, ಹರಿಹರ, ಹೊಸಪೇಟೆ, ಕಂಪ್ಲಿ, ಸಿರಗುಪ್ಪ, ರಾಯಚೂರು ಮತ್ತು ಗಂಗಾವತಿ.



ಶ್ರೀ ಹರಿಹರೇಶ್ವರ ಹರಿಹರ







ಭಗ್ನ ಗೋಪುರ ಹಂಪೆ



ಏಕಾಂತ



ನೀರಾವರಿ

ಬಹಳ ಪ್ರಾಚೀನ ಕಾಲದಿಂದಲೂ, ತುಂಗಭದ್ರಾನದಿಯ ನೀರನ್ನು ನೀರಾವರಿಗೆ ಬಳಸಲಾಗುತ್ತಿದೆ. ವಿಜಯನಗರದ ಕಾಲದಲ್ಲಿ ಹಲವಾರು ಅಣೆಕಟ್ಟುಗಳನ್ನು ನಿರ್ಮಿಸಲಾಗಿತ್ತು ಎನ್ನುವುದು ಗಮನಾರ್ಹ. ಅವುಗಳಲ್ಲಿ, ಕೋರೆಗಾಲ್ ವಲ್ಲಭಪುರ ಮತ್ತು ಹೊಸಕೋಟೆ ಅಣೆಕಟ್ಟು, ಇಂದಿನ ತುಂಗಭದ್ರಾ ಜಲಾಶಯದಲ್ಲಿ ಮುಳುಗಡೆಯಾಗಿ ಹೋಗಿವೆ. ಅದೇ ಕಾಲದ ಇನ್ನೊಂದು ಅಣೆಕಟ್ಟು ಬೆನ್ನೂರು ಅಣೆಕಟ್ಟು ಎನ್ನುವುದು ನಾಶವಾಗಿ ಹೋಗಿದೆ. ಆದರೆ ಆ ಕಾಲದಕಾಲುವೆಗಳನ್ನು ಇಂದಿಗೂ ಬಳಸಲಾಗುತ್ತಿದೆ. ಇದಕ್ಕೆ ಉತ್ತಮ ಉದಾಹರಣೆ ಎಂದರೆ, ರಾಯ ಮತ್ತು ಬಸವಣ್ಣ ನಾಲೆಗಳು.

ತುಂಗಭದ್ರಾಜಲಾಶಯದ ನೀರನ್ನು ನೀರಾವರಿ ಉದ್ದೇಶಕ್ಕೆ ಅಲ್ಲದೇ, ವಿದ್ಯುಚ್ಛಕ್ತಿ ಉತ್ಪಾದನೆಗೂ ಬಳಸಲಾಗುತ್ತಿದೆ. ಹಾಗೆಯೇ ಮೀನು ಕೃಷಿಯೂ ನಡೆಯುತ್ತಿದೆ.

ಲಕ್ಕವಳ್ಳಿಯ ಭದ್ರಾಜಲಾಶಯ, ಶಿವಮೊಗ್ಗೆಯ ಗಾಜನೂರಿನ ಬಳಿಯ ತುಂಗಾ ಆಣೆಕಟ್ಟು, ಭದ್ರಾವತಿ ತಾಲ್ಲೂಕು ಗೊಂದಿ ಹಳ್ಳಿಯ ಬಳಿಯ ಭದ್ರಾ ಆಣೆಕಟ್ಟು, ರಾಯಚೂರು ಜಿಲ್ಲೆ ಮಾನ್ವಿ ತಾಲ್ಲೂಕಿನಲ್ಲಿ ಕಟ್ಟಲಾಗಿರುವ, ರಾಜೋಲಿ ಬಂಡ ಯೋಜನೆಯ ಆಣೆಕಟ್ಟು— ಇವುಗಳು ಮುಖ್ಯ ನೀರಾವರಿ ಯೋಜನೆಗಳು. ಈ ಎಲ್ಲ ಯೋಜನೆಗಳಿಂದ ಒಟ್ಟು ಮೂರೂವರೆ ಲಕ್ಷ ಎಕರೆಯಷ್ಟು ನೆಲವನ್ನು ನೀರಾವರಿಗೆ ಒಳಪಡಿಸಲಾಗಿದೆ ಎನ್ನುವುದು ಹೆಮ್ಮೆಯ ಸಂಗತಿ.



ತುಂಗಭದ್ರೆಯನ್ನು ಮಲಿನಗೊಳಿಸುತ್ತಿರುವ ಕಾರ್ಖಾನೆ

ಕಾರ್ಖಾನೆಗಳು

ತುಂಗಭದ್ರಾ ನದಿಯುದ್ದಕ್ಕೂ ಹಲವಾರು ಕಾರ್ಖಾನೆಗಳು ಸ್ಥಾಪಿಸಲ್ಪಟ್ಟಿವೆ. ಇವುಗಳಲ್ಲಿ ಭದ್ರಾವತಿಯಲ್ಲಿರುವ 'ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಲಿಮಿಟೆಡ್, ಮೈಸೂರು ಕಾಗದ ಕಾರ್ಖಾನೆ, ಹರಿಹರದ ಬಳಿಯ ಕುಮಾರಪಟ್ಟಣದ ಬಿರ್ಲಾ ಪಾಲಿಫೈಬರ್ ಕಾರ್ಖಾನೆ, ಹೊಸಪೇಟೆಯ ತುಂಗಭದ್ರಾ ಉಕ್ಕು ಕಾರ್ಖಾನೆ ಇವು ಪ್ರಮುಖವಾದವು.

ಇವುಗಳಲ್ಲೆಲ್ಲ, ಈ ನದಿಯ ನೀರಿಗೆ ಅತ್ಯಂತ ಮಾರಕವಾದದ್ದು ಎಂದರೆ, ಪಾಲಿಫೈಬರ್ಸ್ ಕಾರ್ಖಾನೆ. ಈ ಕಾರ್ಖಾನೆ ಹೊರಸೂಸುವ ಗಲೀಜಿನಿಂದಾಗಿ, ಹಲವಾರು ಹಳ್ಳಿಗಳ ಜನರಿಗೆ ಕುಡಿಯುವ ನೀರಾಗಲೀ, ನೀರಾವರಿಗೆ ಬೇಕಾದ ನೀರಾಗಲಿ ಶುಚಿಯಾಗಿ ದೊರಕುವ ಸಂಭವವೇ ಇಲ್ಲದಂತಾಗಿದೆ. ತುಂಗಭದ್ರಾ ನದಿಯ ನೀರು ಇಷ್ಟೊಂದು ಕಲುಷಿತಗೊಂಡಿರುವುದು ನಿಜಕ್ಕೂ ಶೋಚನೀಯ. ಜೀವನಾಡಿಯಾದ ನೀರು ಹೀಗೆ ಕಲುಷಿತಗೊಂಡರೆ, ಜೀವನವೇ ದುರ್ಭರವಾಗುವುದರಲ್ಲಿ ಸಂದೇಹವಿಲ್ಲ. ಪರಿಸರ ಮಾಲಿನ್ಯವನ್ನು ತಡೆಯುವ ದಿಕ್ಕಿನಲ್ಲಿ ತುರ್ತು ಕಾರ್ಯಕ್ರಮ ಕೈಗೊಳ್ಳದಿದ್ದಲ್ಲಿ, ಇಲ್ಲಿನ ಜಲಮಾಲಿನ್ಯ ಇಡೀ ಒಂದು ಜನಾಂಗವನ್ನೇ ವಿನಾಶದತ್ತ ಕೊಂಡೊಯ್ಯುವುದರಲ್ಲಿ ಸಂದೇಹವಿಲ್ಲ.

ಅಂಕಿ ಅಂಶಗಳು

೧) ಉಗಮ ಸ್ಥಾನದ ಎತ್ತರ	:	೧೨೦೦ ಮೀಟರು ಗಂಗಾ ಮೂಲದ ವರಾಹ ಪರ್ವತ [ಅಕ್ಷಾಂಶ: ೧೩°೫' (ಉತ್ತರ) ರೇಖಾಂಶ: ೭೫°೧೪' (ಪೂರ್ವ)]
೨) ನದಿಯ ಉದ್ದ	:	ಸು. ೭೫೦ ಕಿ. ಮೀ.
೩) ಅಣೆಕಟ್ಟುಗಳು	:	೧. ತುಂಗಭದ್ರಾ ಜಲಾಶಯ ೨. ಭದ್ರಾ ಜಲಾಶಯ ೩. ತುಂಗಾ ಅಣೆಕಟ್ಟು ೪. ಭದ್ರಾ ಅಣೆಕಟ್ಟು ೫. ರಾಜೋಲಿಬಂಡ ಯೋಜನೆ
೪) ಹಳೆಯ ಅಣೆಕಟ್ಟುಗಳು	:	ಸುಮಾರು ಇಪ್ಪತ್ತು ಅಣೆಕಟ್ಟುಗಳು
೫) ನೀರಾವರಿ	:	ಸುಮಾರು ಮೂರುವರೆ ಲಕ್ಷ ಹೆಕ್ಟೇರುಗಳು.
೬) ಜಲಪಾತಗಳು	:	ಯಾವುವೂ ಇಲ್ಲ.
೭) ಪ್ರೇಕ್ಷಣೀಯ ಸ್ಥಳಗಳು	:	ಬಾಳೆಹೊನ್ನೂರು, ಶೃಂಗೇರಿ, ಮಂಡಗದ್ದೆ, ಲಕ್ಕವಳ್ಳಿ, ಗಾಜನೂರು ಕೂಡಲಿ, ಹರಿಹರ, ಮೈಲಾರ, ಗಳಗನಾಥ, ಹೊಸಪೇಟೆ, ಹಂಪೆ, ಕಂಪ್ಲಿಕೋಟೆ, ಮಂತ್ರಾಲಯ.
೮) ಪ್ರಮುಖ ಪಟ್ಟಣಗಳು	:	ತೀರ್ಥಹಳ್ಳಿ, ಶಿವಮೊಗ್ಗ, ಭದ್ರಾವತಿ, ಹರಿಹರ, ಹೊಸಪೇಟೆ, ಕಂಪ್ಲಿ, ಸಿರಗುಪ್ಪ, ರಾಯಚೂರು, ಗಂಗಾವತಿ.

ಉಪಸಂಹಾರ

ಕೃಷ್ಣಾ ಮತ್ತು ಕಾವೇರಿಗಳ ನಂತರ, ಕರ್ನಾಟಕದ ಅತ್ಯಂತ ಪ್ರಮುಖ ನದಿಯಾದ ತುಂಗಭದ್ರಾ ಇಲ್ಲಿನ ಜನಜೀವನದಲ್ಲಿ ಹಾಸುಹೊಕ್ಕಾಗಿ ಹೋಗಿದೆ. ನಾಡಿನ ಜೀವನಾಡಿಯಾದ ಇಂತಹ ನದಿಯಿಂದ ಪೂರ್ಣ ಪ್ರಯೋಜನವನ್ನು ಪಡೆಯಬೇಕಾದದ್ದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯ. ಬಹುಶಃ ಕರ್ನಾಟಕದಲ್ಲೇ ಹುಟ್ಟಿ, ಕರ್ನಾಟಕದಲ್ಲೇ ತನ್ನ ನೀರಿನ ಪರಮ ಪ್ರಯೋಜನವನ್ನು ಮಾಡಿಕೊಳ್ಳಲು ಅವಕಾಶವಿರುವ ನದಿಯೆಂದರೆ, ತುಂಗಭದ್ರಾ ನದಿಯೊಂದೇ. ಇಲ್ಲಿನ ಸಂತರು, ಸಾಧಕರು, ಸಾಮಾಜಿಕ, ರಾಜಕೀಯ ಪ್ರಬುದ್ಧ ಚಿಂತಕರು, ಈ ನದೀತೀರದಲ್ಲಿ ತಮ್ಮ ಜೀವನದ ಪರಮ ಗಂತವ್ಯವನ್ನು ಕಂಡುಕೊಂಡಿದ್ದಾರೆ. ಇಂತಹ ನದಿಯ ನೀರು ಮಲಿನಗೊಳ್ಳದ ಹಾಗೆ ನೋಡಿಕೊಳ್ಳಬೇಕಾದದ್ದು ಇಂದಿನ ಆದ್ಯ ವಿಷಯವಾಗಿದೆ.

ತನ್ನ ಸುತ್ತಲಿನ ಪರಿಸರದ ಬಗ್ಗೆ ಅತ್ಯಂತ ನಿರ್ಲಕ್ಷ್ಯವಹಿಸಿರುವ ಮನುಷ್ಯ ಈಗಲಾದರೂ, ಪರಿಸರ ಸಮತೋಲನವನ್ನು ಕಾಪಾಡಿಕೊಳ್ಳುವ ಬಗ್ಗೆ ಮನಸ್ಸು ಮಾಡಿರುವುದು ಹರ್ಷದಾಯಕ. ಈ ದಿಕ್ಕಿನಲ್ಲಿ ನದಿನೀರಿನ ಶುದ್ಧೀಕರಣಕ್ಕೆ ಮಹತ್ವದ ಸ್ಥಾನ ಸಲ್ಲಬೇಕು. ಕರ್ನಾಟಕ ಒಡ್ಯಾಣದಂತಿರುವ ತುಂಗಭದ್ರೆ, ಶುದ್ಧೀಕರಣಗೊಂಡು, ಎಂದಿನಂತೆ, ತನ್ನ ಮಡಿಲಿನಲ್ಲಿ ಕನ್ನಡಿಗರಿಗೆ ಹೊಸ ಚೈತನ್ಯವನ್ನು ತುಂಬುವಂತಾಗಲಿ; ತನ್ನ ಪ್ರತಿಯೊಂದು ಬೊಗಸೆ ನೀರಿನಲ್ಲೂ ಹೊಸಜೀವನ ಸೂತ್ರ ರೂಪಿಸಲಿ; ಹೊಸ ಜೀವನ ಗಾಯತ್ರಿಯನ್ನು ಮೊರೆಯಿಸಲಿ!

ವಾಙ್ಮಯ ವಿಭೂತಿ
ಶ್ರೀ ರಾಘವೇಂದ್ರ ಯತಿಗಳು

ಹಂ. ಪಂಢರಿನಾಥಾಚಾರ್ಯ ಗಲಗಲಿ



ಅಲಂಕೃತ ಮೂಲ ವೃಂದಾವನ.

ಹಿಂದಿನ-ಅತಿಹಿಂದಿನ ಕಾಲ. ಯುಗಗಳ ನೊಗ ಹೇರಿದ ಕಾಲಚಕ್ರದ ಮೊದಲ ಉರುಳು. ಕೃತಯುಗ ಅದೇ ಸುರುಳಿ ಬಿಚ್ಚಿದೆ. ಆ ಕಾಲದಲ್ಲಿಯೇ ದೈವೀಶಕ್ತಿಯ ಅಸ್ತಿತ್ವಕ್ಕೇ ಸಂಚಕಾರ. ದೈವ, ಧರ್ಮ ಆಸ್ತಿಕ್ಯಗಳನ್ನು ಪ್ರತಿಭಟಿಸಿ ಎದ್ದು ನಿಂತಿದೆ ಅಸುರೀಶಕ್ತಿ. ಎಲ್ಲಿಯ ದೇವ! ಎಲ್ಲಿಯ ಧರ್ಮ! ನಾನೇ ದೇವರು. "ಈಶ್ವರೋಽಹಂ."

ದೈತ್ಯಶಕ್ತಿಯ ಈ ಸ್ವಾರ್ಥಧೂರ್ತ [illegible] ಸಮರ್ಥ ರೀತಿಯಿಂದ ಎದುರಿಸಿದ ದಿಟ್ಟ ಬಾಲಕನೇ ಪುಟ್ಟ ಪ್ರಹ್ಲಾದ. ಇವನಲ್ಲಿಯ ಸಿಂಹಶಕ್ತಿಯೇ ನಾರಾಯಣನ ನರಸಿಂಹಶಕ್ತಿ. ಪ್ರತಿಭಟಿಸುವ [illegible] ದೇಹ-ಗೇಹದ ಜಗಲಿಯ ಮೇಲೆಯೇ ಜಗತ್ಪಾಲಕ ಶಕ್ತಿ ಸುಪ್ರತಿಷ್ಠಿತ. [illegible] ಗಳ ಮೇಲೆ ಹಿಡಿತ ಉಳ್ಳವ ಕಂಬ, ಕಟ್ಟಿಗೆ, ಕಲ್ಲು ಎಲ್ಲಿ ಬೇಕಲ್ಲಿ ಆ ಮಹ-ತೇಜಃಪುಂಜ [illegible] ಆವಾಹಿಸಬಹುದೆಂಬುದನು [illegible] [illegible] ಆ ದೈತ್ಯ [illegible] ಪ್ರಹ್ಲಾ-ನಿದ್ದಲ್ಲಿಗೇ ಪುರುಷೋತ್ತಮನ ದಿವ್ಯದೀಪ್ತಿಯನ್ನು ಎಳೆದುತಂದಿತು. ಮಾನವೀಯತೆಗೆ ದೈವಿಕತೆ ಒಲಿದು ಬರುವಂತೆ ಮಾಡಿತು.

ದೈತೇಯ ಪರಿಸರದಲ್ಲಿ ಅರಳಿ ನಿಂತ ಆ ದಿವ್ಯಚೇತನಕ್ಕೆ ಓತು ಬಂದು, ಭಕ್ತಿಭರದಿಂದ ಸೋತುನಿಂದ ಆ ಪರಂಜ್ಯೋತಿಯು ಅದನ್ನು ಬಿಟ್ಟಿರಲಾರದೆ ಅದಕ್ಕೆ ತನ್ನೊಡನೆ ವಿಮಾನದಲ್ಲಿ ಮೋಕ್ಷಮಂದಿರಕ್ಕೆ ಬರಬೇಕೆಂದು ಕರೆನೀಡಿತು. ಅದಕ್ಕೆ ಆ ದೈತ್ಯಕುಲದ ಹಸುಳೆ ಕೊಟ್ಟ ಅನಿರೀಕ್ಷಿತ ಉತ್ತರದಿಂದ ಬೆಕ್ಕಸಬೆರಗಾಗಿ ನಿಂತಿತು ಆ ದೇವ ಚೇತನ. "ನಾಹಂ ವಿಮುಮುಕ್ಷ ಏಕಃ." ಪ್ರಭು, ನಾನೊಬ್ಬನೇ ಮೋಕ್ಷಕ್ಕೆ ಬರಲಾರೆ. ಈ ಸಂಸಾರದ ಶರಪಂಜರದಲ್ಲಿ ಸೆರೆಸಿಕ್ಕ ಈ ಜೀವರಾಶಿಯನ್ನೆಲ್ಲ ಕರೆದೊಯ್ದರೆ ನಾನೂ ಬರುತ್ತೇನೆ." ಇದಕ್ಕೆ ನರಸಿಂಹ ನುಡಿದ "ಪ್ರಹ್ಲಾದ, ಇವರೆಲ್ಲರಿಗೂ ಈಗ ಮೋಕ್ಷಕ್ಕೆ ಬರಲು ಅಧಿಕಾರವಿಲ್ಲ." ಪ್ರಹ್ಲಾದ-ಹಾಗಾದರೆ ನಾನು ಮತ್ತೆ ಮತ್ತೆ ಹುಟ್ಟಿ ಇವರನ್ನೆಲ್ಲ ತಿದ್ದಿ ಮುಕ್ತಿಮಂದಿರಕ್ಕೆ ಕರೆತರುತ್ತೇನೆ. ಈಗ ನಾನೊಬ್ಬನೆ ಮೋಕ್ಷಕ್ಕೆ ಬರಲಾರೆ."

ಹೀಗೆ ಭಗವಂತನಿಗೆ ಹೇಳಿ ಮಾನವ ಮಾತ್ರರನ್ನೆಲ್ಲ ಮುಕ್ತಿಮಂದಿರಕ್ಕೆ ಕರೆದೊಯ್ಯುವ ಮಹೋದ್ದೇಶ ಹೊತ್ತು ಮತ್ತೆ ಮರಳಿ ಮಹೀತಳದಲ್ಲಿ ಹುಟ್ಟಿ ಬಂದ ಮಹಾವ್ಯಕ್ತಿಯೇ ಶ್ರೀ ರಾಘವೇಂದ್ರ ಸ್ವಾಮಿಗಳು ಎಂದು ಸಾಂಪ್ರದಾಯಿಕ ಐತಿಹ್ಯ.

ತುಂಗಾನದಿಯ ತುಂಗೋತ್ತುಂಗವಾದ ತರಂಗಾಂತರಂಗವನ್ನೆ ತನ್ನ ರಿಂಗಣ ಗುಣಿತಕ್ಕೆ ರಂಗಸ್ಥಳವನ್ನಾಗಿ ಮಾಡಿಕೊಂಡ ತಂಗಾಳಿಯ ಅಲೆಗಳು ತಂಪಿಂಪು ತೀಡುತ್ತಲಿರುವ ಮಂತ್ರಾಲಯದಲ್ಲಿ ಕುಳಿತು ಮನುಕುಲದ ಉದ್ಧಾರಕ್ಕಾಗಿ ಮಂತ್ರಾಲೋಚನೆ ನಡೆಸಿದ್ದಾರೆ ದೇವತೆಗಳೊಂದಿಗೆ ಈ ಗುರುಪುಂಗವರು. ಅದಕ್ಕಾಗಿಯೇ ಇದಕ್ಕೆ ಹೆಸರು "ಮಂತ್ರಾಲಯ" ಎಂದ ಓರ್ವ ಆಧುನಿಕ ಸಂಸ್ಕೃತಕವಿ.

ತುಂಗೋತ್ತುಂಗತರಂಗಮಂಗಲನದೀ ತುಂಗಾಂತರಂಗಸ್ಥಲೀ—
ರಂಗೋತ್ಸಂಗನಿಷಂಗಿವಾತವಿಧುತಾಂಭಃಪ್ಲಾವಿತೇಪಾವಿತೇ॥
ಶ್ರೀ ಮಂತ್ರಾಲಯ ನಾಮ್ನಿಧಾಮ್ನಿ ವಸತೇಚಾಶಂಸತೇಶಂಸತೇ
ಮಂತ್ರಾಲೋಚನಮಾರ್ತಿನಾಶನಕೃತೇಪುಂಸಾಂ ನಮಸ್ಕುರ್ಮಹೇ॥

ಎಂದು ಬಣ್ಣಿಸಿದ್ದು ಸಾರ್ಥವೂ ಯಥಾರ್ಥವೂ ಆಗಿದೆ.

ಪೂರ್ವಾಶ್ರಮದಲ್ಲಿ ವೆಂಕಣ್ಣಭಟ್ಟರೆಂದು ಹೆಸರಾದ ರಾಯರು ಹುಟ್ಟಿದ್ದು ದಟ್ಟದರಿದ್ರ ಕುಲದಲ್ಲಿ. ಬೆಳೆದದ್ದು ಸುದಾಮನ ಒಕ್ಕಲಲ್ಲಿ. ಲಕ್ಷ್ಮಿ ಇವರನ್ನು ದೂರ ಸರಿಸಿದರೂ ಸರಸ್ವತಿ ಮಾತ್ರ ಇವರನ್ನು ಸರಿಸಲಿಲ್ಲ. ಅನುಸರಿಸಿ ಬಂದಳು. ಸರಸಿಯಾಗಿ ನಾಲಿಗೆಯ ಮೇಲೆಯೇ ನಿಂದಳು. ವಾಣಿ ತನ್ನ ವೀಣೆಯನ್ನು ಇವರ ತುಟಿತಟದಲ್ಲಿ ಮೀಟಿದಳು. ಕರ್ನಾಟಕ ಸಂಗೀತದಲ್ಲಿ ಹೊಸಶಾರ್ಙ್ಗಧರ ಪದ್ಧತಿಯನ್ನು ಪ್ರಾರಂಭಿಸಿ ವೀಣಾ ವೆಂಕಣ್ಣಭಟ್ಟರೆಂದು ಪ್ರಸಿದ್ಧರಾದ ಆಚಾರ್ಯರು ವೇದಾಂತದ ವೀಣೆಯನ್ನೂ ಶ್ರುತಿಗಳ ಶ್ರುತಿಗೆ ಅನುಗುಣವಾಗಿ ಮಿಡಿದು ತಮ್ಮ ಹೆಸರನ್ನು ಸಾರ್ಥಕಪಡಿಸಿದರು.



ತುಂಗಾತೀರ ನಿವಾಸವ್, ಭಜಮನ



ಮಂತ್ರಾಲಯದಲ್ಲಿ ತುಂಗಭದ್ರಾ

ಹದಿಹರೆಯದಲ್ಲಿಯೇ ಹದಿನಾಕು ವಿದ್ಯೆಗಳು ಇವರ ಜಿಹ್ವೆಯ ತುದಿಯಲ್ಲಿ. ನಾಕು ವೇದ, ಆರು ಶಾಸ್ತ್ರಗಳು ಇವರ ಅಂಗೈನಲ್ಲಿ. ಮಿದುಳಿನಲ್ಲಿ ಶಾಸ್ತ್ರ ಪಾಂಡಿತ್ಯ ಹೆಪ್ಪುಗಟ್ಟಿತ್ತು–ಮಾತಿನಲ್ಲಿ ಕಾವ್ಯರಸ ಕಸುಗಟ್ಟಿತ್ತು. ಕಂಠದಲ್ಲಿ ಸಂಗೀತದ ರಸಗಂಗೆ ಉತ್ತರಂಗಿತವಾಗಿತ್ತು. ತರ್ಕದಲ್ಲಿ ಉದರ್ಕ, ಮೀಮಾಂಸೆಯಲ್ಲಿ ಉದಯಾರ್ಕ, ವೇದಾಂತದಲ್ಲಿ ವಾಚಸ್ಪತಿ, ವ್ಯಾಕರಣದಲ್ಲಿ ಪುಟ್ಟಪಾಣಿನಿ.

ತಂಜಾವೂರಿನಲ್ಲಿ ಒಮ್ಮೆ ಪಂಡಿತ ಸಭೆ. ದಕ್ಷಿಣೋತ್ತರದ ಘಟಾನುಘಟಿ ಮುಕುಟಪಂಡಿತರೆಲ್ಲರೂ ವಾದವೇದಿಕೆಯಲ್ಲಿ. ಸುಧೀಂದ್ರತೀರ್ಥರ ದಕ್ಷ ಅಧ್ಯಕ್ಷತೆ. ವ್ಯಾಕರಣದಲ್ಲಿ ವಾಕ್ಯಾರ್ಥ. ಮಹಾಭಾಷ್ಯದಲ್ಲಿ ವಿಶಿಷ್ಟ ವಿಚಾರ. ಸುಧೀಂದ್ರರ ಶಿಷ್ಯ ವೆಂಕಣ್ಣಭಟ್ಟ ಪಾಣಿನಿ ಪತಂಜಲಿ ಭಟ್ಟೋಜಿಯರ ಗ್ರಂಥಗ್ರಂಥಿಗಳನ್ನೆಲ್ಲ ಜಾಲಾಡಿ ಬಿಟ್ಟ. ಪಾಣಿನಿಯ ಪಾಣಿಪೀಠದಲ್ಲಿಯೇ 'ವಾರ್ತಿಕ'ದ ಕಾರ್ತಿಕೋತ್ಸವ ಕಾಣಿಸಿ 'ಶೇಖರ'ದ ಶಿಖರದರ್ಶನ ಮಾಡಿಸುವ ವೆಂಕಣ್ಣಭಟ್ಟರ ಶಬ್ದಾಬ್ಧಿವೈದಗ್ಧ್ಯವು ನೆರೆದ ದಿಗ್ಗಜಪಂಡಿತರೆಲ್ಲ ಮುಗ್ಗರಿಸಿ ಮೌನಮುದ್ರಿತರಾಗುವಂತೆ ಮಾಡಿತು. ಅಂದಿನಿಂದ ಮಹಾಭಾಷ್ಯ ವೆಂಕಣ್ಣಭಟ್ಟರೆಂದು ಅವರು ಖ್ಯಾತಾಭಿಗೀತರಾದರು. ವಿದ್ಯಾರ್ಥಿದೆಶೆಯಲ್ಲಿಯೇ ಶ್ರೀಮನ್ನ್ಯಾಯಸುಧಾ ಗ್ರಂಥಕ್ಕೆ ಪರಿಮಳ ಎಂಬ ಪ್ರೌಢ ಟಿಪ್ಪಣಿ ಬರೆದುದನ್ನು ಸ್ವಯಂ ನೋಡಿ "ಈ ವೆಂಕಣ್ಣ ಭಟ್ಟ ಅಧ್ಯಾತ್ಮ ಪ್ರಪಂಚದ ಒಂದು ಬೆಳಕಿನ ಬೆಟ್ಟ" ಎಂದು ಗುರುತಿಸಿದ ಗುರುಗಳು ಆ ಭಟ್ಟನಿಗೇ ವೇದಾಂತ ಸಾಮ್ರಾಜ್ಯದ ಪಟ್ಟಗಟ್ಟಿ ಸನ್ಯಾಸಾಶ್ರಮವಿತ್ತು ರಾಘವೇಂದ್ರತೀರ್ಥರೆಂದು ನಾಮಕರಣ ಮಾಡಿದರು.

ಗಗನದ ಗೂಡಿನಲ್ಲಿ ಗರುಡನ ಗರಿ ಬಿಚ್ಚಿದಂತಾಯಿತು. ಮತ್ಸ್ಯಾವತಾರಿಯ ಎದುರು ಮಹೋದಧಿ ಮೈದೆರೆಯಿತು. ದಿಗ್ವಿಜಯ, ದುರ್ಮತಖಂಡನ, ವೇದಮತಮಂಡನ, ಸಿದ್ಧಾಂತಪ್ರಚಾರ, ದೀನದಲಿತರ ಉದ್ಧಾರ, ಗ್ರಂಥಲೇಖನ, ಉಪದೇಶ ಉಪನ್ಯಾಸಗಳು ಸಾರೋದ್ಧಾರವಾಗಿ ನಡೆದವು. ಅಂದಿನ ಆ ಕಾಲದಲ್ಲಿ ಈ "ರಾಘವೇಂದ್ರ ಅಧ್ಯಾತ್ಮ ಶಕ್ತಿಯ ಕೇಂದ್ರ" ಎನಿಸಿದರು. ಅವರ ಗೈಮೆ ಮೂರು ಮುಖವಾಗಿ ತ್ರೈವಿಕ್ರಮ ವಿಕ್ರಮದಿಂದ ಜಗದೋದ್ಧಾರಕ್ಕಾಗಿ ಮೀಸಲಾಗಿ ತನ್ನ ಪ್ರೈಮೆಯನ್ನು ಮೆರೆಯಿತು. ಗ್ರಂಥಲೇಖನ, ಧರ್ಮಪ್ರಸಾರ, ದೀನದಲಿತರ ದುಃಖನಿವಾರಣ ಈ ತ್ರಿಮುಖ ಕಾರ್ಯಗಳು ಶ್ರೀ ರಾಘವೇಂದ್ರಸ್ವಾಮಿಗಳ ಪ್ರಭಾವದಿಂದ ತ್ರಿಕಾಲಾಬಾಧಿತವಾಗಿ ಪವಾಡದಂತೆ ಅಂದೂ ಇಂದೂ ಮುಂದೂ ನಡೆಯುತ್ತಲೇ ಇವೆ. ಎಂದೂ ಕಂದದ ಮಹಿಮೆಯ, ಕೀರ್ತಿ ಕುಂದದ ಜ್ಞಾನಜ್ಯೋತಿಯಿಂದ ನಾಡಿನ ನಿರಂತರ ನಂದಾದೀಪವಾಗಿ ತೊಳಗಿ ಬೆಳಗುವ ಕೆಲವೇ ಕೆಲವು ಬೆರಳವಿರಳ ವಿಭೂತಿಪುರುಷರಲ್ಲಿ ರಾಘವೇಂದ್ರಸ್ವಾಮಿಗಳು ಅಗ್ರಣ್ಯರು ಮತ್ತು ಅಗ್ರಗಣ್ಯರು. ಅವರು ವೃಂದಾವನಸ್ಥರಾಗಿ ಮುನ್ನೂರುವರ್ಷಗಳು ಸಂದಿದ್ದರೂ ಅವರ ಕೀರ್ತಿಕಾಯಕ್ಕೆ ಇನ್ನೂ ನವಪ್ರಾಯ. ದಿನಗಳೆದಂತೆ ಅವರ ದೀಪ್ತಿ ದೇದೀಪ್ಯಮಾನವಾಗಿ ಬೆಳಗುತ್ತಲಿದೆ.

ಅಂದಿನಿಂದ ಇಂದಿಗೂ ರಾಯರು ಭಜಿಸುವವರಿಗೆ ಕಲ್ಪವೃಕ್ಷ. ನಮಿಸುವವರಿಗೆ ಕಾಮಧೇನು. ಅವರ ಮಹಿಮೆ ಪವಾಡವಲ್ಲ, ಪ್ರತ್ಯಕ್ಷ ಅನುಭವ ಸಿದ್ಧ. ಇನ್ನೂ ಅಚ್ಚರಿಯ ಮಾತೆಂದರೆ ಅವರ ಕಲ್ಲಿನ ವೃಂದಾವನಕ್ಕೆ ಅಥವಾ ಪ್ರತಿಮೆ ಪ್ರತಿಕೃತಿಗಳಿಗೆ ಹತ್ತಿದ ಗಂಧ, ಮೆತ್ತಿದ ಮಣ್ಣು (ಮೃತ್ತಿಕೆ) ದುಸ್ಸಾಧ್ಯವಾದ ರೋಗಗಳನ್ನು ದೂರಮಾಡಿದೆ. ಅವುಗಳನ್ನು ತೊಳೆದ ನೀರು ತೀರ್ಥದಂತೆ ಮಂತ್ರಪೂತಜಲದಂತೆ ಭೂತಬಾಧೆಗಳನ್ನು ಪರಿಹರಿಸಿದ ಮಾತು ಜನಜನಿತವಾಗಿದೆ. ಅಂತೆಯೇ ಇಂದು ಮಂತ್ರಾಲಯದಲ್ಲಿ ಆಸ್ತಿಕ-ನಾಸ್ತಿಕ, ಅಜ್ಞ-ಪ್ರಾಜ್ಞ, ಸ್ವಧರ್ಮೀಯ-ವಿಧರ್ಮೀಯರೆಲ್ಲರೂ ಜಾತಿ ಮತಭೇದವಿಲ್ಲದೇ, ಆ ಗುರುಚರಣಕ್ಕೆ ಶರಣು ಬಂದು ಸೇವೆ ಸಲ್ಲಿಸಿ ಫಲಭಾಗಿಗಳಾಗುವದನ್ನು ಕಾಣುತ್ತೇವೆ.

ವಿಜ್ಞಾನಕ್ಕೆ ಮೀರಿದ ಒಗಟುಗಳಿಗೆಲ್ಲ ಇಲ್ಲಿ ಅನುಭಾವದ ಉತ್ತರವಿದೆ. ಮದ್ದು ಸೂಜಿಗಳಿಂದ ಗುಣವಾಗದ ರೋಗಗಳಿಗೆಲ್ಲ ಇಲ್ಲಿ ಆಧ್ಯಾತ್ಮಿಕ ಔಷಧ ಇದೆ. ಬಾಳಿನ ಗೋಳು, ಗಂಡಾಂತರಗಳಿಗೆಲ್ಲ ಇಲ್ಲಿ ಶಾಂತಿ ಸಮಾಧಾನದ ಪರಿಹಾರವಿದೆ.

ಆ ಕಾಲದಲ್ಲಿ ಶ್ರೀ ಗುರು ಸಾರ್ವಭೌಮರು ಒಂದು ಜಂಗಮಜ್ಞಾನ-ಕೋಶವಿದ್ದಂತಿದ್ದರು. ಅವರು ವ್ಯಾಖ್ಯಾನಿಸದ ಶಾಸ್ತ್ರವಿಲ್ಲ. ಅವರ ನಲವತ್ತೇಳು ಉದ್ಗ್ರಂಥಗಳಲ್ಲಿ ಯಾವದನ್ನು ತೆರೆದು ನೋಡಿದರೂ ಅಲ್ಲಿ ಅವರ ಚತುಶ್ಶಾಸ್ತ್ರಗಳ ಚತುರಸ್ರಪಾಂಡಿತ್ಯದ ಚಾತುರಿ, ಸರ್ವಶಾಸ್ತ್ರಗಳ ಸತ್ವಸಾರವನ್ನು ಎರಕಹಾಕುವ ವಿಲಕ್ಷಣ ವೈಖರಿ ಮತ್ತು ಅಜ್ಞ-ಪ್ರಾಜ್ಞರಿಗೂ ಮನಂಬುಗುವ ವಿಷಯ ವಿನ್ಯಾಸ ಮಾಡುವ ವಾಙ್ಮಾಧುರಿಗಳು ಮುಪ್ಪುರಿಗೊಂಡು ಮೆರೆಯುತ್ತವೆ.

ಅಧ್ಯಾತ್ಮ ಪ್ರಪಂಚದಲ್ಲಿ ಶ್ರೀ ರಾಘವೇಂದ್ರಸ್ವಾಮಿಗಳು ಶಕಪುರುಷರೆನಿಸಿದರೆ ಜ್ಞಾನಪ್ರಪಂಚದಲ್ಲಿ ಸೀಮಾಪುರುಷರೆನಿಸಿದ್ದಾರೆ. ಅವರ ನ್ಯಾಯಸುಧಾಪರಿಮಳ, ಚಂದ್ರಿಕಾಪ್ರಕಾಶ, ತಂತ್ರದೀಪಿಕಾ, ಭಾವದೀಪ ಮುಂತಾದ ಗ್ರಂಥಗಳು ಕಲಶ-ಕೃತಿಗಳಾಗಿ ವಿದ್ವನ್ಮಾನ್ಯವಾಗಿವೆ. ಅವರ ಭಾಟ್ಟ ಸಂಗ್ರಹ ಎಂಬ ಮೀಮಾಂಸಾಗ್ರಂಥವನ್ನು ಪರಮತೀಯರಾದ ನೀಲಕಂಠಮುಖಿಗಳು ಆನೆಯ ಮೇಲೆ ಮೆರೆಸಿದರಂತೆ. ಹೀಗೆ ಸಕಲ ವಿದ್ವನ್ಮಾನ್ಯ ಗ್ರಂಥಗಳನ್ನು ರಚಿಸಿದ ರಾಯರು ಜಗನ್ಮಾನ್ಯ ವಾಙ್ಮಯ ವಿಭೂತಿಯಾಗಿದ್ದಾರೆ.


ತೀರ್ಥಸ್ನಾನ





ಎಚ್. ಬಿ. ಮಂಜುನಾಥ








ಮಧುರಾ: ಶ್ರೀಕೃಷ್ಣನ ಆಡುಂಬೊಲ



ಚಿತ್ರ-ಲೇಖನ :

ಸೇತುರಾವ್ ಶ್ರೀನಿವಾಸ್





"ನ ಕೇಶವ ಸಮೋದೇವೋ, ನ ಮಾಥುರ ಸಮೋದ್ವಿಜಃ।" (ಕೇಶವನಿಗೆ ಸಮನಾದ ದೇವರಿಲ್ಲ, ಮಥುರೆಗೆ ಸಮನಾದ ಕ್ಷೇತ್ರವಿಲ್ಲ.) ಅವತಾರ ಪುರುಷ, ಭಗವಾನ್ ಶ್ರೀಕೃಷ್ಣ ಜನಿಸಿದ ಪುಣ್ಯಭೂಮಿ ಮಥುರಾ. ಪುರಾಣೇತಿಹಾಸ ದುದ್ದಕ್ಕೂ ಸರ್ವಧರ್ಮಗಳ ನೆಲೆವೀಡಾಗಿರುವ ಈ ನಗರ ಮೋಕ್ಷದಾಯಕ ಸಪ್ತನಗರಗಳಲ್ಲೊಂದೆಂಬ ಪ್ರತೀತಿ ಇದೆ. ಭರತ ಖಂಡದ ಆಸ್ತಿಕ ಸಮುದಾಯಕ್ಕೆ ಪರಮ ಪುಣ್ಯಕ್ಷೇತ್ರ ವೆನಿಸಿರುವ ಮಥುರಾ ನಗರದ ಕಥೆ ಬೇರೆಯಲ್ಲ- ಶ್ರೀಕೃಷ್ಣನ ಕಥೆ ಬೇರೆಯಲ್ಲ.





ಮಥುರಾದ ಶ್ರೀಕೃಷ್ಣ ಜನ್ಮಸ್ಥಾನ (ಕೇಶವ ಮಂದಿರ). ಮಂದಿರದ ಹಿಂಭಾಗದಲ್ಲಿ ಔರಂಗಜೇಬನು ಕಟ್ಟಿಸಿದ ಮಸೀದಿ

ಅಯೋಧ್ಯಾ ಮಥುರಾ ಮಾಯಾ ಕಾಶೀ ಕಾಂಚೀ ಅವಂತಿಕಾ ।
ಪುರೀ ದ್ವಾರಾವತೀ ಚೈವ ಸಪ್ತೈತೇ ಮೋಕ್ಷದಾಯಕಾಃ ॥

ಭಾರತದ ಮೋಕ್ಷದಾಯಕ ಸಪ್ತ ಪವಿತ್ರತೀರ್ಥಕ್ಷೇತ್ರಗಳಲ್ಲಿ ಮಥುರಾ ಕ್ಷೇತ್ರವೂ ಒಂದು, ಉಳಿದ ಕ್ಷೇತ್ರಗಳೆಂದರೆ ಕಾಶೀ, ಕಾಂಚಿಪುರ, ಮಾಯಾಪುರಿ (ಹರಿದ್ವಾರ), ಅಯೋಧ್ಯೆ, ದ್ವಾರಕೆ, ಅವಂತಿ (ಉಜ್ಜಯಿನಿ)

ಅವತಾರ ಪುರುಷ, ಭಗವಾನ್ ಶ್ರೀಕೃಷ್ಣನು ಜನ್ಮತಾಳಿದ ಸ್ಥಳ, ಮಥುರಾ. ಕೃಷ್ಣಲೀಲಾ ಪ್ರಸಂಗಗಳು ನಡೆದ ಸ್ಥಳಗಳು ಮಥುರಾ ನಗರದ ಸುತ್ತಮುತ್ತಲೂ ಹೆಜ್ಜೆಹೆಜ್ಜೆಗೂ ಕಾಣಸಿಗುತ್ತವೆ.





ಮಥುರಾ ಬಜಾರ್‌ನ ಒಂದು ದೃಶ್ಯ



Now ....
Your
galaxy®
PANTIES
are Available
at Your
GALAXY BRA Shops
galaxy
For Comfort & Perfect Fitting
G
Design from France - Top Fashion Country in the World

ರಾಮಾಯಣದಲ್ಲಿ

ದಿಲ್ಲಿಯಿಂದ ಸುಮಾರು ನೂರೈವತ್ತು ಕಿಲೋಮೀಟರ್‌ಗಳಷ್ಟು ದೂರದಲ್ಲಿ ದಿಲ್ಲಿ ಮತ್ತು ಆಗ್ರಾಗಳ ನಡುವೆ ಮಥುರಾ ಇದೆ. ಯಮುನಾ ನದಿಯ ಬಲದಂಡೆಯ ಊರು ಇದು. ಈ ನಗರವನ್ನು ರಾಮನ ಸೋದರ, ಶತ್ರುಘ್ನನು ಸ್ಥಾಪಿಸಿದನೆಂದೇ ಪ್ರತೀತಿ. ಈ ಪ್ರದೇಶಕ್ಕೆ ಮಧುವನವೆಂದೂ ಹೆಸರುಂಟು. ಕಾರಣ, ಮಧು ಎಂಬ ರಾಕ್ಷಸನು ಈ ಪ್ರದೇಶವನ್ನು ಆಳುತ್ತಿದ್ದು ಅವನೂ ಅವನ ಮಗನಾದ ಲವಣನೂ ರಾಮನನ್ನು ಎದುರಿಸಿದಾಗ, ರಾಮನ ಆದೇಶದಂತೆ ಶತ್ರುಘ್ನನು ಮಧು, ಲವಣರ ಮೇಲೆ ಯುದ್ಧಹೂಡಿ ಅವರಿಬ್ಬರನ್ನೂ ಕೊಂದು ಮಥುರಾ ನಗರವನ್ನು ಸ್ಥಾಪಿಸಿದನೆಂದು ರಾಮಾಯಣದಲ್ಲಿ ಉಲ್ಲೇಖಿಸಿದೆ.



ಮಹಾಭಾರತದಲ್ಲಿ




ಇಕ್ಷ್ವಾಕು ವಂಶದ ಕಡೆಯಿಂದ ಮಥುರಾ ಪ್ರದೇಶವು ಯಾದವರ ಆಳ್ವಿಕೆಗೆ ಒಳಪಟ್ಟಿತ್ತು. ಯದುವಂಶದ ಅರಸ, ಉಗ್ರಸೇನ ಮಹಾರಾಜನೇ ಮಥುರಾದ ಅರಸ. ಆತನ ಮಗ ಕಂಸ. (ಕಾಲನೇಮಿ ದೈತ್ಯನೇ ಮನುಷ್ಯರೂಪದಲ್ಲಿ ಕಂಸನಾಗಿ ಜನ್ಮತಾಳಿದ್ದನೆಂದೇ ನಂಬಿಕೆ) ತನ್ನ ತಂದೆಯನ್ನು ಸಿಂಹಾಸನಚ್ಯುತನನ್ನಾಗಿ ಮಾಡಿ, ತನ್ನ ತಂಗಿ, ದೇವಕಿ ಮತ್ತು ತನ್ನ ಭಾವಮೈದುನ ವಸುದೇವರನ್ನು ಕಾರಾಗೃಹದಲ್ಲಿರಿಸಿ ತಾನೇ ಸಿಂಹಾಸನದ ಮೇಲೆ ಕೂತು ಅಟ್ಟಹಾಸದಿಂದ ಮಥುರಾ ಮಂಡಲದ ರಾಜ್ಯಭಾರ ಮಾಡಲು ತೊಡಗಿದ. ವಸುದೇವ ಪುತ್ರರಾದ ಕೃಷ್ಣ ಮತ್ತು ಬಲರಾಮರಿಂದ ಕಂಸವಧೆಯಾದ ನಂತರ, ಪದಚ್ಯುತನಾಗಿದ್ದ ಉಗ್ರಸೇನ ಮತ್ತೆ ಮಥುರಾದ ಅರಸನಾದ. ಕಂಸನ ಮಾವ, ಜರಾಸಂಧ ಮಗಧ ರಾಜ್ಯದ ಅರಸ, ಅವನು ಕಂಸವಧೆಯ ಪ್ರತೀಕಾರಕ್ಕಾಗಿ ಹದಿನೇಳು ಬಾರಿ ಮಥುರಾ ನಗರದ ಮೇಲೆ ಆಕ್ರಮಣ ನಡೆಸಿ, ನಗರವನ್ನು ಹಾಳುಮಾಡಿದ. ತನ್ನ ವಿಜಯದ ಗುರುತಿಗಾಗಿ ಹೊಸಹೊಸ ದೇವಾಲಯಗಳು, ಅರಮನೆಗಳನ್ನು ಕಟ್ಟಿಸಿದ. ಜರಾಸಂಧನನ್ನು ಸೋಲಿಸುವುದು ಕಷ್ಟವೆಂದರಿತ ಕೃಷ್ಣ ಅಲ್ಲಿದ್ದ ಯಾದವರನ್ನೆಲ್ಲಾ ಸೌರಾಷ್ಟ್ರ ಪ್ರಾಂತ್ಯಕ್ಕೆ ಕರೆದೊಯ್ದು ದ್ವಾರಕಾನಗರವನ್ನು ಸ್ಥಾಪಿಸಿ ಅಲ್ಲಿ ರಾಜ್ಯಭಾರ ಮಾಡಿದ. ಜರಾಸಂಧನು ಕಾಲಯವನನ ನೆರವು ಪಡೆದು ಮಥುರಾ ನಗರದ ಮೇಲೆ ಆಕ್ರಮಣ ಮಾಡಿದ. ಕೃಷ್ಣ ಉಪಾಯ ಹೂಡಿ ಕಾಲಯವನನನ್ನೂ ಕೊಂದನೆಂದು ಹೇಳುತ್ತಾರೆ. ಕಾಲಯವನ ಸತ್ತ ಸ್ಥಳವು ಮಥುರಾಕ್ಕೆ ಸ್ವಲ್ಪ ದೂರದಲ್ಲಿದೆ. ಯುದ್ಧದಲ್ಲಿ ಕಾಲಯವನನನ್ನು ಸೋಲಿಸುವುದು ಕಷ್ಟವೆಂದರಿತ ಕೃಷ್ಣನು ಈಗಿನ ಧೋಲಪುರಕ್ಕೆ ಪಶ್ಚಿಮದಲ್ಲಿ ಸುಮಾರು ಐದು ಕಿಲೋಮೀಟರ್‌ಗಳ ದೂರದಲ್ಲಿರುವ ಗುಹೆಯೊಂದರಲ್ಲಿ ಅಡಗಿ ಕೂತ. ಆ ಗುಹೆಯಲ್ಲಿ ಮುಚುಕುಂದ ಮಲಗಿದ್ದ. ಕೃಷ್ಣನನ್ನು ಅಟ್ಟಿಸಿಕೊಂಡು ಬಂದ ಕಾಲಯವನ ಈ ಗುಹೆಯಲ್ಲಿ ಮಲಗಿದ್ದ ಮುಚುಕುಂದನನ್ನು ಕೃಷ್ಣನೆಂದೇ ಭಾವಿಸಿ ಜಗ್ಗತೊಡಗಿದ, ಒದೆಯತೊಡಗಿದ. ಅರ್ಧನಿದ್ದೆಯಿಂದ ಎದ್ದ ಮುಚುಕುಂದನು ಕೋಪಾವಿಷ್ಟನಾಗಿ ಕಾಲಯವನನ ಮೇಲೆ ಆಕ್ರಮಣ ನಡೆಸಿ ಅವನನ್ನು ಕೊಂದುಹಾಕಿದ.

ಪವಿತ್ರ ತೀರ್ಥಕ್ಷೇತ್ರ

ಕೃಷ್ಣನ ಜನ್ಮಸ್ಥಳವಾದ ಕಾರಣದಿಂದಲೇ ಮಥುರಾ ಅತಿ ಪವಿತ್ರ ತೀರ್ಥಕ್ಷೇತ್ರಗಳಲ್ಲಿ ಒಂದೆಂದು ಹೆಸರುವಾಸಿಯಾಗಿದೆ. ವರಾಹ ಪುರಾಣವು ಮಥುರಾ ಮಂಡಲವು ಇಪ್ಪತ್ತು ಯೋಜನೆಗಳಷ್ಟು ವಿಸ್ತಾರವಾಗಿದೆ ಎಂದು ತಿಳಿಸುತ್ತದೆ. ಯಾರಾದರೂ ಯಮುನೆಯಲ್ಲಿ ಸ್ನಾನ ಮಾಡಿದರೆ ಸಾಕು, ಸಕಲ ಪಾಪಗಳಿಂದ ವಿಮೋಚನೆಗೊಳ್ಳುತ್ತಾರೆ. ಬೇರೆ ಕಡೆ ಮಾಡಿದ ಪಾಪವನ್ನು ತೀರ್ಥವೊಂದರಲ್ಲಿ ಮಿಂದಾಗ, ಕಳೆದುಕೊಳ್ಳಬಹುದು. ಅದೇ ತೀರ್ಥಕ್ಷೇತ್ರವೊಂದರಲ್ಲಿ ಮಾಡಿದ ಪಾಪ ಮಾತ್ರ ತೀರ್ಥದಲ್ಲಿ ಮಿಂದರೂ ಬಲವಾಗಿ ಅಂಟಿಕೊಂಡಿರುತ್ತದೆ. ಆದರೆ ಮಥುರಾದಲ್ಲಿ ಮಾತ್ರ ಹಾಗಲ್ಲ. ಮಥುರಾದಲ್ಲಿ ಮಾಡಿದ ಪಾಪವನ್ನು ಅಲ್ಲಿಯೇ ಸ್ನಾನಮಾಡಿದಾಗ ನೀಗಿಸಿಕೊಳ್ಳಲು ಸಾಧ್ಯವಿದೆ. ಅಷ್ಟು ಪವಿತ್ರವಾದ ತೀರ್ಥಕ್ಷೇತ್ರ ಮಥುರಾ ಎಂದು ವರಾಹ ಪುರಾಣ ತಿಳಿಸುತ್ತದೆ.





ಕಂಸವಧೆಯ ನಂತರ ಕೃಷ್ಣ ಬಲರಾಮರು ಯಮುನಾ ನದಿ ದಂಡೆಯ ಮೇಲೆ ವಿಶ್ರಮಿಸಿಕೊಂಡ ಸ್ಥಳ "ವಿಶ್ರಾಂ ಘಾಟ್"



ಗ್ರೀಕರ ಮೇಲೆ ಪ್ರಭಾವ

ಮಹಾಭಾರತದ ಉದ್ದಕ್ಕೂ ಕೃಷ್ಣನು ವಹಿಸಿದ ಪಾತ್ರವನ್ನು ನಾವು ಕಾಣಬಹುದು. ಕೃಷ್ಣನ ನಿರ್ಯಾಣ ನಂತರ ಅರ್ಜುನನು ಕೃಷ್ಣನ ಮೊಮ್ಮಗ, ವಜ್ರನನ್ನು ಮಥುರಾದ ಸಿಂಹಾಸನದಲ್ಲಿ ಕೂಡಿಸುತ್ತಾನೆ. ಕೃಷ್ಣನ ಐತಿಹ್ಯದ ಬಗ್ಗೆ ಯಾರೂ ಪ್ರಶ್ನಿಸುವುದಿಲ್ಲ. ಗೋಕುಲದಲ್ಲಿನ ಗೊಲ್ಲ ಬಾಲಕನೇ ಇವನು-ದ್ವಾರಕಾನಗರವನ್ನು ಸ್ಥಾಪಿಸಿದವನೂ ಇವನು, ಪಾಂಡವ ಮಿತ್ರನೂ ಇವನು. ಭಗವದ್ಗೀತೆಯನ್ನು ವಿಶ್ವಕ್ಕೆ ನೀಡಿದ ಮಹಾಪುರುಷನೂ ಇವನು ಎಂಬ ವಿಷಯದಲ್ಲಿ ಯಾರೂ ಚಕಾರವೆತ್ತುವುದಿಲ್ಲ. ಆದರೆ ಕೃಷ್ಣನು ಅವತಾರ ಪುರುಷ ಎಂಬುದನ್ನು ಕ್ರಿಸ್ತಪೂರ್ವ ಐದನೆಯ ಶತಮಾನದಲ್ಲಿದ್ದ ಪತಂಜಲಿಯ ಮಹಾಭಾಷ್ಯವು ಪ್ರಸ್ತಾಪಿಸುತ್ತದೆ. ಪಾಣಿನಿಯು ವಾಸುದೇವನನ್ನು ಪೂಜಿಸುವ ವಸುದೇವಕರನ್ನು ಕುರಿತು ಪ್ರಸ್ತಾಪಿಸುತ್ತಾನೆ. ಕ್ರಿಸ್ತಪೂರ್ವ ನಾಲ್ಕನೆಯ ಶತಮಾನದಲ್ಲಿದ್ದ ಗ್ರೀಕ್ ರಾಯಭಾರಿ ಮೆಗಾಸ್ತನೀಸನು ಶೂರಸೇನನ ರಾಜ್ಯಕ್ಕೆ (ಶೌರಸೇನ) ಮಥುರಾ ರಾಜಧಾನಿ ಎಂದೇ ಹೇಳುತ್ತಾನೆ. ಅಲ್ಲಿ ವಿಶೇಷವಾಗಿ ವಾಸುದೇವಕೃಷ್ಣನ ಪೂಜೆ ನಡೆಯುತ್ತಿತ್ತು. ಕ್ರಿಸ್ತಪೂರ್ವ ಎರಡನೆಯ ಶತಮಾನದಲ್ಲಿ ಇಂಡೋ ಗ್ರೀಕ್ ಅರಸ, ಆಂಟಿಯಾಸಿಡಾಸ್‌ನ ರಾಯಭಾರಿಯಾಗಿದ್ದ ಹೆಲಿಯೋಡರಸ್‌ನು ವಾಸುದೇವಕೃಷ್ಣನ ಪರಮಭಕ್ತ. ಛಾಂದೋಗ್ಯ ಉಪನಿಷತ್ತಿನಲ್ಲಿ ದೇವಕಿ ಪುತ್ರ ಕೃಷ್ಣನನ್ನು ಒಬ್ಬ ಮುನಿ, ಘೋರ ಆಂಗೀರಸನ ಶಿಷ್ಯ ಎಂದೇ ತಿಳಿಸಲಾಗಿದೆ. ಘೋರ ಆಂಗೀರಸನು ಸೂರ್ಯೋಪಾಸಕನಾಗಿದ್ದು ಸದ್ವರ್ತನೆ, ಸನ್ಮಾರ್ಗಗಳನ್ನು ಉಪದೇಶಿಸಿದವನು, ಋಗ್ವೇದದಲ್ಲಿ ವಿಷ್ಣುವನ್ನು ವಿಷ್ಣುರ್ಗೋಪ ಅದಾಭ್ಯ ; ಅಂದರೆ ವಿಷ್ಣುವೇ ಗೋಪನು ಎಂದು ವಿವರಿಸಲಾಗಿದೆ.

ಜೈನ ಧರ್ಮದಲ್ಲಿ

ಜೈನ ಸಂಪ್ರದಾಯದ ಪ್ರಕಾರ, ವಾಸುದೇವ ಕೃಷ್ಣನು ಇಪ್ಪತ್ನಾಲ್ಕು ತೀರ್ಥಂಕರರಲ್ಲಿ ಇಪ್ಪತ್ಮೂರನೆಯವನಾದ ಹಾಗೂ ಪಾರ್ಶ್ವನಾಥರಿಗಿಂತ ಮೊದಲಿನ ಅರಿಷ್ಟನೇಮಿಯ ಸಮಕಾಲೀನ. ಕ್ರಿಸ್ತಶಕ ಮೊದಲನೆಯ ಶತಮಾನದಲ್ಲಿ ಪ್ರಕಾಶವಾದ ಬೌದ್ಧ ಧಾರ್ಮಿಕ ಕೃತಿಗಳಾದ 'ಮಹಾನಿದ್ದೇಶ' ಹಾಗೂ "ಚೂಲಿಯ ನಿದ್ದೇಶ" ಗಳಲ್ಲಿ ವಾಸುದೇವ ಕೃಷ್ಣ ಹಾಗೂ ಬಲರಾಮರ ಪೂಜೆ ನಡೆಯುತ್ತಿದ್ದುದನ್ನು ಪ್ರಸ್ತಾಪಿಸಿವೆ.

ಬೌದ್ಧ ಧರ್ಮದಲ್ಲಿ

ಬುದ್ಧನ ಖ್ಯಾತಿವೆತ್ತ ಶಿಷ್ಯರ ಪೈಕಿ ಒಬ್ಬನಾದ ಮಹಾಕಚ್ಚಾಯನನು ಮಥುರಾದಲ್ಲಿ ಬೌದ್ಧ ಮತ ಕುರಿತು ಬೋಧಿಸಿದನು. ಬುದ್ಧನು ಈ ನಗರಕ್ಕೆ ಬಂದಿದ್ದಾಗ ಅವನಿಗೆ ಇದೊಂದು ಮಹಿಳಾ ನಗರವೇನೋ ಎಂದು ಕಂಡು ಬಂದಿರಬೇಕು. ಮಥುರಾ ಕೇವಲ ಮಹಿಳೆಯರಿಂದ ತುಂಬಿತ್ತು. ಬೌದ್ಧ ಮತದ "ಮಿಲಿಂದ ಪನ್ಹ"ದಲ್ಲಿ ಮಥುರಾವನ್ನು ಅತಿ ಪ್ರಸಿದ್ಧ ಸ್ಥಳವೆಂದೇ ಉಲ್ಲೇಖಿಸಲಾಗಿದೆ. ಅಶೋಕ ಚಕ್ರವರ್ತಿಯ ಗುರು ಹಾಗೂ ಚಕ್ರವರ್ತಿಯನ್ನು ಬೌದ್ಧ ಮತಾವಲಂಬಿಯಾಗುವಂತೆ ಪ್ರೇರೇಪಿಸಿದ ಉಪಗುಪ್ತನು ಒಬ್ಬ ಸುಗಂಧ ವ್ಯಾಪಾರಿಯ ಮಗ. ಈ ಉಪಗುಪ್ತನು ಮಥುರಾದಲ್ಲಿ ಜನ್ಮ ತಾಳಿದವನು. ಅಲ್ಲದೆ ಅವನು ಕಟ್ಟಿಸಿದ ಭಾರಿ ಬೌದ್ಧ ವಿಹಾರವೊಂದು ಕ್ರಿಸ್ತಶಕ ಏಳನೆಯ ಶತಮಾನದವರೆಗೂ ಉಳಿದಿತ್ತು. ಅವನು ಅಸಂಖ್ಯಾತ ಜನರನ್ನು ಬೌದ್ಧ ಮತಾವಲಂಬಿಗಳನ್ನಾಗಿ ಮಾಡಿದನು. ಅವನ ಶಿಷ್ಯರ ಪೈಕಿ ಹದಿನೆಂಟು ಸಾವಿರ ಶಿಷ್ಯರು ಬೌದ್ಧ ಸನ್ಯಾಸಿಗಳಾದರು. ಮುಂದೆ ಬೌದ್ಧ ಮತಾವಲಂಬಿಯಾದ ಲೋಕ ವಿಖ್ಯಾತ ವಾರಾಂಗನೆ, ವಾಸವದತ್ತೆ ಇದ್ದುದು ಮಥುರಾನಗರಿಯಲ್ಲಿ. ಚೀನಿ ಯಾತ್ರಿಕ ಫಾಹಿಯಾನ್ ಮಥುರಾವನ್ನು "ಮಯೂರ ನಗರಿ" ಎಂದೇ ಕರೆದಿದ್ದಾನೆ. ಅವನು ಭೇಟಿಕೊಟ್ಟ ಸಮಯದಲ್ಲಿ ಬೌದ್ಧ ಮತವು ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಇನ್ನೊಬ್ಬ ಚೀನಿ ಯಾತ್ರಿಕ, ಹ್ಯೂಯೆನತ್ಸಾಂಗನು ಮಥುರಾ ಇನ್ನೂರು ಲೀಗಳಷ್ಟು ವಿಸ್ತೀರ್ಣವಿತ್ತೆಂದು ಬರೆದಿದ್ದಾನೆ. ಅವನು ಭೇಟಿಕೊಟ್ಟಾಗ ಐದು ಭಾರೀ ದೇವಾಲಯಗಳು, ಮೂರು ಸ್ತೂಪಗಳು, ಇಪ್ಪತ್ತು ಬೌದ್ಧ ವಿಹಾರಗಳು ಇದ್ದವೆಂದೂ ಇಲ್ಲಿ ಎರಡು ಸಾವಿರ ಬೌದ್ಧ ಮತಪ್ರಚಾರಕರು ಇದ್ದರೆಂದೂ ಬರೆದಿದ್ದಾನೆ.

ಮಥುರಾ ಕುಶಾನ ಅರಸರ ಕಾಲದಲ್ಲಿ ವಿಖ್ಯಾತ ಜೈನ ಮತ ಕೇಂದ್ರವಾಗಿತ್ತು. ಕ್ರಿಸ್ತಪೂರ್ವಶಕೆಗೆ ಸಂಬಂಧಪಟ್ಟ ಜೈನ ದೇವಾಲಯಗಳ ಅಸಂಖ್ಯಾತ ಅವಶೇಷಗಳು ಇಲ್ಲಿ ಕಾಣಸಿಗುತ್ತವೆ. ಕಂಕಲಿತಿಲಾ ಅಥವಾ ಜೈನಿ ತಿಲಾ ಎಂಬ ಸ್ಥಳದಲ್ಲಿ ಕೃಷ್ಣನು ೨೨ನೆಯ ತೀರ್ಥಂಕರ ಅರಿಷ್ಟನೇಮಿ ಹಾಗೂ ಬಲರಾಮರ ನಡುವೆ ನಿಂತಿರುವ ಶಿಲಾಮೂರ್ತಿಯನ್ನು ಕಾಣಬಹುದು. ಕ್ರಿಸ್ತಶಕೆ ಆರಂಭದ ನಂತರ ಮೊದಲನೆಯ ಶತಮಾನಕ್ಕೆ ಸಂಬಂಧಪಟ್ಟಂತೆ ಚಿಕ್ಕಪುಟ್ಟ ಶಾಸನಗಳು ಮೂರ್ತಿಗಳು, ಈ ಮುಂತಾದವು ಲಭ್ಯವಾಗಿವೆ. ಇವುಗಳಿಂದ ತಿಳಿದುಬರುವ ಒಂದು ಅಂಶವೆಂದರೆ ಜೈನ ಮತ ಪ್ರಚಾರಕರು ಈ ನಗರದಲ್ಲಿ ಭಾರಿ ಸಂಖ್ಯೆಯಲ್ಲಿದ್ದರು ಎಂಬುದು.

ಬೌದ್ಧ ಮತ್ತು ಜೈನ ಮತಗಳು ಪ್ರಬಲಗೊಳ್ಳುವುದಕ್ಕೆ ಪೂರ್ವದಲ್ಲಿ, ಕ್ರಿಸ್ತಪೂರ್ವ ಆರನೆಯ ಶತಮಾನಕ್ಕೂ ಮುಂಚಿತವಾಗಿಯೇ ಭಾಗವತ ಧರ್ಮವು ಮಥುರಾ ಮಂಡಲದಲ್ಲಿ ಪ್ರಚುರವಾಗಿತ್ತು. ಕ್ರಿ. ಶ. ೧೦೧೭ರಲ್ಲಿ ಗಜನಿಯ ಮಹಮದನು ಮಥುರಾ ನಗರವನ್ನು ಪೂರ್ತಿಯಾಗಿ ಸುಟ್ಟು ಹಾಕುವ ವೇಳೆಗಾಗಲೇ ಬೌದ್ಧಮತ ಮತ್ತು ಜೈನಮತಗಳು ತಮ್ಮ ಪ್ರಭಾವವನ್ನು ಸಂಪೂರ್ಣವಾಗಿ ಕಳೆದು ಕೊಂಡಿದ್ದವು.

ಪುರಾಣಗಳಲ್ಲಿ

ವರಾಹ ಪುರಾಣದಲ್ಲಿ ಬಾಲಕೃಷ್ಣನ ನಾನಾ ವಿನೋದ, ಚೇಷ್ಟೆ ಪ್ರಸಂಗಗಳಿಗೆ ಸಂಬಂಧ ಪಟ್ಟ ಹಲವಾರು ಸ್ಥಳಗಳ ಪ್ರಸ್ತಾಪವಿದೆ. ಕ್ರೂರಿ ಕಂಸನನ್ನೂ ಕೊಂದನಂತರ ಕೃಷ್ಣನು ಆಯಾಸ ಪರಿಹಾರ ಮಾಡಿಕೊಂಡಿದ್ದು ಯಮುನಾನದಿ ದಂಡೆಯಲ್ಲಿರುವ ವಿಶ್ರಾಮ ಘಾಟ್. ಕಂಸನನ್ನು ಕೊಂದ ಸ್ಥಳವೇ ಕಂಸಕ ಶಿಲಾ. ಯೋಗ ಘಾಟ್‌ನಲ್ಲಿ ಕಂಸನು ಯಶೋದೆಯ ಎಂಟನೆಯ ಮಗು ವೆಂಬ ಭ್ರಮೆಯಿಂದ ಹೆಣ್ಣು ಮಗುವನ್ನು ಬಂಡೆಗೆ ಬಡಿಯಲು ಹೋದಾಗ ಆ ಮಗುವು ಜಾರಿಕೊಂಡು ಆಕಾಶದತ್ತ ಹಾರಿಹೋಗಿ ಭವಿಷ್ಯ ನುಡಿದದ್ದು. ಆ ಹೆಣ್ಣು ಮಗುವೇ ಯೋಗ ಮಾಯಾ ಅಥವಾ ದುರ್ಗೆ.



ಮಂದಿರ ನಿರ್ಮಾಣ

ಭೂತೇಶ್ವರ ಮಹಾದೇವ ಮಂದಿರವಿರುವ ಸ್ಥಳದಲ್ಲಿಯೇ ಬುದ್ಧನ ವಿಖ್ಯಾತ ಶಿಷ್ಯರಲ್ಲಿ ಒಬ್ಬನಾದ ಸಾರಿಪುತ್ರನ ಸ್ತೂಪವಿರುವುದು. ಅಷ್ಟೇಕೆ, ಕೃಷ್ಣನು ಜನ್ಮತಾಳಿದ ಸ್ಥಳದಲ್ಲಿ (ಕಾರಾಗೃಹವು) ಭವ್ಯವಾದ ಕೇಶವ ದೇವ ಮಂದಿರವಿದೆ. ಆದರೆ ಈ ಮಂದಿರವನ್ನು ಕಟ್ಟುವುದಕ್ಕೆ ಮುಂಚೆ ಅಲ್ಲಿ ಯಶ ವಿಹಾರವೆಂಬ ಬೌದ್ಧ ವಿಹಾರವೊಂದಿತ್ತು. ಬೌದ್ಧ ವಿಹಾರಗಳನ್ನು ಅಥವಾ ಸ್ತೂಪಗಳನ್ನು ಹಿಂದೂಗಳಿಗೆ ಪವಿತ್ರವಾದ ಸ್ಥಳಗಳಲ್ಲಿಯೇ ಕಟ್ಟಿರುವುದು ಸ್ಪಷ್ಟಪಡುತ್ತದೆ. ಬೌದ್ಧ ಮತದ ಅವನತಿಯೊಂದಿಗೆ ಹಿಂದೂ ದೇವಾಲಯಗಳು ಅದೇ ನಿವೇಶನಗಳಲ್ಲಿ ನಿರ್ಮಿತವಾಗಿವೆ.

ಗಜನಿ ಮಹಮ್ಮದನ ಹಾವಳಿ

ಕ್ರಿಸ್ತಶಕ ೧೦೧೭ ರಲ್ಲಿ ಭಾರತದ ಮೇಲೆ ಏಳನೆಯ ಬಾರಿ ದಂಡೆಯಾತ್ರೆ ನಡೆಸಿದ ಗಜನಿಯ ಮಹಮ್ಮದನು ಮಥುರಾ ನಗರವನ್ನು ಧ್ವಂಸಮಾಡಿದನು. ಕೇಶವ ದೇವ ಮಂದಿರವು ಮತಭ್ರಾಂತ ಮಹಮದನ ಕ್ರೂರದೃಷ್ಟಿಗೆ ಬಿದ್ದು ಭಸ್ಮವಾಯಿತು. ಭಸ್ಮ ಮಾಡುವ ಮುನ್ನ ಅವನು ಇಂತಹವು ಸುಂದರ ದೇವಾಲಯಗಳು, ಮಾನವರಿಗಲ್ಲ; ಅಂತಹವು ಇರಕೂಡದು ಎಂದೇ ಅದರ ನಾಶಕ್ಕೆ ಆಜ್ಞೆಮಾಡಿದನು. ಅವನ ಬರ್ಬರ ಸೈನಿಕರು ಇಪ್ಪತ್ತು ದಿನಗಳ ವರೆಗೆ ನಗರದ ಲೂಟಿ ಮಾಡಿದರು. ಒಂದು ನೂರು ಒಂಟೆಗಳ ಮೇಲೆ ಐದು ಭಾರಿ ರತ್ನ ಖಚಿತ ಚಿನ್ನದ ಪ್ರತಿಮೆಗಳನ್ನೂ ಅಪಾರ ಪ್ರಮಾಣದ ಅಮೂಲ್ಯ ಆಭರಣಗಳನ್ನೂ ಬೆಳ್ಳಿ ಪ್ರತಿಮೆಗಳನ್ನೂ ಗಜನಿಗೆ ಸಾಗಿಸಿದ. ಇವುಗಳ ಒಟ್ಟು ಬೆಲೆಯೇ ಮೂವತ್ತು ಲಕ್ಷ ರೂಪಾಯಿಗಳೆಂದು ಅಂದಾಜು ಮಾಡಲಾಗಿದೆ ಇದಲ್ಲದೆ ೫೦೦೦ ಹಿಂದೂಗಳನ್ನು ಸೆರೆಹಿಡಿದು ತನ್ನೊಡನೆ ಗಜನಿಗೆ ಒಯ್ದ. ಅಲ್ಲಿ "ಸುರಲೋಕದ ವಧು" ಎಂಬ ಹೆಸರಿನ ಮಸೀದಿಯನ್ನು ಕಟ್ಟಿಸಿದ. ಈ ದುರಾಕ್ರಮಣದ ನಂತರವೂ ಅದೇ ಸ್ಥಳದಲ್ಲಿ ಇನ್ನೊಂದು ಭವ್ಯ ಸುಂದರವಾದ ಮಂದಿರವೊಂದು ಎದ್ದು ನಿಂತಿತು. ಸಿಕಂದರ್ ಲೋದಿಯು (೧೪೮೮-೧೫೧೭) ಅದನ್ನು ಸಹ ನಾಶಪಡಿಸಿದ. ಅವನು ದೇವಾಲಯಗಳನ್ನು ಛತ್ರಗಳು ಮತ್ತು ವಿದ್ಯಾ ಮಂದಿರ (ಮದರಾಸಾ)ಗಳನ್ನಾಗಿ ಪರಿವರ್ತಿಸಿದ. ಸಿಕಂದರ್ ಲೋದಿಯ ದಾಳಿಯ ನಂತರ ಹೊಸದೊಂದು ಕೇಶವದೇವ ಮಂದಿರವು ರೂಪಗೊಂಡಿತು. ಕ್ರಿಸ್ತಶಕ ೧೬೫೯ರಲ್ಲಿ ಔರಂಗಜೇಬನ ಆಳ್ವಿಕೆಯ ಪ್ರಾರಂಭದ ದಿನಗಳಲ್ಲಿ ಮಥುರಾಕ್ಕೆ ಭೇಟಿಕೊಟ್ಟ ಟ್ಯಾವರ್ ನಿಯರ್ ಎಂಬ ವಿದೇಶೀ ಯಾತ್ರಿಕನು ತಾನು ಕೇಶವ ದೇವ ಮಂದಿರವನ್ನು ನೋಡಿದ್ದಾಗಿ ಬರೆದಿದ್ದಾನೆ. ಅಕ್ಬರ್ ಮತ್ತು ಜಹಂಗೀರರ ಕಾಲದಲ್ಲಿ ಮತಸಹಿಷ್ಣುತೆಯ ಕಾರಣ, ಮಥುರಾ, ಬೃಂದಾವನ ಮತ್ತಿತರ ವ್ರಜ ದೇಶದ ಸ್ಥಳಗಳಲ್ಲಿ ದೇವಾಲಯಗಳು ಅಭಿವೃದ್ಧಿಗೊಂಡವು. ಆದರೆ ಶಹಜಹಾನನ ಕಾಲದಲ್ಲಿ ಮತ್ತೊಮ್ಮೆ ದೇವಾಲಯಗಳಿಗೆ ದುರ್ದೆಶೆ, ನಾಶ. ಸಹಜಹಾನನು ಮಥುರಾದ ಪ್ರಸಿದ್ಧ ಮಂದಿರವನ್ನು ನಾಶಪಡಿಸಿದ್ದಷ್ಟೇ ಅಲ್ಲ, ಅಲ್ಲಿ ಶಿಲಾ ಮೂರ್ತಿಗಳನ್ನು ಆಗ್ರಾದಲ್ಲಿನ ಖುದಾಸಿಯ ಬೇಗಂ ಮಸೀದಿಯ ಮೆಟ್ಟಲುಗಳನ್ನಾಗಿ ಬಳಸಿದ. ಔರಂಗಜೇಬನು ಕೇಶವದೇವ ಮಂದಿರವನ್ನು ನಾಶಪಡಿಸಿದ್ದಷ್ಟೇ ಅಲ್ಲ, ಹಿಂದೂಗಳು ಮತ್ತೆಂದೆಂದಿಗೂ ದೇವಾಲಯ ಕಟ್ಟಲು ಸಾಧ್ಯವಾಗದಂತೆ ಕೃಷ್ಣ ಜನ್ಮಸ್ಥಾನದಲ್ಲಿ ಭಾರಿ ಮಸೀದಿಯೊಂದನ್ನು ಕಟ್ಟಿದ. ಇಷ್ಟೇ ಸಾಲದೆಂಬಂತೆ, ಮಥುರಾನ ನಗರಕ್ಕೆ ಇಸ್ಲಾಂಪುರ ಅಥವಾ ಇಸ್ಲಾಮಾಬಾದ್ ಎಂಬ ಹೆಸರನ್ನಿಟ್ಟ. ಇವನ ನಂತರ ಕ್ರಿಸ್ತಶಕ ಹದಿನೆಂಟನೆಯ ಶತಮಾನದಲ್ಲಿ ಅಬ್ದಾಲಿ ವಂಶದ ಅಹಮದ್ ಷಾ ದುರಾನಿಯೂ ಸೇರಿದಂತೆ ಮೂರುಬಾರಿ ದಿಲ್ಲಿ ಸುಲ್ತಾನರು ಮಥುರಾದ ಮೇಲೆ ದಾಳಿ ನಡೆಸಿದರು. ೧೮೦೩ ರಲ್ಲಿ ಮಥುರಾ ಬ್ರಿಟಿಷರ ಆಳ್ವಿಕೆಗೆ ಬಂದಿತು, ಮಥುರಾ ಆಂಗ್ಲೇಯರ ಬಾಯಲ್ಲಿ ಮಟ್ರಾ (Muttra) ಆಯಿತು. ಎಲ್ಲ ದೇವಾಲಯಗಳೂ ಜೀರ್ಣೋದ್ಧಾರವಾದವು. ಬುಂದೇಲದ ಅರಸ, ಬೀರ್ ಸಿಂಹದೇವನು ಮೂವತ್ತಮೂರು ಲಕ್ಷರೂ.ಗಳ ವೆಚ್ಚದಲ್ಲಿ ಕೇಶವ ದೇವಮಂದಿರವನ್ನು ಕಟ್ಟಿಸಿದ.



ಜೀರ್ಣೋದ್ಧಾರ

ಕಳೆದ ಶತಮಾನದ ಕೊನೆಯ ಭಾಗದಲ್ಲಿ ಕೃಷ್ಣ ಜನ್ಮಸ್ಥಾನವು ಹಿಂದೂಗಳ ವಶಕ್ಕೆ ಬಂದಿತು. ಒಂದು ವಿಶ್ವಸ್ಥ ಮಂಡಲಿಯು ಮಂದಿರದ ಜೀರ್ಣೋದ್ಧಾರ ಕಾರ್ಯವನ್ನು ಕೈಗೊಂಡಿತು. ದೇಶದ ಖ್ಯಾತ ವ್ಯಾಪಾರಿ ಕುಟುಂಬಗಳು ಆಸಕ್ತಿ ವಹಿಸಿ ಎಲ್ಲ ಹಿಂದೂ ದೇವಾಲಯಗಳ ಜೀರ್ಣೋದ್ಧಾರ ಕಾರ್ಯವನ್ನು ವಹಿಸಿಕೊಂಡವು. ಎಲ್ಲರ ಪರಿಶ್ರಮದ ಫಲವಾಗಿ ಅತಿಭವ್ಯ ಸುಂದರವಾದ ಕೇಶದ ದೇವ ಮಂದಿರವು ಎದ್ದು ನಿಂತಿದೆ. ಕೃಷ್ಣನ ಜನ್ಮಸ್ಥಾನವು ಕಾರಾಗೃಹವಾದ್ದರಿಂದ ಆ ಸ್ಥಳವನ್ನು ಕಾರಾಗೃಹದ ಕೋಣೆಯೆಂದಂತೆ ಸಜ್ಜುಗೊಳ್ಳಿಸಿದ್ದಾರೆ. ಬಾಗಿಲುಗಳು, ಕಿಟಕಿ ಸರಳುಗಳು ಎಲ್ಲವೂ ಕಾರಾಗೃಹದ ಕೋಣೆಗಳಂತೆಯೇ ಇವೆ. ಕೃಷ್ಣನು ಜನ್ಮ ತಾಳಿದ ಎಂದು ಹೇಳುವ ಜಾಗದಲ್ಲಿ ಒಂದು ವೇದಿಕೆಯನ್ನು ನಿರ್ಮಿಸಿ ಬಾಳಕೃಷ್ಣನ ಭಾವ ಚಿತ್ರವನ್ನಿಟ್ಟಿದ್ದಾರೆ. ಕೃಷ್ಣ ಮಂದಿರಕ್ಕೆ ಅಂಟಿಕೊಂಡಂತೆಯೇ ಕೆಂಪು ಬಿಳಿ ಬಣ್ಣದ ಬೃಹದಾಕಾರದ ಮಸೀದಿ ಇದೆ. ಇಷ್ಟು ವರ್ಷಗಳ ವರೆಗೂ ಪಾಳು ಬಿದ್ದಿದ್ದ ಮಸೀದಿಯು ಈಗ ಚಟುವಟಿಕೆಯಿಂದ ಕೂಡಿದೆ. ಅಲ್ಲಿಗೆ ನಮಾಜಿಗೆ ಬರುವವರೂ ಹೆಚ್ಚುತ್ತಿದ್ದಾರೆ. ಅದಕ್ಕೆಲ್ಲ ಕಾರಣಗಳ ಉಲ್ಲೇಖದ ಅಗತ್ಯವಿಲ್ಲ.

ಮಥುರಾದಲ್ಲಿರುವ ಅತಿ ದೊಡ್ಡ ದೇವಾಲಯವೆಂದರೆ ದ್ವಾರಕಾಧೀಶ ಮಂದಿರ. ವಲ್ಲಭ ಸಂಪ್ರದಾಯದಂತೆ ಅಲ್ಲಿ ಪೂಜೆ ಪುನಸ್ಕಾರಗಳು ನಡೆಯುತ್ತವೆ.

ಪರಿಕ್ರಮಗಳು–ಘಟ್ಟಗಳು

ಮಥುರಾದಲ್ಲಿ ಐದು ಕ್ರೋಶಗಳ ಪರಿಕ್ರಮ ನಡೆಯುವ ಪದ್ಧತಿ ಇದೆ. ವಿಶ್ರಾಮ ಘಾಟ್‌ದಿಂದ ಪ್ರಾರಂಭವಾಗುತ್ತದೆ ಈ ಪರಿಕ್ರಮ. ಕಾರ್ತಿಕ ಶುದ್ಧ ದ್ವಿತೀಯಾ ತಿಥಿ ಅಥವಾ ಯದು ದ್ವಿತೀಯಾ ತಿಥಿಯಂದು ಯಮುನಾ ನದಿ ಸ್ನಾನವು ಅತಿ ಪುಣ್ಯಪ್ರದವೆಂದೇ ನಂಬಿಕೆ. ಆ ದಿನದಂದು ಯಮಧರ್ಮರಾಯನು ತನ್ನ ಸೋದರಿ ಯಮುನೆಯು ತನ್ನ ಮನೆಯಲ್ಲಿ ನಡೆಸಿದ ಆದರಾತಿಥ್ಯದಿಂದ ಸಂತೃಪ್ತಗೊಂಡು, ಕಾರ್ತಿಕ ಶುದ್ಧ ದ್ವಿತೀಯಾ ತಿಥಿಯಂದು ಯಾರು ಯಮುನಾ ನದಿಯಲ್ಲಿ ಮಿಂಯುವರೋ ಅಂತವರು ಯಮಲೋಕಕ್ಕೆ ಹೋಗುವ ಅಗತ್ಯವಿಲ್ಲವೆಂದು ಸಾರಿದನು.

ವೈಶಾಖ ಪೂರ್ಣಿಮಾದಂದು ವನವಿಹಾರ ಯಾತ್ರೆ ಪ್ರಾರಂಭವಾಗುತ್ತದೆ. ಅದು ಸಹ ವಿಶ್ರಾಮ ಘಾಟ್‌ದಿಂದ ಹೊರಡುತ್ತದೆ. ಶ್ರಾವಣ ಶುಕ್ಲ ಪಂಚಮಿಯಂದು ಪಂಚತೀರ್ಥ ಮೇಳ ಐದು ದಿನಗಳವರೆಗೆನಡೆಯುತ್ತದೆ. ಭಕ್ತರು ಮಥುರಾದಿಂದ ಬೃಂದಾವನಕ್ಕೆ ಯಾತ್ರೆ ಹೊರಡುತ್ತಾರೆ. ವರ್ಷಪೂರ್ತಿ ಇಂತಹ ಮೇಳಗಳು ನಡೆಯುತ್ತಲೇ ಇರುತ್ತವೆ.

ಮಥುರಾದ ಘಾಟ್‌ಗಳಲ್ಲಿ ಧ್ರುವ ಘಾಟ್ ಸಹ ಒಂದು. ಉತ್ತಾನಪಾದರಾಯನ ಮಗ ಧ್ರುವನು ತಂದೆ ಮತ್ತು ಮಲತಾಯಿಗಳಿಂದ ಅವಮಾನಿತನಾದ ನಂತರ, ಮಧುವನಕ್ಕೆ ತೆರಳಿ ನಾರದನ ಉಪದೇಶದಂತೆ, ಅಲ್ಲಿ ಉಗ್ರ ತಪಸ್ಸು ಮಾಡಿ ವಿಷ್ಣುವಿನ ಕೃಪಾಕಟಾಕ್ಷಕ್ಕೆ ಪಾತ್ರನಾದ ಸ್ಥಳವೇ ಇದು ಎಂದು ಹೇಳುತ್ತಾರೆ.

ಮಥುರಾದಲ್ಲಿ ಒಂದುದಿನ ಕಳೆದರೂ ಸಾಕು, ಅದು ಕಾಶಿಯಲ್ಲಿ ಕಳೆದ ಒಂದು ಜೀವಿತ ಸಮಯಕ್ಕಿಂತ ಹೆಚ್ಚು ಶ್ರೇಷ್ಠವಾದುದು ಎಂದೇ ನಂಬಿಕೆ.

ರಮಣೀಯ ಸ್ಥಳಗಳು

ಇನ್ನು ಮಥುರಾದ ಸುತ್ತಮುತ್ತಲೂ ಇರುವ ಕೆಲವು ಮುಖ್ಯವಾದ ರಮಣೀಯ ಸ್ಥಳಗಳು ಇಂತಿವೆ.

ಕೃಷ್ಣನು ತನ್ನ ಸಾಹಸಗಳಷ್ಟನ್ನೂ ಗೋಕುಲದಲ್ಲಿ ಪ್ರಕಾಶಪಡಿಸದೆ ಮಧುವನದಲ್ಲಿಯೂ ತೋರಿಸಿದ್ದಾನೆ. ಬಕಾಸುರ ಸಂಹಾರವಾದ ಸ್ಥಳವೇ ಬಚ್ಚಬನ. ಕಾಲಿದಾಹ್ ಎಂಬಲ್ಲಿ ಕೃಷ್ಣನು ಕಾಲಿಯ ಮರ್ದನ ಮಾಡಿದ್ದು. ಇದು ಮಥುರಾದಿಂದ ಹನ್ನೊಂದು ಕಿಲೊಮಿಟರ್‌ಗಳಷ್ಟು ದೂರದಲ್ಲಿರುವ ಬೃಂದಾವನದಲ್ಲಿದೆ. ಅಲ್ಲಿಯೇ ಚೀರ್‌ಘಾಟ್ (ಚೀರಹರಣ್‌ಘಾಟ್) ಇರುವದು. ಇಲ್ಲಿ ಕೃಷ್ಣನು ಯಮುನಾನದಿ ಸ್ನಾನ ಮಾಡುತ್ತಿದ್ದ ಗೋಪಿಕಾ ಸ್ತ್ರೀಯರ ವಸ್ತ್ರಗಳನ್ನು ಅಪಹರಿಸಿ ಕದರುವೃಕ್ಷದಲ್ಲಿ ಅಡಗಿಸಿ ಅವರನ್ನೆಲ್ಲಾ ಗೋಳಾಡಿಸುತ್ತಿದ್ದ ಸ್ಥಳ.

ಮಥುರಾಕ್ಕೆ ಸುಮಾರು ನಲವತ್ತು ಕಿಲೋಮಿಟರ್‌ಗಳಷ್ಟು ದೂರದಲ್ಲಿ ಗೋವರ್ಧನಗಿರಿ. ಇಂದ್ರನ ಕೋಪಕ್ಕೆ ತುತ್ತಾಗಿ ಸಿಡಿಲು ಮಿಂಚು ಸಹಿತವಾದ ಭಾರಿ ಮಳೆ, ಪ್ರವಾಹಗಳಿಂದ ತತ್ತರಿಸುತ್ತಿದ್ದ ಹಳ್ಳಿಜನರನ್ನು ಕೃಷ್ಣನು ರಕ್ಷಿಸಿದ ಸ್ಥಳ. ಕೃಷ್ಣನು ತನ್ನ ಕಿರುಬೆರಳಿನ ಮೇಲೆ ಗೋವರ್ಧನಗಿರಿಯನ್ನೆತ್ತಿ ಪಶುಪಕ್ಷಿಗಳಿಗೂ ಜನರಿಗೂ ಆಶ್ರಯ ನೀಡಿದ ಸ್ಥಳ. ಅಲ್ಲಿಯೇ ಮಾನಸಗಂಗಾ ಕ್ಷೇತ್ರವೂ ಇರುವುದು.

ರಾಧಾಕುಂಡ ಅಥವಾ ಬರ್ಸಾನ ಕೃಷ್ಣನ ಪ್ರಿಯತಮೆ ರಾಧೆ ಜನಿಸಿದ ಸ್ಥಳ. ಬೆಟ್ಟದ ನೆತ್ತಿಯಮೇಲೆ ಕಟ್ಟಿರುವ ರಾಧಾಮಂದಿರವು ಸುಂದರವಾಗಿದೆ.



ರಾಧೆ, ರಾಧೆ, ರಾಂ, ರಾಂ !

ಮಥುರಾ ಪ್ರದೇಶದಲ್ಲೆಲ್ಲಾ ಜನರು ಒಬ್ಬರನ್ನೊಬ್ಬರು, 'ರಾಧೆ, ರಾಧೆ,' ಎಂದೇ ಸ್ವಾಗತಿಸುತ್ತಾರೆ. 'ರಾಂ, ರಾಂ, ಎಂದು ಎಂದಿಗೂ ಹೇಳುವುದಿಲ್ಲ. 'ರಾಧೆ, ರಾಧೆ,' ಸ್ವಾಗತದ ನುಡಿಗಳಾದರೆ, ಉತ್ತರ ಭಾರತದಲ್ಲಿ 'ರಾಂ, ರಾಂ,' ಎಂಬುದು ಮನುಷ್ಯ ಸತ್ತ ಎಂದೇ ಅರ್ಥ ಎನ್ನುತ್ತಾರೆ ಮಥುರಾವಾಸಿಗಳು.

ರಂಗಸ್ಥಾನ್ ಮಹಾದೇವ ಎಂಬಲ್ಲಿ ಕಂಸನು ಕೃಷ್ಣ, ಬಲರಾಮರನ್ನು ಕೊಲ್ಲುವುದಕ್ಕಾಗಿ ಕಳಿಸಿದ ಕುವಲಯ ಪೀಡ ಎಂಬ ಆನೆಯನ್ನು ಬಾಲಕರಿಬ್ಬರೂ ಕೊಂದು ಹಾಕಿದ್ದು ಹಾಗು ಮುಷ್ಟಿಕ, ಚಾಣೂರರೆಂಬ ಮಲ್ಲರನ್ನು ಯಮಸದನಕ್ಕೆ ಅಟ್ಟಿದ್ದು.. ಕಂಸನನ್ನು ಕೊಂದ ನಂತರ ಅವನ ದೇಹವನ್ನು ಯಮುನಾ ನದಿ ದಂಡೆಯ ವರೆಗೂ ಎಳೆದು ತಂದು ವಿಶ್ರಾಂತಿ ಪಡೆದ ಸ್ಥಳವೇ ವಿಶ್ರಾಮ ಘಾಟ್.






ವನ, ಉಪವನಗಳು

ಮಥುರಾ ಮಂಡು ಅಥವಾ ಪ್ರದೇಶದಲ್ಲಿ ಪ್ರಸಿದ್ಧವಾದ ಹನ್ನೆರಡು ವನಗಳು ಇವೆ. ಮಧುವನ, ಕಾಲವನ, ತುಂಬರವನ, ಬಾಹುಲವನ, ಕಾಮವನ, ಕಾದಿರವನ, ವೃಂದಾವನ, ಭಂಡಿರವನ, ಬೇಲವನ ಲೋಹವನ, ಮಹಾವನ. ಇವಲ್ಲದೆ ೨೪ ಉಪವನಗಳಿವೆ. ಇವುಗಳಲ್ಲಿ ಕೆಲವು ಮುಖ್ಯವಾದವು–ಗೋಕುಲ, ಗೋವರ್ಧನ, ಬರ್ಸಾನ, ಸಂದಗಾಂವ, ಆರಿಂಗ, ಬಚ್ಚವನ, ಕೋಕಿಲವನ, ದರಿಗಾಂ ಮತ್ತು ಕೋಟವನ, ಬಾಹುಲವನದ ಬಗ್ಗೆ ಒಂದು ಸ್ವಾರಸ್ಯಕರವಾದ ಕತೆ ಇದೆ. ಇದು ನಮಗೆಲ್ಲ ಸುಪರಿಚಿತವಾದ ಗೋವಿನ ಕತೆಯನ್ನು ನೆನಪಿಗೆ ತರುತ್ತದೆ. ಬಾಹುಲವನದಲ್ಲಿ ಒಮ್ಮೆ ಬಾಹುಲ ಎಂಬ ಗೋವನ್ನು ಹುಲಿಯೊಂದು ಹಿಡಿಯಿತು. ಗೋವು ಹುಲಿಯ ಮುಂದೆ ಕಣ್ಣೀರಿಟ್ಟು ತನ್ನ ಕರುವಿಗೆ ಹಾಲುಣಿಸಿ ಬರುವದಾಗಿ ಬೇಡಿಕೊಂಡಿತು. ಹುಲಿಯು ಸಮ್ಮತಿಸಿದನಂತರ, ಗೋವು ತನ್ನ ಮರಿಯತ್ತ ಓಡೋಡಿ ಹಾಲುಣಿಸಿ ಮರಿಯನ್ನು ಕರೆದುಕೊಂಡು ಹುಲಿಯ ಬಳಿಗೆ ಬಂದಿತು. ಆದರೆ ಹುಲಿಯು ಕಣ್ಮರೆಯಾಗಿತ್ತು. ಅದರ ಸ್ಥಾನದಲ್ಲಿ ಕೃಷ್ಣ ಪ್ರತ್ಯಕ್ಷ. ದೇವರು ನಡೆಸಿದ ಸತ್ಯ ಪರೀಕ್ಷೆಯಲ್ಲಿ ಗೋವು ಗೆದ್ದಿತು.

ಮಥುರಾಕ್ಕೆ ಸಮೀಪದಲ್ಲಿ ಬೃಂದಾವನ ಇರುವದೆಂದು ಈ ಮುಂಚೆಯೇ ತಿಳಿಸಲಾಗಿದೆಯಷ್ಟೆ. ಮಥುರಾ ವೃಂದಾವನಗಳು ವೈಷ್ಣವ ಸುಧಾರಕರ ಕಾರ್ಯಕೇಂದ್ರವಾಗಿದ್ದು ೧೫ ನೇ ಶತಮಾನದಲ್ಲಿ.





ರಾಧೇಶ್ಯಾಮ

ಕೃಷ್ಣ ಜನ್ಮತಾಳಿದ್ದು ಮಥುರಾ ನಗರಿಯಲ್ಲಾದಾಗ್ಯೂ ಬೆಳೆದಿದ್ದು ಗೋಕುಲ ಮತ್ತು ಬೃಂದಾವನಗಳಲ್ಲಿಯೇ. ಗೋಕುಲದಲ್ಲಿ ಹುಟ್ಟಿದ ಮಕ್ಕಳಿಗೆಲ್ಲಾ ಅಪಾಯ ಇದೆ ಎಂಬ ನಂಬಿಕೆಯ ಮೇಲೆ ನಂದಗೋಪ ಇತರ ಗೋಪರೊಂದಿಗೆ ಗೋಕುಲದಿಂದ ಬೃಂದಾವನಕ್ಕೆ ವಲಸೆ ಬಂದನು. ಭಾಗವತದ ದಶಮಸ್ಕಂದದಲ್ಲಿ ಈ ಅಂಶವನ್ನು ತಿಳಿಸಲಾಗಿದೆ. ಬೃಂದಾವನದಲ್ಲಿನ ರಾಧಾಕೃಷ್ಣರ ಲೀಲಾ ವಿನೋದಗಳು ಅನೇಕ ಸಾಹಿತ್ಯಕೃತಿಗಳಲ್ಲಿ ರಂಜಿತವಾಗಿವೆ. ಜಯದೇವ ಕವಿಯು ತನ್ನ ಅಮರ ಕೃತಿ "ಗೀತಗೋವಿಂದ" ಪ್ರಾರಂಭದಲ್ಲಿಯೇ "ರಾಧಾ ಮಾಧವ ಯೋನಜಯಂತಿ ಯಮುನಾ ಕುಲೆ ರಹಕೇಲಯ" ಎಂದೇ ಬರೆದಿದ್ದಾನೆ.

ವೃಷಭಾನುವು ಯಜ್ಞ ನಡೆಸುವದಕ್ಕಾಗಿ ಸ್ಥಳಶುದ್ಧಿ ಮಾಡುತ್ತಿದ್ದಾಗ, ರಾಧೆ ಆವನಿಗೆ ಲಭ್ಯವಾದಳು ಎಂದು ಪದ್ಮ ಪುರಾಣವು ತಿಳಿಸುತ್ತದೆ. ಬ್ರಹ್ಮ ವೈವರ್ತದ ಪ್ರಕಾರ,ರಾಧಾ ಗೋಲೋಕದ ನಿವಾಸಿ. ಅವಳು ಶ್ರೀದಮ ಎಂಬುವನಿಗೆ ಶಂಖಚೂಡನೆಂಬ ಹೆಸರಿನ ರಾಕ್ಷಸನಾಗಿ ಜನಿಸುವಂತೆ ಶಾಪವಿತ್ತಾಗ, ಅವನು "ನೀನು ಮನುಷ್ಯ ಜಾತಿಯಲ್ಲಿ ಹುಟ್ಟು" ಎಂದು ರಾಧೆಗೆ ಮರುಶಾಪವಿತ್ತ. ರಾಧೆ ವೃಷಭಾನು ಮತ್ತು ಕಲಾವತಿಯರ ಮಗಳಾಗಿ ಭಾದ್ರಪದ ಶುಕ್ಲ ಅಷ್ಟಮಿ, ಭಾನುವಾರ ದಿವಸದಂದು ಹುಟ್ಟಿದಳೆಂದು ಪುರಾಣಗಳು ತಿಳಿಸುತ್ತವೆ. ಕೆಲವು ಪುರಾಣಗಳ ಪ್ರಕಾರ ಅವಳು ಕೃಷ್ಣನ ಉಪಪತ್ನಿ. ಆದಿ ಪುರಾಣ ಪ್ರಕಾರ, ಅವಳು ವೈಶಾಖ ಶುದ್ಧ ತದಿಗೆ ರೋಹಿಣಿ ನಕ್ಷತ್ರವಿದ್ದ ಸಮಯದಲ್ಲಿ ಕೃಷ್ಣನನ್ನು ವಿವಾಹವಾದಳು. ಕೃಷ್ಣನ ಅಚ್ಚುಮೆಚ್ಚಿನ ಮಡದಿ. ಅವಳನ್ನು ವೃಂದಾವನಿ, ವೃಂದಾ ಮತ್ತು ವೃಂದಾವನ ವಿನೋದಿನಿ ಎಂದು ಕರೆಯುವುದೂ ಉಂಟು. ವಿಷ್ಣುವಿನ ಶಕ್ತಿಯಲ್ಲಿ ಒಬ್ಬಳೆಂದೂ ಸಂಪತ್ತಿಗೆ ಅಧಿದೇವತೆಯೆಂದೂ ಪರಿಗಣಿಸುತ್ತಾರೆ. ವಿಷ್ಣುವು ಕೃಷ್ಣನ ರೂಪವನ್ನೂ ಲಕ್ಷ್ಮಿಯು ರಾಧೆಯ ರೂಪವನ್ನೂ ತಾಳಿದ್ದರೆಂದೇ ಭಕ್ತವೃಂದದ ನಂಬಿಕೆ.



ಸಹಸ್ರ ದೇವಾಲಯಗಳ ಊರು, ಬೃಂದಾವನ

ಬೃಂದಾವನದಲ್ಲಿ ಮಂದಿರಗಳಿಗೆ ಲೆಕ್ಕವೇ ಇಲ್ಲ. ಸರ್ಪಾಕೃತಿಯ ಕಿರಿಬೀದಿಗಳಲ್ಲಿ, ಗಲ್ಲಿಗಳಲ್ಲಿ ಸಹ ಮಂದಿರಗಳು. ಸಾವಿರಕ್ಕೂ ಹೆಚ್ಚು ಮಂದಿರಗಳಿವೆ. ಯಮುನಾನದಿ ದಂಡೆಯುದ್ದಕ್ಕೂ ಮೂವತ್ತೆರಡು ಘಟ್ಟಗಳಿವೆ. ಯಾತ್ರಿಕರು ಮಥುರಾದ ಕೇಶಿಘಾಟ್‌ನಲ್ಲಿ ದೋಣಿಗಳಲ್ಲಿ ಕೂತು ಯಮುನಾ ನದಿದಾಟಿ ಬೃಂದಾವನಕ್ಕೆ ಬರುವರು. ಅಲ್ಲಿಂದ ಅವರು ವ್ರಜಭೂಮಿಯಲ್ಲಿರುವ ಕೃಷ್ಣಲೀಲಾ ಪ್ರಸಂಗಗಳಿಗೆ ಸಂಬಂಧಿಸಿದ ಎಲ್ಲ ಸ್ಥಳಗಳಿಗೂ ಯಾತ್ರೆ ಹೊರಡುವರು. ಈ ಯಾತ್ರೆಯನ್ನು ಕೆಲವೊಮ್ಮೆ ಪರಿಕ್ರಮವೆಂದೂ ಕರೆಯುತ್ತಾರೆ. ಪರಿಕ್ರಮ ಹೋಗುವ ಹಾದಿಯನ್ನು ಅಲ್ಲಲ್ಲಿ ಪ್ರದಾಳಿಸಿರುವ ಮಾರ್ಗದರ್ಶಕ ಬೋರ್ಡ್‌ಗಳಿಂದ ತಿಳಿದುಕೊಳ್ಳಬಹುದು.

ತುಳಸೀವನ ನಿಬಿಡ ಬೃಂದಾವನದಲ್ಲಿ ಹಲವಾರು ಪ್ರಾಚೀನವಾದ ವೈಭವದ ಮಂದಿರಗಳಿವೆ. ಕ್ರಿಸ್ತಶಕ ಹದಿನಾರನೆಯ ಶತಮಾನದ ಮಂದಿರಗಳು ಕೆಲವು ಇವೆ. ಕಳೆದ ಐದುನೂರು ವರ್ಷಗಳಲ್ಲಿ ಉತ್ತರ ಭಾರತದಲ್ಲಿ ನಿರ್ಮಿತವಾದ ಬೃಹದಾಕಾರದ ದೇವಾಲಯಗಳಲ್ಲಿ ಅನೇಕ ಬೃಂದಾವನದಲ್ಲಿಯೇ ಇವೆ. ಇಲ್ಲಿರುವ ಅತಿ ಮುಖ್ಯ ದೇವಾಲಯಗಳೆಂದರೆ ಗೋವಿಂದ ದೇವಜಿ, ರಾಧಾವಲ್ಲಭ, ಗೋಪಿನಾಥ, ಜುಗುಳ ಕಿಶೋರಮತ್ತು ಮದನಮೋಹನ.

ಬೃಂದಾವನದಲ್ಲಿರುವ ಮತ್ತೆ ಕೆಲವು ದೇವಾಲಯಗಳಲ್ಲಿ ದಕ್ಷಿಣ ಭಾರತದ ವಾಸ್ತುಶಿಲ್ಪ ಶೈಲಿಯಲ್ಲಿ ನಿರ್ಮಿಸಿರುವ ಶ್ರೀರಂಗಜೀ ಮಂದಿರ ಅಥವಾ ರಂಗಮನ್ನಾರ್ ಮಂದಿರ, ಲಾಲ್‌ಬಾಬು, ಗ್ವಾಲಿಯರ್ ಮಹಾರಾಜ್ ಮತ್ತು ಶಾಹ ಬಿಹಾರಿಲಾಲ್ ಕಟ್ಟಿಸಿರುವ ಮಂದಿರಗಳು ದರ್ಶನೀಯವಾದವು.

ಗೋವಿಂದ ದೇವಜಿ ಮಂದಿರವನ್ನು ಕೆಂಪು ಮರಳು ಶಿಲೆಯಿಂದ ನಿರ್ಮಿಸಿದ್ದಾರೆ. ಅತಿ ಸುಂದರವಾದ ಮಂದಿರವಿದು. ರೂಪ ಮತ್ತು ಸನಾತನ ಗೋಸ್ವಾಮಿಗಳ ಆದೇಶದಂತೆ ಕ್ರಿ. ಶ. ೧೫೯೦ ರಲ್ಲಿ ಈ ಮಂದಿರವು ನಿರ್ಮಿತವಾಯಿತು. ಈ ಮಂದಿರದಲ್ಲಿ ಗೋವಿಂದದೇವಜಿಯ ಮೂರ್ತಿಯ ಪ್ರತಿಷ್ಠಾಪನೆಯಾಗಬೇಕಾಗಿತ್ತು. ಆದರೆ ಔರಂಗಜೇಬನವಕ್ರದೃಷ್ಟಿ ಬಿದ್ದಿದ್ದರಿಂದ, ಮೂರ್ತಿಯನ್ನು ಜಯಪುರಕ್ಕೆ ಸಾಗಿಸಲಾಯಿತು. ಈ ಮಂದಿರದ ಗೋಪುರದ ಮೇಲಿನ ಮೂರು ಅಂತಸ್ತುಗಳನ್ನು ಅವನು ಕೆಡವಿಸಿದನು. ಗೋಪುರದ ಮೇಲ್ಭಾಗದಲ್ಲಿ ಉರಿಯುತ್ತಿದ್ದ ಬೃಹದಾಕಾರದ ತೈಲದೀಪ ಜ್ಯೋತಿಯು ಅವನ ಕಣ್ಣುಗಳನ್ನು ಕುಕ್ಕುತ್ತಿದ್ದವಂತೆ. ಅದನ್ನು ಸಹಿಸಲಾರದೆ ಗೋಪುರದ ಮೇಲೆ ಅವನ ವಕ್ರದೃಷ್ಟಿ ಬಿತ್ತಂತೆ. ಔರಂಗಜೇಬನು ಬೃಂದಾವನಕ್ಕೆ ಮುಮಿನಾಬಾದ್ ಎಂದು ಹೆಸರಿಟ್ಟಿದ್ದ. ಅದು ಅವನೊಂದಿಗೆ ಹೋಯಿತು.

ಬೃಂದಾವನದಲ್ಲಿ ದಕ್ಷಿಣದ ದೇವಾಲಯ

ಆಚಾರ್ಯಕ್ರಮದಲ್ಲಿ ಒಬ್ಬರಾದ ಶ್ರೀ ರಾಮಾನುಜಾಚಾರ್ಯ ಸಂಪ್ರದಾಯದ ಪ್ರಕಾರ ಸೇಠ ಗೋವಿಂದದಾಸ್ ಮತ್ತು ರಾಧಾಕೃಷ್ಣರು ಶ್ರೀ ರಂಗಮನ್ನಾರ್ ದೇವಾಲಯವನ್ನು ೧೮೪೫-೧೮೫೧ ರ ಅವಧಿಯಲ್ಲಿ ೪೫ ಲಕ್ಷ ರೂಪಾಯಿಗಳಷ್ಟು ಹಣ ವೆಚ್ಚಮಾಡಿ ಕಟ್ಟಿದ್ದಾರೆ. ಇದು ಅತಿ ವಿಶಾಲವಾಗಿದ್ದು (೭೭೫ ಅಡಿ ಉದ್ದ ಮತ್ತು ೪೪೦



ದಕ್ಷಿಣ ಭಾರತೀಯ ಶೈಲಿಯಲ್ಲಿ ನಿರ್ಮಿತವಾಗಿರುವ ಶ್ರೀರಂಗ ಮನ್ನಾರ್ ದೇವಾಲಯ.

ಅಡಿ ಅಗಲ) ದೇವಾಲಯವನ್ನು ಪ್ರವೇಶಿಸಿದಾಗ, ದಕ್ಷಿಣ ಭಾರತದಲ್ಲಿನ ಯಾವದೋ ದೇವಾಲಯ ಪ್ರದೇಶದಲ್ಲಿದ್ದ ಅನುಭವವಾಗುತ್ತದೆ. ಇಲ್ಲಿನ ಪೂಜಾರಿವರ್ಗದವರೆಲ್ಲ ತಮಿಳರು. ಈ ದೇವಾಲಯದ ನಿರ್ಮಾಣಕ್ಕೆ ಸ್ಫೂರ್ತಿಎಂದರೆ ಮಹಾನ್ ಸಂಸ್ಕೃತ ವಿದ್ವಾಂಸರಾಗಿದ್ದ ಸ್ವಾಮಿ ರಂಗಾಚಾರ್ಯರು. ಅವರು ಸುಮಾರು ನೂರಾಹದಿಮೂರು ವರ್ಷಗಳ ಹಿಂದೆ ಬೃಂದಾವನದಲ್ಲಿಯೇ ನಿಧನರಾದರೆಂದು ದೇವಾಲಯದ ವ್ಯವಸ್ಥಾಪಕರು ತಿಳಿಸುತ್ತಾರೆ. ಗೋಪುರಗಳು, ಅರವತ್ತು ಅಡಿ ಎತ್ತರದ ಚಿನ್ನದ ಧ್ವಜಸ್ತಂಭ ಇವೆಲ್ಲವೂ ದಕ್ಷಿಣದ ಶೈಲಿಯಲ್ಲಿಯೇ ಇವೆ. ಈ ದೇವಾಲಯಕ್ಕೆ ಮೂವತ್ತೂರು ಹಳ್ಳಿಗಳ ಉಂಬಳಿ ಇದೆ.


ಬೃಂದಾವನದಲ್ಲಿ ಅನೇಕ ದರ್ಶನೀಯ ಸ್ಥಳಗಳಿವೆ. ಕೃಷ್ಣನ ಬಾಲಲೀಲಾ ಪ್ರಸಂಗಗಳಿಗೆ ಸಂಬಂಧಪಟ್ಟ ಕುಂಜಗಾಲಿ, ಮೇನಗಾಲಿ, ದಾನಗಾಲಿ ಮುಖ್ಯವಾದವು. ಕಾಲಿಯ ಮರ್ದನವಾದದ್ದೂ ಇಲ್ಲಿಯೇ. ನಿಕುಂಜವನವೆಂಬುದು ಒಂದು ಉದ್ಯಾನ. ಕೃಷ್ಣನು ತನ್ನ ಭಕ್ತಾದಿಗಳಿಗೆ ದರ್ಶನ ಕೊಡುತ್ತಿದ್ದ ಸ್ಥಳವೆಂದೇ ಪ್ರತೀತಿ. ಇದು ಬೃಂದಾವನದಲ್ಲಿ "ಇಸ್ಕಾನ್" ಹಾಸ್ಟೆಲ್‌ಗೆ ಸಮೀಪದಲ್ಲಿದೆ. ಬೃಂದಾವನದಲ್ಲಿ ಅನೇಕ ವಿದೇಶಿಯರು ನೆಲಸಿದ್ದಾರೆ, ಇವರೆಲ್ಲರೂ ಕೃಷ್ಣನ ಭಕ್ತರು. ಸದಾ ರಾಧೆ, ಕೃಷ್ಣ ಎಂದು ಹೇಳುತ್ತಿರುತ್ತಾರೆ.




ಬೃಂದಾವನದಲ್ಲಿರುವ ಗೋವಿಂದದೇವಜಿ ಮಂದಿರ




HURRY !!
Spencer's BREAD
COMES TO YOUR CITY
Spencer's BREAD
GOLDEN CRUST
100 years ago, Spencer's were the first to Bake the Bread in india. Spencer's experience Excells other breads in
* Texture
* Taste
* Quality: Enriched with Vitamins, Minelals & Proteins
* Hygienic Packing
GOLDEN CRUST
Spencer's BREAD
PRICED REASONABLY
Manufactured in Hubli by
SPECIALITY FOODS
45-B TARIHALA INDUSTRIAL AREA,
HUBLI-580 030 PHONE: 68284
The intelligent choice for you & your family.



ಗೋವರ್ಧನದಲ್ಲಿರುವ ಗಿರಿರಾಜ ಮಂದಿರ. ಮಾನಸೀ ಗಂಗಾ ಸರೋವರದ ಪಾರ್ಶ್ವನೋಟ.



ಯಮುನಾ ಘಾಟ್‌ನಲ್ಲಿನ ಒಂದು ಘಟನೆಯನ್ನಿಲ್ಲಿ ಪ್ರಸ್ತಾಪಿಸಲಾಗಿದೆ. ಈ ಲೇಖಕರು ನದಿದಂಡೆಯಲ್ಲಿ ನಿಂತಿದ್ದಾಗ, ನದಿಯಲ್ಲಿ ಮಿಂದು ಹೊರಬಂದು ಒಣಗಿದ ಬಟ್ಟೆಗಳನ್ನು ಹಾಕಿಕೊಳ್ಳುತ್ತಿದ್ದ ಅಮೇರಿಕನ್ ಕೃಷ್ಣ ಭಕ್ತನು, **"Friend, have a dip in this holy river. All your paps (sins) will wash away"** (ಮಿತ್ರ, ಈ ಪವಿತ್ರ ನದಿಯಲ್ಲಿ ಒಮ್ಮೆ ಮುಳುಗು ಹಾಕು. ಎಲ್ಲ ಪಾಪಗಳೂ ತೊಳೆದುಹೋಗುತ್ತವೆ) ಎಂದು ಹೇಳಿದ. ಅಲ್ಲಿದ್ದ ನೂರಾರು ಭಿಕ್ಷುಕರಿಗೆ ತನ್ನಲ್ಲಿದ್ದ ಚಿಲ್ಲರೆ ಪೈಸೆಗಳನ್ನೂ (ಕೆಲವರು ದೇವರ ಭಯ ಹುಟ್ಟಿಸಿ ನೋಟುಗಳನ್ನೂ ಕಿತ್ತರು) ಸಂತೋಷದಿಂದ ಕೊಟ್ಟ.

ವೈಷ್ಣವ ಸಿದ್ಧಾಂತದ ಪ್ರಭಾವ

ಬೃಂದಾವನದಲ್ಲಿ ರಾಮಾನುಜಾಚಾರ್ಯ ಸಂಪ್ರದಾಯದ ಜತೆಗೇ ಅತಿ ಪ್ರಬಲವೂ ಅತಿ ವರ್ಚಸ್ವಿಯೂ ಆದ ಸಂಪ್ರದಾಯಗಳೆಂದರೆ ನಿಂಬಾರ್ಕ ವೈಷ್ಣವರು, ರಾಧಾವಲ್ಲಭಿಗಳು, ವಿಷ್ಣುಸ್ವಾಮಿಗಳು (ಪುಷ್ಟಿ ಮಾರ್ಗಾನುಯಾಯಿಗಳು).

ಬೃಂದಾವನದಲ್ಲಿರುವ ಗೋಸ್ವಾಮಿಗಳ ಮೂಲದ ಬಗ್ಗೆ ಒಂದು ಕಥೆ ಇದೆ. ಕರ್ನಾಟಕದ ಕರಾವಳಿಯ ಉಡಿಪಿಯಿಂದ ಬೃಂದಾವನಕ್ಕೆ ಬಂದ ಧಾರ್ಮಿಕ ಗುರು ರೂಪ ಗೋಸ್ವಾಮಿ ಇವರು ಹುಸೇನ್ ಶಾಹನ ಮಂತ್ರಿಯಾಗಿದವರು. ಇವರೂ ಇವರ ಸೋದರರಾದ ಸನಾತನ ಮತ್ತು ವಲ್ಲಭ, ಸೋದರಳಿಯ ಜೀವ ವೈಷ್ಣವ ಮತ ಪ್ರಚಾರದಲ್ಲಿ ನಿರತರಾಗಿದ್ದವರು. ಚೈತನ್ಯ ಮಹಾಪ್ರಭುವಿನ ಪರಮ ಶಿಷ್ಯರು, ರೂಪ, ಸನಾತನ, ಜೀವ, ರಾಧಾನಾಥದಾಸ, ಗೋಪಾಲ ಭಟ್ಟ ಮತ್ತು ರಘುನಾಥ ಭಟ್ಟರು "ಮಥುರಾ ಮಹಾತ್ಮೆ" ಎಂಬ ಕೃತಿಯನ್ನು ರಚಿಸಿದ್ದು ಅದು ವರಾಹ ಪುರಾಣದ ಒಂದು ಭಾಗವಾಗಿದೆ. ಈ ಮೂಲ ಗೋಸ್ವಾಮಿಗಳು ಕ್ರಿಸ್ತಶಕ ೧೫೦೦ ರಿಂದ ೧೬೦೦ರ ಅವಧಿಯಲಿ ಧರ್ಮಪ್ರಚಾರ ನಡೆಸುತ್ತಿದ್ದವರು.

ವಲ್ಲಭಾಚಾರ್ಯರು ಗೋಕುಲ ಗೋಸ್ವಾಮಿ ಸಂಪ್ರದಾಯವನ್ನು ಪ್ರಾರಂಭಿಸಿದರು. ಅವರು ಆಂಧ್ರ ಪ್ರದೇಶದ ತೆಲಂಗಾಣಕ್ಕೆ ಸೇರಿದ ಲಕ್ಷ್ಮಣ ಭಟ್ಟರ ಎರಡನೆಯ ಮಗ. ಇವರು ವಿಷ್ಣುಸ್ವಾಮಿ ಸಂಪ್ರದಾಯಕ್ಕೆ ಸೇರಿದವರು. ಇವರೇ ಪುಷ್ಟಿ ಮಾರ್ಗವನ್ನೂ ಪ್ರಾರಂಭಿಸಿದರು. ಪುಷ್ಟಿ ಮಾರ್ಗವನ್ನು ಶುದ್ಧ ದ್ವೈತ ಮತವೆಂದೂ ಕರೆಯಬಹುದು. ಈ ಸಂಪ್ರದಾಯದ ಪ್ರಕಾರ ಬಾಲ ಕೃಷ್ಣನಿಗೆ ಪೂಜೆ. ಈ ಸಂಪ್ರದಾಯವು ಬಹುಮಟ್ಟಿಗೆ ಗುಜರಾತ್ ಮತ್ತು ರಾಜಸ್ಥಾನಗಳಲ್ಲಿ ಪ್ರಚಾರದಲ್ಲಿದೆ. ಕೃಷ್ಣ ಮತ್ತು ಗೋಪಿಯರ ಸಂಬಂಧವೆಂತಹದು ಎಂಬುದನ್ನು ವಲ್ಲಭಾಚಾರ್ಯರು ರಚಿಸಿರುವ "ಮಧುರಾಷ್ಟಕಂ" ನಲ್ಲಿ ಕಾಣಬಹುದು.

ಅಧರಂ ಮಧುರಂ ವದನಂ ಮಧುರಂ
ನಯನಂ ಮಧುರಂ ಹಸಿತಂ ಮಧುರಂ ।
ಹೃದಯಂ ಮಧುರಂ ಗಮನಂ ಮಧುರಂ
ಮಧುರಾಧಿಪತೇರಖಿಲಂ ಮಧುರಂ ॥

ಕೃಷ್ಣನ ವೇಣುಗಾನಕ್ಕೆ ಮಾರುಹೋಗದವರೇ ವಿರಳ ("ವೇಣು ರ್ಮಧುರೋ ರೇಣುರ್ಮಧುರಃ). ಕೇವಲ ಗೋಪ ಗೋಪಿಯರಷ್ಟೇ ಅಲ್ಲ, ಪಶುಪಕ್ಷಿಗಳು ಸಹ ವೇಣುಗಾನ ಸುಧೆಯನ್ನು ಸವಿದವು. ಕಾಳಿದಾಸನು ತನ್ನ ರಘುವಂಶದಲ್ಲಿ ಬೃಂದಾವನವನ್ನು ಕುಬೇರನ ಚೈತ್ರರಥ ಉದ್ಯಾನವನಕೆ. ಸಮಾನವೆಂದು ಬಣ್ಣಿಸಿದ್ದಾನೆ.

ಶ್ರೀ ವಿಲ್ವಮಂಗಲಾಚಾರ್ಯರು ತಮ್ಮ "ಗೋವಿಂದ ದಾಮೋದರ ಸ್ತೋತ್ರ"ದಲ್ಲಿ ಹಾಲು ಮೊಸರು ಮಾರಲು ಹೊರಟಿದ್ದ ಮಥುರೆಯ ಗೋಪಿಯರು "ಗೋವಿಂದ ಮೇಕೆ. ಗೋವಿಂದ" ಎಂದೇ ಬೀದಿಯಲ್ಲಿ ಕೂಗಿದರೆಂದು ವರ್ಣಿಸಿದ್ದಾರೆ.



ಚೈತನ್ಯರ ಮೇಲೆ ವ್ಯಾಸರಾಯ ಸ್ವಾಮಿಗಳ ಪ್ರಭಾವ

ನಮ್ಮ ವ್ಯಾಸರಾಜತೀರ್ಥರ ಪ್ರಭಾವವನ್ನು ಬೃಂದಾವನದಲ್ಲಿ ಕಾಣಬಹುದು. ಅವರು ತಮ್ಮ ಸಮಕಾಲೀನರಾದ ಚೈತನ್ಯ ಮಹಾಪ್ರಭುಗಳ ಮೇಲೆ ಅತೀವ ಪ್ರಭಾವ ಬೀರಿದ್ದರು. ಅಷ್ಟೇ ಅಲ್ಲ, ಉಳಿದ ಧಾರ್ಮಿಕ ಮುಂದಾಳುಗಳ ಮೇಲೂ ತಮ್ಮ ವರ್ಚಸ್ಸನ್ನು ಬೀರಿದ್ದರು. ಮಾಧ್ವ ಸಂಪ್ರದಾಯದಲ್ಲಿ ರಾಧೆ ರಹಿತ ಕೃಷ್ಣನ ಪೂಜೆ ನಡೆಯುತ್ತದೆ. ಚೈತನ್ಯ ಬಹುಮಟ್ಟಿಗೆ ಆಚಾರ್ಯ ಮಧ್ವರ ತತ್ವಬೋಧೆಗಳಿಂದ ಪ್ರಭಾವಿತರಾಗಿ ದ್ವೈತ, ಸ್ಫೂರ್ತಿ ಪಡೆದಿದ್ದಾರೆ. ಅವರು ಮಧ್ವರ ಭಕ್ತಿ ಮಾರ್ಗವನ್ನು ಪ್ರಚುರಗೊಳಿಸಿದ್ದಾರೆ. ಆದರೆ ಚೈತನ್ಯರು ರಾಧಾ ಪೂಜೆಗೆ ಹೆಚ್ಚು ಪ್ರಾಶಸ್ತ್ಯ ವಿತ್ತಿದ್ದಾರೆ.

ವಲ್ಲಭಾಚಾರ್ಯರ ನಾಲ್ವರು ಶಿಷ್ಯರು ಮತ್ತು ವಲ್ಲಭರ ಪುತ್ರ ವಿಠ್ಠಲನ ನಾಲ್ವರು ಶಿಷ್ಯರು ಹೀಗೆ ಒಟ್ಟು ಎಂಟು ಶಿಷ್ಯರು ಸೇರಿ ಅಷ್ಟಛಾಪ ಎಂಬ ಧಾರ್ಮಿಕ ಕಾವ್ಯ ರಚಿಸಿದ್ದಾರೆ. ಇವರೆಲ್ಲರೂ ಮಥುರಾ, ಬೃಂದಾವನಗಳ ಸಮೀಪದಲ್ಲಿಯೇ ವಾಸವಾಗಿದ್ದರು.

ರೂಪ, ಸನಾತನ ಮುಂತಾದ ಆರು ಮೂಲಗೋಸ್ವಾಮಿಗಳೇ ಲೋಕ ಪ್ರಸಿದ್ಧ ರಾಸಲೀಲಾ ಉತ್ಸವವನ್ನೂ ವ್ರಜಯಾತ್ರೆಯನ್ನೂ ಪ್ರಾರಂಭಿಸಿದರು. ಮಥುರಾ, ಬೃಂದಾವನಗಳಲ್ಲಿನ ಕೃಷ್ಣ ಪ್ರಧಾನ ಪವಿತ್ರ ಸ್ಥಳಗಳಿಗೆ ಯಾತ್ರೆ ಕೈಗೊಳ್ಳುವ ಪದ್ಧತಿಯನ್ನು ಬೆಳೆಸಿದರು. ಅವರ "ಮಥುರಾ ಮಂಡಲ"ದಲ್ಲಿ ಮಥುರಾ ಮಂಡಲವು ೨೦ ಯೋಜನೆಗಳಷ್ಟು ವಿಸ್ತಾರ ವಿದೆಯೆಂದೂ ಈ ಸ್ಥಳದಲ್ಲಿ ಸ್ನಾನ ಮಾಡಿದರೆ ಸಕಲ ಪಾಪಗಳಿಂದ ವಿಮೋಚನೆಯಾಗುವುದೆಂದೂ ತಿಳಿಸಲಾಗಿದೆ.

ವಿಂಶತಿ ಯೋಜನಾನಾಂಚ ಮಾಥುರಂ ಮಂಡಲಂ ಸ್ಮೃತಂ ।
ಯತ್ರಕುತ್ರನರಃ ಸ್ನಾತ್ವಾ ಮುಚ್ಯತೇ ಸರ್ವಪಾತಕೈಃ ॥

೧೫೮೫ ರಲ್ಲಿ ರಾಧಾವಲ್ಲಭ ಪಂಥ ಸ್ಥಾಪನೆಯಾಯಿತು. ಇದೊಂದು ಶಕ್ತಿ ಪಂಥ. ಇದು ಬಹುಮಟ್ಟಿಗೆ ಮಧ್ವಾಚಾರ್ಯ ಮತ್ತು ನಿಂಬಾರ್ಕ ತತ್ವಬೋಧೆಗಳಿಂದ ಪ್ರಭಾವಿತವಾಗಿದೆ. ೧೬ನೆಯ ಶತಮಾನದಲ್ಲಿದ್ದ ಹರಿದಾಸಸ್ವಾಮಿಯವರು ಹರಿದಾಸ ಪಂಥವನ್ನು ಪ್ರಾರಂಭಿಸಿದರು. ಅವರ ದೇವಾಲಯವೂ ಬೃಂದಾವನದಲ್ಲಿದೆ. ಅನೇಕ ವೈಷ್ಣವರು ತಮ್ಮ ಶೇಷಾಯುಷ್ಯವನ್ನು ಕಳೆಯಲು ಬೃಂದಾವನಕ್ಕೆ ಬರುತ್ತಾರೆ.



ಗೋವರ್ಧನ ಗಿರಿಯನ್ನು ಎತ್ತಿಹಿಡಿದಿರುವ ಶ್ರೀಕೃಷ್ಣನ ಭಿತ್ತಿಚಿತ್ರ





ನಂದಗಾಂವ್‌ನ ದೇವಾಲಯ
ಕೃಷ್ಣ, ಬಲರಾಮರು, ನಂದಗೋಪ ಯಶೋದೆಯರೊಂದಿಗೆ ಇರುವ ಮೂರ್ತಿಗಳು ಈ ದೇವಾಲಯದಲ್ಲಿವೆ.


ಮಥುರಾದಲ್ಲಿ ಕೃಷ್ಣ ಜನ್ಮಸ್ಥಾನದಲ್ಲಿರುವ ಕೇಶವ ದೇವ ಮಂದಿರಕ್ಕೆ ಹೊಂದಿಕೊಂಡಂತೆ ಶ್ರೀ ಕೃಷ್ಣ ಜನ್ಮಸ್ಥಾನ ಅಂತಾರಾಷ್ಟ್ರೀಯ ವಿಶ್ರಾಮ ಗೃಹ ಅತ್ಯುತ್ತಮವಾದ ಸ್ಥಳ. ಅಲ್ಲಿ ತಂಗಿದ್ದು ಅಲ್ಲಿಂದ ನಗರದಲ್ಲಿರುವ ನಾನಾ ದರ್ಶನೀಯ ಸ್ಥಳಗಳಿಗೆ ಹೋಗಿಬರಬಹುದು. ಎಲ್ಲ ತೀರ್ಥಕ್ಷೇತ್ರಗಳಂತೆಯೇ ಇಲ್ಲಿ ಸಹ ಚೌಬೆಗಳೆಂಬ ಪಂಡಾಗಳ ಹಾವಳಿ ಇರುತ್ತದೆ. ನಮ್ಮ ಕಡೆಯ ಯಾತ್ರಿಕರು ಸ್ವಲ್ಪ ಎಚ್ಚರ ವಹಿಸಿದರೆ, ಈ ಹಾವಳಿಯನ್ನು ತಪ್ಪಿಸಿ ಕೊಳ್ಳಬಹುದು. ಬರ್ಸಾನ, ಬೃಂದಾವನ ಮತ್ತಿತರ ಸ್ಥಳಗಳಿಗೆ ಬಸ್ ಸೌಕರ್ಯ ಇದೆ. ಎಲ್ಲ ಕಡೆಗಳಲ್ಲಿಯೂ ಧರ್ಮ ಶಾಲೆಗಳಿದ್ದು ತೊಂದರೆಯಾಗದು. ಬೃಂದಾವನದಲ್ಲಿ ಈ ಮಥುರಾ ಪ್ರಾಂತ್ಯದಲ್ಲಿರುವ ಗೋ ಸಂಪತ್ತನ್ನು ಗಮನಿಸಿದಲ್ಲಿ, ಕೃಷ್ಣ ಅವತಾರತಾಳಿದ್ದ ಸಮಯದಲ್ಲಿ ಇಲ್ಲಿ ಹಾಲು ಮೊಸರು, ಬೆಣ್ಣೆ ಸಮೃದ್ಧವಾಗಿದ್ದವೆಂದು ಪುರಾಣಗಳಲ್ಲಿ ಪ್ರಸ್ತಾಪಿಸಿದ್ದರೆ ಅದು ಉತ್ಪ್ರೇಕ್ಷೆಯೇನಲ್ಲ.

"ಮಥುರಾ ಮಾಹಾತ್ಮ್ಯ" ಅಥವಾ "ಮಥುರಾ ಮಂಡಲಂ"ನಲ್ಲಿ ಒಂದು ಶ್ಲೋಕವಿದೆ– "ನ ಕೇಶವ ಸಮೋದೇವೋ ನ ಮಾಥುರ ಸಮೋದ್ವಿಜಃ" ಅಂದರೆ ಕೇಶವನಿಗೆ ಸಮನಾದ ದೇವನಿಲ್ಲ. ಮಥುರೆಗೆ ಸಮನಾದ ಕ್ಷೇತ್ರವಿಲ್ಲ. ★


"Around the world, you and me... and our V.I.P.!"
V.I.P. It's part of the lifestyle of travellers the world over - an unmistakable symbol of international class.
V.I.P. Built tough to take the rigours of travel. In a fascinating panorama of designs, sizes, colours, each with the distinct stamp of
V.I.P. style. Now with new international features - a soft grip handle, autolock security chain, recessed wheels. For that special feel of luxury only a V.I.P. can give you.
Rediscover the romance of travel. Get a V.I.P. - and get away! The world is waiting for you ...
V.I.P. LUGGAGE
Spells international class... anywhere
GANESH ADS
Authorised Dealers :
RAJENDRA STORES
2428, Marathagalli:
HUBLI
REXINE HOUSE
7/8, Victoria Bldg.
Koppikar Road HUBLI.
ROHIT AGENCIES
Anand Bhavan Bldg.
Station Road, HUBLI.
Phone: 64604, 66027 Resi: 63610

ಪಂಡಿತ ಪ್ರಾಧ್ಯಾಪಕನ ಫೈಲುಗಳು

ಒಂದರ್ಧ ಶತಮಾನ ಸಂಗ್ರಹಿಸಿದೆನು ನಾನು
ಆಂಗ್ಲ ಸಾಹಿತ್ಯ – ಭಾಷಾ ನೋಟ್ಸ್. ಸಹಸ್ರಾರು
ಪುಸ್ತಕಗಳ ತಿರುಳು ಹಸ್ತಗತವಾಯ್ತಿಂತು
ಚಾಸರ್, ಲ್ಯಾಂಗ್‌ಲಂಡ್, ಶೇಕ್ಸ್‌ಪಿಯರ್ ಮಿಲ್ಟನ್,
ಆದಿಯುಗ, ಮಧ್ಯಯುಗ, ಇಂದಿನ ಕಬ್ಬದ ಯುಗ,
ಕಾವ್ಯ, ಭಾಷಾಶಾಸ್ತ್ರ, ಸಾಹಿತ್ಯ ಪ್ರಕಾರಗಳು ;
ಪಂಡಿತ ನಾನಾದೆ, ಮಾದರಿ ಪ್ರಾಧ್ಯಾಪಕನು,
ವಿಮರ್ಶೆಯ ಕಡಲನ್ನೆ ಕಾಗದದೊಡಲೊಳಗಿಳಿದೆ.
ಪಜ್ಞಪ್ರವಾಹಗಳು ಹರಿದವೀ ಕಡಲೊಳಗೆ
ದಿನಂಪ್ರತಿ ಫೂಲ್‌ಸ್ಕೇಪ್ ಕಾಗದಗಳ ಗಡ್ಡೆ
ವಿದ್ಯುದ್ ವಾರಿಧಿಯೊಳಗೆ ಆಯ್ತೊಂದು ನಡುಗಡ್ಡೆ
ಪದನವಾಯಿತು ಬುದ್ಧಿ ಶಸ್ತ್ರಕ್ರಿಯಾಶಸ್ತ್ರದೊಲು
ರಿಟೈರ್ ಆಗಿ ಕುಳಿತಿರಲು ನಡುಗಡ್ಡೆಯಾಯಿತು ವ್ಯರ್ಥ
ದೋಣಿಯೊಂದು ತಪ್ಪಿ ಹಾಯ್ದಿಲ್ಲವಾ ಕಡೆಗೆ !
ದೀಪವಿಲ್ಲದ ದ್ವೀಪ ! ಇವಕೆ ಬೆಂಕಿಯು ಹಚ್ಚಿ
ತೋರಿಸುವದು ಜಗಕೆಂದೆ ಪಾಂಡಿತ್ಯಕೆ ಜಗವು
ಇತ್ತಿರುವ ಬೆಲೆಯನ್ನು ! ಕವಡೆ ಕಿಮ್ಮತ್ತಿಲ್ಲ !
ಚುರುಕು ಬಂದಿರಬಹುದು ನನ್ನ ಬುದ್ಧಿಗೆ. ಆದರೆ !
ನನ್ನ ಅಂತಃಕರಣದೊಳಗೆ ಬಿಟ್ಟಿದೆ ಬಿರುಕು.
ಇಡಿ ಇದ್ದರೂನು ಬಿಡಿಬಿಡಿ ಆದುದಿದರ ಫಲ !
ನನ್ನ ಅಂತಃಕರಣದೊಳಗೆ ಬಿಟ್ಟಿದೆ ಬಿರುಕು.
ಎಂದು ಬಿರುಕಿನ ಮೇಲೆ ಊದಿದೆನು ಬೆಂಕಿಯ ಸರುಕು.
"Travel Light!" ಎಂದೊರೆಯೆ ಮನಃಪ್ರಾಂತದ
ರೈಲುಗಳು,



ಉರಿದಿಹವು ಫೈಲುಗಳು !
ಬುದ್ಧಿಪ್ರಧಾನವಿಹ ವ್ಯಾಪಾರದೊಳು ಸಿಲುಕಿ
ದಗ್ಧನಾದೆನು, ಮುಗ್ಧನಾದೆನು ನನ್ನ ಬಾಳಿನೊಳು,
ಪುನರ್‌ವ್ಯವಸ್ಥೆಗೊಳಿಸುವೆನಂತರಂಗವನು,
ಮೂರ ದೀವಿಗೆ ಕೊಡುತೊಂದು ಬೆಳಕನು ಕರೆದು,
ಭಾವದ ಕಂಪನುಸಿರುವದು ಎಲೆಮನೆಯ ನಂದಾದೀಪ.
ಪ್ರೌಢಿಮೆಯು ಬೀರುವದು ಹರ್ಮ್ಯದ ರತ್ನದೀವಿಗೆಯು.
ಅಂತರ್‌ಗುಹೆಯ ನಕ್ಷತ್ರ ಮಿನುಮಿನುಮಿನು ಮಿನುಗುವದು.

ವಿನಾಯಕ

ಶ್ರೀಕೃಷ್ಣ (ತತ್ವ) ವಸ್ತು ವಿಕಾಸ

ಪಂ. ಜಯತೀರ್ಥಾಚಾರ್ಯ ವಾ. ಮಳಗಿ



ಸಾವಿರಾರು ವರ್ಷದಿಂದ ಭಾರತೀಯರ ಜನಜೀವನವನ್ನು ವ್ಯಾಪಿಸಿದ ವಸ್ತುತತ್ವವೇ ಶ್ರೀ ಕೃಷ್ಣ. ಭಾಗವತ ಶ್ರೀ ಕೃಷ್ಣನನ್ನು ವಸ್ತು ಎಂದೇ ಸಂಬೋಧಿಸುವದು. ಶ್ರೀಕೃಷ್ಣ ಮಾನವ ಜೀವನದ ಶಾಶ್ವತ ಮೌಲ್ಯಗಳನ್ನು ನಿರ್ಮಿಸಿದ. ಸಮಾಜ ಜೀವನದ ಸಂವಿಧಾನ ನಿರೂಪಿಸಿದ. ರಾಜಕಾರಣಕ್ಕೊಂದು ದಾರಿ ತೋರಿದ. ವಸ್ತುನಿಷ್ಠ ತತ್ವ ತಿಳಿಸಿದ. ಧರ್ಮ ಸಾಮ್ರಾಜ್ಯ ನಿರ್ಮಾಪಕನಾದ. ಬೌದ್ಧಿಕ. ವ್ಯಾವಹಾರಿಕ, ಧಾರ್ಮಿಕ ಸಾಹಿತ್ಯಕ, ರಾಜಕೀಯ ಹೀಗೆ ಎಲ್ಲ ಕ್ಷೇತ್ರಗಳಲ್ಲಿಯೂ ಪೂರ್ಣಾವತಾರಿ ಎನಿಸಿಕೊಂಡ. ಇತಿಹಾಸದ ಪುಟಗಳನ್ನು ಮೀರಿನಿಂತು, ಕಾಲಪ್ರವಾಹದಲ್ಲಿ ಎಲ್ಲ ಕ್ಷೇತ್ರಗಳಲ್ಲಿಯೂ ಅಚ್ಚಳಿಯದೇ ಉಳಿದ ವ್ಯಕ್ತಿತ್ವ ಅವನದು.

ವೇದಗಳ ಕಾಲ ಕ್ರಿಸ್ತಪೂರ್ವದ ಸುಮಾರು ೨೫೦೦ ವರ್ಷವೆಂದು ಗುರುತಿಸಿರುವರು. ಭಾರತೀಯರು ಹಾಗೂ ವಿದೇಶೀಯರು ಕ್ರಿಸ್ತಪೂರ್ವದ ೨೫೦೦ ವರ್ಷಗಳ ಹಿಂದೆ ಋಗ್ವೇದ ಸಂಗ್ರಹಿತವಾಯಿತೆಂಬುದನ್ನು ಸರ್ವಸಮ್ಮತವಾಗಿ ಒಪ್ಪುವರು. ಹಲವರು ಇದಕ್ಕೂ ಬಹುಪೂರ್ವವೆನ್ನುವರು. ಆದರೆ ಇದಕ್ಕೂ ಕಡಿಮೆ ಎಂದು ಮಾತ್ರ ಯಾವ ಸಂಶೋಧಕರೂ ನುಡಿದಿಲ್ಲ. ಇಂತಹ ವೇದಗಳಲ್ಲಿಯೇ ನಾವು ವಿಷ್ಣುವಿನ (ಕೃಷ್ಣನ) ಉಪಾಸನೆಯ ವಿಧಾನ ಕಾಣುತ್ತೇವೆ. ಋಗ್ವೇದದಲ್ಲಿ ವಿಷ್ಣು ಹಾಗೂ ಕೃಷ್ಣ ಶಬ್ದವನ್ನು ನೂರಾರು ಸಲ ಕಾಣುತ್ತೇವೆ. ಅಂದರೆ ಇಂದಿಗೆ ಐದು ಸಾವಿರ ವರ್ಷಗಳ ಹಿಂದೆಯೇ ಶ್ರೀಕೃಷ್ಣನು ಆಧ್ಯಾತ್ಮಿಕ ಕ್ಷೇತ್ರದಲ್ಲಿ ಉಪಾಸ್ಯದೈವವಾಗಿದ್ದನು.

"ತನ್ನ ಮೂರು ಪಾದಗಳಿಂದ ವಿಶ್ವವನ್ನೇ ವ್ಯಾಪಿಸಿದವ, ಜಗತ್ತನ್ನು ನಿರ್ಮಿಸಿದವ, ಜಗವನ್ನು ಎತ್ತಿಹಿಡಿದವ" ನೆಂದು ವಿಷ್ಣುವನ್ನು ವೇದ ವರ್ಣಿಸುವದು. "ಕೃಷ್ಣಾಯ ದೇವಕೀಮತ್ರಾಯ ಉಕ್ತ್ವಾ ವಾಚಾ" ಎಂದು ಛಾಂದೋಗ್ಯ ಉಪನಿಷತ್ತು, "ಅಗ್ನಿರ್ವೈ ದೇವಾನಾಂ ಅವಮಃ ವಿಷ್ಣುಃ ಪರಮಃ" ಎಲ್ಲ ದೇವತೆಗಳಲ್ಲಿ ವಿಷ್ಣುವೇ ಶ್ರೇಷ್ಠವೆಂದು ಐತರೇಯ ಬ್ರಾಹ್ಮಣವು, ವಿಷ್ಣುವೇ ದೇವಕೀ ಪುತ್ರ ಶ್ರೀ ಕೃಷ್ಣನೆಂದು ಕೌಷೀತಕೀ ಬ್ರಾಹ್ಮಣವು ಸ್ಪಷ್ಟವಾಗಿ ಹೇಳುತ್ತಿವೆ. ವೇದ, ಉಪನಿಷತ್ತು ಬ್ರಾಹ್ಮಣಗಳಲ್ಲಿಯೇ ಶ್ರೀಕೃಷ್ಣನ ಸ್ಪಷ್ಟವಾದ ಉಲ್ಲೇಖವನ್ನು ನಾವು ಕಾಣಬಹುದು.

ಅಂದಿನಿಂದ ಬೆಳೆದು ಬಂದ ಶ್ರೀಕೃಷ್ಣನ ತತ್ವ ಹಾಗೂ ವ್ಯಕ್ತಿತ್ವ, ಮಹತ್ವಗಳಿಗೆ ಮೂರ್ತರೂಪನೀಡಿ ವಿವರವಾದ ಚರಿತ್ರೆ ನಿರೂಪಿಸಿದ ಇತಿಹಾಸ ಗ್ರಂಥ ಮಹಾಭಾರತ. ಮಹಾಭಾರತವೆಂದರೆ ಅದು ಕೃಷ್ಣ ಕಥೆ ಎಂದೇ ಕುಮಾರವ್ಯಾಸ ನುಡಿದ. ಮಹಾಭಾರತದಲ್ಲಿ ಶ್ರೀಕೃಷ್ಣನ ತರುಣ ಜೀವನದಿಂದ ಮುಂದಿನ ಎಲ್ಲ ಐತಿಹಾಸಿಕ ಘಟನೆಗಳ ವರ್ಣನೆ ಇದೆ. ಶ್ರೀಕೃಷ್ಣನು ವಿಷ್ಣುವೇ; ಅವನು ಸರ್ವೋತ್ತಮ ವ್ಯಕ್ತಿ ಎಂಬುದು ಮಹಾಭಾರತ ಕಾಲದಲ್ಲಿಯೇ ಪ್ರಚಲಿತವಾಗಿದ್ದಿತು. ವಿಶ್ವದ ರಾಜರೆಲ್ಲ ಸೇರಿದ ರಾಜಸೂಯಯಾಗದಲ್ಲಿಯೇ ಎಲ್ಲ ರಾಜರ ಹಾಗೂ ಋಷಿಮುನಿಗಳ ಸಮ್ಮುಖದಲ್ಲಿ ಹಿರಿಯರಾದ ಭೀಷ್ಮರೇ ಶ್ರೀಕೃಷ್ಣನ ಅಗ್ರಪೂಜೆ (ಪ್ರಧಾನ ಪೂಜೆ) ಪ್ರಸ್ತಾಪಿಸಿ, ಮಾಡಿಸಿದ್ದನ್ನು ಕಂಡಾಗ ಈ ಮಾತು ಸ್ಪಷ್ಟವಾಗುವದು. ಶ್ರೀಕೃಷ್ಣ ತನ್ನ ಕಾಲದಲ್ಲಿ ವಿವಾದಾಸ್ಪದನಾದಂತೆ, ಉನ್ನತ ವ್ಯಕ್ತಿಯಾಗಿ, ಉಪಾಸ್ಯದೈವವೂ ಆಗಿದ್ದನೆಂಬುದೂ ತಿಳಿದು ಬರುವದು. ಪಾಂಡವರು, ವಿದುರ, ಉದ್ಧವ ಮೊದಲಾದವರು ಅವನ ಭಕ್ತರಾಗಿ ಮೆರೆದಿದ್ದಾರೆ.

ಮಹಾಭಾರತದಲ್ಲಿಯೇ ಬರುವ ಶ್ರೀಕೃಷ್ಣನ ವಾಣಿಯಾದ ಭಗವದ್ಗೀತೆ ಶ್ರೀಕೃಷ್ಣನ ದೇವತ್ವವನ್ನು ಖಚಿತ ಪಡಿಸಿ ಸಾರಿತು. (ಅಹಂ ಸರ್ವಸ್ಯ ಪ್ರಭವಃ) ನಾನೇ ಎಲ್ಲದರ ಹುಟ್ಟಿಗೆ ಕಾರಣ, (ಮತ್ತಃ ಸರ್ವಂ ಪ್ರವರ್ತತೆ) ನನ್ನಿಂದಲೇ ಎಲ್ಲವೂ ನಡೆಯುವದು. (ಅಹಮಾದಿರ್ಹಿ ಭೂತಾನಾಂ) ನಾನು ಎಲ್ಲರಿಗೂ ಆದಿಪುರುಷ. ಕಾರಣಪುರುಷ (ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ) ಎಲ್ಲವನ್ನೂ ಬಿಟ್ಟು ನನಗೇ ಶರಣು ಬಾ" ಮೊದಲಾದ ಮಾತುಗಳು ಹಾಗೂ ಮಹಾಭಾರತದ ಎಲ್ಲ ಘಟನೆಗಳಲ್ಲಿ ಅವನು ವಹಿಸಿದ ಪಾತ್ರ, ಮಾಡಿದ ಕಾರ್ಯ, ತೋರಿದ ಮಹಿಮೆಯಿಂದಾಗಿ ಮಹಾಭಾರತದ ನಂತರ ಯುಗದಲ್ಲಿ ಅವನು ಸರ್ವೋತ್ತಮ ದೇವನಾಗಿಯೇ ಬೆಳೆದು ಬಂದ.

ಭಾರತದ ನಂತರ ನಿರ್ಮಿತವಾದ ಭಾಗವತವು ಶ್ರೀಕೃಷ್ಣನ ಬಾಲ್ಯ, ತಾರುಣ್ಯದ ಎಲ್ಲ ಘಟನೆ ವಿವರಿಸಲಿಕ್ಕಾಗಿಯೇ ಮೀಸಲಾಯಿತು. "ಕೃಷ್ಣಸ್ತು ಭಗವಾನ್ ಸ್ವಯಂ" ಎಂದಿತು. ಭಾಗವತ ಗ್ರಂಥವು ಕೃಷ್ಣನ ಸಾಕ್ಷಾತ್‌ರೂಪವೆಂದೇ ಭಾವನೆ ಇದ್ದರಿಂದಾಗಿ ಪ್ರಚಲಿತವಾಯಿತು. ಭಾಗವತದ



"ವರಮಾನ ತೆರಿಗೆ ಇಲಾಖೆಯವರು ಹಠಾತ್ ತನಿಖೆಗೆ ಬರಲಿದ್ದಾರಂತೆ... ಓ! ನಿಮಗೂ ಗೊತ್ತಾಯಿತಾ!"

ಶ್ರೀಕೃಷ್ಣನ ಕಥೆಯಿಂದಲೇ ಮೋಕ್ಷ ದೊರೆಯುವದೆಂಬುವದನ್ನು ಮುಂದಿನ ವಲ್ಲಭಾಚಾರ್ಯ, ನಿಂಬಾರ್ಕ, ಚೈತನ್ಯ ಮತದವರು ಎತ್ತಿ ಹಿಡಿದರು. ಭಾಗವತವೂ ಮೋಕ್ಷ ನೀಡುವದು ಎಂದು ಉಳಿದೆಲ್ಲ ಆಚಾರ್ಯರೂ ಅಂಗೀಕರಿಸಿದರು. ಶ್ರೀಕೃಷ್ಣನನ್ನು ಅರಿತು ಅವನನ್ನು ಉಪಾಸನೆಗೈಯುವ ವಿಚಾರ ಧಾರೆಯೇ ವೈಷ್ಣವಮತ ಅಥವಾ ಭಾಗವತ ಸಂಪ್ರದಾಯವಾಗಿ ಬೆಳೆಯಿತು. ಭಾಗವತದಲ್ಲಿಯ ಶ್ರೀಕೃಷ್ಣ ಕಥೆಯನ್ನೇ ವಿಶೇಷವಾದ ರೀತಿಯಲ್ಲಿ ಅಲ್ಲಲ್ಲಿ ಬದಲಾವಣೆ ಮಾಡಿ 'ಹರಿವಂಶ' ವಿಷ್ಣುಪುರಾಣ, ಪದ್ಮಪುರಾಣ, ವಾಮನ ಪುರಾಣ, ವರಾಹ ಪುರಾಣ, ಬ್ರಹ್ಮವೈವರ್ತ ಪುರಾಣಗಳು ವಿವರವಾಗಿ ನಿರೂಪಿಸಿದವು. ಇವೆಲ್ಲ ಪುರಾಣಗಳಲ್ಲಿ ಶ್ರೀಕೃಷ್ಣ ಪರದೈವವಾಗಿಯೇ ಚಿತ್ರಿತನಾಗಿರುವ. ಅವನ ಕಥೆ ಇಲ್ಲಿ ಸಾಹಿತ್ಯಸೌಂದರ್ಯ, ಶಬ್ದಮಾಧುರ್ಯ, ರಸಚಾತುರ್ಯ, ಗುಣಗಳ ಔದಾರ್ಯದಿಂದ ಬಾನಗಲಾಗಿ ಅರಳಿ ನಿಂತಿದೆ. ಲಕ್ಷಾವಧಿ ಶ್ಲೋಕಗಳು ಶ್ರೀಕೃಷ್ಣ ತತ್ವವನ್ನೇ ನಿರೂಪಿಸುವ ವಾಙ್ಮಯವಾಗಿ ಬೆಳೆದು ಬಂದವು. ಭಾರತೀಯ ಸಂಸ್ಕೃತಿಯ ವಿಕಾಸಕ್ರಮದಲ್ಲಿ ಶ್ರೀಕೃಷ್ಣನ ತತ್ವವೂ ಸಾರ್ವಕಾಲಿಕ ತತ್ವವಾಗಿ, ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿ ವಿಕಾಸಹೊಂದಿತು. ಶ್ರೀಕೃಷ್ಣನ ವೈವಿಧ್ಯಮಯವಾದ ಮನಮೋಹಕ ವ್ಯಕ್ತಿತ್ವ ಇಂದಿಗೂ ವಾಙ್ಮಯವನ್ನು ವ್ಯಾಪಿಸಿ ನಿಂತಿದೆ.

ಶ್ರೀಕೃಷ್ಣನ ಉಪಾಸನೆ ಸಹಸ್ರಾರು ವರ್ಷಗಳಿಂದ ಭಾರತದಲ್ಲಿ ಬಂದಿದೆ ಎನ್ನಲು ಅತಿ ಪ್ರಾಚೀನ ಶಿಲಾಲೇಖಗಳನ್ನೂ ಕಾಣಬಹುದು. ಕ್ರಿಸ್ತ ಪೂರ್ವದ ಮೂರನೇ ಶತಮಾನದ ಹಥಿಥಿ ಬಾಡದ ಶಾಸನದಲ್ಲಿ "ಭಗವದ್ಭ್ಯಾಂ ವಾಸುದೇವಾಭ್ಯಾಂ ಅನಿಹತಾಭ್ಯಾಂ ಸರ್ವೇಶ್ವರಾಭ್ಯಾಂ ಪೂಜಾಶಿಲಾಪ್ರಾಕಾರೋ" ಎಂದು ಉಲ್ಲೇಖವಿದೆ. ಇಲ್ಲಿ ವಸುದೇವನ ಮಗನಾದ ಕೃಷ್ಣವಾಸುದೇವ, ಅವನು ಸರ್ವೇಶ್ವರ ಮೊದಲಾದ ವಿಶೇಷಣಗಳನ್ನು ಕಾಣಬಹುದು. ಕ್ರಿ. ಶ. ಪೂರ್ವದ ಎರಡನೇ ಶತಮಾನದ ಬೆಸನಗರದ ಶಿಲಾಲೇಖದಲ್ಲಿ ಅಲ್ಲಿಯ ರಾಜ ಭಾಗಭದ್ರನ ಆಸ್ಥಾನಕ್ಕೆ ಬಂದ ಯವನರಾಯಭಾರಿ ಹೆಲಿಯಡೊರೋ ವಾಸುದೇವ ಶ್ರೀಕೃಷ್ಣನಿಗಾಗಿ ಗರುಡಗಂಬ, ಧ್ವಜವನ್ನು ನಿಲ್ಲಿಸಿದನೆಂದು ಉಲ್ಲೇಖವಿದೆ. ಗುಜರಾತ, ನಾಸಿಕ, ನಾನಾಘಾಟಗಳಲ್ಲಿ ಕ್ರಿಸ್ತ ಪೂರ್ವದಲ್ಲಿಯೇ ಕೃಷ್ಣಭಕ್ತಿ ಆಚರಣೆಯಲ್ಲಿ ಇದ್ದಿತೆಂಬುದನ್ನು ಅನೇಕ ಶಾಸನಗಳಿಂದ ತಿಳಿಯಬಹುದು. ಕ್ರಿ. ಪೂ. ನಾಲ್ಕನೇ ಶತಕದಲ್ಲಿ ಚಂದ್ರಗುಪ್ತನ ಆಸ್ಥಾನಕ್ಕೆ ಮೆಸಿಡೊನಿಯಾದಿಂದ ಬಂದ ಮೆಗೆಸ್ತನೀಸನ ವೃತ್ತಾಂತದಲ್ಲಿ ಶ್ರೀಕೃಷ್ಣನ ಜನ್ಮಸ್ಥಾನ, ಲೀಲಾ ಸ್ಥಳಗಳ ಉಲ್ಲೇಖವನ್ನೂ ಕಾಣುವೆವು. ಆದ್ದರಿಂದ ಬಹುಪೂರ್ವಕಾಲದಿಂದಲೂ ಶ್ರೀಕೃಷ್ಣನು ವಿಷ್ಣುವಿನ ಅವತಾರ, ಜಗತ್ಕರ್ತಾ ಎಂದು ಸಿದ್ಧನಾಗಿ, ಸ್ವೀಕೃತನಾಗಿ ಬೆಳೆದು ಬಂದಿದ್ದಾನೆ. ವಸುದೇವನ ಮಗನೇ ಶ್ರೀಕೃಷ್ಣ ಹಾಗೂ ಅವನು ದೇವರು ಎಂಬ ಮಾತನ್ನು ಕ್ರಿಸ್ತ ಪೂರ್ವದಲ್ಲಿಯೇ ಆಗಿಹೋದ ವ್ಯಾಕರಣಸೂತ್ರಕಾರ ಪಾಣಿನಿಯು "ರಾಜನ್ಯ ಬಹುವಚನ" ಮೊದಲಾದ ಅನೇಕ ಸೂತ್ರಗಳಲ್ಲಿಯೂ, ಪತಂಜಲಿಯು ಭಾಷ್ಯದಲ್ಲಿಯೂ ಉಲ್ಲೇಖಿಸಿ ವಿವರಿಸಿರುವರು.

ಸಂಸ್ಕೃತ ಸಾಹಿತ್ಯದ ಪ್ರಾರಂಭಿಕ ನಾಟಕಕಾರ ಭಾಸನೇ ಶ್ರೀಕೃಷ್ಣನ ವ್ಯಕ್ತಿತ್ವ ತಿಳಿಸುವ ಅನೇಕ ನಾಟಕ ರಚಿಸಿದ. ಅಂದಿನಿಂದ ಆರಂಭವಾದ ಶ್ರೀಕೃಷ್ಣಕಾವ್ಯ ಸಂಪ್ರದಾಯ ನಾಟಕ, ಕಾವ್ಯಗಳ ರೂಪದಲ್ಲಿ ಸಂಸ್ಕೃತಸಾಹಿತ್ಯದಲ್ಲಿ ವೈವಿಧ್ಯಮಯವಾಗಿ ಬೆಳೆಯಿತು. ಮಾಘನ "ಶಿಶು ಪಾಲವಧ" ಇಪ್ಪತ್ತು (ಸರ್ಗಗಳ ಕಾವ್ಯ) ವಾದಿರಾಜರ 'ರುಕ್ಮಿಣೀಶ ವಿಜಯ' ಜಯದೇವನ 'ಗೀತಗೋವಿಂದ' ಆನಂದ ಭಟ್ಟನ ಭಾರತಚಂಪೂ, ಕ್ಷೇಮೇಂದ್ರನ ಭಾರತ ಮಂಜರಿ, ಪರಿಮೂತಕಾವ್ಯ, ಮೊದಲಾದ ಸಂಸ್ಕೃತ ಸಾಹಿತ್ಯದ ಕೃತಿಗಳು ಕೃಷ್ಣಚರಿತೆ ನಿರೂಪಿಸಲು ಮೀಸಲಾಗಿವೆ

ಪುಣೆ, ಮುಂಬಯಿ, ಭಾಗದವರಿಗೂ ಸುವರ್ಣ ಸಂಧಿ!!

ನಿರಾಶರಾಗಬೇಡಿರಿ !! ನಿಮ್ಮ ದಾಂಪತ್ಯ ಜೀವನ

ಆದರ್ಶಮಯವಾಗಿರಲಿ!! ಎಲ್ಲ ತರದ ಕಠಿಣ

ನಿರಾಸಕ್ತಿಗೆ ನವಶಕ್ತಿ!!! ನವಜೀವನ !!



ಲೈಂಗಿಕ ವ್ಯಾಧಿಗಳಿಗೆ ಅತ್ಯುತ್ತಮ ಚಿಕಿತ್ಸೆ !!! ಲಗ್ನದ ಮೊದಲು ಹಾಗೂ ನಂತರದ ನಿಶ್ಶಕ್ತಿಗೆ ಅತೀ ಶೀಘ್ರ ಹಾಗೂ ಸರಳ ಪರಿಹಾರ !!! ದಾಂಪತ್ಯ ಸಮಸ್ಯೆಗೆ ನಂಬುಗೆಯ ಚಿಕಿತ್ಸೆ !!! ಚಿಕ್ಕ ವಯಸ್ಸಿನಲ್ಲಿ ಹಸ್ತ ಮೈಥುನ ಇತ್ಯಾದಿ ದುಶ್ಚಟಗಳಿಗೆ ಬಲಿಬಿದ್ದು ತಾರುಣ್ಯವನ್ನು ನಾಶ ಮಾಡಿಕೊಳ್ಳುವುದು ಸಹಜ. ಅಂಥವರಲ್ಲಿ ನೀವೂ ಒಬ್ಬರಾಗಿದ್ದರೆ ಇಂದೇ ತಜ್ಞರಾದ ಡಾ|| ಎ. ಬಾಗಲಕೋಟೆ ಇವರನ್ನು ಭೇಟಿಯಾಗಿ ಅಮೂಲ್ಯ ಸಲಹೆ ಹಾಗೂ ಅತ್ಯುತ್ತಮ ಚಿಕಿತ್ಸೆಯನ್ನು ಪಡೆಯಿರಿ.

ನಿಶ್ಶಕ್ತಿ, ತಾರುಣ್ಯನಾಶ, ನಿರುತ್ಸಾಹ, ಸಂತಾನ ದೋಷ, ಶೀಘ್ರ ಸ್ಖಲನ, ಸ್ವಪ್ನ ದೋಷ, ಕಾಮಿನದೋಷ, ಮೂತ್ರದೋಷ, ಹೊಟ್ಟೆನೋವು ಅಜೀರ್ಣತೆ, ಗ್ಯಾಸ್ ಟ್ರಬಲ್, ಉರಿ, ತುರಿಕೆ, ಚರ್ಮರೋಗ, ಬಿಳಿ ತೊನ್ನು, ಬಿಳಿ ಸೆರಗು, ಮುಟ್ಟುದೋಷ, ಹಾಗೂ ಮೂಲವ್ಯಾಧಿಗೆ ಆಪರೇಶನ್ ಇಲ್ಲದೆ ಗುಣಪಡಿಸಲಾಗುವುದು. ಪರದೇಶದಲ್ಲಿರುವವರು ಬರೆಯಬಹುದು.

ಭೇಟಿಯ ವೇಳೆ: ಮುಂಜಾನೆ 8 ರಿಂದ ರಾತ್ರಿ 8 ರ ವರೆಗೆ.

ಬೆಂಗಳೂರು	: ಪ್ರತಿ	1 ಹಾಗೂ 11 ರಂದು: ತಿಂಗಳೂ ಹೊಟೇಲ್ ಬ್ರಾಡವೆ, ಕೆಂಪೇಗೌಡ ರೋಡ್ ಫೋನ 72321
ಮೈಸೂರು :	,,	2 ರಂದು: ಹೊಟೆಲ್ ಇಂದ್ರ ಭವನ
ಹಾಸನ :	,,	3 ರಂದು: ಹೊಟೆಲ್ ಹರ್ಷಮಹಲ್.
ಶಿವಮೊಗ್ಗ :	,,	4 ರಂದು: ಹೊಟೆಲ್ ಸತ್ಕಾರ, ರೂಂ. ನಂ. 2
ಬೆಳಗಾಂವ :	,,	5 ರಂದು: ಸತ್ಕಾರ ಹೊಟೆಲ್ ಮಾರುತಿಗಲ್ಲಿ.
ಬಿಜಾಪುರ :	,,	6 ರಂದು: ಮೈಸೂರು ಲಾಡ್ಜ ಸ್ಟೇಶನ್ ರೋಡ
ಗುಲಬುರ್ಗಾ :	,,	7 ರಂದು: ಮೋಹನ ಲಾಡ್ಜ, ಮಿಲ್ ರೋಡ್
ದಾವಣಗೆರೆ :	,,	8 ರಂದು: ಸರ್ಕಲ್‌ರೆಸ್ಟೋರೆಂಟ,ಗಾಂಧಿಸರ್ಕಲ್
ಉಡುಪಿ :	,,	9 ರಂದು: ಹೊಟೆಲ್ ಸಿಂಧು ಪ್ಯಾಲೆಸ್
ಮಂಗಳೂರು:	,,	10ರಂದು: ಉಡ್‌ಲ್ಯಾಂಡ್ಸ ಹೊಟೆಲ್ ಬಂಟ್ಸ್ ಹಾಸ್ಟೇಲ್ ರೋಡ್, ಫೋನ್:24411
ಪುಣೆ :	,,	12 ರಂದು ಹೊಟೆಲ್ ಪೂರಣ ಲಾಜ್, ಡಕ್ಕನ್ ಜಮಖಾನಾ ಶಿವಾಜಿ ನಗರ ಫೋನ: 54192
ದಾದರ :	,,	14 ರಂದು ಹೊಟೆಲ್ ರೆಡ್‌ರೋಜ, ಚಿತ್ರಾ ಸಿನೆಮಾ ಹಿಂದೆ, ದಾದರ (ಪೂರ್ವ)
ಥಾಣೆ :	,,	15 ರಂದು: ಹೊಟೆಲ್ (ಕೆನ್-ಕೆನ್). ಸಹ್ಯಾದ್ರಿ ರೈಲ್ವೆ ಸ್ಟೇಷನ್ ಎದುರಿಗೆ (ಪಶ್ಚಿಮ) ಥಾಣಾ ಫೋನ : 592222
ಮುಂಬಯಿ :	,,	16 ರಂದು ಹೊಟೆಲ್ ಗುಲಿಸ್ತಾನ ಮಿನರ್ವಾ ಸಿನೆಮಾ ಮಗ್ಗುಲಿಗೆ, ಲಾಮಿಂಗ್ಟನ್ ರೋಡ್ ಮುಂಬಯಿ-7
ಬಾಂದ್ರಾ	,,	17 ರಂದು ಹೊಟೆಲ್ ಮಾನಸರೋವರ್. ಪೀನಾಜೀನಾ ಶಾಪಿಂಗ್ ಸೆಂಟರ್ ಎದುರಿಗೆ, ಬಾಂದ್ರಾ (W) ಮುಂಬಯಿ-50 ಫೋನ : 6425399
ಮುಂಬಯಿ :	,,	18 ರಂದು ಎಲಿಫಿನ್‌ಸ್ಟನ್ ಹೊಟೆಲ್ ರುಸ್ತುಮ್ ಸಿದ್ವಾ ಮಾರ್ಗ ಡಾ. ಡಿ. ಎನ್. ರೋಡ, ಫೋರ್ಟ ಮುಂಬಯಿ-1
ಮಡಗಾಂವ :	,,	20 ರಂದು ಮಿಲನ್ ಲಾಜ್
ಪಣಜಿ :	,,	21 ರಂದು ವಿ-ಸ್ಟಾರ್ ಹೊಟೆಲ

ಡಾ|| ಎ. ಬಾಗಲಕೋಟೆ ಎಂ.ಪಿ.ಆರ್.ಎಂ.ಪಿ.

ಫೋನ :
62602

ನವಶಕ್ತಿ ಡಿಸ್ಪೆನ್ಸರಿ

ಹೆಡ್ ಆಫೀಸು : ಟ್ರಾಫಿಕ್ ಐಲೆಂಡ್ ಜನತಾ ಬಜಾರ ಹತ್ತಿರ, ಅಂಚಟಗೇರಿಓಣಿ, ಜನತಾ ಮೆಡಿಕಲ್ ಮೇಲೆ ಹುಬ್ಬಳ್ಳಿ-580028

ನೆನಪಿರಲಿ: ಮೇಲಿನ ಸ್ಥಳಕ್ಕೆ ಭೇಟಿಯಾಗುತ್ತ 25 ವರ್ಷಕ್ಕೂ ಮೇಲ್ಪಟ್ಟಾಗಿದೆ.

ನಮ್ಮ ಯಾವದೇ ಬ್ರಾಂಚ ಇರುವದಿಲ್ಲ! ಹೆಸರು ಸರಿಯಾಗಿ ನೆನಪಿರಲಿ!

Deepavali Greetings to All Our Customers :

India's Most Wanted T. V.

ECtv

Available at :

Authorised Sales & Service Dealer

Shri Gayatri Enterprises

C/o. Sri Ramwoods Pvt.Ltd. Koppikar Road

HUBLI. Ph: 64852

- WE UNDERTAKE TV REPAIRS
- EC. TV GENUINE SPARES AVAILABLE

Deepavali Greetings

For



Delicious Choicesr

Food Homely

Service

Visit

DOLPHIN

air conditioned

Bar & Restaurent

New Cotton Market

Hubli



Phone : 65301

Ganesh Ads.

ಭಾರತೀಯ ವೇದಾಂತ ಪ್ರಪಂಚದ ಸುಪ್ರಸಿದ್ಧ ಆಚಾರ್ಯರುಗಳಾದ ಶಂಕರ, ರಾಮಾನುಜ, ಮಧ್ವ, ನಿಂಬಾರ್ಕ, ವಲ್ಲಭ, ಚೈತನ್ಯರು ಹಾಗೂ ಇವರ ಶಾಖೆಗಳಾಗಿ ಬೆಳೆದ ಅನ್ಯಸಂಪ್ರದಾಯಗಳಲ್ಲಿ ಶ್ರೀಕೃಷ್ಣನೆ ಪರದೈವ, ಪ್ರಧಾನ ದೈವವಾದದ್ದನ್ನೂ ಕಾಣುವೆವು.

ಶಂಕರಮತ:

ಶಂಕರಾಚಾರ್ಯರು ತಮ್ಮ ನೂರಾರು ಸ್ತೋತ್ರಗಳಲ್ಲಿ, ಭಗವದ್ಗೀತಾ ಭಾಷ್ಯದಲ್ಲಿ, ವಿಷ್ಣು ಸಹಸ್ರನಾಮ ಭಾಷ್ಯದಲ್ಲಿ ಅತಿ ಸ್ಪಷ್ಟವಾಗಿ ಶ್ರೀಕೃಷ್ಣನೇ ಪ್ರಧಾನ ತತ್ವವೆಂದು ತಿಳಿಸಿದ್ದಾರೆ. ಕೃಷ್ಣಾಷ್ಟಕ, ಕೃಷ್ಣತಾಂಡವಸ್ತೋತ್ರಗಳಲ್ಲಿ ಕೃಷ್ಣನನ್ನೂ ಉಪಾಸ್ಯದೇವರೆಂದೇ ಕೊಂಡಾಡಿರುವರು. ಅದ್ವೈತ ಮತದ ದಿಗ್ಗಜ ಪಂಡಿತರಾದ ಚಿತ್ಸುಖಿ, ಶ್ರೀಧರ, ವಂಶೀಧರ, ಮಧುಸೂದನ ಸರಸ್ವತಿಗಳು ಭಾಗವತ, ಗೀತೆಗಳಿಗೆ ವ್ಯಾಖ್ಯಾನ ಬರೆದು ಕೃಷ್ಣಭಕ್ತಿಯನ್ನು ಸಮರ್ಥಿಸಿದ್ದಾರೆ. ಶಾಂಕರರ ಗೀತಾಭಾಷ್ಯ ಟೀಕೆಯಲ್ಲಿ ಮಧುಸೂದನ ಸರಸ್ವತಿಗಳು ಪ್ರತಿ ಅಧ್ಯಾಯದಲ್ಲಿಯೂ ಕೃಷ್ಣನಿಗೆ ವಂದಿಸಿದ್ದಾರೆ. "ಅದ್ವೈತ ಮತದ ನಿರ್ಗುಣ ನಿರಾಕಾರನನ್ನು ಯಾರಾದರೂ ಧ್ಯಾನದಿಂದ ವಶಪಡಿಸಿಕೊಳ್ಳುವದಿದ್ದರೆ ಅವಶ್ಯವಾಗಿ ವಶಪಡಿಸಿಕೊಳ್ಳಲಿ. ಆದರೆ ನಮ್ಮ ಕಣ್ಣಿಗೆ ಮಾತ್ರ ಕಾಲಿಂದಿಯ ತಟದ ನೀಲವರ್ಣದ ಕೃಷ್ಣನೇ ಸಾಕು" "ನಾವು ಅದ್ವೈತ ಮಾರ್ಗದ ಮಾರ್ಗದರ್ಶಿ. ಆದರೆ ಗೋಪವಧುವಿನ ವಿಟ ಪುರುಷ ಕೃಷ್ಣ ಹಟದಿಂದ ದಿಟವಾಗಿ ನಮ್ಮನ್ನು ತನ್ನದಾಸರನ್ನಾಗಿ ಮಾಡಿಕೊಂಡಿರುವ" ಎಂದಿದ್ದಾರೆ. ತತ್ವ ಅದ್ವೈತವಾದರೂ ಈ ಮತದಲ್ಲಿ ಕೃಷ್ಣಭಕ್ತಿ ವಿಪುಲವಾಗಿ ಬೆಳೆಯಿತು.

ರಾಮಾನುಜಮತ:

ಶ್ರೀಕೃಷ್ಣ ಭಕ್ತಿಯನ್ನು ಹಾಗೂ ತತ್ವವನ್ನು ಶಂಕರರ ಅನಂತರ ಪ್ರಥಮವಾಗಿ ಮತೀಯರೂಪ ನೀಡಿ ಊರ್ಜಿತಗೊಳಿಸಿದವರು ರಾಮಾನುಜರು. ಶ್ರೀವೈಷ್ಣವ ಮತವೆಂದೇ ಇವರ ಪ್ರಸಿದ್ಧಿ. ಈ ಮತದಲ್ಲಿ ಕೃಷ್ಣತತ್ವ ಸಾಹಿತ್ಯ ಸಂಸ್ಕೃತದಂತೆ ತಮಿಳಿನಲ್ಲಿಯೂ ವಿಪುಲವಾಗಿ ಬೆಳೆಯಿತು. ಪಾಂಡ್ಯರಾಜನ ಗುರುಗಳಾದ ವಿಷ್ಣುಚಿತ್ತರು (ಪೇರಿಯಾಳ್ವಾರ್) ಐದನೂರು ಪದ್ಯಗಳಿಂದ ಶ್ರೀ ಕೃಷ್ಣನ ಮಹಿಮೆ ವರ್ಣಿಸಿದ್ದಾರೆ. ಕೃಷ್ಣಭಕ್ತಿಯ ಕಾವ್ಯಗಳನ್ನು ತಮಿಳಿನಲ್ಲಿ ರಚಿಸಿದ ಹಲವು ಆಳ್ವಾರರು ಕ್ರಿಸ್ತಪೂರ್ವದಲ್ಲಿಯೂ ಇರುವರು. ಎಲ್ಲ ಜಾತಿಯವರೂ ಇದ್ದಾರೆ. ರಾಮಾನುಜರು, ವೇದಾಂತದೇಶಿಕರು, ಈ ಸಾಹಿತ್ಯಕ್ಕೆ ಶಾಸ್ತ್ರೀಯ ಸ್ವರೂಪ ನೀಡಿದರು. ಅಂಡಾಳ್, ವಿಪ್ರನಾರಾಯಣ, ಮುನಿವಾಹನರು ಮುಂದುವರೆಸಿದರು. ಇವರದ್ದೇ ಅಂಗವಾಗಿ ಉತ್ತರ ಭಾರತದಲ್ಲಿ ಸ್ವಾಮಿನಾರಾಯಣ ಸಂಪ್ರದಾಯ, ರಾಮಾನಂದ ಸಂಪ್ರದಾಯಗಳು ಕೃಷ್ಣಭಕ್ತಿಯನ್ನು ಸ್ವೀಕರಿಸಿ ಬೆಳೆದವು.

ಮಧ್ವಮತ:

ಉಡುಪಿಯಲ್ಲಿ ಶ್ರೀಕೃಷ್ಣನನ್ನು ಸ್ಥಾಪಿಸಿ ಕೃಷ್ಣಭಕ್ತಿಯ ಕೇಂದ್ರವಾಗಿರಿಸಿದ ಮಧ್ವಾಚಾರ್ಯರು ತಮ್ಮೆಲ್ಲ ಗ್ರಂಥಗಳಲ್ಲಿ ಶ್ರೀಕೃಷ್ಣ ತತ್ವವನ್ನು ಮುಖ್ಯವಾಗಿ ವಿವರಿಸಿದ್ದಾರೆ, ಮಹಾಭಾರತ ತಾತ್ಪರ್ಯ ನಿರ್ಣಯ, ಯಮಕ ಭಾರತ, ಕೃಷ್ಣಾಮೃತ ಮಹಾರ್ಣವ, ಭಾಗವತ ತಾತ್ಪರ್ಯಗಳಲ್ಲಿ ಕೃಷ್ಣಭಕ್ತಿಯ ಮಹತ್ವದ ಮಹಾಪೂರವೇ ಹರಿದಿದೆ. ಶ್ರೀಕೃಷ್ಣನ ಜಯಂತಿ (ಗೋಕುಲಾಷ್ಟಮಿ) ಆಚರಿಸಲು ಆಚಾರ್ಯ ಮಧ್ವರು ಒಂದು ಪ್ರತ್ಯೇಕ ಗ್ರಂಥವನ್ನೇ ರಚಿಸಿದರು. ಅವರ ಅನುಯಾಯಿಗಳಾದ ಶ್ರೀಪಾದರಾಜರು, ಶ್ರೀವ್ಯಾಸರಾಜರು, ಶ್ರೀವಾದಿರಾಜರು, ಶ್ರೀ ರಾಘವೇಂದ್ರಸ್ವಾಮಿಗಳು ಶ್ರೀಕೃಷ್ಣನ ಮೇಲೆ ಸಂಸ್ಕೃತ ಹಾಗೂ ಕನ್ನಡದಲ್ಲಿ ಸಾವಿರಾರು ಪದ್ಯಗಳನ್ನು ರಚಿಸಿ ಕೃಷ್ಣಭಕ್ತಿಯನ್ನು ವಿಶದಗೊಳಿಸಿ ಅದಕ್ಕೆ ಸಾಹಿತ್ಯಕ ಹಾಗೂ ಶಾಸ್ತ್ರೀಯ ರೂಪನೀಡಿದರು. ಮಧ್ವರಿಂದಲೇ ಪ್ರವರ್ತಿತ ಹರಿದಾಸಸಾಹಿತ್ಯದಲ್ಲಿ ಅರ್ಧಕ್ಕೂ ಹೆಚ್ಚು ಶ್ರೀಕೃಷ್ಣನ ಭಕ್ತಿ ಸಾಹಿತ್ಯವೇ ತುಂಬಿದೆ. ಪುರಂದರದಾಸರು, ಕನಕದಾಸರು, ವಿಜಯದಾಸರು. ಪ್ರಸನ್ನವೆಂಕಟದಾಸರು, ಮಹಿಪತಿದಾಸರು, ಗೋಪಾಲದಾಸರು ಜಗನ್ನಾಥದಾಸರು ಲಕ್ಷಾವಧಿ ಕನ್ನಡ ಪದಗಳನ್ನು ರಚಿಸಿ ಕೃಷ್ಣ ತತ್ವವನ್ನು ವ್ಯಾಪಕಗೊಳಿಸಿದರು.

ನಿಂಬಾರ್ಕಮತ:

ಶ್ರೀ ಕೃಷ್ಣಭಕ್ತಿಯೇ ಪ್ರಧಾನ ತತ್ವವಾಗಿಟ್ಟುಕೊಂಡು ಬೆಳೆದ



ನಾವು ಯಾರ ವಿರುದ್ಧವೂ 'ಭ್ರಷ್ಟಾಚಾರ ಆಪಾದನೆ'ಗಳನ್ನು ಮಾಡುವುದು ಬೇಡ. ಏಕೆಂದರೆ ನಮ್ಮಲ್ಲಿ ಇರುವವರೆಲ್ಲಾ ಭ್ರಷ್ಟಾಚಾರಿಗಳೇ...!

Inside this stunningly futuristic range, we've built some very down-to-earth conveniences.



Ganesh Advt.

Authorised Dealers :

RAJENDRA STORES	REXINE HOUSE	ROHIT AGENCIES
2428, Marathagalli	7/8, Victoria Bldg.	Anand Bhavan Bldg.
HUBLI	**Koppikar Road HUBLI.**	**Station Road, HUBLI.**

Phone : 64604, 66027 Resi : 63610

ಮತಗಳಲ್ಲಿ ನಿಂಬಾರ್ಕಾಚಾರ್ಯರ ಮತ ಮೊದಲಿನದು. ಉತ್ತರ ಭಾರತದಲ್ಲಿ ಅನುಯಾಯಿಗಳನ್ನು ಹೊಂದಿದ ಈ ಮತದಲ್ಲಿ ಶ್ರೀಭಟ್ಟ, ಪುರುಷೋತ್ತಮ, ಹರಿವ್ಯಾಸರು ತಮ್ಮ ಅನೇಕ ಕೃತಿಗಳಿಂದ ಶ್ರೀ ಕೃಷ್ಣ ತತ್ವವನ್ನು ಹೊಗಳಿದರು.

ವಲ್ಲಭಸಂಪ್ರದಾಯ:

೧೫ನೇ ಶತಮಾನದ ವಲ್ಲಭಾಚಾರ್ಯರು ಶ್ರೀಕೃಷ್ಣ ಭಕ್ತಿಗೆ ಬಹು ದೊಡ್ಡ ಸ್ಥಾನ ನೀಡಿದರು. ಗುಜರಾತ, ರಾಜಸ್ಥಾನ, ಮಧ್ಯಪ್ರದೇಶಗಳಲ್ಲಿ ಹಲವು ಶ್ರೀಕೃಷ್ಣದೇವಸ್ಥಾನ ನಿರ್ಮಿಸಿ, ಹಲವು ಮಠಗಳನ್ನು ಕಟ್ಟಿದರು. ಭಾಗವತಕ್ಕೆ ತಾವೇ ವ್ಯಾಖ್ಯಾನ ಬರೆದು ಶಾಸ್ತ್ರೀಯವಾಗಿಯೂ ಸಮರ್ಥಿಸಿದರು. ನಾಥದ್ವಾರ, ಕಾಂಕರೋಲಿ, ಕಾಮವನ ಮೊದಲಾದ ಕೃಷ್ಣ ಮಂದಿರಗಳು ಶ್ರೀಮಂತ ಸಂಸ್ಥಾನಗಳಾದವು. ಶ್ರೀಕೃಷ್ಣನ ಬಾಲರೂಪದ ಉಪಾಸನೆಗೆ ಮಹತ್ವ ನೀಡಿದ ಇವರು ಪುಷ್ಟಿ ಮಾರ್ಗವನ್ನು ಪ್ರಚಾರಗೈದರು. ಮುಂದೆ ಗೋಸ್ವಾಮಿ ವಿಠ್ಠಲನಾಥರಿಂದ ಶ್ರೀಕೃಷ್ಣಭಕ್ತಿ ವ್ಯಾಪಕರೂಪ ತಾಳಿತು. ಇವರ ಅನುಯಾಯಿಗಳಾಗಿಯೇ ಹಿಂದಿಯಲ್ಲಿ ಶ್ರೀಕೃಷ್ಣ ಚರಿತೆಯ ಸಾವಿರಾರು ಪದ್ಯಗಳನ್ನು ಸೂರದಾಸ, ಕುಂಭನದಾಸ, ಮೀರಾಬಾಯಿ, ನಂದದಾಸ, ಛೀತಸ್ವಾಮಿ ಮೊದಲಾದವರು ನಿರ್ಮಿಸಿದರು.

ರಾಧಾವಲ್ಲಭೀಯ ಸಂಪ್ರದಾಯ:

ವ್ರಜಪ್ರದೇಶದಲ್ಲಿ ಶ್ರೀಕೃಷ್ಣನ ಉಪಾಸನೆಯನ್ನೇ ಪ್ರಧಾನವಾಗಿಟ್ಟುಕೊಂಡು ಹುಟ್ಟಿದ ಈ ಸಂಪ್ರದಾಯದಲ್ಲಿ ಹಿತಹರಿವಂಶರೇ ಪ್ರಧಾನ ಆಚಾರ್ಯರು. ಇದು ಪ್ರೇಮ ಭಕ್ತಿಗೆ ಬಹುಬೆಲೆ ನೀಡುವದು. ಎಲ್ಲರೂ ರಾಧೆಯಾಗಿ, ರಸಭಾವ ಹೊಂದಿಯೇ ಮುಕ್ತಿ ಎಂಬ ಇವರಲ್ಲಿ ಮಾಧುರ್ಯ ಭಾವ ಬಹುವಾಯಿತು.

ಚೈತನ್ಯ ಸಂಪ್ರದಾಯ ಹಾಗೂ ಹರೇ ಕೃಷ್ಣ ಸಂಪ್ರದಾಯ:


ಮಧ್ವಮತದ ಶಾಖೆಯಾಗಿ ೧೬ನೇ ಶತಮಾನದಲ್ಲಿ ಶ್ರೀಕೃಷ್ಣ ಭಕ್ತಿಯಿಂದಲೇ ಮೋಕ್ಷ, ಕೃಷ್ಣ ಭಕ್ತಿಯೇ ಗುರಿ ಎಂದು ಹುಟ್ಟಿದ ಈ ಮತ ಕೃಷ್ಣ ಚೈತನ್ಯರಿಂದ ಪ್ರವರ್ತಿತವಾಯಿತು. ರೂಪಗೋಸ್ವಾಮಿ, ಜೀವ ಗೋಸ್ವಾಮಿಗಳು ಅದಕ್ಕೆ ಶಾಸ್ತ್ರರೂಪ ನೀಡಿದರು. ಇದರ ಅಂಗವಾಗಿಯೇ ಇಂದು ದೇಶ ವಿದೇಶಗಳಲ್ಲಿ ಅಂತಾರಾಷ್ಟ್ರೀಯ ಶ್ರೀ ಕೃಷ್ಣ ಭಕ್ತಿ ಕೇಂದ್ರ ವ್ಯಾಪಕವಾಗಿ ಬೆಳೆಯಿತು. ಇಂದು ಕೃಷ್ಣ ಭಕ್ತಿ ವಿದೇಶೀಯರಲ್ಲಿಯೂ ಇವರಿಂದಾಗಿ ಬೇರೂರಿ ಬೆಳೆಯಿತು. ವ್ಯಾಪಕ ಪ್ರಚಾರ ಪಡೆಯಿತು.

ಜೈನ ಹಾಗೂ ಬೌದ್ಧಮತದಲ್ಲಿ ಶ್ರೀ ಕೃಷ್ಣ ಭಕ್ತಿ :

ಪೌರಾಣಿಕ ಮಹಾಭಾರತವನ್ನೇ ಜೈನರು ಅದೇ ಹೆಸರಿನಿಂದ ಪ್ರಾಕೃತರೂಪ ನೀಡಿದರು. ಹರಿವಂಶ ನಿರೂಪಿಸಿದರು. ಅಲ್ಲಿ ಜೈನ ತತ್ವಗಳ ಉಪದೇಶವೇ ಇದ್ದರೂ ಶ್ರೀಕೃಷ್ಣನೇ ಮುಖ್ಯ ಪಾತ್ರನಾಗಿರುವ. ೮ನೇ ಶತಮಾನದ ಹರಿವಂಶದಲ್ಲಿ ೬೬ ಅಧ್ಯಾಯಗಳಿವೆ. ತಮ್ಮ ಧರ್ಮದ ಪ್ರಾರಂಭದ ದಿನಗಳಲ್ಲಿ ಜೈನರು ಶ್ರೀಕೃಷ್ಣತತ್ವವನ್ನೂ ತಮ್ಮ ಪಂಥಕ್ಕೆ ಸೇರಿಸಿಕೊಂಡರು. ತಮ್ಮ ಕಥೆಯ ಜೊತೆಗೆ ಕೃಷ್ಣ ಕಥೆಯನ್ನೂ ಹೆಣೆದುಕೊಂಡರು. ಜಿನಸೇನರ ತ್ರಿಷಷ್ಟಿ ಲಕ್ಷಣ ಮಹಾಪುರಾಣ, ಗುಣಭದ್ರರ ಉತ್ತರ ಪುರಾಣ, ಸಂಘದಾಸಗಣಿ, ಜಿನದಾಸರು ಶ್ರೀಕೃಷ್ಣನನ್ನು ಜಿನನನ್ನಾಗಿಸಿ ಅವನ ಮಹಿಮೆ ಹೇಳಿರುವರು. ಬೌದ್ಧರ ಜಾತಕ ಕಥೆಗಳಲ್ಲಿ, ಮುನ್ನೂರಾ ಐವತ್ತೈದು ಘಟಜಾತಕ ಮೊದಲಾದವುಗಳಲ್ಲಿ ಶ್ರೀಕೃಷ್ಣ ತತ್ವ, ಕಥೆ ನುಸುಳಿ ಬಂದಿದೆ. ಜಾವಾ, ಚಂಪಾ, ಕಂಬೋಡಿಯಾ, ಬಾಲಿದ್ವೀಪ, ಮಲೇಶಿಯಾಗಳಲ್ಲಿ ಶ್ರೀಕೃಷ್ಣ ತತ್ವವೂ ಮಹಾಭಾರತದ ರೂಪದಲ್ಲಿ ಬೆಳೆದು ಬಂದಿವೆ. ಕೃಷ್ಣಕಥೆ ಅಲ್ಲಿ ವೈವಿಧ್ಯಮಯವಾಗಿದ್ದರೂ ವ್ಯಾಪಕವಾಗಿ ವಿದೇಶಗಳಲ್ಲಿ ಸಾವಿರಾರು ವರ್ಷದಿಂದ ಬೆಳೆದು ಬಂದಿತು.

ಭಾರತ ದೇಶದಲ್ಲಿ ಹಿಂದಿ, ಗುಜರಾಥಿ, ಕನ್ನಡ, ತಮಿಳು, ತೆಲಗು, ಮರಾಠಿ, ಬಂಗಾಲಿ, ಉಡಿಯಾ ಮೊದಲಾದ ಭಾಷೆಗಳಲ್ಲಿ ಸಾವಿರಾರು ವರ್ಷಗಳಿಂದ, ಸಾಹಿತ್ಯದಲ್ಲಿ ಒಂದು ಕೃಷ್ಣಭಕ್ತಿ ಕಾವ್ಯ ಸಂಪ್ರದಾಯವೆಂದೆನಿಸಿ ಪೂರ್ಣವಾಗಿ ಬೆಳೆದು ಬಂದಿತು. ಹೀಗೆ ಕೃಷ್ಣತತ್ವ, ವ್ಯಕ್ತಿತ್ವ, ಮಹತ್ವಗಳು ಪ್ರಾಚೀನವಾಗಿ, ಶಾಸ್ತ್ರೀಯವಾಗಿ ಹರಿದು ಬಂದ ಸಿದ್ಧಾಂತಗಳು. ✡

ಚಿತ್ರೋತ್ಸವದ ಹೊರಗೆ



ಬಹುಮಾನಕ್ಕೆ ಅರ್ಹವಾದ ಚಿತ್ರಗಳು ಥಿಯೇಟರಿನಿಂದ ಹೊರಗಡೆ ಇವೆ.



ಮಕ್ಕಳನ್ನು ತರದೇ ಇದ್ದಿದ್ದರೆ ಹೆಚ್ಚು ಸಂತೋಷ ಪಡಬಹುದಿತ್ತು.



ಐದನೇ ಚಿತ್ರೋತ್ಸವದಷ್ಟಾದ್ರೂ ಪುರಸೊತ್ತು ಮಾಡಿಕೊಂಡು ನೋಡ್ತೀವಿ ಸಾರ್.

ಕೆ.ಆರ್.ಸ್ವಾಮಿ

ಚಿತ್ರಲೋಕದವರೊಡನೆ
ನನ್ನ ಸಂಭಾಷಣೆ

ಲಾಂಗೂಲಾಚಾರ್ಯ

ನೆನ್ನೆ ನಮ್ಮಪ್ಪನ ವೈದಿಕ ಮಾಡಿ ರಾತ್ರಿ ಫಳಾರ ಮುಗಿಸಿ ಸ್ವಲ್ಪ ಸುಸ್ತಾಗಿ ಮಲಗಿದ್ದೆ. ("ಫಳಾರ" ಅಂದರೆ ಊಟ ನಿಷಿದ್ಧವಾಗಿರುವ ದಿನ ಅಥವಾ ರಾತ್ರಿ ಮಾಡುವ ಊಟಕ್ಕೆ ಹೆಸರು ಎಂಬುದನ್ನು ಧರ್ಮ ಶಾಸ್ತ್ರ ಅಮೆಂಡ್‌ಮೆಂಟ್ ಕಾನೂನು ಗೊತ್ತಿಲ್ಲದವರಿಗಾಗಿ ಇಲ್ಲಿ ವಿವರಿಸಬೇಕಾಗಿದೆ).

ನಾನು ಅರೆ ನಿದ್ರಾವಸ್ಥೆಯಿಂದ **REM (rapid eye movement**– ರಭಸದ ಕಣ್ಣು ಚಲನೆ) ನಿದ್ರೆಯ ಸಸ್ವಪ್ನಾವಸ್ಥೆಗೇರಿರಬೇಕು., ಒಮ್ಮಿಂದೊಮ್ಮೆ ಥಡ್-ಥಡ್-ಥಡ್ ಶಬ್ದದಿಂದ ಎಚ್ಚರವಾಯಿತು. ಕತ್ತಲೆಯಲ್ಲೇ ಕಣ್ಣುಬಿಟ್ಟು ನೋಡಿದೆ. ಏನೂ ಕಾಣಸಲಿಲ್ಲ. ಮತ್ತೆ ಕಣ್ಣು ಮುಚ್ಚಿದೆ.

ಮತ್ತೆ ಥಡ್-ಥಡ್-ಥಡ್.

ಆಳವಾದ ಗುಹೆಯೊಳಗಿಂದ ಬರುವಂಥ ಒಂದು ಧ್ವನಿ ಕೇಳಿಸಿತು. ಆಲಿಸಿದೆ. ಹೌದು. ಯಾರೋ ಮಾತಾಡುತ್ತಿದ್ದಾರೆನಿಸಿತು. ನನಗೆ ಗೊತ್ತಿದ್ದ ಯಾವ ಭಾಷೆಯೂ ಅಲ್ಲ. ಕಿವಿ ನಿಮಿರಿಸಿ ಕೇಳಿದೆ. ಮಾತಾಡುವುದು ಹೌದು. ಕನ್ನಡ ಅಲ್ಲ. ಮರಾಠಿ ಅಲ್ಲ. ತುಳು ಅಲ್ಲ. ಹಿಂದಿ ಅಲ್ಲ. ಬಂಗಾಲಿ ಅಲ್ಲ. ಸಂಸ್ಕೃತವೂ ಅಲ್ಲ. ತಮಿಳು ತೆಲುಗು ಕೊಂಕಣಿ ಯಾವುದೂ ಅಲ್ಲ.

ಆದರೆ ವಿಚಿತ್ರವೆಂದರೆ ನನಗೆ ಅರ್ಥವಾಗುತ್ತಿದೆ. "ನೋಡಿವನಿಗೆ ಏನು ನಿದ್ದೆ!" ಎಂದು ಅದರ ತಾತ್ಪರ್ಯ. "ಇವನಿಗೇನಾದರೂ ಯೋಚನೆ ಇದೆಯೆ!" ಮೆಲ್ಲಗೆ ಕತ್ತಲಲ್ಲಿ ಒಂದು ಮನುಷ್ಯ ರೂಪದ ಹೊಳಹು ಕಾಣಸತೊಡಗಿತು.

"ಯಾರು ನೀವು ? ಯೋಚನೆ ಬೇಡ ಅಂತಲ್ಲವೇ ನಿದ್ದೆ ಮಾಡೋದು?" ಅಂತ ಕನ್ನಡದಲ್ಲಿ ಪಿಸುಗುಟ್ಟಿದೆ.

ಮತ್ತೆ ವಿಚಿತ್ರವೆಂದರೆ, ಆ ಅವಕ್ಕೆ ನನ್ನ ಕನ್ನಡ ಪಿಸುಮಾತು ಅರ್ಥವಾದಂತೆ ಅ[illegible]ತ

"ಯೋಚನೆ ಬೇಡವೇ? ನೀನು ಇಂದು ಅಪರಾಹ್ನ ಪಿಂಡಪ್ರದಾನ ಮಾಡಿ ವಾಯಸಬಲಿ ಹೊರಗಿಟ್ಟಿದ್ದನ್ನು ಕಾಗೆ ಮುಟ್ಟಿತೆ?" ಎಂದಿತದು ತನ್ನ ಭಾಷೆಯಲ್ಲಿ.

"ಯಾರು ನೀನು? ವಾಯಸಬಲೀನ ಕಾಗೆ ಮುಟ್ಟದಿದ್ದರೆ ನಿನಗೆ ಯಾಕಯ್ಯ ಚಿಂತೆ? ಹತ್ತಿರ ಕಾಗೆಗಳಿರಲಿಲ್ಲ. ಇದ್ದರೆ ಅವುಗಳಿಗೆ ಹಸಿವಿದ್ದಿರಲಿಕ್ಕಿಲ್ಲ. ಪುರೋಹಿತರು 'ದಿವ್ಯಂ ಸುಪರ್ಣಂ ವಾಯಸಂ' ಅಂತ ಮಂತ್ರ ಹೇಳಿದರು. ಮಂತ್ರ ಪೂರ್ವಕ ಕರೆದರೂ ಕಾಗೆ ಬಾರದಿದ್ದರೆ ಅವರಾಗಲಿ, ನಾನಾಗಲಿ, ಊಟಕ್ಕೆ ಬಂದವರಾಗಲಿ ಏನು ಮಾಡುವಂತಿದ್ದೇವೆ?" ಅಂತ ತುಸು ಅಸಹನೆಯಿಂದ ಪಿಸುಗುಟ್ಟಿದೆ.

"ನಿನಗೆ ಹಸಿವಾಗಿತ್ತು ಅನ್ನು."

"ಅನ್ನು."

"ಏ ಸ್ವಲ್ಪ ರಿಸ್ಪೆಕ್ಟ್ ಕೊಟ್ಟು ಮಾತಾಡು. ನಾ ನಿನ್ನಪ್ಪ. ತಿಳಿಯಿತೆ?" ನಾನು ಅಪ್ರತಿಭನಾದೆ.

ನನ್ನ ಹೆಂಡತಿ ತಲೆದಿಂಬಿನ ಮೇಲೆ ಒಂದು ವಿಚಿತ್ರ ತರಹ ತಲೆಯಿಟ್ಟು ಉಸಿರಾಡಿಸುತ್ತಿದ್ದವಳು ತಟ್ಟನೆ ಉಸಿರಿನ ಗತ್ತು ಬದಲಾಯಿಸಿ ಹೊರಳಿದಳು.

ತತ್‌ಕ್ಷಣ ನನ್ನನ್ನು ಸತಾಯಿಸುತ್ತಿದ್ದ ಆಕೃತಿ ಮಾಯವಾಯಿತು. ನನ್ನ ಪ್ರಶ್ನೆ ನನ್ನ ಬಾಯಲ್ಲೇ ಉಳಿಯಿತು. ನನ್ನ ಹೆಂಡತಿ ಕಣ್ಣು ತೆರೆದು ಕೈಯಾಡಿಸಿ ನಾನು ಕೈಗೆ ತಗಲಿದೊಡನೆ "ಇದ್ದೀರಾ?" ಅಂತ ಕೇಳಿ ಮತ್ತೆ ಹೊರಳಿದಳು. ಪ್ರತಿ ರಾತ್ರಿ ಕನಿಷ್ಠ ಪಕ್ಷ ಒಂದು ಸಲ, ಕೆಲ ಬಾರಿ ಅದೂ ನಮ್ಮಿಬ್ಬರಲ್ಲಿ ಹಗಲು ಏನಾದರೂ ಬಿರುಸು-ಬಾಣ ಆಗಿದ್ದರೆ-ಒಂದಕ್ಕಿಂತ ಹೆಚ್ಚು ಸಲ ಈ ಆಚರಣೆ ನಡೆಯೋದೇ. ನಾನು ಅವಳನ್ನು ಬಿಟ್ಟು ಓಡಿ ಹೋಗುತ್ತೇನೆಂಬ ಎಂದೋ-ನನಗೆ ಹಿತಕರವಾದ-ಭಯ ಅವಳ [illegible] ಮನಸ್ಸಿನಲ್ಲಿ ಊರಿಕೊಂಡು ಬಿಟ್ಟಿದೆ. ಹೆಂಗಸರ ಮನಸ್ಸು ವಿಚಿತ್ರ ಅನ್ನೋದು ಇದಕ್ಕೇ. ಹಗಲು ನಿಮ್ಮ ಹತ್ತಿರ ಕಾದಿ. "ನೀವು ಮಾಡೋದು ನೋಡಿದರೆ ಎಲ್ಲಾದರೂ ಓಡಿ ಹೋಗಬೇಕನಿಸುತ್ತೆ" ಅನ್ನೋದು. ರಾತ್ರಿ ನೀವೇ ಓಡಿಹೋಗುತ್ತೀರಿ ಅಂತ ದುಃಸ್ವಪ್ನ ಕಾಣೋದು.

ಅವಳು ನಿತ್ಯದ ತರಹ ಉಸಿರಾಡಿಸತೊಡಗಿದಳು. ವಿಲಂಬಿತದಲ್ಲಿ. ಕತ್ತಲಲ್ಲಿ ಸುತ್ತಲೂ ಕಣ್ಣು ಚುಚ್ಚಿ ಏನನ್ನೂ ಕಾಣದೆ ಆಕಳಿಸಿ ಇನ್ನೇನು "ನಿದ್ರೆಯ ಲೋಕದ ಕನಸಿನ ಬೀದಿ" ಗಿಳಿಯಬೇಕು. ಅಷ್ಟರಲ್ಲಿ ಹೆಂಡತಿ ಮತ್ತೆ ಹೊರಳಿ ವಿಚಿತ್ರ ಭಂಗಿಯಲ್ಲಿ ತಲೆಯಿಟ್ಟು ವಿಚಿತ್ರ ತಾಳದಲ್ಲಿ ಉಸಿರು ಬಿಡಲಾರಂಭಿಸಿದಳು. ತತ್‌ಕ್ಷಣ ಆ ಗಹ್ವರಧ್ವನಿ ಕೇಳಿಸಿತು. ಕಣ್ಣು ತೆರೆದೆ. ಅದೇ ಆ ರೇಖಾಕೃತಿ-ರಂಜಕದಲ್ಲಿ ಕವಿ ಗೋಡೆಯ ಮೇಲೆ ಬರೆದ ಹಾಗೆ.

"ಏಹ್! ಆಶ್ಚರ್ಯ ಆಯಿತೆ?"

"ಆಗದೆ ಇರುತ್ತೆಯೇ?" ಎಂದೆ ನಾನು ಗಾಬರಿಯನ್ನು ಹತ್ತಿಕ್ಕಿಕೊಳ್ಳುತ್ತ: "ಆದರೆ ಒಮ್ಮಿಂದೊಮ್ಮೆ ಅಂತರ್ಧಾನ ಆದದ್ದು ಯಾಕೆ ಅಂತ ?"

"ನನ್ನ ಸೊಸೆಗೆ ಎಚ್ಚರವಾಯಿತಲ್ಲ, ಅದಕ್ಕೆ."

"ನಿಮ್ಮ ಸೊಸೆ! ಎಲ್ಲೀ ಮಾತು!" ಅಂತ ನಾನು ಅಸಮಾಧಾನ ತೋರಿಸಿದೆ.

"ನನ್ನ ಮಗನ ಹೆಂಡತಿ ನನಗೆ ಸೊಸೆ ಆಗದೆ ಮತ್ತೇನಾಗತಾಳೆ ?" ಎಂದು ಆ ಮಾತು ಸ್ವಲ್ಪ ಮನಸ್ಸಿನಲ್ಲಿ ತಳ ಕಾಣಲು ಅವಕಾಶ ಬಿಟ್ಟು. "ನಾ ನಿನ್ನ ಅಪ್ಪನೋ ಎಲೆ ಮಂಗೀ!" ಎಂದು ತನ್ನ ಐಡೆಂಟಿಟಿಯನ್ನು ಹೊರಗೆಡಹಿತಾ ಆಕೃತಿ.

ನನ್ನ ಕೈ ಸರಕ್ಕನೆ ನನ್ನ ಪೃಷ್ಠದತ್ತ ಸರಿದು ಅಲ್ಲಿ ಈಗಿಲ್ಲದ ಬಾಸುಂಡೆಗಾಗಿ ತಡಕಾಡಿತು.

"ಗುರುತು ಹತ್ತಲಿಲ್ಲೇನೋ? ಪೃಷ್ಠ ಯಾಕೆ ತಿಕ್ಕಿಕೊಂಡೆ?"



"ನಿಮ್ಮ ಗುರುತು ಹತ್ತಲಿಲ್ಲ. ಆದರೆ-ನೀವು ನೀವೇ ಹೌದಾದರೆ-ಅವೊತ್ತು ನೀವು ಕೊಟ್ಟ ಬಾಸುಂಡೆ ಗುರುತು ಮಾತ್ರ ಇನ್ನೂ ನೆನಪಿನಲ್ಲಿದೆ." ಎಂದೆ ನಾನು ನಸು ನೋವಿನಿಂದ ನಗುತ್ತ. ನನಗೆ ಐದು ವರ್ಷ ಇದ್ದಾಗ, ಅಂದರೆ ನನ್ನಪ್ಪ ಸಾಯುವ ಕೆಲದಿನ ಮುಂಚೆ, ಅವರು ಹೇಳಿಕೊಟ್ಟ ಸ್ತೋತ್ರವನ್ನು ಸರಿಯಾಗಿ ಕಲಿಯದ್ದಕ್ಕೆ ಕೊಟ್ಟಿದ್ದ ಏಟು ಮಾತ್ರ ಅವರ ವಿಷಯ ನನಗಿದ್ದ ಸ್ಮರಣೆ.

ಆಕೃತಿ ಖುಷಿಯಿಂದ ನಕ್ಕಿತು. "ಏಟು ಕೊಟ್ಟಿದ್ದು ಒಳ್ಳೇದೇ ಆಯಿತು, ಹಾಗಾದರೆ! ನಿನಗೆ ನನ್ನ ನೋಡಿದ ನೆನಪಿಲ್ಲ. ಆದರೂ ಏಟಿನ ನೆನಪಿನಲ್ಲಾದರೂ ನಿನ್ನ ಮನಸ್ಸಿನಲ್ಲಿ ಉಳಿದಿದ್ದೇನಲ್ಲ. ಏಟು ಕೊಟ್ಟಿರದಿದ್ದರೆ ನನ್ನ ಬಗ್ಗೆ ನಿನ್ನಲ್ಲಿ ಏನೂ ಉಳಿಯುತ್ತಿರಲಿಲ್ಲ!"

"ಹೌದು, ಕೆಲವರು ತಮ್ಮ ಕೃತಿಗಳಿಂದ ಚಿರಂತನವಾಗಿ ಉಳಿಯುತ್ತಾರೆ," ಎಂದೆ ನಾನು. "ಆದರೆ ನೀವು ನನ್ನ ತಂದೆ ಅಂತ ಇನ್ನೂ ಸಿದ್ಧಾಂತ ಮಾಡಿ ಕೊಡಲಿಲ್ಲವಲ್ಲ."

"ಇವಳು ಹೇಳಿದರಾದರೂ ಸಿದ್ಧಾಂತವಾದೀತಾ?"- ಅನ್ನುತ್ತಿರುವಾಗಲೇ ಮೊದಲಿನ ಆ ಆಕೃತಿಯ ಬಳಿ ಇನ್ನೊಂದು ಇನ್ನೇನು ಮೂಡಮೂಡುತ್ತಿರುವಾಗ ಹೆಂಡತಿಯ ಉಸಿರಾಟದ ಗತಿ ಬದಲಾಗಿ ಅವಳು ಚಟ್ಟನೆ ಎದ್ದು ಕುಳಿತು ನನ್ನನ್ನು ಮುಟ್ಟಿ ನೋಡಿ, "ಇದ್ದೀರಾ?" ಅಂತ ಇನ್ನೊಮ್ಮೆ ಕೇಳಿದಳು. ಆಕೃತಿಗಳು ಅಂತರ್ಧಾನವಾದವು.

ಇವಳಿಗೆ ಆಮೇಲೆ ಥಕ್ಕನೆ ನಿದ್ದೆ ಬರುವ ಹಾಗೆ ಕಾಣಲಿಲ್ಲ. ಸ್ವಲ್ಪ ಹೊತ್ತು ಹಾಗೇನೇ ಕೂತಿದ್ದು ಆಮೇಲೆ ಥಕ್ಕನೆ ನನ್ನ ಕೈಹಿಡಿದು. "ಸತ್ಯ ಹೇಳಿ. ನೀವು ನನ್ನ ಬಿಟ್ಟು ಓಡಿಹೋಗೋದಿಲ್ಲ ತಾನೇ? ನಿಜ. ಪ್ರಾಮಿಸ್ ಮಾಡಿ," ಎಂದು ಮೆಲ್ಲ ಅಳತೊಡಗಿದಳು.

ನನಗೆ ಕತ್ತಲೆಯಲ್ಲಿ ನಡೆದ ನಾಟಕ ಅರ್ಥಕ್ಕೆ ಕಟ್ಟಾದದ್ದಕ್ಕೆ ಸ್ವಲ್ಪ ಸಿಡಿಮಿಡಿಯಾದರೂ ಅಳೋ ಹೆಂಡತಿಯನ್ನು ಸಂತೈಸದಿರುವಷ್ಟು ಮೂರ್ಖತನ ಬಂದಿರಲಿಲ್ಲಾದ್ದರಿಂದ ನಾನು ಅವಳನ್ನ ತಟ್ಟುತ್ತ. "ನಿನ್ನ ಬಿಟ್ಟು ನಾನೆಲ್ಲಿ ಓಡಿಹೋಗಲೇ ಮಹಾರಾಯಳೀ! ನಿನ್ನ ಸೆರಗಿನ ಮರೆಯ ಹಣತೆ ನಾನು. ಏನು ಏನಾಯಿತು? ಒಮ್ಮೆಲೇ ನಿನಗೆ ಯಾಕೀ ಹೆದರಿಕೆ?" ಎಂದು ಕೇಳಿದೆ.

ಅವಳು ಇನ್ನೂ ಉಸಿರು ಸೇದಿಕೊಳ್ಳುತ್ತ. "ನನಗೆ ಹೆದರಿಕೆ ಆಗ್ತಾ ಇದೆ. ನನ್ನ ಮೈಯೊಳಗಿಂದ ಏನನ್ನೋ ಯಾರೋ ಸೆಳೆದುಕೊಳ್ಳುತ್ತಾ ಇದ್ದಾರೆ ಅನಿಸುತ್ತಾ ಇದೆ." ಎಂದು ಕೈಯನ್ನು ಇನ್ನಷ್ಟು ಬಿಗಿಯಾಗಿ ಹಿಡಿದುಕೊಂಡಳು.

ಅವಳನ್ನು ಹೇಗೋ ಸಮಾಧಾನಪಡಿಸಿ ಮಲಗಿಸಿ ನಾಟಕದ ಮುಂದುವರಿಕೆಗಾಗಿ ಕಣ್ತೆರೆದು ಕಾದೆ. ಕೆಲ ಕಾಲ ಏನೂ ಆಗಲಿಲ್ಲ. ನನ್ನ ಹೆಂಡತಿ ಸ್ವಲ್ಪ ಹೊತ್ತಿನಲ್ಲಿ ತನ್ನ ವಿಚಿತ್ರ ಭಂಗಿಗೆ ತಿರುಗಿ ವಿಚಿತ್ರ ತಾಳದಲ್ಲಿ ಉಸಿರಾಡ ತೊಡಗಿದ ತತ್‌ಕ್ಷಣ ಕೋಣೆಯ ಮೂಲೆಯಲ್ಲಿ ನನ್ನ ತಥಾಕಥಿತ ತಂದೆಯ ರೇಖಾಸ್ವರೂಪ ಪ್ರತ್ಯಕ್ಷವಾಯಿತು. ಅದು ತನ್ನ ಗಂಭೀರ ಗುಹಾಧ್ವನಿಯಿಂದ ಪ್ರಾರಂಭಿಸಿತು.

"ಹೆದರಬೇಡಾಂತ ಹೇಳು ನನ್ನ ಸೊಸೆಗೆ. ಅವಳನ್ನು ನಾನು ಮೀಡಿಯಂ ಆಗಿ ಬಳಸುತ್ತಿದ್ದೇನೆ. ಅವಳ ಮೈಯಲ್ಲಿ ಮೃತಾತ್ಮರನ್ನು ಪ್ರತ್ಯಕ್ಷ ಮಾಡುವದಕ್ಕೆ ಬೇಕಾದ ಎಕ್ಟೋಪ್ಲಾಸಂ ದ್ರವ್ಯ ಇದೆ. ಅದನ್ನು ನಾನು ಸೆಳೆದುಕೊಂಡು ನಿನ್ನ ಮುಂದೆ ಪ್ರತ್ಯಕ್ಷ ಆಗುತ್ತಿದ್ದೇನೆ. ಅವಳು ಈಗ ಮಲಗಿದ್ದಾಳಲ್ಲ, ಆ ಭಂಗಿಯಲ್ಲಿ ಮಾತ್ರ ಅವಳಿಗೆ ಆವೇಶ ಸ್ಥಿತಿ- ಅಂದರೆ **trancelike state** ಬರುತ್ತೆ. ಆವಾಗ ಮಾತ್ರ ಅವಳ ಶರೀರದಿಂದ **ectopasm** ದ್ರವ್ಯ ಸೆಳೆದುಕೊಳ್ಳೋದು ಸಾಧ್ಯ. ಆಗ ಮಾತ್ರ ನಾವು ಪರಲೋಕಿಗಳು ಪ್ರತ್ಯಕ್ಷಾವಸ್ಥೆಗೆ ಬರಬಲ್ಲೆವು. ಅವಳ ಶರೀರದಿಂದ ಎಕ್ಟೋಪ್ಲಾಸಂ ನಾನು ಸೆಳೆಯೋದರಿಂದ ಅವಳಿಗೆ ತನ್ನ ಮೈಯಿಂದ ಏನನ್ನೋ ಸೆಳೆಯೋ ಹಾಗೆ ಅನುಭವ ಆಗುತ್ತೆ. ಅವಳಿಗೇನೂ ಆಗಿಲ್ಲ. ಆಗೋದಿಲ್ಲ."

ನಾನು ಸ್ವಲ್ಪ ಆಶ್ವಾಸಿತನಾದೆ.

"ಹೇಳೇ ಇವನಿಗೆ. ನಾನು ಇವನಪ್ಪ ಹೌದೋ ಅಲ್ಲವೋ ಅಂತ?" ಎಂದು ಸ್ವಲ್ಪ ಜಬರ್‌ದಸ್ತ್ ಸ್ವರದಲ್ಲಿ ಆ ಆಕೃತಿ ಆಜ್ಞಾಪಿಸಿತು. ನೋಡನೋಡುತ್ತ ಮೂಡಿತು ಇನ್ನೊಂದಾಕೃತಿ. ಹೌದು. ನನ್ನ ತಾಯಿ. "ಹೌದಪ್ಪಾ, ಇವರೇ ನಿನ್ನ ತಂದೆ. ನಿನಗೆ ಐದಾಗುವಾಗ ನಮ್ಮ ಕೈಬಿಟ್ಟು ಹೋಗಿಬಿಟ್ಟವರು." ಎಂದು ತಾಯಿ ಅಂತರ್ಧಾನವಾದರು.

"ಈಗಾದರೂ ಮನವರಿಕೆ ಆಯಿತಲ್ಲ? ಅವಳು ಇಷ್ಟು ಬೇಗ ಅಂತರ್ಧಾನ ಆದದ್ದಕ್ಕೆ


The best choice
KEONICS
TELEVISIONS
SHYAM
DISH ANTENNA
& Communication Systems
AUTHORISED MAIN DEALERS:
TV CORNER
P.B.ROAD HOSUR, HUBLI-21. PHONE: 72697
AK MPB

ಬೇಜಾರು ಪಡಬೇಡ. ನಾವಿಬ್ಬರೂ ಏಕ್ಸ್ಪ್ಲೋಪ್ಲಾಸಂ ಸೆಳೆದುಕೊಳ್ಳುತ್ತಾ ಬಹಳ ಹೊತ್ತು ಇದ್ದರೆ ನನ್ನ ಸೊಸೆಗೆ ಹೆಚ್ಚು ತ್ರಾಸಾದೀತು. ಅದಕ್ಕೆ ಇವಳನ್ನ ಬೇಗ ಸಾಗಹಾಕಿದೆ,?" ನನ್ನ ತಂದೆ ವಿಶದೀಕರಿಸಿದರು.

"ಅದೇನು ನೀವು ಮತ್ತೂ ಮತ್ತೂ ನನ್ನ ಹೆಂಡತೀನ ನನ್ನ ಸೊಸೆ, ನನ್ನ ಸೊಸೆ,' ಅಂತ ಹೇಳ್ತಿರೋದು ?" ಅಂತ ಈರ್ಷೆಯಿಂದ ಪ್ರಶ್ನಿಸಿದೆ.

ಅವರು ಇನ್ನೂ ಗಂಭೀರ ಧ್ವನಿಯಿಂದ ಗಹಗಹಿಸಿದರು. "ನಿನ್ನಮ್ಮ ಆಗಿದ್ದರೆ 'ನಿನ್ನ ಹೆಂಡತಿ, ನಿನ್ನ ಹೆಂಡತಿ ಅಂತನ್ನೋಳು ದೂರು ಹೇಳಬೇಕಾದಾಗ, ನಾನು ನನ್ನ ಸೊಸೆ ಅನ್ನೋದಿಕ್ಕೆ ಕಾರಣ ಅಂದರೆ, ಅವಳಿಂದಾಗಿಯೆ ನಮಗೆ ಪಿಂಡೋದಕ ತಿಲೋದಕ ಸಿಗೋದು. ಅವಳ ಒತ್ತಾಯಕ್ಕಲ್ಲವೇ ನೀನು ಶ್ರಾದ್ಧ ಪಕ್ಷ ಮಾಡೋದು? ನೀನು ಶುದ್ಧ ನಾಸ್ತಿಕ. ಅವಳಿರೋದ್ರಿಂದ ನೀನು ಬೆಳಗ್ಗೆ ಇಡ್ಲಿ ತಿಂದಾದರೂ ನಮಗೆ ಮೂರು ಪಿಂಡ ಕಾಣಿಸ್ತೀಯ !"

ನಾನು ಬಿಟ್ಟುಕೊಡಲಿಲ್ಲ. "ಹೌದು. The whole thing looks meaningless to me !" ಹೇಳಿದೆ. ರೋಷ ಬಂದಾಗ ನಾನು ಇಂಗ್ಲೀಷಿಗೆ ಶರಣು ಹೋಗುತ್ತೇನೆ.

ಅವರೂ ತಮ್ಮ ಅನಾಮಧೇಯ ಭಾಷೆ ಬಿಟ್ಟು ಇಂಗ್ಲೀಷಿನಲ್ಲೇ ಕಣ್ಣುಗಳನ್ನು ರೋಷ ಕಷಾಯಿತ ಮಾಡಿಕೊಂಡು ಹೇಳಿದರು.

"You are mean ಅದಕ್ಕೇ ನಿನಗೆ ಎಲ್ಲಾ meaningless ಆಗಿ ಕಾಣುತ್ತೆ. your wife is a little magnanimous ನನ್ನ ಹಾಗೆ. ಅದಕ್ಕೇ ಅವಳನ್ನ ನನ್ನ ಸೊಸೆ ಅಂತ ನಾನು ಅನ್ನೋದು."

ನಾನು ಸ್ವಲ್ಪ ನರಂ ಆಗಿ, "ಅಲ್ಲಪ್ಪಾ, ನಿಮಗೆ ಹೆಚ್ಚು ಇಂಗ್ಲೀಷ್ ಬರ್ತಿದ್ದಿಲ್ಲಾಂತ ಅಮ್ಮ ಹೇಳಿದ್ರು. ನೀವು ಇಷ್ಟು ಸಲೀಸಾಗಿ ಇಂಗ್ಲೀಷ್ ಮಾತಾಡೋದು ನೋಡಿ ಆಶ್ಚರ್ಯವಾಗುತ್ತೆ," ಎಂದೆ.

"ಸತ್ತ ಮೇಲೆ ಆತ್ಮಗಳಿಗೆ ಎಲ್ಲಾ ಭಾಷೆಗಳೂ ಬರ್ತಾವೆ," ಎಂದರವರು ನಮ್ಮ ಹೆಡ್ಮಾಸ್ಟ್ರು ತೀರ್ಮಾನ ಕೊಡುವಾಗ ಬಳಸುತ್ತಿದ್ದ ದನಿಯಲ್ಲಿ, ಅದಕ್ಕೆ ಅಪೀಲಿಲ್ಲ- ಅದು final ಅನ್ನೋದನ್ನ ದ್ಯೋತಿಸುವ ಧ್ವನಿ ಅದು.

ನನಗೆ ಬಾಯಲ್ಲಿ ನೀರೂರಿತು. "ಹಾಗಾದರೆ ನನಗೆ ಹರಪ್ಪಾ ಲಿಪಿಯ ಭಾಷೆ ಹೇಳಿಕೊಡ್ತೀರಾ ? ನನ್ನ ಕೀರ್ತಿ ಇತಿಹಾಸದಲ್ಲಿ ಅಜರಾಮರ ಆಗುತ್ತೆ. ಆ ಭಾಷೆಯ ರಹಸ್ಯ ಬಿಡಿಸಲಾರದೆ ಇತಿಹಾಸದವರು ತಲೆ ಚಚ್ಚಿಕೊಳ್ಳುತಾ ಇದ್ದಾರೆ. ಬೇಕಾದರೆ ರಹಸ್ಯ ಬಿಡಿಸಿದ್ದಕ್ಕೆ ನಿಮಗೂ ಕ್ರೆಡಿಟ್ ಕೊಡ್ತೇನೆ. ಅಬಗ್ಗೆ ಬರೆದಾಗ."

"ಹೋಗು ಹೋಗು!" ಎಂದರವರು. "ಒಂದು ಬಡ ಸ್ತೋತ್ರ ಕಲಿಸಿದರೆ ಸರಿಯಾಗಿ ಹೇಳಲಿಲ್ಲ ನೀನು, ಈಗ ಸಿಂಧೂ ಕಣಿವೆ ಭಾಷೆ ಕಲೀತಾನಂತೆ ! ಅದನ್ನ ಕಲೀ ಬೇಕಾದರೆ ನನ್ನ ಕೈಲಿ ನಿನ್ನ ಬೆನ್ನಿನ ಚರ್ಮ ಒಂದಂಗಲ ಉಳೀಲಿಕ್ಕಿಲ್ಲ!"

ನಾನು ಹರಪ್ಪಾ ಭಾಷೆ ಕಲಿಯೋ ವಿಚಾರ ಬಿಸಿ ಕೆಂಡವನ್ನ ಕೈಬಿಟ್ಟ ಹಾಗೆ ಕೈಬಿಟ್ಟೆ. ಸ್ತೋತ್ರ ಕಲಿಯೋಕೆ ತಿಂದಪೆಟ್ಟು ನೆನಪಾಗಿತ್ತು. ಇದ್ದವರು ಹೊಡೆದದ್ದೇ ಅರವತ್ತೆಂಟು ವರ್ಷ ನೆನಪು ಉಳಿಸಿದ್ದರೆ ಸತ್ತವರ ಪೆಟ್ಟು ಎಷ್ಟು ಜನ್ಮ ನೆನಪಿರಲಿಕ್ಕಿಲ್ಲ.



ತಂಗಳು ಪಂಗಳು ಇದ್ದರೆ ಏನೂ ಬಿಸಾಡಬೇಡ ಕಣೆ! ಎಂಟು ಗಂಟೆ ಆದ್ಮೇಲೆ ಯಾರಾದರೂ ನೆಂಟರು ಬಂದಾರು!

"ಅದರ ಆಶೆ ಬಿಡು. ಈವೊತ್ತು ವಾಯಸಬಲಿ ಇಟ್ಟಿದ್ದನ್ನ ಕಾಗೆ ಮುಟ್ಟದೆ ಬಿಟ್ಟದ್ದು ಯಾಕೆ, ಅಂತ ಯೋಚಿಸಿದ್ದೀಯಾ ?" ಎಂದು ನಮ್ಮಪ್ಪನ ಆತ್ಮ ಒಂದನೇ ಅಂಕಣಕ್ಕೆ ವಾಪಸ್ಸು ಬಂತು.

"ಯೋಚಿಸಿ ಏನು ಫಲ ? ಇಂದಿನ ನಮ್ಮ ಕಲ್ಯಾಣ ರಾಜ್ಯದಲ್ಲಿ ಕಾಗೆಗಳಿಗೆ ಹಸಿವಿನಿಂದ ಬಿಡುಗಡೆ ಸಿಕ್ಕಿರಬಹುದು. ಅಥವಾ ಬ್ರಾಹ್ಮಣರ ಈ ನಿರಾಮಿಷ ಅನ್ನ ಅವುಗಳಿಗೆ ಸೇರುತ್ತಿರಲಿಕ್ಕಿಲ್ಲ ಈಗ."

"ಕಾಗೆಗಳಿಗಿಟ್ಟ ಅನ್ನವನ್ನ ಅವು ಮುಟ್ಟದಿದ್ದರೆ ಅದರ ಅರ್ಥ ಏನು ಅಂತ ಗೊತ್ತೇ ಇಲ್ಲವೇ ನಿನಗೆ ?"

"ನನಗೆ ಗೊತ್ತಿಲ್ಲದ್ದು ಪ್ರಪಂಚದಲ್ಲಿ ಬಹಳ ಇದೆ ಅಪ್ಪಾ."

"ನೀನು ಉಡಾಫೆ ಮತ್ತು ಮೂರ್ಖ ಎರಡೂ ಆಗಿದ್ದೀಯಾ ! ವಾಯಸ ಬಲಿಯನ್ನ ವಾಯಸಗಳು ಮುಟ್ಟದೆ ಇದ್ದರೆ ಪಿತೃಗಳಿಗೆ ತೃಪ್ತಿ ಆಗಲಿಲ್ಲ ಅಂತ ಅರ್ಥ."

"ಹೌದೆ ? ನನಗೆ ಹೇಗೆ ಗೊತ್ತು ? ಪಿತೃ ಪ್ರತಿನಿಧಿಗಳಾದ ಕೂರ್ಚಮುಖಿ ಬ್ರಾಹ್ಮಣರಿಗೆ ಕೈಮುಗಿದು 'ತೃಪ್ತಾಃ ಸ್ಥಃ' ಅನ್ನು-ಅಂತ ಪುರೋಹಿತರು ಹೇಳಿದರು. ನಾ ಹೇಳಿದೆ. ಒಡನೇ ಅವರು ಕೂರ್ಚಮುಖಿ ಬ್ರಾಹ್ಮಣರ ಪರವಾಗಿ 'ತೃಪ್ತಾಃ ಸ್ಮಃ' ಅಂದರು. ಸೊ. ಅವರಿಗೆ ತೃಪ್ತಿ ಆಯಿತು ಅಂತ ನಾನು ಅಸ್ಯೂಮ್ ಮಾಡಿದೆ."

"ನಿನ್ನಂಥಾ ಮೂರ್ಖರ ಹತ್ತಿರ ವಾದ ಮಾಡೋದು ವ್ಯರ್ಥ. ಕೇಳು, ನಮಗೆ ತೃಪ್ತಿ ಆಗಲಿಲ್ಲ. ನೀನೀಗ ೬೫ ವರ್ಷದಿಂದ ನನಗೆ ಶ್ರಾದ್ಧ ಮಾಡ್ತಾ ಇದೀಯ. ಎಂದಾದರೂ ಬಲಿಯನ್ನ ಕಾಗೆ ಮುಟ್ಟದೆ ಇದ್ದದ್ದುಂಟೇ ?"


"ಇಲ್ಲ." ನಾನು ಒಪ್ಪಿದೆ. "ಆದರೆ ನೀವು ಮೋಕ್ಷಕ್ಕೆ ಹೋಗಿರಬಹುದು. ಆದ್ದರಿಂದ ನಿಮಗಿನ್ನು ಶ್ರಾದ್ಧದ ಅವಶ್ಯಕತೆ ಇಲ್ಲದೆ ಹೋಗಿರಬಹುದು ಅಂತ ನಾನು ಯಾಕೆ ತಿಳಿದುಕೊಳ್ಳಬಾರದು ?"

"ತಿಳಕೊಳ್ಳದೆ ಏನು ? ಮನುಷ್ಯ ತನಗೆ ಇಷ್ಟಬಂದದ್ದನ್ನೇ ತಿಳಕೋತಾನೆ. ನಿನಗೆ ಇದೆಲ್ಲ ಬೇಡಾಗಿದೆ. ನನ್ನ ಸೊಸೆ ಒತ್ತಾಯಕ್ಕೆ ಸುಂದಾಯ ಮಾಡ್ತಿದೀಯಾ."

"ರೀಯಲಿ, ಫಾದರ್ ನನಗೆ ಇದೊಂದೂ ಅರ್ಥವಾಗಲ್ಲ. ನೋಡಿ ಸತ್ತೋರು ಸ್ವರ್ಗಕ್ಕೆ ಹೋಗ್ತಾರೆ ಅನ್ನೋದು ಸ್ವರ್ಗದಲ್ಲಿದ್ದೋರಿಗೆ ಹಸಿವೆ ನೀರಡಿಕೆ ಇಲ್ಲಾಂತಲೂ ಹೇಳ್ತಾರೆ. ಅವರಿಗೆ ಶ್ರಾದ್ಧ, ತರ್ಪಣದಿಂದ ಏನು ಪ್ರಯೋಜನ ? ಸತ್ತಕೂಡ್ಲೆ ತಾವು ಮಾಡಿದ ಪುಣ್ಯ ಪಾಪಕ್ಕೆ ಸರಿಯಾಗಿ ಬೇರೆ ಜನ್ಮಗಳಿಗೆ ಹೋಗ್ತಾರೆ ಅಂತ ಹೇಳ್ತಾರೆ. ಹೀಗೆ ಎಲ್ಲೆಲ್ಲೋ ಇರೋವರಿಗೆ ನಾವಿಲ್ಲಿ ಶ್ರಾದ್ಧ ಮಾಡಿದರೆ, ತರ್ಪಣ ಬಿಟ್ಟರೆ, ಹೇಗೆ ಸಿಗುತ್ತೆ ? ನೀವು ಬೇರೆ ಜನ್ಮದಲ್ಲಿದ್ದರೆ ನಿಮ್ಮ ಆತ್ಮ ಆ ಶರೀರದಲ್ಲಿರುತ್ತೆ. ಅದರಲ್ಲಿ ಇರೋವರು ನನ್ನ ಶ್ರಾದ್ಧಾನ್ನ ತಿನ್ನೋಕೆ ಕಾಗೇ ರೂಪದಲ್ಲಿ ಹೇಗೆ ಬರ್ತೀರಿ ಅನ್ನೊದೂ ತಿಳಿಯಲ್ಲ. ನಿಮ್ಮ ಆತ್ಮ ಏಕಕಾಲದಲ್ಲಿ ಅಲ್ಲೀನೂ ಇಲ್ಲೀನೂ ಇರೋಕೆ ಹೇಗೆ ಸಾಧ್ಯ. ಇದು ಎಲ್ಲಾ ಭೌತಿಕ ನಿಯಮಗಳಿಗೆ ವಿರುದ್ಧ."

"ನೀನೊಬ್ಬ ಆಲೋಚನೆ ಮಾಡಿ ತಲೆಕೆಟ್ಟ ಮೂರ್ಖ. ನಿಮ್ಮ ಭೌತಿಕ ನಿಯಮಗಳೆಲ್ಲ ನಿಮ್ಮ ಭೌತಿಕ ಲೋಕಕ್ಕೆ.
ನಮ್ಮ ಲೋಕದಲ್ಲಿ ಅವು apply ಆಗಲ್ಲ. ನಾವು ಏಕಕಾಲದಲ್ಲಿ ಅಲ್ಲಿಯೂ ಇಲ್ಲಿಯೂ ಎಲ್ಲಿಯೂ ಇದ್ದೇವು. ಎಂಟು ಮಕ್ಕಳು ಬೇರೆ ಬೇರೆ ಕಡೆ ಶ್ರಾದ್ಧ ಮಾಡಿದರೆ ಎಲ್ಲ ಕಡೆ ಯುಗಪತ್ ಆಗಿ ಸ್ವೀಕರಿಸಲಿಕ್ಕೂ ನಮಗೆ ಸಾಧ್ಯ ಇದೆ. ನಾವು ಹಸಿವಿಲ್ಲದಿದ್ದರೂ ಉಂಡೇವು. ನೀರಡಿಕೆ ಇಲ್ಲದಿದ್ದರೂ ಕುಡಿದೇವು."

"ಹೌದು ಹೌದು, ಅದಾದರೆ ನಾನೂ ಮಾಡಬಲ್ಲೆ. ಹಸಿವಿಲ್ಲದಿದ್ದರೂ ಪಕೋಡಾ



ಯೋಚನೆ ಮಾಡ್ಬೇಡ ರಾಮಣ್ಣ!
ತಿನ್ನೋದಿಕ್ಕೇನೂ ಪಿರ್‍ಬಾಗಿಲ್ಲ,
ವಾಸನೆ ಮಾತ್ರ ಡಾಗಿರುತ್ತೆ!

ಸಿಕ್ಕಿದರೆ ತಿಂತೇನೆ, ಕಾಫಿ ಸಿಕ್ಕಿದರೆ ನೀರಡಿಕೆ ಇಲ್ಲದೆನೇ ಕುಡೀತೇನೆ" ಎಂದೆ ನಾನು.

"ಏ ನಿನ್ನ ಲಾಂಗೂಲ ಕತ್ತರಿಸಿ ಬಿಟ್ಟೇನು. ನಿನಗಿಂತ ನನ್ನ ಸೊಸೆಗೆ ಹೆಚ್ಚು ಜ್ಞಾನ ಇದೆ. ಯಾಕಂದರೆ ನಿನ್ನ ಹಾಗೆ ಅವಳು ಓದೋದಿಲ್ಲ. ಆಲೋಚನೆ ಮಾಡೋದಿಲ್ಲ. ಆಲೋಚನೆ ಜ್ಞಾನದ ಶತ್ರು, ತಿಳೀತೆ?"

ನಾನು ತಲೆ ಆಡಿಸಿದೆ. ನಿಜ ಅನಿಸಿತು.

"ನೋಡು, ಹೀಗೇ ವಾದಿಸ್ತಾ ಹೋದರೆ ಬೆಳಗಾಗುತ್ತೆ. ನನ್ನ ಸೊಸೆಗೆ, ಪಾಪ, ಬಹಳ ಸುಸ್ತಾಗುತ್ತೆ. ಎಕ್ಟೋಪ್ಲಾಸಂ ಲೆವೆಲ್ ಬಹಳ ಕಡಿಮೆಯಾಗೋದು ಒಳ್ಳೇದಲ್ಲ."

"ಹೌದು, ಹೇಳಿ. ನಿಮಗೆ ಯಾಕೆ ತೃಪ್ತಿ ಆಗಲಿಲ್ಲ?"

"ನೀ ದಿನಾ ಪೇಪರ್ ಓದ್ತೀಯಾ? ಇಂಗ್ಲೀಷ? ಕನ್ನಡ? ಹಿಂದಿ? ಮರಾಠಿ?"

"ಓದದೆ ಇದ್ದರೆ ಹ್ಯಾಗೆ? ಪೇಪರ್ ಓದದೆ ಇದ್ದರೆ ಪ್ರಪಂಚ ಮುಳುಗಿ ಹೋದರೂ ತಿಳಿಯಲ್ಲ."

"ಹಾಂ! ನಾನಂತೇನೇ, ಪೇಪರ್ ಹೊರಡದೇನೇ ಇದ್ದರೆ ಪ್ರಪಂಚ ಮುಳುಗೋದೂ ಮುಂದೆ ಬಿದ್ದೀತು, ಅಂತ. ಯಾವ ಮಂತ್ರೀನ ಬೇಕಾದರೂ ಕೇಳು. .. ಈಗ ಅದಲ್ಲ ಕೇಳೋದು- ಪೇಪರಿನಲ್ಲಿ ನೀನು ಏನು ಓದ್ತೀಯಾ?"

"ಸುದ್ದಿ, ಲಂಚ, ವಂಚನೆ, ಅಪಘಾತ, ಸಿನಿಮ ತಾರೆಗಳ ಡೈವೋರ್ಸ್, ಖೂನಿ, ಪಕ್ಷಾಂತರ, ಭಯೋತ್ಪಾದನೆ, ಸ್ವಲ್ಪ ಸ್ವಲ್ಪ ಮಂತ್ರಿಗಳ ಭಾಷಣ .."

"ಇಷ್ಟೇನೇ? ಜಾಹಿರಾತು ಓದಲ್ಲವೆ?"

"ಓದೋದುಂಟು. ಗಂಡ ಹೆಂಡ್ತಿ ಡೈವೋರ್ಸ್ ನೋಟೀಸು. ಯಾಕಂದ್ರೆ ಅಲ್ಲಿ ಹೆಂಡ್ತೀನ ಗಂಡ ಹೊಡದಾ ಅಂತ ಹೆಂಡತೀ ಆರೋಪ ಇರುತ್ತೆ. ನನಗೆ ಅಂಥಾ ಧೈರ್ಯ ಯಾವಾಗಲೂ ಬರಲಿಲ್ಲ ಆದ್ರಿಂದ ಒಂದು **vicarious pleasure**- ಕನ್ನಡದಲ್ಲಿ ಏನನ್ನೋಣ— ಪರಾಯತ್ತ ಸಂತೋಷ ಆಗುತ್ತೆ ಅದನ್ನ ಓದಿದಾಗ— ಅಂದಹಾಗೆ ಅಪ್ಪಾ, ನಿಮ್ಮ ಆ ಲೋಕದಲ್ಲಿ ಪೇಪರು ಹೊರಡುತ್ತಾ? ಇಲ್ಲೀ ಪೇಪರಂತೂ ಬರೋದು ಸಾಧ್ಯ ಇಲ್ಲ ತಾನೆ?"

"ನಾವೇನೂ ಪೇಪರ್ ಹೊರಡಿಸಲ್ಲ, ಅಲ್ಲಿ ಸುದ್ದಿಗಳೇ ಆಗೋದಿಲ್ಲ. ಆದರೆ ಈ ಲೋಕದ ಪೇಪರುಗಳನ್ನ ಕುತೂಹಲದಿಂದ ಓದ್ತೇವೆ."

"ಅವು ಹೇಗೆ ಸಿಗ್ತಾವೆ? ಅಲ್ಲಿಯೂ ಪೇಪರ್ ಏಜನ್ಸಿಗಳು ಉಂಟೆ?"

"ಪೇಪರ್ ಏಜನ್ಸಿ ಏನೂ ಇಲ್ಲ. ಆದರೆ ಪ್ರತಿಯೊಂದು ಪೇಪರೂ ಓದ್ತೇವೆ. ನೀವು ಈಗ ಫೋಟೊ ಟ್ರಾನ್ಸ್‌ಮಿಶನ್ ಓ ಏನೋ ಅಂತ ಹೊಸ ಪ್ರೋಸೆಸ್ ಮಾಡಿಕೊಂಡಿದ್ದೀರಲ್ಲ. ಅದಕ್ಕಿಂತ ಎಷ್ಟೋ ಮುಂಚೆ ನಮಗೆ ಪೇಪರುಗಳ **pepto-plasmic tranomission**ನಲ್ಲಿ ನಿಮ್ಮ ಲೋಕದ ಪೇಪರುಗಳು ಬರ್ತಾ ಇದ್ದವು. ಪೇಪರು ಪ್ರಿಂಟಾದ ಕೂಡ್ಲೆ ನಮಗೆ ಅವು ಇದ್ದಕ್ಕಿದ್ದ ಹಾಗೆ ಓದೋಕೆ ಸಿಗ್ತಾವೆ."

"**Pepto-plasmic**- ಅಂದರೆ?"

Ectoplasmicನ ಹಾಗೇನೇ ಇನ್ನೊಂದು ಪ್ರೋಸೆಸ್. ಇದು ಜೀವಗಳ ಪ್ರತ್ಯಕ್ಷೀಕರಣದ ಮಾಧ್ಯಮ. ಅದು ಜಡವಸ್ತುಗಳ ಪ್ರೇಷಣ ಮಾಧ್ಯಮ."

ನಾನು ದಂಗಾದೆ

"ಇಲ್ಲಿ ಕೇಳು. ನನ್ನ ಸೊಸೆಗೆ ಆಗ್ಲೇ ತ್ರಾಸಾಗ್ತಾ ಇದೆ. ಬೇಗನೇ ಮುಗಿಸಬೇಕಾಗಿದೆ. ನಿನ್ನ ಮಂದಬುದ್ಧಿಗೆ ಯಾವುದೂ ತಟ್ಟನೆ ಹೊಳೆಯಲ್ಲ. ನಾನೇ ಹೇಳ್ತೀನೆ. ನೋಡು. ಈಗ ಪ್ರತಿಯೊಂದು ಪೇಪರಿನಲ್ಲಿ ವೈಕುಂಠ ಸಮಾರಾಧನೆ, ಕೈಲಾಸ ಸಮಾರಾಧನೆ ಅಂತ ಮನುಷ್ಯರನ್ನು ಕುರಿತು ಹೊರಡಿಸಿದ ನೋಟೀಸುಗಳಲ್ಲದೆ ಪಿತೃಗಳನ್ನು ಕುರಿತು ಜಾಹೀರಾತುಗಳು ಬರ್ತಾ ಇವೆ."

ಹೌದೌದು. ನಮ್ಮ ಪೂಜ್ಯತೀರ್ಥರೂಪರು ಇಹಲೋಕ ತ್ಯಜಿಸಿ ಇಂದಿಗೆ ಹದಿನೈದು ವರ್ಷಗಳಾಯಿತು ಪೂಜ್ಯರೆ, ನಿಮ್ಮ ನೆನಪು ನಮ್ಮೆಲ್ಲರ ಮನಸ್ಸಿನಲ್ಲಿ ಹಸಿರಾಗಿಯೇ ಇದೆ. ನಮ್ಮ ಕಣ್ಣುಗಳು ಹಸಿಯಾಗಿಯೇ ಇವೆ... ನೀವು ಬಿಟ್ಟು ಹೋದ ಬ್ಯಾಂಕ ಬ್ಯಾಲನ್ಸ್ ಮತ್ತು ಸೆಕ್ಯುರಿಟಿ, ಡಿಬೆಂಚರ್, ಸ್ಟಾಕುಗಳು ಇನ್ನೂ ಬಡ್ಡಿ ಡಿವಿಡೆಂಡ್ ತರುತ್ತಲೇ ಇವೆ. ಇತ್ಯಾದಿಯಾಗಿ."

"ಛೆ! ಮತ್ತೆ ನಿನ್ನ ಲಾಂಗೂಲ ಬಿಚ್ಚಬೇಡ. ಕಡೇ ವಾಕ್ಯದಂಥಾದ್ದನ್ನು ಯಾರೂ ಜಾಹಿರಾತಿನಲ್ಲಿ ಕೊಟ್ಟದ್ದು ನನ್ನ **ectoplasmic** ಕಣ್ಣುಗಳಿಗೆ ಬಿದ್ದಿಲ್ಲ... ಈಗ ಕೇಳುತ್ತೇನೆ. ನೀನೆಂದಾದರೂ ನನ್ನ ಸಲುವಾಗಿ ಅಥವಾ ತಾನು ಉಪವಾಸ ಬಿದ್ದು ನಿನ್ನ ಸಾಕಿದ ನಿನ್ನಮ್ಮನಿಗಾಗಿ ಇಂಥಾ ಜಾಹಿರಾತು ಕೊಟ್ಟಿದ್ದಿಯಾ?"

"ಆದರೆ ಅಪ್ಪಾ ಅದರಿಂದ ಏನು ಪ್ರಯೋಜನ? ಪೇಪರಿನವರು ದುಡ್ಡು ಸೆಳೆಯೋದಿಕ್ಕೆ ಹುಟ್ಟು ಹಾಕಿದ ಮರಳು ಫ್ಯಾಶನ್ ಅದು. ಅದರಿಂದ ನಿಮಗೇನು ಆಗತಕ್ಕದ್ದಿದೆ? ನಾನು ಪ್ರಶ್ನಿಸಿದೆ.

"ಪ್ರಯೋಜನ, ಪ್ರಯೋಜನ, ಪ್ರಯೋಜನ! ನಿನ್ನನ್ನ ಹುಟ್ಟಿಸಿದ್ದರಿಂದ ನನಗೇನು ಪ್ರಯೋಜನ ಆಯ್ತು ಹೇಳು?"

ನಂಗೊತ್ತಿಲ್ಲ. ನಂಗೇನು ಪ್ರಯೋಜನ ಆಯ್ತೂ ಅಂತಲೂ ಗೊತ್ತಿಲ್ಲ. ಜಗತ್ತಿಗೇನು ಲಾಭ ಆಯ್ತೂ ಅಂತಲೂ ತಿಳಿಯೆ"

"ಇಲ್ಲಿ ಕೇಳು. ಯಾವುದೂ ಏನೂ ಪ್ರಯೋಜನ ಇಲ್ಲ ಅನ್ನೋ ಸಿನಿಕ್ ನೀನು. ಆದರೆ ನೋಡು ನಿಮ್ಮ ಲೋಕದಲ್ಲಿ ಇಂಥಾ ಜಾಹಿರಾತು ಯಾರ ಸಲುವಾಗಿ ಬರುತ್ತೋ ಅವರ ಪ್ರೆಸ್ಟಿಜ್ಜು, ಪ್ರತಿಷ್ಠೆ, ಗೌರವ ಈ ಆತ್ಮ ಲೋಕದಲ್ಲಿ ಹೆಚ್ಚುತ್ತೆ, ಎಲ್ಲ ಆತ್ಮಗಳೂ ನೋಡಿ. ಭೇಶ್ ನಿಮ್ಮಕ್ಕಳು ನಿಮ್ಮನ್ನ ಇನ್ನೂ ನೆನಸಿಕೊಳ್ತಾ ಇದ್ದಾರೆ. ಕಂಗ್ರಾಟ್ಸ್. ನೀವು ಸತ್ತದ್ದು ಸಾರ್ಥಕವಾಯ್ತು ಅಂತ ಅಭಿನಂದಿಸುತ್ತಾರೆ. ಇಲ್ಲದಿದ್ದರೆ ನೋಡಿ ಪಾಪ, ಇವರ ಮಕ್ಕಳಿಗೆ ಇವರ ನೆನಪೇ ಇಲ್ಲ ಅಂತ ವ್ಯಂಗ್ಯ ಸಹಾನುಭೂತಿ ವ್ಯಕ್ತಪಡಿಸ್ತಾರೆ. ನೋಡು ನಿನ್ನ ಹೆಂಡತಿಗೆ ಎಚ್ಚರಾಗೋ ಲಕ್ಷಣ ಕಾಣಿಸ್ತಾ ಇದೆ. ಒಂದೇ ಮಾತು ಹೇಳ್ತೀನೆ. ಮುಂದೆ ಪ್ರತಿ ಶ್ರಾದ್ಧ ದಿನ ಪೇಪರಿನಲ್ಲಿ ನನ್ನ ಸ್ಮರಣೆ ಪ್ರಕಟವಾಯಿತೋ ಸೈ. ಇಲ್ಲದಿದ್ದರೆ ವಾಯಸ ಬಲಿ ಕಾಗೆ ಮುಟ್ಟಲ್ಲ. ರಾತ್ರಿ ಬಂದು ಹೀಗೇ ನಿನ್ನ ಸತಾಯಿಸ್ತೀನೆ. ಇದು ಅಲ್ಟಿಮೇಟಮ್-"

ಕಡೇ ಅಕ್ಷರ ಉಚ್ಚರಿಸುವ ಮೊದಲೇ ನನ್ನ ಹೆಂಡತಿ ಹೊರಳಿ ನನಗಾಗಿ ಕೈಯಾಡಿಸಿದಳು. ಆಕೃತಿ ಅಂತರ್ಧಾನವಾಯಿತು. ಇವಳು "ಇದ್ದೀರಾ?" ಅಂದಳು.



(೧)

ಎಣಿಸಿ, ಬಿಡಿಬಿಡಿಸಿ ಹೇಳಬಹುದಾದಷ್ಟು—
ರೆಕ್ಕೆಯಂತೆ
ಜೋಡು ಜೋಡೆಲೆ ಬಿಟ್ಟು,
ಕವಲು ನಾಲ್ಕಾರು ಒಡೆದು, ಮೇಲೆದ್ದು
ನೆಟ್ಟಗೆ ದೇಟು
ದೇಟಿನ ತುದಿಗೆ ಹೂ ಬಿಟ್ಟ ದಿಟ್ಟತನ,
ದಟ್ಟ ಪಕಳೆಗಳು ಸುತ್ತು
ನಟ್ಟ ನಡುವೆ
ಬೀಜಕಣಿಯಾದ ಗುಂಡು—ಕೇಸರ—ಬಂಡು.
ಹಣತೆ ಹಚ್ಚಿಟ್ಟಂತೆ ಸಂತುಷ್ಟಿ.
ಗಾಳಿ ಬೀಸಿದರೆ ತುಸುವೂ ಗಾಸಿಯಾಗದೆ,
ಬಾಗಿ, ಬಳುಕಿ, ಬಾಡಿ
ಉದುರಿ ಹೋಗದೆ—
ಆಡಾಡುತ್ತ ಪಾತರಗಿತ್ತಿ ಬಂದು ಕುಳಿತಾಗ
ನೋಡಿ
ತಲೆಯಾಡಿಸುವದು.
ಬೇಕಿಲ್ಲ ದಿನವೂ ನೀರಿನಾರೈಕೆ,
ವಾಸನೆಯು ಸೋಕಿಲ್ಲ.
ಗಟ್ಟಿ ಬಣ್ಣದ ನಿಂತ ನಿಲವಿನಲಿ
ತಟ್ಟನೆ ಕಣ್ಣು ಸೆಳೆಯುವದು.
ಕವಿಸಮಯದ
ಕುಸುಮಕೋಮಲತನಕೆ ಧಕ್ಕೆ
ಏನು ಹೇಳುತ್ತೀರಿ ನೀವಿದಕ್ಕೆ ?



(೨)

ಗಡ್ಡೆ ಹೌದೊ, ಅಲ್ಲವೊ
ಒತ್ತಾಗಿ ಸುತ್ತ ಹರಡಿರುವ ಬೇರುಗಳ
ಗೇಣುದ್ದ ಜಾಲ.
ಬೇಸಗೆಯಲ್ಲಿ
ಮಣ್ಣಿನೊಳಗಿದ್ದು ಇಲ್ಲದಂತೆ.
ಮೊದಲ ಮಳೆ ಬಿದ್ದೊಡನೆ
ನೆನಹು
ಒಡಮುಂದೆದ್ದು,
ನೆಲದಿಂದಲೇ
ಹಿಡಿಯಷ್ಟು ಹಸಿರುಗರಿ ಬಿಚ್ಚಿ
ನಡುವೆ ಒಂದೆರಡು ಮೊಗ್ಗೆ
ಉದ್ದಗಣೆ ತುದಿಗಿದ್ದು
ಬಿಚ್ಚುವವು
ಬಣ್ಣ ಬಣ್ಣದ ಛತ್ರಿ
ಗಾಳಿಗೋಲಾಡುತ್ತ
ಹಗಲು—ರಾತ್ರಿ.
ಸದ್ದಿಲ್ಲದೆಯೆ
ಚೆಲುವು ಬಾವುಟವೆತ್ತಿ
ನಿತ್ಯ ಗೆಲ್ಲುವುದು
ಜೀವನ ಶ್ರದ್ಧೆ—
ತುಂಬಿ ಬುದ್ಧಿ-ಭಾವದ ಕೊರತೆ.
ಜರ್ಬೆರಾ:
ಅಬ್ಬರವಿಲ್ಲದಪ್ಪಟ ಕವಿತೆ.

ದಗಡೂ ಪರಬನ ಅಶ್ವಮೇಧ



ದಗಡೂ ಪರಬ, ತನ್ನ ಮಿಲ್ಲಿನ ನೌಕರಿ, ಅಣ್ಣನ ದಾದಾಗಿರಿ, ಗೊರಟು ಹಲ್ಲಿನ ಮದುವಣಗಿತ್ತಿ, ತನ್ನ ಸುಡುಗಾಡು ದಿನಚರಿ ಎಲ್ಲವನ್ನೂ ಒಂದೇ ನೆಗೆತದಲ್ಲಿ ಒದ್ದಂತೆ ಅನಿಸಿ ಗಟ್ಟಿಯಾಗಿ ಕುದುರೆಯ ಕತ್ತನ್ನು ಅನಚಿಕೊಂಡ. ಒಂದು ಕ್ಷಣದಲ್ಲಿ ತಾನೇ ಶಿವಾಜಿಯಾಗಿ ರಾಯಗಡದ ಕೋಟೆಯನ್ನು ಹತ್ತುತ್ತಿರುವಂತೆಯೂ ಅವನಿಗೆ ಭ್ರಮೆಯಾಯಿತು. ಕುದುರೆ ರಭಸದಿಂದ ಹೆದ್ದಾರಿಗುಂಟ ಓಡುತ್ತಿತ್ತು. ಆಕ್ಟ್ರಾಯ ನಾಕೆಯನ್ನು ದಾಟಿ, ಸಿಗ್ನಲ್ಲುಗಳನ್ನು ಹಾರಿಸಿ ಕೇವಲ ತನಗೇ ಗೊತ್ತಿದ್ದಂತಿರುವ ಗುರಿಯ ಕಡೆಗೆ.

■ ಜಯಂತ ಕಾಯ್ಕಿಣಿ

ಮಾಲುಂದಿನ ಲಾಲಬಹದ್ದೂರ ಶಾಸ್ತ್ರಿ ರಸ್ತೆಯಿಂದ ಸ್ಟೇಷನ್ನಿನೆಡೆಗೆ ಮೆಲ್ಲಗೆ ಹೊರಳಿದ ಆ ಮದುವೆಯ ಮೆರವಣಿಗೆ ಈಗ ಮುಖ್ಯ ಬಜಾರಿನ ರಸ್ತೆಯಲ್ಲಿ ನಡೆಯತೊಡಗಿತು. ಅತೀ ಮುಂದೆ ಜರತಾರಿ ಜಗದ್ಗುರುಗಳಂತೆ ನಡೆಯುತ್ತಿರುವ ಬ್ಯಾಂಡಿನವರು. ಹಿಂದೆ ಹೊಳಪು ಮೀಸೆಯ ಹದಿಹರೆಯದ ಪೋರರು. ಹಿಂದೆ ಟೀ ಶರ್ಟಿನಲ್ಲಿ ಹೊಟ್ಟೆಗಳನ್ನು ಬಿಗಿದುಕೊಂಡು ಅಭಿಮಾನದಿಂದ ಬಜಾರನ್ನೂ ನಡುನಡುವೆ ಹಿಂದಿರುವ ತಮ್ಮ ಹೆಂಡಂದಿರನ್ನೂ ಗಮನಿಸುತ್ತ ನಡೆದ ಮಧ್ಯಮ ವಯಸ್ಸಿನ ಗಂಡಸರು. ನಂತರ ಕುಡಿಸಿಕೊಂಡು ಕುಣಿಸಿಕೊಳ್ಳುತ್ತಿರುವ ಗುಲಾಲು ಬಡಿದುಕೊಂಡ ಚಿತ್ರ ವಿಚಿತ್ರ ಮಂದಿ. ಎಲ್ಲಕ್ಕೂ ಹಿಂದೆ ಬ್ರೇಕ್ ವ್ಯಾನಿನಂತೆ ನಡೆಯುತ್ತಿರುವ ಹೆಂಗಸರ ಗುಂಪು. ಇವೆಲ್ಲವುಗಳ ನಡುವೆ ನಸು ಕಂದು ಬಣ್ಣದ ಉಪಾಸಿ ಕಾಣುವ ಕುದುರೆಯ ಮೇಲೆ ಆ ಕುದುರೆಯದೇ ಬೆನ್ನೆಲುಬಿನ ಭಾಗವೋ ಎಂಬಂತೆ ಕೂತಿದ್ದ ಅವಕುಂಠಿತ ಮದುಮಗ. ಅವನ ಝರಿ ಪೇಟದಿಂದ ಇಳಿಬಿದ್ದ ಮಲ್ಲಿಗೆಹಾರಗಳು ಅವನ ಮುಖ ಮುಚ್ಚಿದ್ದವು. ಪೇಟದ ಮೇಲಿನ ಗರಿಯೊಂದು ಇನ್ನೇನು ಬೀಳಬೇಕು ಅನ್ನುವಂತಿತ್ತು. ಮೆರವಣಿಗೆಯಲ್ಲಿ ಯಾರಿಗೂ ಮದುಮಗ ದಗಡೂ ಪರಬ್‌ನ ಮುಖವೇ ನೆನಪಾಗುತ್ತಿರಲಿಲ್ಲ. ಕುದುರೆಯ ತುಸು ಮುಂದೆ ಬಲಭಾಗದಲ್ಲಿ ರಾಷ್ಟ್ರಪತಿಯಂತೆ ನಡೆಯುತ್ತಿರುವವನೇ ಬಾಲಚಂದ್ರ ಪರಬ್—ಮದುಮಗನ ಅಣ್ಣ—ಮದುವೆಗೆ ಕುದುರೆ ಮೆರವಣಿಗೆಯ ಆಕರ್ಷಣೆಯನ್ನು ಸಂಯೋಜಿಸಿದವನು—ಸ್ವತಃ ಆಗ್ರಹಪಡಿಸಿ ಹೆಣ್ಣಿನವರಿಗೆ ಹೇಳಿ—ಕುದುರೆಯನ್ನು ತಾನೇ ಅಲೆದಾಡಿ ಗೊತ್ತುಮಾಡಿಸಿ ಮನೆಯಿಂದ ಹಿಡಿದು ಹೆಣ್ಣಿನವರ ಚಾಳಿನಲ್ಲಿ ಹಾಕಿದ ಮಂಟಪದವರೆಗಿನ ಮೆರವಣಿಗೆಯ ಉಸ್ತುವಾರಿ ವಹಿಸಿದವನು. ಹೀಗಾಗಿ ಆಗಾಗ ಬಜಾರಿನ ಮಂದಿಯನ್ನೂ ಮತ್ತು ಕುದುರೆಯ ಮೇಲಿನ ತಮ್ಮನನ್ನು ಗಮನಿಸುತ್ತ ನಡೆಯುತ್ತಿದ್ದನು. ತಮ್ಮ ಚಾಳಿನಲ್ಲಿ ಮೊಟ್ಟಮೊದಲು ಬಾರಿ ಕುದುರೆ ಮೆರವಣಿಗೆ ಆಗುತ್ತಿರುವದು ತನ್ನಿಂದಲೇ ಎಂಬುದನ್ನು ಎಲ್ಲರಿಗೂ ಹೇಳುವಂತಿತ್ತು ಅವನ ನೋಟ.

ಬಜಾರಿನಲ್ಲಿ ನಡೆದ ಮೆರವಣಿಗೆ ಶಿವಾಜಿ ಪುತ್ಥಳಿಯ ಸಮೀಪ ಬರುತ್ತಿತ್ತು. ಇನ್ನೇನು ಅದು ಶಿವಾಜಿ ಪುತ್ಥಳಿಯನ್ನು ಹಾಯಬೇಕು ಅಷ್ಟರಲ್ಲಿ—ಅಲ್ಲೇ ಬದಿಯಲ್ಲಿದ್ದ ಗರಾಜಿನಲ್ಲಿ ಕಂಗೆಟ್ಟು ಮೋಟರ್‌ಸೈಕಲೊಂದು ಒದೆ ತಿಂದಿದ್ದೇ ಕಿಟಾರನೆ ಕಿರುಚಿಕೊಂಡಿತು.




ಒಮ್ಮೆಗೇ ಘಟಘಟಿಸಿದ ಈ ಗಗನಭೇದಿ ಸದ್ದಿಗೆ ಒಂದು ಕ್ಷಣ ಬಜಾರಿಗೆ ಬಜಾರೇ ಮೈ ತೆಗೆಯಿತು. ಮತ್ತು ಕಣ್ಣು ಮಿಟುಕಿಸುವದರೊಳಗೆ ಮೆರವಣಿಗೆಯ ಮಧ್ಯದಿಂದ ಅಶ್ವ ವರಸಮೇತ ಓಡಿ ಹೋಯಿತು.

ಒಂದು ಕ್ಷಣ ಅಶ್ವ ಮುಂಗಾಲುಗಳನ್ನೆತ್ತಿ ಕೆನೆದದ್ದು. ವರನೂ ವಿಚಿತ್ರ ಆವಾಜಿನಲ್ಲಿ ಒದರಿಕೊಂಡಿದ್ದು ಮತ್ತು ಆ ಬದಿಗೆ ಬೀಳಲೋ ಈ ಬದಿಗೆ ಬೀಳಲೋ ಎಂಬಂಥ ಸಂದೇಹದಲ್ಲಿ ಓಲಾಡಿದ್ದು ಮತ್ತು ಮಿಂಚಿನಂತೆ ಕುದುರೆ ವರನನ್ನು ಹೊತ್ತುಕೊಂಡೇ ಮಾಯವಾದದ್ದು—ಇವೆಲ್ಲ ಜರುಗಿದ ಅವಾಕ್ಕು ಕ್ಷಣಗಳ ನಂತರ ತಕೋ ಹಾಹಾಕಾರ ಶುರುವಾಯಿತು. ಕಣ್ಣಿಗೆ ಬಿದ್ದ ಬೀದಿಗಳಲ್ಲಿ ಮೆರವಣಿಗೆಯ ಮಂದಿ ನುಗ್ಗಿದರು. ಬಾಲಚಂದ್ರ ಪರಬ್ ಆಘಾತದಿಂದ ಚೇತರಿಸಿಕೊಳ್ಳುತ್ತಲೆ ಪೆಪೆಪೆ ತಡವರಿಸುತ್ತ ಇಡೀ ಮೆರವಣಿಗೆಯನ್ನುದ್ದೇಶಿಸಿ ಏನೋ ಹೇಳಿದಂತೆ ಮಾಡಿ ಎಡಬದಿಯ ತರಕಾರಿ ಮಾರ್ಕೆಟ್ಟಿನಲ್ಲಿ ರಭಸದಿಂದ ನುಗ್ಗಿದ. ಮಂದಿ ಕೈಚೀಲ-ಚಿಲ್ಲರೆ-ತರಕಾರಿಗಳ ನಡುವೆ ಮಗ್ನರಾಗಿದ್ದರು. ಕುದುರೆ ಹಾದುಹೋದದ್ದರ ಫರಕೇ ಅವರಿಗಿದ್ದಂತಿರಲಿಲ್ಲ. ಬಾಲಚಂದ್ರ ಪರಬ ಸರಕ್ಕನೆ ಏನೋ ಹೊಳೆದವನಂತೆ ಮರಳಿ ಓಡುತ್ತ ಶಿವಾಜಿ ಪುತ್ಥಳಿಯ ಸಮೀಪ ಒಂದು ಅಲ್ಲೇ ನಿಂತಿದ್ದ ಹೆಂಗಸರನ್ನು ಉಳಿದ ಬ್ಯಾಂಡಿನವರನ್ನು—ಅಲ್ಲೇ ನಿಲ್ಲಲು ಹೇಳಿದ. ರಸ್ತೆ ನಡುವೆಯೇ ನಿಲ್ಲುವದು ಅಶಕ್ಯವಾದದ್ದರಿಂದ ಹೆಂಗಸರು ಬದಿಗೆ ಸರಿದರು. ಆದರೆ ಅದು ಹಣ್ಣಿನಂಗಡಿಯನ್ನು ಸುತ್ತುವರಿದಿದ್ದರಿಂದ ಅಂಗಡಿಯವ ಬೊಬ್ಬೆ ಹಾಕಿ ಅವರನ್ನು ಮತ್ತೆ ರಸ್ತೆಯುದ್ದಕ್ಕೂ ಅಟ್ಟಿಬಿಟ್ಟ.

ಈ ಘಟನೆ ನಡೆಯುವಾಗ ಹೆಂಗಸರ ನಡುವೆ ಹೇಹೇಹೇ ಎಂದು ನಕ್ಕುಬಿಟ್ಟವಳೇ ಬಾಲಚಂದ್ರ ಪರಬನ ಹೆಂಡತಿ. ತಮ್ಮ ಮದುವೆಯಲ್ಲಿ ತನ್ನ ಅಪ್ಪ ಕುದುರೆ ತರಲಿಲ್ಲ ಎಂಬ ಸತ್ಯವನ್ನು ಚುಚ್ಚಿ ಹೇಳುವದಕ್ಕೇ ಗಂಡ ಈ ಕುದುರೆಯ ಬೃಹತ್ ಯೋಜನೆಯನ್ನು ಜಿದ್ದಿನಿಂದ ಕೈಗೊಂಡಿದ್ದ ಎಂಬುದು ಅವಳಿಗೆ ಗೊತ್ತಿತ್ತು. ಅಂತೆಯೇ ನಕ್ಕು ಸುಮ್ಮನಾದಳು. ಪರಬ್ ಮಾತ್ರ ಪೂರಾ ಗೊಂದಲದಲ್ಲಿದ್ದ. "ದಗಡೂ... ದಗಡೂ..." ಎಂದು ಬಡಬಡಿಸುತ್ತಲೇ ತರಕಾರಿ ಮಾರ್ಕೆಟ್ಟು ಮುಗಿಸಿ—ಗೋಶಾಲಾ ರೋಡು ತಲುಪಿದ. ಎದುರಿಗಿರುವ ಘೋರ ಪ್ರಶ್ನೆ ಕುದುರೆಯನ್ನು ಎಲ್ಲಿ ಹುಡುಕುವದು. ಸಿಕ್ಕರೆ ದಗಡೂ ಅದರ ಮೇಲೆ ಇನ್ನೂ ಇರಬಹುದೆ? ಅಥವಾ ದಗಡೂನನ್ನೇ ಹುಡುಕುವದೆ? ಇತ್ತ ಬೇರೆ ಬೇರೆ ಹಾದಿಗಳಲ್ಲಿ ಅರಸಲು ನುಗ್ಗಿದ ಸ್ವಯಂಸೇವಕರು—ರಸ್ತೆ ಬದಿಯನ್ನೇ ಹುಡುಕಿದರು—ದಗಡೂ ಬಿದ್ದಿರಬಹುದೆಂದು. ಗೋಶಾಲಾ ರೋಡಿನಲ್ಲಿ ಶಾಲೆಯೊಂದು ಬಿಟ್ಟು ಮಕ್ಕಳು ಬೀದಿ ಪಾಲಾಗಿದ್ದರು. ಬಾಲಚಂದ್ರ ಅವರನ್ನು ನಿಲ್ಲಿಸಿ "ಈ ದಾರಿಯಲ್ಲಿ ಕುದುರೆ ಹಾದು ಹೋದದ್ದನ್ನು ನೋಡಿದ್ದೀರಾ?" ಎಂದು ಕೇಳಿದ. ಮತ್ತೂ ಮುಂದೆ ಬಸ್‌ಸ್ಟಾಪಿನಲ್ಲಿ ಕಾದಿದ್ದ ಕೆಲವರಲ್ಲಿ ಇದೇ ಪ್ರಶ್ನೆ ಮತ್ತೆ ಕೇಳುವಾಗ ಪರಬನಿಗೆ ತೀರ ಬೇಸರವಾಗಿ ಹೋಯಿತು. ಮತ್ತು ಇದೇ ಕ್ಷಣಕ್ಕೆ ಕುದುರೆಯನ್ನು ತಂದ ರಾವುತ ಗುಲಾಮನೆಲ್ಲಿ?—ಎಂಬ ಪ್ರಶ್ನೆ ಅವನೆದುರು ಬಂತು. ಇರಲಿ ಅವನೂ ಕುದುರೆಯನ್ನು ಹುಡುಕುತ್ತ ಹೋಗಿರಬೇಕು. ಎಲ್ಲರಿಗಿಂತ ಜಾಸ್ತಿ ಕುದುರೆಯ ಫಿಕಿರು ಅವನಿಗೇ ಇರಬೇಕಲ್ಲ. ನಾನು ಮಾತ್ರ ಈಗ ತಮ್ಮ ದಗಡೂನನ್ನೇ ಹುಡುಕುವದು ಎಂದು ಖಚಿತ ಮಾಡಿಕೊಂಡು ರಿಕ್ಷಾ ಒಂದನ್ನು ಕರೆದು ಅದರಲ್ಲಿ ಕೂತು ರಸ್ತೆ ಗಲ್ಲಿಗಳನ್ನು ಅಲೆಯಲು ಆರಂಭಿಸಿದ. ಇಲ್ಲಿ ನಿಲ್ಲಿಸು. ಅಲ್ಲಿ ನಿಲ್ಲಿಸು ಎಂದು ಪದೇ ಪದೇ ನಿಲ್ಲಿಸುತ್ತಿದ್ದ. ದೂರದಲ್ಲಿ ಬುಟ್ಟಿಗಳು ಕೂಡ—ಕುದುರೆಯಂತೆ ಕಾಣುತ್ತ ರಸ್ತೆ ಬದಿಯಲ್ಲಿ ಎಲ್ಲೋ ಗುಂಪಿನಲ್ಲಿ ದಗಡೂನನ್ನು ಕಂಡಂತೆ ಆಗುತ್ತ—ಕಂಗೆಟ್ಟು ಹದಿನಾರು ರೂಪಾಯಿಗೆ ಮೀಟರು ಬರುತ್ತಲೇ ನಿಲ್ಲಿಸಿ ಬಿಟ್ಟ. ಈಗ ಅವನು ಉಪನಗರದಿಂದ ತೀರ ದೂರವಿದ್ದ—ಒಂದು ಆಟದ ಬಯಲಿನ ಸಮೀಪ.

ಕುದುರೆಯನ್ನು ತಂದ ಹುಡುಗ ಗುಲಾಮ ಮಾತ್ರ ಈ ಎಲ್ಲ ಗೊಂದಲದಲ್ಲಿ ಯಾರ ಕಣ್ಣಿಗೆ ಬೀಳದೇ ಮಾಯವಾಗಿದ್ದ. ಕುದುರೆ ಕೆನೆದು ಮಾಯವಾಗಿದ್ದೇ—ಗುಲಾಮ ಓಡುತ್ತ ಸ್ಟೇಶನ್ನಿಗೆ ಬಂದು ರೈಲಿನಲ್ಲಿ ಕೂತು ವಿ. ಟಿ. ಗೆ ಹೊರಟುಬಿಟ್ಟ. ಆ ಕುದುರೆ ಅವನದಾಗಿರಲಿಲ್ಲ. ಅದು ಅವನು ಗುಟ್ಟಾಗಿ ಮೋಹಿಸಿ ಮನದಲ್ಲೇ ಕಾಮಿಸಿ ಎಲಿ ಎಲಿ ಒದ್ದಾಡಿದ ಭಾನುಮತಿಯ ಅಪ್ಪನದು. ಗುಲಾಮ ಕೆಲಸ ಮಾಡುತ್ತಿದ್ದದ್ದು ಕಲವಾದಲ್ಲಿಯ ಕಿರಾಣಿ ಅಂಗಡಿಯೊಂದರಲ್ಲಿ. ಪೊಟ್ಟಣ ಕಟ್ಟುತ್ತಿರುವಾಗಲೇ ಒಮ್ಮೆ ಅವನ ಕಣ್ಣಿಗೆ ಬಿದ್ದಳು ಎದುರಿನ ಲಾಯದಂತಿರುವ ಮನೆಯೊಂದರಲ್ಲಿ ಆ ಹುಡುಗಿ. ಅವಳ ತೋಳುಗಳು ಅವನನ್ನು ಆಕರ್ಷಿಸುತ್ತಿದ್ದವು. ಆ ತೋಳುಗಳನ್ನು ಬೀಸಿ ಬಳಸಿ ಕಂಕುಳನ್ನು ಗುಟ್ಟಾಗಿ ಅಡಗಿಸಿ ಅವಳು ಬಟ್ಟೆ ಒಣ



ಹಾಕುವದನ್ನು ನೋಡುತ್ತ ಗುಲಾಮ ಗುಲಾಮನಾದ. ಭಾನುಮತಿಯ ಅಪ್ಪನದು ಕುದುರೆಗಳದೇ ಧಂದೆ. ಬಹಳ ಹಿಂದೆ ಟಾಂಗಾವಾಲಾ ಇದ್ದನಂತೆ. ಈಗ ನಾಲ್ಕೈದು ಕುದುರೆ ಟಾಂಗಾ ಇಟ್ಟಿದ್ದಾನೆ. ರಜೆಯ ಸೀಸನ್ನಿನಲ್ಲಿ ಕುದುರೆಗಳನ್ನು ಟಾಂಗಾಗಳನ್ನು ಜೂಹೂ ಸಮುದ್ರತೀರಕ್ಕೆ ಮಕ್ಕಳ ಸವಾರಿ ಬಾಡಿಗೆಗೆಂದು ಕಳಿಸುತ್ತಾನೆ. ಬರೇ ಟಾಂಗಾ, ಲದ್ದಿ, ಕುದುರೆ ಬಾಲ, ಮೇವು ಹುರಳಿಗಳ ಕೊಟ್ಟಿಗೆಯಂತಿರುವ ಆ ಮನೆಯಲ್ಲಿ ಪುರಿಯಂತೆ ಉಬ್ಬುತ್ತ ಹಂಸದಂತೆ ಕಂಡು ನಕ್ಕು, ಮಾಯವಾಗುವ ಭಾನುಮತಿಯ ಕಣ್ಣಿಗೂ ಗುಲಾಮ ಬೀಳತೊಡಗಿದ. ತನ್ನ ಕಣ್ಣಿನಲ್ಲೇ ಅವನನ್ನು ಅವಳು ಆಡಿಸತೊಡಗಿದಳು. ಒಂದು ದಿನ ಏನಾಯಿತೋ, ರಾಜಾರೋಷದಿಂದ ನಡೆದುಹೋಗಿ ಗುಲಾಮ ಅವಳಪ್ಪನ ಎದುರು ನಿಂತು ಅವಳ ಕೈ ಬೇಡಿದ. ಅವಳಪ್ಪ ಇದಕ್ಕೆ ಬದಲಾಗಿ ರಪಾಲನೆ ತನ್ನ ಕೈಕೊಟ್ಟ. ಅಪಮಾನದಿಂದ ಗುಲಾಮ ಸತ್ತೇ ಹೋದ. ಆದರೂ ಪ್ರೇಮದ ಗೆಲುವಿನ ಕುರಿತು ಹಿಂದಿ ಸಿನೇಮಾಗಳಿಂದ ಅಚಲ ಶ್ರದ್ಧೆ ಪಡೆದವನಾದ್ದರಿಂದ ಪೊಟ್ಟಣ ಕಟ್ಟುತ್ತಲೇ ಬಿಳಿಯ ತೋಳುಗಳ ಕಡೆ ನೋಡುವ ತನ್ನ ಕಾಯಕ ನಿಲ್ಲಿಸಲಿಲ್ಲ. ಯಾಕೋ ವಿಚಿತ್ರ ಛಲದ ಸಿಟ್ಟಿನ ಪ್ರೇಮದ ನೋಟವನ್ನು ಬಿಡಲಾರಂಭಿಸಿದ. ಟಾಂಗೆವಾಲರ ದೋಸ್ತಿ ಮಾಡಿದ. ಸಾಮಾನಿಗೆ ಬಂದವರಲ್ಲಿ ಎಳೆ ಹುಡುಗಿಯರಿದ್ದರೆ ತಡವಾಗಿ ಸಾಮಾನು ಕೊಡುತ್ತ ಅವರೊಡನೆ ಲಲ್ಲೆಗರೆಯುತ್ತ ಭಾನುಮತಿಯ ಲಕ್ಷ್ಯವನ್ನು ಕೆರಳಿಸುವ ಪ್ರಯತ್ನವನ್ನೂ ಮಾಡಿದ. ಅವನ ಈ ನಾಟಕ ಅತಿಯಾದ ಮೇಲೆ ಒಂದು ದಿನದಿಂದ ಭಾನುಮತಿ ಇವನ ಕಡೆ ನೋಡುವದನ್ನೂ ಬಿಟ್ಟುಕೊಟ್ಟಳು. ಆಗ ಬೇಜಾರೋ ಸಿಟ್ಟೋ ತಿಳಿಯದೆ ಅಂಗಡಿಯಲ್ಲಿ ಕೂರದೆ ಎದುರಿನ ಟಾಂಗಾವಾಲನ ದೋಸ್ತಿಯಿಂದ ಠಾಣಾದ ಟಾಂಗಾ ಸ್ಟ್ಯಾಂಡಿನಲ್ಲಿ ಕಾಡು ಹರಟೆ ಮಾಡುತ್ತ ವೇಳೆ ಕಳೆಯತೊಡಗಿದ. ಇವನ ಇಂಥ ಒಂದು ಕಾಡು ಹರಟೆಯ ನಡುವೆಯೇ–ಬಾಲಚಂದ್ರ ಪರಬ್ ಮದುವೆ ಸವಾರಿಗೆ ಕುದುರೆ ಬೇಕು ಎಂದು ಚೌಕಾಶಿ ಮಾಡಿದ. ಗುಲಾಮನಿಗೆ ವಿಚಿತ್ರ ಸಾಹಸ ಬಂತು. "ದುಡ್ಡು ಕೈಲಾದ್ದು ಕೊಡಿ. ನಾಳೆ ನಸುಕಿಗೇ ಕುದುರೆ ತರುತ್ತೇನೆ. ಅಲಂಕಾರ ವಗೈರೆ ಮಾತ್ರ ಆಗಲಿಕ್ಕಿಲ್ಲ"– ಎಂದು ವಾಗ್ದಾನ ಮಾಡಿದ. ಮರುದಿನ ನಟ್ಟ ನಸುಕಿನಲ್ಲಿ ಎದ್ದು ಭಾನುಮತಿಯ ಅಪ್ಪನ ಲಾಯದಲ್ಲಿಯ ಟಾಂಗಾದ ಕುದುರೆಯೊಂದನ್ನು ಬಿಡಿಸಿಕೊಂಡು ನಡೆಸಿಕೊಂಡೇ ಮುಲುಂದಿ ಪರಬನ ಖೋಲಿಯೆದುರು ಹಾಜರನಾದ. ಪರಬನ ಚಾಳಿನವರೆಲ್ಲ ಸ್ಫೂರ್ತಿಯಿಂದ ಕುದುರೆಗೆ ಸಿಂಗರಿಸಲು ಬಂದವರು ಕುದುರೆಯ ಸಿಡಿಮಿಡಿಯನ್ನು ನೋಡಿ ಹಿಂಜರಿದರು. ಕೊನೆಗೂ ಸಿಂಗಾರ ಮಾಡಲಾಗದೆ, ಸಿಂಗರಿಸಿದ ಮದುಮಗನನ್ನೇ ಸ್ಟೂಲಿಟ್ಟು ಏರಿಸಲಾಯಿತು. ಸಿನೇಮಾ ಪೋಸ್ಟರುಗಳಿಂದ ಸೀದ ಜಿಗಿದು ಮನೆಯೆದುರು ಬಂದಂತಿದ್ದ ಕುದುರೆ ನೋಡೇ ಹೆದರಿದ ದಗಡೂ ಪರಬ್–ತಾನು ಮದುಮಗನೆಂಬುದನ್ನೇ ಮರೆತು–ಕಂಗೆಟ್ಟ.



ಅಷ್ಟು ಸುಲಭವಾದ ಲೆಕ್ಕಕ್ಕೆಲ್ಲಾ
ಯಾಕೆ ಸಾರ್ ನಮ್ಮ ತಲೆ ತಿಂತೀರಿ?
ಕ್ಯಾಲ್ಕ್ಯುಲೇಟರ್ ಇಲ್ವೇ ?

ಕುದುರೆ ತುಸು ತಲೆ ಕೊಸರಿದರೂ ಸಾಕು–ಮುಗಿಯಿತು ತನ್ನ ಅವತಾರ ಅನಿಸುತ್ತಿತ್ತು ಅವನಿಗೆ. ಮೆರವಣಿಗೆ ಶುರುವಾಗುವಷ್ಟರಲ್ಲಿ ಬೆವರು ಬಿಟ್ಟು ಯಾಕಪ್ಪಾ ಈ ಅಣ್ಣನಿಗೆ ತಮ್ಮನಾಗಿ ಹುಟ್ಟಿದೆ ಎಂದೆನಿಸಿತು. ಮೆರವಣಿಗೆಯ ಬ್ಯಾಂಡು ಶುರುವಾದದ್ದೇ ಕುದುರೆ ಸಣ್ಣಗೆ ಜಿಗಿದಂತೆ ಮಾಡಿ–ದಗಡೂನ ಪೃಷ್ಠಕ್ಕೆ ಬಲವಾದ ಪೆಟ್ಟು ಬಂತು. ನೋವನ್ನು ಅರಗಿಸಿಕೊಳ್ಳಲು ತುಸು ಕುಂಡೆ ಜರುಗಿಸಿದ್ದೇ ಮತ್ತೊಮ್ಮೆ ಅಲ್ಲೇ ಪೆಟ್ಟು ತಿಂದು ನರಜನ್ಮವನ್ನೇ ಕುರಿತು ದಗಡು ಪರಿತಪಿಸಿದ. ಇದೆಲ್ಲದಕ್ಕೂ ನಿರ್ವಿಕಾರವಾಗಿಯೇ ನಡೆದಿದ್ದ ಗುಲಾಮ.


ಆದಷ್ಟು ಬೇಗ ಕುದುರೆಯ ಸನಿಯದಿಂದ ಇಲ್ಲವಾಗುವ ಹವಣಿಕೆಯಲ್ಲಿದ್ದ. ಆದರೂ ಮದುವೆ ಅಂದ ಮೇಲೆ ವಯಸ್ಸಿಗೆ ಮೀರಿದ ಕುಪ್ಪಸ ತೊಟ್ಟು ಪದೇ ಪದೇ ಅತ್ತರು ಹಚ್ಚಲು ಬರುವ ಚಂದದ ತರಳೆಯರು ಇದ್ದೇ ಇರುತ್ತಾರಲ್ಲ, ಆ ಆಕರ್ಷಣೆಗೆ ಬಲಿಯಾಗಿ ಗುಲಾಮ ಇನ್ನೂ ಮೆರವಣಿಗೆಗೆ ಅಂಟಿಕೊಂಡೇ ಇದ್ದ. ಬಾಲಚಂದ್ರ ಪರಬನಂತೂ ಗುಲಾಮನಿಗಾಗಿ ನಡೆಯುತ್ತಿರುವಾಗಲೇ ಗೋಲ್ಡಸ್ಪಾಟ್ ತರಿಸಿ ಒಡೆಸಿ ಕೊಟ್ಟ. ಶಿವಾಜಿ ಪುತ್ಥಳಿಯ ಸಮೀಪ ಗುಲಾಮನ ಗೋಲ್ಡಸ್ಪಾಟ ಮುಗಿಯುವದಕ್ಕೂ ಕುದುರೆಯ ಪಲಾಯನಕ್ಕೂ ಸರಿ ಹೋಯಿತು. ಅತ್ತ ಇತ್ತ ನೋಡದೇ ಸ್ಟೇಷನ್ನಿನೆಡೆ ಓಡಿದವನೇ ವಿ.ಟಿ.ಗೆ ಹೋಗಿ ಸಿನಿಮಾ ನೋಡುವಾ ಎಂದು ರೈಲಿನಲ್ಲಿ ಕೂತುಬಿಟ್ಟ. ಭಾನುಮತಿ ಮತ್ತು ಅವಳಪ್ಪನ ಮನೆ ಹಾಳಾಗಲಿ ಎಂದು ಶಪಿಸುವದನ್ನು ಮರೆಯಲಿಲ್ಲ.

ಇತ್ತ ಕಲವಾದಲ್ಲಿ ಎಂಟಕ್ಕೆ ಎದ್ದ ಭಾನುಮತಿಯ ಅಪ್ಪ ಸುದ್ದಿ ತಿಳಿದಿದ್ದೇ ಸಿಟ್ಟಿನಿಂದ ಕುಣಿದಾಡಿದ. ತನ್ನ ಟಾಂಗಾಗಳನ್ನು ಕಲವಾ, ಠಾಣಾ ಪ್ರದೇಶಗಳಲ್ಲಿ ಕುದುರೆ ಹುಡುಕಲೆಂದೇ ಅಡ್ಡಾಡಿಸಿದ. ಪೋಲೀಸು ಸ್ಟೇಷನ್ನಿಗೆ ಹೋಗಿ ಫಿರ್ಯಾದು ಕೊಟ್ಟ. ಕುದುರೆಯ ಕುರಿತು ವಿವರ ಕೊಡುವಾಗ ಬಣ್ಣ ಏನೆಂದು ತಿಳಿಯದೇ 'ಕುದುರೆಯ ಬಣ್ಣ' ಎಂದ. ಭಾನುಮತಿ ಮಿಯಲು ನಿಂತಳು. ಮೈ ತೊಳೆಯುತ್ತ ತಿಕ್ಕುತ್ತ ಲಲ್ಲಲ್ಲಾ ಎಂದು ಹಾಡಿದಳು. ಬೆಳಗಿನಿಂದಲೇ ಏನೋ ಹುರುಪು ಅವಳಿಗೆ.

ಇತ್ತ ಆಟದ ಬಯಲಿನ ಬದಿಯಲ್ಲಿ ಬಿಸಿಲಲ್ಲಿ ಹೈರಾಣಾಗಿ ನಡೆಯುತ್ತಿದ್ದ ಬಾಲಚಂದ್ರ ಪರಬನನ್ನು ಯಾರೋ "ಅರೇ-ನೀವಿಲ್ಲಿ? ಇಂದು ನಿಮ್ಮ ತಮ್ಮನ ಮದುವೆ ಇತ್ತಲ್ಲ..." ಎಂದು ಹೇಳಿ ಪೆಟ್ಟು ತಿನ್ನುವದನ್ನು ಸ್ವಲ್ಪದರಲ್ಲಿ ತಪ್ಪಿಸಿಕೊಂಡರು. ಒಂದು ಕ್ಷಣ ಅವನಿಗೆ ಮದುವೆ ಮಂಟಪ-ಊರು-ತನ್ನ ಚಾಳು ಎಷ್ಟೋ ದೂರ ಇರುವಂತೆ ಅನಿಸಿತು. ಕುದುರೆ

ಮತ್ತು ದಗಡೂ ಇದ್ದಿದ್ದರೆ ಇಷ್ಟು ಹೊತ್ತಿಗೆ ಧಾರೆ ನಡೆಯುತ್ತಿತ್ತು ಅನಿಸಿತು. ಕುದುರೆ ಮತ್ತು ದಗಡೂ ಈಗಾಗಲೇ ಮಂಟಪ ತಲುಪಿ ಎಲ್ಲರೂ ತನ್ನನ್ನು ಅರಸುತ್ತಿರಬಹುದೇ ಎಂಬ ಗಲಿಬಿಲಿಯೂ ಆಯಿತು. ಪೋಲೀಸು ಸ್ಟೇಷನ್ನಿಗೆ ಹೋಗುವಾ ಎಂದರೆ ಮಂಟಪದ ಲೈಸನ್ಸು, ಸ್ಪೀಕರುಗಳ ಬಳಕೆ, ಪೋಲೀಸರ ಹಪ್ತಾ ಇತ್ಯಾದಿ ಬಲೆಗಳು ಅವನನ್ನು ಕಂಗೆಡಿಸಿದವು. ಕಾಲುಗಳನ್ನು ಎಳೆಯುತ್ತ ಮಧ್ಯಾಹ್ನ ಎರಡರ ಹಾಗೆ ಮಂಟಪ ತಲುಪಿದ. ಮಂಟಪ ಕಾದು ಕಾದು-ಹೆಂಗಸರು ಕೂತಲ್ಲೇ ನಿದ್ದೆ ಹೊಡೆಯುತ್ತಿದ್ದರು. ಬ್ಯಾಂಡಿನವರು, ಸ್ಪೀಕರಿನವರು ಅಡಿಗೆ ಕೋಣೆ ಹೊಕ್ಕು ಹೊಕ್ಕು ಹಲ್ಲು ಗಿಂಜುತ್ತ ಹೊರಬರುತ್ತಿದ್ದರು. ಪರಬ್ ಸುಮಾರು ಮೂರು ಗಂಟೆಗೆ ಸರಕ್ಕನೆ ಎದ್ದು ನಿಂತು ಅಳಿದುಳಿದವರನ್ನೆಲ್ಲ ಉದ್ದೇಶಿಸಿ-"ಎಲ್ಲಾ ದೇವರ ಇಚ್ಛೆ. ಆಗುವದೆಲ್ಲಾ ಆಗುತ್ತದೆ"-ಎಂದು ಊಟ ಬಡಿಸಲು ಆಜ್ಞಾಪಿಸಿದ. ಹಸಿದ ಎಲ್ಲರಿಗೂ ಊಟ ಭರ್ಜರಿ ಸೇರಿತು. ಊಟದ ಮಧ್ಯ ಕುದುರೆ ಬರದಿದ್ದರೆ ಸಾಕು ಅವಸರಪಡಿಸಲು ಎಂದುಕೊಂಡರು ಕೆಲವರು. ಪರಬ್ ಮಾತ್ರ ಹೆಂಡತಿಯ ಒತ್ತಾಯದ ಮೇರೆಗೆ ಅನ್ಯಮನಸ್ಕನಾಗಿ ಜಿಲೇಬಿ ತಿಂದ. ಎರಡೇ ಹಾಡು ಬಾರಿಸಿದ ಬ್ಯಾಂಡಿನವರಿಗೆ ಪೂರಾ ಹಣ ಕೊಡಬೇಕಾದಾಗ ಪರಬನಿಗೆ ಹೃದಯ ಗಂಟಲಿಗೆ ಬಂತು. ಆದರೂ ಸುತ್ತಮುತ್ತ ಜನ ನೋಡುತ್ತಿರುವದನ್ನೂ ಖಾತ್ರಿ ಪಡಿಸಿಕೊಂಡೇ ನೋಟುಗಳನ್ನು ಎಣಿಸಿ ಕೊಟ್ಟ. ಸ್ಪೀಕರಿನವ-ಸಂಜೆಯ ತನಕ ಉಳಿಯಲೋ ಎಂದು ಕೇಳಿದಾಗ-'ಬೇಕಾದರೆ ಹೋಗು' ಎಂದು ದಬಾಯಿಸಿದ. ನಂತರ ತಾನು ಖುರ್ಚಿಯೊಂದರಲ್ಲಿ ಕೂತು ತೂಕಡಿಸಿದ.

ಶಿವಾಜಿ ಪುತ್ಥಳಿಯ ಬಳಿ ಗರಾಜಿನ ಆ ಸದ್ದಿಗೆ ಕುದುರೆಗೆ ಆದದ್ದೇನು? ಆ ಕುದುರೆ ಈ ಹಿಂದೆ ಕೆಲ ಕಾಲ ಸರ್ಕಸ್ಸಿನಲ್ಲಿತ್ತು. ನಂತರ ಕೆಲ ತಿಂಗಳು ಸಿನಿಮಾ ಶೂಟಿಂಗಿನಲ್ಲೂ ಇತ್ತು. ಕುದುರೆಯ ನೆನಪುಗಳು ಸಾದಾ ಅಂತೂ ಇರಲಿಲ್ಲ. ಮೋಟರ ಸೈಕಲಿನ ಫಟಫಟಿಸುವ ಸದ್ದು-ಕುದುರೆಯಲ್ಲಿ ಸರ್ಕಸ್ಸಿನ ಯಾವ ನೆನಪುಗಳನ್ನು ಎಗರಿಸಿತೋ ಯಾವ ಬಲ್ಲ ಆ ಕ್ಷಣಕ್ಕೆ ಕುದುರೆ ಮೈ ತೆಗೆದು ಜಿಗಿದು ಮುಂಗಾಲುಗಳನ್ನೆತ್ತಿ ಓಟ ಕಿತ್ತಿತ್ತು. ನಸುಕಿನಿಂದ ಶುರುವಾದ ಇಲ್ಲದ ಉಸಾಬರಿಯಿಂದ ಅದು ಮೊದಲೇ ರೇಗಿ ಹೋಗಿತ್ತು. ಈ ಸದ್ದೇ ಸಾಕಾಯಿತು. ಧಡಕ್ ಧಡಕ್ ಎಂದು ಎಗರುತ್ತ ರಾಜಾಜಿ ತರಕಾರಿ ರಸ್ತೆಯಲ್ಲಿ ಹೊಕ್ಕಿದ ಅದು ಸೆಕೆಂಡುಗಳಲ್ಲಿ ಅದನ್ನು ದಾಟಿ ಅಡ್ಡ ತಿರುಗಿ ರಘುವೀರ್ ರಸ್ತೆಯಲ್ಲಿ ಹೊಕ್ಕು ಅಲ್ಲಿಂದ ಗೋಶಾಲಾ ರೋಡಿಗೆ ಹೊರಳಿ ಓಡಿತು. ಅದರ ಬೆನ್ನ ಮೇಲೆ ಬೆಂಡಿನ ಪದಕದಂತೆ ದಗಡೂ ಅಲುಗುತ್ತಿದ್ದ. ಕುದುರೆಯ ಕತ್ತನ್ನು ಅದ್ಯಾವ ರೀತಿಯಲ್ಲಿ ಅಪ್ಪಿ ಹಿಡಿದಿದ್ದನೋ ಅದ್ಯಾವ ಶಕ್ತಿಯಿಂದ ಕಣ್ಣು ಮುಚ್ಚಿದ್ದನೋ ಕುದುರೆಯ ಜಿಗಿತದಲ್ಲಿ ಒಂದಾಗುತ್ತಾ-ಅರೇ ತಾನಿನ್ನೂ ಬಿದ್ದೇ ಇಲ್ಲವಲ್ಲ ಎಂಬ ಅಚ್ಚರಿಯನ್ನೂ ಮರೆತು ವಿಚಿತ್ರವಾಗಿ ಕೆನೆಯತೊಡಗಿದ. ಗೋಶಾಲಾ ರೋಡಿನಲ್ಲಿಯೂ ಯಾವುದೇ ಶಾಲೆಯ ಮಕ್ಕಳು ಹೇ ಎಂದು ಕಿಕ್ಕಿರಿದು ಕೂಗಿದರು. ಅದೂ ಅವನನ್ನೂ ವಿಚಲಿತನಾಗಿಸಲಿಲ್ಲ. ಅವನ ಪೇಟ ಮಾತ್ರ ಅಲ್ಲಿ ಬಿದ್ದುಹೋಯಿತು. ಕೆಲವು ಮಕ್ಕಳು ಅದನ್ನು ಹಿಡಿದು ಕೆಲವು ನಿಮಿಷ ಕುದುರೆಯ ಹಿಂದೇ ಓಡಿದರು. ಆ ರಸ್ತೆಯಿಂದ ಅಡ್ಡ ತಿರುಗಿ ಕುದುರೆ ವಿಶಾಲ ಸೇಂಟ್ ಪೈಸ್ ಆಟದ ಬಯಲಿನ ನಡುವೆ ಹಸುಗಳ ನಡುವಿನಿಂದ ಎರಡು ಮೂರು ಕ್ರಿಕೆಟ್ ಪಿಚ್‌ಗಳ ಮೇಲಿಂದ ಹಾಯುತ್ತ ಸಣ್ಣ ಗೋಡೆಯನ್ನೂ ಹಾರಿ ಪೆಟ್ರೋಲ್‌ಬಂಕಿನ ಬದಿಯ ಸಣ್ಣ ಜಾಗದಿಂದ ಆಗ್ರಾ ರಸ್ತೆಯನ್ನು ಸೇರಿ ಧಡೂತಿ ವಾಹನಗಳು, ಟ್ರಕ್ಕುಗಳು, ಡಬಲ್‌ಡೆಕ್ಕರುಗಳ ನಡುವೆ ಓಡ ತೊಡಗಿತು. ಪೇಟ ಕಳಚಿಬಿದ್ದ ದಗಡೂನನ್ನು



ಬಸ್ಸಿನಿಂದ ಜನ ವೀಕ್ಷಿಸಿದರು. ಹೆದ್ದಾರಿಯ ವಾಹನಗಳ ನಡುವೆ ಕುದುರೆ ಈಗ ನೆಗೆಯ ತೊಡಗಿತು. ಈ ಒಂದು ಹಂತದಲ್ಲೇ ದಗಡೂ ಈ ವ್ಯವಹಾರಿಕ ಜಗತ್ತಿನೊಡನೆಯ ತನ್ನ ಕಿಂಚಿತ್ತೂ ಕಾರ್ಯಕಾರಣ ಸಂಬಂಧ ಕಳೆದುಕೊಂಡು. ವಿಲಕ್ಷಣ ಹಗುರಂತನವನ್ನು ಅನುಭವಿಸುತ್ತ ಕುದುರೆಯೊಡನೆ ಒಂದಾಗಿ ಹೋದ. ತನ್ನ ಮಿಲ್ಲಿನ ನೌಕರಿ, ಅಣ್ಣನ ದಾದಾಗಿರಿ, ಗೊರಟುಹಲ್ಲಿನ ಮದುವಣಗಿತ್ತಿ, ತನ್ನ ಸುಡುಗಾಡು ದಿನಚರಿ ಎಲ್ಲವನ್ನೂ ಒಂದೇ ನೆಗೆತದಲ್ಲಿ ಒದ್ದಂತೆ ಅನಿಸಿ ಗಟ್ಟಿಯಾಗಿ ಕುದುರೆಯ ಕತ್ತನ್ನು ಅವಚಿಕೊಂಡ. ಒಂದು ಕ್ಷಣದಲ್ಲಿ ತಾನೇ ಶಿವಾಜಿಯಾಗಿ ರಾಯಗಡ ಕೋಟೆಯನ್ನು ಹತ್ತುತ್ತಿರುವಂತೆಯೂ ಅವನಿಗೆ ಭ್ರಮೆ ಆಯಿತು. ಕುದುರೆ ರಭಸದಿಂದ ಹೆದ್ದಾರಿಯಗುಂಟ ಓಡುತ್ತಿತ್ತು– ಅಕ್ವಾಯ್ ನಾಕೆಯನ್ನು ದಾಟಿ, ಸಿಗ್ನಲ್ಲುಗಳನ್ನು ಹಾರಿಸಿ ಕೇವಲ ತನಗೇ ಗೊತ್ತಿದ್ದಂತಿರುವ ಗುರಿಯ ಕಡೆಗೆ.

ಹೀಗೇ ಎಷ್ಟೋ ಹೊತ್ತು ಓಡಿದ್ದೇ ಹೆದ್ದಾರಿ ಬಿಟ್ಟು ಪರಿಚಿತ ಒಳದಾರಿಗಳನ್ನು ತುಳಿಯುತ್ತ ಉಪನಗರ ಒಂದನ್ನು ಹೊಕ್ಕು- ತೇಕುತ್ತ- ಶ್ವಾಸ ಬಿಡುತ್ತ- ತೀರ ಇಕ್ಕಟ್ಟು ಗಲ್ಲಿಯೊಳಗೆ ನುಸುಳಿ ಮನೆಯೊಂದರ ಲಾಯದಂಥ ಚಾವಡಿಯಲ್ಲಿ ನಿಂತು ಬಿಟ್ಟಿತು. ಆ ಮನೆಯಿಂದ ಆಳುಗಳು ಬಂದು ಸೋತು ಜೋತಿದ್ದ ದಗಡೂನನ್ನು ಇಳಿಸಿಕೊಂಡರು. ಅವನ ಜರತಾರಿಯ ಬಟನ್ನುಗಳನ್ನು ತೆಗೆದು ಗಾಳಿ ಹಾಕಿ ಹಗ್ಗದ ಮಂಚದ ಮೇಲೆ ಒರಗಿಸಿದರು. ಅವನ ತೇಲುಗಣ್ಣುಗಳ ಬಳಿಗೆ ಒಬ್ಬಳು ಹುಡುಗಿ ತಂಬಿಗೆ ತುಂಬ ನೀರು ತಂದು ನಿಂತಳು. ಅವನು ಗಟಗಟಾ ಸದ್ದು ಮಾಡುತ್ತ ನೀರು ಕುಡಿಯುತ್ತಿರುವಾಗಲೇ ಲಲ್ಲಲಾ ಎಂದು ಹಾಡುತ್ತ ಮರೆಯಾದಳು. ಎರಡು ಮಾತಿಲ್ಲದೆ ಎರಡೇ ನಿಮಿಷದಲ್ಲಿ ಭಾನುಮತಿಯ ಅಪ್ಪ ಕುದುರೆ ಹಿಡಿದು ತಂದ ಈ ವೀರ, ಸಿದ್ಧ ಮದುಮಗನನ್ನು ಅಳಿಯನನ್ನಾಗಿ ಸ್ವೀಕರಿಸಿ ಬಿಟ್ಟ.

ಎಷ್ಟೋ ತಿಂಗಳುಗಳ ನಂತರ ಬಾಲಚಂದ್ರ ಪರಬನ ಕಿವಿಯ ಮೇಲೆ ಯಾರೋ ಸುದ್ದಿ ಹಾಕಿದರು - ಜುಹೂ ಸಮುದ್ರತೀರದಲ್ಲಿ ದೊಡ್ಡ ಚಂದ ಟಾಂಗಾದ ಮೇಲೆ ಮಕ್ಕಳನ್ನು ಕೂರಿಸಿಕೊಂಡು ದಗಡೂ ಬಾಡಿಗೆಗೆ ಹೊಡೆಯುತ್ತಿದ್ದಾನೆ ಎಂದು. ಅದೇ ದಿನ ಸಂಜೆ ಹೆಂಡತಿ ಮಕ್ಕಳನ್ನು ಕರೆದುಕೊಂಡು ಒಂದು ರೈಲು ಎರಡು ಬಸ್ಸುಗಳನ್ನು ಬದಲಿಸಿ ಬಾಲಚಂದ್ರ ಪರಬ್ ಜುಹೂ ತಲುಪಿದ. ಅಲ್ಲಿಯ ಬೀಚಿಗೆ ಹೋದರೆ ಎಷ್ಟೊಂದು ಜನ ಸಮುದ್ರ. ಎಷ್ಟೊಂದು ಟಾಂಗಾ ಕುದುರೆಗಳು ಒಂಟೆಗಳು ಮಕ್ಕಳು. ಬಲೂನು ಇವೆಲ್ಲವುಗಳ ನಡುವೆ ದಗಡೂನೂ ಕಾಣುತ್ತಿಲ್ಲ. ಅವನನ್ನು ಹೊತ್ತು ಟಾಂಗಾವೂ ಕಾಣುತ್ತಿಲ್ಲ. ಕಾಲು ಸೋಯುವತನಕ ಸುತ್ತಾಡಿದ. ಹೆಂಡಿರುಮಕ್ಕಳನ್ನು ಒಂದೆಡೆ ಕಡಲೆ ಪೊಟ್ಟಣ ಕೊಟ್ಟು ಕೂಡ್ರಿಸಿ ಪುನಃ ಸುತ್ತಾಡಿ ದಣಿದು ಬಂದು ಕೂತ. ಅವನ ನಿರಾಸೆ ನೋಡಿ ಹೆಂಡತಿ "ಸಿಗಲಿಲ್ಲವೆ. ದಗಡೂ ಸಿಕ್ಕಿದ್ದರೆ ಕಡೇಪಕ್ಷ ಆ ದಿನ ಮಂಟಪಕ್ಕೆ, ಮದುವೆಯ ಊಟಕ್ಕೆ ನಾವು ಮಾಡಿದ ಖರ್ಚನ್ನಾದರೂ ಮರಳಿ ಕೇಳಬಹುದಿತ್ತು" ಎಂದು ಗೊಣಗುಟ್ಟಿದಳು. ಅದಕ್ಕವನು ಅಳುಬುರುಕು ದನಿಯಲ್ಲಿ ರೇಗಿ "ಛೇ. ಅಣ್ಣ ಅಂತ ನಾನು ಅಷ್ಟೂ ಮಾಡದಿದ್ದರೆ ಹ್ಯಾಗೆ ?" -ಎಂದು ತೀರ ನಿರುಪಾಯನಾಗಿ ಸಮುದ್ರ ನೋಡಿದ. ✱

ಮೈಸೂರು ವೀಣಾ ಪರಂಪರೆ

ವೀಣೆಯ ಇತಿಹಾಸ ಭಾರತೀಯ ಸಂಸ್ಕೃತಿಯಷ್ಟೇ ಪ್ರಾಚೀನ. ವೇದಕಾಲದಲ್ಲಿ ಅದು ಅಗ್ರಮಾನ್ಯ ಸ್ಥಾನ ಪಡೆದಿದ್ದ ವಾದ್ಯ. ಸೃಷ್ಟಿಕರ್ತ ಬ್ರಹ್ಮನ ರಾಣಿ ಸರಸ್ವತಿ ವೀಣಾಪಾಣಿ. ನಾರದ, ಆಂಜನೇಯ, ರಾವಣರು ವೀಣಾವಾದನ ಪಟುಗಳೆಂದು ಪುರಾಣಗಳು ಸಾರುತ್ತವೆ. ಲವಕುಶರು ರಾಮಾಯಣ ಗಾನ ನಡೆಸಿದ್ದು ವೀಣಾವಾದನದೊಂದಿಗೆ. ಇತಿಹಾಸಕಾಲದಲ್ಲಿಯೂ ವೀಣೆಗೆ ಸರಿಸಾಟಿ ಇಲ್ಲದ ಗೌರವದ ಸ್ಥಾನ. "ಸರ್ವದೇವಮಯಿ" "ಸರ್ವ ಮಂಗಳೇ" ಎಂದು ಸ್ಮೃತಿಗಳಿಂದ ಕೊಂಡಾಡಲ್ಪಟ್ಟ ಈ ವಾದ್ಯ ಆಧ್ಯಾತ್ಮಮಾರ್ಗೋಪಾಸನ ಎಂಬ ದೃಢವಾದ ನಂಬಿಕೆ.

ದಕ್ಷಿಣಭಾರತದಲ್ಲಿ ವೀಣಾವಾದನ ಸಂಪ್ರದಾಯದ ಶಾಸ್ತ್ರೀಯತೆ ಹಾಗೂ ಪರಿಶುದ್ಧತೆಗಳನ್ನು ಸಂರಕ್ಷಿಸಿದ ಕೀರ್ತಿ ಕರ್ನಾಟಕದ್ದು. ಹದಿನಾಲ್ಕು-ಹದಿನೈದನೇ ಶತಮಾನದಲ್ಲಿ ಭಾರತೀಯ ಸಂಗೀತದ ಮೂಲ ಕವಲಿಗೆ "ಕರ್ನಾಟಕ ಸಂಗೀತ" ಎಂದು ಕರೆಯುವ ವಾಡಿಕೆ ಬಂದನಂತರ ಆ ಪರಂಪರೆಯನ್ನು ಉಳಿಸಿ ಬೆಳೆಸಿದ ಹಲವು ಕಲಾಚಾರ್ಯರು ಕರ್ನಾಟಕದವರು ಹಾಗೂ ವೈಣಿಕರು- ವಿದ್ಯಾರಣ್ಯರು, ವ್ಯಾಸರಾಜರು, ನಿಜಗುಣ ಶಿವಯೋಗಿಗಳು, ರಾಘವೇಂದ್ರ ಯತಿವರ್ಯರುಗಳಂಥ ಮಹಾಪುರುಷರು.

ಮೈಸೂರಿನ ಯದುವಂಶದ ಒಡೆಯರರು ವೀಣಾವಾದನ ಸಂಪ್ರದಾಯಕ್ಕೆ ರಾಜಾಶ್ರಯವನ್ನು ನೀಡಿ ಉಜ್ವಲವಾಗಿ ಬೆಳೆಯಿಸಿದರು. ಇದರ ಫಲವಾಗಿ ರೂಪುಗೊಂಡ ಮೈಸೂರು ವೀಣಾವಾದನ ಪರಂಪರೆ ಉಳಿದ ಪರಂಪರೆಗಳಿಗಿಂತ ವಿಶಿಷ್ಟ. ತ್ಯಾಗರಾಜರ ಪ್ರಶಿಷ್ಯ ಮೈಸೂರು ಸದಾಶಿವರಾಯರಿಂದ ಹುಟ್ಟುಹಾಕಲ್ಪಟ್ಟ ಈ ಪರಂಪರೆಗೆ ನಿರ್ದಿಷ್ಟ ಸ್ವರೂಪ ನೀಡಿದ ಅಧ್ವರ್ಯುಗಳೆಂದರೆ ವೈಣಿಕ ಪ್ರವೀಣ ವೀಣೆ ಸುಬ್ಬಣ್ಣ ಹಾಗೂ ವೈಣಿಕ ಶಿಖಾಮಣಿ ವೀಣೆ ಶೇಷಣ್ಣನವರು. ಅವರ ಶಿಷ್ಯರು ಪರಿಪೂರ್ಣಗೊಳಿಸಿದ ಪರಂಪರೆಯಂತೆ ಪ್ರಶಿಷ್ಯರು ಇಂದು ಮೈಸೂರು ವೀಣೆಯ ನಾದವನ್ನು ಕರ್ನಾಟಕ, ಭಾರತದಲ್ಲಷ್ಟೇ ಅಲ್ಲ, ಇಡೀ ಜಗತ್ತಿನಾದ್ಯಂತ ಮೊಳಗಿಸುತ್ತಿದ್ದಾರೆ.



ವೀಣೆ ಒಂದು ಆಕರ್ಷಕ ವಾದ್ಯ. ಅದರ ಹೊರನೋಟ ಕಣ್ಣಿಗೆ ಎಷ್ಟು ಸುಂದರವೋ, ಅದರ ನಾದದ ಮಾಟ ಕಿವಿಗೆ ಅಷ್ಟೇ ಮಧುರ. ಮನಸ್ಸಿಗೆ ಅಷ್ಟೇ ಆಪ್ಯಾಯಮಾನ. ಮೈಮನಗಳನ್ನು ಪುಳಕಿಸಿ, ಆರ್ತವನ್ನು ಆನಂದದ ತನಿರಸದಲ್ಲಿ ತೇಲಿಸಬಲ್ಲ ಅಪೂರ್ವ ಶಕ್ತಿಶಾಲಿಯಾದ ವಾದ್ಯ ವಿಶೇಷ. ಅದರ ಹೆಸರಿನಲ್ಲಿ ಕಾಣುವದು ಕೇವಲ ಎರಡೇ ಅಕ್ಷರ. ಆದರೆ ಅದರ ಪ್ರಭಾವ ಮಾತ್ರ ಅಸಾಧಾರಣ, ಅಗಾಧ ಅದರಂತೆಯೇ ಅದರ ಹಿರಿಮೆ, ಗರಿಮೆ, ಇತಿಹಾಸ, ವೈಭವಗಳೂ ಕೂಡ ಅಸದೃಶ.

ಭಾರತೀಯ ಸಂಸ್ಕೃತಿ ಎಷ್ಟು ಪ್ರಾಚೀನವೋ, ವೈವಿಧ್ಯವೋ, ಅಷ್ಟೇ ಪ್ರಾಚೀನ ಮತ್ತು ವೈವಿಧ್ಯ ವೀಣೆಯ ಇತಿಹಾಸ. ಸುಮಾರು ಕ್ರಿ. ಪೂ. ೨೫೦೦ಕ್ಕೂ ಹಿಂದಿನ ಸಿಂಧೂ ಸಂಸ್ಕೃತಿಯಲ್ಲೂ ಸಹ ವೀಣೆಯ ಅಸ್ತಿತ್ವವನ್ನು ಊಹಿಸಿದ್ದಾರೆ. ಸಂಶೋಧಕರು ಹರಪ್ಪಾ ಮತ್ತು ಮೊಹೆಂಜೋದಾರೋಗಳಲ್ಲಿ ಒಂದು ಬಗೆಯ "ವೀಣೆ" ಇದ್ದಿರಬಹುದಾದ ಕುರುಹುಗಳನ್ನು ಅವರು ಕಂಡು ಹಿಡಿದಿದ್ದಾರೆ. ಅದಕ್ಕೆ ಮುಂದಿನ "ವೇದಯುಗ"ದಲ್ಲಿಯಂತೂ ವೀಣೆಗೆ ಸ್ವತಂತ್ರ ಸ್ಥಾನಮಾನ.

ರಾಮಾಯಣ ಕಾಲಕ್ಕಾಗಲೇ ವೀಣೆ ಅತ್ಯಂತ ಜನಪ್ರಿಯ ವಾದ್ಯವಾಗಿತ್ತು. ಲವ ಕುಶರ ರಾಮಾಯಣ ಗಾಯನ ನಡೆದದ್ದು ವೀಣಾ ವಾದನದೊಂದಿಗೆ. ಸೀತಾನ್ವೇಷಣ ತತ್ಪರನಾಗಿ ಲಂಕೆಗೆ ಹೋದ ಆಂಜನೇಯ. ಅಲ್ಲಿ ರಾವಣನ ಅಂತಃಪುರದಲ್ಲಿ ಕಂಡ ವಾದ್ಯರಾಶಿಗಳಲ್ಲಿ ಬಗೆ ಬಗೆಯ ವೀಣೆಗಳ ದರ್ಶನವೇ ಅಮನಿಗಾಗುತ್ತದೆ. ರಾವಣನಂತೂ "ರುದ್ರ ವೀಣಾ ವಾದನ ಪಟು." ತನ್ನ ಕರುಳಾತಿಗಳನ್ನೇ ತಂತಿಯಾಗಿಸಿಕೊಂಡು ನಾದಲೋಲ ಶಿವನನ್ನೇ ಮೋದಗೊಳಿಸಿದ ವೈಣಿಕ ಚತುರನಲ್ಲವೇ ರಾವಣ. ಮುಂದೆ ಪಟ್ಟಾಭಿಷಿಕ್ತನಾದ ಶ್ರೀರಾಮನ ಆಸ್ಥಾನದಲ್ಲಿ ನಡೆಯುತ್ತಿದ್ದ ನಿತ್ಯ ಸಂಗೀತ ನೃತ್ಯೋತ್ಸವಗಳಲ್ಲಿ ಎಲ್ಲೆಲ್ಲೂ ವೀಣೆಯ ರವ.

ಮಹಾಭಾರತದಲ್ಲೂ ಹೀಗೆಯೇ. ಒಂದಲ್ಲ ಹಲವಾರು ಕಡೆ ವೀಣೆಯ ಪ್ರಸ್ತಾಪ ಹಾಗೂ ಅದರ ಮಹತ್ವದ ವರ್ಣನೆ. ಅದರ ಹಾಗೆ ಪುರಾಣಗಳಲ್ಲೂ ಕೂಡ ಎಲ್ಲೆಲ್ಲೂ ಹಲವು ರೀತಿಯ ವೀಣೆಯ ಪ್ರಸ್ತಾಪ. ಅದರ ಉಲಿಯ ಪ್ರತಿಧ್ವನಿ. ಸಕಲ ವಿದ್ಯಾಧಿದೇವತೆಯೂ, ಸೃಷ್ಟಿಕರ್ತ ಬ್ರಹ್ಮನ ರಾಣಿಯೂ ಆದ ಸರಸ್ವತಿ ಕೂಡ ವೀಣಾಪಾಣಿಯಲ್ಲವೇ?

ಪುರಾಣಗಳಷ್ಟೇ ಅಲ್ಲ, ಇತಿಹಾಸ ಕಾಲದಲ್ಲೂ ವೀಣೆಗೆ ಸರಿಸಾಟಿ ಕಾಣದ ಸ್ಥಾನಮಾನ. ಶಾಸನಗಳಲ್ಲಿ, ಕಾವ್ಯಗಳಲ್ಲಿ, ಚಿತ್ರ ಮತ್ತು ಶಿಲ್ಪ ಕಲೆಗಳಲ್ಲಿ ವೀಣೆಯ ಬಗ್ಗೆ ಮತ್ತು ವೈಣಿಕರ ಬಗ್ಗೆ ಸಿಕ್ಕಿರುವ ಆಧಾರ ಅವಶೇಷಗಳು ಅಪಾರ. ಹೀಗೆ ಅತಿ ಪ್ರಾಚೀನವಾದರೂ, ಎಂದೆಂದಿಗೂ ನೂತನವೇ ಆಗಿ ಜನರನ್ನು ಇತಿಹಾಸದುದ್ದಕ್ಕೂ ತಲೆದೂಗಿಸುತ್ತಾ ಬಂದಿರುವ ವೀಣೆ ಕೇವಲ ಒಂದು ಜಡವಾದ್ಯವಲ್ಲ; ಅದೊಂದು ಚೈತನ್ಯದ ಕೇಂದ್ರ ಎಂಬ ನಂಬಿಕೆ ನಮ್ಮ ಸಂಸ್ಕೃತಿಯಲ್ಲಿ ಬೆಳೆದು ಬಂದಿದೆ. ಅದರ ಒಂದೊಂದು ಅಂಗದಲ್ಲಿ ಒಬ್ಬೊಬ್ಬ ದೇವತೆಯ ಆವಾಹನೆ; ಬ್ರಹ್ಮ, ವಿಷ್ಣು, ಮಹೇಶ್ವರ ನೆಲೆ; ಅದರ ಇಪ್ಪತ್ನಾಲ್ಕು ಮೆಟ್ಟಲು ಇಪ್ಪತ್ನಾಲ್ಕು ಅಕ್ಷರಗಳ ಗಾಯತ್ರಿ ಮಂತ್ರದ ಪ್ರತೀಕ-ಎಂಬ ಪೂಜ್ಯ ಭಾವನೆ ಶಾಸ್ತ್ರ ಗ್ರಂಥಗಳಲ್ಲೂ ಜನರ ಮನಸ್ಸಿನಲ್ಲೂ ಬೇರೂರಿದೆ. ಆದುದರಿಂದ ವೀಣೆಯನ್ನು "ಸರ್ವದೇವ ಮಯೀ" "ಸರ್ವಮಂಗಳೀ" ಎಂದು ಸ್ಮೃತಿಗಳು ಸಾರಿವೆ. ವೀಣಾವಾದನ ಒಂದು ತಪೋ ವಿಧಾನ, ಅಧ್ಯಾತ್ಮ ಮಾರ್ಗೋಪಾಸನ ಎಂದು ನಮ್ಮ ಋಷಿಗಳು ಅದನ್ನು ಕಂಡಿದ್ದಾರೆ. ಯಾಜ್ಞವಲ್ಕ್ಯ ಸ್ಮೃತಿಯಂತೂ ವೀಣಾ ವಾದನದ ಉಪಾಸನೆಯಿಂದ ಅನಾಯಾಸವಾಗಿ ಮೋಕ್ಷ ಪ್ರಾಪ್ತಿ ಸಾಧ್ಯವೆಂದು ಕೂಗಿ ಹೇಳುತ್ತದೆ.

ಭಾರತೀಯ ಸಂಸ್ಕೃತಿಯಲ್ಲಿ ಇಂತಹ ಉನ್ನತ ಸ್ಥಾನ ಪಡೆದ ವೀಣೆಗೆ ದಕ್ಷಿಣ ಭಾರತದಲ್ಲಂತೂ ವೈವಿಧ್ಯಮಯವಾದ ಇತಿಹಾಸ. ಉತ್ತರ ಭಾರತದ ಸಂಸ್ಕೃತಿ ಮಹಮದೀಯರ ದಾಳಿಗೆ ಸಿಕ್ಕಿ ತತ್ತರಿಸಿದ ಕಾಲದಲ್ಲಿ, ದಕ್ಷಿಣ ಭಾರತವನ್ನು ಆ ದಾಳಿಯಿಂದ ರಕ್ಷಿಸಲು ಧೀರ ಹೋರಾಟ ನಡೆಸಿದ ಕೀರ್ತಿ ವಿಜಯನಗರದ್ದು. ಅದರಂತೆಯೇ ಉತ್ತರ ಭಾರತದ ಸಂಗೀತ ಮಹಮದೀಯರ ಪ್ರಭಾವಕ್ಕೆ ಒಳಗಾಗಿ ತನ್ನತನವನ್ನು ಕಳೆದುಕೊಳ್ಳುತ್ತಿದ್ದ ಕಾಲದಲ್ಲಿ ಇಡೀ ದಕ್ಷಿಣ ಭಾರತದ ಸಂಗೀತವನ್ನು ಆ ಪ್ರಭಾವದ ಹೊಡೆತದಿಂದ ತಡೆದ ಕೀರ್ತಿ ಅದೇ ವಿಜಯನಗರದ್ದು. ವಿಜಯ ನಗರದ ಅರಸರಿಗೆ "ಕರ್ನಾಟಕ ರತ್ನ ಸಿಂಹಾಸನಾಧೀಶ್ವರ"ರೆಂದು ಕೀರ್ತಿ. ಆದ್ದರಿಂದಲೇ, ಇಡೀ ದಕ್ಷಿಣ ಭಾರತದ ಸಂಗೀತವನ್ನು "ಕರ್ನಾಟಕ ಸಂಗೀತ" ಎಂದು ಕರೆಯುವ ವಾಡಿಕೆ ಕ್ರಿ. ಶ. ಹದಿನಾಲ್ಕು- ಹದಿನೈದನೇ ಶತಮಾನದಿಂದಲೇ ಕಾಣಬರುತ್ತದೆ. ಇದು ವೀಣಾ ಕ್ಷೇತ್ರಕ್ಕೂ ಅನ್ವಯಿಸುತ್ತದೆ. ಉತ್ತರದಲ್ಲಿ ವೀಣಾ ಸಂಪ್ರದಾಯ ಮಹಮದೀಯರ ದಾಳಿಗೆ ತುತ್ತಾಗಿ ಶುದ್ಧ ಭಾರತೀಯತೆಯನ್ನು ಸ್ವಲ್ಪ ಮಟ್ಟಿಗಾದರೂ ಕಳೆದುಕೊಂಡಾಗ, ದಕ್ಷಿಣ ಭಾರತದಲ್ಲಿ ವೀಣಾ ಸಂಪ್ರದಾಯದ ಶಾಸ್ತ್ರೀಯತೆ, ಪರಿಶುದ್ಧತೆಗಳನ್ನು ಸಂರಕ್ಷಿಸಿದ ಕೀರ್ತಿ ಕರ್ನಾಟಕಕ್ಕೇ ಸಲ್ಲುತ್ತದೆ. ಆಗಿನ ಸಂಗೀತ ಕಲಾಚಾರ್ಯರಲ್ಲಿ ಬಹುಮಂದಿ ವೈಣಿಕರು. ವಿದ್ಯಾರಣ್ಯರು, ವ್ಯಾಸರಾಜರು, ನಿಜಗುಣ ಶಿವಯೋಗಿಗಳು, ರಾಘವೇಂದ್ರಯತಿಗಳು- ಹೀಗೆ ಬೆಳೆಸುತ್ತಾ ಹೋಗಬಹುದು ಆ ವೈಣಿಕರ ಪಟ್ಟಿಯನ್ನು. ವಿಜಯನಗರ ಸಾಮ್ರಾಜ್ಯದಲ್ಲಿ ಎಲ್ಲ ಲಲಿತ ಕಲೆಗಳಿಗಿಂತ ಅತಿಶಯವಾಗಿ ಸಂಗೀತವು. ಅದರಲ್ಲೂ ವೀಣಾ ವಾದನ ಕಲೆಯು ಸಾಮ್ರಾಜ್ಯದಷ್ಟೇ ವೈಭವದಿಂದ ಮೆರೆದಿರಬೇಕು. ಆ ಕಾಲದ ಮಹಾಕಾವ್ಯಗಳಲ್ಲಿ ಒಂದಾದ ಮಹಾಕವಿ ರತ್ನಾಕರವರ್ಣಿಯ 'ಭರತೇಶ ವೈಭವ'ದಲ್ಲಿ "ವೀಣಾ ಸಂಧಿ" ಎಂಬ ಒಂದು ಸಂಧಿಯನ್ನೇ ಕವಿ ವೀಣಾ ವೈಭವದ ನಿರೂಪಣೆಗಾಗಿ ಮೀಸಲಿರಿಸಿದ್ದಾನೆ. ಜೊತೆಗೆ ಇತರ ಸಂಧಿಗಳಲ್ಲೂ ವೀಣೆಯ ಝೇಂಕಾರವನ್ನು ಕವಿ ಪ್ರತಿಧ್ವನಿಸಿದ್ದಾನೆ.



ವೈಣಿಕ ಪ್ರವೀಣ ಭಕ್ಷಿ ಸುಬ್ಬಣ್ಣನವರು

ವ್ಯಾಪ್ತಿ

ವಿಸ್ತಾರವಾದ ಅರ್ಥಗಳನ್ನು ಪಡೆದ "ಪರಂಪರೆ" ಎಂಬ ಶಬ್ದವನ್ನು ಒಂದು ವಿಶಿಷ್ಟವಾದ ಸಂಪ್ರದಾಯ ರೀತಿ, ಶೈಲಿ, ವಿಧಾನ, ಮಟ್ಟು, ಧಾಟಿ ಮೊದಲಾದ ಅರ್ಥಗಳಲ್ಲೂ ಬಳಸಬಹುದು. ಇಂತಹ ಅರ್ಥಗಳಲ್ಲೇ "ಮೈಸೂರು ವೀಣಾ ಪರಂಪರೆ" ಎಂಬ ಮಾತು ಇಂದು ಪ್ರಚಲಿತವಾಗಿರುವುದು. ದಕ್ಷಿಣಭಾರತದಲ್ಲಿ ಇನ್ನೂ ಅನೇಕ ವೀಣಾ ಪರಂಪರೆಗಳು ಪ್ರಚಾರದಲ್ಲಿವೆ. ಅವುಗಳಲ್ಲಿ ತಂಜಾವೂರು ಪರಂಪರೆ, ಆಂಧ್ರ ಪರಂಪರೆ, ಕೇರಳ ಪರಂಪರೆ ಮುಖ್ಯವಾದವು. ಮದ್ರಾಸಿನ ಧನಮ್ಮಾಳ್, ವಿಜಯನಗರದ ವೆಂಕಟರಮಣದಾಸರು, ಪೀಠಾಪುರಂ ಸಂಗಮೇಶ್ವರ ಶಾಸ್ತ್ರಿಗಳು, ಕಾರೈಕುಡಿ ಸುಬ್ಬರಾಮ ಐಯರ್ ಮತ್ತು ಸಾಂಬಶಿವಯ್ಯರ್ ಮುಂತಾದವರ ಹೆಸರುಗಳು ಉಳಿದ ಪರಂಪರೆಗಳಲ್ಲಿ ಪ್ರಮುಖವಾದರೆ. ಮೈಸೂರು ಪರಂಪರೆಯ ಅಧ್ವರ್ಯುಗಳೆಂದರೆ ವೈಣಿಕ ಪ್ರವೀಣ ವೀಣೆ ಸುಬ್ಬಣ್ಣ ಹಾಗೂ ವೈಣಿಕ ಶಿಖಾಮಣಿ ವೀಣೆ ಶೇಷಣ್ಣನವರು. ಈ ಒಬ್ಬೊಬ್ಬ ವೈಣಿಕರದೂ ಒಂದೊಂದು ವಿಶಿಷ್ಟ ಶೈಲಿ. ಒಬ್ಬರನ್ನೊಬ್ಬರು ಅನುಕರಿಸದ ತಮ್ಮದೇ ಆದ ಬಾನಿ. ಇವರೆಲ್ಲ ಸ್ವತಂತ್ರ ಪರಂಪರೆಯನ್ನೇ ನಿರ್ಮಿಸುಬಲ್ಲ, ತನ್ನತನವನ್ನು ವೀಣಾವಾದನದಲ್ಲಿ ಸಾಧಿಸಿದ ಮಾರ್ಗಪ್ರವರ್ತಕರು. ಆ ಒಂದೊಂದು ಪರಂಪರೆಗೂ ತನ್ನದೇ ಆದ ಗುಣ ಲಕ್ಷಣಗಳು. ಆ ವಿಶಿಷ್ಟ ಗುಣ ಲಕ್ಷಣಗಳೇ ಒಂದು ಪರಂಪರೆಯನ್ನು ಮತ್ತೊಂದರಿಂದ ಪ್ರತ್ಯೇಕಿಸುವ ಹೆಗ್ಗುರುತುಗಳು. ವೀಣೆಯ ಮೊರವಾದ ಹಾಗೂ ಅದರ ವಾದನ ವೈಖರಿ ಎರಡರಲ್ಲೂ ಆ ಹೆಗ್ಗುರುತುಗಳನ್ನು ನಾವು ಗಮನಿಸಬಹುದು.

ಮೈಸೂರು ಪರಂಪರೆಯ ಉಗಮ

ಅನೇಕ ದೃಷ್ಟಿಗಳಿಂದ, ಆದರಲ್ಲೂ ಸಾಂಸ್ಕೃತಿಕ ದೃಷ್ಟಿಯಿಂದ ವಿಜಯನಗರದ ಉತ್ತರಾಧಿಕಾರಿಗಳಾದ ಮೈಸೂರಿನ ಯದುವಂಶದ ಒಡೆಯರ ಮನೆತನದ ಅರಸರ ಕಾಲದಲ್ಲಿ ವೀಣಾ ಸಂಪ್ರದಾಯಕ್ಕೆ ರಾಜಾಶ್ರಯವನ್ನು ಮುಂದುವರೆಸಿದ್ದು ಮಾತ್ರವಲ್ಲದೆ ಅದನ್ನು ಮತ್ತಷ್ಟು ಉಜ್ವಲವಾಗಿ ಬೆಳೆಸಿದರು. ಆದರಲ್ಲೂ ಮುಮ್ಮಡಿ ಕೃಷ್ಣರಾಜ ಒಡೆಯರು, ಚಾಮರಾಜ ಒಡೆಯರು, ನಾಲ್ವಡಿ ಕೃಷ್ಣರಾಜ ಒಡೆಯರು, ಹಾಗೂ ಜಯಚಾಮರಾಜ ಒಡೆಯರು ಅದಕ್ಕೆ ಅತಿಶಯವಾದ ಪ್ರೋತ್ಸಾಹ ನೀಡಿದರು. ಇದರ ಫಲವಾಗಿ "ಮೈಸೂರು ವೀಣಾ ಪರಂಪರೆ" ಎಂಬ ಒಂದು ವಿಶಿಷ್ಟ ಪರಂಪರೆಯೇ ಬೆಳೆದು ಬರುವಂತಾಯಿತು.



ವೈಶಿಷ್ಟ್ಯಪೂರ್ಣವಾದ ಸ್ವತಂತ್ರ ಲಕ್ಷಣಗಳಿಂದ ಪುಷ್ಟಿಗೊಂಡ "ಮೈಸೂರು ವೀಣಾ ಪರಂಪರೆ" ಒಂದು ವೃಕ್ಷವಿದ್ದ ಹಾಗೆ. ಅದಕ್ಕೆ ಪ್ರೋತ್ಸಾಹದ ನೀರೆರೆದು ಪೋಷಿಸಿದ ಕೀರ್ತಿ, ಮೊದಲೇ ಹೇಳಿದಂತೆ, ಮೈಸೂರು ಅರಸರದು. ಆ ಅರಸರಲ್ಲಿ ಅನೇಕರು ಸ್ವತಃ ವೈಣಿಕರೇ ಆಗಿದ್ದುದು ಒಂದು ಮಹತ್ವದ ಅಂಶ. ಚಿಕದೇವರಾಯ ಒಡೆಯರರ ವೀಣಾವಾದನ ಕೌಶಲ್ಯವನ್ನು ತಿರುಮಲಾರ್ಯ ಕವಿ ತನ್ನ ಕಾವ್ಯದಲ್ಲಿ ಮುಕ್ತ ಕಂಠದಿಂದ ಪ್ರಶಂಸಿಸಿದ್ದಾನೆ. ಮುಂದೆ ಹೈದರಾಲಿ ಮತ್ತು ಟಿಪ್ಪೂ ಸುಲ್ತಾನರು ಸಹ ವೈಣಿಕರಿಗೆ ವಿಶೇಷ ರಾಜಾಶ್ರಯವನ್ನು ಮುಂದುವರೆಸಿದರು. ಹೈದರಾಲಿಯ ಆಸ್ಥಾನದಲ್ಲಿದ್ದ ಆದಪ್ಪಯ್ಯನವರ ಮಕ್ಕಳಲ್ಲಿ ಇಬ್ಬರು- ಅಪ್ಪಯ್ಯ ಮತ್ತು ಕುಪ್ಪಯ್ಯ- ತಂಜಾವೂರಿನ ಸರ್ಫೋಜಿ ಮಹಾರಾಜರ ಆಸ್ಥಾನದಲ್ಲಿ ಪ್ರಸಿದ್ಧ ವೈಣಿಕರಾಗಿದ್ದರೆಂದೂ, ಕುಪ್ಪಯ್ಯನವರ ಮಗಳಾದ ನರಸಮ್ಮನ ಮಗ ವೆಂಕಟಸುಬ್ಬಯ್ಯನವರು ಮತ್ತೆ ಮೈಸೂರಿಗೆ ಹಿಂದಿರುಗಿ ಇಲ್ಲಿ ರಾಜಾಶ್ರಯವನ್ನು ಪಡೆದರೆಂದೂ ಪ್ರತೀತಿ. ಇವರ ದತ್ತುಮಗ ದೊಡ್ಡ ಶೇಷಣ್ಣನವರು ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನದಲ್ಲಿ ವೀಣಾ ಭಕ್ತಿಯಾಗಿದ್ದರೆಂಬುದಂತೂ ನಿರ್ವಿವಾದ. ಇವರ ಹೆಮ್ಮೆಯ ಪುತ್ರರೇ ವೀಣೆ ಸುಬ್ಬಣ್ಣನವರು- ಮೈಸೂರ ವೀಣಾ ಪರಂಪರೆಯ ಆಧಾರ ಸ್ತಂಭಗಳಲ್ಲಿ ಮೊದಲಿಗರು. ಮತ್ತೊಬ್ಬರು ವೀಣೆ ಶೇಷಣ್ಣನವರು. ಇವರೂ ಸಹ ಅದೇ ದೊಡ್ಡ ಶೇಷಣ್ಣನವರ ಪ್ರಮುಖ ಶಿಷ್ಯರು. ಮೈಸೂರು ವೀಣಾ ಪರಂಪರೆಯ ನಯನದ್ವಯಗಳೆನಿಸಿದ ವೀಣೆ ಸುಬ್ಬಣ್ಣನವರನ್ನು ಮಗನಾಗಿಯೂ ವೀಣೆ ಶೇಷಣ್ಣನವರನ್ನು ಶಿಷ್ಯನನ್ನಾಗಿಯೂ ಪಡೆದು, ನಾಡಿಗೆ ನೀಡಿದ ದೊಡ್ಡ ಶೇಷಣ್ಣನವರು ನಿಜಕ್ಕೂ ದೊಡ್ಡವರೇ ಆಗಿದ್ದಾರೆ. ಅವರ ಸಮಕಾಲೀನರಾದ ಸಾಂಬಯ್ಯ, ಕಾಳಹಸ್ತಯ್ಯ, ವೆಂಕಟರಾಮಯ್ಯ ಹಾಗೂ ಆತ್ಮಾರಾಮಯ್ಯ ಈ ನಾಲ್ವರು ಸಹೋದರರು ಮುಮ್ಮಡಿ ಕೃಷ್ಣರಾಜ ಒಡೆಯರರ ಆಸ್ಥಾನದಲ್ಲಿದ್ದ ಪ್ರಮುಖ ವೈಣಿಕರು. ಮೈಸೂರು ವೀಣಾ ಪರಂಪರೆಗೆ ಈ ವೈಣಿಕರೆಲ್ಲ ತಲಕಾವೇರಿ ಇದ್ದ ಹಾಗೆ. ಈ ತಲಕಾವೇರಿಯಿಂದ, ಸಾಗಿ ಬಂದ ಮೈಸೂರ ವೀಣಾ ಪರಂಪರೆಯ ಕಾವೇರಿ ನದಿಯು ತುಂಬು ಪ್ರವಾಹವಾಗಿ ಭೋರ್ಗರೆದದ್ದು, ಮೊದಲೇ ಹೇಳಿದಂತೆ, ವೀಣೆ ಸುಬ್ಬಣ್ಣ ಹಾಗೂ ವೀಣೆ ಶೇಷಣ್ಣನವರ ಕಾಲದಿಂದ. ಮುಂದಕ್ಕೆ ಇವರೇ ಈ ಪರಂಪರೆಯ ಪ್ರವರ್ತಕದ್ವಯರು.



' ವೈಣಿಕ ಶಿಖಾಮಣಿ ' ವೀಣೆ ಶೇಷಣ್ಣನವರು

ವೀಣೆ ಮೊರಭಂಗಿ; ಮೈಸೂರಿನ ವೈಶಿಷ್ಟ್ಯ

ಮೈಸೂರು ಪರಂಪರೆಯ ವೀಣೆಯ ಮೆಟ್ಟಿಲುಗಳನ್ನು ಕಂಚಿನಿಂದ ಮಾಡಿದ್ದರೆ, ಇತರ ಪರಂಪರೆಗಳಲ್ಲಿ ಸಾಮಾನ್ಯವಾಗಿ ಹಿತ್ತಾಳೆಯನ್ನು ಬಳಸುತ್ತಾರೆ. ಇದರಿಂದ ನಮ್ಮ ವೀಣೆಯಲ್ಲಿ ನಾದ ಸ್ಫುರಣೆಗೆ ಇಂಬು ಹೆಚ್ಚುತ್ತದೆ. ಮೈಸೂರು ಪರಂಪರೆಯಲ್ಲಿ ವೀಣೆಯ ಶಿರೋಭಾಗವನ್ನು ಪ್ರಭಾವಳಿಯನ್ನು ಹೋಲುವ ಸಿಂಹಲಲಾಟದಿಂದ ಅಲಂಕರಿಸಿರುತ್ತಾರೆ. ಇದಕ್ಕೆ ಚಿನ್ನ, ಬೆಳ್ಳಿಯ ತಗಡನ್ನು ಬಳಸುವುದೂ ಉಂಟು. ಮೈಸೂರು ಪರಂಪರೆಯ ವೀಣೆಯಲ್ಲಿ ಬಹಳ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ "ಕುದುರೆ" ಮೇಲೆ ಹೊದಿಸುವ ಲೋಹದ ರೇಕು. ಸಾರಣಿ ತಂತಿಗೆ ಉಕ್ಕಿನ ರೇಕನ್ನೂ, ಪಂಚಮ, ಮಂದ್ರ, ಅನುಮಂದ್ರ ತಂತಿಗಳಿಗೆ ಕಂಚಿನ ರೇಕನ್ನೂ ಹೊದಿಸುತ್ತಾರೆ. ಇದು ನಾದ ಮಿಡಿತದ ಮೇಲೆ ಗಮನಾರ್ಹ ಪರಿಣಾಮ ಉಂಟುಮಾಡಿ ಕಂಪನದ ಕಾಲವನ್ನು ಸ್ವಲ್ಪಮಟ್ಟಿಗೆ ದೀರ್ಘವಾಗಿಸುತ್ತದೆ. ಇತರ ಪರಂಪರೆಯ ವೀಣೆಗಳಲ್ಲಿ ಈ ರೀತಿಯ ಕಂಚಿನ ರೇಕಿನ ಉಪಯೋಗ ಸಾಮಾನ್ಯವಾಗಿ ಇರುವುದಿಲ್ಲ. ಜೊತೆಗೆ ಮೈಸೂರು ಪರಂಪರೆಯಲ್ಲಿ "ಪಕ್ಕಸಾರಣಿ"ಗೂ ಸಹ ಕಂಚಿನ ರೇಕನ್ನು ಅಳವಡಿಸುವುದುಂಟು. ಇಷ್ಟೇ ಅಲ್ಲದೆ, ವೀಣೆಯ ಹೊರನೋಟದ ಸೌಂದರ್ಯ ಹೆಚ್ಚಿಸುವದಕ್ಕಾಗಿ ಅದರ ದಂಡಿ, ಕಾಯಿ, ಮತ್ತು ತಲೆಗಳ ಭಾಗದ ಹಾಸುಪದರಿನ ಇಕ್ಕೆಲಗಳ ಅಂಚಿನಲ್ಲೂ ದಂತದ ಪಟ್ಟಿಕೆಯ ಸುಂದರ ಕುಸುರಿಯನ್ನೂ ಮಾಡಿರುವುದುಂಟು. ಸೋರೆ ಬುರುಡೆಯ ಸುತ್ತ ದಶಾವತಾರದ ಚಿತ್ರೀಕರಣವನ್ನು ಮಾಡಿದ ವೀಣೆಗಳೂ ಮೈಸೂರು ಪರಂಪರೆಯಲ್ಲಿ ಹೇರಳವಾಗಿವೆ. ವೀಣೆಯ ಒಯ್ಯಾರದಲ್ಲಿ ಒಂದು ಕಲಾತ್ಮಕ ಆಕರ್ಷಣೆಯನ್ನುಂಟು ಮಾಡುವುದೇ ಇದರ ಉದ್ದೇಶ.

ಗಂಗೋತ್ರಿ—

ಈ ಪ್ರವರ್ತಕದ್ವಯರ ಗುರುಪರಂಪರೆ ಮಹಾತ್ಮರಾದ ತ್ಯಾಗರಾಜರಿಂದಲೇ ಪ್ರಾರಂಭವಾಗುತ್ತದೆ. ತ್ಯಾಗರಾಜರ ನೇರ ಶಿಷ್ಯರಾದ ವಾಲಾಜಪೇಟೆ ವೆಂಕಟರಮಣ ಭಾಗವತರ ಆಪ್ತ ಶಿಷ್ಯರು ಮೈಸೂರು ಸದಾಶಿವರಾಯರು. ವೀಣೆ ಸುಬ್ಬಣ್ಣ ಮತ್ತು ಶೇಷಣ್ಣ ಇಬ್ಬರಿಗೂ ಸದಾಶಿವರಾಯರು ಗುರುಗಳು. ಸುಬ್ಬಣ್ಣನವರ ಪ್ರಾರಂಭಿಕ ಪಾಠ ತಂದೆ ದೊಡ್ಡ ಶೇಷಣ್ಣನವರಲ್ಲೇ ನಡೆದರೂ, ಪ್ರೌಢಪಾಠ ನಡೆದದ್ದು ಸದಾಶಿವರಾಯರಲ್ಲಿ. ಅದರಂತೆಯೇ ವೀಣೆ ಶೇಷಣ್ಣನವರ ವೀಣಾ ಗುರುಗಳು ದೊಡ್ಡ ಶೇಷಣ್ಣನವರಾದರೂ, ಅವರ ಹಾಡುಗಾರಿಕೆಯ ಗುರುಗಳು ಸದಾಶಿವರಾಯರು. ಹೀಗಾಗಿ, ಮೈಸೂರು ವೀಣಾ ಪರಂಪರೆಯ ಗಂಗೆಗೆ ತ್ಯಾಗರಾಜರೇ "ಗಂಗೋತ್ರಿ."

ಶೈಲಿ

ಮೈಸೂರು ವೀಣಾ ಪರಂಪರೆಯ ವಾಹಿನಿ ತುಂಬಿ ಹರಿದದ್ದು ಮೊದಲೇ ಹೇಳಿದ ಹಾಗೆ ವೀಣೆ ಸುಬ್ಬಣ್ಣ ಮತ್ತು ವೀಣೆ ಶೇಷಣ್ಣನವರ ಕಾಲದಲ್ಲಿ. ಇಬ್ಬರ ವ್ಯಕ್ತಿತ್ವದಲ್ಲೂ ಸಮಾನ ಧರ್ಮ. ಅನ್ಯೋನ್ಯ ಸಂಬಂಧ. ವೀಣೆಯ ಬಗ್ಗೆ ಇಬ್ಬರದೂ ಒಂದೇ ರೀತಿಯ ತಾದಾತ್ಮ್ಯ. ವೀಣೆ ಬೇರಲ್ಲ, ತಾವು ಬೇರಲ್ಲ, ತಮ್ಮ ವ್ಯಕ್ತಿತ್ವ ಬೇರಲ್ಲ ಎಂಬ ತನ್ಮಯತೆ. ವೀಣೆ ಮೊದಲು, ತಾವು ಹಿಂದೆ ಎಂಬ ಸಮರ್ಪಣ ಭಾವ. ಇವರ ಸಂಕೇತವೋ



ಆ॥ ನೈ॥ ವಿ॥ ಸಾಂಬಯ್ಯನವರು

[illegible] ಮೊದಲೇ ವೀಣೆ [illegible] ಕಟ್ಟಿ ಸೇರಿಕೊಂಡಿರುತ್ತದೆ. ವೀಣೆಯ ಬಗ್ಗೆ ಅವರಿಗಿದ್ದ ಆದರ, ಅಕ್ಕರೆ, ಗೌರವ. [illegible] ತಮ್ಮ ಕಡೆಯ ದಿನಗಳಲ್ಲಿ [illegible] ಕಾಯಿಯನ್ನು [illegible] ತಮ್ಮ ವೀಣೆಯನ್ನು ಅಪ್ಪಿಕೊಂಡು [illegible] ಅರಿವಾಗುತ್ತಿದೆ. ಆದರೆ [illegible]? [illegible] ಉಡುಗಿ ಹೋಗುತ್ತಿದೆಯಲ್ಲಾ" ಎಂದು ಹಲುಬಿಸಿದ್ದರಂತೆ. ಇದನ್ನೇ ಹೋಲುವ ಘಟನೆ ವೀಣೆ ಸುಬ್ಬಣ್ಣನವರ ಜೀವನದಲ್ಲೂ ಬರುತ್ತದೆ. ಅವರು ತಮ್ಮ ಕೊನೆಯುಸಿರನ್ನು ಎಳೆಯುವ ಮೊದಲು ತಮ್ಮ ಅಚ್ಚುಮೆಚ್ಚಿನ ಶಿಷ್ಯರಾಗಿದ್ದ ಆರ್. ಎಸ್. ಕೇಶವಮೂರ್ತಿಯವರ ಕಡೆ ತಿರುಗಿ ತಾವು ನುಡಿಸುತ್ತಿದ್ದ ವೀಣೆಯನ್ನು [illegible] ಕೈಯಲ್ಲಿಟ್ಟು "ಇಗೋ ಹತ್ತು ಲಕ್ಷ ಹಣಕ್ಕಿಂತಲೂ ಮಿಗಿಲಾದ ಈ ಕನಕರಜತ ವೀಣೆಯನ್ನು ನಿನಗೊಪ್ಪಿಸುತ್ತಿದ್ದೇನೆ. ಇದರಲ್ಲಿ ಲಕ್ಷ್ಮಿ ಸರಸ್ವತಿಯರಿಬ್ಬರೂ ಇದ್ದಾರೆ. ಇಂದಿನಿಂದ ನಾನೂ ಅನಾಥನಾಗುತ್ತೇನೆ" ಎಂದರಂತೆ. ವೀಣೆಯ ಬಗ್ಗೆ ಅವರಿಬ್ಬರಲ್ಲೂ ಇದ್ದ ಪವಿತ್ರ ಭಾವ, ಉದಾತ್ತ ದೃಷ್ಟಿಗಳನ್ನು ಇಬ್ಬರ ಜೀವನದ ಈ ಘಟನೆಗಳು ಪ್ರತಿನಿಧಿಸುತ್ತವೆ



ಸುಬ್ಬಣ್ಣ ಮತ್ತು ಶೇಷಣ್ಣ ಇಬ್ಬರೂ ಒಟ್ಟಿಗೆ ಹಲವಾರು ದ್ವಂದ್ವ ವೀಣಾ ಕಚೇರಿಗಳನ್ನು ನಡೆಸಿದ್ದೂ ಉಂಟು. ತಂಜಾವೂರು ದೊರೆಗಳ ಆಸ್ಥಾನದಲ್ಲೂ ೫ನೇ ಜಾರ್ಜ್‌ರವರ ಪಟ್ಟಾಭಿಷೇಕದ ಸಂದರ್ಭದಲ್ಲಿ ದಿಲ್ಲಿಯಲ್ಲಿಯೂ ನಡೆದ ಇವರಿಬ್ಬರ ದ್ವಂದ್ವ ವೀಣಾ ಕಚೇರಿಗಳ ಬಗ್ಗೆ ಉಲ್ಲೇಖಾರ್ಹವಾದ ಘಟನೆಗಳುಂಟು. ಇವರಿಬ್ಬರ ಆತ್ಮೀಯತೆಯ ಬಗ್ಗೆ ಅನೇಕ ನಿದರ್ಶನಗಳುಂಟು. ಅದರಲ್ಲಿ ಒಂದನ್ನು ಇಲ್ಲಿ ಸ್ಮರಿಸಬಹುದು. ಮಹಾರಾಜರಾದ ಚಾಮರಾಜ ಒಡೆಯರರು ಯಾವುದೋ ಕಾರಣದಿಂದ ವೀಣೆ ಶೇಷಣ್ಣನವರ ಮೇಲೆ ಸಿಟ್ಟಾದರು. ಅನೇಕ ದಿನ ಅವರನ್ನು ಅರಮನೆಗೆ ಕರೆಸಿಕೊಳ್ಳಲಿಲ್ಲ. ಈ ಮಧ್ಯೆ ಶೇಷಣ್ಣನವರ ಕುಟುಂಬದಲ್ಲಿ ಕೆಲವು ಕ್ಲಿಷ್ಟ ಪರಿಸ್ಥಿತಿಗಳುಂಟಾಗಿ ಹಣದ ಮುಗ್ಗಟ್ಟುಂಟಾಯಿತು. ಇದನ್ನು ತಿಳಿದ ಸುಬ್ಬಣ್ಣನವರು ಶೇಷಣ್ಣನವರ ಸಹಾಯಕ್ಕೆ ಬಂದರು. ಆಕರ್ಷಕವಾದ ವಾಗ್ಗೇಯ ಕೃತಿಯೊಂದನ್ನು ರಚಿಸುವಂತೆ ಶೇಷಣ್ಣನವರಿಗೆ ಸಲಹೆ ನೀಡಿದರು. ಆದರಂತೆ ಶೇಷಣ್ಣನವರು ಇಂದು ಜನಪ್ರಿಯವಾಗಿರುವ ಜಂಜೂಟಿ ರಾಗದ "ಧಿರಣ" ಎಂಬ ತಿಲ್ಲಾನವನ್ನು ರಚಿಸಿ ಸುಬ್ಬಣ್ಣನವರಿಗೆ ನೀಡಿದರು. ಸುಬ್ಬಣ್ಣನವರು ಅದನ್ನು ರಾಜರ ಎದುರು ಪ್ರದರ್ಶಿಸಿದರು. ರಾಜರು ಅದನ್ನು ಅಪಾರವಾಗಿ ಮೆಚ್ಚಿ ೯.೦೦೦ ರೂ.ಗಳನ್ನು ಬಹುಮಾನವಾಗಿ ನೀಡಿದರು. ಈ ಹಂತದಲ್ಲಿ ಅದನ್ನು ರಚಿಸಿದವರು ಶೇಷಣ್ಣನವರೆಂಬ ಸಂಗತಿಯನ್ನು ಸುಬ್ಬಣ್ಣನವರು ರಾಜರಿಗೆ ತಿಳಿಸಿದರು. ಪ್ರಭುಗಳಿಗೆ ಆಶ್ಚರ್ಯ ಆನಂದಗಳ ಜೊತೆಗೆ ಶೇಷಣ್ಣನವರ ಮೇಲಿದ್ದ ಸಿಟ್ಟಿಳಿಯಿತು. ಅವರನ್ನು ಮೊದಲಿನಂತೆ ಅರಮನೆಗೆ ಕರೆಸಿಕೊಂಡು ಆತ್ಮೀಯತೆಯಿಂದ ಕಾಣಲು ಪ್ರಾರಂಭಿಸಿದರು.


ಇಂತಹುದು ವೀಣೆ ಸುಬ್ಬಣ್ಣನವರ ಹೃದಯವಂತಿಕೆ. ಪ್ರತಿಭೆಯನ್ನು ಕಂಡಲ್ಲಿ ಅದನ್ನು ಮೆಚ್ಚುವ ಬಹು ದೊಡ್ಡ ಗುಣ ಅವರಲ್ಲಿತ್ತು. ಒಮ್ಮೆ ಸುಬ್ಬಣ್ಣನವರ ಮನೆಯಲ್ಲಿ ಮಹಾ ವೈದ್ಯನಾಥ ಭಾಗವತರ ಕಚೇರಿ ನಡೆಯಿತು. ಅದನ್ನು ಕೇಳಿ ಆನಂದಿಸಿದ ಸುಬ್ಬಣ್ಣನವರು ತಮ್ಮ ಬೆರಳಲ್ಲಿದ್ದ ರತ್ನ ಖಚಿತವಾದ ಪಚ್ಚೆಯ ಉಂಗುರವನ್ನು ಬಿಚ್ಚಿ, ಅದನ್ನು ವೈದ್ಯನಾಥರ ಬೆರಳಿಗೆ ತೊಡಿಸುತ್ತಾ "ಇದು ಇರಬೇಕಾದ ಸರಿಯಾದ ಜಾಗವೆಂದರೆ ನಿಮ್ಮ ಬೆರಳೇ" ಎಂದರಂತೆ. ಸುಬ್ಬಣ್ಣನವರು ಗುಣೈಕಗ್ರಾಹಿಗಳು ಎಂಬುದಕ್ಕೆ ಇದು ಜ್ವಲಂತ ನಿದರ್ಶನ.

ಇಂತಹ ಉದಾತ್ತಚರಿತರಾದ ವೀಣೆ ಭಕ್ತಿ ಸುಬ್ಬಣ್ಣನವರದು ಮಧ್ಯ ಎತ್ತರದ ಮಟ್ಟಸ ನಿಲುವು. ಎದ್ದು ಕಾಣುವ ನಿಡು ಮೂಗು, ಮೊನೆ ಮೀಸೆಯ ಸುಂದರ ಮುಖ ವರ್ಚಸ್ಸು. ದರ್ಬಾರ್ ಪೋಷಾಕಿನಲ್ಲಿದ್ದಾಗಂತೂ ರಾಜ ಗಾಂಭೀರ್ಯದ ಸಹಜ ಠೀವಿ. ಆಗರ್ಭ ಶ್ರೀಮಂತರಾದ ಅವರದು ರಾಜೋಚಿತ ತುಂಬುಜೀವನ. ಕಲೆಗೆ, ಕಲಾವಿದರಿಗೆ ಸದಾ ನೆರವು, ಬಹುಮಾನ, ಗೌರವ ಸನ್ಮಾನಗಳನ್ನು ನೀಡಿ ಆದರಿಸುವ ಉದಾರ ಮನೋಧರ್ಮ. ಅದರಂತೆಯೇ ಅವರ ಸಂಗೀತ ಮನೋಧರ್ಮವೂ ಅಷ್ಟೇ ಪರಿಪೂರ್ಣ, ವೀಣಾ ವಾದನದಲ್ಲಿ ಮಾತ್ರವಲ್ಲದೆ ಹಾಡುಗಾರಿಕೆಯಲ್ಲೂ ಸಮಾನ ಪರಿಣತಿ, ನಾಲ್ಕೂವರೆ ಮನೆಯ ಕೋಮಲ ಶಾರೀರ ಅವರದು. ವೀಣೆಯ ಜೊತೆಗೆ ಬಾಯಲ್ಲೂ ಹಾಡುತ್ತಿದ್ದರಂತೆ. ಒಮ್ಮೊಮ್ಮೆ ವೀಣೆ ನುಡಿಸುವುದನ್ನು ಇದ್ದಕ್ಕಿದ್ದಂತೆ ನಿಲ್ಲಿಸಿ, ಬಾಯಲ್ಲೇ ಮುಂದುವರಿಸುತ್ತಿದ್ದರಂತೆ. ಆಗ ಶ್ರೋತೃಗಳಿಗೆ ಯಾವುದು ವೀಣೆಯ ಧ್ವನಿ, ಯಾವುದು ಕಂಠಧ್ವನಿ ಎನ್ನುವುದೆ ತಿಳಿಯದೆ "ಕೈಯೋ, ಕೊರಳೋ" ಎಂದು ತಬ್ಬಿಬ್ಬಾಗುತ್ತಿದ್ದರಂತೆ. ಇದನ್ನು ನೆನೆಸಿಕೊಂಡಾಗಲೆಲ್ಲ ನಮ್ಮ ತಂದೆಯವರು ಮಹಾಕವಿ ರತ್ನಾಕರವರ್ಣಿಯ ಭರತೇಶ ವೈಭವದ ಈ ಸಾಲುಗಳನ್ನು ನೆನಪು ಮಾಡಿಕೊಳ್ಳುತ್ತಿದ್ದರು.


> ವೀಣೆಯೊಳಗೊಮ್ಮೆ ತೋರುವಳು ರಾಗವ ತನ್ನ
> ಗೋಣೊಳಗೊಮ್ಮೆ ತೋರುವಳು.
> ವೀಣೆಯನೊಂದ ಬಿಟ್ಟೊಂದ ನುಡಿಸುವಳೀ
> ಜಾಣೆಯೆಂಬಂತಿಹುದಾಗ
> ವೀಣೆಯ ನುಡಿಸುತ ಪಾಡೀದರವಳೀಗ
> ವೀಣೆಗಳೆರಡನೊಂದಾಗಿ
> ಮೂಣಿ ನುಡಿಸುತ್ತಿದ್ದಳೆಂಬೊಲಿಹುದು ಮರುಳ
> ರಾಣಿ ದನಿಯ ಚೆಲ್ವಿಕೆಯೆ.

ಸುಬ್ಬಣ್ಣನವರ ವೀಣಾವಾಹಿನಿ

ತಾವು ಬೆಳೆಯಬೇಕು ಎಂದು ಹಂಬಲಿಸುವುದಕ್ಕಿಂತ ಅನ್ಯರನ್ನು ಬೆಳೆಸಬೇಕು, ಕಲೆಯನ್ನು ಬೆಳೆಸಬೇಕೆಂಬುದರಲ್ಲೇ ಆತ್ಮಸಂತೋಷವನ್ನು ಕಂಡುಕೊಂಡವರು, ವೀಣೆ ಸುಬ್ಬಣ್ಣನವರು. ಇದರ ಫಲವಾಗಿ ಅಪ್ರತಿಮರಾದ ವೈಣಿಕ ಶ್ರೇಷ್ಠರನ್ನು ಅವರು ನಾಡಿಗೆ ನೀಡಿದರು. ಚಿಕ್ಕರಾಮರಾಯರು, ಬಿಡಿಕವಾಡಿ ಶ್ರೀನಿವಾಸ ಅಯ್ಯಂಗಾರ್, ಸ್ವರಮೂರ್ತಿ ವಿ. ಎಸ್. ರಾವ್, ವಿ. ಶ್ರೀಕಂಠಅಯ್ಯರ್, ಸುಬ್ಬಮ್ಮ, ಕುಮುದಾ ಹಾಗೂ ಆಂಡಾಳ್ ಸಹೋದರಿಯರು ಅವರ ಪ್ರಮುಖ ಶಿಷ್ಯರು. ವೈಣಿಕ ಪ್ರವೀಣ ಆರ್. ಎಸ್. ಕೇಶವಮೂರ್ತಿ ಹಾಗೂ ವೀಣೆ ಸುಬ್ಬಣ್ಣನವರ ಸಂಬಂಧವಂತೂ ಗುರು–ಶಿಷ್ಯ ಸಂಬಂಧವನ್ನೂ ಮೀರಿದ



ಸಂಗೀತ ಕಲಾ ಸಾಗರ
ಆ॥ ವೈ॥ ವಿ॥ ಕೇಶವಮೂರ್ತಿ



ವೈಣಿಕ ಸಾರ್ವಭೌಮ, ಮಂತ್ರಾಲಯದ ಆಸ್ಥಾನ ವಿದ್ವಾನ್, ಲಯನ್ ಆರ್. ಕೆ. ಸೂರ್ಯನಾರಾಯಣ್

ಎತ್ತರಕ್ಕೆ ಏರುತ್ತದೆ. ತಂದೆ–ಮಕ್ಕಳ ಸಂಬಂಧವನ್ನೂ ಮೀರುತ್ತದೆ. ತಮ್ಮ ವೀಣೆಯಲ್ಲಿ ತಾವು ಆವಾಹಿತರಾಗುವುದಾಗಿ ಹೇಳಿ ಸುಬ್ಬಣ್ಣನವರು ಅದನ್ನು ತಮ್ಮ ಕೊನೆಯ ಕಾಲದಲ್ಲಿ ಶ್ರೀ ಕೇಶವಮೂರ್ತಿಯವರಿಗೆ ನೀಡಿದರೆಂದು ಹಿಂದೆಯೇ ಬಂದಿದೆ. ಇಡೀ ಸಂಗೀತ ಪ್ರಪಂಚದಲ್ಲಿಯೇ ಇದೊಂದು ರೋಮಾಂಚನಕಾರಿಯಾದ ಘಟನೆ. ಶ್ರೀ ಕೇಶವಮೂರ್ತಿಯವರು ಎಲ್ಲ ದೃಷ್ಟಿಗಳಿಂದಲೂ ತಮ್ಮ ಉತ್ತರಾಧಿಕಾರಿ ಎಂಬ ನಂಬಿಕೆಯನ್ನು ಸುಬ್ಬಣ್ಣನವರು ಇರಿಸಿಕೊಂಡಿದ್ದುದರ ದ್ಯೋತಕ. ಅವರ ಆ ನಂಬಿಕೆಯನ್ನು ಕೊನೆಯವರೆಗೂ ಚಾಚೂ ತಪ್ಪದೆ ಕಾಪಾಡಿಕೊಂಡ ಶ್ರೀ ಕೇಶವಮೂರ್ತಿಯವರು ಸುಬ್ಬಣ್ಣನವರ ವೀಣಾ ಪರಂಪರೆಯ ನಿಷ್ಠಾವಂತ ಹರಿಕಾರರಾದರು. ಶ್ರೀ ಮೂರ್ತಿಯವರು ರುದ್ರಪಟ್ಟಣದ ಸುಪ್ರಸಿದ್ಧ ವೈಣಿಕ ಪರಂಪರೆಯ ಮನೆತನಕ್ಕೆ ಸೇರಿದವರು. ವೈಣಿಕ ವಿದ್ಯೆ ಅವರಿಗಿಂತ ಹಿಂದೆ ಇಪ್ಪತ್ತಮೂರು ತಲೆಮಾರುಗಳಿಂದ ಹರಿದು ಬಂದ ಪರಂಪರಾಗತ ಆಸ್ತಿ. ಸುಬ್ಬಣ್ಣನವರನ್ನು ಗುರುವಾಗಿ ಪಡೆದು, ಅವರ ಉತ್ತರಾಧಿಕಾರಿಯಾಗಿ ಭಾರತಾದ್ಯಂತ ಸುಬ್ಬಣ್ಣನವರ ವೀಣಾ ಶೈಲಿಯ ವೈಭವವನ್ನು ಹರಡುವುದರಲ್ಲಿ ಶ್ರೀಮೂರ್ತಿಯವರು ಸಫಲರಾದರು. ಗಾಂಧೀಜಿಯವರು ಇವರ ಕಚೇರಿಯನ್ನು ಕೇಳುತ್ತಾ ಮೈಮರೆತು "ಈ ವೀಣಾ ವಾದನ ನನ್ನನ್ನು ಸ್ವರ್ಗೀಯ ಆನಂದದಲ್ಲಿ ತೇಲಾಡಿಸಿತು" ಎಂದು ಉದ್ಗಾರವೆತ್ತಿದರಂತೆ. ಅದನ್ನು ಕೇಳುವಾಗ ದೀಪ ಆರಿಸಲು ಹೇಳಿದ್ದರಂತೆ. ವೀಣೆ ಸುಬ್ಬಣ್ಣನವರ ಸಂಪೂರ್ಣ ಅನುಗ್ರಹಕ್ಕೆ ಪಾತ್ರರಾದ ಕೇಶವಮೂರ್ತಿಗಳು, ಮೈಸೂರು ವೀಣಾ ಪರಂಪರೆಯನ್ನು ತಮ್ಮ ಗುರುಗಳ ಮಹದಾಶಯದಂತೆ ಭಾರತದಾದ್ಯಂತ ಮೊಳಗುವಂತೆ ಶ್ರಮಿಸಿದ್ದು ಮಾತ್ರವಲ್ಲದೆ, ಹೊಸ ಸಂಶೋಧನೆಯನ್ನು ನಡೆಸಿ ವೀಣೆಯ ಮಾಮೂಲು ೭ ತಂತಿಗಳ ಜೊತೆಗೆ ಇನ್ನೂ ೧೭ ತಂತಿಗಳನ್ನು ಅಳವಡಿಸಿ, ಅದರ ನಾದ ತರಂಗಗಳ ಪ್ರಭಾವಕ್ಕೆ ನಾವೀನ್ಯವನ್ನು ತಂದುಕೊಟ್ಟರು. ೨೪ ತಂತಿಗಳುಳ್ಳ ಆ ವೀಣೆಯ ನಾದಶ್ರುತಿ ೨೪ ಅಕ್ಷರಗಳುಳ್ಳ ಗಾಯತ್ರಿ ಮಂತ್ರಕ್ಕೆ ಸಮಾನ ಎಂಬುದನ್ನು ಸಂಕೇತಿಸುವಂತೆ ಆ ವೀಣೆಗೆ "ಗಾಯತ್ರಿ" ಎಂದು ನಾಮಕರಣ ಮಾಡಿದರು. ಕುದುರೆಯ ತುಸು ಕೆಳಗೆ, ಇಕ್ಕೆಲಗಳಲ್ಲಿ, ಇಂಗ್ಲೀಷಿನ "S" ಆಕಾರದ ಎರಡು ರಂಧ್ರಗಳನ್ನು ಕೊರೆದರು. ಇದರಿಂದಾಗಿ ಅದರ ನಾದ ಮತ್ತಷ್ಟು ಉತ್ತಮಗೊಳ್ಳುವುದೆಂದು ತೋರಿಸಿಕೊಟ್ಟರು. ಅವರ ವೈಣಿಕ ಪರಿಣತಿ ಇಷ್ಟಕ್ಕೇ ನಿಲ್ಲದೆ, ತಾವು ಶಾಸ್ತ್ರೀಯವಾಗಿಯೂ, ಆಳವಾಗಿಯೂ ಅಧ್ಯಯನ ಮಾಡಿದ ಪಾಶ್ಚಾತ್ಯ ಮತ್ತು ಹಿಂದೂಸ್ತಾನಿ ಸಂಗೀತವನ್ನೂ ವೀಣೆಯಲ್ಲಿ ಎಷ್ಟು ಪ್ರಭಾವಶಾಲಿಯಾಗಿ ಹೊಮ್ಮಿಸಬಹುದೆಂಬುದನ್ನು ತೋರಿಸಿಕೊಟ್ಟರು. ಇಷ್ಟಾದರೂ ಕರ್ನಾಟಕ ಸಂಪ್ರದಾಯದ ಶಾಸ್ತ್ರೀಯತೆಗೆ ಅಪಚಾರವಾಗದಂತೆ, ಸುಬ್ಬಣ್ಣನವರ ವಿಶಿಷ್ಟ ಶೈಲಿಯನ್ನು ಜನಪ್ರಿಯಗೊಳಿಸಿದರು. ಇವೆಲ್ಲ ಅವರ ವೈಣಿಕ ಪರಿಣತಿಯ ಪ್ರತೀಕಗಳು.

ವಾದನ ವೈಖರಿ

ವೀಣೆಯ ವಾದ್ಯ ಭಂಗಿಯ ಆಕರ್ಷಣೆಗೇ ಇಷ್ಟೊಂದು ಗಮನಕೊಟ್ಟ ಮೇಲೆ, ಅದರ ನಾದ ಭಂಗಿಯ ಕಡೆಗೆ ಮೈಸೂರಿನವರು ಇನ್ನೆಷ್ಟು ಲಕ್ಷ್ಯ ಕೊಟ್ಟಿರಬೇಡ ? ಆ ವಾದನ ವೈಖರಿಯ ವಿಶಿಷ್ಟ ಗುಣ ಲಕ್ಷಣಗಳೇ ಮೈಸೂರು ವೀಣಾ ಪರಂಪರೆಯ ಜೀವನಾಡಿ. ಆ ಜೀವನಾಡಿಯ ಮುಖ್ಯ ಮಿಡಿತವೆಂದರೆ ಅದರ "ತಾನ ವೈವಿಧ್ಯ". ಶ್ರೋತೃವಿನ ಕುತೂಹಲವನ್ನು ಒಂದೇ ಸಮನೆ ಕೊನೆಯವರೆಗೂ ಹಿಡಿದಿಟ್ಟು ಆಹ್ಲಾದದಲ್ಲಿ ಪರ್ಯಾವಸಾನಗೊಳಿಸುವುದೇ ಆ ತಾನ ವೈಖರಿಯ ಮುಖ್ಯ ಗುರಿ. ಮಹಾಕವಿ ರತ್ನಾಕರ ವರ್ಣಿಯು ತನ್ನ "ಭರತೇಶ ವೈಭವ" ದ ವೀಣಾಸಂಧಿಯಲ್ಲಿ ರಾಣಿ ಕುಸುಮಾಜಿ ನುಡಿಸಿದ ತಾನದ ವೈಖರಿಯನ್ನು ಹೀಗೆ ವರ್ಣಿಸಿದ್ದಾನೆ.


ಬಂದ ತಾನವ ಬರಲೀಸದೆ ಹೊಸ ಹೊಸ
ತೊಂದೊಂದು ಪರಿಯ ತಾನಗಳಾ
ತಂದು ತಂದೆಡೆಗೊಳಿಸಿದಳು ಗಾನವ ಕರೆ
ತಂದು ಕಾಣಿಸುವಂತೆ.........
ತಾನವ ಹೊಸ ಹೊಸತಾಗಿ ತಂದಳು ಜೇನ
ಸೋನೆಯ ಕರೆವಳೆಂಬಂತೆ......

ಮೈಸೂರು ಪರಂಪರೆಯ ವಿಶಿಷ್ಟ ಲಕ್ಷಣವಾದ ತಾನ ವೈಖರಿಯನ್ನು ಈ ಸಾಂಗತ್ಯ ಪದ್ಯಗಳು ಕಣ್ಣಿಗೆ ಕಟ್ಟಿದಂತೆ ಚಿತ್ರಿಸುತ್ತವೆ ಎಂದರೆ ತಪ್ಪಲ್ಲ. ಈ ತಾನ ವೈಖರಿಯ ಜೊತೆಗೆ ಮೀಟಿನಲ್ಲಿ ಎಳೆತ ಅಥವಾ ದೀರ್ಘ ಮೀಟು ಈ ಪರಂಪರೆಯ ಮತ್ತೊಂದು ವೈಶಿಷ್ಟ್ಯ..



ತಮ್ಮ ಗುರುಗಳು ತಮ್ಮ ಹೆಗಲ ಮೇಲಿರಿಸಿದ ಗುರುತರ ಹೊಣೆಯಾದ ಆ ವೀಣಾ ಪರಂಪರೆಯನ್ನು ಮುಂದುವರೆಸುವ ಕಾರ್ಯವು ಚಿರಕಾಲ ಮುಂದೆ ಸಾಗುವಂತೆ ಶ್ರೀ ಮೂರ್ತಿಯವರು ಶ್ರೀ ಎಚ್. ಎಸ್. ಕೃಷ್ಣಮೂರ್ತಿ ಮೊದಲಾದ ಶಿಷ್ಯರನ್ನು ತಮ್ಮ ಮಕ್ಕಳನ್ನೂ ತರಬೇತಿಗೊಳಿಸಿದರು. ಅವರ ಹತ್ತು ಜನ ಗಂಡು ಮಕ್ಕಳಲ್ಲಿ ೫ ಜನರು ವೀಣೆಯಲ್ಲಿ ಪರಿಣತರಾದರು. ಅವರ ಮೊದಲನೆ ಮಕ್ಕಳಾದ, ನನ್ನ ಅಗ್ರಜರಾದ ಶ್ರೀ ಆರ್. ಕೆ. ಶ್ರೀನಿವಾಸ ಮೂರ್ತಿಗಳು ಸುಬ್ಬಣ್ಣನವರ ಪರಂಪರೆಯನ್ನು ನಿರಾಡಂಬರವಾಗಿ ಮುಂದುವರೆಸುತ್ತಿದ್ದಾರೆ.


ಶ್ರೀ ಆರ್. ಎಸ್. ಕೇಶವಮೂರ್ತಿಯವರ ಎರಡನೆಯ ಮಗನಾಗುವ ಸೌಭಾಗ್ಯ ನನ್ನದು- ಅಂದರೆ ಪ್ರಸ್ತುತ ಲೇಖಕನದು. ವೀಣೆ ಸುಬ್ಬಣ್ಣನವರು ವೀಣೆಯ ಬಗ್ಗೆ ಇರಿಸಿಕೊಂಡಿದ್ದ ಮಹದಾಶಯಗಳನ್ನು ಲೋಕ ವಿಖ್ಯಾತಗೊಳಿಸಬೇಕೆಂಬ ತಮ್ಮ ಹೆಬ್ಬಯಕೆಯನ್ನು ಗುರುಗಳೂ ಆದ ನಮ್ಮ ತಂದೆಯವರು ಪದೇ ಪದೇ ನನ್ನಲ್ಲಿ ವ್ಯಕ್ತಪಡಿಸುತ್ತಿದ್ದರು. ನಮ್ಮ ತಂದೆಯವರ ಈ ಹೆಬ್ಬಯಕೆ ಹಾಗೂ ವೀಣೆ ಸುಬ್ಬಣ್ಣನವರ ಮಹದಾಶಯವನ್ನು ನನಸಾಗಿಸಬೇಕೆಂಬ ಸ್ಫೂರ್ತಿ ನನ್ನಲ್ಲಿ ಅದಮ್ಯವಾಗಿರಲು ಮಹಾನ್ ಚೇತನವಾದ ಸುಬ್ಬಣ್ಣನವರೇ ಮೂಲ ಕಾರಣವೆಂದು ನನ್ನ ಪ್ರಾಮಾಣಿಕ ಅನಿಸಿಕೆ. ಇಲ್ಲವಾದರೆ ನನ್ನಂತಹ ಸಾಧಾರಣ ವ್ಯಕ್ತಿ ಹತ್ತು ಸಲ ವಿಶ್ವ ಪರ್ಯಟನ ಮಾಡುವುದೆಂದರೇನು? ಎಲ್ಲ ಕಡೆಯ ಕಚೇರಿಗಳಲ್ಲಿ ಕಿಕ್ಕಿರಿದು ಸೇರುತ್ತಿದ್ದ ವಿದೇಶೀ ಶ್ರೋತೃಗಳು ತನ್ಮಯರಾಗಿ ವೀಣಾ ವಾದನವನ್ನು ಕೇಳಿ ವೀಣೆಯ ಬಗ್ಗೆ ಅಪಾರ ಗೌರವವನ್ನು ತೋರುವುದೆಂದರೇನು? ಇದರಲ್ಲಿ ವೈಯಕ್ತಿಕವಾಗಿ ತನ್ನದು ಎಂಬುದೇನೂ ಇಲ್ಲ, ಮೈಸೂರು ವೀಣಾ ಪರಂಪರೆಯ, ಅದರಲ್ಲೂ ಸುಬ್ಬಣ್ಣನವರ ಶೈಲಿಯ ಪ್ರಭಾವವೆಂದೇ ಈ ಲೇಖಕನ ಭಾವನೆ. ಭಾರತಾದ್ಯಂತ ರಾಷ್ಟ್ರನಾಯಕರ ಮತ್ತು ಮಠಾಧಿಪತಿಗಳ ಸಮ್ಮುಖಗಳಲ್ಲಿ, ಸುಪ್ರತಿಷ್ಠಿತ ಸಂಗೀತ ವೇದಿಕೆಗಳಲ್ಲಿ ಹಾಗೂ ಸಾರ್ವಜನಿಕ ಸಭೆಗಳಲ್ಲಿ ನಮ್ಮ ತಂದೆಯವರಿಂದ ಕೊಡಮಾಡಲಾದ "ಗಾಯತ್ರಿ" ವೀಣೆಯನ್ನು ನುಡಿಸಿ ಯಶಸ್ವಿಯಾದಾಗಲೂ, ಹಲವಾರು ಬಿರುದುಗಳು, ಸನ್ಮಾನಗಳು ಪ್ರಶಸ್ತಿಗಳು ದೊರೆತಾಗಲೂ ನನ್ನ ತಂದೆಯವರ ಮೂಲಕ ಸುಬ್ಬಣ್ಣನವರಿಂದಲೇ ಅಂತಹ ಅರ್ಹತೆ ನನಗೆ ದೊರೆಯಿತೆಂಬ ಧನ್ಯತೆಯ ಭಾವ ಉಂಟಾಗಿ ನಾನು ಪುಳಕಿತನಾಗಿದ್ದೇನೆ. ೧೯೭೯ರಲ್ಲಿ ಬೆಂಗಳೂರಿನ ಮಹಾಜನತೆ ನನಗೆ "ತೋಡ" ತೊಡಿಸಿ ಗೌರವಿಸಿದಾಗ, ಇದೇ ನಗರದ ಮಹಾ ಜನರು ೧೯೦೪ ರಲ್ಲಿ ವೀಣೆ ಸುಬ್ಬಣ್ಣನವರಿಗೆ "ತೋಡ" ತೊಡಿಸಿ ಗೌರವಿಸಿದರೆಂಬ ವಿಚಾರದ ನೆನಪಾಗಿ, ಆ ಗೌರವ ನನಗೆ ಸೇರಿದ್ದಲ್ಲ, ಸುಬ್ಬಣ್ಣನವರ ಪರಂಪರೆಗೆ ಸೇರಿದ್ದೆಂಬ ಭಾವನೆಯಿಂದ ನನ್ನ ಕಂಬನಿಗಳು ಒದ್ದೆಯಾದವು. ನವಗ್ರಹ ಕೃತಿಯೂ ಸೇರಿದಂತೆ ಹಲವಾರು ವಾಗ್ಗೇಯ ಕೃತಿಗಳ ರಚನೆಯ ಸಮಯದಲ್ಲಿ ನನ್ನಲ್ಲಿ ಮಿಂಚಿತ ಸ್ಫೂರ್ತಿಗೆ ಸುಬ್ಬಣ್ಣನವರ ರಸ, ಚೈತನ್ಯ ಹಾಗೂ ಅವರ ಪರಂಪರೆಯ ಕಾಪುಗಳು ಕಾರಣವೆಂದು ನನ್ನ ಒಳಮನಸ್ಸು ನುಡಿದಿದೆ. ವೀಣೆ ಸುಬ್ಬಣ್ಣನವರ ಪರಂಪರೆ ಮೈಸೂರು ವೀಣಾ ಇತಿಹಾಸದಲ್ಲಿ ಚಿರಕಾಲ ರಸ ವಾಹಿನಿಯಾಗಿ ಹರಿಯುವುದರಲ್ಲಿ ಸಂಶಯವಿಲ್ಲ.



ವೈಣಿಕ ಪ್ರವೀಣ ಆ!! ವೈ!! ವಿ!! ವೆಂಕಟಗಿರಿಯಪ್ಪನವರು



[illegible]



ವೈ॥ ವಿ॥ ಆರ್. ಎಸ್. ದೊರೆಸ್ವಾಮಿ






ಶೇಷಣ್ಣನವರ ವೀಣಾವಾಹಿನಿ

ಅದರಂತೆಯೇ ವೀಣೆ ಶೇಷಣ್ಣನವರ ಪರಂಪರೆಯೂ ಕೂಡ ಮತ್ತೊಂದು ರಸವಾಹಿನಿಯಾಗಿದೆ. ಶೇಷಣ್ಣನವರು ತಮ್ಮ ೧೦ನೇ ವಯಸ್ಸಿನಲ್ಲೇ ಮುಮ್ಮಡಿ ಕೃಷ್ಣರಾಜ ಒಡೆಯರ ಸಮ್ಮುಖದಲ್ಲಿ ಹಾಡಿ ರಾಜ ಸನ್ಮಾನ ಪಡೆದ ಸಹಜ ಪ್ರತಿಭರು. ವೀಣಾ ವಾದನದಲ್ಲಿ ಅವರ ಸಾಧನೆಯಂತೂ ಅಸದೃಶವಾದುದು. ಸ್ವತಃ ವಾಗ್ಗೇಯಕಾರರೂ ಕೂಡ. ಅವರ ವರ್ಣ, ಕೀರ್ತನೆ, ತಿಲ್ಲಾನಗಳು ವಾಗ್ಗೇಯ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆಗಳು. ಅದರಲ್ಲೂ ಅವರ ತಿಲ್ಲಾನಗಳು ಇತರರ ತಿಲ್ಲಾನಗಳಂತೆ ಧೃತಕಾಲದಲ್ಲಿರದೆ, ವಿಳಂಬ ಕಾಲ ಪ್ರಮಾಣದ ಅಪೂರ್ವ ರಚನೆಗಳು. ಇವುಗಳ ಜೊತೆಗೆ ಮೈಸೂರು ವೀಣಾ ಕ್ಷೇತ್ರಕ್ಕೆ ಅವರು ನೀಡಿದ ಮಹಾನ್ ಕೊಡುಗೆಯೆಂದರೆ ಪ್ರತಿಭಾವಂತ ಶಿಷ್ಯ ಪರಂಪರೆ. ಆ ಶಿಷ್ಯ ಪರಂಪರೆಯಲ್ಲಿ ಅಗ್ರಗಣ್ಯರೆಂದರೆ ವೆಂಕಟಗಿರಿಯಪ್ಪನವರು. ಇವರಂತೂ ತಲ ತಲಾಂತರಗಳ ವೀಣಾ ಮನೆತನಕ್ಕೆ ಸೇರಿದವರು. ಇವರ ತಾಯಿಯ ತಂದೆ, ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನದಲ್ಲಿದ್ದ ದೊಡ್ಡ ಸುಬ್ಬರಾಯರು ನಿಲ್ಲಿಸಿದ ಭಂಗಿಯಲ್ಲಿರುವ ವೀಣೆಯನ್ನು ನುಡಿಸುತ್ತಿರುವ ಅಪೂರ್ವ ಭಾವಚಿತ್ರವೊಂದು ಇಂದಿಗೂ ನೋಡಲು ಸಿಗುತ್ತದೆ. ಇಂತಹ ಪ್ರತಿಭಾವಂತ ವೈಣಿಕರ





ಎಲ್. ರಾಜಾರಾವ್.

ಮನೆತನಕ್ಕೆ ಸೇರಿದ ವೆಂಕಟ ಗಿರಿಯಪ್ಪನವರು "ನಿನಗೆ ಪಾಠ ಹೇಳಿದ್ದು ಸಾರ್ಥಕವಾಯಿತು" ಎಂದು ತಮ್ಮ ಗುರುಗಳಾದ ಶೇಷಣ್ಣನವರ ಬಾಯಿಂದಲೇ ಹೊಗಳಿಸಿಕೊಂಡವರು. ವೆಂಕಟಗಿರಿಯಪ್ಪನವರ ವೀಣಾ ಕಚೇರಿಯನ್ನು ಕೇಳಿದ ಶ್ರೋತೃಗಳು "ಈ ದಿನ ಶೇಷಣ್ಣನವರ ವೀಣಾವಾದನವನ್ನೇ ಕೇಳಿದಂತಾಯ್ತು" ಎಂದು ಉದ್ಗಾರವೆತ್ತುತ್ತಿದ್ದರಂತೆ. ವೆಂಕಟಗಿರಿಯಪ್ಪನವರು ಸ್ವತಃ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಶೇಷಣ್ಣನವರು ಹೇಗೆ ವೀಣೆ ನುಡಿಸುತ್ತಿದ್ದರೆಂಬುದನ್ನು ಕೇಳಿ ಆನಂದಿಸುವ ಅವಕಾಶ ಇಂದು ನಮಗೆ ಇಲ್ಲವಾದರೂ, ವೆಂಕಟಗಿರಿಯಪ್ಪನವರ ಈ ಕೃತಿಗಳಿಂದ ಅದನ್ನು ಊಹಿಸಿಕೊಳ್ಳಬಹುದು. ಇಂತಹ ವೈಣಿಕ ಶ್ರೇಷ್ಠರ ನೇರ ಶಿಷ್ಯರಲ್ಲಿ ಪ್ರಮುಖರಾದ ಪದ್ಮಭೂಷಣ ಡಾ. ವಿ. ದೊರೆಸ್ವಾಮಿ ಅಯ್ಯಂಗಾರ್ ಅವರು ಆ ಪರಂಪರೆಯ ಇಂದಿನ ಹರಿಕಾರರಾಗಿರುವುದು ನಮ್ಮ ಸೌಭಾಗ್ಯವೇ ಸರಿ. ಕರ್ನಾಟಕದಲ್ಲಷ್ಟೇ ಅಲ್ಲದೆ ಶ್ರೀಯುತರು ಭಾರತದಾದ್ಯಂತ ಮೈಸೂರು ವೀಣಾ ಪರಂಪರೆಯನ್ನೂ ಅದರಲ್ಲೂ ವೀಣೆ ಶೇಷಣ್ಣನವರ ಶೈಲಿಯನ್ನೂ ವಿಜೃಂಭಿಸುತ್ತಿರುವ ಸಮಕಾಲೀನ ವೈಣಿಕ ಪುಂಗವ. ಲಂಡನ್, ಅಮೇರಿಕಾ, ರಷ್ಯಾ ದೇಶಗಳಲ್ಲೂ ಮೈಸೂರು ವೀಣೆಯ ನಾದ ಸೌರಭವನ್ನು ಇವರು ಹರಡಿದ್ದಾರೆ. ಹತ್ತಾರು ಪ್ರತಿಭಾವಂತ ಶಿಷ್ಯರನ್ನು ನಾಡಿಗೆ ನೀಡಿದ್ದಾರೆ.

ವೆಂಕಟಗಿರಿಯಪ್ಪನವರ ನೇರ ಶಿಷ್ಯರಾದ ಸರ್ವಶ್ರೀ ಆರ್. ಎನ್. ದೊರೆಸ್ವಾಮಿ, ಎಂ. ಜೆ. ಶ್ರೀನಿವಾಸ ಅಯ್ಯಂಗಾರ, ಚೆಲುವರಾಯಸ್ವಾಮಿ ಮೊದಲಾದವರೆಲ್ಲಾ ವೀಣಾ ಶೇಷಣ್ಣನವರ ವೀಣಾ ಪರಂಪರೆಯನ್ನು ಉಳಿಸಿ, ಬೆಳೆಸುತ್ತಿರುವ ಮಹನೀಯರು. ವೀಣೆ ಶೇಷಣ್ಣನವರ ಮತ್ತೊಬ್ಬ ಶಿಷ್ಯರೂ ಆಸ್ಥಾನವಿದ್ವಾಂಸರೂ ಆಗಿದ್ದ ಭೈರವಿ ಲಕ್ಷ್ಮಿ ನಾರಾಯಣಪ್ಪನವರ ಸುಪುತ್ರರಾದ ದಿ. ಎಲ್. ರಾಜಾರಾಯರು ವೀಣಾ ವಾದನದ ಮೂಲಕವೂ, ಅಮೂಲ್ಯವಾದ ವಾಗ್ಗೇಯ ಕೃತಿ ಮತ್ತು ಸಂಗೀತ ಗ್ರಂಥಗಳ ಮೂಲಕವೂ ನಮ್ಮ ವೀಣಾ ಪರಂಪರೆಗೆ ಸಲ್ಲಿಸಿದ ಸೇವೆ ಅವಿಸ್ಮರಣೀಯವಾದದ್ದು. ಶೇಷಣ್ಣನವರ ನೇರ ಶಿಷ್ಯೆಯಾದ ದಿ. ತಿರುಮಲೆ ರಾಜಮ್ಮ (ಭಾರತಿ) ಅವರು ಕರ್ನಾಟಕ ಸಂಗೀತ ಕ್ಷೇತ್ರದಲ್ಲಷ್ಟೇ ಅಲ್ಲದೆ ಸಾಹಿತ್ಯ ಕ್ಷೇತ್ರಕ್ಕೂ ಸೇವೆ ಸಲ್ಲಿಸಿ ಕೀರ್ತಿಶೇಷರಾಗಿದ್ದಾರೆ. ವೀಣೆ ಶೇಷಣ್ಣನವರ ವಿಶಿಷ್ಟ ಪರಂಪರೆಯನ್ನು ಅವರ ಶಿಷ್ಯ ಪರಂಪರೆ ಮಾತ್ರವಲ್ಲದೆ ಅವರ ಮೊಮ್ಮಕ್ಕಳಾದ ದಿ. ಸ್ವರಮೂರ್ತಿ ವಿ. ಎನ್. ರಾವ್‌ರವರು ಉಳಿಸಿ, ಬೆಳಸಿ ಚಿರಕಾಲ ಉಳಿಯುವಂತೆ ಸೇವೆ ಸಲ್ಲಿಸಿದ್ದಾರೆ.

ಹೀಗೆ, ಸ್ವತಂತ್ರವಾದ ಶೈಲಿಯಿಂದ ಕೂಡಿದ ಮೈಸೂರು ವೀಣಾ ಪರಂಪರೆ ಈ ಶತಮಾನದ ಆದಿ ಭಾಗದವರೆಗೂ ತುಂಬು ವೈಭವದಿಂದ ವಿಜೃಂಭಿಸಿತಾದರೂ ಇತ್ತೀಚೆಗೆ ಅದು ಮಂದಗತಿಯತ್ತ ವಾಲುತ್ತಿದೆ ಎಂದರೆ ತಪ್ಪಾಗಲಾರದು. ಇದಕ್ಕೆ ಮುಖ್ಯ ಕಾರಣವೆಂದರೆ ಇತ್ತೀಚಿನ ತಲೆಮಾರಿನ ವೈಣಿಕರಲ್ಲಿ ಕಾಣುತ್ತಿರುವ ಸಾಧನೆಯ, ಉಪಾಸನಾ ದೃಷ್ಟಿಯ ಕೊರತೆ. ಜೊತೆಗೆ ಆಧುನಿಕ ಜೀವನ ವಿಧಾನ. ಆಧುನಿಕತೆಯ ಹೆಸರಿನಲ್ಲಿ ಶಾಸ್ತ್ರೀಯ ಸಂಗೀತದ ಕಡೆಗೆ ಸಮಾಜದಲ್ಲಿ ಕಾಣುತ್ತಿರುವ ನಿರ್ಲಕ್ಷ್ಯ. ಇಷ್ಟಾದರೂ ನಿರಾಶರಾಗಬೇಕಾದ ಪ್ರಮೇಯವಿಲ್ಲ. ಎಂತಹ ಸವಾಲನ್ನಾದರೂ ಎದುರಿಸಿ ಚಿರಕಾಲ ಉಳಿಯಲು ಅಗತ್ಯವಾದ ಆಂತರಿಕ ಶಕ್ತಿ ಹಾಗೂ ಹಿಂದಿನ ವೈಣಿಕರ ತಪೋಬಲಗಳು ಮೈಸೂರು ವೀಣಾ ಪರಂಪರೆಗೆ ಇದೆ ಎಂದರೆ ತಪ್ಪಲ್ಲ. ಆದರೂ ನಾವು ಕೈ ಕಟ್ಟಿ ಕೂಡದೆ ಅದು ಮತ್ತೊಮ್ಮೆ ನವೋತ್ಸಾಹದಿಂದ ಮೆರೆಯುವಂತಾಗಲು ಯುವ ಪೀಳಿಗೆಯ ವೈಣಿಕರು ಪ್ರಾಮಾಣಿಕವಾಗಿ ಪ್ರಯತ್ನಿಸಬೇಕು. ಜೊತೆಗೆ ಸಾರ್ವಜನಿಕರೂ, ಸರ್ಕಾರವೂ ಈ ಪರಂಪರೆಯ ಉಳಿವಿಗಾಗಿ ಅಗತ್ಯವಾದ ಉತ್ತೇಜಕ ವಾತಾವರಣವನ್ನು ನಿರ್ಮಿಸಲು ಹವಣಿಸಬೇಕು. ಆಗ ನಮ್ಮ ಈ ಭವ್ಯ ಪರಂಪರೆ ತಾನಾಗಿ ಮತ್ತೊಮ್ಮೆ ಸರ್ವಾಂಗೀಣ ಪ್ರಗತಿಯನ್ನು ಹೊಂದಲು ಸಾಧ್ಯ ಎಂಬುದಕ್ಕೆ ಇಂದಿನ ಅನೇಕ ಯುವ ವೈಣಿಕರು ಮೂಡಿಸುತ್ತಿರುವ ಭರವಸೆಯೇ ಸಾಕ್ಷಿ. ಆ ಮಾಲಿಕೆಯಲ್ಲಿ ಶ್ರೀಮತಿ ರಾಜಲಕ್ಷ್ಮಿ ತಿರುನಾರಾಯಣ್, ಶಾಂತಾರಾವ್, ಸುಮಾ ಸುಧೀಂದ್ರ, ಮೊದಲಾದ ಸೋದರಿಯರೂ ವೀಣೆ ದೊರೆಸ್ವಾಮಿ ಅಯ್ಯಂಗಾರರವರ ಪುತ್ರ ಶ್ರೀ ಡಿ. ಬಾಲಕೃಷ್ಣ ಅವರೂ, ಜೊತೆಗೆ ಶ್ರೀಮತಿ ಪದ್ಮಿನಿ ಬಾಲಸುಬ್ರಹ್ಮಣ್ಯಂ ಅವರನ್ನೂ ಉದಾಹರಿಸಬಹುದು, ಇವರಲ್ಲದೆ ಇನ್ನೂ ನೂರಾರು – ಏಕೆ – ಸಾವಿರಾರು ವೈಣಿಕರು ಹಗಲಿರುಳು ದುಡಿದು ಮೈಸೂರು ವೀಣಾ ಪರಂಪರೆಯ ಭವ್ಯತೆಯನ್ನು ಕಾಪಾಡಿಕೊಂಡು ಬಂದಿದ್ದಾರೆ – ಹಾಗೂ ಕಾಪಾಡುತ್ತಿದ್ದಾರೆ. ಇವರೆಲ್ಲರ ಶ್ರಮದ ಫಲವಾಗಿ ಆ ಪರಂಪರೆಯು ಮತ್ತೊಮ್ಮೆ ಮೊದಲ ವೈಭವವನ್ನು ಪಡೆದು ವಿಶ್ವದಾದ್ಯಂತ ವಿಪಂಚಿಯ ಇಂಚರವನ್ನು ಹರಡಲಿ ಎಂದು ಹಾರೈಸೋಣ. ●




ನಮ್ಮೆಜಮಾನ್ರಿಗೆ ಕುಡಿಯಲು
ಕಲಿಸಿದವರೇ ನೀವು. ಕೊನೇ
ಘಳಿಗೆಯಲ್ಲಿ ಗುರುಗಳನ್ನು ಕಣ್ತುಂಬಾ
ನೋಡಬೇಕು ಅಂದರು.



ನನ್ನ ಮಗನಿಗೆ ಕುಸ್ತಿ ಕಲಿಸಿದ್ದು
ಇವರೇ ಸಾರ್. ಈಗ ಅವನು
ಮಾಸ್ತರು, ಆಫೀಸರು, ಡ್ರೈವರ್
ಕಂಡಕ್ಟರ್ ಯಾರನ್ನೂ ಬಿಡೋಲ್ಲ.

ಪ್ರಾತಃ ಸ್ಮರಣೀಯರು

* ಕೆ.ಆರ್.ಸ್ವಾಮಿ



ಓ. ಶುರುವಾಯ್ತು ಪ್ರಾತಃಸ್ಮರಣೆ

ಪುರುಷ ಸರಸ್ವತಿ

ಡಾ. ದೊರೆಸ್ವಾಮಿ ಅಯ್ಯಂಗಾರ್

* ರಾವು.

ಪರಂಪರೆಯ ಮೌಲ್ಯಗಳಿಂದ ಭರಿತವಾದ ದೊರೆಸ್ವಾಮಿ ಅಯ್ಯಂಗಾರ್ ಅವರ ವೀಣಾವಾದನವನ್ನು ಆಲಿಸುವದೆಂದರೆ ಅದೊಂದು ಅನಿರ್ವಚನೀಯ ಅನುಭವ. ಕೇವಲ ತಂತ್ರಗಾರಿಕೆಯಾಗಲೀ, ಸಾಮರ್ಥ್ಯ ಪ್ರದರ್ಶನವಾಗಲೀ ಅಲ್ಲಿ ಕೇಳಸಿಗುವದಿಲ್ಲ. ಸಾಂಪ್ರದಾಯಿಕ ಪರಿಶುದ್ಧತೆಯೊಂದಿಗೆ ಪಕ್ವ ಮನೋಧರ್ಮದ ಸಹಯೋಗದಿಂದ ಪೂರ್ಣಸ್ವರೂಪದಲ್ಲಿ ಹೊರಹೊಮ್ಮುವ ಆ ಸಂಗೀತ ಶ್ರೋತೃಗಳನ್ನು ಮುಗ್ಧರನ್ನಾಗಿಸುತ್ತದೆ; ಮೈಮರೆಸುತ್ತದೆ.

"ಸಾರ್ವಭೌಮ" "ಘನ" ಎಂಬಿತ್ಯಾದಿಗಳು ಅತೀ ಸಾಮಾನ್ಯ ವಿಶೇಷಣಗಳು ಈ ಪರಂಪರೆಯ 'ದೊರೆ'ಗೆ. ಇವರು ಹರಿಸುವ ಸಂಗೀತ ಸುಧೆಯನ್ನು ಕೇಳಿದವರು ಇಂಥ ಉಪಮೆಯ ಯಥಾರ್ಥವನ್ನು ಕಂಡುಕೊಂಡಿದ್ದಾರೆ.





ಕೆಲವೇ ದಿನಗಳ ಹಿಂದೆ. ರಶಿಯದಲ್ಲಿ ನಡೆಯುತ್ತಿರುವ ಭಾರತ ಮಹೋತ್ಸವಕ್ಕೆ ತೆರಳಿದ ಕರ್ನಾಟಕದ ವೈಣಿಕ ತಂಡದವರ ಕಚೇರಿಯನ್ನು ವೋಲ್ಗಾಗ್ರಾಡ್‌ದಲ್ಲಿ ಏರ್ಪಡಿಸಲಾಗಿತ್ತು. ಕಚೇರಿ ಮುಗಿದ ಬಳಿಕ ತಂಡದವರು ಬೀದಿ ಸುತ್ತಲು ಹೊರಟಾಗ, ಅಪರಿಚಿತ ವ್ಯಕ್ತಿಯೊಬ್ಬ ತಂಡದ ನಾಯಕ – ಡಾ. ವಿ. ದೊರೆಸ್ವಾಮಿ ಅಯ್ಯಂಗಾರರ ಮುಂದೆ ಒಮ್ಮೆಲೇ ಬಂದು ನಿಂತ. ರಶಿಯನ್ ಭಾಷೆಯಲ್ಲಿ ಉದ್ವೇಗದಿಂದ ಮಾತ ನಾಡತೊಡಗಿದ; ಆ ವ್ಯಕ್ತಿ ಕಚೇರಿಗೆ ಬಂದಿದ್ದನೆಂದೂ, ತನ್ನ ಜೀವನದಲ್ಲಿ ಹಿಂದೆಂದೂ ಕಾಣದ ದೈವೀ ಅನುಭವ ಉಂಟಾಯಿತೆಂದು ಹೇಳುತ್ತಿದ್ದಾನೆಂದೂ ದುಬಾಷಿ ಡಾ. ಅಯ್ಯಂಗಾರರಿಗೆ ವಿವರಿಸಿದ. ಪ್ರಸಂಗ ಅಷ್ಟಕ್ಕೆ ನಿಲ್ಲಲಿಲ್ಲ. ಆ ವ್ಯಕ್ತಿ ತನ್ನ ಬೆರಳಿನಲ್ಲಿದ್ದ ಉಂಗುರವನ್ನು ತೆಗೆದು ಡಾ. ಅಯ್ಯಂಗಾರರಿಗೆ ಅರ್ಪಿಸಲು ಹೋದ. ಅದನ್ನು ಸ್ವೀಕರಿಸಲು ಅವರು ಒಪ್ಪಲಿಲ್ಲ. ಮೆಚ್ಚಿಕೆಯ ಮಾತು ಉಂಗುರಕ್ಕಿಂತ ಹೆಚ್ಚು ಮೌಲಿಕ ಎಂದು ಹೇಳಿ ಅವನನ್ನು ಸಮಾಧಾನಪಡಿಸಲು ಯತ್ನಿಸಿದರು. ಆದರೆ ಆ ವ್ಯಕ್ತಿ ಬಿಡಲಿಲ್ಲ. ಅವನ ಕಣ್ಣಿನಲ್ಲಿ ಆನಂದ ಭಾಷ್ಪತುಂಬಿತ್ತು. ಪಂಡಿತೋತ್ತಮರಿಗೆ ಇದೊಂದು ಅಲ್ಪಕಾಣಿಕೆ ಎಂದಾದರೂ ಸ್ವೀಕರಿಸಿರಿ ಎಂದು ಅಂಗಲಾಚಿದ. ಅವನ ಮನ ನೋಯಿಸ ಬಾರದೆಂದು ಡಾ. ಅಯ್ಯಂಗಾರರು ಅರೆಮನಸ್ಸಿನಿಂದಲೇ ಅದನ್ನು ಸ್ವೀಕರಿಸಿದರು. "ಈ ಉಂಗುರ ರಶಿಯದ ಜನತೆಗೆ ಭಾರತೀಯರ ಬಗೆ ಗಿರುವ ಆತ್ಮೀಯತೆ, ಸಂಗೀತದ ಬಗೆಗಿನ ಅವರ ಸೂಕ್ಷ್ಮಪ್ರಜ್ಞೆ ಹಾಗೂ ನಮ್ಮ ಮಹಾಪರಂಪರೆಯ ಬಗೆಗಿರುವ ಗೌರವದ ಸಂಕೇತವೆಂದು ನಾನು ಭಾವಿಸಿದೆ. ಭಾವಾವೇಶದಿಂದ ಪುಲಕಿತನಾದೆ. ನನ್ನ ಜೀವನದ ಧ್ಯೇಯ ಸಾಧನೆಯಾದುದಕ್ಕೂ ದೃಷ್ಟಾಂತವೆಂದು ಅಂದುಕೊಂಡೆ".

ರಶಿಯದಿಂದ ಮರಳಿದ ಬಳಿಕ ಡಾ. ಅಯ್ಯಂಗಾರರು ಸ್ಮರಿಸಿಕೊಂಡ ಈ ಘಟನೆಯನ್ನು ಖ್ಯಾತ ಸಂಗೀತ ವಿಮರ್ಶಕ ಬಿ. ವಿ. ಕೆ. ಶಾಸ್ತ್ರಿಯವರು ಸೋದರ ಪತ್ರಿಕೆಯೊಂದರಲ್ಲಿ ಬರೆದಿದ್ದಾರೆ. ರಶಿಯದ ಏಳು ನಗರಗಳಲ್ಲಿ ನಡೆದ ೧೮ ಸಂಗೀತ ಕಚೇರಿಗಳಲ್ಲಿ ಡಾ. ಅಯ್ಯಂಗಾರರು ಮೈಸೂರು ವೀಣಾಪರಂಪರೆಯ ಸುಗಂಧವನ್ನು ಹರಡುತ್ತಿದ್ದಾಗ ಹಲವು ಬಾರಿ ಇಂಥ ಅನುಭವಗಳನ್ನು ಪಡೆದರಂತೆ. ಕರ್ನಾಟಕ ಸಂಗೀತಲೋಕದ ಈ ಉತ್ತುಂಗನಿಗೆ ಜೀವನದಲ್ಲಿ ಇದು ಸಾಮಾನ್ಯವಾಗಿರಬಹುದು.


ಬಾಲ್ಯದಲ್ಲಿ ಅಕ್ಕರೆಯಿಂದ "ದೊರೆ" ಎಂದೇ ಕರೆಯಿಸಿಕೊಳ್ಳುತ್ತಿದ್ದ ಈ ವ್ಯಕ್ತಿ ಇಂದು ಮೈಸೂರು ಪರಂಪರೆಯ ವೈಣಿಕಕುಲಕ್ಕೇ ದೊರೆ. "ಅಯ್ಯಂಗಾರ್" ಎಂದು ಯಾರೂ ಎತ್ತಿಹೇಳುವ ಅವಶ್ಯಕತೆ ಇಲ್ಲ. ಮುಖ ಕಳೆಯಿಂದಲೇ ಅದನ್ನು ಗುರುತಿಸಬಹುದು. ತೀರ ಅಪ ರಿಚಿತರು ಅವರ, ಉಡುಪು, ಸರಳತೆಗಳನ್ನು ನೋಡಿ ಮೈಸೂರು ಕಡೆಯ ಪ್ರಾಥಮಿಕ ಶಾಲೆಯ ಉಪಾಧ್ಯಾಯರೆಂದೂ ಅಂದುಕೊಳ್ಳಬಹುದು. ಮೈಸೂರು ವೀಣೆಯ ಈ "ಪುರುಷ ಸರಸ್ವತಿ" ನೋಡಲು ಅಷ್ಟೊಂದು ಸಾದಾವ್ಯಕ್ತಿ. ವಿನಯ, ಸಜ್ಜನಿಕೆಯ ಸಾಕಾರಸ್ವರೂಪಿ. ಪ್ರಶಸ್ತಿ, ಪದವಿ ಗಳ ಹೊರೆಯಭಾರದಿಂದ ತಲೆ ತಗ್ಗಿದರೂ ಅವನ್ನೆಲ್ಲ ಹೇಳಿಕೊಳ್ಳಲು, ತೋರಿಸಿಕೊಳ್ಳಲು ತೀರ ಸಂಕೋಚ. ಸುಮಾರು ಐದು ದಶಕಗಳಿಂದ ಅವರ ಬೆರಳುಗಳಿಂದ ಹೊರಡುತ್ತಿರುವ ವೀಣೆಯ ನಿನಾದದಿಂದ ತಂಪುಪಡೆದ ಹೃದಯಗಳು ಲಕ್ಷೋಪಲಕ್ಷ. "ಬೇರುಗಳಿಂದ ಪರಂಪರೆಯ ರಸ ಹೀರುತ್ತ, ಶಾಸ್ತ್ರದ ಪರಿಧಿಯೊಳಗೆ ಮನೋಧರ್ಮದ ಶಾಖೆಗಳು ಸ್ವಚ್ಛಂದವಾಗಿ ಬೆಳೆಯಗೊಡುತ್ತಿರುವ ಹಾಗೂ ವಿಶಾಲ ಪ್ರದೇಶದ ಮೇಲೆ ತಂಪು ಹರಡುತ್ತಿರುವ ವಟವೃಕ್ಷದಂ ತಿದೆ ಅವರ ಸಂಗೀತ" ಎಂದು ಕೆಲ ವರ್ಷಗಳ ಹಿಂದೆ ಡಾ. ಅಯ್ಯಂಗಾರ ರನ್ನು ಸಂದರ್ಶಿಸಿದ ಶ್ರೀಮತಿ ಗಾಯತ್ರಿ ಚಂದ್ರಶೇಖರರು ಬರೆದದ್ದುಂಟು. ಹೌದು. ಡಾ. ಅಯ್ಯಂಗಾರರ ಮಾತಿನಲ್ಲಿ ಹೇಳಬೇಕಾದರೆ "ಫಲವ ತ್ತಾದ ಮಣ್ಣಿನಲ್ಲಿ ನೆಟ್ಟ ಈ ವೃಕ್ಷಕ್ಕೆ ಸಾಕಷ್ಟು ನೀರೆರೆದು ಪೋಷಿಸ ಲಾಗಿದೆ. ಅದರ ಮೇಲೆ ವಿಪುಲವಾಗಿ ಬೆಳಕೂ ಬಿದ್ದಿದೆ." "ಘನ [illegible] ಅತೀಸಾಮಾನ್ಯ [illegible]ಗಿರುವ ಈ ವಿದ್ವಾಂಸನ ವೀಣಾ [illegible]ದವರು ಇಂಥ ಉ[illegible] ಯಥಾರ್ಥವನ್ನು ಕಂಡು ಕೊಂಡ[illegible]

[illegible] ಗಿದ್ದವಲ್ಲಿ ಎಂಬ ಗ್ರಾಮ ಡಾ. ಅಯ್ಯಂಗಾರರ ಹುಟ್ಟೂರು. ಮೂರು ತಲೆಮಾರುಗಳಿಂದ ವಂಶದಲ್ಲಿ ಹರಿಯುತ್ತಿದ್ದ ಸಂಗೀತ ಸಮ್ಮಿಶ್ರ ರಕ್ತ ಅವರ ಮೈಗೂ ಇಳಿದು ಬಂದಿತ್ತು. ತಂದೆ ವೆಂಕಟೇಶ ಅಯ್ಯಂಗಾರರು ದೊಡ್ಡ ವೈಣಿಕ. ನಂತರ ಅವರು ಕೊಳಲು ವಾದನವನ್ನು ಕಲಿತು ಮೈಸೂರು ಆಸ್ಥಾನದ ವಿದ್ವಾಂಸರ ವಾದ್ಯ ವೃಂದದಲ್ಲಿ ಅದನ್ನು ನುಡಿಸುತ್ತಿದ್ದರು. ಐದನೆ ವಯಸ್ಸಿಗೆ ಡಾ. ಅಯ್ಯಂಗಾರ ರನ್ನು ವೀಣೆ ಸೆಳೆಯತೊಡಗಿತು. ವೆಂಕಟೇಶ ಅಯ್ಯಂಗಾರರು ಅವರಿಗೆ ಚಿಕ್ಕ ಆಕೃತಿಯ ವೀಣೆಯೊಂದನ್ನು ಮಾಡಿಸಿಕೊಟ್ಟು ಪಾಠ ಪ್ರಾರಂಭಿಸಿ ದರು. ಆದರೆ ಹೆಚ್ಚಿನ ತರಬೇತಿಕೊಡಲು ಅವರಿಗೆ ವೇಳೆ ಸಿಗುತ್ತಿರಲಿಲ್ಲ. ವೀಣೆ ಶೇಷಣ್ಣನವರ ಶಿಷ್ಯರೂ ಅರಮನೆಯ ವಿದ್ವಾಂಸರ ವಾದ್ಯವೃಂದದ ನಿರ್ದೇಶಕರೂ ಆಗಿದ್ದ ಅಪ್ರತಿಮ ವೈಣಿಕ ವೆಂಕಟಗಿರಿಯಪ್ಪನವರು ದೊರೆಸ್ವಾಮಿಯವರ ವೀಣಾ ಅಭ್ಯಾಸವನ್ನು ನೋಡಿ ತಮ್ಮ ಶಿಷ್ಯ ಬಳಗಕ್ಕೆ ಸೇರಿಸಿಕೊಂಡಾಗ ಅವರಿಗೆ ಏಳುವರ್ಷ. ಸನಾತನ ಗುರುಶಿಷ್ಯ ಪರಂಪರೆಯಂತೆ ನಡೆದ ಈ ವ್ಯಾಸಂಗದ ಕಾಲಕ್ಕೆ, ದೊರೆಸ್ವಾಮಿಯವರು ಸಂಗೀತ ಲೋಕದ ಸೂಕ್ಷ್ಮ ಅಂಶಗಳನ್ನು ಗ್ರಹಿಸುತ್ತ ಬಹುಕಾಲ ಗುರುಗಳ ಮನೆಯಲ್ಲಿಯೇ ಇರುತ್ತಿದ್ದರು. ಬೆಳಿಗ್ಗೆ ಆರೂವರೆ ಗಂಟೆಗೆ

ಬಾಲ್ಯದಲ್ಲಿ ಅಕ್ಕರೆಯಿಂದ "ದೊರೆ" ಎಂದೇ ಕರೆಯಿಸಿಕೊಳ್ಳುತ್ತಿದ್ದ ಈ ವ್ಯಕ್ತಿ ಇಂದು ಮೈಸೂರು ಪರಂಪರೆಯ ವೈಣಿಕ ಕುಲಕ್ಕೇ ದೊರೆ. ಮೈಸೂರು ಕಡೆಯ ಪ್ರಾಥಮಿಕ ಶಾಲೆಯ ಉಪಾಧ್ಯಾಯರಂತೆ ಮೇಲ್ನೋಟಕ್ಕೆ ಕಾಣಿಸುವ ಇವರು ಮೈಸೂರು ವೀಣೆಯ ಪುರುಷ ಸರಸ್ವತಿ. ವಿನಯ, ಸಜ್ಜನಿಕೆಯ ಸಾಕಾರಸ್ವರೂಪಿ.

ಅಭ್ಯಾಸ ಪ್ರಾರಂಭವಾಗುತ್ತಿತ್ತು. ಪ್ರಾಥಮಿಕ ಪಾಠಗಳನ್ನು ಮೂರೂ ಕಾಲಗಳಲ್ಲಿ ನುಡಿಸುವುದು, ಕೃತಿಗಳನ್ನು ನುಡಿಸುವಾಗ ಅದರೊಂದಿಗೆ ಹಾಡುವುದು ದಿನನಿತ್ಯದ ಪಾಠ.

ವಾದನದಲ್ಲಿ ಮೃದುತ್ವ ಮೈಸೂರುಪರಂಪರೆಯ ವೈಶಿಷ್ಟ್ಯ. ತಂತಿಯ ಎಳೆತದ ಧ್ವನಿಯಾಗಲೀ ಇಲ್ಲವೆ, ಬೆರಳುಗಳ ಆಘಾತದ ಶಬ್ದವಾಗಲೀ ಕೇಳಬಾರದು. ತಂತಿಯಿಂದ ಹೊರಡುವ ನಾದಮಾತ್ರ ಕೇಳಿಸಬೇಕು. ವಾದಕನು ಪ್ರಯಾಸದಿಂದ ನಾದ ಹೊರಡಿಸುವಂತಿರಬಾರದು. ಇದು ತಂತಿವಾದ್ಯಗಳ ವಾದನದಲ್ಲಿ ಪರಮೋಚ್ಚ ಸಾಧನೆಯೂ ಹೌದು. ತಮ್ಮ ಪರಂಪರೆಯ ಈ ಸಿದ್ಧಿಯನ್ನು ವೆಂಕಟಗಿರಿಯಪ್ಪನವರು ದೊರೆಸ್ವಾಮಿ



ಯವರಿಗೆ ಕರಗತಮಾಡಿಕೊಟ್ಟರು. ಶಿಕ್ಷಣ ಮುಂದುವರೆದಂತೆ, ಕಚೇರಿಗಳಲ್ಲಿ ವೀಣೆ ನುಡಿಸತಕ್ಕ ವಿಧಾನವನ್ನೂ ಹೊಸ ಕೃತಿಗಳನ್ನೂ ಕಲಿಸಿದರು.

ಮೈಸೂರು ಸಂಸ್ಥಾನವನ್ನು ನಾಲ್ಕಡಿ ಕೃಷ್ಣರಾಜೇಂದ್ರ ಒಡೆಯರರು ಆಳುತ್ತಿದ್ದ ಕಾಲ ಕಲಾವಿದರಿಗೆ ಸ್ವರ್ಣಯುಗವಾಗಿತ್ತು. ಸಾಹಿತ್ಯ, ಸಂಗೀತ, ನೃತ್ಯ ಮೊದಲಾದ ಕಲೆಗಳಿಗೆ ಆಶ್ರಯ ನೀಡುವದು ರಾಜಧರ್ಮ ವೆಂದೇ ಅವರು ಪರಿಗಣಿಸಿದ್ದರು. ಸ್ವತಃ ವಿದ್ವಾಂಸರಾಗಿದ್ದ ಅವರಿಗೆ ಭಾರತೀಯ ಹಾಗೂ ಪಾಶ್ಚಿಮಾತ್ಯ ಸಂಗೀತಗಳೆರಡರಲ್ಲಿಯೂ ಪ್ರಭುತ್ವ ವಿತ್ತು. ಶ್ರೀಮತಿ ವೆಂಕಟಲಕ್ಷ್ಮಮ್ಮ, ಶ್ರೀಮತಿ ಸುಂದರಮ್ಮನವರಂಥ ಪ್ರವೀಣೆಯರ ಭರತನಾಟ್ಯ, ಮುತ್ತಯ್ಯಭಾಗವತರು, ವಾಸುದೇವಾಚಾರ್ಯರು ಟಿಟ್ಟೆ ಕೃಷ್ಣ ಅಯ್ಯಂಗಾರ, ದೇವೇಂದ್ರಪ್ಪನವರಂಥ ದಿಗ್ಗಜಗಳ ಹಾಡುಗಾರಿಕೆ ಹಾಗೂ ಹಲವು ವಿದ್ವಾಂಸರ ವೀಣಾವಾದನ ಕಚೇರಿಗಳು ಅರಮನೆಯಲ್ಲಿ ಆಗಾಗ್ಗೆ ನಡೆಯುತ್ತಿದ್ದವು. ಇಂಥ ಅನುಕೂಲ ವಾತಾವರಣ ದೊರೆಸ್ವಾಮಿಯ ವಿದ್ಯೆಗೆ ನೀರೆರೆದು ಬೆಳೆಸಿತು. ಮಹಾರಾಜರ ಅಣತಿಯಂತೆ ಅರಮನೆಯ ವಾದ್ಯವೃಂದದಲ್ಲಿ ಕಿರಿಯ ವಿದ್ವಾಂಸರಾಗಿ ಸೇರಿಕೊಂಡರು. ಬಿ. ಎ. ಪದವಿಯನ್ನೂ ಪಡೆದುಕೊಂಡರು. ವಾದನದ ಮೇಲೆ ಪ್ರಭುತ್ವ ಹಾಗೂ ಆತ್ಮ ವಿಶ್ವಾಸ ಹೆಚ್ಚಿದ ಮೇಲೆ ವೆಂಕಟಗಿರಿಯಪ್ಪನವರ ಕಚೇರಿಗಳಲ್ಲಿ ಸಹವಾದನಕಾರರಾಗಿ ಪಾಲ್ಗೊಳ್ಳತೊಡಗಿದರು. ಸ್ವತಂತ್ರವಾಗಿ ಕಚೇರಿ ನಡೆಸುವ ಅನುಭವ ಪ್ರಾಪ್ತವಾಯಿತು.

ವೀಣಾವಾದನದಲ್ಲಿ ಸ್ನಾತಕನಾಗಿ ಹೊರ ಬಿದ್ದ ಮೇಲೆ ದೊರೆಸ್ವಾಮಿ ಯವರು ಪಾಲುಗೊಳ್ಳದ ಮಹೋತ್ಸವಗಳು ಹಾಗೂ ಸಮ್ಮೇಲನಗಳೇ ನಡೆದಿಲ್ಲವೆನ್ನಬಹುದು. ಪಿಟೀಲು ಸಾಮ್ರಾಟರೆನಿಸಿದ್ದ ಟಿ. ಚೌಡಯ್ಯ ನವರು ಹಲವು ಬಾರಿ ತಾವೇ ಕರೆದು ಅವರೊಂದಿಗೆ ದ್ವಂದ್ವವಾದನದಲ್ಲಿ ಭಾಗವಹಿಸಿ ಮೈಸೂರು ಸಂಗೀತದ ಸರ್ವಶ್ರೇಷ್ಠ ಸ್ವರೂಪವನ್ನು ದಕ್ಷಿಣ ಭಾರತೀಯರಿಗೆ ತೋರಿಸಿದರು.

೧೯೫೫ರಲ್ಲಿ ಬೆಂಗಳೂರು ಆಕಾಶವಾಣಿ ಕೇಂದ್ರದಲ್ಲಿ ಸಂಗೀತ ನಿರ್ಮಾಪಕರಾಗಿ ಸೇರಿದ ದೊರೆಸ್ವಾಮಿಯವರು ಅಲ್ಲಿ ೨೫ ವರ್ಷಗಳ ಕಾಲಸಲ್ಲಿಸಿದ ಸೇವೆ ಅವಿಸ್ಮರಣೀಯ. ಅವರು ನಿರ್ದೇಶಿಸಿದ "ತ್ಯಾಗರಾಜರ ನಂತರದ ಕರ್ನಾಟಕದ ವಾಗ್ಗೇಯಕಾರರು" ಹಾಗೂ "ಗೀತ ಭಾರತಿ" ಎಂಬ ರೂಪಕಗಳಿಗೆ ರಾಷ್ಟ್ರೀಯ ಮನ್ನಣೆ ದೊರೆಯಿತು.

ಶೇಷಣ್ಣನವರು ರಚಿಸಿದ್ದ ಅನೇಕ ವರ್ಣಗಳು, ಕೃತಿಗಳು ಹಾಗೂ ತಿಲ್ಲಾಣಗಳನ್ನು ಶೋಧಿಸಿ ಕಚೇರಿಗಳಲ್ಲಿ ನುಡಿಸಿ ಅವುಗಳ ಸೌರಭವನ್ನು ಹರಡಿದ ಕೀರ್ತಿ ದೊರೆಸ್ವಾಮಿಯವರದ್ದು. ಅವರ ವೀಣೆಯ ಝೇಂಕಾರ ಕಡಲಾಚೆಗೂ ಕೇಳಿಸಿದೆ. ಅಮೇರಿಕೆ, ಇಂಗ್ಲಂಡ, ಕೆನಡಾ, ಫ್ರಾನ್ಸ್, ಜರ್ಮನಿ ಮೊದಲಾದ ಅನೇಕ ರಾಷ್ಟ್ರಗಳಲ್ಲಿ ಸಂಚರಿಸಿ ನಮ್ಮ ಸಂಗೀತದ ರುಚಿ ತೋರಿಸಿ ಬಂದಿದ್ದಾರೆ. ಇತ್ತೀಚಿನ ಅವರ ರಶಿಯ ಪ್ರವಾಸ ದಲ್ಲಂತೂ ದಿಗ್ವಿಜಯವನ್ನೇ ಸಾಧಿಸಿದರು.

ದೊರೆಸ್ವಾಮಿ ಅಯ್ಯಂಗಾರರು ರಾಜ್ಯ ಸಂಗೀತ ಅಕೆಡಮಿಯ ಅಧ್ಯಕ್ಷರಾಗಿ ಹಲವು ಅರ್ಹ ಕಲಾವಿದರಿಗೆ ಪ್ರಶಸ್ತಿ, ಪುರಸ್ಕಾರ ಹಾಗೂ ಗೌರವ ಧನ ಕೊಡಿಸಿ, ಕಲಾವಿದ ಬಳಗದ ಋಣಕ್ಕೂ ಪಾತ್ರರಾಗಿದ್ದಾರೆ. ಶಿಷ್ಯ ಸಮೂಹವನ್ನೂ ಬೆಳೆಸಿದ್ದಾರೆ. ಪುತ್ರ ಡಿ. ಬಾಲಕೃಷ್ಣ ಹಾಗೂ ಇಬ್ಬರು ಸಹೋದರರು ಪ್ರಬುದ್ಧ ಕಲಾವಿದರೆಂದು ಈಗಾಗಲೇ ಹೆಸರು ಗಳಿಸಿರುವರು.

ಪರಂಪರೆಯ ಮೌಲ್ಯಗಳಿಂದ ಭರಿತವಾದ ಅವರ ವೀಣಾವಾದನ ವನ್ನು ಆಲಿಸುವದೆಂದರೆ ಒಂದು ಅನಿರ್ವಚನೀಯ ಅನುಭವ. ಕೇವಲ ತಂತ್ರಗಾರಿಕೆಯಾಗಲೀ ಸಾಮರ್ಥ್ಯ ಪ್ರದರ್ಶನವಾಗಲೀ ಅಲ್ಲಿ ಕೇಳಸಿಗುವ ದಿಲ್ಲ. ಸಾಂಪ್ರದಾಯಕ ಪರಿಶುದ್ಧತೆಯೊಂದಿಗೆ ಪಕ್ವಮನೋಧರ್ಮದ ಸಹಯೋಗದಿಂದ ಪೂರ್ಣ ಸ್ವರೂಪದಲ್ಲಿ ಹೊರಹೊಮ್ಮುವ ಆ ಸಂಗೀತ ಶ್ರೋತೃಗಳನ್ನು ಮುಗ್ಧರನ್ನಾಗಿಸುತ್ತದೆ; ಮೈಮರೆಸುತ್ತದೆ.

ಭಕ್ತಿ, ಸಾಧನೆ ಹಾಗೂ ವಿನಯ ಇವು ಕರ್ನಾಟಕ ಸಂಗೀತದಲ್ಲಿ ಪರಮೋಚ್ಚ ಸಾಧನೆಗೆ ಸೋಪಾನ ಎಂಬುದು ಈಗ ೬೬ವರ್ಷ ವಯಸ್ಸಿನ ಡಾ. ದೊರೆಸ್ವಾಮಿ ಅಯ್ಯಂಗಾರರ ಮತ. ಈ ಗುಣಗಳ ಆಧಾರದ ಮೇಲೆಯೇ ನಿಂತ ಅವರ ಸಂಗೀತ ಸೌಧಕ್ಕೆ "ಸಾರ್ವಭೌಮ" ಪಟ್ಟ ಸಿಕ್ಕದ್ದು ಸ್ವಾಭಾವಿಕ.

ಮೈಸೂರು ವಿಶ್ವ ವಿದ್ಯಾಲಯದ ಡಾಕ್ಟರೇಟ್ ಪದವಿ ಪಡೆದಿದ್ದರೂ "ಡಾ. ದೊರೆಸ್ವಾಮಿ ಅಯ್ಯಂಗಾರ" ಎಂಬ ನಾಮಫಲಕ ವನ್ನು ಮನೆಯ ಮುಂದೆ ತೂಗಿಹಾಕಲು ಅವರಿಗೆ ಅಂಜಿಕೆಯಂತೆ. ನಡು ರಾತ್ರಿಯಲ್ಲಾದರೂ ಎಬ್ಬಿಸಿ "ಔಷಧ ಕೊಡಿ" ಎಂದು ಕೇಳ ಬಹುದೆಂಬುದು ಅದಕ್ಕೆ ಕಾರಣ. ಆದರೆ ಅಂಥ ಭೀತಿ ಅನವಶ್ಯ. ಕರ್ನಾಟಕ ಸಂಗೀತಕ್ಕೆ ಹಾಗೂ ಮೈಸೂರಿನ ವೀಣೆ ಪರಂಪರೆಗೆ ಸುಂಕುರೋಗಗಳು ಅಂಟದಂತೆ ಪ್ರತಿಬಂಧಕ ಔಷದ ಕೊಡುವ ಸಾಮರ್ಥ್ಯವಂತೂ ಈ ಡಾಕ್ಟರರಲ್ಲಿದೆ. ಸಂಗೀತದ ಅಭಿಮಾನಿಗಳು ಅವರಿಂದ ಅದೊಂದು ಚಿಕಿತ್ಸೆ ಯನ್ನು ಮಾತ್ರ ಅಪೇಕ್ಷಿಸಬಹುದು. ಅದಕ್ಕೆ ಅವರು ಅಂಜಬೇಕಿಲ್ಲವಷ್ಟೇ?

ಫುಟ್‌ಬಾಲ್ ಬಸೆಟ್ಟಿ

ಎಂ.ಕೆ. ಗೋಪಿನಾಥ್



ವಾಸ್ತವವಾಗಿ ಬಸೆಟ್ಟಿ ಉತ್ತರದ ಆರು ಭಾಷೆಗಳಲ್ಲೂ ದಕ್ಷಿಣದ ನಾಲ್ಕು ಭಾಷೆಗಳಲ್ಲೂ ಸರಾಗವಾಗಿ ಬೈಯಲು ಕಲಿತಿದ್ದ. ಇಂಗ್ಲೀಷ್ ಬೈಗುಳಗಳು ಅಷ್ಟಿಷ್ಟು ಬರುತ್ತಿತ್ತು. ಬೈಯುವುದು ಎಂದರೆ ಅವನಿಗೆ ನೀರು ಕುಡಿಯುವಷ್ಟೇ ಸಹಜವಾದ ಪ್ರಕ್ರಿಯೆ. ಎಂತಹ ಅಸಹ್ಯ ಅಶ್ಲೀಲ ಶಬ್ದವನ್ನೂ ಎಗ್ಗಿಲ್ಲದೇ ಬಳಸಿಬಿಡುತ್ತಿದ್ದ ಬಸೆಟ್ಟಿ ಭಂಡ ಶಬ್ದಗಳ 'ವಿಶ್ವಕೋಶ'ವೇ ಆಗಿದ್ದ.

ಈ ಜಗತ್ತಿನಲ್ಲಿ ಜನ ಒಬ್ಬರಂತೆ ಇನ್ನೊಬ್ಬರಿಲ್ಲ. ಅಷ್ಟೇ ಅಲ್ಲ. ಒಬ್ಬೊಬ್ಬರದು ಒಂದೊಂದು ಬಗೆಯ ವೈಶಿಷ್ಟ್ಯವಿರುತ್ತದೆ. ದೃಷ್ಟಿ ತಾಕೀತೆಂಬ ಭಯದಿಂದ ಕೆಲವರು ಇತರರೆದುರಿಗೆ ಭೋಜನ ಸ್ವೀಕರಿಸುವದಿಲ್ಲ. ಕೆಲವರು ಮಾತನ್ನೇ ಆಡುವುದಿಲ್ಲ. ಇನ್ನು ಕೆಲವರು ಮಾತನಾಡುತ್ತಲೇ ಇರುತ್ತಾರೆ. ಇದೇ ಅವರ ವೈಶಿಷ್ಟ್ಯ! ಕೆಲವರು ಮಾಡುವ ಪ್ರತಿಕೆಲಸವೂ ಗುಟ್ಟಾಗಿರುತ್ತದೆ. ಕೆಲವರ ಗುಟ್ಟುಗಳು ಹೇಗೋ ಅಂತೂ ಊರಿಗೆಲ್ಲ ಟಾಂ ಟಾಂ ಆಗಿರುತ್ತದೆ. ಹೆಚ್ಚೇಕೆ? ಯಾವುದಾದರೂ ಒಂದು ವಿಶಿಷ್ಟ ಗುಣ ಎಲ್ಲರಲ್ಲೂ ಇರುತ್ತದೆ.

ನಮ್ಮ ಆಫೀಸಿಗೆ ನಾಲ್ಕನೇದರ್ಜೆ ನೌಕರನಾಗಿ ಬರಲಿದ್ದ ಫುಟ್‌ಬಾಲ್ ಬಸೆಟ್ಟಿಗೆ ಸಾಧಾರಣವಾಗಿ ಬೇರೆಯವರಲ್ಲಿ ಕಾಣದಂಥ ಅಪೂರ್ವ ಗುಣವೊಂದಿತ್ತು. ಅವನು ಎಂದೂ ಯಾರನ್ನೂ ಬೈದುದೇ ಇಲ್ಲ: ಜಗಳಗಂಟನೂ ಅಲ್ಲ.

ಹಾಗಾದರೆ ಬಸೆಟ್ಟಿಯನ್ನು ಸರಳ ಸ್ವಭಾವದ ಸಜ್ಜನ ಎಂದೋ ಸಭ್ಯನಾದ, ಸಂಪನ್ನ

ಗುಣದಿಂದ ಶೋಭಿಸುವ ಸತ್ಪುರುಷ ಎಂದೊ ಕರೆಯುಬಹುದಲ್ಲವೆ?

ಇಲ್ಲ. ಸಾಧ್ಯವಿಲ್ಲ. ಬಸೆಟ್ಟಿಯನ್ನು ಸಂಪನ್ನ ಎಂದು ಕರೆಯುವಲ್ಲಿ ಸ್ವಲ್ಪ ತೊಡಕಿದೆ.

ಬಸೆಟ್ಟಿ ಯಾರನ್ನೂ ಬಯ್ಯುತ್ತಿರಲಿಲ್ಲ ಎಂದರೆ ಯಾರನ್ನೂ ಇತರರೆದುರಿಗೆ ಮಾತ್ರ ಬಯ್ಯುತ್ತಿರಲಿಲ್ಲ ಎಂದಷ್ಟೇ ಅರ್ಥ. ಹಾಗೆಯೇ ಬಸೆಟ್ಟಿ ಜಗಳ ಮಾಡುತ್ತಿರಲಿಲ್ಲ ಎಂದರೆ ಇತರರಿಗೆ ಕಾಣುವ ಹಾಗೆ ಅವ ಎಂದೂ ಜಗಳ ಮಾಡುತ್ತಿರಲಿಲ್ಲ ಎಂದು ಗ್ರಹಿಕೆ ಮಾಡಿಕೊಳ್ಳಬೇಕು.

ವಾಸ್ತವವಾಗಿ ಬಸೆಟ್ಟಿ ಉತ್ತರದ ಆರು ಭಾಷೆಗಳಲ್ಲೂ ದಕ್ಷಿಣದ ನಾಲ್ಕು ಭಾಷೆಗಳಲ್ಲೂ ಸರಾಗವಾಗಿ ಬೈಯ್ಯಲು ಕಲಿತಿದ್ದ. ಇಂಗ್ಲೀಷ್ ಬೈಯುಗ್ಗಳಗಳೂ ಅಷ್ಟಿಷ್ಟು ಬರುತ್ತಿತ್ತು. ಬೈಯ್ಯುವುದು ಎಂದರೆ ಅವನಿಗೆ ನೀರು ಕುಡಿಯುವಷ್ಟೇ ಸಹಜವಾದ ಪ್ರಕ್ರಿಯೆ. ಎಂತಹ ಅಸಹ್ಯ ಅಶ್ಲೀಲ ಶಬ್ದವನ್ನೂ ಆತ ಎಗ್ಗಿಲ್ಲದೆ ಬಳಸಿಬಿಡುತ್ತಿದ್ದ. ಆತ ಭಂಡಶಬ್ದಗಳ ಚಲಿಸುವ ವಿಶ್ವಕೋಶವಾಗಿದ್ದ.

ನಾಲ್ಕು ಜನರ ಎದುರಿನಲ್ಲಿ ಬೈದರೆ ಬೈಸಿಕೊಂಡಾತನಿಗೆ ಸಾಕ್ಷ್ಯ ಪುರಾವೆಗಳು ಸಿಕ್ಕಿಬಿಡುವುದಿಲ್ಲವೆ? ಹಾಗಾಗಿ, ಸಮಯ ಸಾಧಿಸಿ, ಯಾರೂ ಇಲ್ಲದ ಮುಹೂರ್ತಕ್ಕೆ ಕಾದು ಬಸೆಟ್ಟಿ ತನ್ನ ಬೇಟೆಯ ಮೇಲೆ ಎರಗಿ ಬಿಡುತ್ತಿದ್ದ.

ಮೊದಲಿಗೆ ಬಸೆಟ್ಟಿ ಯಾರನ್ನಾದರೂ ಬೈಯ್ಯಲಿಕ್ಕೆ ಅಥವಾ ಯಾರೊಡನಾದರೂ ಜಗಳ ಆಡಲಿಕ್ಕೆ ಕಾರಣವೇನಿತ್ತು?

ಈ ಪ್ರಶ್ನೆಗೆ ಉತ್ತರಿಸಬೇಕಾದರೆ ಬಸೆಟ್ಟಿಯ ವೃತಾಂತವನ್ನು ಸಂಕ್ಷೇಪವಾಗಿಯಾದರೂ ಹೇಳಬೇಕು.

ಫುಟ್‌ಬಾಲ್‌ಬಸೆಟ್ಟಿ ರಟ್ಟೆ ವಿಾಸೆಯ ಉದ್ದನೇ ಆಳು. ಕೆಂಚು ಬಣ್ಣದವ. ಹೃದಯವಂತ. ಎಲ್ಲಾ ಸರಿ. ಅವನ ಬಾಯಿ ಮಾತ್ರಅವನ ಹತೋಟಿಯಲ್ಲಿ ಇರುತ್ತಿರಲಿಲ್ಲ. ಈ ಹದ್ದಿಲ್ಲದ ಬಾಯಿ ಅವನ ದೊಡ್ಡ ದೌರ್ಬಲ್ಯ ಎಂಬುದು ಕೂಡ ಬಸೆಟ್ಟಿಗೆ ತಿಳಿದಿತ್ತೋ ಇಲ್ಲವೋ ತಿಳಿಯದು. ಅವನ ಹೊಲಸು ಬಾಯಿಯ ದೆಸೆಯಿಂದ ಈ ಆಫೀಸಿನಿಂದ ಇನ್ನೊಂದಾಫೀಸಿಗೆ, ಇನ್ನೊಂದರಿಂದ ಮತ್ತೊಂದಕ್ಕೆ ವರ್ಗಾಯಿಸಲ್ಪಡುತ್ತ ಆರು ವರ್ಷಗಳ ಸರ್ವಿಸ್ ಬಸೆಟ್ಟಿ ಹಾಕಿದ್ದ.

ಅವನ ಲೋಕವಿಖ್ಯಾತವಾದ ಬಾಯಿಯ ದೆಸೆಯಿಂದ ಯಾವೊಂದು ಆಫೀಸ್‌ನಲ್ಲೂ ಆತ ಬಹಳ ದಿನ ಉಳಿಯಲಾಗುತ್ತಿರಲಿಲ್ಲ. ಅಥವಾ ಸಹೋದ್ಯೋಗಿಗಳು ಉಳಿಯಗೊಡುತ್ತಿರಲಿಲ್ಲ. ಹಾಗಾಗಿ ಅವನಿಗೆ ಫುಟ್‌ಬಾಲ್ ಬಸೆಟ್ಟಿ ಅಂತ ಹೆಸರು—ಅಡ್ಡ ಹೆಸರು— ಬಿದ್ದುಬಿಟ್ಟಿತ್ತು.


ಅಡೆ-ತಡೆಯಿಲ್ಲದ ಬಾಯೊಂದೇ ಬಸೆಟ್ಟಿಯ ಭಾಗ್ಯ ವಿಶೇಷವಾಗಿರಲಿಲ್ಲ. ಅವನಲ್ಲಿ ಇನ್ನೂ ಹಲವಾರು ಕಲ್ಯಾಣ ಗುಣಗಳಿದ್ದವು. ನಂಬರ್ ಒಂದಂತೂ ಅವನ ಬಾಯಿ. ನಂಬರ್ ಎರಡು: ಆತ ಕೆಲಸಕ್ಕೆ ಸರಿಯಾಗಿ ಹಾಜರಾಗುತ್ತಿರಲಿಲ್ಲ. ಕೆಲಸಕ್ಕೆ ಬಂದರೆ ಬಂದ; ಇಲ್ಲದಿದ್ದರೆ ಇಲ್ಲ. ಬಂದಾಗಲೂ ಕೆಲಸ ಮಾಡಿದರೆ ಮಾಡಿದ; ಬಿಟ್ಟರೆ ಬಿಟ್ಟ. ಸರಕಾರದ ಕೆಲಸ ದೇವರ ಕೆಲಸ ಎಂದು ದೃಢವಾಗಿ ನಂಬಿದ್ದವ ಬಸೆಟ್ಟಿ. ಮೇಲಿನವರೇ ಆಗಲಿ, ಸಹವರ್ತಿಗಳೇ ಆಗಲಿ ಯಾರಾದರೂ ಕೆಲಸ ಹೇಳಿದಾಗ ಬಸೆಟ್ಟಿಗೆ ಬ್ರಹ್ಮಾಂಡ ಸಿಟ್ಟು ಬಂದು ಬಿಡುತ್ತಿತ್ತು.

ತನ್ನ ಧವಳಕೀರ್ತಿಯನ್ನು ನಭೋಮಂಡಲದಾಚೆಗೂ ವಿಸ್ತರಿಸಿದ್ದ ಬಸೆಟ್ಟಿ ನಮ್ಮ ಆಫೀಸಿಗೆ ಅಟೆಂಡರ್ ಆಗಿ ಬರಲಿದ್ದಾನೆ ಎಂದು ತಿಳಿದಾಗ ಹೆಡ್ ಗುಮಾಸ್ತ ತಿರುಮಲಾಚಾರ್ಯರ ಹೃದಯ ಕಿತ್ತುಕೊಂಡು ಬಾಯಿಗೇ ಬಂದುಬಿಟ್ಟಿತ್ತು. ಅದನ್ನು ಪುನಃ ಹಿಂದಕ್ಕೆ ಬಾಯಿಗೇ ತಳ್ಳಿದ್ದ ಅವರು ಸುದ್ದಿ ತಂದಿದ್ದಾತನನ್ನು ಕೇಳಿದರು—

'ಈ ಸುದ್ದಿ ನಿಜವೇ?' ಎಂದು.

'ಔದು ಕಣ್ಬುದ್ದಿ. ನಾನು ಕುಶಾಲು–ಗಿಶಾಲು ಮಾಡೋ ಮನ್ಸ ಅಲ್ಲ' ಎಂದಿದ್ದ ಸುದ್ದಿ ತಂದಿದ್ದಾತ. ತಿರುಮಲಾಚಾರ್ಯರು ಸ್ವಲ್ಪ ಹೊತ್ತು ತಲೆ ಮೇಲೆ ಕೈ ಹೊತ್ತು ಕೂತಿದ್ದುದನ್ನು ಕೆಲವರು ನೋಡಿದರಂತೆ.

'ಅಟೆಂಡರ್ ಮಾಡೋ ಕೆಲಸಗಳನ್ನೆಲ್ಲಾ ನಾವು ನಾವೇ ಮಾಡಿಕೋತೇವೆ. ದಯವಿಟ್ಟು ಬಸೆಟ್ಟಿಯನ್ನು ಬೇರೆ ಯಾವುದಾದರೂ ಆಫೀಸಿಗೆ ಹಾಕಿ' ಅಂತ ಅರ್ಜಿ ಬರೆದು ನಾಲ್ಕೈದು



ರೇಟು ಅಲ್ಲಿದೆ......

ಮಂದಿಯ ಕೈಲಿ ರುಜು ಮಾಡಿಸಿ ಮೇಲಕ್ಕೆ ಕಳಿಸಿದರು ತಿರುಮಲಾಚಾರ್ಯಜಿ.

ತಿರುಮಲಾಚಾರ್ಯರ ಅಹವಾಲಿಗೆ ಮೇಲಿನಿಂದ ಉತ್ತರ ಬರುವಷ್ಟರೊಳಗಾಗಿಯೇ ಬಸೆಟ್ಟಿ ನಮ್ಮ ಆಫೀಸಿಗೆ ಬಂದು ರಿಪೋರ್ಟ್ ಮಾಡಿಕೊಂಡು ಬಿಟ್ಟ. ಕಂಗಾಲದ ತಿರುಮಲಾಚಾರ್ಯರು ಸಹೋದ್ಯೋಗಿಗಳಿಗೆ ಕಿವಿ ಮಾತು ಹೇಳಿದರು—


'ಬಸೆಟ್ಟಿ ವಿಷಯದಲ್ಲಿ ಸ್ವಲ್ಪ ಹುಷಾರಾಗಿ ಇರಿರಯ್ಯ. ಅವನಿಗೆ ಯಾರೂ ಬಾಯಿ ಕೊಡಬೇಡಿ. ಅವನ ದಶಾವತಾರ ಈಗಾಗಲೇ ಮುಗಿದಿದೆ. ನಮ್ಮ ಆಫೀಸಿನಲ್ಲಿ ಪ್ರಾರಂಭ ಆಗೋದು ಅವನ ಹನ್ನೊಂದನೇ ಅವತಾರ. ನಮ್ಮ ಬಾಸ್ ಖಾನ್ ಅಬ್ದುಲ್ ಬುಡೆನ್ ಸಾಬರೂ ಸಿಂಗಿ-ಬಿಂಗಿ. ಈ ಬಸೆಟ್ಟಿಗೋ ಬಾಯಿಗೆ ಬಿರಟೆ ಇಲ್ಲ. ಯಾರು ಯಾರಿಗೆ ಏನೇನು ಗ್ರಹಚಾರ ವಕ್ರಿಸಿದೆಯೋ. ಒಟ್ಟಿನಲ್ಲಿ ಎಲ್ಲರನ್ನೂ ಆ ಬೆಟ್ಟದೊಡೆಯನಾದ ಶ್ರೀನಿವಾಸ ದೇವರು ಕಾಪಾಡಬೇಕು.' ಎಂದಿದ್ದರು, ತಿರುಮಲಾಚಾರ್ಯರು.

ಬಸೆಟ್ಟಿಯನ್ನು ಹಿಡಿದು ಹಾಕಲಿಕ್ಕೆ ಇದ್ದ ದೊಡ್ಡ ಕೊರತೆಯೆಂದರೆ ಅವನ ವಿರುದ್ಧ ಸರಿಯಾದ ಸಾಕ್ಷ್ಯಾಧಾರಗಳು ಇರುತ್ತಿರಲಿಲ್ಲ ಎಂಬುದು. ಬಸೆಟ್ಟಿ ಒಂದು ತಂತ್ರವನ್ನೇ ರೂಪಿಸಿಕೊಂಡಿದ್ದ. ದೊಡ್ಡ ದೊಡ್ಡ ಆಫೀಸರುಗಳ ಮೇಲೆ ಬಾಯಿ ಮಾಡಬೇಕಾದಾಗ ಯಾರೂ ಇಲ್ಲದ ವೇಳೆಗಾಗಿ ಕಾದು, ಕದ ಭದ್ರ ಮಾಡಿ ಬೈಯುತ್ತಿದ್ದ. ಸಣ್ಣ ಪುಟ್ಟ ಆಫೀಸರುಗಳನ್ನು ಹಾದಿಗಳಲ್ಲಿ ಅಡ್ಡಗಟ್ಟಿ ಬೈಯುತ್ತಿದ್ದ. ಒಂದು ಆಲದ ಹಣ್ಣಿನಷ್ಟು ಸತ್ಯಕ್ಕೆ ಒಂದು ಹೆಬ್ಬಲಸಿನಷ್ಟು ಸುಳ್ಳು ಸೇರಿಸಿ 'ಆಫೀಸರುಗಳು ನನ್ನನ್ನು ಹಿಂಸಿಸುತ್ತಾರೆ' ಅಂತ ಪುಟಗಟ್ಟಲೆ ದೂರು ಬರೆದುಕೊಡುತ್ತಿದ್ದ. ಅವನನ್ನು ಹಿಡಿಯಲು ಬೀಸಿದ ಬಲೆಯ ಸಣ್ಣ ಸಣ್ಣ ಕಂಡಿಗಳಲ್ಲಿ ತೂರುವಷ್ಟು ಜಾಣತನ ಬಸೆಟ್ಟಿಯಲ್ಲಿತ್ತು. ಬಸೆಟ್ಟಿಯ ತೆರನಾದವರು ಕೂಡ ತಿರುಚಬಲ್ಲ ಕಾನೂನುಗಳೂ ಇದ್ದುವು.

ನಮ್ಮ ಆಫೀಸಿಗೆ ಬಂದ ಮೊದಲೆರಡು ದಿನ ಬಸೆಟ್ಟಿಯ ಗಂಟಲು ಕಟ್ಟಿತ್ತೋ ಅಥವಾ ಯಾವುದಾದರೂ ವ್ರತ ಹಿಡಿದಿದ್ದನೋ ತಿಳಿಯದು. ಆತನಂತೂ ತುಟಿ ಎರಡು ಮಾಡಿರಲಿಲ್ಲ. ಮೂರು ನಾಲ್ಕನೆಯ ದಿನ ಕೆಲಸಕ್ಕೇ ಬರಲಿಲ್ಲ!

ಐದನೆಯ ದಿನ—

ಬಾಸ್ ಬು.ಡೆನ್‌ಸಾಬರು ಮೂರು ಬಾರಿ ಬಜ್ ಮಾಡಿದರು.ಬಜರು ಮೂರು ಬಾರಿ ಕೊರ ಕೊರ ಮಾಡಿದರೆ ಬಸೆಟ್ಟಿಗೆ ಬುಲಾವ್ ಎಂದು ಅರ್ಥ. ಬಜರು ಆರು ಸಾರಿ ಸದ್ದು ಮಾಡಿದರೂ ಬಸೆಟ್ಟಿ ಬಾಸ್ ಬಳಿ ಹೋಗಲಿಲ್ಲ. ಅವನಲ್ಲಿದ್ದರೆ ತಾನೆ ಹೋಗುವ ಪ್ರಶ್ನೆ? ಬುಡೆನ್‌ಸಾಬರಿಗೆ ರೇಗಿತು. ಅವರೇ ತಮ್ಮ ಕುರ್ಚಿಯಿಂದೆದ್ದು



ಜೋಕು

ಪಟಾಕಿಯಂತೆ ಹಚ್ಚಿ
ಎಸೆದು ಬಿಡಬೇಕು
ತಕ್ಷಣ ಸಿಡಿದರೆ
ಅದು ಜೋಕು
ಟುಸ್ಸೆಂದಿತೇಕೆ
ಎಂದು ಕೆದಕಿದರೆ
ನಿಮ್ಮ ಮುಖಕ್ಕೇ
ಸಿಡಿದೀತು Joke ಏ!

—ಎಚ್. ಡುಂಡಿರಾಜ್

ಬಂದು ತಿರುಮಲಾಚಾರ್ಯರ ಮೇಲೆ ಹುಲಿಯಂತೆ ಬೀಳುತ್ತಾ—

'ಎಲ್ರೀ ಆ ಬಸೆಟ್ಟಿ. ಎಲ್ಲಿಗೆ ಕಳಿಸಿದ್ದೀರಿ ಅವನನ್ನ?' ಎಂದು ಅಬ್ಬರಿಸಿದರು.

'ನಾನು ಅವನನ್ನು ಎಲ್ಲಿಗೂ ಕಳುಹಿಸಿಲ್ಲ. ಅವನೇ ಎಲ್ಲಿಗಾದರೂ ಹೋಗಿರಬಹುದು' ಎಂದರು ತಿರುಮಲಾಚಾರ್ಯರು, ಭಯಕಂಪಿತ ಸ್ವರದಲ್ಲಿ.

'ಹಾಗೆಂದರೇನ್ರಿ? ಅವನ್ನ ಹೇಳೋರು ಕೇಳೋರೂ ಯಾರೂ ಇಲ್ಲವೆ?' ಎಂದು ಬುಡೆನ್ ಸಾಬರ ಪ್ರಶ್ನೆ ಬಂತು. ಪ್ರಶ್ನೆ ಕೇಳುವವರೇನೋ ಸುಲಭವಾಗಿ ಕೇಳಿಬಿಡುತ್ತಾರೆ. ಉತ್ತರ ಹೇಳುವವರಿಗೆ ತಾನೆ ಅದರ ನಿಜವಾದ ಕಷ್ಟ ಗೊತ್ತಾಗೋದು? ಹಾಗಾಗಿ ತಿರುಮಲಾಚಾರ್ಯರು ಮೌನ ವಹಿಸಿದರು. ಮುಂದಿನ ಆಜ್ಞೆ ಬುಡೆನ್ ಸಾಬರಿಂದಲೇ ಬಂತು—

'ಬಸೆಟ್ಟಿ ಬಂದಕೂಡ್ಲೆ ನನ್ನನ್ನ ನೋಡೋಕೆ ಹೇಳಿ.'

ಕೆಲಸ ಹೇಳುವುದು ಸುಲಭ ಮಾಡುವುದು ಕಷ್ಟ. ಬಸೆಟ್ಟಿಯಂಥವರಿಗೆ ಕೆಲಸ ಹೇಳುವುದೂ ಕಷ್ಟವೆ ಸರಿ. ತಿರುಮಲಾಚಾರ್ಯರಿಗೆ ಒಳ್ಳೆ ಪೀಕಲಾಟ ಬಂತು.

ಬುಡೆನ್‌ಸಾಬ್—ತಿರುಮಲಾಚಾರ್ಯರ ನಡುವಿನ ಮಾತುಕತೆ ನಡೆದು ಅರ್ಧ ಗಂಟೆ ಆಗಿದ್ದಿರಬೇಕು. ಬಸೆಟ್ಟಿ ತಿರುಮಲಾಚಾರ್ಯರ ಟೇಬಲ್ಲಿನ ಬಳಿ ಕಾಣಿಸಿಕೊಂಡ.

ಎಲೆ ಅಡಿಕೆಯ ರಂಗು ಬಸೆಟ್ಟಿಯ ನಾಲಿಗೆಯನ್ನೆಲ್ಲಾ ವ್ಯಾಪಿಸಿಕೊಂಡಿತ್ತು. ಅವನು ಉಲ್ಲಸಿತನಾಗಿಯೂ ಇದ್ದ. ಬಹುಶಃ ನಿದ್ದೆ ಮಾಡಿ ಬಂದಿದ್ದನೆಂದು ಕಾಣುತ್ತದೆ. ತುಂಬ ಲವಲವಿಕೆಯಿಂದ ಶೋಭಿಸುತ್ತಿದ್ದ.

ತಿರುಮಲಾಚಾರ್ಯರು ಬಸೆಟ್ಟಿಯನ್ನು ಬಾಸ್ ಬುಡೆನ್‌ಸಾಬರ ಕೋಣೆಗೆ ರವಾನಿಸಿದರು.

'ಬಸೆಟ್ಟಿ ಎಲ್ಲಿ ಹಾಳಾಗಿ ಹೋಗಿದ್ದ್ಯೋ?' ಎಂದು ಬುಡೆನ್‌ಸಾಬರು ಅರಚಿದ್ದು ಆಫೀಸಿನಲ್ಲಿದ್ದವರಿಗೆಲ್ಲಾ ಕೇಳಿಸಿತು.

ಬಸೆಟ್ಟಿ ಏನೋ ಉತ್ತರ ಕೊಟ್ಟ. ಅವನು ಹೇಳಿದ್ದು ಯಾರಿಗೂ ಕೇಳಿಸದಷ್ಟು ಮೆಲ್ಲನೆ ಅವನು ಮಾತನಾಡಿದ್ದು ಅಂದೇ ಮೊದಲ ದಿನ!

'ಸಾಕು ಬಾಯಿ ಮುಚ್ಚು' ಎಂದು ಬುಡನ್-ಸಾಬರು ಗರ್ಜಿಸಿದರು.

ಕಹಳೆ ಮೊಳಗಿತು. ಇನ್ನೇನು ಯುದ್ಧ ಶುರು ತಿರುಮಲಾಚಾರ್ಯರಾದಿಯಾಗಿ ಆಫೀಸಿನ ಜನರೆಲ್ಲ ತವಕದಿಂದ ಬಸೆಟ್ಟಿ–ಬಾಸ್‌ರ ಕಡೆಗೆ ನೆಟ್ಟ ದೃಷ್ಟಿಯಿಟ್ಟು ನೋಡತೊಡಗಿದರು.

ಅತ್ತ ಬಾಸ್‌ರ ಅಬ್ಬರ–ಆರ್ಭಟದಿಂದಾಗಿ ಬಸೆಟ್ಟಿಯ ಮೂಗು ಅರಳಿತು. ಅವನ ಕೋಪ ನೆತ್ತಿಗೇರಿ ಕಣ್ಣುಗಳು ಕೆಂಪಾದವು. ಆಫೀಸಿನ ಜನರೆಲ್ಲ ನೋಡುನೋಡುತ್ತಿದ್ದಂತೆಯೇ ಬಸೆಟ್ಟಿ ಬಾಸ್‌ರ ಆಫೀಸಿನ ಬಾಗಿಲು ಮುಚ್ಚಿದ.

ಮುಂದಿನ ಒಂದೆರಡು ನಿಮಿಷಗಳು ಮಾತಿನ ಮಳೆ. ಬುಡೆನ್‌ಸಾಬರು ಏರಿದ ಧ್ವನಿಯಲ್ಲಿ ಹೇಳಿದ್ದಕ್ಕೆ ಪ್ರತಿಯಾಗಿ ಬಸೆಟ್ಟಿ ಏನೋ ಬಡಬಡಿಸುತ್ತಿದ್ದ. ಇನ್ನೊಂದರೆಗಳಿಗೆ ಕಳೆಯುವಷ್ಟರಲ್ಲಿ ಮಾತು ಪೂರ್ತಿ ನಿಂತಿತು. ಬಾಸ್‌ರ ಬಾಗಿಲಿಕ್ಕಿದ ರೂಮ್‌ನಲ್ಲಿ ಯಾರೋ ಯಾರನ್ನೋ ಬಲವಾಗಿ ಗುದ್ದುತ್ತಿರುವ ಸದ್ದು : ಧಂ...ಧಂ...ಧಂ... ಎಂದು.

ಬಸೆಟ್ಟಿ ಈ ತನಕ ಯಾರ ಮೇಲೂ ಕೈ ಎತ್ತಿದವನಲ್ಲ. ಈಗ ಬಾಸ್‌ರ ಮೇಲೆಯೇ ಕೈ ಮಾಡಿದನೆ? ಸರಿ ಇನ್ನವನು ಕೆಲಸದಿಂದ ನಿಕಾಲೆಯಾಗುವುದು ಖಂಡಿತ.

ಬಾಸ್‌ರ ಕೋಣೆಯೊಳಗಿನಿಂದ ಮತ್ತೆ ನಭೋವಾಣಿ ಸೀಳಿಕೊಂಡು ಬಂತು—


'ಈಗ ನಡೆದದ್ದನ್ನೂ ಯಾರೂ ನೋಡಿಲ್ಲ. ಸಾಕ್ಷ್ಯ ಇಲ್ಲ. ಪುರಾವೆ ಇಲ್ಲ. ಯಾರಿಗೆ ದೂರು ಬರಕೊಳ್ಳಿಯೋ ಬರಕೋ.'

ಹಾಗನ್ನುತ್ತಿದ್ದುದು ಬಹುಶಃ ಬಸೆಟ್ಟಿಯೇ ಇರಬೇಕು. ಕಕ್ಕಾಬಿಕ್ಕಿಯಾಗಿದ್ದ ನಮ್ಮ ಆಫೀಸಿನ ಜನ ನೋಡುತ್ತಿದ್ದಂತೆ ಧಡಾರನೆ ಬಾಸ್‌ರ ರೂಮಿನ ಬಾಗಿಲು ತೆರೆಯಿತು. ಬಾಸ್ ಸ್ವಸ್ಥಾನದಲ್ಲಿ ನೆಮ್ಮದಿಯಿಂದ ಕೂತಿದ್ದರು. ಬಸೆಟ್ಟಿ ಅಳುಮುಖ ಮಾಡಿಕೊಂಡು ಹೊರಬರುತ್ತಿದ್ದಂತೆಯೇ ಆಫೀಸಿನ ಸಿಬ್ಬಂದಿ ಅವನನ್ನು ಮುತ್ತಿಕೊಂಡು ಕೇಳಿದರು—

'ಏನಾಯ್ತು?' ಎಂದು.

'ಹೋಗಿ ಹೋಗಿ ನಾನು ಒಳ್ಳೆ ಆಫೀಸಿಗೆ ಬಂದೆನಲ್ರೀ. ಆ ವಯ್ಯ—ಬುಡೆನ್‌ಸಾಬರು—ನಂಗೆ ಮಾತಾಡಲಿಕ್ಕೆ ಅವಕಾಶಾನೇ ಕೊಡ್ದೆ ಬಗ್ಗಿಸಿಕೊಂಡು ಒಂದೇ ಸಮ ಬೆನ್ನಮೇಲೆ ಗುದ್ದ್ಯಾರೆ...'

ಆಫೀಸಿನ ಸಿಬ್ಬಂದಿಯ ಹುಚ್ಚು ನಗೆಯಲ್ಲಿ ಬಸೆಟ್ಟಿಯ ಮುಂದಿನ ಮಾತುಗಳು ಕೊಚ್ಚಿ ಹೋದವು. ●



ಮಹಾ ಪತಿಭಕ್ತೆ ನನ್ನ ಪತ್ನಿ.
ನನ್ನ ಶ್ರೇಯಸ್ಸಿನ ಪ್ರಾರ್ಥನೆಗಾಗಿ
ದೇವಸ್ಥಾನಕ್ಕೆ ಹೋಗಿದ್ದಾಳೆ.

ವಚನಾರಾಮ

ಸಿದ್ಧಯ್ಯ ಪುರಾಣಿಕ

೧

ಬದುಕಿನ ಹಲಸಿನ ತೊಳೆಗಳ ಬಿಡಿಸಲು
ನಿನ್ನ ನೆನಹಿನ ನೆಯ್ ಕರುಣಿಸಯ್ಯ;
ಮನದ ಪೀತಾಂಬರದ ಗಳಿಗೆಗಳಲ್ಲಿರಿಸಲು
ನಿನ್ನ ಧ್ಯಾನದ ಕೇದಗೆಗರಿ ಕರುಣಿಸಯ್ಯ;
ಸಂಸಾರದ ಶ್ವಾಸದಲ್ಲಿರಿಸಲು
ನಿನ್ನ ಅರಿವಿನ ಪರಿಮಳವ ಕರುಣಿಸಯ್ಯ;
ಸ್ವತಂತ್ರ ಧೀರ ಸಿದ್ಧೇಶ್ವರಾ,
ನನ್ನ ಹುಟ್ಟಿನ ಹುಟ್ಟಿನಲ್ಲಿರಿಸಲು
ನಿನ್ನ ನಾಮದ ಮಧುವ ಕರುಣಿಸಯ್ಯ !

೨


ನಿನ್ನ ನೂರು ನೆನಪಿನೋಲೆಗಳು ಬಂದಿವೆ, ನಲ್ಲ-
ಆದರೆ ಮೂಲ ಪತ್ರವೇ ಮುಟ್ಟಿಲ್ಲವಲ್ಲ !
"ಉತ್ತರ ಬರೆ, ಉತ್ತರ ಬರೆ," ಎಂದು
ಒತ್ತಾಯಿಸಿದರೆ
ಏನುತ್ತರ ಬರೆಯಲಿ ಚೆನ್ನ ?
ಮೂಲ ಪತ್ರದ ಪ್ರತಿಕಳಿಸು ರನ್ನ !
ಅದನ್ನೋದಿ–ಅರ್ಥವಾದರೆ-
ಉತ್ತರಿಸುವೆನು ಮನದನ್ನ–
ಸ್ವತಂತ್ರ ಧೀರ ಸಿದ್ಧೇಶ್ವರ !

೩

ಯಾವುದಿದು ಹೆಸರಿಲ್ಲದ ವ್ಯಸನ,
ಮುಖವಿಲ್ಲದ ದುಃಖ, ಗುರುತು ಸಿಕ್ಕದ ಕೊರಗು ?
ಕೊರೆಯುತಿದೆ ಕೀಟದಂತೆ ಒಳಗೆ !
ಈ ಕೀಟವನ್ನೇ ಭ್ರಮರವಾಗಿಸುವ
ನಿನ್ನ ಸ್ಮರಣೆಯ ಭ್ರಮರ ಬರಲಾರದೆ ಬಳಿಗೆ ?
ಬಂದರೆ ಈ ಕೀಟದ ಕೊರೆತವೇ
ದುಂಬಿಯ ಮೊರೆತವಾದೀತು–
ಸ್ವತಂತ್ರಧೀರ ಸಿದ್ಧೇಶ್ವರ !

೪

ನನ್ನ ಬದುಕು ನಡೆಯದ ನಾಣ್ಯವಾದರೆ
ನಿನ್ನ ಕಮ್ಮಟಕ್ಕೋ ಕುಂದು ಕಾಣಯ್ಯ !
ಇದನು ಇದ್ದಂತೆ ಸ್ವೀಕರಿಸು–
ಇಲ್ಲವೆ, ಮರಳಿ ಕರಗಿಸಿ, ಸೋಸಿ, ಮತ್ತೆ ಟಂಕಿಸು–
ಸ್ವತಂತ್ರಧೀರ ಸಿದ್ಧೇಶ್ವರ !



೫

ಸನಾದಿ ಊದುವವರ ಮುಂದೆ
ಮಾವಿನಕಾಯಿ ತಿನ್ನುತ್ತ ನಿಂತರೆ ಹೇಗಯ್ಯ ?
ಅತ್ತ ಹೋಗಯ್ಯ !
ವಿಶ್ವಾಮಿತ್ರನ ಮುಂದೆ ಮೇನಕೆ,
ಅಹಲ್ಯೆಯ ಮುಂದೆ ಇಂದ್ರ,
ಸೀತೆಯ ಮುಂದೆ ಮಾಯಾಮೃಗ !
ಸಾಧನೆಯ ಹಾದಿಯಲ್ಲಿ ಬಾಧೆಗಳು ಎನಿತು,
ಪ್ರಲೋಭನೆಗಳು ಎನಿತು ?
ಏನಿದರ ಅಂತರಾರ್ಥ–ಸ್ವತಂತ್ರ ಧೀರ ಸಿದ್ಧೇಶ್ವರಾ ?

ತಲ್ಲಣ

ಪ್ರೇಮಾಭಟ್




"ಕಟ್ಟಿಹಾಕಿದ ಕರ ಅಲ್ಲ ನೀನೀಗ ರಮಾ, ನಿನಗೂ ಪ್ರಾಯಬಂದಿದೆ. ಸ್ವಾತಂತ್ರ್ಯದ ಕೆಚ್ಚು ಮನಸ್ಸಿನಲ್ಲಿ ಮೂಡಿ ಬರಬೇಕು. ಅವರು ಹೇಳಿದಂತೆ ಕೇಳಿಕೊಂಡು ಬಿದ್ದಿರುವಂಥ ವಯಸ್ಸಲ್ಲ ನಿನ್ನದೀಗ. ನಿನಗೆ ಇಷ್ಟವಿದ್ದ ಕಡೆಗೆ ನಿನಗೆ ಬೇಕಾದಲ್ಲಿಗೆ ಹೋಗಲಿಕ್ಕೆ ಸ್ವಾತಂತ್ರ್ಯವಿದೆ. ಅದನ್ನು ಕೇಳಲಿಕ್ಕೆ ಅವರಿಗೂ ಹಕ್ಕಿಲ್ಲ ರಮಾ. ಬೇಕಿದ್ದರೆ ನಮ್ಮಲ್ಲಿಗೆ ಬಂದು ಇದ್ದುಬಿಡು. ನಾನು ಎರಡುಮಕ್ಕಳ ತಾಯಿ. ಕೆಲಸಕ್ಕೆ ಹೋಗುವವಳು. ಹರಿಬರಿಯಿಂದ ಅಡಿಗೆಮಾಡುವ ಕೆಲಸ ನೀನು ಬಂದರೆ ತಪ್ಪುತ್ತದೆ. ಅಪ್ಪಯ್ಯ ಸದಾ ನಿನ್ನಬಗ್ಗೆ ಏನಾದರೊಂದು ಹೇಳುತ್ತಿರುವದುಂಟು. ನಿನ್ನ ಗುಣಗಾನ ಮಾಡಿದಷ್ಟು ಅವರಿಗೆ ಹಿತ. ನೀನು ಮಾಡುವ ಚೊಕ್ಕ ಕೆಲಸದ ಬಗ್ಗೆ ಒಂದು ಬಗೆಯ ಪಿತಾಸಕ್ತಿ. ಅವರೂ ಹೇಳುವುದುಂಟು. ನನಗೆ ನೀನು ಜೊತೆಯಾದರೆ ನನಗೆ ಎಲ್ಲಿಲ್ಲದ ನೆಮ್ಮದಿ ದೊರಕುವದಂತೆ" ಎಂದು ವಸು ಹೇಳಿದಾಗೊಮ್ಮೆ ಅನಂತಯ್ಯನವರ ಕಡೆಗೆ ನೋಡಿದಳು ರಮಾ. ಅವರ ಅರೆನರೆತ ಗಡ್ಡದ ನಡುವೆ ಹುದುಗಿದ್ದ ಮುಖದಲ್ಲಿ ಮೂಡಿದ ಮಂದ ಹಾಸ ಇವತ್ತಿನದಲ್ಲ. ಅವರು ಸದಾ ಹಾಗೆಯೇ. ರಮಾ ಅವರನ್ನು ನೋಡುತ್ತಿರುವುದು ಇವತ್ತು ನಿನ್ನೆಯಿಂದಲ್ಲ. ಕಳೆದ ಏಳೆಂಟು ವರ್ಷಗಳಿಂದ. ಆವತ್ತಿನಿಂದಲೂ ಅವರು ಹಾಗೆ. ಆ ಕೋಣೆಗೆ ಅನಂತಯ್ಯ ಬಂದಾಗ ವಸುವಿಗೆ ಇನ್ನೂ ಮದುವೆಯಾಗಿರಲಿಲ್ಲ. ಅವಳು ಕಾಲೇಜಿನಲ್ಲಿ ಓದುತ್ತಲೇ ಪ್ರೇಮಿಸಿ ಮದುವೆಯಾಗಿ ತಂದೆಯನ್ನು ಬಿಟ್ಟು ಹೊರಟುಹೋದಳು. ಕಟ್ಟಾ ಸಂಪ್ರದಾಯವಾದಿಯಾಗಿದ್ದ ಅನಂತಯ್ಯ ಮರುಗಲಿಲ್ಲ. ಹಿರಿಯ ಮಗಳು, ಕಿರಸ್ತಾನರ ಅಂತೋಣಿಯೊಂದಿಗೆ ಸ್ನೇಹ ಬೆಳೆಸಿ, ದಿಲ್ಲಿಗೆ ಹೋಗಿ ಮತಾಂತರ ಹೊಂದಿದ ಸುದ್ದಿ ಬಂದಾಗ ಅತ್ತದ್ದು ಅನಂತಯ್ಯನವರ ಹೆಂಡತಿ ಪದ್ಮಾಕ್ಷಿ. ಅದೇ ಕೊರಗಿನಲ್ಲಿ ಅವಳು ಅಸುನೀಗಿದ ಮೇಲೆ ಅನಂತಯ್ಯ ತಮ್ಮ ಮನೆಯನ್ನು ಬಾಡಿಗೆಗೆ ಕೊಟ್ಟು ಈ ಕೋಣೆಯನ್ನು ಹಿಡಿದದ್ದು.



ಅರ್ಧಗಂಟೆ ಬಿಟ್ಟು ಬಚ್ಚಲಿಗೆ ಸ್ನಾನಕ್ಕೆ ಇಳಿದಾಗ, ಕಂಕುಳ ಕೆಳಗೆ, ಕಿಬ್ಬೊಟ್ಟೆಯ ಪಕ್ಕಕ್ಕೆ ಒಂದು ರೂಪಾಯಿ ಗಾತ್ರದ ಬಿಳಿಮಚ್ಚೆ ಕಂಡಿತು. ಎಲಾ ದೇವರೆ ಇದು ಹೇಗೆ ಬಂತು? ತನಗೇಕೆ ಇಷ್ಟು ದಿನ ಗೋಚರಿಸಲಿಲ್ಲ. ಯಾವ ತಪ್ಪಿಗೆ ಈ ಶಿಕ್ಷೆ.... ಎಂದುಕೊಳ್ಳುತ್ತಿದ್ದ ಹಾಗೆ ಕಣ್ಣಲ್ಲಿ ನೀರಿಳಿಯಿತು. ತಲೆ ತಿರುಗಿದಂತಾಯಿತು. ಸ್ನಾನವೂ ಬೇಡ, ಊಟವೂ ಬೇಡ. ಎಲ್ಲದರಲ್ಲೂ ಅನಾಸಕ್ತಿ. ಅವರೆಲ್ಲ ವಾಪಸ್ಸು ಬರುವಾಗ ಶೀರಾ ಮಂಕಾಗಿ ಬಿಟ್ಟಿದ್ದಳು ರಮಾ. ಮಿಕಿ ಮಿಕಿ ನೋಡಿದಳು ಅವಳ ಮುಖವನ್ನೇ ವಸು. ಏನನ್ನೂ ಕೇಳಲಿಲ್ಲ. ಏನನ್ನೂ ಹೇಳಲಿಲ್ಲ. ಮಕ್ಕಳು ಮಾತ್ರ ಅವಳ ಕುತ್ತಿಗೆಗೆ ಜೋತು ಬಿದ್ದು,

'ರಮಕ್ಕ ಯಾಕೆ ಒಂದು ಥರಾ ಇದ್ದಿಯಾ' ಎಂದಿದ್ದುವು.



ಸಾವಿತ್ರಿ ಕಿರಸ್ತಾನರ ಜಾತಿಗೆ ಮತಾಂತರ ಹೊಂದಿದ ಸುದ್ದಿ ಬಂದ ದಿನ ಮಾತ್ರ ಅವರಿಗೆ ಕೊಂಚ ನಿರಾಶೆಯಾಗಿತ್ತಂತೆ, ಏಳೇಳು ತಲೆಮಾರಿನವರು ರೌರವ ನರಕಕ್ಕೆ ಹೋದರು ಎಂದರಂತೆ. ಮತ್ತೆ ಆತ್ಮಶುದ್ಧಿಗಾಗಿ ಸಾವಿರದ ಎಂಟು ಗಾಯತ್ರಿ ಪಠನ ಮಾಡಿದ್ದರಂತೆ. ಇದನ್ನೆಲ್ಲ ವಸುವೇ ಹೇಳಿದಳು ರಮಾಳ ಕೂಡ. ಬ್ರಾಹ್ಮಣ್ಯವನ್ನು ಕಿತ್ತು ಹಾಕಿ ತಾನು ಹೊರಗೆ ಹೋದರೂ ತನ್ನ ಗಂಡ ಜಾತಿಯಲ್ಲಿ ಒಂದು ಎನ್ನುವ ವಿಚಾರವೂ ಅಪ್ಪಯ್ಯನಿಗೆ ಇದ್ದೇ ಇದೆ ಎಂದು ಹೇಳುತ್ತಿದ್ದಳು. ಅನಂತಯ್ಯನವರ ಮನಸ್ಸಿನಲ್ಲಿ ಏನಿತ್ತೋ ಯಾರಿಗೆ ಗೊತ್ತು. ಆದರೆ ಅವರಂತೂ ವಸು ಬಂದಾಗಲೆಲ್ಲ ಅವಳ ಮಕ್ಕಳನ್ನು ಹತ್ತಿರ ಕರೆದು ಮುದ್ದಿಸಿ, ಕೈಗೆ ಕಲ್ಲುಸಕ್ಕರೆಯನ್ನೊ ಬಾದಾಮಿಯನ್ನೊ, ಏನೂ ಇಲ್ಲದಿದ್ದರೆ ಒಂದು ಚೂರು ಬೆಲ್ಲವನ್ನೋ ಕೊಟ್ಟು ಕಳಿಸುತ್ತಿದ್ದರು. ಆಮೇಲೆ ಮುಟ್ಟಿಸಿಕೊಂಡ ತಪ್ಪಿಗೆ ಸ್ನಾನ ಮಾಡಿ ಒಂದು ಆಚಮನ ಮಾಡಿ ಹೊಟ್ಟೆಗೇನಾದರು ಸೇವಿಸುತ್ತಿದ್ದರು. ಇದೆಲ್ಲ ರಮಾಳಿಗೆ ಗೊತ್ತು. ಯಜಮಾನಿ ಒಂದು ಮೂಟೆ ಬಟ್ಟೆ ಒಗೆಯಲು ಕೊಡುವಾಗಲೆಲ್ಲ, ಇಲ್ಲ ರಾಶಿ ಪಾತ್ರೆ ತಂದು ಹಿತ್ತಲಿಗೆ ತೊಳೆಯಲು ಹಾಕುವಾಗಲೆಲ್ಲ ಅದೆ ಮನೆಯ ಹಿತ್ತಲಿಗಿದ್ದ ಅನಂತಯ್ಯನವರ ಕೋಣೆಯ ಕಡೆ ದೃಷ್ಟಿ ಹಾಯಿಸುತ್ತಿದ್ದಳು. ಸದಾ ದಾಸರ ಹಾಡನ್ನು ಗುನುಗುತ್ತಲೋ ಮಂತ್ರವನ್ನು ಪಠಿಸುತ್ತಲೋ, ಅದೂ ಅಲ್ಲವಾದರೆ ಆಧ್ಯಾತ್ಮ ವಿಷಯಗಳಿಗೆ ಸಂಬಂಧಿಸಿದ ಪುಸ್ತಕವನ್ನು ಓದುತ್ತಲೋ ಇರುವ ಅನಂತಯ್ಯನವರ ಬಗ್ಗೆ ರಮಾಳಿಗೆ ಒಂದು ರೀತಿಯ ಅಭಿಮಾನ, ಗೌರವ. ಎಷ್ಟೋವೇಳೆ ಆ ಹಿರಿಯರೊಂದಿಗೆ ಬಟ್ಟೆ ಬರೆಗಳನ್ನು ಒಗೆದುಕೊಡಲೇ ಎಂದು ಕೇಳಬೇಕೆನಿಸುತ್ತಿತ್ತು ಅವಳಿಗೆ; ಆದರೆ ಯಜಮಾನಿ ಏನು ಹೇಳುತ್ತಾಳೋ ಎಂಬ ಭಯ. ಯೋಚಿಸುತ್ತ ನಿಂತ ರಮಾಳನ್ನು ನೋಡಿ,

"ಏನು ರಮಾ ನಾನು ಹೇಳಿದ್ದು ಕೇಳಿಸ್ತಾ"

ನಿಜ ಈ ಅಮ್ಮನಿಂದ ಪಾರಾಗಬೇಕು. ತಾನು ತಂದೆ–ತಾಯಿ ಇಲ್ಲದ ಪರದೇಶಿ ಎನ್ನುವ ಕಾರಣಕ್ಕಲ್ಲವೆ ಇವಳು ಇಷ್ಟೊಂದು ಹಿಂಸೆ ಕೊಡುವುದು. ಸೋದರಮಾವ ಕೃಷ್ಣಪ್ಪನ ನೆನಪಾಯಿತು ಅವಳಿಗೆ. ಅವನು ತನ್ನನ್ನು ತೀರ ಸಣ್ಣವಯಸ್ಸಿನಲ್ಲೇ ಇಲ್ಲಿ ತಂದು ಬಿಟ್ಟಾಗ ಅಂದಿದ್ದ. "ಮಗ, ಇನ್ನುಮುಂದೆ ನೀನಿಲ್ಲೇ ಇರಬೇಕು. ನಿನ್ನ ಕಂಡರೆ ಆ ನನ್ನ ಚೆಲುವಿಗೆ ಆಗದು. ದಿನಬೆಳಗಾದರೆ ನಿನ್ನನ್ನು ದನಕ್ಕೆ ಹೊಡೆಯುವಂತೆ ಹೊಡೆಯುವದನ್ನು ನಾನು ನೋಡಲಾರೆ. ಒಂದು ಹೇಳಿದರೆ ನಾಲ್ಕು ಮಾತನಾಡುವ ಚೆಲುವಿಗೂ ಎರಡು ಮಕ್ಕಳಾಗಿವೆ. ಆ ಮಕ್ಕಳಿಗೆ ತಾಯಿ ಬೇಕು ಎನ್ನುವ ಉದ್ದೇಶದಿಂದ ನಾನು ಅವಳ ಜೊತೆಗೆ ಇರಬೇಕಾಗಿದೆ. ನೀನು ಮನೆಗೆಲಸ ಮಾಡಿದರೆ, ಇವರು ನಿನಗೆ ವಿದ್ಯೆ ಕಲಿಸುತ್ತಾರಂತೆ" ಎಂದಿದ್ದ. ವಿದ್ಯೆ ಎನ್ನುವ ಸದ್ದು ಕಿವಿಗೆ ಬಿದ್ದಾಗ ಪಟ್ಟ ಸಂತೋಷ ನೆನಪಾಯಿತು ರಮಾಳಿಗೆ. ಆದರೆ ಆ ಯಜಮಾನಿ ಪ್ರಾಥಮಿಕ ತರಗತಿಯಲ್ಲೇ ಶಾಲೆ ಬಿಡಿಸಿ, ಪೂರಾ ಮನೆಗೆಲಸಕ್ಕೆ ನಿಯಮಿಸಿಬಿಟ್ಟಳು. ಇದನ್ನೆಲ್ಲ ನೆನೆದಾಗ ಯಜಮಾನಿಯ ಮೇಲೆ ರೋಷ ಉಕ್ಕಿಬಂತು.

"ಹೋಗ್ಲಿ ಬಿಡು. ನಿನಗೆ ಬರೋಕೆ ಇಷ್ಟವಿಲ್ದಿದ್ರೆ ಬೇಡ. ನಂದೇನು ಒತ್ತಾಯವಿಲ್ಲ. ಬೆಳಗ್ಗೆ ನಿನ್ನ ಬಗ್ಗೆ ತೀರ ಕ್ಷುಲ್ಲಕವಾಗಿ ನಡೆದುಕೊಂಡಿದ್ದನ್ನು ಅಪ್ಪಯ್ಯ ನೋಡಿದರಂತೆ, ಅದಕ್ಕಾಗಿ ಹೇಳಿದೆ" ಎಂದಳು. ಯಜಮಾನಿ ಮಾತ್ರ ಏನು, ಎಲ್ಲರೂ ತನ್ನ ವಿಷಯದಲ್ಲಿ ನಡಕೊಳ್ಳೋದೆ ಹೀಗೆ ಎಂದು ಹೇಳಬೇಕೆಂದುಕೊಂಡಳು ರಮಾ. ಆದರೇಕೋ ಬಾಯಿ ಬಿಗಿ ಹಿಡಿದಳು. ತನ್ನ ಪ್ರಾಯ ಕಂಡು ಸದಾ ಮುಸಿಮುಸಿ ನಗುವ ಯಜಮಾನಿಯ ಇಬ್ಬರು ಗಂಡುಮಕ್ಕಳ ಮೇಲೆ ಅವಳು ಒಂದು ಕಣ್ಣು ಇಡದೆ ಹೋಗಿದ್ದರೆ ತನ್ನ ಅವಸ್ಥೆ ಇಷ್ಟು ಹೊತ್ತಿಗೆ ಏನಾಗುತ್ತಿತ್ತೋ. ಇವೆಲ್ಲ ಯಾಕೆ ಚಿಂತಿಸಬೇಕು. ಹೇಗೂ ವಸು ಕರೆಯುತ್ತಿದ್ದಾಳೆ. ಅವಳ ಮನೆಗೆ ಹೋಗಿಬಿಡುವುದೇ ಹಿತ ಎಂದುಕೊಂಡಳು ಮತ್ತೆ. ಈ ವಿಚಾರ ಗಾಢವಾಗಿದ್ದಾಗಲೇ ನಿರ್ಧಾರ ತೆಗೆದುಕೊಳ್ಳುವುದು ಲೇಸು ಎಂದುಕೊಂಡು, "ಆಗ್ಲಿ ವಸು, ಈಗ್ಲೆ ನಿಮ್ಮ ಬೆನ್ನಿಗೆ ಹೊರಟೆ" ಎಂದಳು.

"ಹಾಗಾದರೆ ನಿನ್ನ ಯಜಮಾನಿಗೆ ಹೇಳಿ, ನಿನ್ನ ಬಟ್ಟೆಬರೆ ಏನಿದೆಯೋ। ತೆಗೆದುಕೊಂಡು ಬಾ, ನಾನಿಲ್ಲೇ ಕಾದಿರುತ್ತೇನೆ" ಎಂದಳು ವಸು.

ರಮಾ ಮನೆಯೊಳಗೆ ಹೋದ ಸ್ವಲ್ಪ ಹೊತ್ತಿನಲ್ಲಿ ಯಜಮಾನಿ ಆಡುವ ಮಾತು ಕೇಳಿಸಿತು.

"ಆ ಹುಡುಗಿಯ ಜೊತೆ ನೀನು ಮಾತಿಗೆ

ತೊಡಗುವಾಗಲೆಲ್ಲ ನಾನು ಯೋಚಿಸುತ್ತಿದ್ದೆ. ನೀನೆಣಿಸಿದಷ್ಟು ನಿನ್ನ ಬದುಕು ಸುಖವಾಗುತ್ತದೆ ಎಂದು ತಿಳಿಯಬೇಡ. ಇಲ್ಲಿ ಹಿರಿಯಳು ಅಂತ ನಾನೊಬ್ಬಳು ಇದ್ದೆ. ಅಲ್ಲಿಗೆ ಹೋದಮೇಲೆ ಇನ್ನೊಂದು ಬಗೆಯ ಕಷ್ಟ ಅಂಕುರಿಸಬಹುದು. ನಿನ್ನ ಸೋದರಮಾವನನ್ನು ಕರೆಸುತ್ತೇನೆ. ಅವನ ಹತ್ತಿರ ಕೇಳಿಕೋ"

"ಇಲ್ಲ ಸಾಧ್ಯವಿಲ್ಲ. ಇಷ್ಟುದಿನ ನೀವಿಟ್ಟ ಕೂಳು ತಿಂದೆ. ಕೈ ಬಿಡದೆ ಕೊಟ್ಟಿದ್ದನ್ನು ಪಡೆದಿದ್ದೇನೆ. ನನಗೂ ಬದಲಾವಣೆ ಬೇಕೆನಿಸುತ್ತಿದೆ. ಹೊರಡಲು ಅಪ್ಪಣೆ ಕೊಡಿ. ಕೊಡದಿದ್ದರೂ ನಾನು ಹೊರಡುವುದು ನಿಶ್ಚಿತ"

"ನೀನೇನು ಬಗಲ ಕೂಸಲ್ಲ. ನಿನಗೆ ತಿಳಿಯ ಹೇಳಲಿಕ್ಕೆ; ನಿನ್ನಿಷ್ಟದ ಹಾಗೆ ಮಾಡು" ಎಂದರು ಯಜಮಾನಿ. ಆಗೊಂದು ಕ್ಷಣ ರಮಾಳಿಗೆ ಯಜಮಾನಿಯ ಕಡೆ ಆಸ್ಥೆ ಅಂಕುರಿಸಿತು. ಮರುಕ್ಷಣ ಕೆಲಸ ತೆಗೆಸುವಾಗಿನ ಅವರ ಸುಕೋಮಲ ಕಂಠ, ಕೆಲಸ ಮುಗಿದಬಳಿಕ ಮಾರ್ಪಾಡಾಗುತ್ತಿದ್ದುದನ್ನು ನೆನೆದು; ಇವೆಲ್ಲ ತನಗೆ ಹೊಸದೇ ಎಂದುಕೊಂಡು ಒಂದು ಸಣ್ಣ ಕೈಚೀಲಕ್ಕೆ ತನಗಿರುವ ನಾಲ್ಕುಸೀರೆಗಳನ್ನು ತುಂಬಿಸಿಕೊಂಡು, ಹೊರಗೆ ಹೊರಡುವ ಮೊದಲು ಯಜಮಾನಿಯ ಕಾಲಿಗೆ ಮಣಿದಳು.

"ನನ್ನ ಕಾಲಿಗೆ ಯಾಕೆ ಬೀಳ್ತಿಯಾ, ಅನಂತಯ್ಯ ಇದ್ದಾರಲ್ಲ; ಹೋಗು ಅವರ ಕಾಲಿಗೆ ಬೀಳು" ಎಂದ ಮಾತನ್ನೆಲ್ಲ ರಮಾ ಮತ್ತು ಅನಂತಯ್ಯ ಇಬ್ಬರೂ ಕೇಳಿಸಿಕೊಂಡಿದ್ದರು. ರಮಾ ತನ್ನ ಮಗಳು ವಸೂನ ಜೊತೆ ಹೋದಾಗೊಮ್ಮೆ ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದರು. ಆ ರಮಾಗೂ ಆಧಾರ ಸಿಕ್ಕಿತು. ವಸೂನ ಮಕ್ಕಳು ಇನ್ನುಮುಂದೆ ಸುಖವಾಗಿರಬಹುದು ಎಂದುಕೊಂಡರು. ಯಾವುದೂ ಬೇಡವೆಂದು ಬಿಟ್ಟಿದ್ದ ತಮಗೆ ಇದೇಕೆ ಈ ಪ್ರಾಪಂಚಿಕ ವ್ಯಾಮೋಹಗಳು ಕಾಡುತ್ತಿವೆ. ಎಲ್ಲೋ ಒಂದೆಡೆ ಕೂದಲೆಳೆಯಷ್ಟು ಕಸ ಉಳಿದುಕೊಂಡಿರಬೇಕು, ಅದೇ ತಮ್ಮನ್ನು ಈ ಸುತ್ತಿಗೆ ಎಳೆಯುತ್ತಿದೆ ಎಂದುಕೊಂಡವರು ಎದ್ದು ದೇವರ ಮುಂದೆ ಸಾಷ್ಟಾಂಗವೆರಗಿ ಒಂದು ಕ್ಷಣ ಕಣ್ಣುಮುಚ್ಚಿ ಕುಳಿತು ಧ್ಯಾನಸ್ಥರಾದರು.

ರಮಾ ಹಿಂದುಮುಂದು ಯೋಚಿಸದೆ ವಸುಳ ಮನೆಗೆ ಬಂದುದೇನೋ ಆಗಿತ್ತು. ಮೊದಲೆರಡು ದಿನ ವಸು ರಮಾಳೊಂದಿಗೆ ಸ್ನೇಹಪರಳಾಗಿ ವರ್ತಿಸಿದ್ದಳು. ಆದರೆ ಬರಬರುತ್ತ ವಸುನ ವರ್ತನೆಯಲ್ಲಿ ಪರಿವರ್ತನೆ ಕಂಡುಬಂತು. ಅದಕ್ಕೆ ಕಾರಣವೂ ಇತ್ತು. ವಸುನ ಗಂಡ ದಿವಾಕರನಿಗೆ ರಮಾಳ ಕೈ ಅಡುಗೆ ಪ್ರಿಯವೆನಿಸಿದ್ದೇ ವಸುವಿಗೆ ಆಗಲಿಲ್ಲ. ದಿವಾಕರ ಮನಸ್ಸಿಗೆ ಬಂದ ಮಾತುಗಳನ್ನು ಆಡಿ ತೋರಿಸಿ ಬಿಡುವಾತ. ದಿನ ದಿನವೂ ರಮಾಳ ಅಡಿಗೆಯನ್ನು ಹೊಗಳುತ್ತಿದ್ದ. ಅವಳ ಅಚ್ಚುಕಟ್ಟನ್ನು ಪ್ರಶಂಸಿಸುತ್ತಿದ್ದ. ಮಕ್ಕಳೂ ರಮಾಳಿಗೆ ಬಹುಬೇಗ ಹೊಂದಿಕೊಂಡವು. ಇದನ್ನೆಲ್ಲ ನೋಡಿ ವಸು ಸಹಿಸದಾದಳು. ಸಹಜವಾಗಿ ಅವಳಿಗೆ ರಮಾಳಲ್ಲಿದ್ದ



"...ಎರಡು ಕಿತ್ತಳೆ ಹಣ್ಣು ಕೊಡು ಅಂದ್ರೆ...ಬೋಣಿ ಆಗಿಲ್ಲ ಅಂತಿಯಾ ಎಷ್ಟೋಸಲ ಫುಟ್‌ಪಾತ್ ಮೇಲೆ ಕೂರಬಾರದೆಂದು ಗೊತ್ತಿಲ್ವೇನೋ...!"

ಪ್ರೀತಿ ವಿಶ್ವಾಸಗಳೂ ಕಡಿಮೆಯಾಗತೊಡಗಿದವು. ಕ್ಷುಲ್ಲಕ ಕಾರಣಗಳಿಗೆಲ್ಲ ವಸು ರಮಾಳ ಮೇಲೆ ರೇಗುವುದು ಹೆಚ್ಚುತ್ತಿತ್ತು. ಹ್ಯಾಂಡಕರ್ಚಿಫ್ ಸರಿಯಾದ ಸ್ಥಳದಲ್ಲಿಟ್ಟಿಲ್ಲವೆಂದೋ, ಬ್ಲೌಸಗಳಿಗೆ ಹಾಕಿದ ಇಸ್ತ್ರಿ ಸರಿಯಾಗಿಲ್ಲವೆಂದೋ, ಏನೋ ಒಂದು ಸಣ್ಣ ಕಾರಣ ಹಿಡ್ದು ರೇಗುತ್ತಿದ್ದಳು. ಮಕ್ಕಳು ಸ್ಕೂಲಿಗೂ ಗಂಡ-ಹೆಂಡಿರಿಬ್ಬರು ಕೆಲಸದ ಮೇಲೂ ಹೋದ ಮೇಲೆ ಒಬ್ಬಂಟಿಗಳಾಗಿ ಬಿಡುತ್ತಿದ್ದ ರಮಾ ಆಗೆಲ್ಲ ಯೋಚಿಸುತ್ತಿದ್ದಳು. ಈ ಸುಖಕ್ಕಾಗಿ ತಾನು ಆ ಮನೆಯನ್ನು ಬಿಟ್ಟು ಬರಬೇಕಿತ್ತೆ...ಇದೆಲ್ಲ ವಿಚಾರ ಒಂದುಸಾರೆ ಹೋಗಿ ಅನಂತಯ್ಯನವರಿಗೆ ಹೇಳಿದರೆ ಹೇಗೆ? ಮಗಳನ್ನ ಕರೆಸಿ ಸರಿಯಾಗಿ ಬುದ್ಧಿ ಹೇಳಲಾರರೇ ಎಂದುಕೊಳ್ಳುತ್ತಿದ್ದಳು. ಮರುಕ್ಷಣ ವಸುಳ ಮಕ್ಕಳ ಮುಖನೋಡಿ ತನ್ನ ನೋವನ್ನೆಲ್ಲ ಮರೆತು ಬಿಡುತ್ತಿದ್ದಳು. ವಸುನ ಹಿರಿಯ ಮಗ ನರೇಂದ್ರನಿಗೆ ಐದುವರ್ಷ. ಅನಿತಳಿಗೆ ನಾಲ್ಕುವರ್ಷ. ಇಬ್ಬರಿಗೂ ರಮಕ್ಕ ಬೇಕೇ ಬೇಕು. ಷೂ ಹಾಕಲು, ಟೈ ಕಟ್ಟಲು, ಅಂಗಿ ತೊಡಿಸಲು ಅಮ್ಮನ ಅಗತ್ಯವಿಲ್ಲ. ಎಲ್ಲ ರಮಕ್ಕ ಪೂರೈಸುತ್ತಿದ್ದಳು. ಮನೆಯಲ್ಲಿ ಕೆಲಸ ತುಂಬ ಇದ್ದ ದಿನ, ರಸ್ತೆ ದಾಟಿಸಿ ಅಲ್ಲಿಂದ ಅವರಿಬ್ಬರನ್ನೇ ಸ್ಕೂಲಿಗೆ ಹೋಗುವಂತೆ ಹುರಿದುಂಬಿಸಿ ಕಳಿಸುತ್ತಿದ್ದಳು. ಶಾಲೆಯ ಗಂಟೆ ಹೊಡೆಯಲು ಹತ್ತು ನಿಮಿಷ ಇದೆ ಎನ್ನುವಾಗಲೇ ಅವರಿಬ್ಬರನ್ನು ಕರೆದುಕೊಂಡು ಹೋಗಲು ಬಂದು ನಿಲ್ಲುತ್ತಿದ್ದಳು. ಮಧ್ಯಾಹ್ನ ತಿನ್ನಲು ತಿಂಡಿಯನ್ನು ಡಬ್ಬಿಯಲ್ಲಿ ತುಂಬಿ ಕಳಿಸುತ್ತಿದ್ದಳು. ಸಂಜೆ ಬಂದ ಮೇಲೆ ಉಡುಪು ಬದಲಾಯಿಸಿ, ತಿನ್ನಲು ಬಿಸ್ಕತ್ತೋ ಬ್ರೆಡ್ಡೋ ಕೊಟ್ಟು, ಕುಡಿಯಲು ಹಾರ್ಲಿಕ್ಸ ಮಾಡಿ ಕೊಡುತ್ತಿದ್ದಳು. ಆಮೇಲೆ ವಸುವಾಗಲಿ ದಿವಾಕರನಾಗಲಿ ಬರುವವರೆಗೆ ಮಕ್ಕಳು ಏನು ಆಟ ಆಡಬೇಕೆಂದು ಬಯಸುತ್ತವೋ ಆ ಆಟದಲ್ಲಿ ತಾನೂ ಸೇರಿಕೊಳ್ಳುತ್ತಿದ್ದಳು. ಇದು ರಮಾಳ ಮನಸ್ಸಿಗೆ ಹಿಗ್ಗು ಕೊಡುತ್ತಿತ್ತು. ಈ ನೆನಪು ಬರುತ್ತಲೇ ವಸುನ ಮಾತುಗಳೆಲ್ಲವೂ ಕ್ಷುಲ್ಲಕವಾಗಿ ತೋರುತ್ತಿತ್ತು. ಒಂದು ದಿನ ನಿರಾಳವಾಗಿ ತಲೆ ತುಂಬ ಎಣ್ಣೆ ಹಚ್ಚಿಕೊಂಡು, ಹಂಡೆತುಂಬ ನೀರು ಕಾಯಿಸಿ ಎಣ್ಣೆ ನೀರು ಹಾಕಿಕೊಳ್ಳಲು ಸಿದ್ಧವಾದದ್ದಿಲ್ಲ. ಅದಕ್ಕೆಲ್ಲ ಆ ಮನೆಯಲ್ಲಿ ಅನುಕೂಲವೇ ಇರಲಿಲ್ಲವೆಂದಲ್ಲ. ಅವಳಿಗೆ ಪುರಸೊತ್ತೇ ಸಿಗುತ್ತಿರಲಿಲ್ಲ. ನಾಲ್ಕುದಿನದ ಹಿಂದೆ ಪರೀಕ್ಷೆ ಕಳೆದು ಮಕ್ಕಳಿಗೆ ರಜೆ ಬಂದಿತ್ತು. ಗಂಡ ಹೆಂಡಿರು ಮಕ್ಕಳು ಮೈಸೂರಿಗೆ ಟ್ರಿಪ್ ಹಾಕಿದ್ದರು. ಬಾಯಿ ಮಾತಿಗಾದರೂ ವಸು, ರಮಾಳನ್ನು ಕರೆದಿರಲಿಲ್ಲ. ಆಗೊಂದು ಕ್ಷಣ ಅವಳ ಕಣ್ಣಲ್ಲಿ ನೀರಿಳಿಯಿತು. ಯಾವ ಪುರುಷಾರ್ಥಕ್ಕಾಗಿ ತಾನಿಲ್ಲಿಗೆ ಬರಬೇಕಿತ್ತು. ಅಲ್ಲಿ ದೊರಕದ ಭಾಗ್ಯ ಇಲ್ಲೇನು ದೊರಕಿದೆ ತನಗೆ ಎಂದು ನೊಂದುಕೊಂಡಿದ್ದಳು. ನರೇಂದ್ರ ಅವಳ ಕೊರಳಿಗೆ ಜೋತುಬಿದ್ದು 'ರಮಕ್ಕ ನೀ ಬರೋಲ್ವ' ಎಂದಿದ್ದ. ಅವನ ತಂಗಿ ಅಮಿತ ಆದರೂ ಅಷ್ಟೆ. ಅವಳ ಸೆರಗನ್ನು ಜಗ್ಗುತ್ತ,

"ರಮಕ್ಕ ನೀನು ಬಾ" ಎಂದು ಹಟ ಹಿಡಿದಿದ್ದಳು. ಅವರಿಬ್ಬರನ್ನು ಸಮಾಧಾನ ಪಡಿಸಿ, ಕಳಿಸಲು ಅರ್ಧಗಂಟೆ ಹೆಣಗಾಡಿದ್ದಳು ರಮಾ. ತನ್ನ ಬದುಕಿನಲ್ಲಿ ಸಾಧಿಸಿದ ಒಂದು ವರ ಎಂದರೆ ಆ ಮಕ್ಕಳ ಪ್ರೀತಿಯೊಂದೇ ಎಂದುಕೊಂಡಿದ್ದಳು. ಅವರೆಲ್ಲ

ಹೋಗಿ ಮನೆ ಬರಿದಾದ ಬಳಿಕ, ಎಣ್ಣೆ ನೀರು ಹಾಕಿಕೊಳ್ಳಲು, ಹಂಡೆ ಉರಿ ಮಾಡಿ ಬಂದು ತಲೆಗೆ ಹರಳೆಣ್ಣೆ ಹಚ್ಚಿಕೊಂಡಿದ್ದಳು. ಅರ್ಧಗಂಟೆ ಬಿಟ್ಟು ಬಚ್ಚಲಿಗೆ ಸ್ನಾನಕ್ಕೆ ಇಳಿದಾಗ, ಕಂಕುಳ ಕೆಳಗೆ, ಕಿಬ್ಬೊಟ್ಟೆಯ ಪಕ್ಕಕ್ಕೆ ಒಂದು ರೂಪಾಯಿ ಗಾತ್ರದ ಬಿಳಿಮಚ್ಚೆ ಕಂಡಿತು. ಎಲಾ, ದೇವರೆ ಇದು ಹೇಗೆ ಬಂತು, ತನಗೇಕೆ ಇಷ್ಟು ದಿನ ಗೋಚರಿಸಲಿಲ್ಲ. ಯಾವ ತಪ್ಪಿಗೆ ಈ ಶಿಕ್ಷೆ...ಎಂದುಕೊಳ್ಳುತ್ತಿದ್ದ ಹಾಗೆ ಕಣ್ಣಲ್ಲಿ ನೀರಿಳಿಯಿತು. ತಲೆ ತಿರುಗಿದಂತಾಯಿತು. ಸ್ನಾನವೂ ಬೇಡ, ಊಟವೂ ಬೇಡ, ಎಲ್ಲದರಲ್ಲೂ ಅನಾಸಕ್ತಿ. ಅವರೆಲ್ಲ ವಾಪಸ್ಸು ಬರುವಾಗ ತೀರಾ ಮಂಕಾಗಿ ಬಿಟ್ಟಿದ್ದಳು ರಮಾ. ಮಿಕಿ ಮಿಕಿ ನೋಡಿದಳು ಅವಳ ಮುಖವನ್ನೇ ವಸು. ಏನನ್ನೂ ಕೇಳಲಿಲ್ಲ, ಏನನ್ನೂ ಹೇಳಲಿಲ್ಲ. ಮಕ್ಕಳು ಮಾತ್ರ ಅವಳ ಕುತ್ತಿಗೆಗೆ ಜೋತು ಬಿದ್ದು.

'ರಮಕ್ಕ ಯಾಕೆ ಒಂದು ಥರಾ ಇದ್ದೀಯಾ' ಎಂದಿದ್ದುವು.

'ಎಂದಿನ ಅಡಿಗೆ ಇದಲ್ಲ' ಎಂದಿದ್ದ ಆ ದಿನ ಊಟ ಮಾಡುತ್ತ ದಿವಾಕರ. ಯಾರಿಗೂ ಏನನ್ನೂ ಹೇಳಲಿಲ್ಲ ರಮಾ. ದಿನಾ ಸ್ನಾನ ಮಾಡುವಾಗ ನೋಡಿಕೊಳ್ಳುತ್ತಿದ್ದಳು ಆ ಬಿಳಿ ಮಚ್ಚೆಯನ್ನು. ಅದರ ಗಾತ್ರ ಮತ್ತಷ್ಟು ಹೆಚ್ಚುತ್ತಿರುವಂತೆ ಕಂಡಿತು. ಈ ರೋಗ ಬಂದರೆ ಜನ ಬಹಳಷ್ಟು ಹೆದರುತ್ತಾರೆ. ವಸು ಖಂಡಿತ ತನ್ನನ್ನು ಕೆಲಸಕ್ಕಿಟ್ಟುಕೊಳ್ಳಲಾರಳು. ವಿಷಯ ತಿಳಿದ ಮೇಲೆ ತಾನು ಈ ಮನೆಯಲ್ಲಿರುವ ಹಾಗಿಲ್ಲ. ದೇವರೆ ನನಗೇಕೆ ಈ ಶಿಕ್ಷೆ ವಿಧಿಸಿದೆ. ಯಾವ ಜನ್ಮದ ಪಾಪ ಎಂದು ಕೊರಗಿದಳು. ಜೊತೆಗೆ ವಸುವಿನ ಕಿರಿ ಕಿರಿ ದಿನ ದಿನಕ್ಕೂ ಹೆಚ್ಚುತ್ತಿತ್ತು. ಏನೋ ತಪ್ಪು ಹುಡುಕಿ ವಸು ಗೊಣಗುತ್ತಿದ್ದಳು. ಇಂತಹ ಪರಿಸ್ಥಿತಿಯಲ್ಲಿ ತಾನು ವಿಷಯವನ್ನು ಮುಚ್ಚಿಡುವುದೇ ಹಿತ ಕಂಡಿತು ರಮಾಳಿಗೆ. ಆದರೆ ವಿಷಯ ಎಷ್ಟು ದಿನ ಮುಚ್ಚಿಡಬಹುದು ? ಆ ಬಿಳಿಮಚ್ಚೆ ಅವಳ ಹಣೆ ಬರಹಕ್ಕೆ ಒಂದು ಗೆರೆ ಎಳೆಯಿತು. ಅದು ಹಣೆಯಲ್ಲಿ ಕಾಣಿಸಿಕೊಂಡಾಗ ಬೆಚ್ಚಿದಳು ವಸು.

"ಇದೇನಿದು ಈ ತೊನ್ನು ಹೇಗೆ ಬಂತು" ಎಂದು ಕೇಳಿದಳು." ವಸು. ಉತ್ತರಿಸಧೇ ಅಳುತ್ತ ನಿಂತಳು.

"ಎಷ್ಟು ದಿನದಿಂದ ಈ ಕಾಹಿಲೆ ಇತ್ತು; ನೀನೇಕೆ ನನಗೆ ಮೊದಲೆ ಹೇಳಲಿಲ್ಲ" ಎಂದು ಗುಡುಗಿದಳು.

"ಸತ್ಯವಾಗಿ ವಸು, ನಾನು ಕಂಡಿದ್ದೇ ನೀವು ಮೈಸೂರಿಗೆ ಹೋದಂದು" ಎಂದಳು. ಕ್ಷಣ ಬಿಟ್ಟು ವಸು ಎಂದಳು.

"ಈ ಕಾಹಿಲೆ ಸೋಂಕು ಜಾಡ್ಯವಲ್ಲದಿದ್ದರೂ, ಈ ಕಾಹಿಲೆ ಬಂದವರ ಕೈಯಿಂದ ನಾವು ಊಟ ಮಾಡುವುದು ಹೇಗೆ? ಸಾಧ್ಯವಿಲ್ಲ. ಇಂತಹ ಅಸಹ್ಯಕರವಾದ ರೋಗದಿಂದ ನರಳುತ್ತಿರುವ ನಿನ್ನನ್ನು ನಾವು ಸಾಕಲಾರೆವು. ಕ್ಷಮಿಸು ರಮಾ, ನಿನಗೆ ಬೇಕಲ್ಲಿಗೆ ನೀನು ಈಗ ಹೋಗಬಹುದು."

'ನಾನು ಹೋಗುವುದಾದರೂ ಎಲ್ಲಿಗೆ'

"ಅದು ನನಗೇನು ಗೊತ್ತು" ಎಂದು ಬಿಟ್ಟಳು ವಸು. ತಗೋ ನಿನ್ನ ವಸ್ತುಗಳೇನಿವೆಯೋ ಅದನ್ನೆಲ್ಲ ಸಿದ್ಧಪಡಿಸು, ಹೂಂ ಹೊರಡು" ಎಂದಳು ಮತ್ತೆ. ದಿವಾಕರ ಮನೆಗೆ ಬಂದಿರಲಿಲ್ಲ. ಮಕ್ಕಳು ಸ್ಕೂಲಿಂದ ಬರಬೇಕಾಗಿದೆ, ರಮಾಳ ಕೈಕಾಲುಗಳು ನಡುಗುತ್ತಿದ್ದವು. ತಾನು ಎಲ್ಲಿಗೆ ಹೋಗಬೇಕೆಂಬುದೇ ಮನಸ್ಸಿನಲ್ಲಿ ಸ್ಥಿರವಾಗಿ ಮೂಡಿಲ್ಲ. ಕೈಚೀಲವನ್ನು ಕೈಗೆತ್ತಿಕೊಂಡು ಹೊಸ್ತಿಲು ದಾಟಿ ಹೊರಗೆ ಬರಬೇಕು. "ರಮಕ್ಕ ನೀ ಹೋಗಬೇಡ" ಎಂದು ಮಕ್ಕಳು ಓಡುತ್ತ ಬಂದು ಅವಳ ಸೆರಗನ್ನು ಜಗ್ಗಿದುವು. ಮೆಲ್ಲಗೆ ಅನಿತಳನ್ನು ಎತ್ತಿಕೊಳ್ಳಲು ಯತ್ನಿಸಿದಳು.

"ಬಿಡು ಅವಳನ್ನು ಕೆಳಗೆ" ಎಂದ/ ವಸು, ನರೇಂದ್ರನ ಕಡೆ ತಿರುಗಿ "ಬಾರೋ ನರೇಂದ್ರ ಇಲ್ಲಿ, ಅವಳಿಗೆ ತೊನ್ನು" ಎಂದಳು.

ತೊನ್ನು ಎಂದರೆ ಏನೆಂದು ಅರಿಯದ ಮಕ್ಕಳು ಭಯಬೆರೆತ ದೃಷ್ಟಿಯಲ್ಲಿ ದೂರ ಸರಿದು ನಿಂತವು. ರಮಾ ಮತ್ತೆ ಒಂದು ಕ್ಷಣವೂ ಅಲ್ಲಿ ನಿಲ್ಲಲಿಲ್ಲ. ಯಾಕೋ ಸಮಾಜವೆಲ್ಲ ತನ್ನೆಡೆಗೆ ಬೊಟ್ಟು ನೀಡಿ ತೊನ್ನಿನವಳು, ತೊನ್ನಿನವಳು ಎಂದು ಮೂದಲಿಸುವಂತೆ ಕಂಡಿತು. ಓಡಿಹೋಗಿ ಕೆರೆಗೋ ಬಾವಿಗೋ ಧುಮುಕೋಣ ಎನಿಸಿತು. ಇದ್ದಕ್ಕಿದ್ದಂತೆ ಅನಂತಯ್ಯನವರೆನ್ನುತ್ತಿದ್ದ ಮಾತು ನೆನಪಿಗೆ ಬಂತು.


"ಏನೇ ಕಷ್ಟಗಳಿದ್ದೂ ಈ ಜನ್ಮದಲ್ಲೇ ತೀರಿಸಿಕೊಳ್ಳಬೇಕು ಕಣಮ್ಮ, ಭಯ ಪಡಬೇಡ. ಬಂದದ್ದೆಲ್ಲ ಬರಲಿ, ಗೋವಿಂದನ ದಯವೊಂದಿರಲಿ ಎಂದು ದಾಸರೆಂದ ಮಾತನ್ನು ಜ್ಞಾಪಿಸಿಕೋ. ಎಂತಹ ನೋವಿದ್ದರೂ ತನ್ನಿಂದ ತಾನೇ ಮನಸ್ಸು ಶಾಂತವಾಗುತ್ತದೆ" ಎಂದದ್ದು ನೆನಪಾಗಿ ಕಾಲುಗಳು ತಾನಾಗಿ ಅನಂತಯ್ಯನವರ ಕಡೆಗೆ ಎಳೆದುಕೊಂಡು ಹೋದವು. ಅನಂತಯ್ಯನವರು ಆಗ ತಾನೆ ಸ್ನಾನಮಾಡಿ ಸೂರ್ಯ ನಮಸ್ಕಾರ ಮುಗಿಸಿ ತಲ್ಲಣಿಸದಿರು ಕಂಡ್ಯ ತಾಳು ಮನವೆ...ದಾಸರ ಹಾಡೊಂದನ್ನು ಹಾಡಿಕೊಳ್ಳುತ್ತ ಭಾವ ಪರವಶರಾಗಿದ್ದರು. ತನ್ನ ತಲ್ಲಣ ಕಂಡೆ ಅನಂತಯ್ಯನವರಿಂದ ಯಾವುದೋ ಅಗೋಚರ ಶಕ್ತಿಯೊಂದು ಈ ಹಾಡನ್ನು ಹಾಡಿಸಿರಬೇಕು. ಹೊಸಿಲ ಹೊರಗೆ ಬಿಕ್ಕುತ್ತ ಕುಳಿತ ರಮಾಳ ಧ್ವನಿಗೆ ಬೆಚ್ಚಿದ ಅನಂತಯ್ಯ ಹಾಡು ನಿಲ್ಲಿಸಿ ಹೊರಗೆ ಬಂದರು. "ಯಾಕಮ್ಮ ಏನಾಯ್ತು. ವಸು ಏನಾದರೂ ಅಂದಳೆ. ದುಡುಕು ಸ್ವಭಾವದ ಹುಡುಗಿ ಏನಾದರೂ ಅಂದಿರಬಹುದು, ಹೇಳು ಏನಾಯ್ತು" ಎಂದರು ಅನಂತಯ್ಯ.

"ಇಲ್ಲ... ಇಲ್ಲ... ಇನ್ನು ನಾನು ಆ ಮನೆಗೆ ಹೋಗುವ ಹಾಗಿಲ್ಲ, ಇದೋ ಇಲ್ಲಿ ನೋಡಿ ನನ್ನ ಹಣೆಯಲ್ಲಿರುವ ಈ ಮಚ್ಚೆ" ಒಂದುಕ್ಷಣ. ಒಂದೇ ಒಂದು ಕ್ಷಣ ದಿಗ್ಮೂಢರಾದರು ಅನಂತಯ್ಯ. ಮರುಕ್ಷಣ ಪಾಪಿಯನ್ನು ಉದ್ಧಾರ ಮಾಡುವುದು ಮಾನವನ ಮೊದಲ ಕರ್ತವ್ಯವಾಗಬೇಕು; ಮಾನವೀಯ ಅನುಕಂಪವನ್ನು ಬಾಯಿಮಾತಿನಲ್ಲಿ ತೋರಿಸುವದಿಲ್ಲ. "ಬಾ ಒಳಗೆ ಬಾ, ನಾನಿರುವವರೆಗೆ ನಿನಗೇತರ ಭಯ" ಎಂದರು. ವಸುನ ಮಕ್ಕಳನ್ನು ಮುಟ್ಟಿಸಿಕೊಂಡರೆ ಮಿಂಯುತ್ತಿದ್ದ ಅನಂತಯ್ಯ ತನ್ನನ್ನು ಒಳಗೆ ಕರೆಯುತ್ತಿರುವದನ್ನು ನೆನೆದು ಅಳುಕಿದಳು ರಮಾ.

"ಅಂತಹ ಮಹಾಮಹಿಮರಾದ ವ್ಯಾಸರಾಯರೇ ಕನಕದಾಸರಿಗೆ ಒಲಿದು ಉದ್ಧಾರ ಮಾಡಿರುವಾಗ, ಸಾಮಾನ್ಯನಾದ ನಾನು ನಿನ್ನ ಪರಿಸ್ಥಿತಿಯನ್ನು ಕಂಡು ಮೌನ ತಳೆಯುವುದು ಸರಿಯಲ್ಲ. ಇದು ಮಾನವೀಯ ಲಕ್ಷಣವೂ ಅಲ್ಲ. ನಿನ್ನ ಹೆದರಿಕೆ ಏನಿದ್ದರೂ ಹೊರಗೆ ಬಿಟ್ಟು ಒಳಗೆ ಬಾ" ಎಂದರು ಅನಂತಯ್ಯ. ಮತ್ತೆ ಕ್ಷಣ ಬಿಟ್ಟು ನುಡಿದರು. "ಪರಿಶುದ್ಧವಾಗಿರುವ ನಿನ್ನ ಮನಸ್ಸಿನ ಹಿಂದೆ ಅಡಗಿರುವ ನೋವನ್ನು ನಾನು ಬಲ್ಲೆ. ನಿನ್ನ ಜಾತಿಯೂ ನನಗೀಗ ಮುಖ್ಯವಲ್ಲ ಅಥವಾ ನಿನಗೆ ಬಂದಿರುವ ಬಿಳಿ ಮಚ್ಚೆಯೂ ನನಗೆ ಮುಖ್ಯದಲ್ಲ. ಮುಖ್ಯ ನೊಂದಿರುವ ನಿನ್ನನ್ನು ಉದ್ಧಾರ ಮಾಡುವದು. ನಿನ್ನಂತೆಯೇ ನೊಂದಿರುವ ಅನೇಕರನ್ನು ಉದ್ಧಾರ ಮಾಡುವದಕ್ಕೆ ಇಂದಿನಿಂದಲೇ ನಾವಿಬ್ಬರು ಪಣ ತೊಡೋಣ. ತೊನ್ನು ಒಂದು ಕಾಹಿಲೆಯೂ ಅಲ್ಲ, ವ್ರಣವೂ ಅಲ್ಲ. ಕಿಣ್ವದ ಬದಲಾವಣೆಯಿಂದ ಕೆಲವೊಮ್ಮೆ, ಕೆಲವರಲ್ಲಿ ಚರ್ಮ ಬಣ್ಣ ಕಳೆದು ಕೊಳ್ಳುತ್ತದೆ. ಅದು ಸೋಂಕು ಜಾಡ್ಯವೂ ಅಲ್ಲ. ಕಾಹಿಲೆಯೂ ಅಲ್ಲ ಎನ್ನುವುದರ ಬಗ್ಗೆ ಜನರಲ್ಲಿ ತಿಳಿವಳಿಕೆ ಬರಲು ಪ್ರಯತ್ನಿಸಬೇಕು. ಸಮಾಜಭೀತಿಯನ್ನು ಹೋಗಲಾಡಿಸಲು ಪ್ರಯತ್ನಿಸಬೇಕು ನೀನು ನನಗೆ ಹೆಗಲುಕೊಡುವುದಾದರೆ ನಾನು ಈ ದಾರಿಯಲ್ಲಿ ಮುಂದೆ ಹೋಗಲು ಬಯಸುತ್ತೇನೆ" ಎಂದರು ಅನಂತಯ್ಯ.

ಎದ್ದು ಒಳಗೆ ಬಂದ ರಮಾ, ಅನಂತಯ್ಯನವರ ಕಾಲಿಗೆ ಮಣಿದಳು. ಅವಳ ಕಣ್ಣೀರನ್ನು ತೊಡೆದರು ಅನಂತಯ್ಯ. ●

ಬೆಳಗು




ಮೂಡಣದಲ್ಲಿ
ಮೂಡಿ ಬಂತು
ಮುಳುಗುವ
ಸೂರ್ಯನ
ಮೊದಲ ಕಂತು

—ಎಚ್. ಡುಂಡಿರಾಜ್



ದೇವಲೋಕದ ಮೇಲೆ ಮಾನವರ ದಾಳಿ







ಇಡೀ ವಾರವೆಲ್ಲ ದುಡಿದು ಬೇಸರ ಬಂದಿತ್ತು. ಬೇಸರ ಕಳೆಯುವದಕ್ಕಾಗಿ ಮೊನ್ನೆ ರವಿವಾರವಿಡೀ ಮನಸೋಕ್ತ ವಿರಾಮ ವಿಶ್ರಾಂತಿ ಪಡೆಯಬೇಕೆಂದು ನಿರ್ಧರಿಸಿದ್ದೆ.

ಬೆಳಿಗ್ಗೆ ಎಂಟು ಘಂಟೆಗೆ ಎದ್ದು ಸ್ನಾನ ಉಪಹಾರ ತೀರಿಸಿಕೊಂಡು ಮುಂಜಾವಿನ ಹತ್ತು ಘಂಟೆಗೆ "ವಾರ ಆಫ್ ವರ್ಲ್ಡ್ಸ್" ಚಿತ್ರಪಟ ನೋಡಲು ಹೋದೆ.

ಸಂಜೆಯ ಆರು ಘಂಟೆಗೆ ನಗರ ಭವನದಲ್ಲಿ "ಕವಿ, ಸಾಹಿತಿ, ಪತ್ರಿಕೋದ್ಯಮಿ ಮತ್ತು ರಾಜಕಾರಣ" ಈ ವಿಷಯದ ಮೇಲೆ ಕವಿ, ಸಾಹಿತಿ, ಪತ್ರಿಕೋದ್ಯಮಿಗಳ ಪರಿಸಂವಾದವನ್ನು ಕೇಳಲು ಹೋದೆ.

ರಾತ್ರಿ ಹತ್ತು ಘಂಟೆಗೆ ನೆಹರೂ ಮೈದಾನದಲ್ಲಿ ಕಾಂ. ಕ. ಯ ಆಶ್ರಯದಲ್ಲಿ ಪ್ರಚಂಡ ಸಾರ್ವಜನಿಕ ಸಭೆ ಏರ್ಪಡಿಸಿತ್ತು. ರಾತ್ರಿಯ ಎರಡು ಘಂಟೆಯ ವರೆಗೆ ನಡೆದ ಆ ಸಭೆಯಲ್ಲಿ ಉಪಸ್ಥಿತನಿದ್ದು ಅನಂತರ ಇಡೀ ದಿನ ನಡೆದ ಘಟನೆಗಳನ್ನು ಮೆಲುಕು ಹಾಕುತ್ತ ಮನೆಗೆ ಮರಳಿದೆ.

"ವಾರ್ ಆಫ್ ವರ್ಲ್ಡ್ಸ್" ಚಿತ್ರಪಟ ಚೇತೋಹಾರಿಯಾಗಿತ್ತು.

ಕವಿ, ಸಾಹಿತಿ, ಪತ್ರಿಕೋದ್ಯಮಿಗಳ ಪರಿಸಂವಾದವಂತೂ ಅಮೋಘವಾಗಿತ್ತು. ಈಗ ಜಗತ್ತಿನ ಎಲ್ಲ ರಾಷ್ಟ್ರಗಳ ಆಡಳಿತದಲ್ಲಿ ಕವಿಗಳಿಗೂ ಸಾಹಿತಿಗಳಿಗೂ ಸ್ಥಾನವಿಲ್ಲದ್ದರಿಂದಲೇ ಪ್ರಪಂಚದಲ್ಲಿ, ಅಸ್ಥಿರತೆ, ಅಶಾಂತಿ, ಉದ್ವಿಗ್ನತೆಗಳ ಕರಾಳ ಛಾಯೆ ಎಲ್ಲೆಡೆ ಪಸರಿಸಿದೆ. ಯಾಕೆಂದರೆ ಕವಿಗಳಲ್ಲಿರುವ ಕಲ್ಪಕತೆ, ಸಾಹಿತಿಗಳಲ್ಲಿರುವ ಸುಯೋಜಕ ಬುದ್ಧಿ ದೂರದೃಷ್ಟಿ ಇವು ರಾಜಕಾರಣಿಗಳಲ್ಲಿಲ್ಲದ್ದರಿಂದ ಪ್ರತಿಭಾಪಲಾಯನವಾಗಿ ಆಡಳಿತಗಾರರಾದ ರಾಜಕಾರಣಿಗಳಲ್ಲಿ ಸ್ವಾರ್ಥ, ಸಂಕುಚಿತ ದೃಷ್ಟಿ, ವ್ಯಕ್ತಿಪೂಜೆಗಳ ಮನೋಭಾವನೆ ಬೇರೂರಿದೆ. ಈ ದೋಷ ನಿವಾರಣೆಯಾಗಬೇಕಾದರೆ ಕವಿಗಳ ಕೈಯಲ್ಲಿ ಸಾಹಿತಿಗಳ ಕೈಯಲ್ಲಿ ರಾಜಕೀಯ ಸೂತ್ರಗಳು, ಬರಲೇಬೇಕು ಎಂದು ಅನೇಕ ಜನ ಕವಿ ಪುಂಗವರು, ಸಾಹಿತ್ಯ ಶಿರೋಮಣಿಗಳು, ಬಲವಾಗಿ ಪ್ರತಿಪಾದಿಸಿದ್ದರು.

ಪ್ರಪಂಚದ ಕೆಲವು ಪ್ರಬಲರಾಷ್ಟ್ರಗಳು ಜಗತ್ತಿನಲ್ಲಿ ತಮಗೇ ಅಗ್ರೇಸರತ್ವವಿರಬೇಕೆಂದು ನಡೆಸಿದ ಶಸ್ತ್ರಾಸ್ತ್ರ ಸ್ಪರ್ಧೆಯ ಪರಿಣಾಮದಿಂದ ಪ್ರಪಂಚದಲ್ಲಿ ಅಸ್ಥಿರತೆ ಉಂಟಾಗಿದೆ. ಅಶಾಂತಿ ಎಲ್ಲೆಡೆ ತಾಂಡವ ನೃತ್ಯ ನಡೆಸಿದೆ. ಇದೆಲ್ಲದಕ್ಕೆ ಕಾರಣ ಆಸ್ತಿ-ನಾಸ್ತಿ ಪಕ್ಷಗಳಲ್ಲಿ ನಡೆದಿರುವ ಏರಾಟ ಮತ್ತು ಶೀತಲಯುದ್ಧ. ಆದುದರಿಂದ ಈ ಜಾಗತಿಕ ದ್ವೇಷ ಶಮನಕ್ಕಾಗಿ ಆಸ್ತಿ-ನಾಸ್ತಿ ಪಕ್ಷಗಳು ಶಸ್ತ್ರಸನ್ಯಾಸ ಮಾಡಬೇಕು ಮತ್ತು ಈಗ ಕೂಡಿಹಾಕಿರುವ ಮಾರಕ ಶಸ್ತ್ರಾಸ್ತ್ರಗಳ ಸಂಗ್ರಹವನ್ನು ನಾಶಗೊಳಿಸಬೇಕು ಎಂದು ಅನೇಕ ಭಾಷಣಕಾರರು ಭಾಷಣ ಮಾಡಿದರು.

ಅಧ್ಯಕ್ಷತೆ ವಹಿಸಿದ್ದ ನಗರ ಕಾಂಗ್ರೆಸ್ ಕಮೀಟಿಯ ಅಧ್ಯಕ್ಷರು ತಮ್ಮ ಸಮಾರೋಪ ಭಾಷಣದಲ್ಲಿ ಪ್ರಪಂಚದ ಆಸ್ತಿ-ನಾಸ್ತಿ **(Haves and have nots)** ಪಕ್ಷಗಳ ಧುರೀಣರ ಏರಾಟಿಕೆಯ ಧೋರಣೆಯನ್ನು ಖಂಡಿಸುತ್ತ ಈ ಎರಡೂ ಪ್ರಬಲ ರಾಷ್ಟ್ರಗಳು ಅಸ್ತ್ರಸನ್ಯಾಸ ಮಾಡಿ ಗಾಂಧಿತತ್ವ ಪ್ರಣಾಲಿಯಂತೆ ಅಹಿಂಸಾ ವ್ರತವನ್ನು ಕೈಗೊಳ್ಳಬೇಕೆಂದೂ ಹಾಗೆ ಮಾಡದಿದ್ದರೆ ತಾವು ತಮ್ಮ ಸ್ವಯಂಸೇವಕರೊಡನೆ ಉಪವಾಸ ಸತ್ಯಾಗ್ರಹ, ರಸ್ತಾ ರೋಕೋ ಇವೇ ಮೊದಲಾದ ಉಪಾಯಗಳನ್ನು ಕೈಕೊಳ್ಳಬೇಕಾಗುವದೆಂದೂ ಎಚ್ಚರಿಕೆ ಕೊಟ್ಟಿದ್ದಲ್ಲದೆ ಈ ಜಾಗತಿಕ ಅಶಾಂತಿಗೆ ಮೂಲಕಾರಣಭೂತರಾದ ರಶಿಯಾ ಮತ್ತು ಅಮೆರಿಕೆಯ ಅಧ್ಯಕ್ಷರಿಗೆ ಎಚ್ಚರಿಕೆಯ ಪತ್ರ ಬರೆಯುವದಾಗಿಯೂ ಘೋಷಿಸಿದ ನಂತರ ಭಾರತ ಮಾತಾಕೀ ಜೈ, ಗಾಂಧೀ ಮಹಾರಾಜಕೀ ಜೈ ಎಂಬ ಜಯ ಘೋಷದೊಂದಿಗೆ ಸಭೆ ಮಧ್ಯರಾತ್ರಿಯ ಎರಡು ಘಂಟೆಗೆ ಮುಕ್ತಾಯವಾಗಿತ್ತು.

ಶಂ. ಬಾ. ಮನಗೋಳಿ

ನಾನು ಮನೆಗೆ ಬಂದೆ. ಹಾಸಿಗೆ ಬಿಚ್ಚಿ ನಿದ್ರಾದೇವಿಯ ಆರಾಧನೆ ಮಾಡುತ್ತ ಹಾಸಿಗೆ ಮೇಲೆ ಬಿದ್ದುಕೊಂಡು ಕಣ್ಮುಚ್ಚಿದೆ. ಕಣ್ಮುಚ್ಚಿ ಅಂದು ಇಡೀ ದಿನ ನಾನು ಕಂಡ, ಅನುಭವಿಸಿದ ಯುದ್ಧದ ಚಿತ್ರಪಟ, ಕವಿ, ಸಾಹಿತಿ, ಕಾದಂಬರೀಕಾರ, ಪತ್ರಿಕೋದ್ಯಮಿಗಳು ಮಾಡಿದ ಭಾಷಣ, ರಾತ್ರಿಯ ಸಾರ್ವಜನಿಕಸಭೆಯಲ್ಲಿ ನಡೆದ ಕಾರ್ಯ ಕಲಾಪಗಳು, ಧಾರಾವಾಹಿಯಾಗಿ, ನನ್ನ ಮನಶ್ಚಕ್ಷುವಿನೆದುರು ಸುರುಳಿ ಬಿಚ್ಚತೊಡಗಿದವು.

ಅದೇನು ನಿದ್ರೆಯೋ ಸುಷುಪ್ತಾವಸ್ಥೆಯೋ ಸ್ವಪ್ನವೋ ಯಾವುದೂ ತಿಳಿಯದಂತಾಯಿತು. ಇಡೀ ದಿನದ ಘಟನೆಗಳ ಕಲಸುಮೇಲೋಗರವಾಗಿ ಒಂದು ಅಭೂತಪೂರ್ವ ಅನುಭೂತಿ ನನ್ನನ್ನಾವರಿಸಿತು.

× × ×

ಉತ್ತರ ತುದಿಯಲ್ಲಿ "ನಾಸ್ತಿ" ಪಕ್ಷದ ಧುರೀಣತ್ವ ವಹಿಸಿದ ರಶಿಯದ ಸೈನ್ಯ ಅಷ್ಟೇ ಯುದ್ಧಸಿದ್ಧತೆಯಿಂದ ಸಜ್ಜಾಗಿ ನಿಂತಿದೆ.

ಒಂದು ವಿಶಾಲವಾದ ರಣಕ್ಷೇತ್ರ, ದಕ್ಷಿಣ ಭಾಗದಲ್ಲಿ ಆಸ್ತಿ ಪಕ್ಷದ,ಅಮೇರಿಕೆಯ ನೇತೃತ್ವದ ಪ್ರಚಂಡ ಸೈನ್ಯ ವಿವಿಧ ಬಗೆಯ ಶಸ್ತ್ರಾಸ್ತ್ರಗಳಿಂದಲೂ, ತೋಫು ತುಬಾಕಿ ವೈಮಾನಿಕ ದಳಗಳಿಂದಲೂ ಯುದ್ಧ ಸನ್ನದ್ಧವಾಗಿ ನಿಂತಿವೆ.

ಯುದ್ಧ ಪ್ರಾರಂಭವಾಗುವದಕ್ಕಾಗಿ ಬ್ಯೂಗಲ್ ತುತೂರಿಗಳು ಮೊಳಗುತ್ತಿದ್ದಂತೆಯೇ ಕಾಂ. ಕ. ಅಧ್ಯಕ್ಷರು, ಲಾಠೀಧಾರಿಗಳಾದ ತಮ್ಮ ಸ್ವಯಂಸೇವಕರ ಪಡೆಯೊಂದಿಗೆ ಆ ಎರಡೂ ಸೈನ್ಯಗಳ ಮಧ್ಯದಲ್ಲಿ ಹೋಗಿನಿಂತು ಸುತ್ತಲೂ ಕಣ್ಣಾಡಿಸತೊಡಗಿದರು.

ತಮ್ಮ ಕವಿತಾಸ್ಫೂರ್ತಿಗೆ, ಕವಿಕಲ್ಪನೆಗೆ ಸಾಹಿತ್ಯ ನಿರ್ಮಾಣಕ್ಕೆ ಹೊಸತೇನಾದರೂ ಕಾಣಸಿಗಬಹುದೆಂದು ಕವಿಪುಂಗವರು, ಸಾಹಿತ್ಯ ಸಾಮ್ರಾಟರು, ಪತ್ರಿಕಾಕರ್ತರು ಅಲ್ಲಿಯೇ ಸುಳಿದಾಡತೊಡಗಿದರು. ನಮ್ಮ ಸಂಪಾದಕರ ಆದೇಶದ ಮೇರೆಗೆ ನಾನೂ ಅತ್ತಿಂದತ್ತ, ಇತ್ತಿಂದತ್ತ ಈ ಎಲ್ಲ ಸಮುದಾಯಗಳ ಮಧ್ಯ ಓಡಾಡುತ್ತಿದ್ದೆ.

ಕಾಂ. ಕ. ಅಧ್ಯಕ್ಷರು ಮೊನಚಾಗಿ ಇಸ್ತ್ರಿ ಮಾಡಿದ್ದ ತಮ್ಮ ಖಾದೀ ಟೊಪ್ಪಿಗೆಯನ್ನು ಸರಿಮಾಡಿಕೊಳ್ಳುತ್ತ ಮುಂದೆ ಸರಿದು "ಯುದ್ಧ ನಿಲ್ಲಿಸಿರಿ, ಅಮೇರಿಕೆಯ ಸೈನ್ಯವು ತನ್ನ ದೇಶಕ್ಕೆ ಹೋಗಲಿ. ರಶಿಯದ ಸೇನೆ ತನ್ನ ದೇಶಕ್ಕೆ ಮರಳಲಿ" ಎಂದು ಆಜ್ಞಾಪಿಸಿದ ಕೂಡಲೇ ಅವರ ಹಿಂದಿದ್ದ ಸಹಸ್ರಾವಧಿ ಸ್ವಯಂ ಸೇವಕಗಣವು ಜಯಘೋಷ ಮಾಡಲು ಪ್ರಾರಂಭಿಸಿತು.

ಅಮೇರಿಕಾ ಮತ್ತು ರಶಿಯಾ ಪಕ್ಷಗಳ ಸೇನಾಪತಿಗಳು ಈ ... ಆತಂಕದಿಂದ ಗೊಂದಲದಲ್ಲಿ ಬಿದ್ದು ತತ್... ಚೇತರಿಸಿಕೊಂಡು ಮುಂದೆ ಬಂದು, ಇದು ಯುದ್ಧ ಕ್ಷೇತ್ರ, ಇಲ್ಲಿ ನಿಮಗೆ ಸ್ಥಾನ ಪ್ರವೇಶವಿಲ್ಲ; ಕೂಡಲೇ ಇಲ್ಲಿಂದ ಹೊರಟು ಹೋಗಬೇಕು ಎಂದು ಕಾಂ. ಕ.



ಅಧ್ಯಕ್ಷರಿಗೆ ಆದೇಶಕೊಟ್ಟರು. ಅಧ್ಯಕ್ಷರು ಸರಿಯದ್ದರಿಂದ ಅವರ ಅಭಿಪ್ರಾಯವಾದರೂ ಏನು ? ಎಂದೂ ಕೇಳಿದರು.

"ನೀವು ಈಗಿಂದೀಗ ಯುದ್ಧ ನಿಲ್ಲಿಸಬೇಕು. ಇಲ್ಲದಿದ್ದರೆ ಪರಿಣಾಮವು ನೆಟ್ಟಗಾಗಲಿಕ್ಕಿಲ್ಲ" ಎಂದು ಅಧ್ಯಕ್ಷರು ಅಪ್ಪಣೆ ಕೊಟ್ಟರು.

"ನಮ್ಮ ಸರಕಾರಗಳು ಯುದ್ಧ ಮಾಡಲಿಕ್ಕೆ ನಮಗೆ ಆದೇಶ ಕೊಟ್ಟಿವೆ. ಯುದ್ಧ ಮಾಡುವದು ನಮ್ಮ ಕೈಯಲ್ಲಿದೆ. ಅದು ನಿಲ್ಲಬೇಕಾದರೆ ಅದಕ್ಕೆ ನಮ್ಮ ನಮ್ಮ ಸರಕಾರಗಳ ಅನುಮತಿ ಬೇಕು " ಎಂದು ಎರಡೂ ಪಕ್ಷಗಳ ಸೇನಾಪತಿಗಳು ತಮ್ಮ ಆತಂಕವನ್ನು ತೋಡಿಕೊಂಡರು.

"ಹಾಗಿದ್ದರೆ ನೀವು ಎರಡೂ ಪಕ್ಷದವರು ನಿಮ್ಮ ನಿಮ್ಮ ಸರಕಾರಗಳಿಗೆ ಅರ್ಜಂಟಾಗಿ ಪತ್ರ ಬರೆದು ಅವರ ಅನುಮತಿ ತೆಗೆದುಕೊಳ್ಳಿರಿ" ಅಧ್ಯಕ್ಷರು ಸೂಚಿಸಿದರು.

"ನೀವೇ ಬೇಕಾದರೆ ನಮ್ಮ ಸರಕಾರಗಳಿಗೆ ಬರೆಯಿರಿ" ಎಂದು ಸೇನಾಪತಿಗಳು ಹೇಳಿದ ಕೂಡಲೇ ನಿರಕ್ಷರಿಗಳಾದ ಅಧ್ಯಕ್ಷರು ಗೊಂದಲದಲ್ಲಿ ಬಿದ್ದರು, ಅಧ್ಯಕ್ಷರ ಈ ಸಂಭ್ರಾಂತಿಯನ್ನು ಕಂಡು ನಾನು ಮಧ್ಯಪ್ರವೇಶಿಸಿ ಅಧ್ಯಕ್ಷರ ಆಶಯದಂತೆ ಎರಡೂ ಪಕ್ಷಗಳ ಪ್ರಮುಖರನ್ನು ಉದ್ದೇಶಿಸಿ ಪತ್ರ ಬರೆದುಕೊಟ್ಟೆ. ಸೇನಾಪತಿಗಳೀರ್ವರೂ ತಮ್ಮ ತಮ್ಮ ಸರಕಾರಗಳಿಗೆ ವಾಯರಲೆಸ್ ಸಂದೇಶ ಕಳಿಸಿ ಅವರ ಅಭಿಪ್ರಾಯ ಕೇಳಿದರು.

"ಯುದ್ಧ ನಿಲ್ಲಿಸಲು ಸಾಧ್ಯವಿಲ್ಲ. ನಮ್ಮದು ತತ್ವಕ್ಕಾಗಿ ನಡೆದ ಸೈದ್ಧಾಂತಿಕ ಹೋರಾಟ, ಈ ಹೋರಾಟಕ್ಕೆ ಯಾರಾದರೂ ಅಡ್ಡ ಬಂದರೆ ಎರಡೂ ಪಕ್ಷಗಳ ಸೇನಾನಿಗಳು ಒಂದುಗೂಡಿ ಸಹಕಾರದಿಂದ ಯುದ್ಧ ವಿರೋಧಿಗಳನ್ನು ಹೊಡೆದೋಡಿಸಿ ಅನಂತರ ಎರಡೂ ಪಕ್ಷದವರು ತಮ್ಮ ಯುದ್ಧವನ್ನು ಮುಂದುವರಿಸಿಕೊಂಡು ಹೋಗಬೇಕು" ಎಂದು ಸಂದೇಶಗಳು ಬಂದವು.

ಈ ಸಂದೇಶವನ್ನು ಸೇನಾಪತಿಗಳು ಕಾಂ. ಕ. ಅಧ್ಯಕ್ಷರಿಗೆ ತಿಳಿಸಿ ಕೂಡಲೆ ಯುದ್ಧರಂಗ ಬಿಟ್ಟು ... ನಮ್ಮ ನಿಶಸ್ತ್ರವೀರರು ಈ ಬೆದರಿಕೆಗೆ ಬೆಚ್ಚದೆ ಬೆದರದೆ ಅಲ್ಲಿಯೇ ನಿಂತರು. "ಮಾಡು ಇಲ್ಲವೇ ಮಡಿ" (**Do or Die**) ಎಂದು ಅಧ್ಯಕ್ಷರು ತಮ್ಮ ಸ್ವಯಂಸೇವಕ ದಳವನ್ನು ಹುರಿದುಂಬಿಸಿದರು. ಕ್ಷಣಾರ್ಧದಲ್ಲಿ ಎಲ್ಲೆಡೆ ವಿದ್ಯುತ್ ಸಂಚಾರವಾದಂತಾಯ್ತು. ಸತ್ಯಾಗ್ರಹವೀರರು ವೀರಗಚ್ಚೆ ಹಾಕಿ, ಕೈಕಟ್ಟಿ ಎದೆ ಸೆಟೆಸಿ ನಿಂತರು. ಇದೆಲ್ಲವನ್ನೂ ಕಂಡ ಕವಿಗಣದಲ್ಲಿಯೂ, ಸಾಹಿತಿಗಳ ಸ್ತೋಮದಲ್ಲಿಯೂ ಸ್ಫೂರ್ತಿಯುಂಟಾಯಿತು.

ಆಸ್ತಿ—ನಾಸ್ತಿ ಪಕ್ಷಗಳ ಸೇನಾ ಪಡೆಯವರು ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಸಜ್ಜುಗೊಳಿಸಿ ಸನ್ನದ್ಧರಾದರು.

ಪರಿಸ್ಥಿತಿಯ ಗಾಂಭೀರ್ಯವನ್ನು ಗಮನಿಸಿದ್ದ ಕವಿಪುಂಗವರೂ ಸಾಹಿತ್ಯ ಶಿರೋಮಣಿಗಳೂ ಮಧ್ಯಪ್ರವೇಶಿಸಿ" "ಶಾಂತಿ, ಶಾಂತಿ" "ಎಂದು ಉದ್ಘೋಷಿಸಿದರು. ಅದರಲ್ಲಿ ಸ್ಫೂರ್ತಿಯ ಸೆಲೆ ಒಡೆಯಿತು. ಹಲವರು ನಶ್ಯದ ಚಿಮಟಿಯನ್ನು ಮೂಗಿಗೊತ್ತಿದರು. ಕೆಲವರು ಧೂಮ್ರಪಾನ ಪ್ರಾರಂಭಿಸಿದರು. ಮತ್ತೆ ಕೆಲವರು ವೀಳ್ಯದೆಲೆಗೆ ಸುಣ್ಣ ಬಡಿದು ಅಡಿಕೆಚೂರಿನೊಂದಿಗೆ ಬಾಯಿಗೆ ತುರುಕಿ ತಂಬಾಕಿನ ಚಿಮಟಿಯನ್ನು ಬಾಯಿಗೊಯ್ದರು. ಕಾವ್ಯ ಸ್ಫೂರ್ತಿ ತಾನೇ ತಾನಾಗಿ ಎಲ್ಲೆಡೆ ಹೊರಸೂಸಲಾರಂಭಿಸಿತು.

ಯುದ್ಧಾಸಕ್ತ ರಾಷ್ಟ್ರಗಳ ಸೇನಾನಿಗಳು ತಮ ಪದಾತಿ ದಳಕ್ಕೆ ಮುನ್ನುಗ್ಗಲು ಆಜ್ಞಾಪಿಸಿದರು. ಶಸ್ತ್ರ ಸನ್ನದ್ಧವಾದ ಸೇನಾ ಸಾಗರವು ನಿಶ್ಶಸ್ತ್ರರಾದ ಸ್ವಯಂಸೇವಕದಳದ ಮೇಲೆ ಏರಿಬರತೊಡಗಿತು.

"ಶೂಟ್ (ಗುಂಡಿಕ್ಕಿರಿ) ಎಂದು ಸೇನಾಪತಿಗಳು ಆಜ್ಞಾಪಿಸಿದರು. ರಾಯಫಲ್, ಸ್ಟೆನ್‌ಗನ್, ಮಶೀನ್‌ಗನ್, ಕೈಬಾಂಬುಗಳ ಖಟ್, ಖಟ್ ಸಪ್ಪಳವು ನಾಲ್ದೆಸೆಗಳನ್ನು ವ್ಯಾಪಿಸಿತು. ಇನ್ನೇನು ಈ ತುಬಾಕಿಗಳಿಂದ ಗುಂಡುಗಳ ಸುರಿಮಳೆ ಪ್ರಾರಂಭವಾಗುವುದರಲ್ಲಿದ್ದಾಗ ಕವಿಗಣದಲ್ಲಿ ಅಮೋಘವಾದ ಸ್ಫೂರ್ತಿಮೂಡಿ ಕವಿ ಸಾರ್ವಭೌಮರು ತಮ್ಮ ಕವಿಗಣಕ್ಕೆ ಶಾಲಿನಿ, ಶಂಖಿಣಿ, ಮಾಲಿನಿ ಮೊದಲಾದ ವೃತ್ತ ದೇವತೆಗಳ ಆವಾಹನ ಮಾಡಿ ಕವಿತಾಸ್ತ್ರಗಳನ್ನೆಸೆಯಲು ಆಜ್ಞಾಪಿಸಿದರು.

ಈ ಕವಿತಾಸ್ತ್ರಗಳು ಹೊರ ಬಂದುದೇ ತಡ, ಮಾರಕ ಶಸ್ತ್ರಾಸ್ತ್ರಗಳಿಂದ ಸನ್ನದ್ಧವಾಗಿದ್ದ ಆಸ್ತಿ—ನಾಸ್ತಿ ಪಕ್ಷಗಳ ಸೇನಾ ಸಾಗರವು ಕಣ್ಮುಚ್ಚಿ ಬಾಯಿ ತೆರೆದು, ಆಕಳಿಸುತ್ತ ಮಂತ್ರ ಮುಗ್ಧವಾಗಿ ಸಂಮ್ಮೋಹಿತವಾಯಿತು. ಅವರು ಕೈಯಲ್ಲಿದ್ದ ಶಸ್ತ್ರಾಸ್ತ್ರಗಳನ್ನು ಚೆಲ್ಲಿಕೊಟ್ಟು ರಣಭೂಮಿಯ ಮೇಲೆ ಗಾಢ ನಿದ್ರೆಯಲ್ಲೊರಗಿದರು. ಇಡೀ ಸೇನಾಸಾಗರವು ನಿಶ್ಚಲವಾಗಿ ಬಿದ್ದಿತು.

ಪದಾತಿಗಳ ಈ ದುರವಸ್ಥೆಯನ್ನು ಕಂಡ ಸೇನಾಪತಿಗಳು ಅಜೇಯವೂ, ಅರಿ ಭಯಂಕರವೂ ಆಗಿದ್ದ ತಮ್ಮ ಟ್ಯಾಂಕ್ ದಳಗಳನ್ನು ಮುನ್ನುಗ್ಗಿಸಿದರು. ಸಾವಿರಾರು ಟ್ಯಾಂಕ್‌ಗಳು ತೋಪುಗಳು ಏಕಸಮಯಾವಚ್ಛೇದದಿಂದ ಅರ್ಭಟಿಸುತ್ತ, ಕಿವಿ ಗಡಚಿಕ್ಕುವಂತೆ ಶಬ್ದ ಮಾಡುತ್ತ ಮುಂದೆ ಬಂದವು.

ಕವಿ ಸಾರ್ವಭೌಮರು ಶಾರ್ದೂಲ,ಮತ್ತೇಭ, ವಿಕ್ರೀಡಿತಗಳನ್ನು ರಥೋದ್ಧತಾ, ಭುಜಂಗ, ವಿದ್ಯುನ್ಮಾಲಾ ವೃತ್ತಾಸ್ತ್ರಗಳ ಸ್ಫೋಟಗೊಳಿಸಲು ಕವಿ ಸೇನೆಗೆ ಅಜ್ಞಾಪಿಸಿದರು. ಈ ಅಸ್ತ್ರಗಳು ಘನ ಘೋರ ಗರ್ಜನೆ ಮಾಡುತ್ತ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಏರಿ ಬರುತ್ತಿದ್ದ ಟ್ಯಾಂಕು ಪಡೆಗಳ ಮೇಲೆ ಪ್ರಹಾರ ಮಾಡಿದಾಕ್ಷಣ ಎಲ್ಲ ಟ್ಯಾಂಕುಗಳು ಬಾಲ ಮುದುಡಿಕೊಂಡು ಗ್ರಾಮ ಸಿಂಹಗಳಂತೆ ಕುಂಯ್‌ಗುಡುತ್ತ ಹಿಂದೇಟು ಹಾಕತೊಡಗಿದವು.

ಟ್ಯಾಂಕುಗಳ ಈ ದುಃಸ್ಥಿತಿ ಕಂಡು ಹೌಹಾರಿದ ಸೇನಾಪತಿಗಳು ಇನ್ನು ಸುಮ್ಮನಿರುವದು ತರವಲ್ಲವೆಂದು ಫಾಯ್ಟರ್, ಮಾಸ್ಕಿಟೋಗಳ ವೈಮಾನಿಕ ದಾಳಿ ಪ್ರಾರಂಭಿಸಲು ಆಜ್ಞಾಪಿಸಿದರು. ವೈಮಾನಿಕ ಪಡೆಯ ಸಾವಿರಾರು ವಿಮಾನಗಳು ದಾಳಿ ಪ್ರಾರಂಭಿಸಲು ಗಗನಕ್ಕೇರಿದವು. ಗಗನಕ್ಕೇರಿದ ಈ ಅಜಸ್ರ ವಿಮಾನಗಳು ನಭೋಮಂಡಲವನ್ನು ವ್ಯಾಪಿಸಿ ಬಿಟ್ಟವು. ಕ್ಷಣಾರ್ಧದಲ್ಲಿ ವೈಮಾನಿಕ ದಾಳಿಯಿಂದ ಭೂ ಮಂಡಲವೇ ಸುಟ್ಟು ಹೋಗುವಂತೆ ತೋರಿತು.

ಮುಂದಾಗಬಹುದಾದ ಈ ಅನಾಹುತವನ್ನು ಮೊದಲೆ ಊಹಿಸಿದ ಕವಿ ಸಾರ್ವಭೌಮರು ವೈತಾಲಿಕಾ, ಉಪಜಾತಿಕಾ, ಅದರವಕ್ತ್ರಾ, ರಥೋದ್ಧತಾ, ಮೊದಲಾದ ವೃತ್ತದೇವತೆಗಳಿಂದ ವರಪ್ರದಾನವಾಗಿ ಬಂದ ಕಾವ್ಯಾಸ್ತ್ರಗಳ ಪ್ರತಿಪ್ರಹಾರ ಮಾಡಲು ಅಜ್ಞಾಪಿಸಿದರು. ಈ ಕಾವ್ಯಾಸ್ತ್ರಗಳ ಪ್ರಹಾರದಿಂದ ಕಿವಿ ಗಡಚಿಕ್ಕುವಂಥ ಘನಘೋರ ಶಬ್ದ ಹೊರಟು ಆ ವಿಮಾನಗಳು ರೆಕ್ಕೆ ಮುರಿದ ಪಕ್ಷಿಗಳಂತೆ ಒಂದೊಂದಾಗಿ ಎಲ್ಲವೂ ಪಟಪಟನೆ ನುಚ್ಚುನೂರಾಗಿ ರಣಾಂಗಣದ ತುಂಬ ಮುರಿದು ಬಿದ್ದವು.

ಅಸ್ತಿ-ನಾಸ್ತಿ ಪಕ್ಷಗಳ ಸೇನಾ ವರಿಷ್ಠರು ಇದೆಲ್ಲ ಅನಾಹುತದಿಂದ ದಿಗ್ಭ್ರಮೆಗೊಂಡು ಕೊನೆಯ ಬ್ರಹ್ಮಾಸ್ತ್ರವೆಂದು ಅಣುಬಾಂಬ್ **(Atom Bomb)** ಹೈಡ್ರೋಜನ್ ಬಾಂಬ್ **(Hydrogen Bomb)** ಮತ್ತು ನ್ಯಾಪಾಮ ಬಾಂಬ್ **(Naplam Bomb)** ಗಳನ್ನು ಉಪಯೋಗಿಸಬೇಕೆಂದು ನಿರ್ಧರಿಸಿದರು.

ಇವೆಲ್ಲ ಸರ್ವನಾಶಕ ಬಾಂಬುಗಳನ್ನು ಹೊತ್ತು ಸಜ್ಜಾಗಿದ್ದ ವಿಮಾನಗಳು ಗಗನಕ್ಕೇರಿದವು. ಇಡೀ ಮಾನವ ಕುಲವೇ ನಿರ್ನಾಮವಾಗುವದೆಂದು ಜನಕೋಟಿ ತವಕಿಸುತ್ತಿದ್ದಾಗ, ಕವಿ ಚಕ್ರವರ್ತಿ ತನ್ನ ಕವಿವೃಂದಕ್ಕೆ ಸ್ರಗ್ಧರಾ, ಮಹಾಸ್ರಗ್ಧರಾ, ಪ್ರಹರ್ಷಿಣೀ ಮೊದಲಾದ ವೃತ್ತದೇವತೆಗಳಿಂದ ಅನುಗ್ರಹಿಸಲ್ಪಟ್ಟ ಕಾವ್ಯಾಸ್ತ್ರಗಳನ್ನು ಎರಚಿದ್ದೇ ತಡ ಗಗನಕ್ಕೇರಿದ ಬಾಂಬರ್ ವಿಮಾನಗಳು ಸೊಯ್‌ಗುಡುತ್ತ ಈ ಕಾವ್ಯಾಸ್ತ್ರಗಳ ಪ್ರಹಾರದಿಂದ ತಬ್ಬಿಬ್ಬಾಗಿ ಮಧುಪಟದಿಂದ ಮಕರಂದವು ಸೋರಿದಂತೆ ಮಧು ಸಿಂಚನ ಮಾಡುತ್ತ ಧರೆಗಿಳಿದವು.

ಈ ಅಮೋಘವಾದ, ಅತರ್ಕ್ಯವಾದ ಅದ್ಭುತವಾದ ಚಮತ್ಕಾರ ಕಂಡು ಯುದ್ಧಾಸಕ್ತ ಸೇನಾಪತಿಗಳು ಅಪ್ರತಿಹತರಾಗಿ, ಬಾಯಾರಿ, ಬಳವಳಿದು ಪೆಚ್ಚಾಗಿ ಬಿಟ್ಟು ಈ ವಿದ್ಯಮಾನಗಳನ್ನು ತಮ್ಮ ತಮ್ಮ ರಾಷ್ಟ್ರಗಳ ವರಿಷ್ಠರಿಗೆ ವಾಯರಲೆಸ್ ಮೂಲಕ ವರದಿ ಮಾಡಿ ಮುಂದೇನು ಮಾಡಬೇಕೆಂದು ಕೇಳಿದರು.

ಈ ಅಗಾಧ ಘಟನೆಯನ್ನು ಕೇಳಿ ಅಸ್ತಿ-ನಾಸ್ತಿ ಪಕ್ಷಗಳ ವರಿಷ್ಠರು ಯುದ್ಧ ವಿರೋಧಿ ಸತ್ಯಾಗ್ರಹಿಗಳಿಗೆ ಶರಣು ಹೋಗಬೇಕೆಂದೂ ಯುದ್ಧ ನಿಲ್ಲಿಸಬೇಕೆಂದೂ ಸೂಚಿಸಿದರು. ಅದರಂತೆ ಈ ಸೇನಾಪತಿಗಳು ಶ್ವೇತ ಧ್ವಜ ಹಿಡಿದುಕೊಂಡು ಶರಣು ಬಂದರು.

ವಿಜಯೀ ವೀರರಾದ ಸತ್ಯಾಗ್ರಹಿಗಳು ಭಾರತ ಮಾತಾ ಕೀ ಜೈ, ಗಾಂಧೀಜೀಕೀ ಜೈ ಎಂದು ಜಯಘೋಷ ಮಾಡುತ್ತ ಹಲಿಗೆ, ರಣಹಲಿಗೆ, ಕರಡಿ ಸಂಬಾಳಗಳ ವಾದ್ಯಮೇಳ ಮೊಳಗುತ್ತಿದ್ದಂತೆ ಕುಣಿದಾಡತೊಡಗಿದರು.

ಕಾಂ. ಕ. ಅಧ್ಯಕ್ಷರು ಕವಿಗಣವನ್ನು ಸಾಹಿತಿ ವೃಂದವನ್ನು ಅಭಿನಂದಿಸಿದರು. ಕವಿ ಸಾರ್ವಭೌಮರು ಅಧ್ಯಕ್ಷರಿಗೆ ಮಾಲಾರ್ಪಣೆ ಮಾಡಿದರು.

ಭೂಲೋಕದ ಮಾನವಕೋಟಿಗೆ ಬಂದಿದ್ದ ಆಪತ್ತನ್ನು ದೂರಗೊಳಿಸಿ ಅಹಿಂಸಾವ್ರತದ ಮಹತಿಯನ್ನು ಕವಿತ್ವದಲ್ಲಿ ಅಡಕವಾಗಿರುವ ಮಹತಿಯನ್ನು ಉಲ್ಲೇಖಿಸಿ ಅದರಲ್ಲಿ ಪಾತ್ರ ವಹಿಸಿದವರೆಲ್ಲರನ್ನೂ ಅಭಿನಂದಿಸುತ್ತ ನಾನು ಕಾ.ಂ ಕ. ಅಧ್ಯಕ್ಷರಿಗೆ ನನ್ನದೊಂದು ಸೂಚನೆ ಬಿನ್ನಹವಿರುವದೆಂದು ಹೇಳಿದೆ.

"ಮತ್ತಾವ ಸೂಚನೆಯಪ್ಪ?" ಎಂದು ಅಧ್ಯಕ್ಷರು ಸ್ಮಿತವದನರಾಗಿ ನನ್ನನ್ನು ಕೇಳಿದರು.


ಭೂಲೋಕದಲ್ಲಿಯ ಅತ್ಯಂತ ಪ್ರಬಲ ರಾಷ್ಟ್ರಗಳೆಂದು ಹೆಮ್ಮೆ ಕೊಚ್ಚಿಕೊಳ್ಳುತ್ತಿದ್ದ ರಾಷ್ಟ್ರಗಳನ್ನು ಚೆನ್ನಾಗಿ ಮರ್ದಿಸಿ ನೀವು ಜಗದೇಕವೀರರಾದಿರಿ. ಹೇಗೂ ನಿಮ್ಮ ಬೆಂಗಾವಲಿಗೆ ಕವಿಗಣವೂ ಸಾಹಿತಿ ಸ್ತೋಮವೂ ಅನಾಯಾಸವಾಗಿ ಲಭ್ಯವಾಗಿದೆ. ಭೂಲೋಕವನ್ನಂತೂ ನೀವು ಗೆದ್ದಿರಿ. ಇದೇ ಸುಸಂದರ್ಭದಲ್ಲಿ ದೇವಲೋಕದ ಮೇಲೆಯೂ ದಾಳಿಯನ್ನೇಕೆ ಮಾಡಬಾರದು ? ಎಂದು ನಾನು ಪ್ರಶ್ನೆ ಹಾಕಿದೆ.

"ನೀವು ಹೇಳುವದು ಸರಿ. ಆದರೆ ಭೂಲೋಕದ ಮಾನವರಾದ ನಮಗೆ ಅದು ಹೇಗೆ ಶಕ್ಯ ? ಅಲ್ಲಿಗೆ ಹೋಗುವ ದಾರಿ ಯಾವುದು ? ಹೋಗುವದು ಹೇಗೆ ?" ಎಂದು ಅಧ್ಯಕ್ಷರು ತಮ್ಮ ಸಂದೇಹ ವ್ಯಕ್ತಪಡಿಸಿದರು.

"ಆ ವಿಚಾರ ನಮಗೆ ಬಿಡಿ. ನಮ್ಮ ಕವಿ ಕಲ್ಪನೆಯಿಂದ ದೇವಲೋಕಕ್ಕೆ ಸೋಪಾನ ಕಟ್ಟಬಲ್ಲೆವು. ನಮ್ಮ ಸಾಹಿತಿ ಬಂಧುಗಳು ನಿಮಗೆ ಮಾರ್ಗದರ್ಶನ ಮಾಡುವರು. ಆ ಬಗ್ಗೆ ಯೋಚನೆ ಬೇಡ " ಎಂದು ಕವಿ ಸಾರ್ವಭೌಮರು ಆಶ್ವಾಸನೆ ಕೊಟ್ಟರು.

"ಹಾಗಾದರೆ, ತಡವೇಕೆ ? ಸಾಗಲಿ, ದೇವಲೋಕದ ಮೇಲೆ ದಾಳಿ" ಎಂದು ನಾನು ಹುರಿದುಂಬಿಸಿದ್ದೇ ತಡ, ಅಧ್ಯಕ್ಷರ ನೇತೃತ್ವದಲ್ಲಿ ಈ ಸ್ವಯಂಸೇವಕ ಪದಾತಿದಲವು ಜಯಘೋಷ ಮಾಡುತ್ತ ಸನ್ನದ್ಧವಾಯಿತು.

ಕವಿ ಸಾರ್ವಭೌಮರು ಮುಂದೆ ಬಂದು "ಅವುಗೆ ಕಟ್ಟುಗೆ ಕಟ್ಟದಿರ್ಕೆ ಕಡಲಂ ಕಪಿ ಸಂತತಿ



ನಮ್ಮ ಊರುಗ ತುಂಬಾ ಛಯಸ್ಥ ಅಂತ
ನಾನು ಹೇಳಿರಲಿಲ್ವೇ !

ವಾಮನಕ್ರಮ ಮುಟ್ಟುಗೆ ಮುಟ್ಟದಿರ್ಕೆ ಕಪಿ ಸಂತತಿ ಕಟ್ಟದರೆ, ಮೆಟ್ಟದರೆ ಮುಟ್ಟದರೆ, ರವಿಕಾಣ್ದಂ ಕವಿ ಕಾಣ್ಬಂ" ಎಂದು ಕಣ್ಮುಚ್ಚಿ ಸ್ಫೂರ್ತಿ ದೇವತೆಯನ್ನು ಸ್ಮರಿಸಿದ್ದೇ ತಡ ಕ್ಷಣಾರ್ಧದಲ್ಲಿ ದೇವಲೋಕಕ್ಕೆ ಅಜಸ್ರವಾದ ಸೋಪಾನ ಸಿದ್ಧವಾಯಿತು. ಕವಿಗಣವೂ ಸಾಹಿತಿ ವೃಂದವೂ ಹುರುಪಿನಿಂದ ಸ್ವರ್ಗಾರೋಹಣಕ್ಕಣಿಯಾದರು. ಅವರ ಹಿಂದಿನಿಂದ ಅಧ್ಯಕ್ಷರು ತಮ್ಮ ಸ್ವಯಂ ಸೇವಕಪಡೆಯೊಂದಿಗೆ ಏರುಗಚ್ಚೆ ಹಾಕಿ ಮೆಟ್ಟಲುಗಳನ್ನು ತುಳಿಯುತ್ತ ಮುನ್ನಡೆದರು.

ಈ ರೀತಿಯಾಗಿ ಮಾನವಕುಲವು ಸಾಮ್ಯ ಸಮತ್ವಗಳ ತತ್ವಪ್ರಣಾಲಿಯನ್ನನುಸರಿಸಿ, ಮೇಲರಿಮೆ, ಕೀಳರಿಮೆಗಳನ್ನು ಮರೆತು ಏಕಾಭಿಪ್ರಾಯದಿಂದ ಮುನ್ನುಗ್ಗುತ್ತಿದ್ದ ಈ ನಿಃಶಸ್ತ್ರ ವೀರರ ಪದಾಘಾತದಿಂದ ಎದ್ದ ಧೂಳುಧೂಸರವು ವಿಶ್ವವನ್ನೇ ವ್ಯಾಪಿಸಿತು. ಭೂಮಂಡಲವು ತಲ್ಲಣಗೊಂಡಿತು. ಅಷ್ಟದಿಗ್ಗಜಗಳು ತತ್ತರಿಸಿದವು.

ಮಾನವ ಸಾಗರದ ಈ ಪಥಚಲನವನ್ನು ಈಕ್ಷಿಸುತ್ತ, ಆ ತುದಿಯಿಂದ ಈ ತುದಿಯವರೆಗೆ ಸಂಚರಿಸುತ್ತಲೇ ದೇವಲೋಕದ ಎಲ್ಲೆಯ ಸಮೀಪಕ್ಕೆ ಬಂದುಮುಟ್ಟಿದೆ. ದೇವೇಂದ್ರನ ರಾಜಧಾನಿಯಾದ ಅಮರಾವತಿಯ ಉತ್ತುಂಗ ಸೌಧಗಳ ಗೋಪುರಗಳು ಕಾಣತೊಡಗಿದವು.

ದೇವರಾಜನ ನಗರಿಯಲ್ಲಿ ಏನೇನು ನಡೆದಿರಬಹುದೆಂಬುದನ್ನು ನೋಡುವದಕ್ಕಾಗಿ ಅಮರಾವತಿಯ ಮಹಾನಗರಿಯನ್ನು ಪ್ರವೇಶಿಸಿದೆ. ಎಲ್ಲಿಂದಲೋ ಇಂಪಾದ ಗಂಧರ್ವರ ಗಾಯನ, ಅಪ್ಸರೆಯರ ನರ್ತನದಿಂದ ಹೊರಡುತ್ತಿದ್ದ ನೂಪುರಗಳ ಮಂಜುಳ ನಿನಾದದಿಂದ ಕ್ಷಣ ಹೊತ್ತು ಮೈಮರೆತೆ. ಹೀಗೆ ಅನಿಮಿಷ ನೇತ್ರನಾಗಿ ಸ್ವರ್ಗಸುಖವನ್ನು ಅನುಭವಿಸುತ್ತ ನಿಂತಾಗ ಓಲಗದಲ್ಲಿ ವಿರಾಜಮಾನನಾಗಿದ್ದ ಶಚೀಪತಿಯ ದೃಷ್ಟಿ ನನ್ನತ್ತ ಹರಿಯಿತು. ಶಚೀಪತಿಯ ಪಾರ್ಷದನೊಬ್ಬ ನನ್ನೆಡೆ ಬಂದು ಓಲಗಕ್ಕೆ ಚಿತ್ತೈಸಬೇಕೆಂದು ಬಿನ್ನವಿಸಿ ನನ್ನನ್ನು ಕರೆದೊಯ್ದು ದೇವರಾಜನೆದುರು ನಿಲ್ಲಿಸಿದ.

"ಏನು ಸಂಚಾರಿ, ಹೇಗಿರುವೆ? ಏನನ್ನುತ್ತಿದೆ ಭೂಲೋಕ ?" ಎಂದು ಪ್ರಶ್ನಿಸಿದ.

"ಪ್ರಭೋ, ನಿನ್ನ ಕೃಪೆಯಿಂದ ಎಲ್ಲವೂ ಸರಿಯಾಗಿದೆ. ಆದರೆ——" ಎಂದು ತಡೆದು ನಿಂತೆ.

"ಏನು ? ಹೀಗೇಕೆ ತಡವರಿಸುವೆ ? ಏನಾಗಬೇಕು, ಹೇಳು" ಸಹಸ್ರಾಕ್ಷ ಕೇಳಿದ.

"ಸುರಪತಿ, ಮಾನವಕೋಟಿ ದೇವಲೋಕದ ಮೇಲೆ ದಾಳಿ ಮಾಡಲು ಹೊರಟಿದೆ. ಈಗ ಆ ಸೇನಾ ಸಾಗರವು ಅಮರಾವತಿಯ ಹೊರವಲಯವನ್ನು ಸಮೀಪಿಸಿದೆ. ಇಷ್ಟೊಂದು ಭೀಕರ ಗಂಡಾಂತರ ಬಂದಾಗಲೂ ನೀನು ಇನ್ನೂ ಗೀತ ನೃತ್ಯ, ಆಮೋದ ಪ್ರಮೋದಗಳಲ್ಲಿ ಮಗ್ನನಾಗಿರುವಿಯಲ್ಲ."

ದೇವರಾಜ ಗಹಗಹಿಸಿ ನಕ್ಕ "ನನ್ನ ಗುಪ್ತಚಾರರು ಈ ಮೊದಲೇ ಈ ವಾರ್ತೆಯನ್ನು ನನಗೆ ಮುಟ್ಟಿಸಿದ್ದಾರೆ. ಅದೇನು ಮಹಾವಿಷಯ? ಕ್ಷಣಾರ್ಧದಲ್ಲಿ ಈ ಮಾನವ ಕುನ್ನಿಗಳನ್ನು ಮಣ್ಣು ಮುಕ್ಕಿಸುವೆ. ಸುಮ್ಮನೆ ಮುನ್ನೋಡಿ ಹಿಂದೋಡಿ ಹೋಗಲು ಅವರಿಗೆ ಹೇಳು." — ಎಂದು ಸೂಚಿಸಿದ.

"ಪುರಂದರ, ನೀನು ಇನ್ನೂ ಪುರಾತನ ಕಾಲದ ಸ್ವಪ್ನ ಸೃಷ್ಟಿಯಲ್ಲಿ ವಿಹರಿಸುತ್ತಿರುವಿ. ಅಹಿಂಸಾವ್ರತ ಪ್ರಭಾವದಿಂದ ಅಖಂಡ ಭೂಮಂಡಲವನ್ನೇ ಅವರು ಗೆದ್ದಿದ್ದಾರೆ. ಅವರೊಡನೆ ನೀನು ಹಿಂಸಾತ್ಮಕ ಶಸ್ತ್ರಾಸ್ತ್ರಗಳೊಡನೆ ಹೋರಾಟಕ್ಕೆ ಅಣಿಯಾಗುವದು ಬೇಡ. ಅದರಿಂದ ನಿನಗೆ ಕಲ್ಯಾಣವಾಗದು" ಮತ್ತೆ ಬಿನ್ನವಿಸಿದೆ.

ದೇವರಾಜನು ಕೋಪೋದ್ರಿಕ್ತನಾಗಿ "ಇದೇನು ಹುಡುಗಾಟ? ದೇವಲೋಕದ ಮೇಲೆ ಏರಿ ಬರುತ್ತಿರುವ ಈ ಮಾನವ ಜಂತುಗಳೊಡನೆ ನಾನು ಹೋರಾಡುವದೇ ? ನನ್ನ ಈ ವಜ್ರಾಯುಧದ ಒಂದೇ ಒಂದು ಪ್ರಹಾರದಿಂದ ಇವರೆಲ್ಲರನ್ನು ನಿರ್ನಾಮ ಮಾಡಬಲ್ಲೆ" ಎಂದು ಅಬ್ಬರಿಸಿದ.

"ನಿಶ್ಶಸ್ತ್ರರ ಮೇಲೆ ಶಸ್ತ್ರ ಪ್ರಹಾರ ಮಾಡುವದು ಎಲ್ಲಿಯ ನ್ಯಾಯ ?" ನಾನು ಆಕ್ಷೇಪಿಸಿದೆ.

"ಶತ್ರುವೆಂದ ಮೇಲೆ ಅವನನ್ನು ಪ್ರತಿರೋಧಿಸದಿದ್ದರೆ ನಾನೆಂಥ ಸುರಪತಿ ? ಇದಿಗೋ, ಈ ನನ್ನ ಪ್ರಹಾರ ವೈಖರಿಯನ್ನಾದರೂ ನೋಡು" ಎಂದು ತನ್ನ ವಜ್ರಾಯುಧವನ್ನು ಹೊರತೆಗೆದು ಪ್ರಹಾರಕ್ಕೆ ಸಿದ್ಧನಾದ

"ಶಚೀಪತಿ, ಬೇಡ ಬೇಡ ವಜ್ರಾಯುಧವನ್ನು ಪ್ರಯೋಗಿಸಬೇಡ. ಅದರದೇನೂ ಉಪಯೋಗವಾಗಲಾರದು. ನೀನು ಅದನ್ನೇ ಕಳೆದುಕೊಳ್ಳುವಿ" ಎಂದು ಅಲ್ಲೊರೆದೆ.

ಅಷ್ಟರಲ್ಲಿ ಅಮರಾವತಿಯ ಮಹಾದ್ವಾರವನ್ನು ಪ್ರವೇಶಿಸುತ್ತಿದ್ದ ಮಾನವಕೋಟಿಯನ್ನು ನೋಡಿ ಕ್ರೋಧ ಸಂತಪ್ತನಾದ ದೇವೇಂದ್ರನು ವಜ್ರಾಯುಧವನ್ನು ಪ್ರಹರಿಸಿಯೇ ಬಿಟ್ಟ. ಕೋಟಿ ಕೋಟಿ ಕೋಲ್ಮಿಂಚುಗಳಷ್ಟು ತೇಜಃ ಪುಂಜವಾದ ವಜ್ರಾಯುಧವು ಕೋಟಿ ಕೋಟಿ ಸಿಡಿಲುಗಳಂತೆ ಸಪ್ಪಳಮಾಡುತ್ತ ಹೊರಬಿದ್ದುದೇ ತಡ, ಕವಿ ಸಮೂಹದಿಂದ ಏಕಕಾಲಕ್ಕೆ ಇಂದ್ರವಜ್ರಾ, ಉಪೇಂದ್ರ ವಜ್ರಾ ವೃತ್ತ, ದೇವತೆಗಳ ಶ್ರುತ್ಯಸ್ತ್ರಗಳು ಹೊರಬಿದ್ದು ಚತುರ್ದಶಭುವನಗಳನ್ನೇ ತಲ್ಲಣಗೊಳಿಸುತ್ತ ಇಂದ್ರನ ವಜ್ರಾಯುಧವನ್ನು ಸುತ್ತಿಕೊಂಡವು. ವೃತ್ರಾಸುರನಂಥ ಅಜೇಯ ವೀರನನ್ನು ಕೂಡ ಮರ್ದಿಸಿದ ಈ ಮಹಾಸ್ತ್ರವು ತಮ್ಮ ಅಧಿದೇವತೆಗಳಾದ ಇಂದ್ರವಜ್ರಾ ಉಪೇಂದ್ರ ವಜ್ರಾಗಳಿಗೆ ತನ್ನ ಗೌರವ ತೋರುವದಕ್ಕಾಗಿ ತನ್ನ ಕಾಠಿಣ್ಯವನ್ನು ಬಿಟ್ಟುಕೊಟ್ಟು ಶಾವಿಗೆಯ ಎಳೆಯಂತೆ ನಯವಾಗಿ ಮೃದುವಾಗಿ ವೃತ್ತದೇವತೆಗಳನ್ನು ಅಪ್ಪಿಕೊಂಡಿತು.

ಜೀವಂತ ಅಪ್ಸರೆಯರು



ಇಳೆಯ ಮೇಲೆ ನಿತ್ಯ ನಿತ್ಯ
ಹೊಳೆಯುವ ಅಪ್ಸರೆಯರು
ನಮ್ಮ ಕೈತೋಟದಲ್ಲಿನ-
ಪುಟಾಣಿ ಗುಲಾಬಿ ಹೂಗಳು!

ದೊಡ್ಡ ರಂಗೇಗೌಡ

ತನ್ನ ಅಜೇಯವಾದ ಮಹಾಸ್ತ್ರದ ಗತಿಯನ್ನು ಕಂಡು ಭ್ರಾಂತನಾಗಿ ದೇವೇಂದ್ರ ನನ್ನತ್ತ ನೋಡಿದ.

"ಸುರೇಂದ್ರ, ಮುನ್ನೆಚ್ಚರಿಕೆ ಕೊಟ್ಟರೂ ಕೇಳಲಿಲ್ಲ. ಈಗೇನು ಮಾಡುವೆ?" ಎಂದೆ.

"ಮಾನವರಲ್ಲಿ ಇಷ್ಟೊಂದು ಅದಮ್ಯ ಶಕ್ತಿ ಇದ್ದೀತೆಂದು ನಾನು ಎಣಿಸಿರಲಿಲ್ಲ. ಈಗ ನಾನೇನು ಮಾಡಲಿ?" ಎಂದು ಮ್ಲಾನವದನನಾಗಿ ನನ್ನನ್ನೇ ಕೇಳಿದ.

"ದೇವರಾಜ, ಈಗ ನಿನಗುಳಿದಿರುವದು ಒಂದೇ ಒಂದು ದಾರಿ. ಎರಡು ಕಲ್ಪಗಳ ಪರ್ಯಂತ ಇಂದ್ರ ಪದವಿಯನ್ನು ಉಪಭೋಗಿಸು ಎಂದು ಶ್ರೀಮನ್ನಾರಾಯಣನೇ ನಿನಗೆ ವರ ಕೊಟ್ಟಿದ್ದಾನೆ. ಈಗ ಮಧ್ಯದಲ್ಲಿಯೇ ಅದಕ್ಕೆ ಚ್ಯುತಿ ಒಂದಿರುವದರಿಂದ ನೀನು ಈಗ ಅವನನ್ನೇ ಪ್ರಾರ್ಥಿಸು" ಎಂದು ಸಲಹೆ ಕೊಟ್ಟೆ.

ಸುರರಾಜನಿಗೆ ಅದೇ ಸೂಕ್ತವೆನಿಸಿ ಪುಷ್ಪಕ ವಿಮಾನವನ್ನು ಹೊರತೆಗೆದು ಇಬ್ಬರೂ ಕೂಡಿ ಮನೋವೇಗದಿಂದ ವೈಕುಂಠಕ್ಕೆ ಪ್ರಯಾಣ ಬೆಳೆಸಿದೆವು. ಅವಸರವಾಗಿ ದೇವೇಂದ್ರನು ಶ್ರೀಮನ್ನಾರಾಯಣನ ಸ್ತೋತ್ರ ಮಾಡ ತೊಡಗಿದನು.

ಶ್ರೀ ಲಕ್ಷ್ಮೀ ದೇವಿಯೊಡನೆ ಹಾಸ ಪರಿಹಾಸದಲ್ಲಿ ಮಗ್ನನಾಗಿದ್ದ ಲಕ್ಷ್ಮೀಪತಿಯು ಶಚೀಪತಿಯ ಸ್ತೋತ್ರದಿಂದ ಸಂತೃಪ್ತನಾಗಿ ಅಂತಃಪುರದಿಂದ ಹೊರಬಂದ. ಇಬ್ಬರೂ ಭಕ್ತಿ ಪೂರ್ವಕವಾಗಿ ಶ್ರೀಮನ್ನಾರಾಯಣನನ್ನು ಅಭಿವಂದಿಸಿದೆವು. ಲಕ್ಷ್ಮೀಕಾಂತನು ಶಚಿಪತಿಯನ್ನು ಕುರಿತು "ಏನು ದೇವರಾಜ, ಇಷ್ಟೇಕೆ ಗಾಬರಿಯಾಗಿರುವೆ? ನಿನ್ನ ಮುಖಮಂಡಲ ನೋಡಿದರೆ ನೀನು ಯಾವುದೋ ಭೀಕರ ಸಂಕಟದಲ್ಲಿ ಬಿದ್ದಂತೆ ತೋರುವುದು. ಏನು ಸಮಾಚಾರ?" ಎಂದು ಕೇಳಿದ.

ಭೂಲೋಕದ ಮಾನವ ಸೇನೆ ದೇವ ಲೋಕದ ಮೇಲೆ ದಾಳಿ ನಡೆಸಿದುದನ್ನು ದೇವೇಂದ್ರ ಮ್ಲಾನವದನನಾಗಿ ನಿವೇದಿಸಿದಾಗ "ಅದಕ್ಕೇಕೆ ಚಿಂತಿಸುವೆ? ವಜ್ರಾಯುಧ ಪ್ರಹಾರ ಮಾಡಿಬಿಡು" ಎಂದು ಲಕ್ಷ್ಮಿ ಪತಿ ಸೂಚಿಸಿದ.

ಉಪೇಂದ್ರ, ಅದನ್ನು ಮಾಡಿ ಆಯಿತು. ಆದರೆ ಅದರಿಂದ ಯಾವ ಪ್ರಯೋಜನ ಆಗಲಿಲ್ಲ. ನನ್ನ ವಜ್ರಾಯುಧ ನಿರ್ಬಲವಾಯ್ತು. ನೀನೇ ಈಗ ನನಗೆ ಗತಿ. ನೀನೇ ನನಗೆ ಎರಡು ಕಲ್ಪ ಪರ್ಯಂತ ಇಂದ್ರಪದ ಕೊಟ್ಟಿರುವಿ. ಅದನ್ನು ಉಳಿಸಿಕೊಡುವ ಭಾರ ನಿನ್ನದು ಎಂದು ಕೈಕೈ ಹೊಸೆಯುತ್ತ ಪ್ರಾರ್ಥಿಸಿದ.

ಶ್ರೀಮನ್ನಾರಾಯಣನು ನನ್ನತ್ತ ತಿರುಗಿ "ಸಂಚಾರಿ, ಈ ಸಮಸ್ಯಾ ಪರಿಹಾರ ಹೇಗೆ ಆಗ ಬೇಕು ? ಅಸಿಧಾರಾ ವ್ರತ ಪಾಲಕನಾದ ಮಹಾತ್ಮನ ಆಶೀರ್ವಾದವು ಈ ಮಾನವ ಕುಲಕ್ಕೆ ಇರುವದರಿಂದ ನಿಶ್ಶಸ್ತ್ರರಾಗಿದ್ದರೂ ಅವರು ಅಜೇಯ್ಯರು. ಈಗೇನು ಮಾಡುವದು ? ಎಂದು ಪ್ರಶ್ನಿಸಿದ.

"ಭಕ್ತ ವತ್ಸಲಾ, ಆಪದ್ಬಂಧೋ, ಸರ್ವಜ್ಞನೂ, ಸರ್ವಾಂತರ್ಯಾಮಿಯೂ ಸರ್ವಪರಿಪೂರ್ಣನೂ ನೀನು. ಈ ರೀತಿ ಅನಭಿಜ್ಞತೆಯ ಸೋಗು ಹಾಕುವದು ಇಂಥ ದುರ್ಧರ ಪ್ರಸಂಗದಲ್ಲಿ ಉಚಿತವಲ್ಲ. ದೇವೇಂದ್ರನಿಗೆ ನೀನಿತ್ತ ಆಶ್ವಾಸನೆಯನ್ನು ಸಫಲಗೊಳಿಸುವದಕ್ಕಾಗಿ ನೀನು ಈಗ ಉಗ್ರ ಕ್ರಮ ಕೈಕೊಳ್ಳಲೇ ಬೇಕು. ಅನುಮಾನಿಸಲೇಬಾರದು" ಎಂದು ಕೈಮುಗಿದು ಪ್ರಾರ್ಥಿಸಿದೆ.

"ಸಂಚಾರಿ, ಹಾಗಿದ್ದರೆ ನಾನು ನನ್ನ ಸುದರ್ಶನ ಚಕ್ರದಲ್ಲಿ ನನ್ನ ಸಕಲ ಬಲವನ್ನು ಪ್ರತಿಷ್ಠಾಪಿಸಿ ಪ್ರಯೋಗಿಸುವೆ" ಎಂದು ತನ್ನ ಕೈಯಲ್ಲಿಯ ಚಕ್ರಕ್ಕೆ ಚಾಲನೆಕೊಟ್ಟ.

"ದೇವಾಧಿದೇವಾ, ಇದನ್ನೇನು ಮಾಡಿದೆ ? ನಿಶ್ಶಸ್ತ್ರರ ಮೇಲೆ ಚಕ್ರ ಪ್ರಹಾರ ನ್ಯಾಯವೇ ? ನಾನಂದೆ.

"ಹಾಗಿದ್ದರೆ ಆ ಮಾನವರಿಗೆ ಭೂಲೋಕಕ್ಕೆ ಮರಳಿ ಹೋಗಲು ಹೇಳು. ಇಲ್ಲದಿದ್ದರೆ ಈ ಚಕ್ರ ಪ್ರಹಾರವನ್ನು ಅವರು ಎದುರಿಸಬೇಕಾಗುವದು"—ಶ್ರೀವಿಷ್ಣು.

"ದೇವಾ, ನನಗೆ ಆ ಮಾನವಕೋಟಿಯ ಚಿಂತೆ ಇಲ್ಲ. ಆದರೆ ನೀನು ಚಕ್ರ ಪ್ರಹಾರ ಮಾಡಿದರೆ ಆ ಚಕ್ರವನ್ನು ಮಾತ್ರ ನೀನು ಕಳೆದುಕೊಳ್ಳುವಿ" ಎಂದೆ.


ಅಷ್ಟರಲ್ಲಿ ವೈಕುಂಠದ ಮಹಾದ್ವಾರವನ್ನು ಪ್ರವೇಶಿಸುತ್ತಿದ್ದ ಮಾನವರ ಮೇಲೆ ಶ್ರೀಮನ್ನಾರಾಯಣನು ಚಕ್ರ ಪ್ರಹಾರ ಮಾಡಿಯೇ ಬಿಟ್ಟ.

ಚಕ್ರವು ಸಹಸ್ರಕೋಟಿ ರವಿಪ್ರಭೆ ಬೀರುತ್ತ, ಪ್ರಚಂಡವಾದ ಜ್ವಾಲೆಯನ್ನುಗುಳುತ್ತ ಮಾನವ ಸೇನೆಯನ್ನು ಎರಗಬೇಕೆನ್ನುವಷ್ಟರಲ್ಲಿ ಕವಿ ಸಾರ್ವಭೌಮನು ತನ್ನ ಕವಿಗಣದೊಂದಿಗೆ ದಂಡಕ, ತೋಟಕ ಮೊದಲಾದ ವೃತ್ತ ದೇವತೆಗಳನ್ನು ಆವಾಹನೆ ಮಾಡಿ ಕವಿಗಣದೊಡನೆ ಆಕ್ರಂದನಕ್ಕಾರಂಭಿಸಿದ. ಚಕ್ರವು ದಂಡಕದ ಪಂಚ ಮಾತ್ರೆಗಳಲ್ಲಿಯ ಒಂದಕ್ಕೆ ಸಿಲುಕಿಕೊಂಡು ಹಿಂದಕ್ಕೂ ಮುಂದಕ್ಕೂ ಸರಿಯಲಾರದೆ ಅಲ್ಲಿಯೇ ಸುಂಯ್‌ಗುಡುತ್ತ ತಿರುಗಿ ತಿರುಗಿ ಕೊನೆಗೆ ನಿಶ್ಚಲವಾಗಿ ನಿಂತು ಬಿಟ್ಟಿತು.

ತನ್ನ ಚಕ್ರದ ಗತಿ ಹೀಗಾದುದನ್ನು ಕಂಡು ಭಗವಂತನು ತನ್ನ ಚಕ್ರ ಹೋಯಿತೋ ಎಂದು ಎಡಗೈಯಲ್ಲಿದ್ದ ಪಾಂಚಜನ್ಯ ಶಂಖವನ್ನು ಊದಲಾರಂಭಿಸಿದ.

"ದೇವಾ, ನಾನು ಮೊದಲೇ ಹೇಳಿದ್ದೆ" ನಾನೆಂದೆ.

ಬಿರುದು



ಬರೆದದ್ದೆಲ್ಲ
ವಾಪಾಸ್ ಬಂದ್ರೂ
ಮತ್ತೂ ಮತ್ತೂ ಬರೆದ
ಕೊನೆಗೂ ಸಿಕ್ತು
ವಿಶೇಷ ಬಿರುದು
'ಸಾಹಿತ್ಯ ವಿಷಾದ ?

—ಎಚ್. ಡುಂಡಿರಾಜ್

"ಸಂಚಾರಿ, ಇದೆಲ್ಲ ನಿನ್ನ ಕಾರಸ್ಥಾನ. ಈಗ ನನ್ನ ಚಕ್ರ ಹೋಯಿತು. ಇನ್ನು ನಾನು ಲಕ್ಷ್ಮಿಗೆ ಹೇಗೆ ಮುಖ ತೋರಿಸಲಿ ? ಹೇಗಾದರೂ ಮಾಡು ನನ್ನ ಚಕ್ರ ನನಗೆ ತಿರುಗಿಸುವಂತೆ ಮಾಡು" ಎಂದು ಪರಮಾತ್ಮ ನನಗೆ ದುಂಬಾಲು ಬಿದ್ದ.

"ಹಾಗೇ ನನ್ನ ವಜ್ರಾಯುಧವನ್ನು ನನಗೆ ಕೊಡಿಸಪ್ಪಾ" ಎಂದು ದೇವೇಂದ್ರ ಅಂಗಲಾಚಿದ. "ದೇವಾ, ಇದು ನನ್ನಿಂದ ಹೇಗೆ ಆದೀತು" ? ಎಂದೆ.

"ಸಂಚಾರಿ, ನೀನು ಮಹಾ ಕಾರಸ್ಥಾನಿ, ಹೇಗಾದರೂ ಮಾಡಿ, ಆ ಜನರ ತಲೆಯ ಮೇಲಿರುವ ಆ ಟೊಪ್ಪಿಗೆಯನ್ನು ತೆಗೆದು ಬಿಡು. ಆ ಗಾಂಧಿ ಟೊಪ್ಪಿಗೆಯ ಪ್ರಭಾವದಿಂದಲೇ ಅವರು ಇಷ್ಟು ಪ್ರಬಲರಾಗಿದ್ದಾರೆ. ಆ ಟೊಪ್ಪಿಗೆಯ ಆಶ್ರಯ ತಪ್ಪಿತೆಂದರೆ ಅವರು ಸತಂಪಾತಾಳಕ್ಕೆ ಬೀಳುತ್ತಾರೆ." ಎಂದು ಭಗವಂತನು ಈ ಮಹಾ ಶಕ್ತಿಯ ಮೂಲವನ್ನು ನನಗೆ ತಿಳಿಸಿದ.

"ಆಗಲಿ ಪ್ರಯತ್ನ ಮಾಡುವೆ" ಎಂದು ಹೇಳಿ ಅಲ್ಲಿಂದ ಹೊರಟು ಕಾಂ. ಕ. ಅಧ್ಯಕ್ಷರ ಕಡೆಗೆ ಬಂದೆ. ಅಧ್ಯಕ್ಷರು ಮೀಸೆ ಹುರಿ ಮಾಡುತ್ತ ಕಿನ್ನರ ಬೀಡಿ ಹಚ್ಚಿ ಹೊಗೆ ಉಗುಳುತ್ತ ನಿಂತಿದ್ದರು.

"ಅಧ್ಯಕ್ಷರೆ, ಧನ್ಯವಾದ, ಅಂತೂ ಕೆಲಸ ಆಯಿತು. ಇನ್ನು ನಮ್ಮ ಕೈ ಹಿಡಿಯುವರಾರು ? ಆದರೆ ಒಂದು ಮಾತು. ಮುಂಜಾನೆ ಒಂದು ಕಪ್ಪು ಚಹಾ ಕುಡಿದಿದ್ದೆ. ಈಗ ಹೊಟ್ಟೆಯಲ್ಲಿ ಡೊಂಬರಾಟ ನಡೆದಿದೆ. ಏನು ಮಾಡುವದು ?" ಎಂದೆ.

"ನಮಗೂ ಅದೇ ಚಿಂತೆ ? ನಮ್ಮ ಭೂಲೋಕವೇ ನೆಟ್ಟಗೆ. ಅಲ್ಲಿ ಹೆಜ್ಜೆಗೊಂದು ಹೋಟೆಲ್ ಇದೆ. ಇದೆಂಥ ದರಿದ್ರ ಲೋಕ ? ಉಡುಪಿ ಅವರು ಇಲ್ಲಿಕೆ ಹೋಟೆಲ್ ತೆಗೆದಿಲ್ಲ. ? ನೋಡ್ರಿ, ನೀವೇ ಏನಾದರೂ ವ್ಯವಸ್ಥಾ ಮಾಡಿರಿ" ಎಂದು ಅಧ್ಯಕ್ಷರು ಅಪ್ಪಣೆ ಕೊಡಿಸಿದರು. ಕವಿಗಣವೂ ಸಾಹಿತಿ ವೃಂದವೂ ಅದನ್ನೇ ಹೇಳಿದವು.


ನಾನು ಕೆಲ ಕ್ಷಣ ಯೋಚಿಸಿದೆ.

"ಅಂದ ಹಾಗೆ ನಾವು ದೇವಲೋಕಕ್ಕೆ ಹೊರಟಾಗ ಮಾರ್ಗದಲ್ಲಿ ಒಂದು ಉತ್ಕೃಷ್ಟ ಪಂಚತಾರಾ ಹೋಟೆಲ್ ನೋಡಿದೆ. ಬಹುಶಃ ಅಲ್ಲಿ ಇಡ್ಲಿ, ದೋಸೆ, ಉಪಮಾ, ಶಿರಾ, ಪುರಿ ಸಾರು ಎಲ್ಲವೂ ಸಿಗಬಹುದು. ಅಲ್ಲಿಗೆ ಹೋಗುವಾ" ಎಂದು ಸೂಚಿಸಿ ನಾನು ಮುನ್ನಡೆದೆ. ಮಾನವಕೋಟಿ, ಕವಿಗಣ, ಸಾಹಿತಿವೃಂದ, ಸ್ವಯಂಸೇವಕರು ಎಲ್ಲರೂ ನಾ ಮುಂದು ನೀ ಮುಂದು ಎಂದು ಮುಂದಿದ್ದವರನ್ನು ಹಿಂದೆ ಸರಿಸುತ್ತ ಮುನ್ನುಗ್ಗಿದರು. ಅವರೆಲ್ಲರನ್ನು ನಾನು ತ್ರಿಶಂಕು ಸ್ವರ್ಗದತ್ತ ಸಾಗಿಸಿಕೊಂಡು ಹೋದೆ. ಅವರೆಲ್ಲ ಹಾಗೇ ತ್ರಿಶಂಕುಸ್ವರ್ಗವನ್ನು ಪ್ರವೇಶಿಸಿದ್ದೇ ತಡ, ಅವರೆಲ್ಲರ ಕಾಲು ಮೇಲಾಗಿ ತಲೆ ಕೆಳಗಾದವು. ತಲೆಯ ಮೇಲಿನ ಗಾಂಧಿ ಟೊಪ್ಪಿಗೆಗಳು ಹಸಿದ ಪಾರಿವಾಳಗಳಂತೆ ಹಾರುತ್ತ ಕೆಳಗೆ ಬೀಳತೊಡಗಿದವು. ತಲೆಯ ಮೇಲಿನ ಟೊಪ್ಪಿಗೆಗಳು ಕೆಳಗೆ ಬಿದ್ದಿದ್ದೇ ತಡ ಆ ಮಾನವಕೋಟಿಯ ಪುಣ್ಯ ಕ್ಷಯವಾಗಿ ಮಾನವರೆಲ್ಲರೂ ಭೂಲೋಕದ ಆಚೆಗಿರುವ ಪಾತಾಳಲೋಕದಲ್ಲಿ ಪಟಪಟ ಬಿದ್ದು ಹೋದರು. ಕವಿಗಣದ ಸಾಹಿತಿಗಳ ಸ್ಫೂರ್ತಿ ಲೋಪ ಹೊಂದಿತು.

ವಜ್ರಾಯುಧವನ್ನೂ ಸುದರ್ಶನ ಚಕ್ರವನ್ನೂ ಬಿಡಿಸಿಕೊಂಡು ದೇವೇಂದ್ರನಿಗೂ, ಶ್ರೀಮನ್ನಾರಾಯಣನಿಗೂ ಅರ್ಪಿಸಿದೆ.

✿

ಅವರಿಬ್ಬರೂ ನನಗೆ ಥ್ಯಾಂಕ್ಸ ಹೇಳಿ ಬೀಳ್ಕೊಟ್ಟರು. ನಾನು ಕಣ್ತೆರೆದು ನೋಡಿದಾಗ ನನ್ನ ಧರ್ಮಪತ್ನಿ ಚಹಾದ ಕಪ್ಪು ಹಿಡಿದುಕೊಂಡು ನನ್ನನ್ನು ಅಲುಗಾಡಿಸಿ ಎಬ್ಬಿಸುತ್ತಿದ್ದಳು. ●



ಸ್ವರ್ಗಕ್ಕೆ

ಇಲ್ಲ, ನನಗೆ ಖಂಡಿತ ಇಲ್ಲ
ಆ ಸ್ವರ್ಗ ಲೋಕದ ಬಯಕೆ
ನಿಜ ಹೇಳಬೇಕೆಂದರೆ
ಕಿಚ್ಚು ಹಚ್ಚಲೇ ಬೇಕು
ಆ ಸ್ವರ್ಗಕ್ಕೆ

ಅಲ್ಲಿ, ನಮ್ಮ ಪುರಾಣಗಳ ಪ್ರಕಾರ
ಹಸಿವಾಗುವುದೇ ಇಲ್ಲ,
ಬಾಯಾರಿಕೆಯೂ ಇಲ್ಲ;
ಇಂಥ ಹಸಿವಿರದ ತೃಷೆಯಿರದ
ಬದುಕು ಬದುಕೇ ಅಲ್ಲ.

ಮೇಲಿನ ಆ ಸ್ವರ್ಗದಲ್ಲಿ
ದೇವತೆಗಳು ಕಣ್ಣು ಮಿಟುಕುವದಿಲ್ಲ.
ಬಿಟ್ಟ ಕಣ್ಣು ಬಿಟ್ಟಂತೆಯೇ ಇರುವ
ಯಾರನ್ನಾದರೂ ನೋಡುವುದು
ನಿಜವಾಗಿಯೂ ಸಂತೋಷವಲ್ಲ.

ಹೊಟ್ಟೆ ತುಂಬಿದವರ ಆ ಸ್ವರ್ಗದಲ್ಲಿ
ಹೊಟ್ಟೆ ಕಿಚ್ಚಿಗು ಕೂಡ ಬರಗಾಲವಿಲ್ಲ.
ಪುರಾಣಗಳ ಪ್ರಕಾರ, ಸದಾ ಅಭದ್ರ
ಸಿಂಹಾಸನದ ಪಟ್ಟಭದ್ರ, ಆ ಜೋಬದ್ರ
ದೇವೇಂದ್ರನಾಡಿದಾಟಕ್ಕೆ ಲೆಕ್ಕವೇ ಇಲ್ಲ.
ನಿತ್ಯ ಸೌಭಾಗ್ಯವತಿಯರಾದ–
ಪ್ಸರೆಯರನ್ನು ಅವನು ಬಳಸಿದ ರೀತಿ
ಗೌರವಾಸ್ಪದವಲ್ಲ.

ನಿಂತಲ್ಲೆ ನಿಂತು ಪಾಚಿಗಟ್ಟುತ್ತಿರುವ ನೀರಲ್ಲಿ
ಈಜಬಹುದೇ ಹೇಳಿ, ಯಾರಾದರೂ?
ಬೇಸಗೆಗೆ ಬತ್ತುವ, ಮಳೆಗಾಲಕ್ಕೆ ಏರುವ,
ಬೆಟ್ಟ ಕಡಲಿನ ನಡುವೆ ಹರಿಯುವ ಹೊಳೆಯ
ಸೋಪಾನಪಟ್ಟಿಗಳೆ ಸಾಕು ನಮಗಾದರೂ.

ಜಿ. ಎಸ್. ಶಿವರುದ್ರಪ್ಪ

"ದೊಡ್ಡ ಪೀಠಗಳ ಮೇಲೆ ಸಣ್ಣ ಜನ
ಇಲಿ ಹೆಗ್ಗಣಗಳಾಗಿ ಹರಿದಾಡಿದ್ದ ಕಂಡೆ"


('ದುಃಸ್ವಪ್ನ' ಜಿ. ಎಸ್. ಶಿವರುದ್ರಪ್ಪ)

ವ್ಯಭಿಚಾರ

ಡಾ. ಬೆಸಗರಹಳ್ಳಿ ರಾಮಣ್ಣ

೧

ಇದು 'ಕುಂಡ್ಯ' ಎಂಬ ದೇಶಕ್ಕೆ ಸಂಬಂಧಪಟ್ಟ ಕತೆ. ಸುಮಾರು ಐದು ಸಹಸ್ರ ವರ್ಷಗಳ ಲಿಖಿತ ಇತಿಹಾಸವುಳ್ಳ, ಇಡೀ ಪ್ರಪಂಚದಲ್ಲೆ ಅತ್ಯಂತ ಪ್ರಾಚೀನಸಂಸ್ಕೃತಿಗಳಲ್ಲೊಂದಾದದ್ದೆಂದು ಬೀಗುತ್ತ; ದೈವದ ದೃಷ್ಟಿಯಲ್ಲಿ ಎಲ್ಲ ಜೀವಿಗಳಿಗೂ ಈ ಪ್ರಪಂಚದಲ್ಲಿ ಬದುಕಲು ಸಮಾನ ಹಕ್ಕಿದೆ; ಆದರಲ್ಲೂ ಮಾನವ ಜನಾಂಗದಲ್ಲಿ ಮೇಲು ಕೀಳುಗಳಿಲ್ಲ; ಉತ್ತಮ, ಅಧಮರೆಂಬ ತಾರತಮ್ಯ ಸಲ್ಲ ಎಂದು ಘಂಟಾಘೋಷ ಮಾಡುತ್ತಲೆ; ಕಣ್ಣಿಗೆ ಎದ್ದುಕಾಣುವ ಹಾಗೆ; ಕಂಡವರು ನಾಚಿ ತಲೆ ತಗ್ಗಿಸುವ ಹಾಗೆ; ನಾಯಿಗಳಿಗೆ, ಬೆಕ್ಕುಗಳಿಗೆ ಮುತ್ತಿಟ್ಟು ಕಂಕುಳಲ್ಲಿಟ್ಟುಕೊಂಡು ಆನಂದಿಸುವ; ತನ್ನ ಸಹಪಾಠಿಗಳಾಗಿ ಬದುಕಲಿಚ್ಛಿಸುವ ಇತರ ಮಾನವರನ್ನು ಮುಟ್ಟಿದರೆ 'ಹೊಲೆ'ಯಾಗುತ್ತದೆಂದು ದೂರವಿಡುತ್ತ, ಪ್ರಪಂಚದಲ್ಲಿರುವ ಮಾನವಜೀವಿಗಳೆಲ್ಲ 'ಜಗತ್‌ಜೀವಿ'ಗಳಾಗಬೇಕೆಂಬ ಆಶೋತ್ತರ ನಮ್ಮದೆಂಬ ಜಗದೋದ್ಧಾರದ ಮಂತ್ರ ಬೊಗಳುತ್ತ; ಮುಗ್ಧ ಜನರ ಮನಸ್ಸನ್ನು ಮೋಸಗೊಳಿಸುತ್ತ, 'ಸಾವೇ ಜೀವನ'ವೆಂಬ ಭ್ರಮೆಯಲ್ಲಿ ಅದುಮಿ, ಕಣ್ಣಿಗೆ ಕತ್ತಲೆಯನ್ನೇ ಬೆಳಕೆಂದು ಉಣಬಡಿಸುವ ಚಾಣಾಕ್ಷರಿಂದ ತುಂಬಿ ತುಳುಕಾಡುವ ದೇಶದಲ್ಲಿ ನಡೆದ ಕತೆಗಳಲ್ಲೊಂದು......



> ಪ್ರಿಯ ಓದುಗ....
> ಇದೇನು ಈ ಕಥೆಗಾರ
> ಯಾವುದೋ ಅನಾಮಧೇಯ
> ದೇಶಕ್ಕೆ ಸಂಬಂಧ ಪಟ್ಟ
> ವಿಷಯಗಳನ್ನು
> ನಮಗೆ 'ಅಡುಗೂಲಜ್ಜಿ'
> ಮಕ್ಕಳಿಗೆ ಕಥೆ ಹೇಳುವಂತೆ
> ಹೇಳುತ್ತಿದ್ದಾನಲ್ಲ– ಎಂದು ಬೇಸರ
> ಪಟ್ಟುಕೊಳ್ಳಬೇಡ. ನೀನು
> ಅದೆಷ್ಟು ಕತೆಗಳನ್ನು ಓದಿಲ್ಲ,
> ಕೇಳಿಲ್ಲ, ಕಂಡಿಲ್ಲ!
> ನಿನ್ನ ಅನುಭವ ದ್ರವ್ಯದ
> ಮುಂದೆ ನನ್ನದೇನು?
> ಆದರೂ ಕೊಂಚ ಸಹನೆಯಿಂದ
> ಮುಂದೆ ಓದುವಂಥವನಾಗು.
> ಇದು ಹೆಣ್ಣಿನ ಬೆತ್ತಲೆಯ
> ನ್ನು ವರ್ಣಿಸುವ ಕಥೆಯಲ್ಲ.
> ಸಿನಿಮಾ ನಟಿಯ ಪ್ರಣಯ
> ಕಥೆಯಲ್ಲ.
> ಪತ್ತೆದಾರಿ ಕಥೆಯಲ್ಲ;
> ಮಾಯ–ಮಂತ್ರ–ಮಾಟಕ್ಕೆ
> ಸಂಬಂಧಪಟ್ಟ ಕಥೆಯಲ್ಲ!
> ಹೆಸರನ್ನು ಓದಿ ಮೋಸಹೋದೆನಲ್ಲ
> ಎಂದುಕೊಳ್ಳದೆ ಮುಂದೆ
> ಓದುವಂಥವನಾಗು....

ಇಷ್ಟೇ ಅಲ್ಲ ವಿದ್ಯೆ ಇಲ್ಲದವರು 'ಮಂಗ ಸಮಾನ'ವೆಂಬ ನುಡಿಯನ್ನು ಆಗಾಗ್ಗೆ ಹೇಳುತ್ತಲೇ ಜನಸಾಮಾನ್ಯರನ್ನು ಕೇವಲ ದೈಹಿಕ ಶ್ರಮಜೀವಿಗಳನ್ನಾಗಿ ಮಾಡಿ; ಅವರ ಬೆವರ ದುಡಿಮೆಯ ಸಂಪತ್ತನ್ನು ರಾಜ, ಮಹಾರಾಜರು, ಚಕ್ರವರ್ತಿಗಳು, ಇವರ ಹಿಂಬಾಲಕರು ಯಾವ ಅಡೆಯಿಲ್ಲದೆ ತಿಂದು ತೇಗಿ ಪಾಪ ಜೀವನವನ್ನು ನಡೆಸುತ್ತ, ನಡೆಸುತ್ತ; ತಮ್ಮ ತಮ್ಮಲ್ಲೇ ಕಚ್ಚಾಡುತ್ತ ಇಡೀ 'ಕುಂಡ್ಯ' ದೇಶವನ್ನು ಹೊರಗಿನಿಂದ ದಂಡೆತ್ತಿ ಬಂದವರು ಲೂಟಿ ಮಾಡಲು; ಲೂಟಿಮಾಡಲು ಸಾಕಷ್ಟು ಧನಕನಕಗಳಿಲ್ಲವೆಂದ ಮೇಲೆ, ಇಲ್ಲೇ ತಳಊರಿ ಇಡೀ ದೇಶವನ್ನೇ ತಮ್ಮ ಸಾರ್ವಭೌಮತ್ವದ ಅಂಕೆಗೆ ಒಳಪಡಿಸಿಕೊಂಡು ಒಂದೂವರೆ ಶತಮಾನಕ್ಕೂ ಮೀರಿ ಆಳಿದರು. ಕುಂಡ್ಯವನ್ನು ಗುಲಾಮಗಿರಿಯಿಂದ ಪಾರುಮಾಡಲು ಅಸಂಖ್ಯ ರಾಜಮಹಾರಾಜರು ಖಡ್ಗವಿಡಿದು, ತೂಪಾಕಿಗಳನ್ನು ತೊಟ್ಟು ತಮ್ಮ ಸೈನ್ಯ ಬಲದಿಂದ ಹೋರಾಟ ನಡೆಸಿದರೂ ಒಗ್ಗಟ್ಟಿಲ್ಲದ ಇವರ 'ಬೀಜ' ಬೇಯಲಿಲ್ಲ! ಯಾರು ಬಂದರೆ ನಮಗೇನು; ರಾಗಿ ಬೀಸೋದು ತಪ್ಪೋದಿಲ್ಲ ಎಂದು; ಅಸಂಖ್ಯ ಜನ ಸಾಮಾನ್ಯರು ದಿವ್ಯ ನಿರ್ಲಕ್ಷ್ಯದಿಂದಿದ್ದಾಗ ಒಬ್ಬ 'ಫಕೀರನ' ಉದಯವಾಯಿತು. ಈ ಫಕೀರ; 'ಹೊಡೆದವರಿಗೆ ಹಿಂದುರುಗಿ ಹೊಡೆಯಬೇಡ'- ಎಂದ. ನಿನ್ನನ್ನು ದ್ವೇಷಿಸುವವರಿಗೆ ಒಳ್ಳೆಯದಾಗಲಿ ಎಂದು ಪರಮಾತ್ಮನನ್ನು ಬೇಡು'– ಎಂದ. ಇವನ ಮಾತುಗಳಿಗೆ ಜನ ಅಗಾಧ ಬೆಲೆಕೊಟ್ಟರು. ನಡುವಿಗೊಂದು, ಮಂಡಿಯತನಕ, ಒಂದು ತುಂಡು ಪಂಚೆಯನುಟ್ಟು, ಒಂದು ದುಪ್ಪಟಿ ಹೊದ್ದುಕೊಂಡು, ಕೈಯಲ್ಲೊಂದು ದೊಣ್ಣೆ ಹಿಡಿದ; ತಲೆಯಲ್ಲೊಂದು ಜುಟ್ಟು ಪಡೆದಿದ್ದ ಈ ಅಲ್ಪಜೀವಿಯು ತಲೆಎತ್ತಿ ಆಕಾಶದಕಡೆ ನೋಡಿದರೆ ಇಡೀ ಕುಂಡ್ಯದ ಜನಸ್ತೋಮ ತಲೆಎತ್ತಿ ಅತ್ತಕಡೆ ನೋಡುವುದು; ಕಿರುಬೆರಳೆತ್ತಿದರೆ; ಅದೇ 'ಬ್ರಹ್ಮಾಸ್ತ್ರ'ವೆಂಬಂತೆ ಅದು ತೋರಿಸಿದ ದಿಕ್ಕನ್ನು ನಂಬಿದರು. ಗುಂಡಿಗೆ ಎದೆ ನೀಡಿದರು ಪ್ರತಿರೋಧವಿಲ್ಲದ ಬೆತ್ತಲೆಯ ಎದೆಗಳಿಗೆ ನಾಚುನಾಚುತ್ತಲೇ ಗುಂಡುಗಳು ಒಳಹೊಕ್ಕವು. ಬಂದೂಕದ 'ಕುದುರೆ' ಮೀಟುವ ಕೈಗಳು ಸೋತು ಸುಣ್ಣವಾಗಿ; ನಾಚಿ ನೀರಾಗಿ, ಫಕೀರನ 'ಅಹಿಂಸೆ'ಯ ಮುಂದೆ ಹತವಾಗಿ, ಸೋಲನಪ್ಪಿದುವು.

ಪ್ರಿಯ ಓದುಗ: ಇದೇನು ಈ ಕಥೆಗಾರ ಯಾವುದೋ ಅನಾಮಧೇಯ ದೇಶಕ್ಕೆ ಸಂಬಂಧಪಟ್ಟ ವಿಷಯಗಳನ್ನು ನಮಗೆ; 'ಅಡುಗೂಲಜ್ಜಿ' ಮಕ್ಕಳಿಗೆ ಕಥೆ ಹೇಳುವಂತೆ, ಹೇಳುತ್ತಿದ್ದಾನಲ್ಲ– ಎಂದು ಬೇಸರಪಟ್ಟುಕೊಳ್ಳಬೇಡ. ನೀನು ಅದೆಷ್ಟು ಕಥೆಗಳನ್ನು ಓದಿಲ್ಲ, ಕೇಳಿಲ್ಲ, ಕಂಡಿಲ್ಲ! ನಿನ್ನ ಅನುಭವ ದ್ರವ್ಯದ ಮುಂದೆ ನನ್ನದೇನು? ಆದರೂ ಕೊಂಚ ಸಹನೆಯಿಂದ ಮುಂದೆ ಓದುವಂಥವನಾಗು. ಇದು ಹೆಣ್ಣಿನ ಬೆತ್ತಲೆಯ ಮೈ ವರ್ಣಿಸುವ ಕಥೆಯಲ್ಲ, ಸಿನೇಮಾ ನಟಿಯ ಪ್ರಣಯ ಕಥೆಯಲ್ಲ, ಪತ್ತೇದಾರಿ ಕಥೆಯಲ್ಲ ಮಾಯ–ಮಂತ್ರ–ಮಾಟಕ್ಕೆ ಸಂಬಂಧಪಟ್ಟ ಕಥೆಯಲ್ಲ! ಹೆಸರನ್ನು ಓದಿ ಮೋಸಹೋದೆನಲ್ಲ ಎಂದುಕೊಳ್ಳದೆ ಮುಂದೆ ಓದುವಂಥವನಾಗು......

೨

ಫಕೀರಪ್ಪನ ಮಂತ್ರದಿಂದ ಕುಂಡ್ಯ ಸ್ವತಂತ್ರ ದೇಶವಾಗಿ ಅರ್ಧಶತಮಾನ ಕಳೆಯಿತು. ಅಧಿಕಾರದ ರುಚಿಕಂಡ ಪ್ರಜಾಪ್ರಭುತ್ವದ ಪ್ರಭುಗಳು ತಮ್ಮ ಆಳ್ವಿಕೆಗೆ ಧಕ್ಕೆಬರುತ್ತಿದೆ ಎಂಬ ಶಂಕೆ ಬಂದಾಗ ತುರ್ತು ಪರಿಸ್ಥಿತಿಯನ್ನು ಹೇರಿದರು. ಜನರ ವಾಕ್ ಸ್ವಾತಂತ್ರ್ಯವನ್ನು ಕಸಿದುಕೊಂಡರು. ಸರ್ಕಾರದ ವಿರುದ್ಧ ಧ್ವನಿ ಎತ್ತಿದವರನ್ನು ಜೈಲಿಗೆ ನೂಕಿದರು. ಹೊಟ್ಟೆಗೆ ಅನ್ನ ವಿಲ್ಲ ಎಂದವರನ್ನು ತಿರಸ್ಕಾರದಿಂದ ನೋಡಿ ನಗುತ್ತ ಬಂದೂಕುಗಳ ಹೊಳೆಯುವ ಚೂಪಾದ ಬೈನೆಟ್‌ಗಳನ್ನು ತೋರಿಸಿದರು. ಜನ ಬಂದೂಕುಗಳನ್ನು ಲೆಕ್ಕಿಸಲಿಲ್ಲ...ತುರ್ತು ಪರಿಸ್ಥಿತಿಯನ್ನು ಕಿತ್ತೊಗೆಯಲು ಎರಡನೆಯ ಸ್ವತಂತ್ರ ಸಂಗ್ರಾಮವನ್ನು ಸಾರಿದರು. ತುರ್ತುಪರಿಸ್ಥಿತಿ ಪುಡಿಪುಡಿಯಾಗಿ ಅಂತ್ಯಗೊಂಡಿತು....ನಂತರ ನಡೆದ ಒಂದು ಘಟನೆಯೇ ಈ ಕಥೆಯ ಮೂಲದ್ರವ್ಯ.

೩

ತುರ್ತುಪರಿಸ್ಥಿತಿ ಕಳೆದುಹೋಗಿ ಆರು ವರ್ಷಗಳು ಸಂದಿವೆ. ಪ್ರಜಾಪ್ರಭುತ್ವದ ತತ್ವಗಳ ಆಧಾರದ ಮೇಲೆ ಅಧಿಕಾರ ಹೊಂದಿದ ಕುಂಡ್ಯ ದೇಶದ ಸಂಸ್ಥಾನಗಳಲ್ಲೊಂದಾದ 'ಮಹಾದೇಶ'ವೆಂಬುದರ 'ಮುಖ್ಯಸ್ಥ' ಫಕೀರಪ್ಪನ ಹೆಸರಿನಲ್ಲಿ ಒಂದು ಸಂಸ್ಥೆಯನ್ನು ಸ್ಥಾಪಿಸಿ, ಕೈಗಾರಿಕೋದ್ಯಮಿಗಳಿಂದ, ಜಮೀನ್ದಾರರಿಂದ, ಅಧಿಕಾರಿಗಳಿಂದ ಹಣವನ್ನು ದಾನದ ರೂಪದಲ್ಲಿ ಪಡೆಯಲಾರಂಭಿಸಿದ. ಈ ಮುಖ್ಯಸ್ಥನ ಹೆಸರು 'ಹಂತಕೇಶ್ವರ' ಎಂದು. ಈ ಪುಣ್ಯಾತ್ಮನ ಈ ಮಹಾಕಾರ್ಯವನ್ನು ನಾಡಿನ ಎಲ್ಲ ಜನರೂ ಒಪ್ಪಲಿಲ್ಲ. ಫಕೀರಪ್ಪನ ಹೆಸರಿನಲ್ಲಿ ಹಣದ ಲೂಟಿ ನಡೆಯುತ್ತಿದೆ–ಎಂದರು. ಆದರೆ ಹಂತಕೇಶ್ವರ ಜಗ್ಗಲಿಲ್ಲ; "ಪ್ರಜಾಪ್ರಭುತ್ವದಲ್ಲಿ, ಅಧಿಕಾರವುಳ್ಳವರು ಜನಹಿತ ಕಾರ್ಯಗಳನ್ನು ಮಾಡಲು; ಉಳ್ಳವರಿಂದ ಧಾನ-ಧರ್ಮದ ರೂಪಗಳಲ್ಲಿ ಐಶ್ವರ್ಯ ಪಡೆಯುವುದು ಅನಿವಾರ್ಯ. ಹೀಗೆ ಪಡೆದ ಐಶ್ವರ್ಯವನ್ನು ಬಡಬಗ್ಗರ ಉದ್ಧಾರಕ್ಕಾಗಿ ವಿನಿಯೋಗಿಸುವುದು ಫಕೀರಪ್ಪನವರ ಮೂಲ ಧ್ಯೇಯವಾದ ಹಿಂಸಾರಹಿತ ಸಮಾಜವಾದದ ಅನುಷ್ಠಾನದಲ್ಲಿನ ಪ್ರಥಮ ಹೆಜ್ಜೆ. ನಾನು ಇದನ್ನು ಯಾವ ಭಯ ಭೀತಿಗಳಿಲ್ಲದೆ ಅನುಷ್ಠಾನಕ್ಕೆ ತರುತ್ತೇನೆ. ಹೀಗೆ ಸಂಗ್ರಹಿಸುವ ಹಣವನ್ನು 'ಲಂಚ' ಎಂದು ನನ್ನ ವಿರೋಧಿಗಳು ಕರೆಯುತ್ತಿದ್ದಾರೆ. ಇದು ಸರಿಯಲ್ಲವೆಂದೇ ವಿನಮ್ರವಾಗಿ ನಾನು ಹೇಳಬಯಸುತ್ತೇನೆ. ಇದನ್ನು ನನ್ನ ವಿರೋಧಪಕ್ಷದಲ್ಲಿರುವ ಗೆಳೆಯರು ಒಪ್ಪದಿದ್ದರೆ ನನಗೆ ಚಿಂತೆಯಿಲ್ಲ. 'ಲಂಚ ಪಡೆಯುತ್ತಿದ್ದೇನೆ ಎಂದು ಅವರು ಹೇಳಲಿ. ನಾನು

ಎಡಗೈಯಲ್ಲಿ 'ಲಂಚ' ಪಡೆದು ಬಲಗೈಯಲ್ಲಿ ದಾನ ಮಾಡಲು ಹಿಂಜರಿಯುವುದಿಲ್ಲ. ಎಲ್ಲಿಯವರೆಗೆ ನನ್ನ ಅಂತರಾತ್ಮ ಶುದ್ಧವಾಗಿದೆಯೋ ಅಲ್ಲಿಯವರೆಗೆ ಲಂಚ ತೆಗೆದುಕೊಳ್ಳುವ ನನ್ನ ಎಡಗೈಯಾಗಲೀ, ಇದನ್ನು ದಾನಮಾಡುವ ನನ್ನ ಬಲಗೈಯಾಗಲೀ; ಭಯ ಪಡಬೇಕಾದ್ದಿಲ್ಲ.... ಎಂದು ಘನ ಗಾಂಭೀರ್ಯದಿಂದ ಕೂಡಿದ ಹೇಳಿಕೆಯನ್ನು ನೀಡಿದ. ಇದನ್ನು ಇಡೀ ಲೋಕಕ್ಕೆ ರೇಡಿಯೋ, ಟಿವಿಗಳು, ಬಿತ್ತರಿಸಿದುವು. ಪತ್ರಿಕೆಗಳು ಅಚ್ಚು ಹಾಕಿದುವು.


೪

ಊರಿದ್ದ ಕಡೆ ಏನೇನು ಇರುವುದಿಲ್ಲ ! ನೀವೇ ಹೇಳಿ. ತುರ್ತುಪರಿಸ್ಥಿತಿಯ ವಿರುದ್ಧ ಹೋರಾಟ ಮಾಡಿ ಜೈಲು ಅನುಭವಿಸಿದ್ದ ಒಬ್ಬ ಲೇಖಕ; 'ಜನೇಶ್ವರ ವಾಣಿ' ಎಂಬ ಪತ್ರಿಕೆಯಲ್ಲಿ 'ಓದುಗರ ವಾಣಿ'ಯಲ್ಲಿ, "ಜೈಹಂತಕೇಶ್ವರ !" ಎಂಬ ಶಿರೋನಾಮೆ ಅಡಿಯಲ್ಲಿ ಹೀಗೆ ಬರೆದ: "ಮಹಾದೇಶದ ಮುಖಸ್ಥರಾದ ಶ್ರೀ ಹಂತಕೇಶ್ವರರು ಫಕೀರಪ್ಪನವರ ಹೆಸರಿನಲ್ಲಿ ನಾನು ಸ್ಥಾಪಿಸಿರುವ ಸಂಸ್ಥೆಗೆ ಹಣ ಸಂಗ್ರಹಿಸುವುದು ತಪ್ಪಲ್ಲವೆಂದೂ: ಅಕಸ್ಮಾತ್ ಇದನ್ನು ನನ್ನ ವಿರೋಧಿಗಳು 'ಲಂಚ' ಎನ್ನುವುದಾದರೆ ಇದಕ್ಕೆ ನನ್ನ ಅಭ್ಯಂತರವೇನೂ ಇಲ್ಲವೆಂದೂ...... ತಾವು ಎಡಗೈಯಿಂದ ಲಂಚ ಪಡೆದು ಬಲಗೈಯಲ್ಲಿ ದಾನಮಾಡಲು ಹಿಂಜರಿಯುವವನಲ್ಲವೆಂದೂ ಹೇಳಿಕೆ ನೀಡಿದ್ದಾರೆ. ಇದನ್ನು ಪತ್ರಿಕೆಗಳು ಅಚ್ಚುಹಾಕಿವೆ. ರೇಡಿಯೋ, ಟಿವಿಗಳು ಬಿತ್ತರಿಸಿವೆ. ಶ್ರೀ ಹಂತಕೇಶ್ವರರು ನಮ್ಮ ಕುಂಡ್ಯ ದೇಶದ ಅಮೂಲ್ಯ ಆಸ್ತಿ. ಹಣವುಳ್ಳವರಿಂದ ಲಂಚದ ರೂಪದಲ್ಲಿ ಹಣ ಪಡೆದು ಬಡ ಬಗ್ಗರ ಉದ್ಧಾರಕ್ಕಾಗಿ, ಈ ಮೂಲಕ ಸಮಾಜವಾದವನ್ನು ದೇಶದಲ್ಲಿ ಅನುಷ್ಠಾನಕ್ಕೆ ತರಲು ಹೊರಟಿದ್ದಾರೆ. ಫಕೀರಪ್ಪನವರ ರಕ್ತರಹಿತ ಕ್ರಾಂತಿಯ ಪರಿಕಲ್ಪನೆಯನ್ನು ಅನುಷ್ಠಾನಕ್ಕೆ ತರುವುದರಲ್ಲಿ ಇದು ಪ್ರಮುಖವಾದ ಹೆಜ್ಜೆ. ಇದನ್ನೇ ಕುಂಡ್ಯದ ಮಹಾನಾಯಕರುಗಳೆಲ್ಲ ಜಾರಿಗೆ ತಂದರೆ; 'ಲಂಚ' ನಿರ್ಮೂಲನೆಯೂ ಆಗುತ್ತದೆ. ಜೊತೆಗೆ ಸಮಾಜವಾದವೂ ಅನುಷ್ಠಾನಕ್ಕೆ ಬಂದಂತಾಗುತ್ತದೆ. ಇದಕ್ಕಾಗಿ ಇಡೀ ದೇಶದ ಜನತೆ, ಹಂತಕೇಶ್ವರರಿಗೆ ಕೃತಜ್ಞವಾಗಿರಬೇಕು. ಮತ್ತು ಹಂತಕೇಶ್ವರರಿಗೆ ಕೂಡಲೇ ಕುಂಡ್ಯದೇಶದ ಅತ್ಯುನ್ನತ ಗೌರವವಾದ 'ದೇಶರತ್ನ' ಬಿರುದನ್ನು ಮುಂದಿನ ಸ್ವಾತಂತ್ರ್ಯೋತ್ಸವದ ದಿನ ದಯಪಾಲಿಸಬೇಕೆಂದು ಈ ಮೂಲಕ ನಮ್ರತೆಯಿಂದ ಸೂಚಿಸಬಯಸುತ್ತೇನೆ. ಈ ಅತ್ಯುನ್ನತ ಬಿರುದನ್ನು ಇವರಲ್ಲದೆ ಇನ್ಯಾರೂ ಪಡೆಯಲು ಅರ್ಹರಲ್ಲ, ಜೈ ! ಹಂತಕೇಶ್ವರ !!

ಈ ಪತ್ರವನ್ನು ಅನೇಕ ಬೇರೆ ಬೇರೆ ಭಾಷೆಯ ಪತ್ರಿಕೆಗಳು ಅನುವಾದ ಮಾಡಿ ಪ್ರಕಟಿಸಿದುವು. ಓದಿದ ಕೆಲವರು 'ಸೈ' ಎಂದರು. ಕೆಲವರ ಮುಖಗಳು ಊದಿಕೊಂಡವು. ಕೆಲವರು ಹಲ್ಲು ಮಸೆದರು. ಹಂತಕೇಶ್ವರರು : "ನನ್ನನ್ನು ವ್ಯಂಗ್ಯವಾಡಿದ ಈ ಹುಳುವಿನ ಧೈರ್ಯ ಅದೆಷ್ಟಿರಬೇಕು" ಎಂದು ಬೆಂಬಲಿಗರೆದುರು ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡರು.

೫

ಯೋಗಾಯೋಗ ಬೇಗನೆ ಕೂಡಿ ಬಂತು. ಒಂದು ಪ್ರತಿಷ್ಠಿತ ರಾಜಕೀಯ ಕುಟುಂಬದ ಮದುವೆಗೆ ಲೇಖಕ ಮಹಾಶಯನನ್ನೂ ಆಮಂತ್ರಿಸಲಾಗಿತ್ತು. ಹೋದ ಇವನ ಗ್ರಹಚಾರಕ್ಕೆ, ಅಂದು ಹಂತಕೇಶ್ವರನ ಕಟ್ಟಾ ಬೆಂಬಲಿಗರಾದ ಶಾಸಕ ಸನ್ಮಾನ್ಯ ಉಗುರೇಶ್ವರರು ದಯಮಾಡಿಸಿದ್ದರು. ಸನ್ಮಾನ್ಯರು ಕೊಂಡನೂರು ಕ್ಷೇತ್ರವನ್ನು ನಾಲ್ಕನೇ ಬಾರಿ ಸತತವಾಗಿ ಪ್ರತಿನಿಧಿಸುತ್ತಿದ್ದರು. ಒಮ್ಮೆ ಅಧಿಕಾರದಲ್ಲಿರುವ ಪಕ್ಷದ ಶಾಸಕರಾದರೆ ಸಾಕು; ಎಲ್ಲವನ್ನೂ ತಮ್ಮದಾಗಿಸಿಕೊಳ್ಳುವ ಕಲೆಯನ್ನು ರೂಢಿಸಿಕೊಳ್ಳುವ, ಸಕಲ ಸಂಪನ್ನ ಗುಣಗಳನ್ನೂ ಮೈಗೂಡಿಸಿಕೊಳ್ಳುವ, ತಮ್ಮ ಎದುರಾಳಿಗಳ ಎದೆಯಲ್ಲಿ ನಡುಕವನ್ನುಂಟುಮಾಡುವ, ರಾಷ್ಟ್ರ ಕಣ್ಮಣಿಗಳಿರುವಾಗ, ಇನ್ನು ನಾಲ್ಕು ಬಾರಿ ಶಾಸಕನಾದ ಉಗುರೇಶ್ವರನ ಪ್ರತಾಪವನ್ನು ಅವನ ಕಟ್ಟಾ ಬೆಂಬಲಿಗರೂ ಒಮ್ಮೊಮ್ಮೆ ನಿಖರವಾಗಿ ವರ್ಣಿಸಲಾಗುತ್ತಿರಲಿಲ್ಲ. ತನ್ನ ಮತ್ತು ತನ್ನ ನಾಯಕನ ವಿರುದ್ಧ ಯಾರು ಸೊಲ್ಲೆತ್ತಿದರೂ, ಪ್ರಜಾಪ್ರಭುತ್ವದ ರಾಜಕೀಯ ವ್ಯವಸ್ಥೆಯಲ್ಲಿ ಸಂಪೂರ್ಣ ನಂಬಿಕೆಉಳ್ಳ ಉಗುರೇಶ್ವರರು ಸ್ವತಃ ಹಸಿದ ಹೆಬ್ಬುಲಿಯಾಗುತ್ತಿದ್ದರು. ಬಡಲೇಖಕ ಮಹಾಶಯ ಉಗುರೇಶ್ವರರ ಎದುರು ಬಂದೇಬಿಟ್ಟ. ಬಂದರೆ ಬರಲಿ; ಚಿಂತೆಯಿಲ್ಲ. ನಡುಬಗ್ಗಿ ಆಳುವ ದೊರೆಗೆ ವಂದಿಸಬಾರದೆ? ಹೂಂ, ಹೂಂ! ನಡುಬಗ್ಗಿಸಲಿಲ್ಲ, ಹಲ್ಲುಕಿರಿಯಲಿಲ್ಲ. ಬದಲು ಕಣ್ಣಲ್ಲಿ ಕಣ್ಣಿಟ್ಟು ನೋಡಿದ. ಅವನ ಕಣ್‌ದೃಷ್ಟಿ ಅದೆಷ್ಟು ಚೂಪಾಗಿತ್ತೆಂದರೆ ಹಂತಕೇಶ್ವರರ ಎದೆಯನ್ನು ಛಿದ್ರವಿಛಿದ್ರವಾಗಿ ಸೀಳುವಂತಿತ್ತು; ಉಗುರೇಶ್ವರರನ್ನು ಹಾಗೆಯೇ ಹೃದಯ ಭೇದಿಸಿ ಹಂತಕನ ಅರಮನೆಗೆ ಕಳುಹಿಸುವಂತಿತ್ತು. ನೂರಾರು ಕಣ್ಣುಗಳು ತಮ್ಮಿಬ್ಬರ ಕಡೆಯೇ ರೆಪ್ಪೆ ಆಡಿಸದೆ ನೋಡುತ್ತಿವೆ. ಎಲ್ಲರ ಕುತೂಹಲವೂ ತಮ್ಮಿಬ್ಬರ ಮೇಲೆಯೇ ಕೇಂದ್ರೀಕೃತವಾಗಿದೆ. ಉಗುರೇಶ್ವರರ ದಪ್ಪನೆಯ, ಉದ್ದನೆಯ ಗುಡಾಣ ಗಾತ್ರದ ಹೊಟ್ಟೆಉಳ್ಳ ದೇಹದಾದ್ಯಂತ ಕೋಪ ನಿಗಿ ನಿಗಿ ಉರಿಯಲಾರಂಭಿಸಿತು. ಮೀಸೆ ನವಿರಾಗಿ ಅಲ್ಲಾಡಲಾರಂಭಿಸಿತು. ಮೊದಲೇ ರಕ್ತ ಒತ್ತಡದಿಂದ ನರಳುತ್ತಿದ್ದ ದೇಹದಲ್ಲಿ ಇನ್ನಷ್ಟು ಕಾವು ಏರಿತು. ಮಗ್ಗುಲಲ್ಲಿದ್ದ ಭಕ್ತ ಶಿರೋಮಣಿ ಹೇಳಿದ: "ಇವನೇ. ಆ ನನ್ನ ಮಗ. ಜೈ ! ಹಂತಕೇಶ್ವರ ಅಂತ ಜನೇಶ್ವರ ವಾಣಿಯಲ್ಲಿ ಬರೆದಿರೋನು. ನನ್ನ ಮಗ ಹುಟ್ಟು ಕೇಡಿ. ತುರ್ತು ಪರಿಸ್ಥಿತೀಲಿ ಜೈಲೇಲಿದ್ದ...ಬಡ್ಡಿಮಗನ್ನ ಭೂಗತ, ಭೂಗತ ಮಾಡಬುಡಬೇಕು. ನೋಡಿ ಒಳ್ಳೇ ತಿನ್ನೋವಂಗೇ ನೋಡ್ತಾನೆ.



ಏನಾದ್ರೂ ಶಾಸಕರು ಬರುತ್ತಾವ್ರೆ ಅಂತ 'ಕೇರ್' ಮಾಡ್ತಾನ ?"

ಉಗುರೇಶ್ವರರು, ಕ್ಯಾಕರಿಸಿದಂತೆ ಮಾಡಿ, ಧೈರ್ಯ ತಂದುಕೊಂಡರು. ಉರಿವ ಕೆಂಡಗಣ್ಣುಗಳಿಂದ ನೋಡಿ ನುಡಿದರು: "ನೀನೇಯೋ ? ಜೈ ಹಂಸೇಶ್ವರ ಅಂತ ಅದ್ಯಾವುದೊ ಜನೇಶ್ವರನೋ, ಶನೇಶ್ವರನೋ, ವಾಣಿಯೋ ಪಾಣಿಯೋ ಪತ್ರಿಕೇಲಿ ಬರೆದಿರೋನು ?"

ಲೇಖಕ ಉತ್ತರಿಸಲಿಲ್ಲ. ಉಗುರೇಶ್ವರರನ್ನು ಸುಮ್ಮನೆ ತಿರಸ್ಕಾರ ತುಂಬಿ ತುಳುಕುತ್ತಿರುವ ದೃಷ್ಟಿಯಲ್ಲಷ್ಟೆ ನೋಡಿದ.

ಉಗುರೇಶ್ವರರಿಗೆ ಕಣಜ ಕಡಿದಂತಾಯಿತು. ಯಾವುದೋ ಅನಾಮಧೇಯ ಕ್ರಿಮಿ ತನ್ನನ್ನು ಲೆಕ್ಕಿಸುತ್ತಿಲ್ಲ. ಬದುಕಿನಲ್ಲಿ ಮೊಟ್ಟ ಮೊದಲ ಸಲ ಸವಾಲು ಎಸೆಯುತ್ತಿದೆ.

"ಲೇ ! ಹುಳ ನಿನಗೇ ಕಣೋ ಹೇಳ್ತಾ ಇರೋದು, ನೀನೇ ಏನೋ ಅದು ಬರೆದಿರೋನು? ಬೊಗಳೋ..."

"............" ಮತ್ತೆ ತಿರಸ್ಕಾರದ ನೋಟ.

ಉಗುರೇಶ್ವರರ ಕೋಪದ ಜ್ವಾಲೆಗಳು ಮುಗಿಲು ಮುಟ್ಟಿದವು.

"ನೀನೆಯಾ? ಬೊಗಳೋ......ಬೊಗಳೋ?"

"ಬೌ! ಬೌ!! ಬೌಬೌಬೌ!!!" ಎಂದು ಲೇಖಕ ಉಗುರೇಶ್ವರರನ್ನು ಕುಚೇಷ್ಟೆಯಿಂದ ನೋಡಿದ. ಜನರೆಲ್ಲ ಗೊಳ್ಳೆಂದು ನಕ್ಕರು. ಅನೇಕ ಧ್ವನಿಗಳು:

"ಬೌ ! ಬೌ !!" ಎಂದವು.

ಉಗುರೇಶ್ವರರ ಬೆಂಬಲಿಗರು; ಕಕ್ಕಾವಿಕ್ಕಿಯಾದರು.

ಈ ಅನಿರೀಕ್ಷಿತ ಪ್ರತಿಕ್ರಿಯೆಯಿಂದ ಉಗುರೇಶ್ವರರು ಸ್ವಲ್ಪ ಗಾಬರಿಯಾದರೂ, ಅಡಗುತ್ತಿರುವ ಧೈರ್ಯವನ್ನು ಮತ್ತೆ ವೃದ್ಧಿಗೊಳಿಸುವ ಪ್ರಯತ್ನ ಮಾಡುತ್ತ ಕಿರುಚಿದರು. "ಯಾರು ಅಂತ ನನ್ನ ತಿಳ್ಕೊಂಡಿದಿಯಾ ? ಭಡವಾ ನನ್ನ ಮಗನೆ, ನಿನಗೆ ಹುಟ್ಟಿದ ದಿನ ಕಾಣಿಸಿ ಬುಡ್ತೀನಿ. ನನ್ನೇ ಹಲ್ಲಿಡಿದು ನೋಡೋಕೆ ಬರ್ತೀಯಾ? ಯಾರು ಅಂತ ತಿಳ್ಕೊಂಡೆ........ ನನ್ನ ಯಾರೂ ಅಂತ ತಿಳ್ಕೊಂಡೆ."

ಲೇಖಕ ಉತ್ತರಿಸಿದ. "ತಾವು ಉಗುರೇಶ್ವರರು ಅಂತ. ತಾವು ನಾಲ್ಕನೇ ಸಾರಿ ನಮ್ಮ ಶಾಸಕರಾಗಿದ್ದೀರಿ. ತುರ್ತುಪರಿಸ್ಥಿತೀಲಿ ಆಡಳಿತ ಪಕ್ಷದಲ್ಲಿದ್ದಿರಿ. ತುರ್ತುಪರಿಸ್ಥಿತಿ ಮುಗಿದ ಮೇಲೆ ವಿರೋಧ ಪಕ್ಷಕ್ಕೆ ಬಂದು ಸೇರಿ; ಶಾಸಕರಾಗಿ ಗೆದ್ದು, ತಿರ್ಗ ಆಡಳಿತ ಪಕ್ಷ ಸೇರಿದ್ರಿ..."

"ಅದ ಕೇಳೋಕೆ ನೀನು ಯಾರು? ನನಗ ಈ ಕ್ಷೇತ್ರದ ಬಡವರ ಬೆಂಬಲ ಇರೋತನಕ...."

"ನಾನೇನು ಕೋಟ್ಯಾಧೀಶ್ವರ ಅಲ್ಲ. ಬಡವರ ಹೇಸರೇಳುಕೊಂಡೇ ತಾವು ತಲಾ ೧೫-೨೦ ಲಕ್ಷ ಬಾಳೋ ನಾಲ್ಕು ಬಂಗ್ಲೆಗಳ ಕಟ್ಟಿದ್ದೀರಿ....ಪವಿತ್ರಾ ನದಿ ದಂಡೆ ಮೇಲೆ ಇನ್ನೂರು ಎಕ್ರೆ ಜಮೀನು ಮಾಡಿ, ತೋಟ ಮಾಡಿದ್ದೀರಿ....ಆಮೇಲೆ...."

"ಆಮ್ಯಾಲೆ...ಅದೇನು ನಿನ್ನರಾಗ ಮುಂದುವರಿಸು"

"ನಿನ್ನ ಮಗನಿಗೆ **Probationery AC** ಕೆಲ್ಸ; ನಿನ್ನ ಅಳಿಯನಿಗೆ **Probationery DYSP** ಕೆಲ್ಸ... ನಿನ್ನ ಕರೀ ಮಗನಿಗೆ ತಲೇಲಿ ಹೇಡಿಮಣ್ಣಿದ್ರೂ **KAS** ಪರೀಕ್ಷೇಲಿ ರ‍್ಯಾಂಕು, ಮಗಳಿಗೊಬ್ಬಳಿಗೆ ಮೆಡಿಕಲ್ ಸೀಟು...." ಯಾವುದೋ ಅನಾಮಧೇಯ ಧ್ವನಿ ಕೂಗಿಕೂಗಿ ಹೇಳಿತು.

"ಎಂಥಾದಪ್ಪ ಇದು. ಥೂ! ರಗಳೆ, ಮೊದಲು ನಿನ್ನದು ನೀನು ನೋಡ್ಕೋ,ನಿಂದು ನೀ ತೊಳ್ಕೋ. ಆಮ್ಯಾಲೆ ಅವರಿವರದ ತೋಳೀ ಅಂತಾರೆ ಹಿರೀಕರು. ಅದ್ಕೇ ನಮ್ಮಲೀಡ್ರು ತಮ್ಮ ಮನೇಲಿರೋ **Unemployment** ಸಮಸ್ಯೆನ, **Poverty** ಸಮಸ್ಯೇನ ಪರಿಹಾರ ಮಾಡ್ಕೋತಾ ಇದ್ದಾರೆ. ಜನ ಇದನ್ನೆಲ್ಲ ವಿಶಾಲವಾಗಿ ನೋಡೋದನ್ನ ಕಲ್ತುಕೋ ಬೇಕು!"

ಮತ್ತೊಂದು ಅನಾಮಧೇಯ ಧ್ವನಿ ಬೆಂಬಲಿಸಿತು.

ಅನೇಕ, ಅಸಂಖ್ಯ ಧ್ವನಿಗಳು ಗಹ-ಗಹಿಸಿದವು.

ಲೇಖಕ : "**Silence Please**" ಎಂದ. ಉಗುರೇಶ್ವರರ ರಕ್ತ ಒತ್ತಡ ಏರಲಾರಂಭಿಸಿತು. ತಲೆ ಗಿರ‍್ರೆಂದಿತು. ತಮ್ಮ ಇಪ್ಪತ್ತು ವರ್ಷಗಳ ಶಾಸಕಗಿರಿಯ ಅವಧಿಯಲ್ಲಿ ಇಂಥ ಅವಮಾನವಾಗಿರಲಿಲ್ಲ.

"ಲೇ ! ಕ್ರಿಮಿ ನನ್ನ ಹೀಯಾಳಿಸ್ತೀಯಾ ? ನಿನ್ನೂ ನಿನ್ನ ಗುಂಪ್ನೂ ದೇಶದ್ರೋಹಿಗಳು ಅಂತ ಒದ್ದು ಒಳೀಕಾಕಿಸ್ತೀನಿ ! ನನ್ನ ಶಕ್ತಿ ಪರೀಕ್ಷೆ ಮಾಡ್ತೀಯಾ ? ಒಂದು ಕೈ ನಿನಗೆ ತೋರಿಸಿ ಬುಡ್ತೀನಿ !"

"ನಾವೇನಯ್ಯಾ ಉಗುರೇಶ್ವರ, ದೇಶದ್ರೋಹಿಗಳು. ಉಡೋಕೆ ಉಣ್ಣೋಕೆ ತೊಂದ್ರೆ ಇದ್ರೂ ನಾವು ಆಡಿದ ಮಾತು ಉಳೀಸ್ಕೋತೀವಿ. ಹಸಿದು ಮಲಗಿದ್ರೂ ಸತ್ಯ ಹೇಳ್ತೀವಿ. ನಿನಗೆ ಕನಿಷ್ಠ ಇಷ್ಟಾದ್ರೂ ನಿಯತ್ತು ಇರಬೇಕಿತ್ತು...... ಇದು ಬ್ಯಾಡ ಕನಿಷ್ಠ...ಕನಿಷ್ಠ" ಲೇಖಕ ತಡವರಿಸಿದ.

"ಕನಿಷ್ಠ......ಕನಿಷ್ಠ ಅಂತ ಅದ್ಯಾಕೆ ಮಾತಾಡೋಕೆ ಸಾಯ್ತೀಯ... ಅದೇನು ನಿನ್ನ ಅನಿಷ್ಠ ನಾಲಗೆಯಿಂದ ಬೊಗಳೋ......... ನಿಮ್ಮಪ್ಪನ ಮಗನಾದ್ರೆ...ಅದೇನು ಹೇಳೋ..." ಉಗುರೇಶ್ವರ ಕಂಪಿಸಿದ. ಮೈ ಎಲ್ಲ ಬೆವರಿ ಒದ್ದೆಯಾಗತೊಡಗಿತ್ತು.

"ಏನೂ ಇಲ್ಲ...ನೀನು ಇಪ್ಪತ್ತು ವರ್ಷಗಳಲ್ಲಿ ಐದು ಸಲ ಪಕ್ಷಾಂತರ ಮಾಡಿದೆ... ನಿನಗೆ... ಹೊಟ್ಟೆಗಿಲ್ಲದೆ ವೇಶ್ಯಾವೃತ್ತಿ ಮಾಡುವ ಅಸಹಾಯ ಹೆಣ್ಣುಮಗಳಿಗಿರುವ ನಿಷ್ಠೆ...... ಅಂದ್ರೆ ಅವ್ಳು ಒಬ್ಬ ಗಿರಾಕಿ ಹತ್ರ ನೂರು ರೂಪಾಯಿ ತಗೊಂಡು, ಶಿವನ್ನ ಕೂಗೋತನಕ ನುಣ್ಣನುಣ್ಣಗೆ ನಿನ್ನತ್ರ ಮಲಗಿರ್ತೀನಿ ಅಂದ್ರೆ, ಹಂಗೇ ಮಾಡ್ತಾಳೆ. ಅವನು ಕಡೀಲಿ, ಕೊಚ್ಲೀ, ಹಿಂಡಿ ಹಿಪ್ಪೇಕಾಯಿ ಮಾಡ್ಲಿ... ಹಲ್ಲು ಕಚ್ಚುಕಂಡು ಅನುಭವಿಸ್ತಾಳೆ. ಶಿವನ್ನ ಕೂಗಿದಾಗ ಸೀರೆ ಉಟ್ಕೊಳ್ಳೀ ಅಂತಾಳೆ... ಇಂಥ ನಿಯತ್ತು ನಿನಗೆ ಇದ್ದಿದ್ರೆ ನೀನು ಇಂಥ ಮಂಗ ಆಯ್ತಾ...ಇರಲಿಲ್ಲ........ಮನುಷ್ಯ ಆಗಿ ಉಳ್ಕೊತಾ ಇದ್ದೆ..."

"ಅಂದ್ರೆ ನನಗೆ ಒಬ್ಬ ಹಾದರಗಿತ್ತಿಗೆ ಇರೋವಷ್ಟು ನಿಯತ್ತು...?"

"ಖಂಡಿತ ಇಲ್ಲ....ಇದ್ದಿದ್ರೆ....ಇಂಥ ಪತನ..."

"ನಾನು... ಹಾದರ........ನಿಷ್ಠೆ........ಅಭಾವ" ಎನ್ನುತ್ತ ಉಗುರೇಶ್ವರ ತಡವರಿಸಿದ. ಸುತ್ತ ಮೌನ ಆವರಿಸಿತು. ಉಗುರೇಶ್ವರನ ತಲೆ ಗಿರ‍್ರೆಂದು ಸುತ್ತಲಾರಂಭಿತು. ಜುಬ್ಬ ಕಚ್ಚೆಗಳು ಬೆವರಿನಲ್ಲಿ ತೊಯ್ದು ಹೋದವು.

"ಏನು ನಾನು ಹಾದರಗಿತ್ತಿಗಿಂತ ಕಡಿಮೆಯೇ... ಕನಿಷ್ಠವೇ...ಏನಂದೆ ?" ಎಂದು ವಿಕಾರವಾಗಿ ಕಿರುಚಿ! ಲೇಖಕನ ಕತ್ತು ಹಿಸುಕುವವರಂತೆ ಅಬ್ಬರಿಸುತ್ತ ಮುಂದೆ ಎರಡು ಹೆಜ್ಜೆಗಳನ್ನಿಟ್ಟು...... ಧೊಪ್ಪನೆ ಕೆಳಕ್ಕೆಬಿದ್ದರು.


ಆತ್ಮಪಕ್ಷಿ: "ನಾ, ಈ ದೇಹ ಪಂಜರದಲ್ಲಿ ಇನ್ನಿರಲಾರೆ" ಎಂಬಂತೆ ಹಾರಿಹೋಯಿತು. ●

ಮತ-ಧರ್ಮ

ನಿಜಕೂ ಮತಧರ್ಮದ ಸಾರ
ಹಣ್ಣಿನ ತಿರುಳಿನ ಹಾಗೆ
ರುಚಿಕರ, ಹಿತಕರ,
ಆದರದರ ಬಹಿರಾಚಾರ
ಬಹುಮಟ್ಟಿಗೆ
ಬಾಯಿಗೆ ಬಾರದ ಸಿಪ್ಪೆಯ ಥರ !

—ಎಂ. ಅಕಬರ ಅಲಿ





ನಾನೇಕೆ ಬರೆಯುತ್ತೇನೆ


-ಹಾ.ಮಾ.ನಾಯಕ

'ನಾನೇಕೆ ಬರೆಯುತ್ತೇನೆ?' ಎಂಬ ಪ್ರಶ್ನೆಯನ್ನು ಒಂದಲ್ಲ ಒಂದು ಸಲ ಪ್ರತಿಯೊಬ್ಬ ಲೇಖಕನೂ ಎದುರಿಸಲೇಬೇಕು. ತನ್ನ ಕೆಲಸದ ಉದ್ದೇಶವನ್ನು ಸ್ಪಷ್ಟಪಡಿಸಿಕೊಳ್ಳುವುದಕ್ಕಾಗಿಯಾದರೂ ಈ ಪ್ರಶ್ನೆಯನ್ನು ಆಗಾಗ ಹಾಕಿಕೊಳ್ಳಬೇಕು. "ನೀವೇಕೆ ಬರೆಯುತ್ತೀರಿ?" ಎಂದು ಯಾರಾದರೂ ಕೇಳಿದಾಗಲಾದರೂ ಉತ್ತರ ಕೊಡಬೇಕು. "ನಾನೇಕೆ ಬರೆಯುತ್ತೇನೆಂದು ನನ್ನನ್ನು ಯಾಕೆ ಕೇಳುತ್ತೀರಿ? ನನ್ನ ಸಾಹಿತ್ಯವನ್ನು ಓದಿದ ಮೇಲೆ ನಿಮಗೇ ಅದರ ಉತ್ತರ ಹೊಳೆದಿರಬೇಕು" ಎಂದು ಹೇಳಿದವರಿದ್ದಾರೆ. ಹಕ್ಕಿಯನ್ನು ನೀನೇಕೆ ಹಾಡುತ್ತಿಯೆ ಎಂದು ಯಾರಾದರೂ ಕೇಳುತ್ತಾರೆಯೆ? ಹೂವನ್ನು ನೀನೇಕೆ ಅರಳುತ್ತೀಯೆ ಎಂದು ಪ್ರಶ್ನಿಸಬಹುದೆ? ಹಾಗೆಯೇ ಕವಿಯನ್ನು "ನೀನೇಕೆ ಬರೆಯುತ್ತೀಯೆ ಎಂದು ಕೇಳುವದುಂಟೆ ?" ಎಂದೂ ಕೇಳಿದವರಿದ್ದಾರೆ. ಇನ್ನೂ ನಾನಾ ಬಗೆಯ ಉತ್ತರಗಳನ್ನು ಕೇಳಿದ್ದೇವೆ. ಪ್ರತಿಯೊಬ್ಬರ ಅನುಭವವೂ ಬೇರೆ ಬೇರೆ; ಪ್ರತಿಯೊಬ್ಬರ ಉದ್ದೇಶಗಳೂ ಬೇರೆ ಬೇರೆ; ದೃಷ್ಟಿಕೋನಗಳೂ ಬೇರೆ ಬೇರೆ. ಹಾಗಿರುವಾಗ ನಾನೇಕೆ ಬರೆಯುತ್ತೇನೆ ಎಂಬ ಪ್ರಶ್ನೆಗೂ ಸಹಜವಾಗಿಯೇ ಉತ್ತರಗಳು ಭಿನ್ನಭಿನ್ನವಾಗಿರುತ್ತವೆ. ಅದು ಅನಿವಾರ್ಯ ಕೂಡ.

ನಾನೇಕೆ ಬರೆಯುತ್ತೇನೆ ಎಂದು ಕೇಳಿಕೊಂಡಾಗ ನನಗೆ ನಾನು ಬರೆಯಲು ತೊಡಗಿದ ಸಂದರ್ಭಗಳ ನೆನಪಾಗುತ್ತದೆ. ನನ್ನ ತಂದೆ ತಾಯಿಗಳು, ಹತ್ತಿರದ ಬಂಧುಗಳು ಕೆಲವರು ಸಾಹಿತ್ಯಾಸಕ್ತರಾಗಿದ್ದರು. ಅವರು ಪ್ರಸಿದ್ಧ ಲೇಖಕರ ಕೃತಿಗಳನ್ನು ಓದುತ್ತಿದ್ದರು. ಅದರಿಂದಾಗಿ ನನಗೆ ಎಳೆಯಿಂದಲೇ ಓದಿನ ರುಚಿ ಹತ್ತಿತು. ಪುಸ್ತಕ ಪ್ರೀತಿ ಬೆಳೆಯಿತು. ನಮ್ಮ ತಾಲೂಕಿನವರೇ ಆದ ಕುವೆಂಪು ಅವರ ಬಗೆಗೆ ಅನೇಕ ದಂತಕಥೆಗಳು ಪ್ರಚಾರದಲ್ಲಿದ್ದವು. ಅಕ್ಷರಸ್ಥರು ಕಡಿಮೆಯಿದ್ದ, ಮೌಢ್ಯಗಳು ತುಂಬಿದ್ದ

ಸರ್ವರಿಗೂ ದೀಪಾವಳಿಯ ಹಾರ್ದಿಕ ಶುಭಾಶಯಗಳು


ಕೆ. ಕೆ. ಲಕಮನಹಳ್ಳಿ



ಸಾರಿಗೆ ವಾಹನ ಕಾಂಟ್ರಾಕ್ಟರ್

ಮನೆ ನಂ. ೫೨೧ ಇ.ಡಬ್ಲ್ಯು.ಎಸ್.

ನವನಗರ, ಹುಬ್ಬಳ್ಳಿ



ಕೆ. ಕೆ. ಲಕಮನಹಳ್ಳಿ

ಬಸವರಾಜ ಕರವೀರಪ್ಪ ಲಕಮನಹಳ್ಳಿ

ನಮ್ಮೆಲ್ಲ ಗ್ರಾಹಕರಿಗೆ ದೀಪಾವಳಿಯ ಹಾರ್ದಿಕ ಶುಭಾಶಯಗಳು

ಸವಿತಾ

ಬಾರ್ ಸೋಪ್

ಗೋಪಾಲ

ಸೋಪ್ ಕೇಕ್



ತಯಾರಕರು: ಮೆ. ಗೋಪಾಲ ಇಂಡಸ್ಟ್ರೀಜ

ಕಾರವಾರ ರೋಡ, ಹುಬ್ಬಳ್ಳಿ - 580 024

ಫೋನ : 67125, 63033, 68021

ಗ್ರಾಮಸ್ಥಂತರ ಸಮಾಜದಲ್ಲಿ ಹುಟ್ಟಿ ಕೀರ್ತಿಯ ಶಿಖರವನ್ನು ಏರುತ್ತಿದ್ದ ಕುವೆಂಪು ಅವರು ಒಬ್ಬ ವೀರರಾಗಿ ಮಹಾಪುರುಷರಾಗಿ ಕಾಣಿಸಿಕೊಂಡಿದ್ದರು. ತಾವು ಪಾಠ ಹೇಳುತ್ತಿದ್ದ ರಾಜಕುಮಾರನಿಗೆ ಅವರು ತೇರ್ಗಡೆಯಾಗುವಷ್ಟು ಅಂಕಗಳನ್ನು ಕೊಡಲಿಲ್ಲ ಎಂಬುದು ಒಂದು ಪ್ರಸಂಗ. ಆದರಿಂದಲೇ ಅವರೊಬ್ಬ ವೀರ. ಕವಿಯಾಗುವದು ಅಸಾಮಾನ್ಯ ವಿಷಯ. ಅಂತೆಯೇ ಅವರೊಬ್ಬ ಮಹಾಪುರುಷರೆನ್ನಿಸಿದ್ದರು.

ನಮ್ಮ ಮನೆಯಲ್ಲಿ ಎಲ್ಲ ಹಿರಿಯರೂ ಅವರು ಅವರ ವಿಷಯ ಚರ್ಚಿಸುತ್ತಿದ್ದರು. ಅವರ ಕಥೆಗಳನ್ನು, ಮಲೆನಾಡಿನ ಚಿತ್ರಗಳನ್ನು, ಕಾನೂರು ಹೆಗ್ಗಡಿತಿ ಕಾದಂಬರಿಯನ್ನು ಓದಿ ನಮ್ಮ ಭಾಗದ ಯಾರ ಯಾರ ಕಥೆಗಳು ಅಲ್ಲಿ ಕಾಣಿಸಿಕೊಂಡಿವೆ ಎಂಬ ಸಂಶೋಧನೆ ನಡೆಸುತ್ತಿದ್ದರು. ಏಳೆಂಟು ವರ್ಷದ ಹುಡುಗನಾಗಿದ್ದ ನನಗೆ ಕುವೆಂಪು ಅವರ ಹಾಗೆ ಆಗಬೇಕು ಎಂದು ಆಸೆ. ಅವರನ್ನು ಕುರಿತು ಜನ ಹೇಗೆ ಮಾತಾಡುತ್ತಿದ್ದಾರೆ, ಹಾಗೆ ನನ್ನನ್ನು ಕುರಿತು ಕೂಡ ಮಾತಾಡಬೇಕೆಂಬುದು ಬಾಲ ಮನಸ್ಸಿನ ಅಪೇಕ್ಷೆಯಾಗಿತ್ತು. ಮುಂದೆ ಹದಿಹರಯಕ್ಕೆ ಬಂದಾಗ ನನ್ನ ಒಂದು ಕಿರು ಕಥೆಯನ್ನು ಓದಿ, ಅದು ತಮ್ಮನ್ನೇ ಉದ್ದೇಶಿಸಿದ್ದು ಎಂದು ತಿಳಿದ ಹಿರಿಯರೊಬ್ಬರು "ಇವನೇನು ತನ್ನನ್ನು ಕವಿ ಪುಟ್ಟಪ್ಪ ಎಂದು ತಿಳಿದುಕೊಂಡು ಬಿಟ್ಟನೊ" ಎಂದಿದ್ದರಂತೆ. ಪುಟ್ಟಪ್ಪ ದೊಡ್ಡ ಲೇಖಕರು. ಅವರು ಯಾರನ್ನಾದರೂ ಕುರಿತು ಬರೆದರೆ ಹೇಗೂ ನಡೆಯುತ್ತದೆ, ಆದರೆ ಈ ಅಕ್ಷರಾಭ್ಯಾಸದ ಹುಡುಗನಿಗೆ ಈ ಬಗೆಯ ಸ್ವಾತಂತ್ರ್ಯ ಹೇಗೆ ಸಿಕ್ಕುತ್ತದೆ ಎಂಬುದು ಆ ಹಿರಿಯರ ಭಾವನೆಯಾಗಿರಬೇಕು. ಅಂತೂ ನನ್ನ ಹೆಸರನ್ನು ಅವರು ಕುವೆಂಪು ಹೆಸರಿನ ಜೊತೆ ಸೇರಿಸಿಬಿಟ್ಟಿದ್ದರು. ನನಗೆ ಆದರಿಂದ ಸಂತೋಷವಾಗಿತ್ತು. ನಾನೂ ಕುವೆಂಪು ಅವರ ಹಾಗೆ ಬರೆಯಬಲ್ಲೆ ಎಂದೂ ತಿಳಿದುಕೊಂಡುಬಿಟ್ಟಿದ್ದೆ.


ಆರಂಭದಲ್ಲಿ ಪದ್ಯ ಬರೆಯುವುದು ಬಹಳ ಸುಲಭ ಎನ್ನಿಸಿತು. ಯಾವ ಪದ್ಯ ಓದಿದರೂ ಅದನ್ನು ತಿರುಚಿ, ಅನುಕರಿಸಿ, ಬದಲಿಸಿ ಪದ್ಯ ಹೆಣೆಯುವುದು ಚಟವಾಗಿತ್ತು. ಅಂಥ ನೂರಾರು ರಚನೆಗಳನ್ನು ಮಾಡಿದ್ದೆ. "ಬಣ್ಣದ ತಗಡಿನ ತುತ್ತೂರಿ, ಕಾಸಿಗೆ ಕೊಂಡನು ಕಸ್ತೂರಿ" ಎಂಬ ರಾಜರತ್ನಂ ಅವರ ಪದ್ಯ ನನ್ನ ಸೋದರ ಸಂಬಂಧಿ, ನನಗಿಂತ ಒಂದೆರಡು ವರ್ಷ ದೊಡ್ಡವಳಾಗಿದ್ದ ಒಬ್ಬ ಹುಡುಗಿಯ ಪಠ್ಯ ಪುಸ್ತಕದಲ್ಲಿತ್ತು. ಆ ಪದ್ಯ ನನಗೆ ಕಂಠಪಾಠವಾಗಿತ್ತು. ಒಂದು ದಿನ ಆ ಹುಡುಗಿಯ ತಂದೆ ಅವಳಿಗೆ ಚಿನ್ನದ ಚಿಕ್ಕ ಆಡುವ ಓಲೆಗಳನ್ನು ಮಾಡಿಸಿ ತಂದಿದ್ದರು. ಆ ಹುಡುಗಿ ಲೀಲಾ ಅವನ್ನು ಧರಿಸಿಕೊಂಡು ಸಂತೋಷದಿಂದ ನೆಗೆದಾಡುತ್ತಿದ್ದಳು. ಇದ್ದಕ್ಕಿದ್ದಂತೆ ನನ್ನಲ್ಲಿ ಸ್ಫೂರ್ತಿ ಚಿಮ್ಮಿತು. ನಾನು ಗಟ್ಟಿಯಾಗಿ ಹೇಳಿಬಿಟ್ಟೆ: "ಬಣ್ಣದ ತಗಡಿನ ಲೋಲಕ್ಕು: ಕಾಸಿಗೆ ಕೊಂಡಳು ಲೀಲಕ್ಕ" ಆ ಹುಡುಗಿ ನನ್ನ ಪ್ರತಿಭೆಯನ್ನು ಗುರುತಿಸಲಿಲ್ಲ. ಬದಲಿಗೆ ತನ್ನ ಲೋಲಕ್ಕು ಚಿನ್ನದ್ದಾಗಿದ್ದರೂ ನಾನು ಬಣ್ಣದ ತಗಡಿನದು ಎಂದು ಹಾಸ್ಯ ಮಾಡಿದೆನೆಂದು ಕೋಪಿಸಿಕೊಂಡು ತಾಯಿಯ ಬಳಿ ದೂರು ಕೊಟ್ಟಳು. ತಾಯಿಯೂ ಬೇಸರ ಪಟ್ಟುಕೊಂಡು ಚಿನ್ನವನ್ನು ಬಣ್ಣದ್ದೆಂದು ಹೇಳಿದ್ದು ತಪ್ಪೆಂದು ತೀರ್ಪುಕೊಟ್ಟು ನನಗೆ ಬೈದರು. ಮನೆಯ ಕೆಲಸದಾಳುಗಳ ಕಣ್ಣೆದುರೂ ನಾನು ತಪ್ಪಿತಸ್ಥನಾಗಿದ್ದೆ. ನನಗೆ ನನ್ನ ಕಾವ್ಯ ಶಕ್ತಿಯ ಮೇಲೆ ರೋಷ ಬಂದಿತು. ನನ್ನನ್ನು ನಾನೇ ಶಪಿಸಿಕೊಂಡೆ. ಕೊನೆಗೆ ದೂರು ಮನೆಯ ಯಜಮಾನರವರಿಗೂ ಹೋಯಿತು. ನಾನು ನಡುಕಗೊಂಡಿದ್ದೆ. ಯಜಮಾನರು ದೂರನ್ನು ಕೇಳಿ ನಕ್ಕುಬಿಟ್ಟರು. ನಾನೊಬ್ಬ ಕವಿ ಎಂದು ಅವರು ಸಂತೋಷದಿಂದ ತೀರ್ಪುಕೊಟ್ಟರು. ನನಗೆ ನಾನು ಕವಿ ಎಂಬುದು ದೃಢಪಟ್ಟಿತು. ಮಹಾ ವಿಜಯವನ್ನು ಸಾಧಿಸಿದ ತೃಪ್ತಿಯುಂಟಾಯಿತು. ನಾನು ಇನ್ನೂ ಹೆಚ್ಚಾಗಿ ಕವಿತೆಗಳನ್ನು ತಿರುಚುವದಕ್ಕೆ ಆರಂಭಿಸಿದೆ.

ನಮ್ಮೂರಿನ ಸಮೀಪದ ಒಂದು ಪಾಳು ಕೋಟೆಯನ್ನು ಕಂಡು ನನ್ನ ಮೊದಲ ಸ್ವತಂತ್ರ ಕವಿತೆಯನ್ನು ಬರೆದೆ, "ಬಾ ಮಿತ್ರ, ಬಾ ನೋಡು ಹಾಳಾದ ಕೋಟೆ, ಬಾ ಮಿತ್ರ ಬಾ ನೋಡು ಪಾಳಾದ ಕೋಟೆ" ಎಂಬುದು ಅದರ ಮೊದಲ ಎರಡು ಸಾಲುಗಳು. ಮುಂದಿನ ಸಾಲುಗಳು ನನ್ನ ನೆನಪಿನಲ್ಲಿ ಉಳಿದಿಲ್ಲ. ಸ್ವಾರಸ್ಯವೆಂದರೆ ಈ ಪದ್ಯ ಆಗಿನ ಕಾಲದಲ್ಲಿ ನಮ್ಮ ಕಡೆ ವಿಶೇಷ ಪ್ರಚಾರದಲ್ಲಿದ್ದ 'ಕರ್ಮವೀರ' ವಾರ ಪತ್ರಿಕೆಯಲ್ಲಿ ಪ್ರಕಟವಾಯಿತು. ನಾನು ರಾತ್ರಿ ಬೆಳಗಾಗುವುದರಲ್ಲಿ ನಮ್ಮ ಊರಿನಲ್ಲಿ ಪ್ರಸಿದ್ಧನಾಗಿದ್ದೆ. ನಾನು ದಾರಿಯಲ್ಲಿ ಹೋಗುತ್ತಿದ್ದಾಗ ಜನರು "ಇವನೇ ಆ ಪದ್ಯ ಬರೆದವನು" ಎಂದು ಮಾತಾಡುಕೊಳ್ಳುತ್ತಿದ್ದರು. ನನಗೆ ಹೆಮ್ಮೆ ಎನಿಸುತ್ತಿತ್ತು ನನಗೆ ಸಾಲ ಕೊಡುವದನ್ನು ನಿಲ್ಲಿಸಿದ್ದ ಕೃಷ್ಣಪ್ಪಯ್ಯನವರ ಹೋಟೆಲಿನವರು ಒಂದು ದಿನ ಉಚಿತವಾಗಿ ಕಾಫಿ ತಿಂಡಿ ಕೊಟ್ಟು ಬಿಟ್ಟರು. ಕವಿಯಾಗುವುದರಿಂದ ಲೌಕಿಕ ಲಾಭಗಳೂ ಇವೆಯೆಂಬುದು ನನಗೆ ಅಂದಿನ ಭ್ರಮೆಯಾಗಿತ್ತು. ಒಂದೆರಡು ವಾರ ನಾನು ಎದೆಯುಬ್ಬಿಸಿಕೊಂಡು ಓಡಾಡಿದೆ.

ಹಳ್ಳಿಯಿಂದ ನನ್ನ ತಂದೆ ಬಂದರು. ಅವರೂ ನನ್ನ ಹೆಸರು ಪತ್ರಿಕೆಯಲ್ಲಿ ಅಚ್ಚಾದುದನ್ನು ಕಂಡಿದ್ದರು. ಅವರಿಗೆ ಒಬ್ಬ ಪೋಲಿಸ್ ಇನ್ಸ್‌ಪೆಕ್ಟರ ಪರಿಚಯವಿತ್ತು. ಅವರ ಬಳಿ ನನ್ನನ್ನು ಕರೆದುಕೊಂಡು ಹೋದರು. ಮಗನ ಪ್ರತಿಭೆಯನ್ನು ಬಹು ಸಂತೋಷದಿಂದ ಪರಿಚಯಿಸಿದರು. ಆ ಇನ್ಸ್‌ಪೆಕ್ಟರು ನನ್ನ ಬಗೆಗೆ ಒಂದೂ ಮೆಚ್ಚುಗೆಯ ಮಾತಾಡಲಿಲ್ಲ. ಬದಲಿಗೆ "ನಿನ್ನ ಪದ್ಯವನ್ನು ಯಾವ ಛಂದಸ್ಸಿನಲ್ಲಿ ಬರೆದಿದ್ದೀಯೆ"? ಎಂದು ಪೋಲೀಸ ಗತ್ತಿನಲ್ಲೇ ಕೇಳಿದರು. ನಾನು ನನ್ನ ಕವಿತೆಯನ್ನು ಮಸಿಯಲ್ಲಿ ಬರೆದಿದ್ದೆ:



ಪಾಳು ಕೋಟೆಯನ್ನು ಕಂಡು ನನ್ನ ಮೊದಲ ಕವಿತೆಯನ್ನು ಬರೆದೆ. ಅದು ಆಗಿನ ಕಾಲದಲ್ಲಿ ನಮ್ಮ ಕಡೆ ವಿಶೇಷ ಪ್ರಚಾರದಲ್ಲಿದ್ದ 'ಕರ್ಮವೀರ' ವಾರಪತ್ರಿಕೆಯಲ್ಲಿ ಪ್ರಕಟವಾಯಿತು, ನಾನು ರಾತ್ರಿ ಬೆಳಗಾವುದರಲ್ಲಿ ನಮ್ಮ ಊರಿನಲ್ಲಿ ಪ್ರಸಿದ್ಧನಾಗಿದ್ದೆ, ನನಗೆ ಸಾಲಕೊಡುವುದನ್ನು ನಿಲ್ಲಿಸಿದ್ದ ಹೊಟೆಲಿನವರು ಒಂದು ದಿನ ಉಚಿತವಾಗಿ ಕಾಫಿ ತಿಂಡಿ ಕೊಟ್ಟುಬಿಟ್ಟರು, ಕವಿಯಾಗುವುದರಿಂದ ಲೌಕಿಕ ಲಾಭಗಳೂ ಇವೆ ಎಂಬುದು ನನಗೆ ಅಂದಿನ ಭ್ರಮೆಯಾಗಿತ್ತು,


LVT
Glucose Biscuits
Glucose
BISCUITS
Glucose
LVT
BISCUITS
LVT PRODUCTS
HUBLI
Full of Taste -
Full of Energy
THE BISCUITS PEOPLE
LVT PRODUCTS HUBLI 580 030

ಛಂದಸ್ಸಿನಲ್ಲಿ ಬರೆದಿರಲಿಲ್ಲ. ಛಂದಸ್ಸು ಎಂದರೆ ಏನೆಂಬುದೂ ನನಗೆ ತಿಳಿದಿರಲಿಲ್ಲ. ಕುಸಿದು ಹೋದೆ. ನನ್ನ ತಂದೆಯ ಎದುರು ನನ್ನ ಮರ್ಯಾದೆ ಕಳೆಯುತ್ತಿತ್ತು. ಛಂದಸ್ಸಿಲ್ಲದೆ ಪದ್ಯ ಬರೆಯುವುದು ಸಾಧ್ಯವಿಲ್ಲವೆಂದು ಇನ್ಸ್‌ಪೆಕ್ಟರರು ತೀರ್ಪು ಕೊಟ್ಟು ಬಿಟ್ಟರು. ನನ್ನ ಹೆಮ್ಮೆಯ ಬಲೂನನ್ನೂ ಅವರು ಬಹು ಸುಲಭವಾಗಿ ಟುಸ್ ಎನಿಸಿದ್ದರು. ಕವಿತೆ ಬರೆಯಲು ನಾನು ತಿಳಿದುಕೊಳ್ಳಬೇಕಾದ ವಿಚಾರಗಳೂ ಇವೆಯೆಂಬುದು ಆ ಹೊತ್ತು ಮನವರಿಕೆಯಾಯಿತು. ಸೃಷ್ಟಿಗೂ ಒಂದು ಶಿಸ್ತು ಇರುತ್ತದೆ ಎನ್ನುವುದು ಎಷ್ಟೋ ಕಾಲದ ಮೇಲೆ ನನಗೆ ದೃಢವಾಯಿತು. ಕವಿತೆ ಉದುರಬಹುದು, ಆದರೆ ಅದನ್ನು ಹಿಡಿದುಕೊಳ್ಳಲು ಒಂದು ನಿರ್ದಿಷ್ಟ ಕ್ರಮಬೇಕು ಎಂದು ಗೊತ್ತಾಯಿತು.


ಛಂದಸ್ಸಿನಿಂದ ತಪ್ಪಿಸಿಕೊಳ್ಳುವ ಸಲುವಾಗಿ ಗದ್ಯ ಬರೆಯಲು ಆರಂಭ ಮಾಡಿದೆ. ನನಗೆ ಆಗ ಹನ್ನೊಂದು ವರ್ಷ ವಯಸ್ಸು. ನನ್ನ ಹದಿನೆಂಟನೆಯ ವಯಸ್ಸಿನಲ್ಲಿ ಮೊದಲ ಪುಸ್ತಕ 'ಬಾಳ್ನೋಟಗಳು' ಪ್ರಕಟವಾಯಿತು. ಗದ್ಯದ ಬರವಣಿಗೆಗೆ ತೊಡಗಿದಾಗ, ನಮ್ಮೂರಿಗೆ ಬಂದಿದ್ದ ಆ ದಿನಗಳ ವಿಖ್ಯಾತರಾದ ಅ. ನ. ಕೃಷ್ಣ ರಾಯರನ್ನು ಸಂಪರ್ಕಿಸಿ, "ನನಗೆ ಬರೆಯಬೇಕೆಂಬ ಆಸೆ ಇದೆ. ಏನನ್ನು ಬರೆಯಲಿ" ಎಂದು ಕೇಳಿದೆ. "ಸುತ್ತಲೂ ಏನು ನಡೆಯುತ್ತದೆ ಅದನ್ನು ನೋಡು, ಬರಿ" ಎಂದು ಅವರು ಉಪದೇಶಿಸಿದರು. ಕುವೆಂಪು ಅವರು ನಮ್ಮ ಭಾಗದ ಸುತ್ತ ಮುತ್ತ ನಡೆದುದನ್ನೇ ಬರೆದಿದ್ದರು; ಈಗ ಗುರುಗಳ ಉಪದೇಶವೂ ಹಾಗೇ ಇತ್ತು. ಸುತ್ತಲೂ ನೋಡಿದೆ, ಎಷ್ಟೊಂದು ಪ್ರಸಂಗಗಳು! ಪ್ರತಿಯೊಂದು ಮನೆಯಲ್ಲೂ ಒಂದಲ್ಲ ಒಂದು ಸಂಗತಿ, ಕತೆ. ಅವನ್ನು ಗಮನಿಸಿದೆ, ಕೇಳಿದೆ, ಬರೆದೆ ನನ್ನ ಅಜ್ಜನ ಜಿಪುಣತ್ವ ಕುರಿತು ಬರೆದೆ; ಹೆಂಡತಿಗೇ ವಿಷ ಹಾಕಿದ ನೆರೆಯೂರಿನ ಪ್ರಸಂಗ ಕುರಿತು ಬರೆದೆ: ತಮ್ಮ ಮಠದ ಏಜೆಂಟರ ಹೆಂಡತಿಯನ್ನೇ ಇಟ್ಟುಕೊಂಡಿದ್ದ ಊರ ಸ್ವಾಮಿಗಳನ್ನು ಕುರಿತು ಬರೆದೆ; ಟೊಟೆಲಿಟ್ಟ ಮಾಯಾಗಾತಿಯೊಬ್ಬಳನ್ನು ಕುರಿತು ಬರೆದೆ. ಇಂಥ ಸಂಗತಿಗಳನ್ನೇ ಹತ್ತಾರು ಬರೆದೆ. ಅವುಗಳ ಸಂಕಲನವೇ 'ಬಾಳ್ನೋಟಗಳು' ಪುಸ್ತಕ. ಅದು ಪ್ರಕಟವಾದೊಡನೆಯೇ ಗುಲ್ಲಾಯಿತು. ರಿಜಿಸ್ಟರ ಕಾಗದ ಬಂತು: ಕೋರ್ಟಿಗೆ ಹೋಗುವ ಬೆದರಿಕೆ ಹಾಕಲಾಯಿತು; ನನ್ನ ಕಾಲು ಮುರಿಯುವ ಹಂಚಿಕೆಯ ವದಂತಿ ಹುಟ್ಟಿತು.

ನನ್ನ ತಂದೆ ನನಗೆ 'ಹುಷಾರಾಗಿರಪ್ಪ' ಎಂದು ಎಚ್ಚರಿಕೆ ಹೇಳಿದರು. ಸುತ್ತಲೂ ಏನು ನಡೆಯುತ್ತದೆಯೋ ಅದನ್ನೇ ಬರೆದಿದ್ದೆ. ಆದರೆ ಅದು ಕಲೆಯಾಗಿ ಮಾಗಬೇಕಿತ್ತು ಎಂಬುದು ಗಮನಕ್ಕೆ ಬಾರದೆ ಹೋಯಿತು.

ನಮ್ಮ ಮನೆಯಲ್ಲಿ ನನ್ನ ಚಿಕ್ಕ ತಮ್ಮ, ತಂಗಿಯರ ನಡುವಳಿಕೆಯನ್ನು ನೋಡಿ, ರಮಾ ಎಂಬ ಪುಟ್ಟ ಹುಡುಗಿಯ ಪಾತ್ರವನ್ನು ಸೃಷ್ಟಿಸಿ ಅವಳನ್ನು ನನ್ನ ಮಗಳೆಂದೇ ಭಾವಿಸಿ, ನಾನೇ ತಂದೆಯ ಪಾತ್ರವಹಿಸಿ ನನ್ನ ಹದಿನೆಂಟು ಇಪ್ಪತ್ತನೆಯ ವಯಸ್ಸಿನಲ್ಲಿ ಕೆಲವು ಪ್ರಬಂಧಗಳನ್ನು ಬರೆದೆ. ಅವುಗಳಲ್ಲಿ ಮೊದಲನೆಯ ಪ್ರಬಂಧ 'ಮಕ್ಕಳ ಮನಸ್ಸು' ಎಂಬುದು ಮಾಸ್ತಿಯವರ 'ಜೀವನ' ಪತ್ರಿಕೆಯಲ್ಲಿ ಪ್ರಕಟವಾಯಿತು. ಅದನ್ನು ಓದಿ ಮಾಸ್ತಿಯವರು 'ಇದು ನಿಜವಾದ ಸಾಹಿತ್ಯವಪ್ಪ. ಏನು ಮುದ್ದಾಗಿ ಬರೆದಿದ್ದೀಯೆ ?' ಎಂದು ಕೆನ್ನೆ ಸವರಿದರು. 'ನಮ್ಮ ಮನೆಯ ದೀಪ' ಎಂಬ ಶೀರ್ಷಿಕೆಯಲ್ಲಿ ಪುಸ್ತಕ ರೂಪದಲ್ಲಿ ಪ್ರಕಟವಾದ ಈ ಪ್ರಬಂಧಗಳು ನನ್ನನ್ನು ಒಬ್ಬ ಲೇಖಕನನ್ನಾಗಿ ಸ್ಥಾಪಿಸಿದವು: ಇವತ್ತೂ ಆ ಪ್ರಬಂಧಗಳು ಗಳಿಸುತ್ತಿರುವ ಮೆಚ್ಚುಗೆ ನನ್ನಲ್ಲಿ ಒಂದು ಬಗೆಯ ಸಮಾಧಾನವನ್ನು ತಂದಿದೆ. ಅಂಥ ಪ್ರಬಂಧಗಳನ್ನು ಇನ್ನಷ್ಟು ಬರೆಯಲಿಲ್ಲವಲ್ಲ ಎಂಬ ಕೊರತೆಯೂ ಕಾಡುತ್ತಿದೆ. ಆದರೆ ಆ ಪ್ರಬಂಧಗಳ ಗುಣ ನನ್ನ ಎಲ್ಲ ಬರವಣಿಗೆಗಳಲ್ಲಿಯೂ ಕಾಣಿಸಿಕೊಳ್ಳುತ್ತದೆಂದು ಅನೇಕರು ಅಭಿಪ್ರಾಯ ಪಟ್ಟಿದ್ದಾರೆ. ಅದರಿಂದ ನನಗೆ ಆಗಾಗ ಸಮಾಧಾನವಾಗಿರುವುದೂ ಉಂಟು.

ಆರಂಭದಲ್ಲಿ ಅನೇಕ ಕವಿತೆಗಳನ್ನೂ, ಕತೆಗಳನ್ನೂ ಬರೆದೆ. ಲಲಿತ ಪ್ರಬಂಧಗಳನ್ನೂ ಬರೆದೆ: ಅನುವಾದ ಮಾಡಿದೆ; ಬಾನುಲಿಗಾಗಿ ಕೆಲ ನಾಟಕಗಳನ್ನೂ ಬರೆದೆ. ಒಂದೆರಡು ಕಾದಂಬರಿಗಳನ್ನು ಬರೆದೆ. ಅವುಗಳಲ್ಲಿ ಎಷ್ಟೋ ಕಳೆದು ಹೋದವು. ಇನ್ನೆಷ್ಟೋ ಪತ್ರಿಕಾ ಕಚೇರಿಗಳಿಂದ ಹಿಂದಿರುಗಿ ಬರಲಿಲ್ಲ. ಇನ್ನೂ ಕೆಲವು ಅಚ್ಚಾಗದ ಉಳಿದವು. ಸೃಜನಶೀಲವಾದ ಬರವಣಿಗೆಯಲ್ಲಿ ತೊಡಗಿದವನು ಬಹಳ ಕಾಲ ಅದನ್ನು ಉಳಿಸಿಕೊಳ್ಳದೆ ಹೋದೆ. ನಿಧಾನವಾಗಿ ವಿಚಾರ ವಿಮರ್ಶೆಗಳ ಕಡೆಗೆ ಹೊರಳಿದೆ. ಮುಂದೆ ನನ್ನ ಅನೇಕ ಪುಸ್ತಕಗಳು ಪ್ರಕಟವಾದವು. ಅವೆಲ್ಲವೂ ಪ್ರಧಾನವಾಗಿ ವಿಚಾರ ವಿಮರ್ಶೆ, ಜೀವನ ಚರಿತ್ರೆ,

ಸಂಶೋಧನೆ



ಮಹಾ ಭಾರತದಂಥ
ಬೃಹತ್ ಗ್ರಂಥ
ಏಕೆ ರಚಿಸಿರಬಹುದು ವ್ಯಾಸ?

ಚಿಂತಿಸಿ ಮಂಥಿಸಿ
ಹೊಳೆಯಿತು, ಬಹುಶಃ:
ಬರೆಯುವುದು ಅವನ ಹವ್ಯಾಸ

– ಎಚ್. ಡುಂಡಿರಾಜ್

ವ್ಯಕ್ತಿಚಿತ್ರ, ಸಲ್ಲಾಪ ಸಂಶೋಧನೆಗೆ ಸಂಬಂಧಿಸಿದ ಬರಹಗಳು. ನನ್ನ ಆರಂಭದ ಬರಹಗಳನ್ನು ಓದಿದವರು ಇಂದಿಗೂ ಸೃಜನಶೀಲ ಬರಹಗಳನ್ನು ನಾನು ಯಾಕೆ ಮುಂದುವರಿಸಲಿಲ್ಲ ಎಂದು ಕೇಳುತ್ತಾರೆ. ಮುಂದೆ ಮತ್ತೆ ಬರೆಯಬಹುದೆಂದು ನಾನು ಅವರಿಗೆ ತಮಾಷೆಯಾಗಿ ಹೇಳುತ್ತೇನೆ. ಆದರೆ ಸೃಜನದಿಂದ ಸೃಜನೇತರ ಸಾಹಿತ್ಯದ ಕಡೆಗೆ ನಾನೇಕೆ ಬಂದೆ ಎಂದು ಅನೇಕ ಸಲ ನನ್ನನ್ನೇ ನಾನು ಕೇಳಿಕೊಳ್ಳುತ್ತೇನೆ. ಅದಕ್ಕೆ ಕಾರಣಗಳು ಅನೇಕ ನನಗೆ ಹೊಳೆಯುತ್ತವೆ. ಅವನ್ನು ಚರ್ಚಿಸಲು ಇದು ಸಂದರ್ಭವಲ್ಲ. ಆದರೆ ನನ್ನ ಬರವಣಿಗೆಗಳಲ್ಲಿ ಸುತ್ತಲನ್ನು ನೋಡುವ ದೃಷ್ಟಿ ಹಾಗೆಯೇ ಉಳಿದಿರುವುದು ನನಗೆ ಗೊತ್ತಿದೆ. ಅದರಿಂದ ನನಗೆ ನನ್ನ ಉದ್ದೇಶದ ಸಫಲತೆಯ ಬಗೆಗೆ ಭರವಸೆ ಬರುತ್ತದೆ. ಇದು ಆತ್ಮ ಪ್ರಶಂಸೆಯ ಮಾತಲ್ಲ. ನನ್ನನ್ನು ಸದಾ ಕೆಣಕುತ್ತಿರುವ ಎಚ್ಚರದ ಮಾತಾಗಿದೆ. ನನ್ನನ್ನು ಒಬ್ಬ ಅಂಕಣಕಾರನೆಂದು ವಿಮರ್ಶಕರು ಕರೆಯುತ್ತಾರೆ. ಪತ್ರಿಕೆಗಳ ಅಂಕಣಗಳಲ್ಲಿ ನಿಯತವಾಗಿ ಬರೆಯುತ್ತೇನೆಂಬ ದೃಷ್ಟಿಯಿಂದ ಅದು ಸರಿ. ಆದರೆ ನಾನು ಅಂಕಣಲೇಖನಗಳನ್ನು ಬರೆಯುವಾಗಲೂ ಸಾಹಿತ್ಯಕ, ವಿಮರ್ಶಕ ದೃಷ್ಟಿಯನ್ನು ಕಡೆಗಣಿಸುವುದಿಲ್ಲ. ಅದನ್ನು ಬರಿಯ ವರದಿಯನ್ನಾಗಿಸುವುದಿಲ್ಲ. ಈ ಬಗೆಯ ಬರಹಗಳಲ್ಲಿ ಸಾಹಿತ್ಯದ ಸೊಗಸನ್ನು ಅನೇಕರು ಗುರುತಿಸಿದ್ದಾರೆ. ಅಂಕಣ ಬರಹಗಳಲ್ಲಿ ಅಂದಂದಿನ ಅನೇಕ ಸಂಗತಿಗಳಿಗೆ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸುತ್ತೇನೆ. ಈ ಅಭಿವ್ಯಕ್ತಿಯ ಕ್ರಮವನ್ನೇ ಜನರು ಮೆಚ್ಚಿದ್ದಾರೆ. ಸಾಹಿತ್ಯ ಮಾಡಬಹುದಾದ ಕೆಲಸವನ್ನೇ ಈ ಅಂಕಣ ಬರಹಗಳು ಅನೇಕ ರೀತಿಯಲ್ಲಿ ನಿರ್ವಹಿಸುತ್ತವೆ. ಒಂದು ನಿರ್ದಿಷ್ಟ ಅವಧಿಯಲ್ಲಿ ಇವು ಸಿದ್ಧಗೊಳ್ಳಬೇಕಾಗಿ ಬರುವುದರಿಂದ ಎಲ್ಲ ಬರಹಗಳಲ್ಲಿಯೂ ಒಂದೇ ಮಟ್ಟವನ್ನು ನಿರೀಕ್ಷಿಸಲು ಬರುವುದಿಲ್ಲ ಎಂಬುದು ನಿಜವಾದರೂ, ಅವುಗಳು ಗುರಿಯನ್ನು ತಲಪದೆ ಹೋಗುವುದಿಲ್ಲ ಎಂಬುದು ನನ್ನ ಗಮನಕ್ಕೆ ಬಂದಿದೆ.

ಆಕಾಶವಾಣಿಯ ಕೇಂದ್ರಗಳು ಚಿಂತನ, ಸುಭಾಷಿತ ಮೊದಲಾದ ಶೀರ್ಷಿಕೆಗಳಲ್ಲಿ ಪ್ರಸಾರ ಮಾಡುವ ನಾಲ್ಕೈದು ನಿಮಿಷಗಳ ಕಿರುಭಾಷಣಗಳ ಸಂಕಲನವೊಂದನ್ನು ಪ್ರಕಟಿಸಿದ್ದೇನೆ. 'ಸೂಲಂಗಿ' ಎಂಬ ಹೆಸರಿನ ಆ ಪುಸ್ತಕ ಈಗ ಮೂರನೆಯ ಮುದ್ರಣದಲ್ಲಿದೆ. ಆ ಭಾಷಣಗಳಿಗೆ ಸೋದರ ಸಾಹಿತಿಗಳೂ ವಿಮರ್ಶಕರೂ ಓದುಗರೂ ತೋರಿಸಿರುವ ಸ್ವಾಗತ, ಪ್ರತಿಕ್ರಿಯೆಗಳು ನನಗೆ ಅತ್ಯಂತ ಸಮಾಧಾನವನ್ನು ಕೊಟ್ಟಿವೆ. ಕೇವಲ ನೀತಿಬೋಧೆಗಳಾಗಿ ಹೋಗುವ ಒಂದೆರಡು ಪುಟಗಳ ಬರವಣಿಗೆ ನಮ್ಮ ಸಾಹಿತ್ಯದಲ್ಲಿ ಒಂದು ಹೊಸ ಸಾಹಿತ್ಯ ಪ್ರಕಾರವನ್ನು ನಿರ್ಮಿಸುತ್ತವೆಂಬುದನ್ನು ನಾನು ಊಹಿಸಿರಲಿಲ್ಲ. ಪ್ರೊಫೆಸರ್ ಎಸ್.ವಿ. ರಂಗಣ್ಣನವರಿಗೆ ಇದು "ಸಣ್ಣ ಪ್ರಮಾಣದ ದೊಡ್ಡ ಕಾವ್ಯ"ವಾಗಿ ಕಾಣಿಸಿತು. ಇದು ಹೊಸಸ್ವರೂಪದ ಬರವಣಿಗೆಯೆಂದು ಅನೇಕರು ಹೇಳಿದ್ದಾರೆ. ನನಗೆ ಗೊತ್ತಿಲ್ಲದೆಯೇ ನನ್ನ ಬರವಣಿಗೆ ಎಷ್ಟೋ ಸಲ ತನ್ನ ರೂಪಗಳನ್ನು ಧರಿಸಿರುತ್ತದೆ. ಇದು ಸೃಷ್ಟಿ ಪ್ರಕ್ರಿಯೆಯ ಕ್ರಮವೆಂಬುದು ನನಗೆ ಗೊತ್ತಿದೆ. ಅನೇಕ ಸಂದರ್ಭದಲ್ಲಿ ಲೇಖಕ, ಕಲಾವಿದರು ಒಂದು ನೆವ ಮಾತ್ರವಾಗಿರುತ್ತಾರೆ ಎನ್ನುವುದು ಅನುಭವಕ್ಕೆ ಬಂದಿದೆ. ಈ ಬಗೆಯ ಬರಹಗಳಿಂದಾಗಿ ನನಗೆ ಹಲವು ಸಲ ಧನ್ಯತೆಯ ಭಾವನೆ ಬಂದಿರುವುದೂ ಉಂಟು.

ಸಾಮಾನ್ಯವಾಗಿ ಲೇಖಕರು ತಮಗಾಗಿ ಬರೆದುಕೊಳ್ಳುವುದಾಗಿ ಹೇಳುತ್ತಾರೆ. ಇದು ಸುಳ್ಳು. ಇಲ್ಲವೆ ಅರ್ಧಸತ್ಯ. ಅಭಿವ್ಯಕ್ತಿ ಒಂದು ಅಗತ್ಯ ಎನ್ನಿಸುವ ಮಟ್ಟಿಗೆ ಇದು ಸರಿ. ಆದರೆ ಅಷ್ಟಕ್ಕೆ ಅದು ನಿಲ್ಲುವದೇ ಇಲ್ಲ. ಸಾಹಿತ್ಯದ ಸಾರ್ಥಕತೆ ಓದುಗನಲ್ಲಿ ಎಂಬುದನ್ನು ನಾವು ಮರೆಯುವದು ಹೇಗೆ? ಅದಿಲ್ಲದಿದ್ದರೆ ಬರವಣಿಗೆ ಮುದ್ರಣ ಪ್ರಕಾಶನ ಮಾರಾಟ ಇದು ಯಾವುದೂ ಇರುತ್ತಿರಲಿಲ್ಲ.

ನಾನು ಬರೆಯ ತೊಡಗಿದ, ಬರೆಯುವಂತೆ ಮಾಡಿದ ಬರೆದ, ಬಗೆ ಬಗೆಯ ಪ್ರತಿಕ್ರಿಯೆಗಳನ್ನು ಪಡೆದ ಸಂದರ್ಭಗಳಲ್ಲಿ ಕೆಲವನ್ನು ಹೇಳಿದ್ದೇನೆ. ಇವನ್ನು ಗ್ರಹಿಸುವುದರಿಂದ ಬರವಣಿಗೆಯ ಹಿಂದಿರುವ ನನ್ನ ಮನಸ್ಸಿನ ಸ್ಥಿತಿಗೆ ಕನ್ನಡಿ ಹಿಡಿದಂತಾಗುತ್ತದೆಂದು ತಿಳಿದಿದ್ದೇನೆ. ಸುತ್ತಲಿನ ಬದುಕಿನಲ್ಲಿ ನಿತ್ಯವೂ ಹಲವು ಘಟನೆಗಳು ನಡೆಯುತ್ತಲೇ ಇರುತ್ತವೆ. ನಾವು ಕಂಡದ್ದನ್ನು ಕಂಡಂತೆಯೇ ಬರೆದಾಗ ಏನಾಗುತ್ತದೆ? ಯಾವುದಾದರೊಂದು ಸಂಗತಿ ಮನಸ್ಸಿನಲ್ಲಿ ಮೊಳೆತು ಬಲಿತು ಪಕ್ವಗೊಂಡು ರೂಪತಾಳಿದಾಗ ಏನಾಗುತ್ತದೆ? ಚಿಂತನೆಗೆ ಆಕಾರ ದೊರೆತಾಗ ಏನಾಗುತ್ತದೆ? ನಿರ್ದಿಷ್ಟತೆಯನ್ನು ಉದ್ದೇಶಿಸಿದಾಗ ಏನಾಗುತ್ತದೆ? ಕಲೆ ಸಂದೇಶವಾದಾಗ ಏನಾಗುತ್ತದೆ? ಇಂಥ ಪ್ರಶ್ನೆಗಳನ್ನು ಕೇಳಿಕೊಂಡಾಗ ಪ್ರತಿಯೊಬ್ಬ ಲೇಖಕನ ಬರಹಗಳ ಸ್ವರೂಪ ದರ್ಶನವಾಗುತ್ತದೆ.

ಬರವಣಿಗೆ ಒಂದು ಅಭಿವ್ಯಕ್ತಿ. ಅಭಿವ್ಯಕ್ತಿಗೆ ಒಂದು ಉದ್ದೇಶ ಇದ್ದೇ ಇರುತ್ತದೆ. ಏನಿಲ್ಲವೆಂದರೂ ಅಭಿವ್ಯಕ್ತಿ ರೂಪತಾಳುವುದೇ ಒಂದು ಉದ್ದೇಶವಾಗಿರಬಹುದು ಅಥವಾ ಅಭಿವ್ಯಕ್ತಗೊಳ್ಳುವುದೇ ತನ್ನಷ್ಟಕ್ಕೇ ಉದ್ದೇಶವಾಗಿರಬಹುದು. ಈ ಉದ್ದೇಶಗಳು ಯಾವ ರೀತಿಯಲ್ಲಿ ಈಡೇರುತ್ತವೆಂಬುದು ಮಾತ್ರ ಲೇಖಕನಿಗೆ ಸಂಬಂಧಿಸಿದ್ದು. ರೂಪ ತಾಳುವ ಭರದಲ್ಲಿ ಅರ್ಥ ಕಳೆದುಹೋಗಬಹುದು. ಅರ್ಥೈಸುವ ಆತುರದಲ್ಲಿ ರೂಪವೇ ನಾಪತ್ತೆಯಾಗಬಹುದು. ರೂಪ ಅರ್ಥಗಳ ಮೇಳವಿಕೆಯ ಯಶಸ್ಸೇ ಲೇಖಕನ ಯಶಸ್ಸೂ ಆಗಿರುತ್ತದೆ. ಪ್ರತಿಯೊಬ್ಬ ಲೇಖಕನೂ, ಆ ಮಟ್ಟಿಗೆ ಪ್ರತಿಯೊಬ್ಬ ಕಲಾವಿದನೂ, ತನ್ನನ್ನು ತೋಡಿಕೊಳ್ಳಲು ಪ್ರಯತ್ನಿಸುತ್ತಾನೆ. ಈ ತೋಡಿಕೆ ಅವನ ಪ್ರತಿಭೆ, ಪಾಂಡಿತ್ಯ, ಅನುಭವಗಳ ಆಧಾರದ ಮೇಲೆ ನಿಲ್ಲುತ್ತದೆ: ರೂಪತಾಳುತ್ತದೆ.

ಸಾಮಾನ್ಯವಾಗಿ ಲೇಖಕರು ತಮಗಾಗಿ ಬರೆದುಕೊಳ್ಳುವುದಾಗಿ ಹೇಳುತ್ತಾರೆ. ಇದು ಸುಳ್ಳು. ಇಲ್ಲವೇ ಅರ್ಧಸತ್ಯ: ಅಭಿವ್ಯಕ್ತಿ ಒಂದು ಅಗತ್ಯ ಎನ್ನಿಸುವ ಮಟ್ಟಿಗೆ ಇದು ಸರಿ. ಆದರೆ ಅಷ್ಟಕ್ಕೆ ಅದು ನಿಲ್ಲುವದೇ ಇಲ್ಲ. ಸಾಹಿತ್ಯದ ಸಾರ್ಥಕತೆ ಓದುಗನಲ್ಲಿ ಎಂಬುದನ್ನು ನಾವು ಮರೆಯುವುದು ಹೇಗೆ ? ಅದಿಲ್ಲದಿದ್ದರೆ ಬರವಣಿಗೆ ಮುದ್ರಣ ಪ್ರಕಾಶನ ಮಾರಾಟ ಇದು ಯಾವುದೂ ಇರುತ್ತಿರಲಿಲ್ಲ. ಕವಿಗಳು ಹಕ್ಕಿಗಳಂತೆ ಹಾಡಿಕೊಂಡು, ಕಾಡು ಹೂವುಗಳಂತೆ ಅರಳಿಕೊಂಡು ತಮ್ಮಷ್ಟಕ್ಕೆ ತಾವೇ ಇರಬಹುದಾಗಿತ್ತು. ಆದರೆ ಹಾಗಾಗುವದಿಲ್ಲ ನಾವಿರುವ ಪರಿಸರವನ್ನು ಸಮಾಜವನ್ನು ಕಡೆಗಣಿಸಿ, ಸಂದರ್ಭವನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳದೆ ಸೃಷ್ಟಿಸುವುದು ಸಾಧ್ಯವಾಗದ ಮಾತು.

ಬಹುಶಃ ಸಾರ್ತ್ರೆ ಎಂದು ತೋರುತ್ತದೆ, ಒಮ್ಮೆ ಹೇಳಿದ: "ಲೇಖಕರು ಕೆಲವರು ದೇವರಿಗಾಗಿ ಬರೆಯುತ್ತಾರೆ, ಇನ್ನು ಕೆಲವರು ನೆರೆಯವರಿಗಾಗಿ ಬರೆಯುತ್ತಾರೆ...ನನಗೆ ದೇವರ ಕಲ್ಪನೆಯಲ್ಲಿ ನಂಬಿಕೆಯಿಲ್ಲ; ವಾಸ್ತವವಾದ ನೆರೆಯವರಲ್ಲಿ ಸಹಾನುಭೂತಿಯುಂಟು. ಆದ್ದರಿಂದ ನಾನು ನನ್ನ ಭಾವ ಭಾವನೆ ಆಲೋಚನೆ ಚಿಂತನೆಗಳನ್ನು ನನಗೇ ಸ್ಪಷ್ಟಪಡಿಸಿಕೊಳ್ಳಲು ಬರೆಯುತ್ತೇನೆ. ಈ ಸ್ಪಷ್ಟಗೊಂಡ ಸೃಷ್ಟಿಯಿಂದ ನನ್ನ ಓದುಗರಿಗೆ ಸಂತೋಷ, ತಿಳುವಳಿಕೆಗಳ ಜೊತೆಗೆ ಅವರ ವಿಚಾರಗಳನ್ನು ಉಜ್ಜೀವಿಸಿಕೊಳ್ಳಲು ಒಂದು ಅವಕಾಶ ದೊರೆಯಬಹುದೆಂದು ಆಶಿಸುತ್ತೇನೆ. ನನ್ನ ಸಾಹಿತ್ಯ ಸೃಷ್ಟಿ ಎಲ್ಲವೂ ನಾನು ನನ್ನ ಓದುಗರೊಡನೆ ನಡೆಸುವ ಸಂವಾದ. ಆದರೆ ಅದರಲ್ಲಿ ವಾದವಿರುವದಿಲ್ಲ, ಸಲ್ಲಾಪವಿರುತ್ತದೆ. ●



ಭಾಗ್ಯವಂತರು


ಬಸ್ಸು ಗಕ್ಕನೆ ನಿಂತು, ನಿದ್ದೆಯಲ್ಲಿದ್ದವರ
ಅನಾಮತ್ ತಳ್ಳಿದಂತಾಗಿ, ಎದುರಿನ ಕೊಳವಿ
ಬಡಿದು ಮುಸುಡಿಗೆ, ಹಾ ಗಡಬಡಿಸಿ ಎದ್ದಾಗ,
ಇಳಿ ರಾತ್ರಿ, ಚಳಿ, ಸುತ್ತ ನೀರವ ಕಗ್ಗತ್ತಲು;
'ಏನಾಯ್ತು?' 'ಏನಾಯ್ತು?' ಗುಜುಗುಜು ಕಕ್ಕಾಬಿಕ್ಕಿ!
ತಟ್ಟನೆ ಮಂಕು ದೀಪ ಹೊತ್ತಿ, ಧಡಾರೆಂದು
ತೆರೆದು ಬಾಗಿಲು ದಡದಡನೆ ಒಳ ನುಗ್ಗಿದರು
ನಾಲ್ಕಾರು ಮಂದಿ, ಯಮದೂತರೊ? ದೈತ್ಯರೊ?
ಮುಖವಾಡ ತೊಟ್ಟ ಉರಿಗಣ್ಣ ಧಾಂಡಿಗರು;
ಅವರ ಕೈಯಲ್ಲಿ ಲಕಲಕ ಹೊಳೆವ ಚಾಕು
ಬಂದೂಕು ಪಿಸ್ತೂಲು ಸಲಾಕೆ ಉಕ್ಕಿನುಗುರು;
ಕಂಡದ್ದೇ ತಡ ನಮ್ಮ ಜೀವ ಹೌಹಾರಿ,
ಬೆವರೊಡೆದು, ಪಸೆಯಾರಿ, ಕುಸಿದು ಕೆಲವರು,
ದಂಗಾಗಿ ಹಲವರು, ಕಿಟಾರನೆ ಚೀರಿ ಮಕ್ಕಳು,
ಕುಂಯ್ಗುಡಲು ಹೆಂಗಸರು, 'ಖಾಮೋಷ್!....'
ಗುಡುಗಿದ ಡಕಾಯಿತರ ತಂಡದ ಮುಖಂಡ,
'ತೆಕ್ಕೊಡಿ ಕೂಡಲೇ ಎಲ್ಲ ಹಣ ಒಡವೆ'
ಗಂಡಸರು ಪರ್ಸುಗಳ, ಹೆಂಗಸರು ಒಡವೆಗಳ
ಸರಸರ ತೆಗೆದು ಅವರ ಕೈಚೀಲ ತುಂಬಿದೆವು;

ಐದೇ ನಿಮಿಷ! ಐದು ಯುಗವೊ? ಬಂದವರು
ಕತ್ತಲ ಲೋಕದವರಂತೆ ಕಣ್ಮರೆಯಾದರು;
ಕೆಲವು ಕ್ಷಣ ಬಸ್ಸೆಲ್ಲ ಸ್ತಬ್ಧ! ನಿಶ್ಶಬ್ದ!
ನಂತರ ನಿಧಾನ ಜೀವ ಸಂಚಾರ, ನಿರಾಳ
ನಿಟ್ಟುಸಿರು, ಎಲ್ಲೆಡೆ ಪ್ರಸನ್ನತೆ, ನಗೆ:
'ಎಂಥಾ ದಯಾಳುಗಳು ಡಕಾಯಿತರಾದರೂ!
ಗುಂಡಿಕ್ಕಲಿಲ್ಲ, ಘೋಷಣೆ ಕೂಗಿ ಬಸ್ಸಿಗೇ
ಬೆಂಕಿಯಿಡಲಿಲ್ಲ, ಜೀವಂತ ಸುಡಲಿಲ್ಲ, ಸದ್ಯ!
ಭಾಗ್ಯವಂತರು ನಾವು!' ಎಂದು ಭುವನೇಶ್ವರಿಯ
ಮನಸಾರೆ ನೆನೆನೆನೆದು ವಂದಿಸಿದೆವು.

❋ ಬಿ. ಆರ್. ಲಕ್ಷ್ಮಣರಾವ್

ಅದ್ಯತೆಯೋ..

ರಾಜಶೇಖರ ಭೂಸನೂರಮಠ



ನನಗೆ ಹದಿನಾಲ್ಕನೆಯ ಹೆರಿಗೆಯಾಗಿತ್ತು. ಸಮಸಂಖ್ಯೆಯಾಗಿದ್ದರಿಂದ ಹೆಣ್ಣು ಕೂಸೆಂದು ಹೇಳಬೇಕಾಗಿಲ್ಲ. ನನ್ನ ಓರಿಗೆಯವರಲ್ಲಿ ಎಷ್ಟೋ ಜನಕ್ಕೆ ಮದುವೆಯ ಲೈಸೆನ್ಸ್ ಸಿಕ್ಕಿದೆ. ನಲವತ್ತು ದಾಟಿದ್ದರೂ ಇನ್ನೂ ಇಪ್ಪತ್ತು ಮಕ್ಕಳ ಕೋಟಾ ನಾನು ಮುಗಿಸಿದ್ದಿಲ್ಲ. ನಂತರವೇ ಆ ಲೈಸೆನ್ಸ್‌ಗೆ ನಾನು ಅರ್ಹಳಾಗುತ್ತೇನಷ್ಟೇ? ಈ ಇಪ್ಪತ್ತೆರಡನೆಯ ಶತಮಾನದಲ್ಲಿ ಕೂಡ ಮದುವೆ ಎಂಬ ಬಂಧನ ಸಾಧ್ಯವಿದ್ದದ್ದು ನನ್ನಂಥ ಹಳೆಯ ವಿಚಾರದವರಿಗೆ ಅನುಕೂಲ. ಆದರೆ ಹಿಂದಿನ ಕಾಲದಂತೆ ಮಕ್ಕಳು ಕೂಡ ವಿವಾಹ ಮೂಲಕವೇ ಹುಟ್ಟುವಂತಿದ್ದರೆ ಎಷ್ಟು ಸೊಗಸಾಗುತ್ತಿತ್ತೆಂದು ನನಗೆ ಹಳಹಳಿ.

ಮತ್ತು ಕಳೆದ ಶತಮಾನದಲ್ಲಿದ್ದಂತೆ ಗರ್ಭನಿರೋಧವಿದ್ದಿದ್ದರೆ...

ಈ ಶತಮಾನದಲ್ಲಿ ಕುಟುಂಬ ಯೋಜನೆಯ ಕಲ್ಪನೆ ಕೂಡ ಮಾಡಲು ಸಾಧ್ಯವಿಲ್ಲ. ಏಕೆಂದರೆ ಅದು ಎಂದೋ ಕಾನೂನು ಬಾಹಿರವಾಗಿದೆ. ಕಳೆದ ಶತಮಾನದ ತುದಿಗೆ ಜಗತ್ತಿನ ಜನಸಂಖ್ಯೆ ಇಪ್ಪತ್ತು ಬಿಲಿಯನ್ (ಹಳೆಯ ಲೆಕ್ಕದಲ್ಲಿ ಎರಡು ಸಾವಿರ ಕೋಟಿ) ದಾಟಿತಷ್ಟೇ. ಆದರೆ ಅದೇ ಕಾಲಕ್ಕೆ ಜಗತ್ತಿನ ಸರಕಾರಗಳೆಲ್ಲ ವಿಸರ್ಜಿತವಾಗಿ ಆಟೋ ಗವರ್ನ್‌ಮೆಂಟ್ ಸ್ಥಾಪನೆಯಾಯಿತಲ್ಲ? ಹೇಗೆ ನಮ್ಮ ಎಲ್ಲ ಉತ್ಪಾದನೆಗಳೂ ಆಟೋಮೇಟೆಡ್ ಇವೆಯೋ ಹಾಗೆ ನಮ್ಮ ಜಾಗತಿಕ ಸರಕಾರ ಕೂಡ. ಅಂದರೆ ದಿಕ್ಕೇಡಿ ಸರಕಾರವೆಂದರೂ ಸರಿ! (ನಾನು ಮಾನವಶಾಸ್ತ್ರಜ್ಞಳಾಗಿದ್ದರಿಂದ ಇಂಥ ವಿಷಯಗಳಲ್ಲಿ ನನಗೆ ವಿಪರೀತ ಆಸಕ್ತಿ.)

ಈ ಸರಕಾರಕ್ಕೆ ರಿಪಬ್ಲಿಕನ್/ಡೆಮಾಕ್ರಾಟಿಕ್ ಕಮ್ಯೂನಿಸ್ಟ್ ಎಂಬ ಯಾವ ಹಳೆಯ ವಿಶೇಷಣವೂ ಅನ್ವಯವಾಗುವುದಿಲ್ಲ. ಚುನಾವಣೆಗಳೂ ಇಲ್ಲ, ಮಂತ್ರಿಗಳೂ ಇಲ್ಲ, ಅಧ್ಯಕ್ಷರೂ ಇಲ್ಲ! ಎಲ್ಲವೂ ಸೂಪರ್ ಕಂಪ್ಯೂಟರ್‌ದಿಂದ ಸ್ವಯಂಚಲಿ. ನ್ಯೂಟನ್ನನ ಮೊದಲನೆಯ ನಿಯಮದ ಪ್ರಕಾರ ಒಂದೇ ವೇಗದಲ್ಲಿ, ಒಂದೇ ದಿಕ್ಕಿನಲ್ಲಿ, ತನ್ನಿಂದ ತಾನೇ ಓಡುತ್ತಿರುವ ಸರಕಾರವಿದು. ಬಹುಶಃ ಸರಕಾರ ಎಂಬ ಪದ ಕೂಡ ಈಗ ಅಲಂಕಾರಿಕ ಇರಲಿ.

ಕಳೆದ ಶತಮಾನದ ಕಳೆದ ದಶಕದಲ್ಲಿ ಬಂದನೊಬ್ಬ ವಿಕ್ಷಿಪ್ತ ವಿದ್ವಾಂಸ. ಅವನು ಸರಕಾರದ ಕಂಪ್ಯೂಟರಿಗೆ ಏನು ತಲೆ ಕೆಡಿಸಿದನೋ ಏನೋ ಇದ್ದಕ್ಕಿದ್ದಂತೆ ಅವನ ಸಮತೋಲನಾ ನಿಯಮವು ಜಾರಿಯಲ್ಲಿ ಬಂದು ಕಾನೂನಾಯಿತು.

"ಕುಟುಂಬ ಯೋಜನೆಯು ಶಿಶು ಹತ್ಯೆಗೆ ಸಮಾನ. ಸಹಜವಾದ ಸಾವು ಈಗ ನೂರು ವರ್ಷ ವಯಸ್ಸಾದರೂ ಬರುವುದಿಲ್ಲ. ಆದ್ದರಿಂದ ಜಗತ್ತಿನ ಜನಸಂಖ್ಯೆ ಸಮತೋಲದಲ್ಲಿರಬೇಕಾದರೆ ಐವತ್ತು ವರ್ಷ ತಲುಪಿದ ಎಲ್ಲರನ್ನೂ ಕಡ್ಡಾಯವಾಗಿ ಕೊನೆಗೊಳಿಸಬೇಕು." [ಇದು ಆ್ಯಂಟಿ ಫ್ಯಾಮಿಲಿ ಪ್ಲ್ಯಾನಿಂಗ್ ಮತ್ತು ಯುಥನೇಸಿಯಾ ಆ್ಯಕ್ಟ್ ಎಂದು ಪ್ರಸಿದ್ಧ.]

[ಏನೋ ಹೇಳಲು ಪ್ರಾರಂಭಿಸಿ, ಎಲ್ಲಿಗೋ ಹೋದೆ, ಕ್ಷಮಿಸಿರಿ.]

ಎಲ್ಲಿದ್ದೆ? ಹಾಂ, ನನಗೆ ಹದಿನಾಲ್ಕನೆಯ ಹೆರಿಗೆಯಾಗಿದೆಯಷ್ಟೇ? ಹುಟ್ಟುವ ಶಿಶುವಿನ ಲಿಂಗವನ್ನು ನಾವೇ ನಿರ್ಧರಿಸಬಹುದಾದ್ದರಿಂದ. ಸಮತೋಲನಾ ನಿಯಮದ ಪರಿಣಾಮವಾಗಿ ನಾವು ಮೊದಲೊಂದು ಗಂಡು, ನಂತರ ಒಂದು ಹೆಣ್ಣು, ನಂತರ ಒಂದು ಗಂಡು... ಹೀಗೆ ಒಂದು ಕ್ರಮದಲ್ಲಿ ಹೆರುತ್ತ ಹೋಗಬೇಕಾಗುತ್ತದೆ. ಮದುವೆಯಾದರೆ ಭಾವನಾ ಬಂಧನಗಳು ಮಕ್ಕಳ ಬೆಳವಣಿಗೆಯನ್ನು ಮತ್ತು ವ್ಯಕ್ತಿತ್ವವನ್ನು ಅಯಾಂತ್ರೀಕರಿಸುವ (ಅಕ್ರಮಗೊಳಿಸುವ?)

ಅವನ ಕವಿತೆಗಳು ನನಗೊಬ್ಬಳಿಗೇ ಮೀಸಲಾಗಿದ್ದವು. ಏಕೆಂದರೆ ಈಗ ಕಾವ್ಯ ರಚಿಸಲು ಪರವಾನಗಿ ಇಲ್ಲ, ಆದರೆ ಸಾಹಿತ್ಯದ ವಿದ್ವಾಂಸನಾಗಲು ಸಾಧ್ಯವಿದೆ. ಆದ್ದರಿಂದ ಕಾವ್ಯ ಮೀಮಾಂಸಕನಾದ ನನ್ನಾತ ಗುಟ್ಟಾಗಿಯೇ ಕವಿತೆ ಬರೆದು ನನ್ನ ಹೃದಯಕ್ಕೆ ಲಗ್ಗೆ ಹಾಕಿದ್ದ ಮತ್ತು ನನಗರಿವಿಲ್ಲದೇ ನಾನು ಆತನ ಪ್ರೇಮಪಾಶದಲ್ಲಿ ಬಿದ್ದುಬಿಟ್ಟೆ! ಅಂಥ ಹೃದಯವಲ್ಲಭನೊಡನೆ ಕಾಮ ಹೇಗೆ ಸಾಧ್ಯ? ಆತನನ್ನು ಮದುವೆಯಾಗಲು ಕಾನೂನು ಅಡ್ಡವಿತ್ತು, ಹಿಂದಿನ ಕಾಲದಲ್ಲಿ ಹಿರಿಯರು ಅಥವಾ ಸಮಾಜ ಅಡ್ಡಬಂದಂತೆ.....

ತಲೆಮಾರುಗಳ ಬಿರುಕು ಅಗಲವಾಗತೊಡಗಿದ್ದ ಈ ಶತಮಾನಗಳಲ್ಲಿ ಜನರು ನಾಲ್ವತ್ತಕ್ಕೇ ನಿರುಪಯುಕ್ತರಾಗ ತೊಡಗಿದ್ದೂ ನಿಜ. ಜರಾಶಾಸ್ತ್ರದ ಅದ್ಭುತಗಳಿಂದಾಗಿ ಈ ಶತಮಾನದಲ್ಲಿ ಯಾರಿಗೂ ಮುಪ್ಪು ಬರುವುದಿಲ್ಲ. ಆದರೆ ಮನಸ್ಸಿನ ಮುಪ್ಪಿಗೆ ಔಷಧಿ ಎಲ್ಲಿದೆ?

ಬದುಕುವ ಸ್ವಾತಂತ್ರ್ಯ ಕಳೆದುಕೊಂಡ ನಮ್ಮ ಜನರಿಗೆ ಯುಥನೇಸಿಯಾ ಒಂದು ನೆತ್ತಿಯ ಮೇಲೆ ತೂಗುವ ಕತ್ತಿಯಾಗಿದೆ. ಆದರೆ ಸಾವನ್ನೂ ಆಕರ್ಷಕವಾಗಿ ಮಾಡಲು ಪ್ರಯತ್ನಿಸಲಾಗುತ್ತಿದೆ. ಸಮಾಧಿಯೋಗ, ಹರಾಕಿರಿ (ಜಪಾನಿನ ಪದ್ಧತಿ) ಈಗ ಜನಪ್ರಿಯವಾಗಿವೆ. ಆತ್ಮಹತ್ಯೆ ಅಪರಾಧವಾಗಿರದೆ ಸ್ವಾಗತಾರ್ಹವಾಗಿದೆ 'ಸಂತಾನಕ್ಕಾಗಿ ಬದುಕಿರಿ. ಮಕ್ಕಳಿಗಾಗಿ ಸಾಯಿರಿ' ಎಂಬ ಘೋಷಣೆ ಈಗ ಸರಕಾರದ ಸೂತ್ರವಾಗಿದೆ.

ಸಾಧ್ಯತೆ ಇರುವುದರಿಂದ ನಮಗೆ ಆ ಸ್ವಾತಂತ್ರ್ಯವೇ ಇಲ್ಲ.

ಅಯ್ಯೋ ದೇವರೇ! ಪರಸ್ಪರ ಮೆಚ್ಚಿಕೊಂಡು ಪ್ರೇಮಿಸಿ ನಮ್ಮವೇ ಮಕ್ಕಳನ್ನು ಹೆರುವಂತಾದರೆ ಎಷ್ಟು ಸೊಗಸಾಗುತ್ತಿತ್ತು! ಮಹಿಳೆ ಇಪ್ಪತ್ತು ಮಕ್ಕಳನ್ನು ಹೆತ್ತ ಮೇಲೆಯೇ (ವಯಸ್ಸಿನ ನಿರ್ಬಂಧವಿಲ್ಲದೆ) ಮತ್ತು ಪುರುಷನು ನಲ್ವತ್ತು ವರ್ಷ ವಯಸ್ಸಾದ ಮೇಲೆ ಮಾತ್ರ ಮದುವೆಯಾಗಬಹುದು. ಅಂದರೆ ಹೆಚ್ಚೆಂದರೆ ಹತ್ತು ವರ್ಷ ಮಾತ್ರ ವೈವಾಹಿಕ ಜೀವನ ಸಾಧ್ಯ.

ಅಷ್ಟೊತ್ತಿಗೇ ಸುಸ್ತಾಗಿರುವ ಈಗಿನವರಿಗೆ ಮದುವೆ ಎಲ್ಲಿ ಬೇಕಾಗಿದೆ? ಯಾವ ಸುಖಕ್ಕಾಗಿ ಬೇಕಾಗಿದೆ?

[ಕ್ಷಮಿಸಿರಿ, ಮತ್ತೆ ಕಥೆಯ ಜಾಡು ಬಿಟ್ಟೆನೆಂದು ಕಾಣುತ್ತದೆ.]

೨

ಜುಲೈ ೨೫, ೨೧೬೦. ಅದೇಕೋ ನನ್ನ ಎಲ್ಲ ಮಕ್ಕಳ ನೆನಪು ಕಾಡತೊಡಗಿದೆ. ತೊಟ್ಟಿಲಲ್ಲಿ ನನ್ನ ಆರು ತಿಂಗಳ ಮಗಳು ಸುಖವಾಗಿ ಮಲಗಿದ್ದಾಳೆ. ನನ್ನ ಹಿರಿಯ ಮಗ ಈಗ ಎಲ್ಲಿದ್ದಾನೋ! ಅವನ ತಂದೆ? ಮಗಳು? ಉಳಿದವರು? ಅವರಿಗೆಲ್ಲ ಒಟ್ಟು ಎಷ್ಟು ಮಕ್ಕಳಾಗಿರಬಹುದು? ಹಿಂದಿನ ಕಾಲದಲ್ಲಿಯಂತೆ ಈಗ ನಮಗೆ ವಂಶಾವಳಿ ಸಿಗುವದೇ ಇಲ್ಲ. ಎಲ್ಲವೂ ಸರಕಾರೀ ದಾಖಲೆಗಳಲ್ಲಿ.

ಇನ್‌ಸ್ಟಿಟ್ಯೂಟಿಗೆ ಹೋಗಲು ಸಮಯವಾಗಿದೆ. ವಾರಕ್ಕೆ ಮೂರು ದಿನಗಳ ಕೆಲಸ. ಹೆರಿಗೆಯ ರಜೆ ನಿನ್ನೆ ಮುಗಿಯಿತು. ಈ ಮಗಳನ್ನು ನಾನು ಇನ್ನು ಆರು ತಿಂಗಳು ಮಾತ್ರ ಇಟ್ಟುಕೊಳ್ಳಬಹುದು. ನಾನಿರುವುದು ಇನ್‌ಸ್ಟಿಟ್ಯೂಟಿನಲ್ಲೇ. (ಅಂದಂತೆ ಈಗ ಸ್ವತಂತ್ರ ಮನೆಗಳೆಲ್ಲಿವೆ? ಮನೆಗೂ ಕಚೇರಿಗೂ ವ್ಯತ್ಯಾಸವೆಲ್ಲಿದೆ?) ಹೆರಿಗೆಯಾದ ನಂತರ ಒಂದು ವರ್ಷ ಮೆಟ್‌ಹೋಮಿನಲ್ಲಿರಬಹುದು. ಮಗುವನ್ನು ಇನ್‌ಸ್ಟಿಟ್ಯೂಟಿಗೆ ಒಯ್ಯುವಂತಿಲ್ಲ. ಕೆಲಸದ ವೇಳೆ ಬರಿ ಮೂರೇ ತಾಸುಗಳಾದರೂ, ಅಷ್ಟು ಹೊತ್ತು ಮಗಳನ್ನು ಬಿಟ್ಟಿರುವುದು ನನ್ನಿಂದಾಗದು.

ಗುಂಡಿ ಒತ್ತಿ ಮ್ಯೂಟರ್ ತರಿಸಿದೆ. (ಕಮ್ಯೂಟರದ ಹ್ರಸ್ವ ರೂಪವೇ ಮ್ಯೂಟರ್, ಹಿಂದಿನ ಕಾಲದ ಮೋಟಾರಿನಂಥ ವಾಹನ.) ಮಗಳನ್ನು ರೋಬಟ್ ದಾದಿಗೊಪ್ಪಿಸಿ ಜಾಗ ಬಿಟ್ಟೆ. ಮೆಟ್‌ಹೋಮಿನ ಬಾಗಿಲು ಯಥಾ ಪ್ರಕಾರ ತಂತಾನೆ ತೆರೆದುಕೊಂಡಿತು; ಮ್ಯೂಟರಿನಲ್ಲಿ ಕಾಲಿಟ್ಟೆ.

ಇನ್ನೂ ನೆಟ್ಟಗೆ ಕುಳಿತಿರಲಿಲ್ಲ ಕೂಡ—ಮ್ಯೂಟರ್, ರೊಯ್ಯಗೆ ಆಕಾಶಕ್ಕೆ ನೆಗೆಯಿತು! ಮ್ಯೂಟರ್ ನೆಲದ ಮೇಲೆ, ನೀರಿನಲ್ಲಿ ಮತ್ತು ಆಕಾಶದಲ್ಲಿ ಚಲಿಸಬಲ್ಲದೆಂದು ನನಗೆ ಗೊತ್ತಿದೆ. ಆದರೆ ಮೆಟ್‌ಹೋಮಿನಿಂದ ಇನ್‌ಸ್ಟಿಟ್ಯೂಟಿಗೆ ಹತ್ತು ಕಿಲೋ ಮೀಟರ್ ಕೂಡ ದೂರವಿಲ್ಲ. ಮ್ಯೂಟರದ ರೋಬಟ್ ಚಾಲಕಕ್ಕೆ ಇದು ಗೊತ್ತಿರಬೇಕು. ನೂರು ಕಿಲೋ ಮೀಟರಿಗಿಂತ ದೂರ ಹೋಗುವದಿದ್ದರೆ ಮಾತ್ರ ಏರ್‌-ಬೋರ್ನ್ ಆಗಬಹುದೆಂಬ ನಿಯಮವಿದೆ.

ಹಾಗಾದರೆ ಏನಿದು ವಿಚಿತ್ರ? ಯಾವ ರೂಲಾದರೂ ಬದಲಾಗಿದೆಯೇ? ಆದರೆ ಹತ್ತೇಕೆ, ಇಪ್ಪತ್ತು ಕಿಲೋ ಮೀಟರ್ ಸಾಗಿದ್ದರೂ ಮ್ಯೂಟರ್ ಹಾರುತ್ತಲೇ ಇದ್ದದ್ದರಿಂದ ನಾನು ಗಾಬರಿಯಾದೆ; ಇಂಥ ಅನಿರೀಕ್ಷಿತ ಪ್ರಸಂಗದಲ್ಲಿ ಮತ್ತೇನು ಮಾಡಲು ಸಾಧ್ಯ? ದಿಕ್ಕುಗಾಣದೆ ನಾನು ಅಲಾರಾಮ್ ಗುಂಡಿ ಒತ್ತಲು ಕೈ ಚಾಚಿದೆ.

ಆದರೆ ನನ್ನ ಕೈ ಬಟನ್ ಮುಟ್ಟಲೇ ಇಲ್ಲ! ಅಂಗೈಯಲ್ಲಿ ಜುಮ್‌ಜುಮ್ಮೆಂದು ವಿದ್ಯುತ್ತು ಹೊಡೆದಂತಾಯಿತು. ಷಾಕ್‌ಗನ್! ಚೀರಲು ಬಾಯಿ ತೆರೆದೆ—ದನಿಯೇ ಹೊರಡಲಿಲ್ಲ! ರೋಬಟ್ ಚಾಲಕನ ಕ್ಯಾಬಿನ್ನಿನಿಂದ ಬಂದಾತ ನನ್ನ ಬಾಯಿ ಮುಚ್ಚಿದ್ದಷ್ಟೇ ನೆನಪು.

೩

ನನಗೆ ಎಚ್ಚರವಾದಾಗ ಅಪಹರಣಕಾರ ಪಕ್ಕದಲ್ಲಿಯೇ ಕುಳಿತು ನನ್ನನ್ನು ಉಪಚರಿಸತೊಡಗಿದ್ದ. ಆತ ನನ್ನನ್ನು ಏತಕ್ಕೆ ಕಿಡ್‌ನ್ಯಾಪ್ ಮಾಡಿದ್ದನೋ ಗೊತ್ತಾಗಲಿಲ್ಲ. ಆದರೆ ಅನಿರೀಕ್ಷಿತವಾಗಿ ನನಗೆ ಅವನ ಮೇಲೆ ಸಿಟ್ಟು ಬರದೆ ಅನುಕಂಪ ಮೂಡಿತು. ಆತ ನನ್ನನ್ನೇ ಸ್ನೇಹದಿಂದ ನೋಡುತ್ತಾ, "ಅಮ್ಮಾ, ನಿನ್ನನ್ನು ಹೀಗೆ ಅಪಹರಿಸಿಕೊಂಡು ಹೊರಟದ್ದಕ್ಕೆ ಕ್ಷಮಿಸು," ಎಂದ.

ಅಮ್ಮಾ! ಎಂಥ ಮಧುರ ಸಂಬೋಧನೆ! ಹೀಗೆ ಬೆಳೆದ ಮಕ್ಕಳಿಂದ 'ಅಮ್ಮಾ' ಎಂದು ಕರೆಸಿಕೊಳ್ಳುವ ಭಾಗ್ಯ ಈ ಶತಮಾನದವರಿಗೆಲ್ಲಿದೆ?

"ನೀ—ವಾ—ರು? ನೀನಾರು? ಯಾರು?" ನಾನು ತಡವರಿಸಿದೆ.

"ನಾನು ನಿನ್ನ ಹಿರಿಯ ಮಗನಮ್ಮಾ," ಆತ ಕಕ್ಕುಲತೆಯಿಂದ ಉತ್ತರಿಸಿದ.

"ಸುಳ್ಳು! ನನ್ನ ಮಕ್ಕಳೆಲ್ಲಾ ದರಿದ್ರ ಸರಕಾರದ ವಶದಲ್ಲಿವೆ. ನಾನು ಆ್ಯಂಥ್ರಾಪಾಲಾಜಿಸ್ಟ್ ಎಂದು ಗೊತ್ತುಮಾಡಿಕೊಂಡು ನೀನು ನನ್ನನ್ನು ಮೋಸಗೊಳಿಸಲು ಬಂದಿರಬಾರದೇಕೆ?" ನಾನು ಒಳಗಿನ ಭಾವನೆಗಳನ್ನು ಅದುಮಿಕೊಂಡು ಬೇಕೆಂತಲೇ ಕಟುವಾಗಿ ಕೇಳಿದೆ.


ಆತ ಸುಮ್ಮನೆ ನಕ್ಕ!

ಹೌದು! ಅದೇ ನಗೆ, ಅದೇ ಮಿಂಚುಗಣ್ಣುಗಳು! ಅದೇ ಹೇರ್‌ಸ್ಟೈಲ್... ಈತ ನನ್ನ ಮೊದಲ ಶಿಶು ಎಂಬುದರಲ್ಲಿ ಸಂಶಯವಿಲ್ಲ! ಸಂಪೂರ್ಣವಾಗಿ ತನ್ನ ತಂದೆಯನ್ನು ಹೋಲುತ್ತಿದ್ದಾನೆ.

೪

ಇಪ್ಪತ್ತೈದು ವರ್ಷಗಳ ಹಿಂದಿನ ಮಾತು. ಜಗತ್ತು ಅದೇ ಆಗ ಇಪ್ಪತ್ತೆರಡನೆಯ ಶತಮಾನವನ್ನು ಕಾಲಿಟ್ಟಿತ್ತು. ನಾನು ಕೂಡಾ ಅದೇ ಯೌವ್ವನಾವಸ್ಥೆ ತಲುಪಿದ್ದೆ. ಕಾಮವು ಯಥೇಷ್ಟವಾಗಿರುವ (ಕಡ್ಡಾಯವೂ ಆಗಿರುವ!) ದಿನಗಳಲ್ಲಿ ನನ್ನ ಕೋಮಲ ಭಾವನೆಗಳನ್ನು ಅರಿತುಕೊಳ್ಳಬಲ್ಲ ಸಹೃದಯಿ ಎಲ್ಲಿದ್ದಾನೆ? ಹಿಂದಿನ ಕಾಲದಲ್ಲಿ ಕಾಮವನ್ನೂ ಪ್ರೇಮವನ್ನೂ ಕಲುಷಿ ಸಮೀಕರಿಸುತ್ತಿದ್ದಂತೆ. ಹಾಗೆ ನೋಡಿದರೆ ಆಗಿನ ಸಾಹಿತ್ಯಸಂಸ್ಕೃತಿಗಳಲ್ಲಿ, ಸಾಮಾಜಿಕ ಚಟುವಟಿಕೆಗಳಲ್ಲಿ, ಪ್ರೇಮದ ಕೊನೆಯ ಹಂತವಾಗಿ ಕಾಮವು ಜನಿಸುತ್ತಿತ್ತಂತೆ. ಎಷ್ಟೇ ಆದರ್ಶೀಕರಿಸಲ್ಪಟ್ಟಿದ್ದರೂ, ವಿವಾಹವು ಕೂಡ ಕಾಮಕ್ಕೆ ತಳ-ಹದಿಯಾಗಿತ್ತಂತೆ.

ಮಾನವ ಶಾಸ್ತ್ರಜ್ಞಳಾದ ನನಗೆ ಇಂಥ ಅಧ್ಯಯನ ಬಹಳ ಮಹತ್ವದ್ದಾಗಿತ್ತೆಂದು ಬೇರೆ ಹೇಳಬೇಕಾಗಿಲ್ಲ. ಪ್ರೇಮಕ್ಕೂ, ವಿವಾಹಕ್ಕೂ, ಕಾಮಕ್ಕೂ ಇರುವ ಇರಬಹುದಾದ- ಇರಬೇಕಾದ ಸಂಬಂಧದ ಬಗ್ಗೆ ಆಗಲೇ ನಾನು ಸಾಕಷ್ಟು ತಲೆಕೆಡಿಸಿಕೊಳ್ಳತೊಡಗಿದ್ದೆ. ಕಾಮಕ್ಕೆ ವ್ಯವಸ್ಥೆ ಮುಕ್ತತೆ ಇಲ್ಲದ್ದರಿಂದ ಹಿಂದಿನ ಸಾಮಾಜಿಕರಲ್ಲಿ ಪ್ರೇಮದ ನೆವದಲ್ಲಿ ಕಾಮವೇ ವಿಜೃಂಭಿಸುತ್ತಿತ್ತು ಅಥವಾ ಫ್ರಾಯ್ಡ್ ತೋರಿ



ಸಿದಂತೆ ಒಂದು ಆಬ್ಸೇಶನ್ ಆಗಿತ್ತು' ನಮ್ಮ ಶತಮಾನದಲ್ಲಿ ಕಾಮವು ಪ್ರೇಮದ ಗೌಣಭಾಗ ವಾಗಿದೆ ಮಾತ್ರ. ಇರಲಿ.

ಕಾನೂನಿನ ಪ್ರಕಾರ ನಾವಾರೂ ನಮ್ಮ ಮಕ್ಕಳ ತಂದೆಯರನ್ನು ಆರಿಸುವಂತಿಲ್ಲ. ಅದು ಮ್ಯಾಟ್ರಿಬ್ಯೂರೋದ ಕೆಲಸ. ಅಲ್ಲಿಯ ಕಂಪ್ಯೂಟರು ಯಾರು ಯಾರು ಜೋಡಿಗಳೆಂದು ಆರಿಸುತ್ತದೋ ಅವರೇ ಕಡ್ಡಾಯವಾಗಿ ಒಂದು ಮಗುವಿನ ಮಾತಾಪಿತರಾಗಬೇಕು. ಪ್ರತಿಯೊಂದು ಹೆರಿಗೆಗೂ ಬೇರೆ ಬೇರೆ ಪಾರ್ಟನರರು. ಥ್ಯಾಂಕ್ ಗಾಡ್! ಹೋದ ಶತಮಾನದ ಟೆಸ್ಟ್ ಟ್ಯೂಬ್ ಬೇಬಿಗಳ ಹಾವಳಿ ಇಲ್ಲ. ನಮ್ಮ ಮಗುವನ್ನು ಪೂರ್ಣ ಒಂಬತ್ತು ತಿಂಗಳು ನಮ್ಮ ಗರ್ಭದಲ್ಲಿಯೇ ಬೆಳೆಸುವ ಸ್ವಾತಂತ್ರ್ಯವಾದರೂ ಇದೆಯಲ್ಲ?

ನನ್ನ ಮೊದಲು ಮಗುವಿನ ಪಾರ್ಟ್ನರ್'ನ ಯಾರೋ ಎಂದು ನಾನು ಮುಜುಗರಪಟ್ಟದ್ದು ಆ ವಯಸ್ಸಿಗೆ ಅಸಹಜವಾಗಿರಲಿಲ್ಲ. ಸಾಧ್ಯವಾದರೆ ಆತನನ್ನು ಪ್ರೀತಿಸಬಾರದೆಂದು ಕೂಡ ನಿರ್ಧರಿಸಿದ್ದೆ. ಹೇಗಿದ್ದರೂ ಈಗ ಎಲ್ಲವೂ ಆಟೋಮೇಟೆಡ್!

ಆದರೆ ಒಬ್ಬ ಯುವತಿ ವಾಸ್ತವಲೋಕದಿಂದ ಕನಸಿನ ಲೋಕಕ್ಕೆ ಕರೆದೊಯ್ಯಬಲ್ಲ ಒಬ್ಬ ಕವಿಯನ್ನು ಪ್ರೀತಿಸದಿರಲು ಹೇಗೆ ಸಾಧ್ಯ? ನನ್ನ ಜೀವನದಲ್ಲಿ 'ಯಾಂತ್ರಿಕ ರೀತಿಯಲ್ಲಿ (ಕಂಪ್ಯೂಟರ್ ಕೃಪಾಕಟಾಕ್ಷದಿಂದ) ಪ್ರವೇಶಿಸಿದ ಆತ ಒಬ್ಬ ಕವಿಯಾಗಿದ್ದ!

ಅವನ ಕವಿತೆಗಳು ನನಗೊಬ್ಬಳಿಗೇ ಮೀಸಲಾಗಿದ್ದವು. ಏಕೆಂದರೆ ಈಗ ಕಾವ್ಯ ರಚಿಸಲು ಪರವಾನಿಗೆ ಇಲ್ಲ. ಆದರೆ ಸಾಹಿತ್ಯದ ವಿದ್ವಾಂಸನಾಗಲು ಸಾಧ್ಯವಿದೆ. ಆದ್ದರಿಂದ ಕಾವ್ಯ ಮೀಮಾಂಸಕನಾದ ನನ್ನಾತ ಗುಟ್ಟಾಗಿಯೇ ಕವಿತೆ ಬರೆದು ನನ್ನ ಹೃದಯಕ್ಕೆ ಲಗ್ಗೆ ಹಾಕಿದ್ದ ಮತ್ತು ನನಗರಿವಿಲ್ಲದೆ ನಾನು ಆತನ ಪ್ರೇಮ ಪಾಶದಲ್ಲಿ ಬಿದ್ದುಬಿಟ್ಟೆ!

ಅಂಥ ಹೃದಯವಲ್ಲಭನೊಡನೆ ಕಾಮ ಹೇಗೆ ಸಾಧ್ಯ? ಆತನನ್ನು ಮದುವೆಯಾಗಲು ಕಾನೂನು ಅಡ್ಡವಿತ್ತು, ಹಿಂದಿನ ಕಾಲದಲ್ಲಿ ಹಿರಿಯರು ಅಥವಾ ಸಮಾಜ ಅಡ್ಡ ಬಂದಂತೆ.

ನಮ್ಮ ಅಂದಿನ ಭೇಟಿಗೆ ಅವನ ಕವಿಹೃದಯ ರೋಸಿ, ರೊಚ್ಚಿಗೆದ್ದಿತು. ಆತನಿಗೇನು ಹೆಚ್ಚು ವಯಸ್ಸಾಗಿರಲಿಲ್ಲ. ಬರಿ ಇಪ್ಪತ್ತೈದು. (ನಾನು ಹದಿನಾರರ ಹೊಸ್ತಿಲಲ್ಲಿದ್ದೆ.) ಆಶ್ಚರ್ಯವೆಂದರೆ ಆತನಿನ್ನೂ ಬ್ರಹ್ಮಚಾರಿಯಾಗಿದ್ದ — ಅಂದರೆ ಕಾನೂನಿನ ಕಣ್ಣು ತಪ್ಪಿಸಿ! ಅವನು ಹಾಗೇ ಉಳಿದಿದ್ದರೆ ಎಷ್ಟು ಚೆನ್ನ ಎಂದು ನನಗನಿಸುತ್ತಿತ್ತು.

ಗುಟ್ಟಾಗಿಯೇ ಕವಿತೆ ಕಾವ್ಯ ಸಂಬಂಧ ಪ್ರಾರಂಭಿಸಿದಂತೆ ನಾವು ಗುಟ್ಟಾಗಿ ಮದುವೆಯಾದೆವು: ಹಿಂದಿನವರ ಗಾಂಧರ್ವವಿವಾಹ ನಮ್ಮದು. ಕಾಲದ ವಿಪರ್ಯಾಸ ನೋಡಿರಿ! ಮದುವೆಯಾಗಿದ್ದರಿಂದ, ಮಕ್ಕಳನ್ನು ಹೆರಬಾರದೆಂದು ನಾನು ಆಶಿಸಿದ್ದೆ. ಆದರೆ ಕಾನೂನಿನ ಕ್ರಮಕ್ಕೊಳಗಾಗಿ ಮೊದಲ ಮಗುವನ್ನು ಹೆರಲೇಬೇಕಾಯಿತು. ನನ್ನ ಪತಿಗೆ ಮಾತ್ರ ಮಗ ಬೇಕಾಗಿದ್ದ. ಅವನಿಗೆ ಸಂತೋಷವಾದರೆ ನನಗೂ ಸಂತೋಷವೇ.

ಮಗುವನ್ನು ಗರ್ಭದಲ್ಲಿ ಧರಿಸಿದ ಕೆಲವೇ ದಿನಗಳಲ್ಲಿ ನಿರೀಕ್ಷಿತ ನೋಟೀಸು ಬಂದಿತು. ಅದು ಕಡ್ಡಾಯವಾಗಿ ಅಗಲಿಸುವ ನೋಟೀಸು. ನಮಗೆಷ್ಟು ನೋವಾಯಿತು! ವಿರಹವೇದನೆ ಹೇಗೆ ಸಹಿಸಿಕೊಳ್ಳಲಿ? ಇಬ್ಬರೂ ಆತ್ಮಹತ್ಯೆಗೆ ಕೂಡ ಪ್ರಯತ್ನಿಸಿದೆವು. ಆದರೆ ನಮ್ಮ ಮಗುವಿನ ಜನನವಾಗುವವರೆಗೆ ಆ ಮೂರ್ಖತನ ಬೇಡವೆಂದು ನಿರ್ಧರಿಸಿದೆವು. ಮುಂದೆಂದಾದರೂ ಕೂಡೋಣವೆಂದು ಮಾತು ಕೊಟ್ಟು ಬೇರ್ಪಟ್ಟೆವು.

ನಮ್ಮ ಕನಸು ನನಸಾಗಬೇಕಾದರೆ ನಾನು ಇನ್ನೂ ಆರು ಮಕ್ಕಳನ್ನಾದರೂ ಹೆರಬೇಕು. ಈ ಇಪ್ಪತ್ನಾಲ್ಕು ವರ್ಷಗಳಲ್ಲಿ ಅವನನ್ನು ಶೋಧಿಸಲು ಎಷ್ಟೋ ಪ್ರಯತ್ನಿಸಿ ವಿಫಲಳಾಗಿದ್ದೇನೆ. ಆತ ಸಿಕ್ಕರೆ ಕೊನೆಗೊಮ್ಮೆ ಕಾನೂನುಬದ್ಧವಾಗಿಯೇ ಮದುವೆಯಾಗಬಹುದು. ಅಥವಾ? ಮರೆತೇಬಿಟ್ಟಿದ್ದೆ! ಯುಥನೇಸಿಯಾ! ಎಂಥ ಕ್ರೂರ ಕಾನೂನು? ನನ್ನಾತನಿಗೆ (ಅವನೆಲ್ಲಿದ್ದಾನೆ?) ಐವತ್ತು ತುಂಬುತ್ತ ಬಂದಿದೆ. ಅವನು ಈಗ ಸಿಕ್ಕರೂ ಮತ್ತೆ ಕಳೆದುಕೊಳ್ಳಲೇಬೇಕು. ಅಯ್ಯೋ, ಕ್ರೂರ ವಿಧಿಯೇ!

ಶಿ


"ನಿನ್ನನ್ನು ಅಪ್ಪನ ಕಡೆಗೆ ಕರೆದುಕೊಂಡು ಹೊರಟಿದ್ದೇನಮ್ಮಾ," ಎಂದು ನನ್ನ ಅಪಹರಣಕಾರ ಮಗನು ಹೇಳಿದಾಗ ನನ್ನ ಕಿವಿಗಳನ್ನು ನಾನು ನಂಬಲೇ ಇಲ್ಲ.

"ನಿಜವೇ ಮಗೂ?" ಎಂದು ಸಂಭ್ರಮದಿಂದ ಕೇಳಿದೆ.

"ಹೌದಮ್ಮಾ. ನಿನ್ನ ಗಂಡನ ಕಡೆಗೆ."

ನನ್ನ ಕಣ್ಣು ತುಂಬಿ ಬಂದವು. ನಾವಿಬ್ಬರೂ ಈ ಮಗನೊಂದಿಗೆ ಎಲ್ಲಿಯಾದರೂ ಓಡಿಹೋಗಬೇಕು. ನನ್ನ ಕವಿಯನ್ನು ಯುಥೇನೇಸಿಯಾಗಳಿಂದ ಹೇಗೆ ಬಿಡಿಸಿಕೊಳ್ಳಲಿ?

ನಾನು ಮಗನಿಗೆ ಅನೇಕ ಪ್ರಶ್ನೆಗಳನ್ನು ಕೇಳಲು ಹಾತೊರೆದೆ. ಆದರೆ ಗಂಡನನ್ನು ಕಾಣಲಿದ್ದೇನೆಂಬ ಕಲ್ಪನೆಯಿಂದಲೇ ಮೂಕಳಾದೆ. ಮ್ಯೂಟರ್ ಈಗ ಇಳಿಯ ತೊಡಗಿತು. ಸುತ್ತಲೂ ದಟ್ಟವಾದ ಕಾಡು. ಅಲ್ಲೊಂದು ಜಾಗೆಯಲ್ಲಿ ಬಯಲು ಕಂಡಿತು. ಮ್ಯೂಟರ್





"ಲಂಚಕ್ಕೆ ಕೈ ನೀಡಿ...ನೀಡಿ ಅಭ್ಯಾಸವಾಗಿ ಹೋಗಿದೆ. ನಡೆಯುವಾಗಲೂ ಹಾಗೆಯೇ...!"

ಅಲ್ಲಿ ಇಳಿಯುವದೆಂದು ನಾನು ಇಳಿಯುವನೆಂದು ನಿರೀಕ್ಷಿಸಿದೆ. ಹಾಗಾಗಲಿಲ್ಲ. ಬದಲಾಗಿ ಭೂಮಿಯೇ ಬಾಯ್ಬಿಟ್ಟಂತೆ ನೆಲ ಹೋಳಾಯಿತು. ಮ್ಯಾಟಡರ್ ನೆಲದೊಳಗೆ ಪ್ರವೇಶಿಸಿತು.

ನನಗೆ ಆಶ್ಚರ್ಯಪೂರ್ವ ಆಶ್ಚರ್ಯ! ನಾನೆಂದೂ ಕಲ್ಪಿಸಲು ಕೂಡ ಸಾಧ್ಯವಿರದಿದ್ದಂಥ ಭೂಗರ್ಭ ಕಾಲನಿ! ಮತ್ತು ನನ್ನ ಕವಿ ಈ ಕಾಲನಿಯ ನಾಯಕ. ಇದೊಂದು ಅಕ್ಷರಶಃ ಭೂಗತ ತಂಡ. ಈ ಕ್ರಾಂತಿಕಾರರ ಮುಖ್ಯಸ್ಥ ಹಿಂದೊಮ್ಮೆ ಮೃದುಹೃದಯಿಯಾಗಿದ್ದ ನನ್ನ ಕವಿರಾಯ. ಅಥವಾ ಪತಿರಾಯನೆಂದರೆ ನಂಬಲಿಕ್ಕೆ ಸಾಧ್ಯವೇ?

ಮಾನವನ ಇತಿಹಾಸದಲ್ಲಿ ಭೂಗತಪಡೆಗಳು ಎಲ್ಲ ಕಾಲದಲ್ಲೂ ಇದ್ದೇ ಇದ್ದವು ಮತ್ತು ಅವುಗಳ ಚಟುವಟಿಕೆಗಳು ಅನೇಕ ಸಲ ಇತಿಹಾಸದ ದಿಕ್ಕನ್ನೇ ಬದಲಿಸಿದ್ದುಂಟು. ಈಗ ಕೂಡ ನನ್ನ ಪತಿಯ ನೇತೃತ್ವದಲ್ಲಿದ್ದ ಈ ಕ್ರಾಂತಿ ತಂಡವು ಹೊಸ ಇತಿಹಾಸವನ್ನು ಬರೆಯಬಹುದೇ ?

ಆಟೋಮೇಟೆಡ್ ಸರಕಾರದ ಕಣ್ಣಿಗೆ ಮಣ್ಣೆರಚಿ ಈ ತಂಡವು ಅದು ಹೇಗೆ ಭೂಗತ ಕಾಲನಿ ಮಾಡಿಕೊಂಡಿತ್ತೋ ನನಗೆ ಅರ್ಥವಾಗಲಿಲ್ಲ. ಈ ಪ್ರಶ್ನೆಯ ಉತ್ತರವು ತಾಂತ್ರಿಕ ಜಟಿಲತೆಯಿಂದ ಕೂಡಿತ್ತಾದ್ದರಿಂದ ಅದರ ಬಗ್ಗೆ ನಾನು ಅಷ್ಟು ತಲೆಕೆಡಿಸಿಕೊಳ್ಳಲೂ ಇಲ್ಲ. ಹಿಂದಿನ ಕಾಲದ ಹೆಂಡತಿಯಂತೆ ನನ್ನ ಪತಿಯ ಛಾಯಾನುವರ್ತಿಯಾಗಿ ಇರಲು ಸಾಧ್ಯವಾಗಿದ್ದೇ ನನಗೆ ಪರಮ ಸಾಧನೆಯಾಗಿತ್ತು.

ಮತ್ತು ಭೂಗತರಾಗಿರುವ ತನಕ ನನ್ನ ಪತಿ ಮತ್ತು ಐವತ್ತು ಸಮೀಕ್ಷಿಸಿದವರೆಲ್ಲ ಯುಥೇನೇಸಿಯಾದಿಂದ ಪಾರಾಗಿ ಬದುಕಬಲ್ಲರೆಂಬುದು ನನಗೆ ಎಲ್ಲಿಲ್ಲದ ಸಂತೋಷ ತಂದಿತ್ತು. ನಾನು ಹಳೆಯ ಕಾಲದವರಂತೆ ಮಂಗಳಸೂತ್ರ, ಧರಿಸಿಕೊಂಡು ಕುಂಕುಮ ಹಚ್ಚಿಕೊಳ್ಳಲು ಪ್ರಾರಂಭಿಸಿದೆ. ದೇವರೇ, ನನ್ನ ಮುತ್ತೈದೆತನದ ಸೌಭಾಗ್ಯವನ್ನು ಎಂದಿಗೂ ಕಸಿದುಕೊಳ್ಳಬೇಡಪ್ಪಾ ! ಎಂದು ನಿರಂತರವಾಗಿ ಬೇಡಿಕೊಳ್ಳತೊಡಗಿದ್ದೆ.

'ತಥಾಸ್ತು !' ಎಂದು ನನ್ನ ಪತಿ ತಮಾಷೆಗೆ ಹೇಳಿದರೂ, ಆ ದಿಕ್ಕಿನಲ್ಲಿ ಆತ ನಿಜವಾಗಿ ಜಯಿಸಲಿದ್ದಾನೆ ಎಂದು ನನ್ನ ಅಂತರಾತ್ಮ ಹೇಳತೊಡಗಿತ್ತು. ಕಾಲನಿಯಲ್ಲಿದ್ದವರಲ್ಲಿ ಐವತ್ತು ದಾಟಿದ ಹತ್ತಾರು ಸ್ತ್ರೀ ಪುರುಷರು ಇದ್ದದ್ದು ನನಗೆ ಎಲ್ಲಿಲ್ಲದ ವಿಶ್ವಾಸ ಮೂಡಿಸಿತ್ತು.

ಸರಕಾರವು ಯುಥೇನೇಸಿಯಾ ಕಾನೂನನ್ನು ಹಿಂತೆಗೆದುಕೊಳ್ಳುವಂತೆ ಮಾಡುವುದೇ ತಮ್ಮ ಹೋರಾಟದ ಗುರಿ ಎಂದು ನನ್ನ ನಾಯಕ ಹೇಳಿದಾಗ ನನಗೆಷ್ಟು ಆನಂದವಾಗಿರಬೇಡ !

೬

ನಮ್ಮ ಅಡಗುದಾಣವೆಲ್ಲಿ ಸರಕಾರಕ್ಕೆ ಪತ್ತೆ ಹತ್ತುತ್ತದೋ ಎಂದು ನನಗೆ ವಿಪರೀತ ಭಯ. ಕೆಲವೊಮ್ಮೆ ನಿದ್ದೆ ಕೂಡ ಹತ್ತುತ್ತಿದ್ದಿಲ್ಲ. ನಿದ್ದೆ ಹತ್ತಿದರೂ ಭಯಂಕರ ಕನಸುಗಳು. ನನ್ನಾತ ಎಷ್ಟು ಧೈರ್ಯಕೊಟ್ಟರೂ ಮನಸ್ಸು ಕೇಳಲೊಲ್ಲದು.

ಮೃದುಹೃದಯಿಯಾಗಿದ್ದ ನನ್ನ ಗಂಡ ಕಾಲು ಶತಮಾನದಲ್ಲಿ ಕ್ರಾಂತಿಕಾರನಾಗಿ ಹೇಗೆ ಬದಲಾದನೆಂದು ನನಗೆ ಅರ್ಥವೇ ಆಗುತ್ತಿರಲಿಲ್ಲ. ಇಂಥ ತಂಡದ ನಾಯಕನಾದದ್ದಂತೂ ಇನ್ನೂ ಅನಿರೀಕ್ಷಿತ. ಒಂದು ದಿನ ನನ್ನ ಈ ಸಂದೇಹವನ್ನು ಪರಿಹರಿಸಬೇಕೆಂದು ಕೇಳಿದೆ.

ನನ್ನ ಪ್ರಶ್ನೆ ಕೇಳಿ ಆತ ಒಮ್ಮೆಲೆ ಗಂಭೀರನಾದ. ಕಣ್ಣುಗಳಲ್ಲಿ ನೀರಾಡಿತು. ಕೇಳಬಾರದ್ದನ್ನು ಎಲ್ಲಿ ಕೇಳಿದೆನೋ ಎಂದು ನಾನು ಅಧೀರಳಾದೆ. ಆತ ಸಾವರಿಸಿಕೊಂಡು ಹೇಳತೊಡಗಿದ—


"ರಾಣೀ, ನಿನ್ನ ಸಂದೇಹ ಸ್ವಾಭಾವಿಕವಾದದ್ದು. ಇಪ್ಪತ್ನಾಲ್ಕು ವರ್ಷಗಳ ಹಿಂದಿನ ಮಾತು. ಅದೇ ಆಗ ನಿನ್ನನ್ನು ಕಳೆದುಕೊಂಡು ಹುಚ್ಚನಂತಾಗಿದ್ದೆ ..."

(ಓ ನನ್ನ ರಾಜಾ ! ನಾನೂ ಹುಚ್ಚಿಯೇ ಆಗಿದ್ದೆನಲ್ಲ ? ಕ್ರೂರ ಕಾನೂನುಗಳಿವೆಯಲ್ಲ ? ಏನು ಮಾಡಲಿಕ್ಕಾಗುತ್ತದೆ ? ಹೂಂ, ಹೇಳು...)

"ಆಗ ನನಗೆ ಒಬ್ಬ ಆತ್ಮೀಯ ಮಿತ್ರ ದೊರಕಿದ. ಅವನು ನನ್ನ ಗುರುವೂ ಆಗಿದ್ದ. ಆತ ನಿಜವಾಗಿ ಕ್ರಾಂತಿಪುರುಷ. ಆತನೇ ನನ್ನ ಬ್ರೇನ್ ವಾಷ್ ಮಾಡಿದ. ನಾನು ಹರಾಕಿರಿ ಮಾಡಿಕೊಳ್ಳಬೇಕೆಂದಿದ್ದೆ. ಹೇಡಿಯಂತೆ ಸಾಯುವ ಬದಲು ಜಗತ್ತನ್ನು ಬದುಕಿಸುವುದೇ ಕವಿಯ ಗುರಿಯಾಗಿರಬೇಕೆಂದು ನನ್ನನ್ನು ಹುರಿದುಂಬಿಸಿದ.

"ಮೃತ್ಯೋರ್ಮಾ ಅಮೃತಮ್‌ಗಮಯ' ಎಂದ. ಈ ಶತಮಾನದಲ್ಲಿ 'ಅಮೃತೋ ಮಾ ಮೃತ್ಯುಮ್‌ಗಮಯ ಇದೆಯಲ್ಲ?' ಎಂದು ನಾನು ಕೇಳಿದ್ದೆ. ಹೌದು, ಅದನ್ನು ನಿಲ್ಲಿಸಲೆಂದೇ ನೀನು ಬದುಕು, ಎಂದು ಉಪದೇಶಿಸಿದ.

"ನೀನು ನಾವಿಬ್ಬರೂ ಹೋರಾಡೋಣ', ಎಂದಿದ್ದೆ ನಾನು ಹೊಸ ಚೈತನ್ಯದಿಂದ.



"ಆತ ಕೆಂಪು ಕಾರ್ಡನ್ನು ತೋರಿಸಿದ ! ಅದು ಯುಥೆನೇಸಿಯಾ ನೋಟೀಸೆಂದು ನಿನಗೆ ಗೊತ್ತಲ್ಲ? ಆತನಿಗೆ ಐವತ್ತು ಸಮೀಪಿಸಿರಬಹುದೆಂದು ನನಗೆ ಕಲ್ಪನೆ ಕೂಡ ಇರಲಿಲ್ಲ ! ನಾನಿನ್ನೂ ಆಗ ತರುಣನಾಗಿ ಅಪಕ್ವನಾಗಿದ್ದೆ. ಅವನನ್ನು ಹೇಗೆ ಬದುಕಿಸಿಕೊಳ್ಳಬೇಕೋ ಹೊಳೆಯಲಿಲ್ಲ.

" ಆತನ ಯುಥೆನೇಸಿಯಾಕ್ಕೆ ಇನ್ನೂ ಮೂರು ತಿಂಗಳು ಅವಧಿ ಇದ್ದಿತು. (ಕೆಂಪು ಕಾರ್ಡ ಮೂರು ತಿಂಗಳ ನೋಟೀಸು.) ಕೊನೆಯ ಮೂರು ತಿಂಗಳಾದರೂ ಗೆಳೆಯನೊಂದಿಗೆ ಗಾಢವಾಗಿ ಕಾಲ ಕಳೆಯಬೇಕೆಂದು ನಾನು ಅನೇಕ ಕನಸುಗಳನ್ನು ಕಂಡೆ. ಆದರೆ ನಡೆದದ್ದೇನು ಗೊತ್ತೇ? ನೋಟೀಸ ತೋರಿಸಿದ ಮರುದಿನವೇ ಆತ ಆತ್ಮಹತ್ಯೆ ಮಾಡಿಕೊಂಡ! ನಿನ್ನ ವಿರಹದಿಂದ ಮೊದಲೇ ಸತ್ತಿದ್ದ ನಾನು ಈಗ ಪೂರ್ಣ ಸತ್ತು ನಿರ್ವಿಣ್ಣನಾದೆ.

"ನಾನು ಸಂಪೂರ್ಣ ಬದಲಾದೆ ! ಅಂದಿನ ಬಡ ಕವಿ ಕ್ರಾಂತಿಕವಿಯಾದ. ಊಹುಂ ! ಕ್ರಾಂತಿ ಪುರುಷನಾದ!! ಅದೇ ಮುಹೂರ್ತದಲ್ಲಿ ಪ್ರತಿಜ್ಞೆ ಮಾಡಿದೆ— ಈ ಕರಾಳ ಕಾನೂನನ್ನು ನಿವಾರಿಸ-ಬೇಕೆಂದು! "

೭

"ಅದೇ ದಿನಗಳಲ್ಲಿ ನನಗೆ ಒಬ್ಬ ಗೆಳತಿ ಸಿಕ್ಕಳು, ಆತ ಕಥೆ ಮುಂದುವರೆಸಿದ.

"ಗೆಳತಿ ? " ನಾನು ಅಂಥ ಭಾವೋದ್ವೇಗದ ಕ್ಷಣದಲ್ಲೂ ಸ್ತ್ರೀಸಹಜವಾದ ಮತ್ಸರದಿಂದ ಕೇಳಿದೆ.

"ರಾಣೀ, ನನ್ನ ಆತ್ಮ ಸತ್ತೇ ಹೋಗಿತ್ತೆಂದು ನೆನಪಿಡು. ಯುಥೇನೇಸಿಯಾ ವಿರುದ್ಧ ಹೋರಾಡುವದಕ್ಕೆ ಏನು ಮಾಡಬೇಕೋ ಎಲ್ಲದಕ್ಕೂ ಸಿದ್ಧನಾಗಿದ್ದೆ. ಗೆಳತಿ ಅನ್ನದೇ ಕಾಮ್ರೇಡ್ ಅನ್ನು, ಆಕೆಯ ವಿಶೇಷತೆ ಏನು ಗೊತ್ತೆ?"

"ನನಗೆ ಹೇಗೆ ಗೊತ್ತು ? "

"ಇನ್ನೂ ಸಿಟ್ಟು ಇಳಿದಿಲ್ಲವೆಂದು ಕಾಣುತ್ತದೆ. ಆಕೆ ಕಾನೂನು ವಿಭಾಗದಲ್ಲಿ ಸ್ಟೆಬರ್‌ನೆಟಿಸ್ಟ್ ಆಗಿದುಡಿಯುತ್ತಿದ್ದಳು".

ನನ್ನ ತಲೆಯಲ್ಲಿ ಸ್ವಲ್ಪ ಬೆಳಕು ಬಿತ್ತು, ಕಾನೂನಿನ ವಿರುದ್ಧ ಹೋರಾಡಲು ಕಾನೂನು-ತಜ್ಞರ ನೆರವನ್ನು ಪಡೆಯಬೇಕಲ್ಲವೇ?

"ನಾನು ಆಕೆಯ ನಾಲ್ಕನೆಯ ಮಗುವಿನ ತಂದೆಯಾಗುವ ಅವಕಾಶ ಸಿಕ್ಕಿತ್ತು. "

ಈ ಸುದ್ದಿಯಿಂದ ನನಗೇನೂ ಹೊಟ್ಟೆ ಕಿಚ್ಚಾ-ಗಲಿಲ್ಲ. ನಾನೂ ಹದಿಮೂರು ಮಕ್ಕಳನ್ನು ಇತರರಿಂದಲೇ ಪಡೆದಿರುವೆನಷ್ಟೇ ?

"ಆದರೆ ಈ ಸಲ ನಾನು ಮುಗ್ಧಕವಿಯಾಗಿ-ರಲಿಲ್ಲ," ನನ್ನ ಪತಿ ಕಥೆ ಮುಂದುವರೆಸಿದನು. "ಮಗು ಹುಟ್ಟುವ ಮೊದಲೇ ನಮ್ಮನ್ನು ಅಗಲಿ-ಸಿದರೂ, ಆಕೆ ಕೊಟ್ಟ ರಹಸ್ಯ ಮಾಹಿತಿಯಿಂದಾಗಿ ನಾವು ಒಬ್ಬರನ್ನೊಬ್ಬರು ಸಂಪರ್ಕಿಸಲು ಸಾಧ್ಯವಾಯಿತು. " ಈಗ ಆಕೆ ಎಲ್ಲಿ ?" ನಾನು ಕುತೂಹಲದಿಂದ ಕೇಳಿದೆ.

"ಆಕೆಯೂ ಹುತಾತ್ಮಳಾದಳು! "

"ಅಂದರೆ__ಯುಥೆನೇಸಿಯಾ?"

"ಅಲ್ಲ ! ಆಕೆ ನಿನಗಿಂತ ನಾಲ್ಕಾರು ವರ್ಷ ಮಾತ್ರ ದೊಡ್ಡವಳು. ಸರಕಾರದ ಕಾನೂನು ವಿಭಾಗದ ಕಂಪ್ಯೂಟರ್ ಟರ್ಮಿನಲ್ಲುಗಳು ಎಲ್ಲಿವೆ ಎಂದು ಪತ್ತೆ ಹಚ್ಚಲು ಆಕೆ ಇಪ್ಪತ್ತು ವರ್ಷ ತೆಗೆದುಕೊಂಡಳು. ಆಕೆಯಿಂದಾಗಿದ್ದರಿಂದ ಅಷ್ಟಾದರೂ ಶೋಧವಾಯಿತು. ಯಾವ ಮನುಷ್ಯನಿಗೂ ಎಂದೂ ಸಿಗದ ರೀತಿಯಲ್ಲಿ ಆ ಟರ್ಮಿನಲ್ಲುಗಳ ಜೋಡಣೆಯಾಗಿದೆ. ಅದು ಸಿಕ್ಕದ್ದು ನಮ್ಮ ಹೋರಾಟದ ಯೋಜನೆಯಲ್ಲಿ ಮೊದಲ ಗೆಲವು"

"ನಿನ್ನ ಕಾಮ್ರೇಡ್ ಹೇಗೆ ಕೊನೆಗೊಂಡಳು?" ನಾನು ಪುನಃ ಕೇಳಿದೆ.

"ಆಕೆ ಕಾನೂನು ವಿಭಾಗದಲ್ಲಿದ್ದಳಷ್ಟೇ? ಯುಥೆನೇಸಿಯಾಕ್ಕೆ ಬಂದವರನ್ನು ಹೇಗೆ ಕೊನೆಗೊಳಿಸುತ್ತದೆಂದು ಅಭ್ಯಸಿಸಲು ಪ್ರಯತ್ನಿಸು-ವಾಗ ತಾನೇ ಬಲಿಯಾದಳು—ಆಕಸ್ಮಿಕವಾಗಿ. ನಾನು ಮತ್ತೊಮ್ಮೆ ಪರದೇಶಿಯಾದೆ.

"ಸ್ವತಃ ನಾನು ಯುಥೆನೇಸಿಯಾಕ್ಕೆ ಬಲಿಯಾಗಲು ಬರಿ ಐದು ವರ್ಷಗಳು ಉಳಿದಿದ್ದವೆಂದು ನೆನಪಿಡು, ಈ ಉಳಿದ ಅವಧಿಯೊಳಗೆ ನನ್ನ ಕ್ರಾಂತಿ ಮುಗಿಸಲೇಬೇಕಾಗಿತ್ತು. ಆ ನನ್ನ ಕಾಮ್ರೇಡ್ ಗುಟ್ಟಾಗಿ ಕೊಟ್ಟ ಎಲ್ಲ ಮಾಹಿತಿಯನ್ನು ಇಟ್ಟುಕೊಂಡು, ಒಂದು ಬೃಹದ್ ಯೋಜನೆ ಹಾಕಿಕೊಂಡು ನಾನು ಈ ಭೂಗತ ಕಾಲನಿ ಪ್ರಾರಂಭಿಸಿದೆ."

"ಇಂಥ ದೊಡ್ಡ ಕೆಲಸ ನಿನ್ನೊಬ್ಬನಿಂದಲೇ ಹೇಗೆ ಸಾಧ್ಯವಾಯಿತು ? ಈ ಎಲ್ಲ ಕಟ್ಟಡಗಳು? ಊಟದ ವ್ಯವಸ್ಥೆ?" ನಾನು ಅಪನಂಬಿಕೆಯಿಂದ ಕೇಳಿದೆ.

"ಏನೂ ಸಮಸ್ಯೆಯಾಗಲಿಲ್ಲ ! ಆತ ಉತ್ತರಿಸಿದ."ಇಲ್ಲಿರುವ ಕಾಲನಿ ಹೆಚ್ಚು ಕಡಿಮೆ ನಮಗೆ ರೆಡಿಮೇಡಾಗಿ ಸಿಕ್ಕಿತು. ಅಂದರೆ ಇದು ನೂರೈವತ್ತುವರ್ಷಗಳ ಹಿಂದಿನದು. ನ್ಯೂಕ್ಲಿಯರ್ ಅಸ್ತ್ರಗಳಿಂದ ರಕ್ಷಿಸಿಕೊಳ್ಳಲು ಆಗಿನ ಕೆಲವರು ವಿಜ್ಞಾನಿಗಳು ಇದನ್ನು ನಿರ್ಮಿಸಿದ್ದರಿಂದ ದಾಖಲೆಗಳಿಂದ ತಿಳಿದು ಬಂದಿತು. ಮತ್ತು ಅವರು ಬಿಟ್ಟು ಹೋದ ಅನೇಕ ದಾಖಲೆಗಳು ನಮ್ಮ ಕ್ರಾಂತಿ ಯೋಜನೆಗೆ ಇಂದು ಅಡಿಪಾಯವಾಗಿವೆ. "

"ಸರಕಾರದ ಸೂಪರ್ ಕಂಪ್ಯೂಟರಿಗೆ ನಿಮ್ಮ ಸುಳಿವು ಸಿಗಲಿಲ್ಲವೇ? "ನಾನು ಆತಂಕದಿಂದ ಕೇಳಿದೆ.

"ಮನುಷ್ಯನೇ ಕಂಪ್ಯೂಟರದ ಜನಕ ಎಂದು ನೆನಪಿಡು. ಕಂಪ್ಯೂಟರದ ಕಣ್ಣಿಗೆ ಹೇಗೆ ಮಣ್ಣೆರಚಬೇಕೆಂದು ನಮಗೆ ಸಿಕ್ಕ ಹಳೆಯ ದಾಖಲೆಗಳಲ್ಲಿ ಚೆನ್ನಾಗಿ ವಿವರಿಸಲಾಗಿದೆ. "

ನನ್ನ ಗಂಡನ ಯೋಜನೆಯ ವಿವರಗಳನ್ನು ಇಲ್ಲಿ ಹೇಳತೊಡಗಿದರೆ ದೊಡ್ಡ ಗ್ರಂಥವೇ ಆದೀತು. ಆದ್ದರಿಂದ ಆ ಕೆಲಸ ಬಿಟ್ಟು ಸದ್ಯ ಅವನ ಯೋಜನೆ ಯಾವ ಹಂತಕ್ಕೆ ಬಂದಿದೆ ಎಂದು ನೋಡೋಣ.

೮

'ದಿ ಲಿಬರೇಟರ್ಸ್' ಎಂಬುದು ನಮ್ಮ ಕ್ರಾಂತಿ ತಂಡದ ಹೆಸರು. ಇದಕ್ಕೇನು ಆಟೋಮೇಟೆಡ್ ಸರಕಾರವನ್ನು ಕೊನೆಗೊಳಿಸುವ ಉದ್ದೇಶವಿಲ್ಲ. ಎಲ್ಲರಿಗೂ ಬದುಕುವ ಸ್ವಾತಂತ್ರ್ಯ ಕೊಡಿಸ ಬೇಕೆಂಬುದೇ ನಮ್ಮ ಗುರಿ. ಮನಸ್ಸು ಮಾಡಿ ದರೆ ನನ್ನಾತ ಈ ಸರಕಾರವನ್ನು ನಿಷ್ಕ್ರಿಯ ಗೊಳಿಸಬಲ್ಲ—ಆ ಟರ್ಮಿನಲ್ಲುಗಳ ಪತ್ತೆಯಾಗಿದೆ. (ಇದೇ ಸಾಬೋಟೇಜ್!) ಜಗತ್ತಿನ ಅಧ್ಯಕ್ಷನೂ ಆಗಬಲ್ಲ. ಆದರೂ ಮೂಲತಃ ಕವಿಯಾದ ಅವ ನಿಗೆ ಇಂಥ ರಾಜಕೀಯ ಮಹತ್ವಾಕಾಂಕ್ಷೆ ಇಲ್ಲ.

ದಿ ಲಿಬರೇಟರ್ಸ್ ತಂಡದ ಯೋಜನೆ ದ್ವಿಮುಖಿಯಾಗಿದೆ. ಒಂದು, ಯುಥೇನೇ ಸಿಯಾ ಕಾನೂನನ್ನ ರದ್ದುಗೊಳಿಸುವುದು. ಎರಡು, ಮನುಷ್ಯನು ಪುನಃ ಅಂತರಿಕ್ಷಯಾನ ಪ್ರಾರಂಭಿಸಿ ಹೆಚ್ಚುತ್ತಿರುವ ಜನಸಂಖ್ಯೆಯನ್ನು ಬೇರೆ ಗ್ರಹಗಳಿಗೆ ಕಳಿಸುವುದು.

ಹಿಂದಿನ ಕಾಲದ ರಾಸಾಯನಿಕ ಅಥವಾ ನ್ಯೂಕ್ಲಿಯರ್ ಉರುವಲಿನ ರಾಕೆಟ್ಟುಗಳು ಈಗ ಏನೇನೂ ಪ್ರಯೋಜನವಿಲ್ಲ. ಪರಿಸರಕ್ಕೆ ಧಕ್ಕೆ ಮಾಡದ, ಇಲ್ಲಿಯ ಉರುವಲನ್ನೇ ವ್ಯಯಿಸದ, ಹಳೆಯ ಕಾಲದ ಹಾಯಿಹಡಗುಗಳಂತೆ ಸೌರ ಕಾಂತದ 'ಮಾರುತ'ದಿಂದ ಚಲಿಸುವ ಫೋಟಾನ್ ನೌಕೆಗಳು ಈ ಸಾಮಾನ್ಯವಾಗಿವೆ. ಇಪ್ಪತ್ತರಡ ನೆಯ ಶತಮಾನದಲ್ಲಿ ಅಂತರಿಕ್ಷಯಾನ ಪ್ರತಿ ಬಂಧಿಸಲ್ಪಟ್ಟಿದೆ. ಕಳೆದ ಶತಮಾನದಂತೆ ಈಗ ಪುನಃ ಅದನ್ನು ದೊಡ್ಡ ಪ್ರಮಾಣದಲ್ಲಿ ಪ್ರಾರಂ- ಭಿಸಬೇಕಾಗಿದೆ.

"ಅಂತರಿಕ್ಷಯಾನಕ್ಕೂ ಯುಥೇನೇಸಿಯಾಕ್ಕೂ ಏನು ಸಂಬಂಧ?" ನಾನು ಕೇಳಿದೆ.

"ಬಹಳ ಸಂಬಂಧವಿದೆ," ನನ್ನವನು ವಿವರಿಸ- ತೊಡಗಿದನು."

"ಉಳಿದವರ ಗತಿ?"

"ನೋಡು ಡಾರ್ಲಿಂಗ್, ಅಂತರಿಕ್ಷಕ್ಕೆ ಹೋಗ ಲೊಲ್ಲದವರನ್ನು ಕೊಲ್ಲುವ ಬದಲು ಹೈಬ- ರ್ನೇಟ್ ಮಾಡಿಡಬಹುದು ಮತ್ತು ಯುಥೆ ನೇಸಿಯಾಕ್ಕೆ ವಯಸ್ಸಿನ ಮಿತಿಯನ್ನು ಐವತ್ತರ ಬದಲು ಎಂಭತ್ತಕ್ಕೇರಿಸುವಂತೆ ಮಾಡಬೇಕು. ಪೃಥ್ವಿ ಇಪ್ಪತ್ತು ಬಿಲಿಯನ್‌ಗಿಂತ ಹೆಚ್ಚು ಜನ- ರನ್ನು ಸಾಕಲಾರದೆಂಬುದು ಸುಳ್ಳಲ್ಲ. ಬರ್ಥ್ ಕಂಟ್ರೋಲ್ ಒಪ್ಪದಿದ್ದರೂ, ಕಡ್ಡಾಯವಾಗಿ ಇಪ್ಪತ್ತು ಹೆರಲೇಬೇಕೆಂಬ ಹುಚ್ಚು ನಿಯಮ- ವನ್ನಾದರೂ ಸಡಿಲುಗೊಳಿಸಲಿ. ಮತ್ತು ಯಾರು ಬೇಕಾದರೂ, ಯಾವಾಗ ಬೇಕಾದರೂ ಮದುವೆ- ಯಾಗಲು ಲೈಸೆನ್ಸ್ ಕೊಡಬೇಕಲ್ಲದೆ, ವಿವಾಹ ಬಂಧನದಲ್ಲಿ ಹುಟ್ಟಿದ ಮಕ್ಕಳನ್ನೂ ಕಾನೂನು ಬದ್ಧವೆಂದು ಸರಕಾರ ಪರಿಗಣಿಸುವಂತಾಗಲಿ."

ನನ್ನ ಪತಿಯ ಯೋಜನೆ ಮಾನವಶಾಸ್ತ್ರಜ್ಞ- ಳಾದ ನನಗೆ ಸಂಪೂರ್ಣ ಒಪ್ಪಿಗೆಯಾಗಲಿಲ್ಲ- ವಾದರೂ, ಸದ್ಯದ ಪರಿಸ್ಥಿತಿಯಲ್ಲಿ ವ್ಯಾವಹಾರಿಕ ವಾಗಿದ್ದರಿಂದ ನಾನು ಈ ಹೋರಾಟದಲ್ಲಿ ಧುಮುಕಿದೆ ಮತ್ತು ನನ್ನ ಪತಿಯನ್ನು ಯುಥೆ- ನೇಸಿಯಾದಿಂದ ಪಾರು ಮಾಡಲು ನಾನು ಎಂಥ ಯೋಜನೆಗಾದರೂ ಸಿದ್ಧಳೇ ಇದ್ದೆ.

"ನನ್ನ ರಾಜಾ, ಈ ಕ್ರಾಂತಿ ನಡೆಯಬೇಕಾ ದರೆ ಸರಕಾರದ ಕಂಪ್ಯೂಟರುಗಳನ್ನು ಎದುರಿಸ ಬೇಕಷ್ಟೇ? ಅದು ಹೇಗೆ ಸಾಧ್ಯ?" ಎಂದು ಕೇಳಿದೆ.

"ನೋಡುತ್ತಿರು ರಾಣಿ. ನಮ್ಮ ಪ್ರತ್ಯಸ್ತ್ರ ಸಿದ್ಧವಾಗುತ್ತ ಬಂದಿದೆ. ಮುಂದೆ ನಿನಗೇ ಗೊತ್ತಾದೀತು."

೯

ಒಂದು ದಿನ ನಮಗೆ ಸುವಾರ್ತೆ ಕಾದಿತ್ತು. ಯುಥೇನೇಸಿಯಾಕ್ಕೆ ಸಿದ್ಧರಾಗಿ ಹೋದವರೆಲ್ಲ ಸಾಯದೇ ವಾಪಸಾಗಿ ಬರತೊಡಗಿದ್ದಾರೆಂದು ಜಗತ್ತಿನ ಮೂಲೆ ಮೂಲೆಗಳಿಂದ ಸುದ್ದಿ ಬಂದಿತು. ಕೊನೆಗೊಳಿಸುವ ಯಂತ್ರಗಳು ಒಮ್ಮೇಲೆ ಕೆಟ್ಟವೇ?

ನನ್ನ ಯಜಮಾನ ಹೇಳಿದ ಪ್ರತ್ಯಸ್ತ್ರದ ಕಾರ- ಭಾರವೇ ಇದೆಂದು ನನಗೆ ಯಾರೂ ಹೇಳಬೇಕಾ- ಗಿರಲಿಲ್ಲ. ಮುಳ್ಳಿನಿಂದ ಮುಳ್ಳು ತೆಗೆಯ ಬೇಕೆಂದು ಒಂದು ಹಳೆಯ ಗಾದೆಯ ಮಾತು ಹೇಳುತ್ತದೆ. ಈ ಪ್ರತ್ಯಸ್ತ್ರವೆಂದರೆ ಇನ್ನೊಂದು ಪುಟ್ಟ ಆದರೆ ವಿಶೇಷ ಉದ್ದೇಶದ ಕಂಪ್ಯೂಟರು!

ನಮ್ಮ ಲಿಬರೇಟರ್ಸ್ ತಜ್ಞರು ತಯಾರಿಸಿದ ಈ ಕಂಪ್ಯೂಟರು ಮನುಷ್ಯನ ರಾಜಕೀಯ ಚಾಣಾಕ್ಷತೆ ಹೊಂದಿದ್ದು, ಸರಕಾರದ ಕಂಪ್ಯೂಟರು ಗಳ ಎಷ್ಟೋ ಟರ್ಮಿನಲ್ಲುಗಳನ್ನು ಬಲ್ಲು- ದಾಗಿತ್ತು. ರಿಮೋಟ್ ಕಂಟ್ರೋಲ್ ತಂತ್ರದಿಂದ ಅದು ತನಗೆ ಬೇಕಾದ ಟರ್ಮಿನಲ್ಲನ್ನು ಪ್ರವೇಶಿಸಿ, ಸರಕಾರದ ಕಂಪ್ಯೂಟರುಗಳ ಪ್ರೋಗ್ರಾಮನ್ನೇ ಕೆಡಿಸಿ ಹದಗೆಡಿಸಬಹುದಿತ್ತು. ಮತ್ತು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಸರಕಾರದ್ದೇ ಬ್ರೇನ್‌ವಾಷ್ ಮಾಡಬಲ್ಲುದಾಗಿತ್ತು!

ಸರಕಾರವು ಎಷ್ಟೆಂದರೂ ತರ್ಕಬದ್ಧ ಯಂತ್ರ. ಅದು ನ್ಯೂಟನ್ನನ ಮೊದಲನೆಯ ನಿಯಮದಂತೆ ಮಾತ್ರ ನಡೆದದ್ದು, ಮನುಷ್ಯನಿಗೆ ವೈರಿಯೇನೂ ಆಗಿರಲಿಲ್ಲ. ಜನಸಂಖ್ಯೆಯ ಸಮತೋಲ ಕಾಯ್ದುಕೊಳ್ಳುವುದು ಮತ್ತು ಶಿಶು ಜನನ ನಿಲ್ಲಿಸಬಾರದೆಂಬುದು ಮಾತ್ರ ಅದರ ಉದ್ದೇಶ- ವಾಗಿದ್ದವು. ಆದ್ದರಿಂದಲೇ ಯುಥೇನೇಸಿಯಾ- ದಂಥ ಕ್ರೂರ ಶಿಕ್ಷೆ!

ನಮ್ಮ ಕಂಪ್ಯೂಟರು ಸರಕಾರೀ ಯಂತ್ರಕ್ಕೆ ಒಂದೊಂದೇ ಸವಾಲನ್ನೆಸೆಯುತ್ತ, ಪರಿಹಾರ ವನ್ನೂ ಕೊಡುತ್ತ ಹೋದಂತೆ, ಸರಕಾರವು (ಅಂದರೆ ಸೂಪರ್ ಕಂಪ್ಯೂಟರ್) ಹೆಚ್ಚು ಚೌಕಾಶಿ ಕೂಡ ಮಾಡದೆ ನಮ್ಮ ಸೂಚನೆಗಳನ್ನು ಒಪ್ಪುತ್ತ ಹೋಯಿತು.

ಇನ್ನೂ ವಿಚಿತ್ರವೆಂದರೆ, ಅದು ನಮ್ಮ ಕಂಪ್ಯೂಟರಿನೊಂದಿಗೆ ಮೈತ್ರಿ ಕೂಡ ಮಾಡಿ ಕೊಂಡಿತು!

ಇಷ್ಟೆಲ್ಲ ಭಾರಿ ಕ್ರಾಂತಿಕಾರೀ ಬದಲಾವಣೆ ಗಳು ಬರುವ ಸುದ್ದಿ ತಿಳಿದೂ ಜಗತ್ತಿನ ಜನತೆ ತನ್ನ ಪಾಡಿಗೆ ತಾನಿದ್ದಿತು! ಮತ್ತು ಯುಥೇನೇ- ಸಿಯಾ ಕೇಂದ್ರಗಳ ಮುಂದೆ ಕ್ಯೂಗಳು ಬೆಳೆಯು ತ್ತಲೇ ಹೋದವು!! ಇನ್ನೂ ಶೋಚನೀಯವಾದ ಸಂಗತಿಯೆಂದರೆ, ಸಾಯಲಿಕ್ಕೆ ಬಂದ ಅನೇಕರು ಯುಥೇನೇಶಿಯಾ ಕೇಂದ್ರಗಳು ಮುಚ್ಚಲ್ಪಟ್ಟಿವೆ ಎಂದು ತಿಳಿದೊಡನೆ ದಿಕ್ಕುಗಾಣದೆ ಆತ್ಮಹತ್ಯೆ ಮಾಡಿಕೊಳ್ಳತೊಡಗಿದರು!

೧೦

'ದಿ ಲಿಬರೇಟರ್ಸ್' ತಂಡವು ತನ್ನ ಕಾಲಿನಿ ತ್ಯಜಿಸಿಪ್ರಕಟವಾಗಿ ಬಂದಾಗ ನಾವು ನಿರೀಕ್ಷಿಸಿ ದಂಥ ಅದ್ಭುತ ಸ್ವಾಗತವೇನೂ ಸಿಗಲಿಲ್ಲ. (ಕಾಲ ಮಹಿಮೆ!)

ಈಗ ಯುಥೇನೇಸಿಯಾ ಕೇಂದ್ರಗಳೆಲ್ಲ ಹೈಬ- ರ್ನೇಷನ್ ಸೆಂಟರುಗಳಾಗಿವೆ. ಮತ್ತು ಇಲ್ಲಿ ಬರುವವರ ವಯೋಮಿತಿ ಎಂಭತ್ತಕ್ಕೇರಿದೆ. ಬೇಕಾದವರು ಅಂತರಿಕ್ಷಕ್ಕೆ ಹೋಗಿ ಪಾರಾಗ ಬಹುದು. ವಿವಾಹವು ಈಗ ಕಾನೂನುಬದ್ಧ. ಬರ್ಥ್‌ಕಂಟ್ರೋಲ್ ಮಾತ್ರ ನಿಷೇಧಿತ. ಆದರೆ ಕಡ್ಡಾಯವಾಗಿ ಇಷ್ಟೇ ಮಕ್ಕಳನ್ನು ಹೆರಬೇಕೆಂ ದಿಲ್ಲ.

ಆದರೆ ಈ ಯಾವ ಗೊಂದಲವೂ ಬೇಡವೆಂದು ನಮ್ಮ ಸಂಸಾರ ಮಂಗಳಲೋಕದಲ್ಲಿ ಸಾಗಿದೆ. ನಮ್ಮ ಪರಿವಾರದ ಸದಸ್ಯರ ಸಂಖ್ಯೆ ಐವತ್ತು ದಾಟಿದೆ. ಮರಿಮೊಮ್ಮಕ್ಕಳನ್ನೂ ಕಾಣಲಿ ದ್ದೇವೆ. ನನ್ನ ಮತ್ತು ನನ್ನ ಪತಿಯ ಮಕ್ಕಳು— ಮೊಮ್ಮಕ್ಕಳು ಒಂದೆಡೆ ಸೇರಿದ್ದೇವೆ.

ಈಗೀಗ ಸರಕಾರದ ಯಂತ್ರದಲ್ಲಿ ಮನುಷ್ಯ ಕೈ ಹಾಕಬಹುದೆಂಬ ಗಾಳಿ ಸುದ್ದಿ ಇದೆ. ಹಾಗಾ ದರೆ ಮತ್ತೆ ಜಗತ್ತು ಕೆಟ್ಟೀತೆಂದು ನನ್ನ ಕವಿ ಹೇಳುತ್ತಾನೆ. ಆತನೀಗ ಒಂದು ಮಹಾ ಕಾವ್ಯ ರಚನೆಗೆ ತೊಡಗಿದ್ದಾನೆ. ಮನುಷ್ಯ ಸ್ವಾರ್ಥಿ ಮತ್ತು ರಾಜಕಾರಣಿ ಎಂದು ಅವನೆನ್ನುತ್ತಾನೆ.

ಅವನು ಬರೆಯತೊಡಗಿದ್ದು ಪ್ರೇಮ ಕಾವ್ಯ ವಲ್ಲವೆಂಬ ಕೊರಗು ನನಗೆ! ಆದರೆ ನನ್ನ ಇಬ್ಬರು ಮಕ್ಕಳು (ಮೊದಲನೆಯವ ಮತ್ತು ಮಂಗಳನ ಮನೆಯಲ್ಲಿ ಹುಟ್ಟಿದವ) ಅಪ್ಪನಂತೆ ಕವಿಗಳಾಗುವ ಲಕ್ಷಣ ತೋರಿಸತೊಡಗಿದ್ದಾರೆ.

ಜಗತ್ತಿಗೆ ಮುಂದೆಂದೂ ಮತ್ತೊಬ್ಬ ಕ್ರಾಂತಿ ಕವಿಯ ಅವಶ್ಯಕತೆ ಬರದಿರಲೆಂದು ಹಾರೈಸು ತ್ತೇನೆ. ▫

ಕನ್ನಡ ಚಳವಳಿ:

ಆದದ್ದು; ಆಗಬೇಕಾದ್ದು

— ಡಾ. ಎಂ. ಚಿದಾನಂದ ಮೂರ್ತಿ

ಮೊದಲ ಹಂತದ ಚಳವಳಿ : ನಾನು ಗೋಕಾಕ್ ಚಳವಳಿಯಿಂದ (೧೯೮೨) ಆರಂಭಿಸುತ್ತೇನೆ. ಅದು ಕನ್ನಡ ಚಳವಳಿಯ ಎರಡನೆಯ ಹಂತ; ನನ್ನ ಚಳವಳಿಯ ಬದುಕಿನ ಮೊದಲ ಹಂತ. ಗೋಕಾಕ್ ಚಳವಳಿಗಿಂತ ಹಿಂದೆ ನಡೆದ ಕನ್ನಡ ಮೊದಲ ಹಂತದ ಚಳವಳಿಯ ಕೇಂದ್ರ ಬೆಂಗಳೂರು. ಆಗ, ಅ. ನ. ಕೃ. ಮ. ರಾಮಮೂರ್ತಿ, ತ.ರಾ.ಸು ಇವರ ನಾಯಕತ್ವದಲ್ಲಿ ನಡೆದ ಕನ್ನಡ ಚಳವಳಿಯ ವಿವರಗಳು ದೊರೆತಿರುವಷ್ಟರ ಮಟ್ಟಿಗೆ ಹೇಳು-ವುದಾದರೆ ಅದೊಂದು ಅದ್ಭುತ ಸಾಧನೆ. ಆ ನಿಷ್ಠಾವಂತ ಕನ್ನಡ ಸಾಹಿತಿಗಳ ಧೀರ ಕರೆಗೆ ಬೆಂಗಳೂರಿನ ಯುವಕರು ಸ್ಪಂದಿಸಿದ ರೀತಿ ಒಂದು ಕತೆಯಾಗಿ ಬಿಟ್ಟಿದೆ. ಕನ್ನಡ ಚಲನಚಿತ್ರಗಳಿಗೆ ಪ್ರೋತ್ಸಾಹ, ಸಂಗೀತ ಕಚೇರಿಗಳಲ್ಲಿ ಕನ್ನಡ ವಿದ್ವಾಂಸರಿಗೆ ಮತ್ತು ಕನ್ನಡ ಕೃತಿಗಳಿಗೆ ಆದ್ಯತೆ, ಕಾರ್ಖಾನೆ, ಕಚೇರಿಗಳಲ್ಲಿ ಕನ್ನಡಿಗರಿಗೆ ಉದ್ಯೋಗ, ಕನ್ನಡದಲ್ಲೇ ಪರಸ್ಪರ ಸಂಭಾಷಣೆ, ಹಿಂದಿ ವಿರೋಧ ಇವೇ ಮೊದಲಾದ ಉದ್ದೇಶಗಳನ್ನಿಟ್ಟುಕೊಂಡು ಬೀದಿ ಬೀದಿಗಳಲ್ಲಿ ಮೆರವಣಿಗೆಗಳು, ಉಪನ್ಯಾಸಗಳು ನಡೆದವು. ವಿಶೇಷವಾಗಿ ಬೆಂಗಳೂರಿನ ಕನ್ನಡಿಗರಲ್ಲಿ ಸ್ವಾತ್ಮ ಜ್ಞಾನವನ್ನು ಸ್ವಾತ್ಮ ಪ್ರತ್ಯಯವನ್ನೂ ಬಿತ್ತುವಲ್ಲಿ ಆ ಚಳವಳಿ ಯಶಸ್ವಿಯಾಯಿತು. ಇದು ಅರವತ್ತರ ದಶಕದ ಆರಂಭದ ಕತೆ.

'ಚಳವಳಿ ಮಾತಿಗೆ' ಹೀನಾರ್ಥ

ಅ. ನ. ಕೃ., ಮ. ರಾಮಮೂರ್ತಿಯವರ ಬಳಿಕ ಆದ ಒಂದು ದುಃಖದ ಬೆಳವಣಿಗೆಯೆಂದರೆ 'ಚಳವಳಿ' ಮಾತಿಗೆ ಕೆಟ್ಟ ಹೆಸರು ಬಂದುದು. ಕನ್ನಡ ಚಳವಳಿ ಎಂದರೆ ಕಲ್ಲು ಎಸೆದು ಗಾಜು ಒಡೆಯುವುದು, ಹೆದರಿಸಿ ಹಣ ವಸೂಲು ಮಾಡುವುದು, ವಿಶೇಷವಾಗಿ ರಾಜ್ಯೋತ್ಸವದ ಸಂದರ್ಭ. ಬಲವಂತದ ಹಣ ಸಂಗ್ರಹ ಮಾಡುವುದು. ಕನ್ನಡದ ಹೆಸರಿನಲ್ಲಿ ಬಂದ ಹಣವನ್ನು ಜೇಬಿಗೆ ಇಳಿ ಬಿಡುವುದು, ಅನುಯಾಯಿಗಳಿಗೂ ಕೊಟ್ಟು ತಾನು ತಿನ್ನುವುದು ಎಂಬರ್ಥಗಳನ್ನು ಪಡೆಯಿತು. ನಾನು (೧೯೬೮) ರಲ್ಲಿ ಮೈಸೂರಿನಿಂದ ಬೆಂಗಳೂರಿಗೆ ವಾಸಿಸಲು ಬಂದಾಗ, ಬೆಂಗಳೂರಿನ ಯಾವ ಗೌರವಸ್ಥನೂ ತನ್ನನ್ನು "ಕನ್ನಡ ಚಳವಳಿಕಾರ" ನೆಂದು ಕರೆಯಿಸಿಕೊಳ್ಳಲು ಸಿದ್ಧನಿರಲಿಲ್ಲ. ಇಲ್ಲೇ ಹೇಳಿ ಬಿಡುವುದು ಒಳ್ಳೆಯದು. ಗೋಕಾಕ್ ಚಳವಳಿಯ ಕಾಲದಿಂದ (೧೯೮೨) ಬೆಂಗಳೂರಲ್ಲಿ ನಡೆದಿರುವ ಕನ್ನಡ ಚಳವಳಿಯು (ಚಳವಳಿ) ಎಂಬ ಮಾತಿಗೆ ಅಂಟಿಕೊಂಡಿದ್ದ ಕಳಂಕವನ್ನು ಅಳಿಸಿ ಹಾಕಿದೆ. ಅಲ್ಲಿ ಇಂದು ನಡೆಯುವ ಕನ್ನಡ ಚಳವಳಿ ಕಾರ್ಯಕ್ರಮಗಳಲ್ಲಿ ಹಿರಿಯ ಸಾಹಿತಿಗಳು, ಪತ್ರಕರ್ತರು, ಕಲಾವಿದರು, ಇತರ ಕ್ಷೇತ್ರಗಳ ಪ್ರಜ್ಞಾವಂತರು ಯಾವುದೇ ಅಳುಕೂ ಇಲ್ಲದೆ ಭಾಗವಹಿಸುತ್ತಾರೆ. ಕಾರಣ ಸ್ಪಷ್ಟವಾಗಿದೆ, ನಮ್ಮ ಕಾರ್ಯಗಳಿಂದ ಪದಗಳಿಗೆ ಕಳಂಕ ಅಂಟುತ್ತದೆ. ಅಥವಾ ಒಳ್ಳೆಯ ಅರ್ಥವು ಬರುತ್ತದೆ. ಭಾಷೆ ಎಷ್ಟೇ ಆಗಲಿ, ಮನುಷ್ಯಾವಲಂಬಿ ತಾನೇ. ಈ ಬಗ್ಗೆ ವಿವರಗಳು ಮುಂದೆ ಬರುತ್ತವೆ.

'ಚಳವಳಿ' ಎಂದರೇನು ?

ಬಹಳ ಜನ ಚಳವಳಿ ಎಂದರೆ ದೊಂಬಿ, ಗಲಾಟೆ, ಮೆರವಣಿಗೆ, ಸಭೆ, ಘೋಷಣೆ ಎಂದು ಅರ್ಥ ಮಾಡಿಕೊಳ್ಳುತ್ತಾರೆ. ಸಂಸ್ಕೃತದ 'ಚಲನ ವಲನ'ವೇ Movement ಪದಕ್ಕೆ ಸರಿಯಾದ ಸಮಾನ ಪದ ಚಳವಳಿ ಎಂದಾಗಿದೆ. ಒಂದು ಅತೃಪ್ತ ಸಮಾಜ ತನಗಾಗುತ್ತಿರುವ ಅನ್ಯಾಯಗಳನ್ನು ಕಿತ್ತೊಗೆಯಲು ನಡೆಸುವ ಸಾಂಘಿಕ ಪ್ರಯತ್ನವೇ ಚಳವಳಿ. ಒಬ್ಬೊಬ್ಬ ವ್ಯಕ್ತಿಗೂ ಅನ್ಯಾಯದ ಅರಿವಿರುತ್ತದೆ. ಆದರೆ ಅಂತಹ ಅನ್ಯಾಯದ ಅರಿವು ಸಮಾಜದಲ್ಲಿ ವ್ಯಾಪಕವಾದಾಗ, ಆ ಜನರನ್ನು ಒಂದು ಸಂಘಟನೆಯ ಅಡಿಯಲ್ಲಿ ಸೇರಿಸುವ ಒಬ್ಬ ಮುಂದಾಳು ಅಥವಾ ಮುಂದಾಳುಗಳು ಹುಟ್ಟಿಕೊಳ್ಳುತ್ತಾರೆ. ಕರಪತ್ರ, ಘೋಷಣೆ, ಸಭೆ, ಧರಣಿ ಇವೇ ಮೊದಲಾದ ಮಾರ್ಗಗಳಲ್ಲಿ ಬಹುಸಂಖ್ಯಾತ ಜನತೆಯ ಅಸಂತೋಷ ವ್ಯಕ್ತವಾಗುತ್ತದೆ. ಅನ್ಯಾಯಕ್ಕೆ ಮೂಲ ಕಾರಣವಾದ ಅಧಿಕಾರಶಾಹೀ ಅಥವಾ ಬಂಡವಾಳಶಾಹೀ ಅಲ್ಪಸಂಖ್ಯಾಕ ವರ್ಗವು ಬಹುಸಂಖ್ಯಾಕರನ್ನು ಹೆದರಿಸುವ, ಲೋಭಗೊಳಿಸುವ, ಒಡೆದು ದುರ್ಬಲಗೊಳಿಸುವ ಏನೇನೋ ಹಂಚಿಕೆಗಳನ್ನು ಹೂಡಿ ಚಳವಳಿಯನ್ನು ನಿರ್ನಾಮ ಮಾಡಲು ಯತ್ನಿಸುತ್ತದೆ. ಆಕಸ್ಮಿಕವಾಗಿ ಹಿಂಸಾಚಾರವೂ ಅನಿವಾರ್ಯವಾಗಬಹುದು. ಅತೃಪ್ತರನ್ನು ಅದುಮಿಡಲು ಯತ್ನಿಸಿದಷ್ಟೂ, ಸಂಘಟನೆ ಬಲವಾಗಿದ್ದು ನಾಯಕರು ನಿಷ್ಠಾವಂತರಾಗಿದ್ದರೆ ಚಳವಳಿ ಇನ್ನೂ ಉಗ್ರವಾಗುತ್ತದೆ. ತಾತ್ವಿಕ ಬುನಾದಿಯ ಯಾವುದೇ ಚಳವಳಿಯೂ ಅಂತಿಮವಾಗಿ ಜಯಗಳಿಸಿಯೇ ಗಳಿಸುತ್ತದೆ. ಈ ತೀರ ಸಂಕ್ಷಿಪ್ತ ವಿವರಣೆಯ ಹಿನ್ನೆಲೆಯಲ್ಲಿ ಕನ್ನಡ ಚಳವಳಿಯನ್ನು ನೋಡೋಣ. ಯಾವುದೇ ಚಳವಳಿ ಸಾಮೂಹಿಕವಾದದ್ದು. ಮತ್ತು ಸಮೂಹ ಕಲ್ಯಾಣವೇ ಅದರ ಗುರಿ.

ಗೋಕಾಕ್ ಚಳವಳಿ

ಗೋಕಾಕ್ ಚಳವಳಿ ೧೯೮೨ರಲ್ಲಿ ಒಮ್ಮೆಗೇ ಭುಗಿಲೆದ್ದು ಕನ್ನಡಿಗರ ಸ್ವಾಭಿಮಾನವನ್ನು ಎಚ್ಚರಿಸಿತು. ನಿಜವಾಗಿ ನೋಡಿದರೆ ಯಾವುದೇ ಚಳವಳಿ ಇದ್ದಕ್ಕಿದ್ದಂತೆ ಆರಂಭವಾಗುವುದಿಲ್ಲ. ಪ್ರೌಢ ಶಾಲೆಗಳಲ್ಲಿ ಭಾಷೆಯ ಕಲಿಕೆಯಲ್ಲಿ ದಿನೇ ದಿನೇ ಕನ್ನಡವನ್ನು ಹಿಂದೆ ಹಾಕಿ ಸಂಸ್ಕೃತವು ಮೆರೆಯಲು ಆರಂಭಿಸಿತು. ಬೆಂಗಳೂರು ಮತ್ತು ಇತರ ದೊಡ್ಡ ನಗರಗಳಲ್ಲಿನ ಕೆಲವು ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳು ನಡೆಸುತ್ತಿದ್ದ ಪ್ರೌಢ ಶಾಲೆಗಳಲ್ಲಿ ಕನ್ನಡವನ್ನು ಆಯ್ಕೆ ಮಾಡಿಕೊಳ್ಳುವವರ ಸಂಖ್ಯೆ ಸರ್ರನೆ ಕೆಳಗಿಳಿಯುತ್ತ ಬಂತು. ಆರು ಕನ್ನಡ ಸೆಕ್ಷನ್ನುಗಳೂ ಒಂದು ಸಂಸ್ಕೃತ ಸೆಕ್ಷನ್ ಇದ್ದ ಕಡೆ ಪರಿಸ್ಥಿತಿ ತಲೆಕೆಳಗಾಗಿ ಒಂದು ಕನ್ನಡ ಸೆಕ್ಷನ್, ಆರು ಸಂಸ್ಕೃತ ಸೆಕ್ಷನ್ನುಗಳು ಕಾಣಿಸಿಕೊಂಡವು.

ಈ ಪರಿಸ್ಥಿತಿ ಗ್ರಾಮಾಂತರಗಳಿಗೂ ಹಬ್ಬಿ, ಕನ್ನಡವು ಶಿಕ್ಷಣ ಕ್ಷೇತ್ರದಲ್ಲಿ ಹಿನ್ನಡೆಯುವ ಸೂಚನೆ ಕಾಣಿಸಿತು. ಇದರ ಬಗ್ಗೆ ಕೂಲಂಕಷವಾಗಿ ವಿಚಾರಿಸಲು ಕರ್ನಾಟಕ ಸರ್ಕಾರವು ಪ್ರೊ. ವಿ. ಕೃ. ಗೋಕಾಕರ ಅಧ್ಯಕ್ಷತೆಯಲ್ಲಿ ಒಂದು ಆಯೋಗವನ್ನು ನೇಮಿಸಿತು. ಆ ಆಯೋಗವು ಹಲವು ಕಾಲ ಮಾಹಿತಿ ಸಂಗ್ರಹಿಸಿ, ಕರ್ನಾಟಕಾದ್ಯಂತ ಸಂಚರಿಸಿ ಅಭಿಪ್ರಾಯಗಳನ್ನು ಸಂಗ್ರಹಿಸಿ, ಸರಕಾರಕ್ಕೆ ಒಂದು ವರದಿಯನ್ನು ಸಲ್ಲಿಸಿತು. ಸರ್ಕಾರವು ಆ ವರದಿಯನ್ನು ಒಪ್ಪಿಕೊಂಡಿದ್ದರೆ ತಕರಾರಿರುತ್ತಿರಲಿಲ್ಲ. ಆದರೆ ಅದನ್ನು ಜಾರಿಗೊಳಿಸದೆ ಅದಕ್ಕೆ ನಿಧಾನ ಮರಣವನ್ನು ಪ್ರಾಪ್ತಿಗೊಳಿಸುವ ಯೋಚನೆ ಮಾಡಿತು. ಗೋಕಾಕ್ ಚಳವಳಿಗೆ ಅದು ನಿಮಿತ್ತವಾಯಿತು.

ಒಟ್ಟು ಅತೃಪ್ತಿ ಕಾರಣ

ಆ ವರದಿಯಲ್ಲಿ ಕನ್ನಡವನ್ನು ಪ್ರೌಢಶಾಲೆಗಳಲ್ಲಿ ಒಂದು ಕಡ್ಡಾಯ ಪ್ರಥಮ ಭಾಷೆಯಾಗಿ ಶಿಫಾರಸುಮಾಡಿತ್ತು. ಸಂಸ್ಕೃತಕ್ಕೆ ಅನ್ಯಾಯವಾಗಿದೆಯೆಂದು ಭಾವಿಸಿದ ಕೆಲವರು ಅದು ಜಾರಿಗೆ ಬರದಂತೆ ನೋಡಿಕೊಂಡಿದ್ದರು. ಆದರೆ ಅದು ಜಾರಿಯಾಗಲೇಬೇಕೆಂದು ಪರಿಸ್ಥಿತಿಯನ್ನು ಅರಿತಿದ್ದ ಶಿಕ್ಷಣತಜ್ಞರು, ಅಧ್ಯಾಪಕರು, ಸಾಹಿತಿಗಳು, ಪತ್ರಕರ್ತರು ಹಟಹಿಡಿದರು. ಆ ಕಾಲಕ್ಕಾಗಲೇ ಕನ್ನಡ ನೆಲದಲ್ಲಿಯೇ ಕನ್ನಡಕ್ಕೆ, ಕನ್ನಡ ಜನಕ್ಕೆ ನಿರಂತರ ಅನ್ಯಾಯಗಳಾಗುತ್ತಿದ್ದುದು ಕನ್ನಡ ಜನತೆಯ ಅರಿವಿಗೆ ಬಂದಿತ್ತು. ಕರ್ನಾಟಕದ ಗಡಿಗಳು ಅಭದ್ರವಾಗಿದ್ದವು. ಕನ್ನಡವು ಆಡಳಿತ ಭಾಷೆಯಾಗಿ ಶಿಕ್ಷಣ ಮಾಧ್ಯಮವಾಗಿ ಜಾರಿಗೆ ಬಂದಿರಲಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಅನ್ಯಭಾಷೀಯರ ಮಿತಿಮೀರಿದ ವಲಸೆ ಕನ್ನಡ ಜನತೆಗೆ ಅಸಹನೀಯವಾಗಿದ್ದಿತು. ವಿಶೇಷವಾಗಿ ಬೆಂಗಳೂರಲ್ಲಿ ತಮಿಳರು ಮಲಯಾಳಿಗಳು ಎಲ್ಲ ಕೇಂದ್ರಾಧೀನ ಕಚೇರಿ ಕಾರ್ಖಾನೆಗಳಲ್ಲಿ ತುಂಬಿಕೊಂಡಿದ್ದರು. ಕೊಳೆಗೇರಿಗಳಲ್ಲೆಲ್ಲ ಅವರೇ. ಬೆಂಗಳೂರಲ್ಲಿ ಕನ್ನಡಿಗರನ್ನು ಅಪಮಾನಗೊಳಿಸಿದ ಉದಾಹರಣೆಗಳಿದ್ದವು. ವ್ಯಾಪಾರವೆಲ್ಲ ಉತ್ತರ ಭಾರತೀಯರ ಕೈಗೆ ಹೋಗಿತ್ತು. ಒಟ್ಟಿನಲ್ಲಿ ಉಸಿರು ಕಟ್ಟಿಸುವ ವಾತಾವರಣ, ಕರ್ನಾಟಕದಲ್ಲೇ ಕನ್ನಡ, ಕನ್ನಡಿಗರು ಪರಕೀಯರಾಗುತ್ತಿದ್ದಾರೆ ಎನ್ನುವ ಗುಪ್ತ ಭೀತಿ ಎಲ್ಲ ಕಡೆ ಹಬ್ಬಿತ್ತು. ಕರ್ನಾಟಕದ ಮೇಲೆ ನಡೆದಿರುವ ರಾಜಕೀಯ ದಾಳಿಗಳಷ್ಟೇ ಭಯಂಕರವಾಗಿದ್ದವು. ಈ ಆರ್ಥಿಕ, ಔದ್ಯೋಗಿಕ, ಭಾಷಿಕ ಜನಾಂಗಿಕ ದಾಳಿಗಳು. ಇನ್ನೂ ಭಯಾನಕವಾಗಿದ್ದವು. ಈ ಭಯ, ಅನ್ಯಾಯ, ಹತಾಶ ಅತೃಪ್ತಿಗಳಿಗೆ ಸರ್ಕಾರದ ನಿಷ್ಕ್ರಿಯತೆ ಇನ್ನು



ಟಿ.ವಿ. ತಂದ ಮೇಲೆ ಹಿಂದಿ ಪಾಠಗಳನ್ನು ಆಸಕ್ತಿಯಿಂದ ಓದ್ತಿದಾರೆ ..

ಪೋಷಕವಾಯ್ತು. ಹೆಸರಿಗೆ ಕರ್ನಾಟಕ ಸರ್ಕಾರವಾದರೂ, ಕನ್ನಡಿಗರ ಹಿತಾಸಕ್ತಿಯನ್ನು ರಕ್ಷಿಸಲು ಯಾವ ಸರ್ಕಾರವೂ, ಯಾವ ರಾಜಕಾರಣಿಯೂ ಮುಂದಾಗಲಿಲ್ಲ. ಕನ್ನಡಿಗನ ಸಜ್ಜನಿಕೆ, ಔದಾರ್ಯಗಳನ್ನು ಅನ್ಯ ಭಾಷೀಯರಂತೆಯೇ ಕರ್ನಾಟಕ ಸರ್ಕಾರವೂ, ರಾಜಕಾರಣಿಗಳೂ ಬಳಸಿಕೊಂಡರು. ಇದೆಲ್ಲದರ ಅರಿವಿದ್ದ ಕನ್ನಡ ಜನತೆ ಗೋಕಾಕ್ ವರದಿಯ ಅನುಷ್ಠಾನಕ್ಕಾಗಿ ದೊಡ್ಡ ಹೋರಾಟವನ್ನು ನಡೆಸಿತು, "ಗೋಕಾಕ್ ವರದಿ ಜಾರಿಗೆ ಬರಲಿ" ಎಂಬ ಘೋಷಣೆ ಅಂದಿನ ದಿನಗಳಲ್ಲಿ ಎಲ್ಲ ಕಡೆಗೂ ಕೇಳಿ ಬರುತ್ತಿದ್ದರೂ ಬಹಳ ಜನಕ್ಕೆ ಆ ವರದಿಯ ವಿವರಗಳೇ ತಿಳಿದಿರಲಿಲ್ಲ. ಆದರೂ ಕನ್ನಡಕ್ಕೆ ಏನೋ ಅನ್ಯಾಯ ಆಗಿದೆ, ಅದು ನಿವಾರಣೆ ಹೋಗಬೇಕು ಎಂಬ ಭಾವುಕತೆಯಿಂದ ಚಳವಳಿಯಲ್ಲಿ ಭಾಗವಹಿಸಿದವರೇ ಹೆಚ್ಚು.

ಪ್ರಯತ್ನಕ್ಕೆ ಜಯ

ಎಲ್ಲೆಲ್ಲೂ ಮೆರವಣಿಗೆಗಳು-ಸಭೆಗಳು ನಡೆದವು ಬಂಧನಗಳಾದವು. ಲಾಠಿ ಪ್ರಹಾರಗಳಾದವು. ವಾಹನ ಸಂಚಾರವನ್ನು ತಡೆದು ನಿಲ್ಲಿಸಿದರು. ಲಕ್ಷಾಂತರ ಕರಪತ್ರಗಳು, ಭಿತ್ತಿಪತ್ರಗಳು ಹಂಚಿಕೆಯಾದವು. ದಿನದಿಂದ ದಿನಕ್ಕೆ ಚಳವಳಿ ವರ್ಧಿಸಿತು. ಆ ಎಲ್ಲ ವಿವರಗಳನ್ನು ನಾನು ಇಲ್ಲಿ ಕೊಡುವುದಿಲ್ಲ. ಹಲವಾರು ಸಂಧಾನಗಳು ನಡೆದು, ಮಾರ್ಪಾಟಾದ ಗೋಕಾಕ್ ವರದಿಯು ಎಲ್ಲರ ಒಪ್ಪಿಗೆ ಪಡೆಯಿತು. ಸರ್ಕಾರ ಜನತೆಯ ಒತ್ತಾಯಕ್ಕೆ ಮಣಿಯಿತು. ಆ ಚಳವಳಿಯಲ್ಲಿ ಕೆಲವರು ತೋರಿದ ನಿಷ್ಠೆ, ಅಸೀಮ ತ್ಯಾಗಗಳು ಫಲ ಕೊಟ್ಟವು. ಪ್ರೌಢಶಾಲೆಗಳಲ್ಲಿ ಕನ್ನಡವನ್ನು ಕಡ್ಡಾಯ ಪ್ರಥಮ ಭಾಷೆಯಾಗಿ ಜಾರಿಗೆ ತರಲು ಸರ್ಕಾರ ಒಪ್ಪಿ, ಅದನ್ನು ಕಾರ್ಯರೂಪಕ್ಕೆ ತಂದಿತು. ಮೊದಲ ತರಗತಿಯಿಂದ ಕನ್ನಡವನ್ನು ಕಡ್ಡಾಯವಾಗಿ ಕಲಿಸುವ ಕೆಲಸ ೧೯೮೩ ರಿಂದ ಆರಂಭವಾಗಿದೆ. ಅದು ಎಂಟನೆ ತರಗತಿಗೆ, ಎಂದರೆ ಪ್ರೌಢಶಾಲೆಗಳಲ್ಲಿ ಮೊದಲ ತರಗತಿಗೆ ೧೯೯೦ ರಲ್ಲಿ ಬಂದಾಗ, ಗೋಕಾಕ್ ವರದಿ ಜಾರಿಗೆ ಬಂದಂತಾಗುತ್ತದೆ. ಗೋಕಾಕ್ ಚಳವಳಿ ಸೋತಿತೆಂದು ಕೆಲವರು ಭಾವಿಸಿದ್ದರೆ ಅದು ತಪ್ಪು. ಅದು ೧೯೯೦ ರಿಂದ ಜಾರಿಗೆ ಬರುತ್ತದೆ. ಹೈಸ್ಕೂಲ್ ಮೊದಲ ತರಗತಿಯಿಂದ ಕನ್ನಡವನ್ನು ಕಡ್ಡಾಯ ಮಾಡಲು ಕೆಲಸ ಆರಂಭವಾಗಿ ಮುಂದುವರಿಯುತ್ತ ಬಂದಿದೆ.

ಅಪೂರ್ವ ಸಾಧನೆ; ಇನ್ನೊಂದು ಮಗ್ಗಲು.

ಗೋಕಾಕ್ ವರದಿ ಜಾರಿಗೆ ಬರುತ್ತಿರುವುದು ಜಯದ ಇನ್ನೊಂದು ಮಗ್ಗುಲು. ಆದರೆ; ಅದು ಕನ್ನಡ, ಕನ್ನಡಿಗ, ಕರ್ನಾಟಕಗಳನ್ನು ಕಾಳಜಿಕೊಳ್ಳುವ ಕನ್ನಡಿಗನ ಒಳ ಆಕೋತ್ತರಕ್ಕೆ ಬೇಕಾದ ಒಂದು ಹುಮ್ಮಸ್ಸನ್ನು ಅಪೂರ್ವ ರೀತಿಯಲ್ಲಿ ತಂದುಕೊಟ್ಟಿತು. ಕರ್ನಾಟಕದ ಏಕೀಕರಣಕ್ಕೂ ಇಂತಹ ಸುವ್ಯವಸ್ಥಿತ ಹೋರಾಟ ನಡೆದಿರಲಿಲ್ಲ. ಒಂದು ಸಮಾನ ವೇದಿಕೆಯಿಂದ ಕನ್ನಡ ಜನತೆ ಎಂದೂ ಹೀಗೆ ಒಕ್ಕೊರಲಿನಿಂದ ಕನ್ನಡದ ಪರವಾಗಿ ಒಂದು ದೊಡ್ಡ ಧ್ವನಿಯನ್ನು ಮೇಲೆತ್ತಿರಲಿಲ್ಲ. ಕಾರ್ಮಿಕರು, ವಿದ್ಯಾರ್ಥಿಗಳು, ಕಚೇರಿ ಉದ್ಯೋಗಿಗಳು, ವಕೀಲರು, ಸಾಹಿತಿಗಳು, ಚಲನಚಿತ್ರ, ಸಂಗೀತ, ಚಿತ್ರ ಕ್ಷೇತ್ರಗಳ ಕಲಾವಿದರು, ಪತ್ರಕರ್ತರು, ಅಧ್ಯಾಪಕರು, ರೈತರು ಎಲ್ಲರೂ ಆ ಚಳವಳಿಯಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸಿದ್ದರು. ಕನ್ನಡಿಗರ ಅತೃಪ್ತಿ ಹೋರಾಟ ರೂಪದಲ್ಲಿ ಇಡೀ ಕರ್ನಾಟಕದ ಚರಿತ್ರೆಯಲ್ಲಿ ವ್ಯಕ್ತಗೊಂಡ ಪ್ರಥಮ ಉದಾಹರಣೆ ಅದು. ಆರುತ್ತಿದ್ದ ಕನ್ನಡಿಗನ ಅಭಿಮಾನವನ್ನು ಉಜ್ವಲಗೊಳಿಸಿದ ಕಾರ್ಯವನ್ನು ನಾನು ಗೋಕಾಕ್ ಚಳವಳಿಯ ಗೆಲುವಿನ ಇನ್ನೊಂದು ಮಗ್ಗುಲೆಂದು

ಭಾವಿಸುತ್ತೇನೆ. ಈ ಮುಗ್ಗುಲು ನನಗೆ ಇನ್ನೂ ಹೆಚ್ಚಿನ ಮಹತ್ವದ್ದಾಗಿ ಕಾಣುತ್ತದೆ. ಏಕೆಂದರೆ ೧೯೮೦ ರಿಂದ ನಡೆಯುತ್ತಿರುವ ಕನ್ನಡ ಚಳವಳಿಗೆ ಆ ಅಭಿಮಾನದ ಉದ್ದೀಪನವೇ ಮೂಲ ಬೀಜ.

ಕನ್ನಡ ಚಳವಳಿಯ ಆರಂಭ

ಗೋಕಾಕ್ ಚಳವಳಿ ಮುಗಿಯಿತು. ಸರ್ಕಾರ ವರದಿಯನ್ನು ಒಪ್ಪಿಕೊಂಡಿತು. ಚಳವಳಿಯ ವಿಜಯೋತ್ಸವವನ್ನೂ ಮಾಡಿಯಾಯಿತು. ಬೆಂಗಳೂರಿನಲ್ಲಿ ಚಳವಳಿಯ ಚುಕ್ಕಾಣಿ ಹಿಡಿದಿದ್ದ ಸಾಹಿತಿಗಳ ಕಲಾವಿದರ ಬಳಗದ ಕೆಲಸವು ಮುಗಿಯಿತೆಂದೂ ಅದನ್ನು ವಿಸರ್ಜಿಸುವುದೇ ಲೇಸೆಂದು ಸಲಹೆಯೂ ಬಂದಿತು. ಗೋಕಾಕ್ ಚಳವಳಿಯು ಕನ್ನಡ ಚಳವಳಿಯಾಗುವ ಅಗತ್ಯವಿತ್ತು. ವಾಸ್ತವವಾಗಿ ಗೋಕಾಕ್ ಚಳವಳಿಯು ವಿಸ್ತೃತ ಕನ್ನಡ ಚಳವಳಿಯ ಭಾಗವೆಂದೇ ನಾವು ಭಾವಿಸಿದ್ದುದರಿಂದ ಬಳಗದ ಕೆಲಸವನ್ನು ಮುಂದುವರಿಸುವ ತೀರ್ಮಾನವನ್ನು ಕೈಕೊಂಡೆವು. ಗೋಕಾಕ್ ಚಳವಳಿ ನಮಗೆ ಕೆಲವು ಪಾಠಗಳನ್ನು ಕಲಿಸಿಕೊಟ್ಟಿತ್ತು. ಸಂಘಟನೆ, ಒಗ್ಗಟ್ಟು, ಸಾತತ್ಯ ಅಥವಾ ನಿರಂತರ ಪ್ರಯತ್ನ, ಮಾರ್ಗ ಮತ್ತು ಗುರಿಗಳಲ್ಲಿ ಶುದ್ಧಿ, ನಿಸ್ವಾರ್ಥ, ನಿರ್ಭಯ, ನಿರ್ನಿರಾಶೆ, ಇವು ಮಾತ್ರ ಯಾವುದೇ ಚಳವಳಿಯನ್ನು ಜೀವಂತವಾಗಿರಿಸಿ ಮುಂದುವರಿಸಲು ಸಮರ್ಥವೆಂಬುದನ್ನು ಕಂಡುಕೊಂಡಿದ್ದೆವು. ಉನ್ನತ ಕನ್ನಡ ಸಂಸ್ಕೃತಿ ನಮಗೆ ಮೂಲ ಪ್ರಚೋದನೆಯಾಗಿ ನಿಂತಿತು. ಕರ್ನಾಟಕದ ಇಂದಿನ ದುರವಸ್ಥೆ ನಮ್ಮನ್ನು ಕ್ರಿಯಾಶೀಲರನ್ನಾಗಿ ಉಳಿಸಲು ಸಹಾಯಮಾಡಿತು. ನಮ್ಮಲ್ಲಿ ಕಠೋರ ಹಟವನ್ನು ಬೆಳಸಿತು. ಕನ್ನಡ, ಕನ್ನಡಿಗ, ಕರ್ನಾಟಕ ಇವುಗಳ ಉಳಿವು ಮತ್ತು ಬೆಳವಣಿಗೆಗಳೇ ನಮ್ಮ ಗುರಿಯಾದವು. ಅವುಗಳ ಬೆಳವಣಿಗೆ ಮಾತ್ರ ಭಾರತದ ಅಖಂಡತೆಯನ್ನು ಕಾಪಾಡುವುದೇ ಹೊರತು, ಹುಸಿ ರಾಷ್ಟ್ರೀಯತೆಯಲ್ಲವೆಂಬುದನ್ನು ಕಂಡುಕೊಂಡಿದ್ದೆವು. ಕರ್ನಾಟಕವೂ ಸೇರಿದಂತೆ ಎಲ್ಲ ಪ್ರಾಂತಗಳೂ ತಮ್ಮ ಸಾಂಸ್ಕೃತಿಕ ಅನನ್ಯತೆಯನ್ನು ಉಳಿಸಿಕೊಂಡು ಸಮಸಮನಾಗಿಯೇ ಬೆಳೆದರೆ ಮಾತ್ರ ಭಾರತದ ಪ್ರಗತಿಯೆಂಬ ಸೂರ್ಯ ಸ್ಪಷ್ಟ ಸತ್ಯವನ್ನು ದೊಡ್ಡ ಮಾತುಗಳ ಭ್ರಾಂತರು ಕಂಡುಕೊಳ್ಳುತ್ತಿಲ್ಲ. ವಾಸ್ತವವಾಗಿ ನಿಜವಾದ ಪ್ರಾಂತೀಯತೆ ನಿಜವಾದ ರಾಷ್ಟ್ರೀಯತೆಗೆ ವಿರೋಧಿಯೇನಲ್ಲ. ಈ ಸಿದ್ಧಾಂತ ನಮ್ಮ ಚಳವಳಿಗೆ ಬೆನ್ನೆಲುಬಾಯಿತು.

ಕಳೆದ ಐದೂವರೆ ವರ್ಷಗಳಲ್ಲಿ

ಬೆಂಗಳೂರಿನ ಸಾಹಿತಿಗಳ ಕಲಾವಿದರ ಬಳಗವು ಕನ್ನಡ ಚಳವಳಿಯನ್ನು ಆದರ ಶುಭ್ರ, ಜೀವಂತ ರೂಪದಲ್ಲಿ ಉಳಿಸಿಕೊಂಡು ಬಂದಿದೆ. ಈ ದಿನ ತಾನು ಕನ್ನಡ ಚಳವಳಿಗಾರನೆಂದು ಹೇಳಿಕೊಳ್ಳಲು ಯಾರಿಗೂ ಸಂಕೋಚವಿಲ್ಲ. ಹೆದರಿಸಿ, ಬೆದರಿಸಿ ಹಣ ಕೀಳುವುದನ್ನೇ ವೃತ್ತಿಯಾಗಿ ಮಾಡಿಕೊಂಡಿದ್ದ 'ವೃತ್ತಿ ಚಳವಳಿಗಾರರು' — ನಿಜ ಹೇಳುವುದಾದರೆ— ನಿಸ್ತೇಜರಾಗಿದ್ದಾರೆ; ಅವಿಶ್ವಾಸಿಗಳಾಗಿದ್ದಾರೆ. ಕಳೆದ ಐದೂವರೆ ವರ್ಷಗಳಲ್ಲಿ ಮಹಿಷಿ ಆಯೋಗದ ರಚನೆ, ಅದರ ವರದಿ ಪ್ರಕಟಣೆ ಮತ್ತು ಅದರ ಶಿಫಾರಸುಗಳ ಅನುಷ್ಠಾನಕ್ಕೆ ಉಸ್ತುವಾರಿ ಸಮಿತಿಯ ರಚನೆಗಳ ಕೆಲಸ ನಡೆದಿದೆ. ಕೇಂದ್ರ ಕಾರ್ಖಾನೆ ಮತ್ತು ಕಚೇರಿಗಳಲ್ಲಿ ಶೇಕಡ ಎಂಬತ್ತರಷ್ಟು ಸ್ಥಳೀಯರಿಗೆ ಉದ್ಯೋಗ ದೊರಕಬೇಕೆಂಬುದು ಅದರ ಮುಖ್ಯ ಶಿಫಾರಸು. ಬೆಂಗಳೂರು ದೂರದರ್ಶನದಲ್ಲಿ ದಿನಕ್ಕೆ ಎರಡು ಗಂಟೆ ಕನ್ನಡ ಕಾರ್ಯಕ್ರಮಗಳು ಪ್ರಸಾರವಾಗುತ್ತಿವೆ. ನವಂಬರ್ ಒಂದರಿಂದ ಹಂಪೆಯಲ್ಲಿ ಕನ್ನಡ ವಿಶ್ವವಿದ್ಯಾಲಯ ಕಾರ್ಯಾರಂಭ ಮಾಡಲಿದೆ. ಮಿತಿಮೀರಿದ ವಲಸೆಗಳ ವಿರುದ್ಧ ಧ್ವನಿ ಎತ್ತಲಾಗಿದೆ. ಇಂಗ್ಲೀಷ್ ಮಾಧ್ಯಮ ಶಾಲೆಗಳಿಗೆ ಅನುಮತಿ ಕೊಡುವುದನ್ನು ನಿಲ್ಲಿಸಲಾಗಿದೆ. ಬೆಳಗಾವಿಗೆ ಹೋಗಿ, ಅಲ್ಲಿನ ಸಾರ್ವಜನಿಕ ಸಭೆಯಲ್ಲಿ ಕನ್ನಡ ನಾಡಿನ ರಕ್ಷಣೆಗಾಗಿ ಪ್ರಾಣತ್ಯಾಗಕ್ಕೂ ಸಿದ್ಧ ಎಂಬ ಪ್ರತಿಜ್ಞೆಯನ್ನು ಸ್ವೀಕರಿಸಲಾಗಿದೆ. ಕನ್ನಡ ಮಾಧ್ಯಮದಲ್ಲಿ ಓದಿದವರಿಗೆ ತಾಂತ್ರಿಕ ಕೋರ್ಸುಗಳಲ್ಲಿ ಪ್ರವೇಶಕ್ಕೆ ಶೇಕಡ ಹದಿನೈದು ಅಂಕಗಳನ್ನು 'ಉತ್ತೇಜಕಾಂಕ' ಗಳಾಗಿ ಸೇರಿಸಲು ಸರ್ಕಾರವನ್ನು ಒಪ್ಪಿಸಲಾಗಿದೆ. ಸಂಗೀತಗಾರರ, ಕಾರ್ಮಿಕರ, ಬ್ಯಾಂಕ್ ನೌಕರರ ಸಂಘಟನೆಗೆ ಪ್ರಯತ್ನಿಸಲಾಗಿದೆ. ಈ ಎಲ್ಲ ಮತ್ತು ಇತರ ಹಲವು ಕಾರ್ಯಗಳನ್ನು ಸಾಹಿತಿಗಳ ಕಲಾವಿದರ ಬಳಗವು ಇತರ ಸಂಘಟನೆಗಳ ಸಹಾಯವನ್ನು ಪಡೆದೋ, ಅಥವಾ ಇತರ ಸಂಘಟನೆಗಳ ಜೊತೆ ಸೇರಿಯೋ ಸಾಧಿಸಿವೆ. ಸರ್ಕಾರಿಯಾ ಆಯೋಗದ ಮುಂದೆ ಬಳಗವು ಬೇರೆ ಬೇರೆ ಪ್ರಾಂತಗಳಿಗೆ ಪ್ರಾದೇಶಿಕ ಸ್ವಾಯತ್ತತೆಯನ್ನು ಪ್ರತಿಪಾದಿಸಿ ಮನವಿಯನ್ನು ಒಪ್ಪಿಸಿದೆ. ಬಳಗವು 'ಕನ್ನಡಕಲಿ' ಎಂಬ ಮಾಸಿಕ ವಾರ್ತಾಪತ್ರವನ್ನು ಪ್ರಕಟಿಸುತ್ತಿದೆ. ಬೆಂಗಳೂರಿನ ಅನೇಕ ಕನ್ನಡಿಗರು, ಕನ್ನಡ ಚಳವಳಿಯಿಂದಾಗಿ ತಮ್ಮ ಕಾರ್ಖಾನೆ, ಕಚೇರಿಗಳಲ್ಲಿ 'ಮಾನ'ದಿಂದ ಬದುಕಲು ಸಾಧ್ಯವಾಗಿದೆಯೆಂದಿದ್ದಾರೆ.

ಹೋಲಿಕೆ

ಬರುವ ಭರವಸೆ ಕೊಟ್ಟು
ಇದ್ದಕ್ಕಿದ್ದಂತೆ
ರದ್ದು ಮಾಡುತ್ತದೆ
ಬಂದರೂ ಒಂದು ವೇಳೆ
ಹಾಡಿದ್ದನ್ನೇ ಹಾಡುತ್ತದೆ
ಮಾನ್ಯ ಸಚಿವರಂತೆ
ನನ್ನ ಕವಿತೆ.

—ಎಚ್. ಡುಂಡಿರಾಜ್


ಸಭೆಗಳು, ಮೆರವಣಿಗೆಗಳು ಇ.ಇ.

ಅದಕ್ಕಾಗಿ ನಡೆದಿರುವ ಸಭೆಗಳು, ಮೆರವಣಿಗೆಗಳು, ಹೊರಡಿಸಿರುವ ಕರಪತ್ರಗಳು ಅಸಂಖ್ಯಾತ. ಮಂತ್ರಿಗಳ ಮನೆಗಳಿಗೆ, ಶಾಸಕರ ಕೊಠಡಿಗಳಿಗೆ, ಅಧಿಕಾರಿಗಳ ಕಚೇರಿಗಳಿಗೆ ಎಡತಾಕಿದ್ದು ಹಲವಾರು ಬಾರಿ. ಪ್ರಾಮಾಣಿಕ ಉದ್ದೇಶದ ಯಾವ ಪ್ರಯತ್ನವೂ ಎಂದೂ ನಿಷ್ಫಲವಾಗುವುದಿಲ್ಲ ಎಂಬುದಕ್ಕೆ ನಮ್ಮ ಚಳವಳಿ ಒಂದು ಚಿಕ್ಕ ಉದಾಹರಣೆ.

ಮುಂದೇನು? ಗೆಲುವು ಖಚಿತ

'ಮುಂದೇನು?' ಎಂಬ ಪ್ರಶ್ನೆಗೆ ಉತ್ತರ ಸ್ಪಷ್ಟವಾಗಿದೆ-ಹೋರಾಟ, ನಿಲ್ಲದ ಹೋರಾಟ. ಇಲ್ಲಿಯವರೆಗೆ ಆಗಿರುವುದು ಆಗಬೇಕಾಗಿರುವುದರ ನೂರನೇ ಒಂದು ಭಾಗ ಮಾತ್ರ. ಕನ್ನಡ ಸಮಗ್ರ ಕ್ರಾಂತಿಯೊಂದಕ್ಕೆ ಜನತೆಯನ್ನು ಅಣಿ ಮಾಡಬೇಕಾಗಿದೆ. ಜನತೆ ಸಿದ್ಧವಾಗದೆ ರಾಜಕಾರಣಿಗಳು ಕನ್ನಡದ ಹಿತಕ್ಕೆ ಮನಸ್ಸು ಕೊಡುವುದಿಲ್ಲ. ಕರ್ನಾಟಕಕ್ಕೆ ಅನ್ಯಭಾಷೆಯವರ ವಲಸೆ ನಿಂತೂ ನಿಲ್ಲಬೇಕು. ಕನ್ನಡಿಗರಿಗೆ ಕೇಂದ್ರ ಕಚೇರಿ ಕಾರ್ಖಾನೆಗಳಲ್ಲಿ ಶೇಕಡ ಎಂಬತ್ತರಷ್ಟು ಹುದ್ದೆಗಳು ದೊರಕುವವರೆಗೆ ಹೊರಗಿನವರ ನೇಮಕಾತಿ ನಿಲ್ಲಬೇಕು. ವ್ಯಾಪಾರವು ಕನ್ನಡಿಗರ ಕೈಗೆ ಬರಬೇಕು. ಆಡಳಿತ, ಶಿಕ್ಷಣ ಕ್ಷೇತ್ರಗಳಲ್ಲಿ ಕನ್ನಡವು ಅಗ್ರಮಾನ್ಯತೆ ಪಡೆಯಬೇಕು. ಕನ್ನಡಿಗರು ತಮ್ಮ ಧ್ವನಿ ದಿಲ್ಲಿಯಲ್ಲೂ ಕೇಳಿಸುವಂತಹ ರಾಜಕೀಯ ಶಕ್ತಿಯಾಗಿ ಬೆಳೆಯದ ಹೊರತು ವಿಜಯನಗರ ಉಕ್ಕಿನ ಕಾರ್ಖಾನೆಯಾಗಲಿ, ಹೊಸ ರೈಲ್ವೆ ಮಾರ್ಗಗಳಾಗಲಿ ಇತರ ಯಾವುದೇ ಸೌಲಭ್ಯಗಳೂ ಕರ್ನಾಟಕಕ್ಕೆ ದಕ್ಕುವುದಿಲ್ಲ. ಈ ಹಿನ್ನೆಲೆಯಲ್ಲಿ ಪ್ರಾದೇಶಿಕ ಪಕ್ಷವೊಂದರ ಅಗತ್ಯದ ಬಗ್ಗೆ ಬಳಗವು ವಿಚಾರ ಗೋಷ್ಠಿಯನ್ನೂ ನಡೆಸಿತು. ಕನ್ನಡಿಗರ ಮೂಲಭೂತ ಅಗತ್ಯವೆಂದರೆ ತಮ್ಮ ಬಗ್ಗೆ ಆತ್ಮವಿಶ್ವಾಸ, ತಮ್ಮ ಭಾಷೆ ಸಂಸ್ಕೃತಿಗಳ ಬಗ್ಗೆ ಅಭಿಮಾನ. ಈ ಒಂದೊಂದು ದೂರದ ಕನಸಾಗಿ ಕನವರಿಕೆಯಾಗಿ ಅಸಾಧ್ಯದ ಆದರ್ಶವಾಗಿ ಕಾಣಿಸಬಹುದು. ಇಂದಿನ ಕನ್ನಡ ಕಾರ್ಯಕರ್ತರಿಗೆ ಸ್ವಾರ್ಥವಿಲ್ಲವಾದ್ದರಿಂದ ನಿರ್ಭಯತೆ ಇದೆ. ನಿರ್ಭಯತೆಯ ಜೊತೆ ಅಪಾರ ಆಶಾವಾದ ಇದೆ. ಅವನು ಎಷ್ಟು ವಿನಯಪರನೋ ಅಷ್ಟೇ ಕಠೋರನೂ ಹೌದು. ನಿರಾಸೆ ಎಂಬುದಕ್ಕೆ ಅವನಲ್ಲಿ ಸ್ಥಾನವೇ ಇಲ್ಲ. ಕಾಲ ಕ್ಷಿಪ್ರವಾಗಿ ವ್ಯತ್ಯಾಸಗೊಳ್ಳುತ್ತಿದೆ. ಇನ್ನು ಒಂದೆರಡು ವರ್ಷಗಳಲ್ಲಿ ಕನ್ನಡ ಕಾರ್ಯಕರ್ತರು ಕೈಗೊಳ್ಳಬೇಕಾದ ಕೆಲವು ಕಾರ್ಯಕ್ರಮಗಳಿಗೆ ಗಂಭೀರವಾಗಿ ಮನಸ್ಸು ಕೊಟ್ಟಿದ್ದಾರೆ. ಅಸೀಮ ತ್ಯಾಗಕ್ಕೆ, ಅಹಿಂಸಾವಾದಕ್ಕೆ ಬೆಲೆಯಿತ್ತಿರುವ ಅವರ ಕಾರ್ಯಕ್ರಮಗಳೇನು ಎಂಬುದು ಕೆಲವೇ ಕಾಲದಲ್ಲಿ ಪ್ರಕಟವೂ ಆಗಬಹುದು. ಕನ್ನಡವನ್ನು ಗೆಲ್ಲಿಸುವ ಧೀರ ಪ್ರತಿಜ್ಞೆ ಅವರದು. ಅವರು ಕನ್ನಡವನ್ನು ಗೆಲ್ಲಿಸಿಯೇ ಗೆಲ್ಲಿಸುತ್ತಾರೆ. □





ಪ್ರೇಮ, ಕಾಮಗಳಿಗೆ ನಾಂದಿಯಾಗಿ ಬರುತ್ತದೆ ಪ್ರಣಯ. ಪ್ರೇಮವು ನಡುವಿನ ಕಥೆಯಾದರೆ ಕಾಮವು ಅದರ ಭರತವಾಕ್ಯ. ಜಗತ್ತಿನಲ್ಲಿ ಪ್ರಣಯ ಬಿಟ್ಟು ಇನ್ನೇನಿದೆ? ಶೇಕ್ಸ ಪಿಯರ್, ಕಾಳಿದಾಸಾದಿಯಾಗಿ ಭಯೋತ್ಪಾದಕ ಕವಿಗಳ ವರೆಗೆ ಸಾಹಿತ್ಯವೆಲ್ಲಾ ಪ್ರಣಯಮಯ. ೨೧ನೆಯ ಶತಮಾನದ ಮುಸ್ಸಂಜೆಯಾದ ಇಂದಿನ ಕಥೆ, ಕಾವ್ಯ, ಸಿನಿಮಾ, ಟಿ. ವಿ., ರೋಬೋ: ರೋಬಿ ಕಂಪ್ಯೂಟರ್, ಸ್ಟಾರ್‌ವಾರ್ ವರೆಗೆ ವಿಶ್ವದ ಬದುಕೆಲ್ಲವೂ ಪ್ರಣಯ, ಪ್ರಣಯ, ಪ್ರಣಯ, ಯುದ್ಧ-ಶಾಂತಿ, ಸಾವು ಬದುಕು, ಜನನ-ಜೀವನ, ಎಲ್ಲಾ ಪ್ರಣಯ ಮೂಲ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಮೊದಲು ಪ್ರಣಯ ಆಮೇಲೆ ಪ್ರಣವ.

ಒಂದು ಮಾತು ನೆನಪಿನಲ್ಲಿಡಬೇಕು. ಪ್ರಣಯ ಮಾಡುವುದು ಬೇರೆ, ಪ್ರಣಯ ಪತ್ರ ಬರೆಯುವುದು ಬೇರೆ. ಪ್ರಣಯ ಮಾಡುವುದು ಸುಲಭ: ಪ್ರಣಯ ಪತ್ರ ಬರೆಯುವುದು ಬಹಳ ತಾಪ. ಪ್ರಣಯ ಮಾಡುವಾಗ ಗಂಡು-ಹೆಣ್ಣು ಎಂಬ ವಸ್ತುಗಳು ಒಂದೇ ಸ್ಥಳದಲ್ಲಿ ಇರಬೇಕಾಗುತ್ತದೆ. ಪ್ರಣಯ ಪತ್ರ ಬರೆಯುವಾಗ ವಿರಹಾಗ್ನಿಯಲ್ಲಿ ಎರಡೂ ಜೀವಗಳು ಬೇಯುತ್ತ ಇರಬೇಕಾಗುತ್ತದೆ. ಇಲ್ಲದಿದ್ದರೆ ಪ್ರಣಯ ಪತ್ರ ಬರೆಯುವ ಅವಶ್ಯಕತೆಯೆಲ್ಲಿ? ವಿರಹ ವ್ಯಥೆಯನ್ನು ಮರೆಯಲೆಂದೆ ಪ್ರಣಯ ಪತ್ರಗಳು ಹುಟ್ಟಿಕೊಂಡವು. ವಿರಹಾವಸ್ಥೆಯೊಳಗ ತಾಳಿ ಬಾಳುವ ಪ್ರೇಮವೇ ಧರ್ಮಾವಿರುದ್ಧ ಕಾಮ ಎಂದು ಕನ್ನಡ ಮೇಘದೂತದ ಬೇಂದ್ರೆ ಹೇಳಿದ್ದಾರೆ.

ವಿರಹತಾಪ ಎಂದೊಡನೆಯೆ ಕವಿಸಮಯದ ಕನಸುಣಿತನ. ಅದರಲ್ಲಿ ಔಷಧಕ್ಕೂ ವಾಸ್ತವಾಂಶ ಸಿಕ್ಕುವುದಿಲ್ಲ. ಒಬ್ಬ ರಾಜಪುತ್ರಿ ಕನಸಿನಲ್ಲಿ ಒಬ್ಬ ರಾಜ ಪುತ್ರನನ್ನು ಕಾಣುತ್ತಾಳೆ, ಅನುರಕ್ತೆಯಾಗುತ್ತಾಳೆ, ಪ್ರೇಮ ಸಾಗರದಲ್ಲಿ ಮುಳುಗುತ್ತಾಳೆ. ಬೆಳಗಿನ ಜಾವಕ್ಕೆ ವಿರಹದುರಿಯಿಂದ ಟೆಂಪರೇಚರ್ ಏರುತ್ತದೆ. ಮಧ್ಯಾಹ್ನದ ಹೊತ್ತಿಗೆ ಕೊಳದಲ್ಲಿ ಬಿದ್ದುಕೊಂಡರೆ, ಕೊಳ ನೀರು ಎಸರಾಗುತ್ತದೆ; ಶೈತ್ಯಾಗಾರ ಎಂಜಿನ್ನಿನ ಅಗ್ನ್ಯಾಗಾರವಾಗುತ್ತದೆ. ಇತ್ತ ಒಬ್ಬ ರಾಜ ಪುತ್ರನೂ ಕನಸ್ಸಿನಲ್ಲಿ ಒಬ್ಬ ರಾಜ ಪುತ್ರಿಯನ್ನು ಕಂಡು ಪ್ರಣಯಿಸಿ ವಿರಹ ವ್ಯಥೆಯಲ್ಲಿ ಕೊರಗಿ ಸೊರಗಿ ಕ್ಷೀಣಿಸುತ್ತಿರಲು ಯುವರಾಜನ ಈ ಸ್ವಪ್ನ ಸುಂದರಿಯನ್ನು ಶೋಧಿಸಲು ನಾಲ್ಕೂ ದಿಕ್ಕಿಗೆ ದೂತರನ್ನು ಕಳಿಸುತ್ತಾನಂತೆ ರಾಜ. ಹೀಗೆಯೇ ಮುಂದರಿಯುತ್ತದೆ ಈ ವಿರಹ ವ್ಯಥೆಯ ಕಥೆ.

> [illegible]

ಕಾಳಿದಾಸನ ಶಕುಂತಲೆಯೂ ದುಷ್ಯಂತನ ವಿರಹ ತಾಳದೆ, ಕಮಲ ಪತ್ರದ ಮೇಲೆ ಪ್ರಣಯ ಪತ್ರ ಬರೆಯುತ್ತಾಳೆ. ಆ ಕಾಲಕ್ಕೆ ಕಮಲ ಪತ್ರ, ಭೂರ್ಜ ಪತ್ರಗಳೆ ಕಾಗದಗಳು. ದಮಯಂತಿ ತನ್ನ ಪ್ರಣಯ ಪತ್ರವನ್ನು ಹಂಸದ ಮೂಲಕ ಕಳಿಸಿದ್ದರಿಂದಲೇ ನಮ್ಮ ಪತ್ರ ವ್ಯವಹಾರ ಇಲಾಖೆಗೆ ಅಂಚೆ ಇಲಾಖೆ ಎಂದು ಹೆಸರು. 'ಅಂಚೆ' ಇದು ಹಂಸ ಶಬ್ದದ ತದ್ಭವ ರೂಪ. ಈ ತದ್ಭವ ರೂಪ ಒಂದು ಇಲಾಖೆಗೆ ಹೆಸರು ಬರಬೇಕಾದರೆ ದಮಯಂತಿ ಬರೆದ ಪ್ರಣಯ ಪತ್ರ ಅಂಚೆಯ ದ್ವಾರಾ ನಳನಿಗೆ ಮುಟ್ಟಿದ ಉದಾಹರಣೆಯೆ ಇದ್ದಿರಬೇಕಲ್ಲವೆ? ಎಂದರೆ ಪ್ರಣಯ ಪತ್ರಗಳ ಆದ್ಯ ಪ್ರವರ್ತಕಳು ದಮಯಂತಿಯೆ ಇದ್ದಿರಬೇಕಲ್ಲವೆ? ನಿಜವಾಗಿಯೂ ಇದೊಂದು ಸಂಶೋಧನೆಯಲ್ಲವೆ?

ಕವಿಸಮಯದ ವಿರಹ ತಾಪದ ವರ್ಣನೆಗಳು ಕೇವಲ ಕಲ್ಪನೆಯ ಕಾಂಚನ ಮೃಗಗಳು. ನಮ್ಮ ಅಮರ ಕವಿ ಕಾಳಿದಾಸನ ಯಕ್ಷನಿಗೆ ಪ್ರಣಯ ಸಂದೇಶ ಕಳಿಸಲು ಮೇಘ ಬಿಟ್ಟು ಮತ್ತೊಬ್ಬ ದೂತ ಸಿಗಲಿಲ್ಲ. ವಿರಹಿಗಳಿಗೆ ಚೇತನಾಚೇತನದ ಪರಿಜ್ಞಾನವೇ ಇರುವುದಿಲ್ಲವೆಂದು ಕವಿಯೇ ಒಪ್ಪಿಕೊಂಡು ತನ್ನ ಕಲ್ಪನೆಯ ಮೋಡವನ್ನು

ಓಡಿಸುತ್ತಾನೆ. ಇರಲಿ. ಯಕ್ಷನು ಮೇಘದೊಂದಿಗೆ ಪ್ರಣಯ ಸಂದೇಶ ಕಳಿಸಿದನೆಂದಿಟ್ಟುಕೊಂಡರೂ ಆತ ದಮಯಂತಿಯಷ್ಟು ಪ್ರಗತಿಶೀಲನಲ್ಲವೆಂದೇ ಹೇಳಬೇಕು. ಯಕ್ಷ ಕೈ ಹಿಡಿದ ಪತ್ನಿಗೆ ಪ್ರೇಮ ಸಂದೇಶ ಕಳಿಸಿದರೆ, ದಮಯಂತಿ ಇನ್ನೂ ಕೈ ಹಿಡಿಯದ ಪ್ರಿಯಕರನಿಗೆ ತನ್ನ ಪ್ರಣಯ ಪತ್ರ ಕಳಿಸುತ್ತಾಳೆ. ವಸ್ತುತಃ ಪ್ರಣಯ ಪತ್ರ ಎಂದರೆ ಇದು ಮದುವೆಯ ಮೊದಲೆ ಪ್ರಿಯಕರನಿಗೊ, ಪ್ರಿಯತಮೆಗೊ ಪತ್ರ ಬರೆಯುವುದು. ಮದುವೆಯಾದ ಮೇಲೆ ಬರೆದ ಪ್ರಣಯ ಪತ್ರಕ್ಕೆ ಪ್ರಣಯ ಪತ್ರ ಎಂಬುದೇ ಅಸಮರ್ಪಕ. ಬೇಕಾದರೆ ಸಂಸಾರಿಗನ ತಾಪತ್ರಯ ಪತ್ರ ಎನ್ನಬಹುದು ಅದಕ್ಕೆ.

ರಾಮಾಯಣದ ಶ್ರೀರಾಮಚಂದ್ರನಷ್ಟು ವಿರಹ ವ್ಯಥೆಯನ್ನು ಅನುಭವಿಸಿದ ತರುಣ ಪ್ರಣಯಿ ಇದ್ದಿರಲಿಕ್ಕಿಲ್ಲ. ವನವಾಸಿ ಶ್ರೀ ರಾಮಚಂದ್ರನು ಸೀತೆಯನ್ನು ಕಳೆದುಕೊಂಡಾಗ ಮಾರುತಿ ದೌತ್ಯದ ಮೂಲಕ (ಇದೇ ಕಾಳಿದಾಸನಿಗೆ ಮೇಘದೂತಕ್ಕೆ ಪ್ರೇರಣೆ ಎಂದು ಹೇಳುತ್ತಾರೆ) ತನ್ನ ಉಂಗುರವನ್ನು ಕಳಿಸಿದ್ದೇ ಒಂದು ಪ್ರಣಯ ಪತ್ರ ಪ್ರತೀಕವಾಗಿದೆ. ಭವಭೂತಿಯ 'ಉತ್ತರ ರಾಮ ಚರಿತ'ದ ಶ್ರೀ ರಾಮನು ಉತ್ತಮ ಪ್ರಣಯಪತ್ರ ಬರೆಯಬಹುದಾಗಿತ್ತು ಎಂಬುದನ್ನು ಕವಿ ಒಂದು ಶ್ಲೋಕದಿಂದ ತೋರಿಸಿಕೊಟ್ಟಿದ್ದಾನೆ. "ಕಿಮಪಿ ಕಿಮಪಿ ಮಂದಂ ಮಂದಮಾಸಕ್ತಿಯೋಗಾತ್ ಅವಿರಲಿತ ಕಪೋಲಂ ಜಲ್ಪತೋರಕ್ರಮೇಣ"...ಎಂಬುದು. ಗೋದಾವರೀ ತೀರದ ಪರ್ವತ ಪ್ರದೇಶದಲ್ಲಿ ಒಂದು ರೋಮಾಂಚಕ ರಾತ್ರಿಯನ್ನು ದಂಪತಿಗಳು ಕಳೆದುದನ್ನು ನೆನೆಸಿಕೊಳ್ಳುತ್ತಾನೆ. ಗಲ್ಲಕ್ಕೆ ಗಲ್ಲ ಹಚ್ಚಿಕೊಂಡು ಮೆಲ್ಲಮೆಲ್ಲನೆ ಮಾತನಾಡುತ್ತ ಗಾಢಾಲಿಂಗನದಲ್ಲಿದ್ದಾಗ ರಾಮ - ಸೀತೆಯರ ರಾತ್ರಿಯೆಲ್ಲವೂ ರಸನಿಮಿಷಗಳ ಪಿಸು ಮಾತಿನಲ್ಲಿಯೆ ಕಳೆಯಿತಂತೆ.

ಒಬ್ಬ ರಸಿಕ ಪ್ರೊಫೆಸರರು ಹೇಳುತ್ತಿದ್ದರಂತೆ- ತನ್ನ ಹೆಂಡತಿಗೆ ತಾನು ಪತ್ರ ಬರೆದರೆ ಅದು ಪ್ರಣಯ ಪತ್ರವೆ? ಅಂಥ ಸಾವಿರ ಪ್ರೇಮ ಪತ್ರಬರೆದರೂ ಸ್ವಾರಸ್ಯವೇನಿದೆ ಅಂತ. ಅರ್ಥವಾಯಿತೆ? ಸಾವಿತ್ರಿ ಎಂಬ ಗೃಹಿಣಿ ಒಮ್ಮೆ ತನ್ನ ಪತಿದೇವನಿಗೆಂದಳು — 'ನೋಡ್ರಿ ನನ್ನ ಗೆಳತಿ ಗಾಯತ್ರಿ ಗಂಡ ಪ್ರತಿ ಆದಿತ್ಯವಾರ ಆಕೆನ್ನ ಮ್ಯಾಟನಿಗೆ ಕರಕೊಂಡು ಹೋಗ್ತಾನ. ನೀವು? ರಸಿಕ ಪತಿದೇವ ಉತ್ತರಿಸಿದ-ಆಗಲಿ ಮಾರಾಯ್ತಿ. ಮುಂದಿನ ರವಿವಾರ ನಾನೂ ನಿನ್ನ ಗಾಯತ್ರಿನ್ನ ಮ್ಯಾಟನೀಗ ಕರಕೊಂಡು ಹೋಗ್ತಿನಿ. ಆತ? ಪ್ರಣಯ ಮಾಡುವುದೆಂದರೆ ವಿವಾಹ ಪೂರ್ವದ ಅವಸ್ಥೆ, ಇಲ್ಲವೆ ವಿವಾಹಾನಂತರ ತನ್ನ ಪತ್ನಿಯನ್ನು ಹೊರತುಪಡಿಸಿ ಪ್ರಣಯ ಮಾಡುವ ಅವಸ್ಥೆಯಂತೆ.

Water seeks it's own level (ನೀರು ತನ್ನದೇ ಪಾತಳಿಯನ್ನು ಹುಡುಕಿಕೊಂಡು ಹೋಗುತ್ತದೆ) ಹಾಗಂತೆ ಪ್ರಣಯವೂ ತನ್ನ ಪಾತಳಿಯನ್ನು ಹುಡುಕಿಕೊಂಡು ಹೋಗುತ್ತದೆ. ಕವಿ ಸಮಯದಲ್ಲಿ ರಾಜಪುತ್ರ, ರಾಜಪುತ್ರಿಯನ್ನು ಕಾಮಿಸಿದಂತೆ ವಾಸ್ತವಲೋಕದಲ್ಲಿ ಶ್ರಮಜೀವಿಯಾದ ಗಾಡಾಳು ತನ್ನ ಅನುರೂಪದ ಹೆಣ್ಣಾಳನ್ನೆ ಕಾಮಿಸುತ್ತಾನಂತೆ! ವಯ, ರೂಪ, ಅಂತಸ್ತಿನಲ್ಲಿ ಪ್ರೇಮಿ ತನ್ನ ಅನುರೂಪೆಯನ್ನೆ ಹುಡುಕಿಕೊಂಡು ಹೋಗುತ್ತಾನೆ. ಒಬ್ಬ ಬಡಕೂಲಿಕಾರನನ್ನು ಬಂಡವಾಳಶಾಹಿಯ ಮಗಳು ಕಾಮಿಸಬೇಕಾದರೆ ಆ ಬಡವನಲ್ಲಿ ಒಂದು ಬಂಡು ಘೋರ ವ್ಯಕ್ತಿಯ ಸಾಹಸಮನೋಧರ್ಮಬೇಕು. ಜೊತೆಗೆ ಗಾಡಿ



ಕಾರ ಗಂಡು ಎನಿಸಿಕೊಂಡಿರಬೇಕು. ಆ ಕೂಲಿಕಾರ ಬಂಡಾಯಗಾರ. ಆಗ ಆ ಶ್ರೀಮಂತ ಯಾಚಕಳು ಈ ಬಡ ಕೂಲಿಕಾರನ ಹೃದಯ ಶ್ರೀಮಂತಿಕೆಯನ್ನು ಯಾಚಿಸಿ ಬರೆವ ಪತ್ರ ಫಸ್ಟ್ ಕ್ಲಾಸ್ ಪ್ರಣಯ ಪತ್ರವಾಗಬಹುದು.

ಪ್ರಣಯದ ರಸ್ತೆ **One way traffic.** (ಏಕಮುಖ ಸಾರಿಗೆ) ಆದರೆ ಪ್ರಣಯ ಪತ್ರಕ್ಕೆ **Line clear** ಸಿಗಲಾರದು. ಏಕಮುಖ ಪ್ರಣಯ ಪತ್ರವು ಏಕಪಾತ್ರಾಭಿನಯವಾಗುತ್ತದೆ. **Monologue** ಇದ್ದದ್ದು **dialogue** ಆಗ ಬೇಕಾದರೆ ಪ್ರಣಯ ಪತ್ರಕ್ಕೆ ಪ್ರಣಯದ ಉತ್ತರವೂಬೇಕು. ವಾದಿಸ್ವರಕ್ಕೆ ಒಂದು ಸಂವಾದಿ ಸ್ವರವಿದ್ದರೇನೆ ಸಂಗೀತಕ್ಕೆ ಬೆಡಗು. ಪ್ಲೇಟಾನಿಕ್ ಪ್ರಣಯದಲ್ಲಿ ಪ್ರೇಮವಾಹಿನಿ ಯಾವಾಗಲೂ **one sided** ಆಗಿಯೆ ಹರಿಯುತ್ತದಂತೆ. ಹೀಗೆ ಸ್ವಪ್ನಸದೃಶವಾಗಿ,ಆದರ್ಶಮಯವಾಗಿ ಏಕಮುಖವಾಗಿ ಹರಿದು ಪ್ರಯೋಜನವೇನು? ಚುಂಬನಕ್ಕೆ ಯಾವಾಗಲೂ ಎರಡು ಮುಖಗಳುಬೇಕು-ಎಂದು ನವ್ಯ ಕವಿಯೊಬ್ಬರು ಹೇಳಿದ್ದಾರೆ. ಇಲ್ಲದಿದ್ದರೆ ವಿರಹದಲ್ಲಿ ಸಮಾಗಮದ ಚುಂಬನವನ್ನು ಸ್ಮರಿಸಿಕೊಳ್ಳಬೇಕಷ್ಟೆ! ಒಬ್ಬ ವಾಸ್ತವವಾದಿತರುಣ ಕವಿ, ನವ್ಯತಮ ಧಾಟಿಯಲ್ಲಿ ಇನ್ನೂ ಪತ್ನಿಯಾಗದಿದ್ದ ತನ್ನ ಪ್ರಿಯತಮಗೆ ಪ್ರಣಯ ಪತ್ರ ಬರೆದನಂತೆ. ಆಮೇಲೆ ಅದನ್ನು ಅಂಚೆಗೆ ಕಾಣಿಸದೆ ಹರಿದು ಹಾಕಿ ಬಿಟ್ಟನಂತೆ. ಆ ಹರಿದ ಪತ್ರದ ಒಂದು ತುಣುಕಿನಲ್ಲಿ ಹೀಗೆ ಬರೆದಿತ್ತಂತೆ...

"...ನನ್ನ ಉಪಜೀವನದ! ಉಪ್ಪಿನಕಾಯಿಯೆ, ವಿರಹಾಗ್ನಿಯ ಹಂಚಿನ ಮೇಲೆ ದೋಸೆಯಂತೆ ಬೇಯುತ್ತಿದ್ದೇನೆ. ಹೀಗೆ ಹಾಕಿದರೂ ಬೇಯುತ್ತೇನೆ. ತಿರುವಿ ಹಾಕಿದರೂ ಬೇಯುತ್ತೇನೆ. ನಿನ್ನ ವಿರಹತಾಪವನ್ನು ತಾಳಲಾರದೆ ಪ್ರಾಚೀನ ವಿರಹಿಗಳಂತೆ ತಂಪು ಕೊಳದಲ್ಲಿಮುಳುಗದೆ ಫ್ರಿಜ್ನೊಳಗೆ ಕುಳಿತು ಬಿಡಬೇಕೆನ್ನಿಸುತ್ತೇನೆ ಈ **hightem perature** 'ನಿಂದ **I Scream'** ಎಂದು ಒರಲಿಕೊಂಡಾಗ **Ice-cream**—ಆಗಿ ನೀನು ನನ್ನ ಬಾಯೊಳಗೆ ಬಂದು ಬೀಳಬಾರದೆ ? ...ಇತ್ಯಾದಿ ಇತ್ಯಾದಿ ಇತ್ಯಾದಿ.

ನನ್ನ ಭಾವೀ ಪತ್ನಿಗಾಗಲಿ. ಭೂತ ಪತ್ನಿಗಾಗಲಿ ಪ್ರಣಯ ಇಲ್ಲವೆ ಪ್ರೇಮ ಪತ್ರ ಬರೆಯುವ ಪ್ರಸಂಗವೇ ನನಗೆ ಬಂದಿಲ್ಲವೆನ್ನಬಹುದೇನೊ. ಅದಕ್ಕೇ ನನಗೆ ಮೊದಲಿನಿಂದಲೂ ಒಂದು ಕುತೂಹಲ-ಪ್ರಣಯ ಪತ್ರದ ಒಕ್ಕಣೆಗೆ ಏನಿರುತ್ತದೆ ಎಂದು. ನಗಬೇಡಿ. ಎಂದರೆ ತನ್ನ ಪ್ರಿಯತಮೆಯ ಅಂಗಾಂಗಗಳನ್ನು ಮುಖವನ್ನು ಕಾವ್ಯಮಯವಾಗಿ ವರ್ಣಿಸುತ್ತ ಆಕೆಯ ಮುಖಸ್ತುತಿ ಮಾಡುತ್ತಾರೆಯೇ ? ಇಲ್ಲವೆ ಆಕೆಯ ಪ್ರೇಮ ಭಿಕ್ಷೆ ಬೇಡುತ್ತ ಅದಕ್ಕಾಗಿ ತಾನೇನು ತ್ಯಾಗ ಮಾಡಲು ಸಿದ್ಧ ಎಂಬುದನ್ನು ವಿವರಿಸುತ್ತಾರೆಯೇ ? ಅಥವಾ ಮದುವೆಯಾದ ಮೇಲೆ ಆಕೆಗೆ ಏನೇನು ಆಭರಣ ಮಾಡಿಸುತ್ತಾನೆ, ಎಷ್ಟೆಷ್ಟು ಸೀರೆಗಳನ್ನು ತರುತ್ತಾನೆ, ಇಲ್ಲವೆ ಖುದ್ದಾಗಿ ಆಕೆಯೊಡನೆ ಅಂಗಡಿಗೆ ಹೋಗಿ ಖರೀದಿಸುತ್ತಾನೆ,

ವಾರದಲ್ಲಿ ಎಷ್ಟು ಸಲ ವ್ಯಾಟ್ನಿಕೋ ಇದನ್ನೆಲ್ಲ ಒಕ್ಕಣಿಸಿದರೆ ಪ್ರಣಯಪತ್ರಗಳಾಗಬಲ್ಲವೆ ?

ಅಥವ ಪ್ರಣಯ ಪತ್ರಗಳಲ್ಲಿ ಒಕ್ಕಣಿಕೆ ಮುಖ್ಯವಲ್ಲ. ಅದರೊಳಗಿನ ಕಾವ್ಯ, ಕನಸು, ಭಾಷೆ, ಭಾವನೆ, ಬೆಡಗು ಬಿನ್ನಾಣ ಇವೆಲ್ಲ ಮುಖ್ಯವೆ ? ಹಾಗಿದ್ದರೆ ಪುಷ್ಪಿತ ಭಾಷೆಯ ಪ್ರಣಯ ದೋಲೆಯೆ ? ಪ್ರಣಯ ದೋಲೆಯೆಂದರೆ ಓದಿ ತಲೆಗೆ ಎದೆಗೆ ಒತ್ತಿಕೊಂಡು ಆನಂದಿಸುವುದು ಬಿಟ್ಟು ತಲೆಕೆರೆದುಕೊಳ್ಳುತ್ತ ಕಿಟೆಲ್ ಕೋಶವನ್ನು ಮಗುಚಿ ಹಾಕುವುದೆ? ಕುರಿತೋದದೆಯುಂ ಪ್ರಣಯ (ಪತ್ರ) ಪ್ರಯೋಗ ಪರಿಣತಮತಿಗಳಾಗುವುದು ಸಾಧ್ಯವಿಲ್ಲವೆ ? ಹಾಗಾದರೆ ಕವಿಗಳೂ ಪಂಡಿತರೂ ಅಲ್ಲದ ರಸಿಕರು ಪ್ರಣಯ ಪತ್ರ ಬರೆಯಲಾರರೆ ? ವಸಂತ, ಕೋಗಿಲೆ, ಮಾಮರ, ಮನ್ಮಥ ಎಂಬ ಶಬ್ದಗಳಿಲ್ಲದೆ ಪ್ರಣಯ ಪತ್ರ ನಿರ್ಮಾಣವಾಗಲಾರದೆ ?

ಏನ್ಮೈತಿ ಸುಗ್ಗಿಯ ಹುರುಡ ಯಾಕ ಉಳಿದೆಲ್ಲ ತಿಂಗಳು ಬರದ?
ಬೇಕ್ಯಾಕ ಮಾವಿನ ಕಾಡು ಕೋಗಿಲೆಯ ಹಾಡು ಆಗಲಿಕೆ ಕೇಡು ॥
ನಿನ ತೆಕ್ಕೆಯೊಳಗ ಸಿಕ್ಕೈತಿ ಸುಗ್ಗಿ ಸ್ವರ್ಗಕ್ಕ ಸಾಕು ತೋಳೆತದ।
ಏನ್ಮೈತಿ ಸುಗ್ಗಿಯ ಹುರುಡ॥

ಎಂದು ಪ್ರಣಯಿ ಹಾಡಲಾರನೆ ?

ಮೊನ್ನೆ ಮೊನ್ನೆ ಎಲ್ಲೊ ಓದಿದ ನೆನಪು. ಒಬ್ಬ ಇಂಗ್ಲಿಷ್ ಕಾದಂಬರಿಕಾರ ರಸಿಕ-ರಸಿಕೆ(?)ಯರಿಗೆ ಪ್ರಣಯ ಪತ್ರ ಬರೆದುಕೊಟ್ಟು ಭಾರಿ ಹಣ ಸಂಪಾದಿಸಿದನಂತೆ ! ಆ ಕಾದಂಬರಿಕಾರ fiction ಬರೆಯುತ್ತಿದ್ದಿರಬಹುದು. ಆದರೆ ತರುಣ-ತರುಣಿಯರಿಗೆ ಪ್ರಣಯ ಪತ್ರಗಳನ್ನು ಬರೆದುಕೊಟ್ಟು ಹಣ ಸಂಪಾದಿಸುತ್ತಿದ್ದನೆಂಬುದು fiction ಆಗಿರಲಾರದು. ಆ ಪ್ರಣಯ ಪತ್ರಗಳ ಒಕ್ಕಣಿಕೆ ಮಾತ್ರ fiction ಆಗಿರಲೇ ಬೇಕು. ಏಕೆಂದರೆ ಆ ಪ್ರೇಮಿಗಳ ಹೃದಯಸ್ಥ ಹಾರೈಕೆಗಳಿಗೆ ಈತ ಕಾವ್ಯದ ರೆಕ್ಕೆಗಳನ್ನು ಜೋಡಿಸುತ್ತಿದ್ದರೂ ಅಭಿವ್ಯಕ್ತಿಯಲ್ಲಿ ಅತಿರಂಜಿತತೆ ಅರ್ಥಾತ್ fiction ಬರಲೇ ಬೇಕಲ್ಲ ? ಆದರೆ ಇಂಥ ಬಾಡಿಗೆಯ ಪ್ರಣಯ ಪತ್ರಗಳು ಪ್ರಯೋಜನಕಾರಿ ಆದಾವೆಯೇ ಎಂಬುದು ಪ್ರಶ್ನೆ. ಪ್ರೇಯಸಿ ಪ್ರಣಯಿಯನ್ನು ಪ್ರೇಮಿಸುವುದನ್ನು ಬಿಟ್ಟು ಆ fiction writer ನನ್ನೆ ಪ್ರೇಮಿಸಲು ತೊಡಗಿದ್ದರೆ ಎಂಥ ತೊಡಕು ಅಂತೀರಿ ? ಇಂತಹ ಅನ್ಯಗಾಡಂದಿರ ಗಂಡಾಂತರಗಳಿಂದ ಕೂಡಿರುವುದರಿಂದಲೆ ಪ್ರಣಯ ಪತ್ರಲೇಖನ ವ್ಯಾಪಾರ private sector ನಲ್ಲಿ ಊರ್ಜಿತಗೊಳ್ಳಲಿಲ್ಲ. ಹಾಗಿದ್ದಲ್ಲಿ ಅಮೇರಿಕೆಯ ಡೇಲ್ ಕಾರ್ನಗಿ ಅಂಥವರು ಸಾರ್ವಜನಿಕ ಭಾಷಣಗಳನ್ನು ತಯಾರಿಸುವ, ಅವುಗಳಲ್ಲಿ ತರಬೇತಿ ಕೊಡುವ ಊರ್ಜಿತ ಸಂಸ್ಥೆಗಳನ್ನು ಸ್ಥಾಪಿಸಿದಾಗ ಪ್ರಣಯ ಪತ್ರಗಳ ಕುಶಲ ಕರ್ಮಶಾಲೆಗಳನ್ನು ತೆರೆಯುತ್ತಿರಲಿಲ್ಲವೆ ?

ಎಷ್ಟೇ ಆದರೂ ಇನ್ನೊಬ್ಬರಿಂದ ವ್ಯವಹಾರಿಕ ಪತ್ರಗಳನ್ನು ಬರೆಯಿಸುವಂತೆ ಪ್ರಣಯ ಪತ್ರಗಳನ್ನು ಬರೆಯಿಸುವುದು ವ್ಯವಹಾರ್ಯವೆನಿಸೀತೆ ? ಎಷ್ಟಾದರೂ ಅಂತರಂಗದ ಒಳಗಿನ ಒಳದನಿಯ ಮಾತುಗಳು ಇನ್ನೊಬ್ಬರ ತತ್ವ ಮಸಿಯಿಂದ ಸೂಸಿದರೆ ಅದಕ್ಕೆ charm ಎನ್ನುವುದು ಬಂದೀತೇ ? ಅಂತರಂಗದ ಮಾತು ಬಹಿರಂಗವಾದರೆ ಅದು ಪ್ರಣಯ ಪತ್ರ ಹೇಗೆ ? ಒಬ್ಬರ ಅಂತರಂಗ ಇನ್ನೊಬ್ಬರ ಅಂತರಂಗಕ್ಕೆ ತಲುಪುವದೆ ಪ್ರಣಯ ಪತ್ರದ ರಹಸ್ಯ. ಪ್ರಣಯ ಪತ್ರವನ್ನು 'ಪ್ರೆಸ್ ಮ್ಯಾಟರ್' ಎಂದು ಬುಕ್ ಪೋಸ್ಟ್ ಮಾಡಿದರೆ ಪೋಸ್ಟ್‌ಮನ್‌ನ ಕೈ ಬಿಟ್ಟು ಅದು ಪ್ರಣಯಿಯ ಕೈಗೆ ತಲುಪೀತೆ? ತವರಿಗೆ ಹೋಗಿದ್ದ ಮಡದಿ ಪತಿಗೆ ಪ್ರೇಮ ಪತ್ರ ಬರೆಯುತ್ತಾಳೆ. ಆದರೆ ಅಂಚೆ ಕಚೇರಿ ದೂರ ಇರುವುದರಿಂದ ಅಪ್ಪನ ಕೈಗೆ ಕೊಡಲು ಅಂಜಿಕೆಯಾಗಿ, ಇನ್ನಾರೂ ವಿಶ್ವಾಸದ ತಮ್ಮ, ಜವಾನ ಇಲ್ಲದೆ ತನ್ನ ಅವಸ್ಥೆಯನ್ನು ಕವನಿಸಿ ಹಾಡಿಕೊಳ್ಳುತ್ತಾಳಂತೆ ! "ಅಪ್ಪನ ಕೈಯಲಿ ಹೇಗೆ ಕಳಿಸಲಿ। ಅಂತರಂಗದೀ ಪತ್ರವನು । ಯಕ್ಷಿಣಿಯಳ ಈ ಮೇಘಸಂದೇಶವ ಬಿತ್ತರಿಸುವೆ ಲಿಪಿ ಚಿತ್ರವನು ॥ ಕಾಳಿದಾಸನು ಮೇಘದೂತನನ್ನೂ ಕಳಿಸಿದರೆ ಈ ಆಧುನಿಕ ವಿರಹಿಣಿ ಗಾಳಿದೂತನನ್ನು ಕಳಿಸುವಳು.

ನಮ್ಮ ಸಾಹಿತ್ಯದಲ್ಲಿ ಪ್ರಣಯ ಪತ್ರಗಳು ಕಡಿಮೆಯೆಂದೇ ಹೇಳಬೇಕು. ನಮ್ಮ ಕವಿಗಳು, ಸಾಹಿತಿಗಳು ಪ್ರಣಯ ಪತ್ರಗಳನ್ನು ಬರೆದಿರಬೇಕು. ಪ್ರಿಂಟ್‌ನಲ್ಲಿ ಪ್ರಕಟಿಸುವದಕ್ಕೆ ಸಂಕೋಚವೇನೋ. ನೆಹರೂ ಅವರು A 'father's Letters...' ಪ್ರಕಟಿಸಿದ ಹಾಗೆ 'A Lover's Letter's...' ಕೂಡ ಪ್ರಕಟಿಸಬಹುದಿತ್ತು ಎಂದು ಈಚೆಗೆ ಒಬ್ಬ ವಿರೋಧ ಪಾರ್ಟಿಯ ರಾಜಕಾರಣಿ ಜೋಕ್ ಮಾಡಿದ್ದು ಸ್ವಾರಸ್ಯಪೂರ್ಣವಾದ ರಹಸ್ಯವಾಗಿದೆ. ಅನೇಕ ಮಠಗಳ ಬ್ರಹ್ಮಚಾರಿ ಸ್ವಾಮಿಗಳ ರಹಸ್ಯ ಕಡತಗಳಲ್ಲಿ ಪ್ರಣಯಪತ್ರಗಳು ಸಿಗಬಹುದು ಎಂದು ಹೇಳುತ್ತಾರೆ. ಆದರೆ ಇವು ಅವರವೇ ಇರಲು ಹೇಗೆ ಸಾಧ್ಯ? ಇವರಿಗೆ ಬಂದ ಇನ್ನೊಂದು ಪಾರ್ಟಿಯ ಪ್ರಣಯ ಪತ್ರಗಳಿರಬೇಕು. ಇನ್ನೇನು ತಮ್ಮ ಪ್ರಣಯ ಪತ್ರಗಳ ಆಫೀಸ್ ಕಾಪಿ ಇಟ್ಟಿದ್ದರೆ ಮಾತ್ರ ಲಭ್ಯವಾಗಲು ಸಾಧ್ಯ. ಆದರೆ ಪ್ರ. ಪ. ಗಳ ಓ. ಸಿ. ಇಡುವುದು ಸಾಧ್ಯವೆ? ಅಂತಹ ಮಹಾನುಭಾವರ ಪ್ರ.ಪ. ಗಳೇನಾದರೂ ದೊರೆತರೆ ನಮ್ಮ ಸಾಹಿತ್ಯದ ಶ್ರೀಮಂತಿಕೆ ಹೆಚ್ಚುವಲ್ಲಿ ಸಂಶಯವಿಲ್ಲ.

ಆಧುನಿಕ ಹಿಂದೀ ಕವಿ ಬಚ್ಚನ್ (ಅಮಿತಾಬರ ತಂದೆ)ಪ್ರಕಟಿಸಿರುವ ಸ್ವಂತದ ದಿನಚರಿಯಲ್ಲಿ ಅವರ ಕಾವ್ಯಜೀವನದ ಪ್ರಣಯ ಪ್ರಸಂಗಗಳು ಅನೇಕವಾಗಿ ವೈವಿಧ್ಯಮಯವಾಗಿ ಪ್ರಾಮಾಣಿಕವಾಗಿ, ನಿಸ್ಸಂಕೋಚವಾಗಿ ನಿರೂಪಿಸಲ್ಪಟ್ಟವೆಯೆಂದು ತಿಳಿಯುತ್ತದೆ. Loving Housewife is like reading a text book— ಎಂದು ಮಿತ್ರರೊಬ್ಬರು ಜೋಕ್ ಮಾಡಿದ್ದರು. ಅನೇಕ ಪ್ರಸಂಗಗಳು ಪ್ರಣಯ ಪತ್ರಗಳ ಒಕ್ಕಣಿಕೆಯನ್ನೂ ಮೀರಿದ ಪ್ರಣಯಪತ್ರಗಳಾಗಿವೆಯಂತೆ. ಈ ನಿಟ್ಟಿನಲ್ಲಿ ಹಿಂದೀ ಸಾಹಿತ್ಯ ಬಹಳ ಮುಂದಾಗಿರುವಂತೆ ತೋರುತ್ತದೆ. ಮಹಿಳಾ ಲೇಖಿಕೆಯರೂ ಕೂಡ ತಮ್ಮ ತಮ್ಮ ಪತ್ಯೇತರ, ಅಥವಾ ಪತ್ಯೋತ್ತರ ಪ್ರಣಯಕಾಂಡಗಳನ್ನೂ ರಾಜಾರೋಷವಾಗಿ ವರ್ಣಿಸಿದ್ದಾರಂತೆ. ಸ್ವಂತ ಪತಿಗಳೊಡನೆ ಶೃಂಗಾರವಿದ್ದರೆ ಅದು ಪ್ರಣಯ ಪ್ರಕರಣದಲ್ಲಿ ಬರುವದಿಲ್ಲ. ಗಂಡಾಂತರ (ಅನ್ಯ ಗಂಡರ) ಪ್ರಣಯ ಪ್ರಸಂಗಗಳೆ ನಿಜವಾದ ಸಾಹಿತ್ಯವೆಂದು ಅವರ ಭಾವನೆ. ಪಂಜಾಬೀ ಸಾಹಿತ್ಯವೂ ಪ್ರಣಯ ಪತ್ರಗಳಲ್ಲಿ ಒಳ್ಳೆಯ ಗಾತ್ರವನ್ನು ನಿರ್ಮಿಸಿದೆಯೆಂದು ಹೇಳುತ್ತಾರೆ; ಬರೆಯುತ್ತಾರೆ. ಅಮೃತಾ ಪ್ರೀತಂ ಮಹಾ ಧೈರ್ಯಶಾಲಿ ಲೇಖಿಕೆಯೆಂದು ಓದಿದ್ದೇನೆ. ಬಹಳ ವರ್ಷಗಳ ಹಿಂದೆ ಇಂಗ್ಲಿಷ್‌ನಲ್ಲಿ 'Kamala's Letter's to Husband ಎಂಬ ಪತ್ರಸಾಹಿತ್ಯ ಓದಿದ್ದೆ. ಶ್ಲೀಲಾಶ್ಲೀಲಗಳ ಸೀಮೆಯನ್ನು ಉಲ್ಲಂಘಿಸಿದ ಸಾಮರ್ಥ್ಯವನ್ನು ಅದು ಪಡೆದಿದ್ದಿತೆಂದು ನನ್ನ ಭಾವನೆ. ಆ ಮಾತಿಗೀಗ ಐವತ್ತು ವರ್ಷಗಳಾಗಿರಬೇಕು.

ಬಾಡಿಗೆಯ ಭಾಷೆಯಲ್ಲಿ ಬರೆದ ಪ್ರಣಯಪತ್ರಗಳು ಸ್ವಾನುಭವ ಶೂನ್ಯವಾಗಿ ಬರಿ ಕನಸು— ಕಾವ್ಯದ ಸಾಹಿತ್ಯವಾಗಿಬಿಡುತ್ತವೆ. ಪ್ರಣಯಪತ್ರಗಳು ಮೌಲಿಕವಾಗಬೇಕಾದರೆ ವಾಸ್ತವಪೂರ್ಣವಾಗಿರಬೇಕು. ಯೋಗಭೋಗದ ಸಮನ್ವಯಕಾರ ರತ್ನಾಕರವರ್ಣಿಗಿಂತ ಮೈಸೂರು ಮಲ್ಲಿಗೆಯ ನರಸಿಂಹ ಸ್ವಾಮಿಯವರು ಪ್ರಣಯಪತ್ರಗಳನ್ನು ಬರೆದಿದ್ದರೆ ಹಾಗೂ ಪ್ರಕಟಿಸಿದ್ದರೆ ಕನ್ನಡ ಶೃಂಗಾರ ರಸಕ್ಕೆ ಹೊಸದೊಂದು ಆಯಾಮ ಬರಬಹುದಾಗಿತ್ತು. ಪ್ರಣಯಪತ್ರಗಳು ಶೃಂಗಾರ ಸಾಹಿತ್ಯದ ಒಂದು ಅಂಗವಾಗಿ ಇಂದು ಬೆಳಕಿಗೆ ಬಾರದಿದ್ದ ಅಸಂಖ್ಯ ಪ್ರಣಯ ಪತ್ರಗಳು ಬೆಳಕಿಗೆ ಬಂದರೆ ಅಶ್ಲೀಲವೆಂಬ ಸಿಕ್ಕಾ ಇಲ್ಲದೆ ಮಧುರ ಸಾಹಿತ್ಯವಾಗಿ ಪರಿಗಣಿಸಲ್ಪಡುತ್ತಿತ್ತೇನೊ.

ನಮ್ಮ fiction ಸಾಹಿತ್ಯದಲ್ಲಿ ಪ್ರಣಯಪತ್ರಗಳೆಷ್ಟೊ ಸಿಗಬಹುದು. ಆದರೆ ನಿಜವಾದ ಪ್ರಣಯಪತ್ರ ಸಾಹಿತ್ಯ ಅದಲ್ಲ. ಎರಡನೆಯ ಮಹಾ ಯುದ್ಧದ ವಿಶ್ವಮೇಧದಲ್ಲಿ ಜೀವಗಳು ಬೇಯುತ್ತಿರುವಾಗ ಹಿಟ್ಲರ್ ಒಂದು ಪ್ರಣಯ ಪ್ರಸಂಗದಲ್ಲಿ ತೊಡಗಿದ್ದನಂತನಲ್ಲ. ಆ ಮೃತ್ಯುಮುಖದಲ್ಲಿ ಲಿಖಿತವಾದ ಪ್ರಣಯಪತ್ರಗಳು ಸತ್ವಪೂರ್ಣವೆನಿಸುತ್ತವೆ. ನಮ್ಮ ನೇತಾಜಿ ಅಪಾಯವನ್ನು ಬೆನ್ನಿಗೆ ಕಟ್ಟಿಕೊಂಡು ಭಾರತದಿಂದ ಹೊರಬಿದ್ದು, ಆಝಾದ ಹಿಂದ್ ಫೌಜ್ ಕಟ್ಟಿ ಜೀವದ ಹಂಗುದೊರೆದು ಹೋರಾಡುವಾಗಲೂ ಕ್ಯಾಪ್ಟನ್ ಲಕ್ಷ್ಮಿಯೊಂದಿಗೆ ಪ್ರಣಯಾಸಕ್ತನಾಗಿ ಪ್ರಪ್ರಥಮ ಪತ್ರ ಬರೆದನಲ್ಲ, ಅಂತಹ ಪ್ರಣಯ ಪತ್ರ ಅಪೂರ್ವ ಮೌಲ್ಯದ್ದು. ●


ಪೊಲೀಸ್ ವಾರ್ತೆ
ಸದ್ಯ ನೀವ್ಯಾವುದು ಕೆಟ್ಟ ಕೆಲಸ ಮಾಡಿಲ್ಲ ತಾನೆ?
ನಿಮ್ಮ ಹುಡುಗ ಪೋಲೀಸ್ ಕೆಲಸದಲ್ಲಿ ಇದ್ದಾನಾ ಹಾಗಾದರೆ ನನ್ನ ಮಗಳನ್ನು ಖಂಡಿತ ಕೊಡೋಲ್ಲ..
ವಿ. ಗೋಪಾಲ್
ರೀ.. ನೋಡ್ರಿ, ಆ ಪೋಲೀಸನ್ನ ನನ್ನನ್ನ ಚುಡಾಯಿಸುತ್ತಾನೆ
ನಿಮ್ಮಿಂದ ರಕ್ಷಣೆ ಸಿಗುತ್ತೇಂತ ಬಂದದ್ದು ತಪ್ಪಾಯಿತು..!

ಚಾಲುಕ್ಯ ವಾಸ್ತು-ಶಿಲ್ಪ



ಚಾಲುಕ್ಯ ವಾಸ್ತು ಶೈಲಿಯು ದ್ರಾವಿಡ ಮತ್ತು ನಾಗರ ವಾಸ್ತು ಶೈಲಿಯ ಸಮ್ಮಿಲನದಿಂದುಂಟಾದುದು. ದೇವಾಲಯದ ಗೋಪುರವನ್ನು ಈ ಬಗೆಯ ಶೈಲಿಗೆ ಉದಾಹರಣೆಯಾಗಿ ಉಲ್ಲೇಖಿಸಲಾಗುತ್ತದೆ. ಉತ್ತರ ಮತ್ತು ದಕ್ಷಿಣ ಭಾರತದ ಶಿಲ್ಪಕಲೆಯ ಚಾತುರ್ಯವು ಕಂಡು ಬಂದುದು ಹಾಗೂ ದಕ್ಷಿಣದಲ್ಲಿ ಸ್ವತಂತ್ರ ದೇವಾಲಯಗಳು ಮೊದಲಿಗೆ ಕಾಣಿಸಿಕೊಂಡುದು ಐಹೊಳೆಯಲ್ಲಿಯೇ ಎಂಬ ಅಭಿಪ್ರಾಯವೂ ಇದೆ.

ಲಕ್ಷ್ಮಣ ತೆಲಗಾವಿ

'ಕಲೆಯು ಮಾನವನನ್ನು ದೈವತ್ವದತ್ತ ಆಕರ್ಷಿಸುವ ಸಾಧನ' ಎಂಬ ಉಕ್ತಿಯು ಚಾಲುಕ್ಯರ ವಾಸ್ತು ಶಿಲ್ಪಕ್ಕೂ ಅನ್ವಯಿಸುತ್ತದೆ. ಶಿಲೆಯಲ್ಲಿ ಕಲೆಯ ಬಲೆಯನ್ನು ಹೆಣೆದು ಎಲ್ಲ ರಸಿಕರನ್ನೂ ಸಹೃದಯರನ್ನೂ ಬಂಧಿಸಿ ಪಾವನರನ್ನಾಗಿಸುವಲ್ಲಿ ಚಾಲುಕ್ಯರ ಸ್ಥಪತಿಗಳು ಸಫಲರಾಗಿದ್ದಾರೆ: ತಮ್ಮ ಕಲಾ ಸಾಧನೆಯನ್ನು ಪೂರ್ಣಗೊಳಿಸಿ ಧನ್ಯರಾಗಿದ್ದಾರೆ.

✡

ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಕ್ರಿಸ್ತಶಕ ೬ನೆಯ ಶತಮಾನದಿಂದ ಸುಮಾರು ಎರಡು ನೂರು ವರುಷಗಳ ಅವಧಿ ಬಾದಾಮಿ ಚಾಲುಕ್ಯರು ಸಾರ್ವಭೌಮಾಧಿಕಾರ ಹೊಂದಿದ ಕಾಲ. ಹೀಗೆ ಅಧಿಕಾರಾರೂಢರಾಗಿ ವೈಭವದಿಂದ ರಾಜ್ಯವನ್ನಾಳಿದವರಲ್ಲಿ ಈ ಮನೆತನದವರೇ ಮೊದಲಿಗರೆಂದು ಗುರುತಿಸಲಾಗುತ್ತದೆ. 'ಸತ್ಯಾಶ್ರಯ'ನೆಂದು ಹೆಸರಾದ ಒಂದನೆಯ ಪುಲಿಕೇಶಿಯನ್ನು ಈ ಮನೆತನದ ನಿಜವಾದ ಸ್ಥಾಪಕನೆನ್ನಲಾಗುತ್ತದೆ. ಕ್ರಿಸ್ತಶಕ ಸುಮಾರು ೬೦೯ರಲ್ಲಿ ಸಿಂಹಾಸನವನ್ನೇರಿದ ಇಮ್ಮಡಿ ಪುಲಿಕೇಶಿಯು ಈ ಮನೆತನದ ಪ್ರಸಿದ್ಧ ರಾಜರಲ್ಲೊಬ್ಬ. ಬಾದಾಮಿ ಚಾಲುಕ್ಯರ ತರುವಾಯ ಪ್ರಬಲಿಸಿದವರು ಮಾನ್ಯಖೇಡದ ರಾಷ್ಟ್ರಕೂಟರು. ಕ್ರಿಸ್ತಶಕ ೧೦ನೆಯ ಶತಮಾನದ ಅಂತ್ಯದ ವೇಳೆಗೆ ಅವರು ಕಲ್ಯಾಣದ ಚಾಲುಕ್ಯರ ಇಮ್ಮಡಿ ತೈಲಪನಿಂದ ಜಯಿಸಲ್ಪಟ್ಟರು. ಚಾಲುಕ್ಯರ ಆಳ್ವಿಕೆ ಮತ್ತೆ ಪ್ರಾರಂಭಗೊಂಡಿತು. ಆರನೆಯ ವಿಕ್ರಮಾದಿತ್ಯನು ಈ ಮನೆತನದ ಅತ್ಯಂತ ಪ್ರಖ್ಯಾತನಾದ ಅರಸ. ಈ ಕಲ್ಯಾಣದ ಚಾಲುಕ್ಯರು ಎರಡು ಶತಮಾನಗಳಿಗೂ ಹೆಚ್ಚು ಕಾಲ ಆಳಿದರು. ಬಾದಾಮಿ ಮತ್ತು ಕಲ್ಯಾಣಗಳನ್ನು ತಮ್ಮ ಕೇಂದ್ರವಾಗಿಸಿಕೊಂಡು ಆಳಿದ ಈ ಎರಡು ಮುಖ್ಯ ಮನೆತನಗಳಲ್ಲದೆ, ಆಂಧ್ರಪ್ರದೇಶದ ವಿಜಯವಾಡ ಮತ್ತು ರಾಜಮಹೇಂದ್ರಿಗಳನ್ನು ತಮ್ಮ ರಾಜಧಾನಿಗಳನ್ನಾಗಿ ಮಾಡಿಕೊಂಡು ಕ್ರಿಸ್ತಶಕ ಏಳನೆಯ ಶತಮಾನದಿಂದ ಹನ್ನೊಂದನೆಯ ಶತಮಾನದ ಅಂತ್ಯದವರೆಗೆ ಆಳಿದ ವೆಂಗಿಯ ಚಾಲುಕ್ಯರು ಅಥವಾ ಪೂರ್ವದ ಚಾಲುಕ್ಯರು, ಅದೇ ಪ್ರದೇಶದ ಕರೀಂನಗರ ಜಿಲ್ಲೆಯ ವೇಮುಲವಾಡವನ್ನು ರಾಜಧಾನಿಯಾಗಿಸಿಕೊಂಡು ಕ್ರಿಸ್ತಶಕ ೮ ರಿಂದ ಹತ್ತನೆಯ ಶತಮಾನದವರೆಗೆ ಆಳ್ವಿಕೆ ನಡೆಸಿದ ವೇಮುಲವಾಡದ ಚಾಲುಕ್ಯರು ಹಾಗೂ ಇನ್ನಿತರರು ಈ ಚಾಲುಕ್ಯ ಮನೆತನದ ಇತರ ಶಾಖೆಗಳಿಗೆ ಸೇರಿದವರು. ಇದು ಚಾಲುಕ್ಯ ವಂಶಜರನ್ನು ಕುರಿತ ಸಂಕ್ಷಿಪ್ತ ನೋಟ.

ಸಾಮಾಜಿಕ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ತೀವ್ರತರವಾದ ಬದಲಾವಣೆ ಹಾಗೂ ಬೆಳವಣಿಗೆಗಳು ಬಾದಾಮಿ ಚಾಲುಕ್ಯರ ಅವಧಿಯಲ್ಲಿ ಆದವು. ಕರ್ನಾಟಕ ಸಾಹಿತ್ಯ, ಕಲೆಗಳಿಗೆ ಅಪಾರವಾದ ಉತ್ತೇಜನ ದೊರೆಯಿತು. ವಾಸ್ತು ಮತ್ತು ಶಿಲ್ಪಕಲೆಗೆ ವಿಶಿಷ್ಟವಾದ ಪ್ರೋತ್ಸಾಹ ದೊರಕಿದ್ದರಿಂದ ಆ ಕ್ಷೇತ್ರದಲ್ಲಿ ಅನೇಕ ಹೊಸ ಪ್ರಯೋಗಗಳು ನಡೆಯಲು ಹಾಗೂ ಚಿತ್ತಾಕರ್ಷಕ ಕಲಾಶೈಲಿ ರೂಪುಗೊಳ್ಳಲು ಸಾಧ್ಯವಾಯಿತು.

ಬಾದಾಮಿಯ ಪರಿಸರದ ನಾಗರಾಳ, ಮಹಾಕೂಟ, ಪಟ್ಟದಕಲ್ಲು, ಐಹೊಳೆ ಸ್ಥಳಗಳಲ್ಲಿರುವ ಅಸಂಖ್ಯ ದೇವಾಲಯಗಳು ಚಾಲುಕ್ಯ ಮುಖ್ಯ ವಾಸ್ತು ಕೃತಿಗಳಿಗೆ ಪ್ರಮುಖ ಉದಾಹರಣೆಗಳು. ಇಲ್ಲಿಯ ದೇವಾಲಯಗಳಲ್ಲಿ ಕೆಲವು ಜೈನ ಹಾಗೂ ಒಂದೆರಡು ಬೌದ್ಧ ಎಂದು ಭಾವಿಸಲಾಗುತ್ತದೆ. ಉಳಿದವು ಹಿಂದೂ ದೇವಾಲಯಗಳು. ಐಹೊಳೆಯಲ್ಲಿಯ ಕೋಟೆ ಗೋಡೆಯನ್ನು ಈ ಅವಧಿಯ ಕ್ಷಾತ್ರವಸ್ತುವಿನ ಏಕೈಕ ಉದಾಹರಣೆಯೆಂದು ಹೇಳುವುದುಂಟು. ಆಂಧ್ರಪ್ರದೇಶದ ಮಹಬೂಬ್ ನಗರ ಜಿಲ್ಲೆಯ ಅಲಂಪುರ ಹಾಗೂ ಕರ್ನೂಲು ಜಿಲ್ಲೆಯ ಸತ್ಯವೋಲು ಮತ್ತು ಮಹಾನಂದಿಗಳಲ್ಲಿ ಇರುವ ದೇವಾಲಯಗಳನ್ನೂ ಪರಿಗಣಿಸಲಾಗಿದೆ.

ಬಾದಾಮಿ ಚಾಲುಕ್ಯರ ಕಾಲದಲ್ಲಿ ಬಂಡೆಗಳನ್ನು ಕೊರೆದುಮಾಡಿದ ಗುಹಾರಚನೆಗಳೂ ಕಟ್ಟಡಗಳೂ ಒಟ್ಟೊಟ್ಟಿಗೆ ಆದುವೆಂದು ಹೇಳಬಹುದು. ದಕ್ಷಿಣ ಭಾರತದ ಹಿಂದೂ, ಜೈನ ಗುಹಾ ವಾಸ್ತುಶಿಲ್ಪ ಸರಣಿಯಲ್ಲಿ ಈ ಕಾಲದ ಗುಹೆಗಳೇ ಅತ್ಯಂತ ಪ್ರಾಚೀನವೆನ್ನಲಾಗುತ್ತದೆ. ಬಾದಾಮಿಯ ನಾಲ್ಕು ಗುಹಾಮಂದಿರಗಳಲ್ಲಿ ಒಂದು ಶೈವ ಗುಹೆಯೆಂದೂ ಇನ್ನೆರಡು ವೈಷ್ಣವ ಗುಹೆಗಳೆಂದೂ ನಾಲ್ಕನೆಯದನ್ನು ಜೈನ ಗುಹೆಯೆಂದೂ ಶಿಲ್ಪಾಧಾರಿತ ಲಕ್ಷಣಗಳನ್ನನುಸರಿಸಿ ಹೇಳುವುದುಂಟು. ಐಹೊಳೆಯ ರಾವಣಫಡಿ ಗುಹೆಯನ್ನು ಶೈವಧರ್ಮೀಯವೆಂದೂ ಇನ್ನೊಂದನ್ನು ಜೈನಧರ್ಮೀಯವೆಂದೂ ಪರಿಗಣಿಸಿರುವುದುಂಟು. ಈ ಗುಹೆಗಳು ಆರಂಭಿಕ ಸ್ಥಿತಿಯ ರಚನೆಗಳಾಗಿದ್ದು, ವಿಕಸಿತ ಶೈಲಿಯನ್ನು ಬಾದಾಮಿಯಲ್ಲಿ ನೋಡಬಹುದೆಂದು ಕಲಾತಜ್ಞರು ಹೇಳುವರು. ಐಹೊಳೆಯ ಶೈವ ಗುಹೆಯ ಗೋಡೆಯಲ್ಲಿ ಸಪ್ತಮಾತೃಕೆಯರ ಸಹಿತನಾಗಿ ಆರು ಕೈಗಳಿರುವಂತೆ ಚಿತ್ರಿತನಾದ ನಟರಾಜನ ಉಬ್ಬು ಶಿಲ್ಪವೂ ಪೂರ್ಣಾಕಾರದ ಕೆಲವು ಪ್ರತಿಮೆಗಳೂ ಕಂಡುಬರುತ್ತವೆ. ಜೈನ ಗುಹೆಯಲ್ಲಿ ಪಾರ್ಶ್ವನಾಥ ಮೊದಲಾದ ತೀರ್ಥಂಕರರು ಯಕ್ಷಿಯರ ನಡುವೆ ನಿಂತ ಆಳೆತ್ತರದ ಪೂರ್ಣಗಾತ್ರದ ಪ್ರತಿಮೆಗಳಿವೆ. ಬಾದಾಮಿ ಗುಹೆಯಲ್ಲಿ ಗಮನ ಸೆಳೆಯುವ ಅಂಶಗಳೆಂದರೆ ತೆರೆದ ಮುಖಮಂಟಪ, ಕಂಬಗಳ ಭವನ ಮತ್ತು ಕಿರಿದಾದ ಗರ್ಭಗೃಹ. ಇಲ್ಲಿರುವ ಗುಹಾಲಯಗಳಲ್ಲಿ ಜೈನ ಗುಹೆಯನ್ನು ಹೊರತುಪಡಿಸಿದರೆ, ಉಳಿದ ಮೂರು ಗುಹೆಗಳಲ್ಲಿರುವ ಅರ್ಧನಾರೀಶ್ವರ ಹರಿಹರ, ಮಹಿಷಮರ್ದಿನಿ, ನರಸಿಂಹ, ವರಾಹ, ತ್ರಿವಿಕ್ರಮ, ಶೇಷನ ಮೇಲೆ ಕುಳಿತ ವಿಷ್ಣು ಮುಂತಾದ ಶಿಲ್ಪಗಳು ಗಮನ ಸೆಳೆಯುತ್ತವೆ. ಹದಿನೆಂಟು ಕೈಗಳ ನಟರಾಜನ ಉಬ್ಬಾದ ಭಿತ್ತಿ ಶಿಲ್ಪವನ್ನು ಒಂದನೆಯ ಗುಹೆಯ ಹೊರಭಾಗದಲ್ಲಿ ಮೂಡಿಸಿದ್ದು, ಅದು ಅತ್ಯಂತ ಆಕರ್ಷಕವಾಗಿದೆ. ಈ ಗುಹೆಗಳಲ್ಲಿಯ ಮನಸೆಳೆಯುವ ಅಂಶಗಳೆಂದರೆ, ವಿಶಿಷ್ಟ ಕಲಾವೈಖರಿಯಿಂದ ಕೂಡಿದ ದಪ್ಪ ಕಂಬಗಳು, ಶಿಲ್ಪಾಲಂಕೃತ ಗೋಡೆಗಳು ಮತ್ತು ಛಾವಣಿಗಳು.



ಚಾಲುಕ್ಯ ವಾಸ್ತು ಶೈಲಿಯು ದ್ರಾವಿಡ ಅಥವಾ ದಾಕ್ಷಿಣಾತ್ಯ ಮತ್ತು ನಾಗರ ಅಥವಾ ಉತ್ತರೀಯ ವಾಸ್ತುಶೈಲಿಯ ಸಮ್ಮಿಲನದಿಂದುಂಟಾದುದು. ದೇವಾಲಯದ ಗೋಪುರವನ್ನು ಈ ಬಗೆಯ ಶೈಲಿಗೆ ಮುಖ್ಯ ಉದಾಹರಣೆಯಾಗಿ ಉಲ್ಲೇಖಿಸಲಾಗುತ್ತದೆ. ಉತ್ತರ ಮತ್ತು ದಕ್ಷಿಣ ಭಾರತದ ಶಿಲ್ಪಕಲೆಯ ಚಾತುರ್ಯವು ಕಂಡುಬಂದುದು ಹಾಗೂ ದಕ್ಷಿಣದಲ್ಲಿ ಸ್ವತಂತ್ರ ದೇವಾಲಯಗಳು ಮೊದಲಿಗೆ ಕಾಣಿಸಿಕೊಂಡುದು ಐಹೊಳೆಯಲ್ಲಿಯೇ ಎಂಬ ಅಭಿಪ್ರಾಯವೂ ಇದೆ. ಬೌದ್ಧ ವಾಸ್ತುಶೈಲಿಯ ವೈಶಿಷ್ಟ್ಯಗಳನ್ನೂ ಚಾಲುಕ್ಯ ಸ್ಥಪತಿಗಳು ತಮ್ಮ ಕೃತಿಗಳಲ್ಲಿ ಅಳವಡಿಸಿಕೊಂಡಿದ್ದರೆಂತಲೂ ತಿಳಿಯುವುದು. ಐಹೊಳೆಯ ಲಾಡಖಾನ ದೇವಾಲಯ, ದುರ್ಗಾ ದೇವಾಲಯ ಮತ್ತು ಹುಚ್ಚಮಲ್ಲಿ ದೇವಾಲಯಗಳು ಈ ವೈಶಿಷ್ಟ್ಯಕ್ಕೆ ಉದಾಹರಣೆಗಳು. ಹಾಗೆಯೇ ದ್ರಾವಿಡ ಶೈಲಿಯ ಆರಂಭದ ರಚನೆಗಳು ಬಾದಾಮಿ, ಮಹಾಕೂಟ ಮತ್ತು ಐಹೊಳೆಗಳಲ್ಲಿಯ ಹಲವಾರು ದೇವಾಲಯಗಳಲ್ಲಿ ಕಂಡುಬರುತ್ತವೆ. ಮಹಾಕೂಟದ

ಸರ್ವರಿಗೂ ದೀಪಾವಳಿಯ ಹಾರ್ದಿಕ ಶುಭಾಶಯಗಳು



ಶ್ರೀ ವ್ಹಿ. ಎ. ಕಲಬುರ್ಗಿ, L.L.B. ಶ್ರೀಮತಿ ಸುಂದರಾಬಾಯಿ ವ್ಹಿ. ಕಲಬುರ್ಗಿ, ಹುಬ್ಬಳ್ಳಿ

ಇವರು ಸುಪ್ರಸಿದ್ಧ ಕಲಬುರ್ಗಿ ಮನೆತನದಲ್ಲಿ ೧೯೧೭ ರಲ್ಲಿ ಜನಿಸಿದರು. ಮುಂಬೈ ವಿಶ್ವವಿದ್ಯಾಲಯದಿಂದ ಎಲ್.ಎಲ್.ಬಿ ಕಾಯಿದೆ ಪದವೀಧರರಾಗಿ ೧೯೪೪ ರಲ್ಲಿ ಇನ್‌ಕಮ್ ಟ್ಯಾಕ್ಸ್ ಕರ ಸಲಹೆಗಾರರಾಗಿ ಕೆಲವೇ ವರ್ಷಗಳಲ್ಲಿ ಹೆಸರಿಯ ಕರ ಸಲಹೆಗಾರರೆಂದು ಹೆಸರು ಗಳಿಸಿದರು. ತಮ್ಮ ಪರಮಪೂಜ್ಯ ದಿ. ಮಾತಾಪಿತರ ಸ್ಮರಣಾರ್ಥವಾಗಿ ದಾಜಿಬಾನಪೇಟದಲ್ಲಿ ಶ್ರೀ ಮಹಾಲಕ್ಷ್ಮೀಯ ದೇವಸ್ಥಾನವನ್ನು ಕಟ್ಟಿಸಿ ಕೊಟ್ಟಿದ್ದಾರೆ. ಶ್ರೀ ಮಹಾಲಕ್ಷ್ಮೀ ದೇವಿಯ ಮೂರ್ತಿ ಪ್ರತಿಷ್ಠಾಪನಾ ಸಮಾರಂಭವು ವಿಜೃಂಭಣೆಯಿಂದ ದ್ವಾರಕಾ ಪೀಠದ ಜಗದ್ಗುರುಗಳಾದ ಶ್ರೀ ಶಂಕರಾಚಾರ್ಯರಿಂದ ನೆರವೇರಿಸಲ್ಪಟ್ಟಿತು. ಈ ದೇವಾಲಯದ ಉಸ್ತುವಾರಿ ಪೂಜೆ ಪುನಸ್ಕಾರ ಇತ್ಯಾದಿಗಳನ್ನು ನಡೆಸಲಿಕ್ಕೆ ದಾಜಿಬಾನ ಪೇಟ ಟ್ರಸ್ಟ ಕಮಿಟಿಗೆ ಒಪ್ಪಿಸಿಕೊಟ್ಟಿದ್ದಾರೆ.

ಕಳೆದ ೨೦ ವರ್ಷಗಳಿಂದ ಸಿದ್ಧಾರೂಢಸ್ವಾಮಿ ಮಠದ ಟ್ರಸ್ಟ ಕಮಿಟಿಯ ಅಧ್ಯಕ್ಷರಾಗಿ ಗುರುತರವಾದ ಹೊಣೆ ಹೊತ್ತು ಕಾರ್ಯನಿರ್ವಹಿಸುತ್ತಿದ್ದಾರೆ. ಮಠದ ಸನ್ನಿಧಿಯಲ್ಲಿಯೇ ದಿ. ಶ್ರೀ ಮೋಡೆ ಲಕ್ಷ್ಮಣಸಾ ಗಂಗಮ್ಮಾ ಈ ಹೆಸರಿನ ಛತ್ರವನ್ನು ತಾವು ಸ್ವತಃ ನಿಂತು ಪರಿಶ್ರಮವಹಿಸಿ ಕಟ್ಟಿಸಿಕೊಟ್ಟ ಶ್ರೇಯಸ್ಸು ಶ್ರೀ ವೆಂಕೂಸಾ ಅವರಿಗೆ ಸಲ್ಲುತ್ತದೆಂದರೆ ಅತಿಶಯೋಕ್ತಿ ಎನಿಸದು. ಇವರು ಮೆ. ಕಲಬುರ್ಗಿ ಡಿಸ್ಟಲರೀಜ್, ಮೆ. ಕಲಬುರ್ಗಿ ವೈನ ಡಿಸ್ಟ್ರಿಬ್ಯೂಟರ್ಸ, ಮೆ. ಕಲಬುರ್ಗಿ ಕ್ಲಾಥ ಸ್ಟೋರ್ಸ, ಹಾಗೂ ಕಲಬುರ್ಗಿ ಇನವೆಸ್ಟಮೆಂಟ ಹುಬ್ಬಳ್ಳಿ, ಈ ಸಂಸ್ಥೆಗಳ ಸಂಸ್ಥಾಪಕರು ಹಾಗೂ ನಿರ್ದೇಶಕರು ಆಗಿರುತ್ತಾರೆ. ಇವರು ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ಅನೇಕ ಸಂಘ-ಸಂಸ್ಥೆಗಳಿಗೆ ಮುಕ್ತ ಹಸ್ತದಿಂದ ತನುಮನದಿಂದ ಸಹಾಯ ಸಹಕಾರ ಸಲ್ಲಿಸಿದ ಸಮಾಜದ ಗಣ್ಯ ವ್ಯಕ್ತಿಗಳಾಗಿದ್ದಾರೆ. ಎತ್ತರ ನಿಲುವು, ಗಂಭೀರ ಮುಖ ಮುದ್ರೆ, ನಯವಿನಯ ಹಿತಮಿತವಾದ ಮಾತುಗಳು, ವಿಧೇಯರಾದ ಪತ್ನಿ, ಪುತ್ರರು, ಶ್ರೀ ಕಟಾಕ್ಷ, ಇವೆಲ್ಲವುಗಳಿಂದ ಶ್ರೀ ವೆಂಕೂಸಾ ಅವರು ಸಕಲ ಸಂಪನ್ನರೆನಿಸಿಕೊಂಡಿದ್ದಾರೆ.

ಮಹಾಕೂಟೇಶ್ವರ ದೇವಾಲಯ. ಬಾದಾಮಿಯ ಬೆಟ್ಟದ ಮಾಲೆಗಿತ್ತಿ ಶಿವಾಲಯಗಳು ಮುಖ್ಯ ಉದಾಹರಣೆಗಳು. ದ್ರಾವಿಡ ಶೈಲಿಯ ಶಿಖರವು ಇಲ್ಲಿಯ ಗಮನೀಯ ಅಂಶ. ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯವು ಬಾದಾಮಿ ಚಾಲುಕ್ಯರ ಕಾಲದ ಅತ್ಯುತ್ತಮ ರಚನೆಗಳಲ್ಲೊಂದು. ದ್ರಾವಿಡ ಸಂಪ್ರದಾಯಕ್ಕೆ ಸೇರಿದ. ಇಲ್ಲಿಯ ಮಲ್ಲಿಕಾರ್ಜುನ ಮೊದಲಾದ ದೇವಾಲಯಗಳೂ ನಾಗರ ಸಂಪ್ರದಾಯದ ಕಾಶಿ ವಿಶ್ವೇಶ್ವರ, ಪಾಪನಾಥ. ಗಳಗನಾಥ ಮೊದಲಾದ ದೇವಾಲಯಗಳೂ ಗಮನ ಸೆಳೆಯುತ್ತವೆ. ಈ ದ್ರಾವಿಡ-ನಾಗರ ಸಂಯೋಗದಿಂದ ಉದಿಸಿದ ಪ್ರಯೋಗಾತ್ಮಕ ವಾಸ್ತುಶೈಲಿಯು ಆಗ್ನೇಯ ವಿಡಿಯಾದ ಹಲವು ದೇಶಗಳಲ್ಲಿ ನಿರ್ಮಾಣವಾದ ದೇವಾಲಯಗಳ ರಚನೆಗೆ ಮಾದರಿಯಾಯಿತೆಂದು ತಿಳಿದುಬರುತ್ತದೆ. ಮುಖ್ಯವಾಗಿ ಬಾದಾಮಿ, ಐಹೊಳೆ ಮತ್ತು ಪಟ್ಟದಕಲ್ಲು ಎಡೆಗಳಲ್ಲಿ ಕಂಡುಬರುವ ಮರಳುಗಲ್ಲಿನ ಉಬ್ಬು ಶಿಲ್ಪಗಳು ಹಾಗೂ ಪೂರ್ಣಗಾತ್ರದ ಪ್ರತಿಮೆಗಳು ಚಾಲುಕ್ಯ ಶಿಲ್ಪಕಲಾಶೈಲಿಯನ್ನು ಚೆನ್ನಾಗಿ ಪ್ರತಿನಿಧಿಸುತ್ತವೆ. ಬ್ರಹ್ಮ, ವಿಷ್ಣು, ಶಿವ ಮತ್ತು ದುರ್ಗೆಯರ ನಾನಾ ಅವತಾರ ಚಿತ್ರಗಳೂ ಮಹಾಭಾರತ, ರಾಮಾಯಣ, ಭಾಗವತದ ಕಥಾನಿರೂಪಣೆಯ ಹಲವು ಭಿತ್ತಿ ಶಿಲ್ಪಗಳೂ ಇಲ್ಲಿವೆ. ಇನ್ನು ನಾನಾ ಭಂಗಿ ಗಾತ್ರಗಳಲ್ಲಿ ರೂಪತಳೆದಿರುವ ಶಿಲ್ಪಗಳು ಅಸಂಖ್ಯ. ಚಾಲುಕ್ಯ ಶಿಲ್ಪಿಗಳ ಕಲಾಚಾತುರ್ಯ, ಅಭಿರುಚಿ, ಸಾಮರ್ಥ್ಯಗಳನ್ನು ಈ ಕೆತ್ತನೆಗಳು ದಿಟ್ಟತನದಿಂದ ಸಮರ್ಥಿಸುತ್ತವೆ.

ರಾಷ್ಟ್ರಕೂಟರ ಪ್ರಾಬಲ್ಯದಿಂದ ಕರ್ನಾಟಕದ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲೂ ಹಲವು ಬದಲಾವಣೆಗಳುಂಟಾದವು. ಈ ಮಧ್ಯೆ ಬಾದಾಮಿಯ ಚಾಲುಕ್ಯರು ಸ್ವಲ್ಪ ಕಾಲ ಮರೆಯಾಗಬೇಕಾಯಿತು. ಮತ್ತೆ ಹತ್ತನೆಯ ಶತಮಾನದ ಕೊನೆಯ ಭಾಗದಿಂದ ಹನ್ನೆರಡನೆಯ ಶತಮಾನದ ಅಂತ್ಯದವರೆಗೆ ಕಲ್ಯಾಣದಿಂದ ಆಳಿದ ಚಾಲುಕ್ಯರ ಪುನರಾಗಮನದಿಂದಾಗಿ ಚಾಲುಕ್ಯ ವಾಸ್ತು-ಶಿಲ್ಪದ ಬೆಳವಣಿಗೆಗೆ ಹೊಸ ಸ್ಫೂರ್ತಿ ಬಂದಿತು. ಈ ಕಲ್ಯಾಣದ ಚಾಲುಕ್ಯರ ಅಧಿಕಾರದ ವ್ಯಾಪ್ತಿಗೊಳಪಟ್ಟ ಮಹಾರಾಷ್ಟ್ರ ಮತ್ತು ಆಂಧ್ರದ ಸ್ವಲ್ಪ ಭಾಗ ಹಾಗೂ ಕರ್ನಾಟಕದ ಕೆಲವು ಭಾಗಗಳಲ್ಲಿ ನಿರ್ಮಾಣವಾದ ದೇವಾಲಯಗಳು ಈ ಚಾಲುಕ್ಯರ ಅವಧಿಯ ಶಿಲ್ಪಕಲಾ ವೈಶಿಷ್ಟ್ಯದ ಜೀವಂತ ಕುರುಹುಗಳಾಗಿವೆ. ಬಾದಾಮಿ ಚಾಲುಕ್ಯರ ಕಲಾ ಸಂಪ್ರದಾಯದಿಂದಲೇ ಕಲ್ಯಾಣದ ಚಾಲುಕ್ಯರ ಕಲೆಯು ವಿಕಾಸ ಹೊಂದಿದರೂ ಕಾಲದ ಬೆಳವಣಿಗೆಗೆ ತಕ್ಕಂತೆ ಕಟ್ಟಡಗಳ ನಿರ್ಮಾಣದಲ್ಲಿ ಕೆಲವು ಬದಲಾವಣೆಗಳಾದುದು ಕಂಡುಬರುತ್ತದೆ. ಕಟ್ಟಡದಲ್ಲಿ ಬಳಸಲಾಗುತ್ತಿದ್ದ ಶಿಲೆಗಳ ಆಯ್ಕೆ, ರಚನಾತಂತ್ರ, ತಳವಿನ್ಯಾಸ, ಅಲಂಕರಣ ಮೊದಲಾದವುಗಳಲ್ಲೂ ಇಂತಹ ಬದಲಾವಣೆ ತೋರಿಬರುತ್ತದೆ. ಇಲ್ಲಿಯೂ ದ್ರಾವಿಡ ಮತ್ತು ನಾಗರ ಕಲಾಸಂಪ್ರದಾಯಗಳ ಮಧುರಮಿಲನದಿಂದ ಉಂಟಾದ ಸಂಕರ ರೂಪವನ್ನು ಕಾಣಬಹುದು. ಇದನ್ನು ವೇಸರ ಎನ್ನಲಾಗುತ್ತದೆ. ಇದು ಮುಖ್ಯವಾಗಿ ದೇವಾಲಯಗಳ ಶಿಖರ ನಿರ್ಮಾಣದಲ್ಲಿ ಅಳವಡಿಸಿಕೊಳ್ಳಲಾದ ಕಲಾ ವೈಶಿಷ್ಟ್ಯ.


ಗದಗದ ಬಳಿಯಿರುವ ಕುಕ್ಕನೂರಿನ ನವಲಿಂಗ ಮತ್ತು ಕಲ್ಲೇಶ್ವರ ದೇವಾಲಯಗಳು, ಲಕ್ಕುಂಡಿಯ ಜೈನ ದೇವಾಲಯ, ಧಾರವಾಡ ಜಿಲ್ಲೆಯ ಚೌಡದಾನಪುರದ ಮುಕ್ತೇಶ್ವರ ದೇವಾಲಯ ಹಾಗೂ ಅದೇ ಜಿಲ್ಲೆಯ ಹಾವೇರಿಯ ಸಿದ್ಧೇಶ್ವರ, ಹರಳಹಳ್ಳಿಯ ಸೋಮೇಶ್ವರ ಮತ್ತು ನೀರಲ್ಗಿಯ ಸಿದ್ಧರಾಮೇಶ್ವರ ದೇವಾಲಯಗಳನ್ನು ಅಸಂಭವ ವಾಸ್ತುಶೈಲಿ ಮಾದರಿಯ ಮೂರು ಘಟ್ಟಗಳನ್ನು ಗುರುತಿಸುವಲ್ಲಿ ಉಲ್ಲೇಖಿಸಲಾಗುತ್ತದೆ. ಈ ಕಲ್ಯಾಣದ ಚಾಲುಕ್ಯರ ಪೋಷಣೆಯೊಡನೆ ರೂಪ್ಪುದಳೆದ ಉತ್ಕೃಷ್ಟ ವಾಸ್ತು ಶೈಲಿಯು ತನ್ನ ಪರಾಕಾಷ್ಠೆಯನ್ನು ತಲುಪಿದುದು ಹನ್ನೆರಡನೆಯ ಶತಮಾನದಲ್ಲಿ. ಎರಡು ಗರ್ಭಗೃಹ ಹಾಗೂ ಅಲಂಕೃತ ಶಿಖರವನ್ನುಳ್ಳ, ಸೂಕ್ಷ್ಮಕಲಾಕೌಶಲಕ್ಕೆ ಮಾದರಿಯಂತಿರುವ ಲಕ್ಕುಂಡಿಯ ಕಾಶೀವಿಶ್ವೇಶ್ವರ ದೇವಾಲಯ ಇಲ್ಲಿ ಮುಖ್ಯವಾದುದು. ಕುರುವತ್ತಿಯ ಮಲ್ಲಿಕಾರ್ಜುನ ಮತ್ತು ಇಟ್ಟಗಿಯ ಮಹಾದೇವ ದೇವಾಲಯಗಳು ಈ ಕಾಲದ ಅತ್ಯುತ್ತಮ ವಾಸ್ತುಕೃತಿಗಳು. ಚಾಲುಕ್ಯ ಸಂಪ್ರದಾಯದ ವಿಕಸಿತ ಕಲಾಶೈಲಿಗೆ ಉದಾಹರಣೆಯಾಗಿ ತೋರಿಸಲಾಗುವ ಇಟ್ಟಗಿಯ ಮಹಾದೇವ ದೇವಾಲಯವನ್ನು ಅಲ್ಲಿಯ ಶಾಸನವೊಂದು 'ದೇವಾಲಯ ಚಕ್ರವರ್ತಿ' ಎಂದು ಕರೆದಿರುವುದರಲ್ಲಿ ಉತ್ಪ್ರೇಕ್ಷೆಯೇನೂ ಇಲ್ಲ. ಈ ಚಾಲುಕ್ಯರ ನಿರ್ಮಾಣಗಳಲ್ಲಿ ಈಗ ನೋಡಲು ಸಿಗುವ ದೇವಾಲಯಗಳಲ್ಲಿ ವಿಜಾಪುರ ಜಿಲ್ಲೆಯ ಅರಸೀಬೀದಿಯಲ್ಲಿರುವ ಗುಡಿ, ಬಾದಾಮಿ ಬಳಿಯ ಜಾಲಿಹಾಳಿನ ದೇವಾಲಯ, ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವೆಯಲ್ಲಿರುವ ತ್ರಿಪುರಾಂತಕ ದೇವಾಲಯಗಳು ಅತ್ಯುತ್ತಮ ವಾಸ್ತುಕೃತಿಗಳು.

ಕಲ್ಯಾಣದ ಚಾಲುಕ್ಯರ ಕಾಲದ ಶಿಲ್ಪಕೃತಿಗಳು ಹಲವು ದೃಷ್ಟಿಯಿಂದ ಆಕರ್ಷಣೀಯವಾದುವು. ಇವು ಮುಖ್ಯವಾಗಿ ದೇವತಾ ಮೂರ್ತಿಗಳು. ಈ ಕಾಲದ ಶಿಲ್ಪಿಗಳು ಶಿಲ್ಪಶಾಸ್ತ್ರ ಸಂಪ್ರದಾಯಕ್ಕನುಗುಣವಾಗಿ ಕೆಲವು ಮೂರ್ತಿಗಳನ್ನು ಸೃಷ್ಟಿಸಿದರೆಂದು, ಇದು ಅವರ ಸೃಜನಾತ್ಮಕ ಪ್ರತಿಭೆಗೆ ಅಡ್ಡಿಯನ್ನುಂಟು ಮಾಡಿತೆಂದು ಅಭಿಪ್ರಾಯವಿದ್ದರೂ ಈಗ ದೊರೆತಿರುವ ಹಲವಾರು ವಿಗ್ರಹಗಳು ಅಂದಿನ ಶಿಲ್ಪಿಗಳ ಮೋಹಕವಾದ ಕಲಾಭಿವ್ಯಕ್ತಿಗೆ ಉತ್ತಮ ಉದಾಹರಣೆಗಳಾಗಿವೆ. ಕಲಬುರ್ಗಿ ಜಿಲ್ಲೆಯ ಶಿರೇಮಣ್ಣೂರಿನ ಕೇಶವ ವಿಗ್ರಹ, ಲತೆಯ ಬಳುಕಿನಂತೆಯೇ ತನ್ನ ದೇಹ



ಕಲ್ಯಾಣದ ಚಾಲುಕ್ಯರ ಅಧಿಕಾರದ ವ್ಯಾಪ್ತಿಗೊಳಪಟ್ಟ ಮಹಾರಾಷ್ಟ್ರ ಮತ್ತು ಆಂಧ್ರದ ಸ್ವಲ್ಪ ಭಾಗ ಹಾಗೂ ಕರ್ನಾಟಕದ ಕೆಲವು ಭಾಗಗಳಲ್ಲಿ ನಿರ್ಮಾಣವಾದ ದೇವಾಲಯಗಳು ಚಾಲುಕ್ಯರ ಅವಧಿಯ ಶಿಲ್ಪಕಲಾ ವೈಶಿಷ್ಟ್ಯದ ಜೀವಂತ ಕುರುಹುಗಳಾಗಿವೆ.

ರಾಷ್ಟ್ರ [illegible] ದ್ವಾರದ ತೋರಿಸುತ್ತಿರುವ [illegible] ವಿಗ್ರಹ ಹಾಗೂ ಬ್ರಹ್ಮ ವಿಗ್ರಹ. [illegible] ಗ್ರಿಯ [illegible] ವನ್ನುಳ್ಳ [illegible] ತ್ತಿರುವ [illegible] ದ್ದಿರುವ ಸ್ತ್ರೀಶಿಲ್ಪ [illegible] ವಾದವು. [illegible] ಶಿಲ್ಪಿಗಳ ಕಲ್ಪನಾ ವಿಲಾಸ, ವೈಭವ ಹಾಗೂ ಸಾಮರ್ಥ್ಯಕ್ಕೆ ತಕ್ಕ [illegible] ಯಾಗಿವೆ. [illegible] ತ್ರಿಪುರಾಂತಕ ದೇವಾಲಯದಲ್ಲಿ [illegible] ಪಾಲಂಧ್ರವು [illegible] ತೋರುವ [illegible] ಸಾಕ್ಷಿಯಾಗಿದೆ.



ಆಂಧ್ರಪ್ರದೇಶದ ಗಂಜಾಂ, ವಿಶಾಖಪಟ್ಟಣ, ಪಶ್ಚಿಮ ಮತ್ತು ಪೂರ್ವ ಗೋದಾವರಿ, ಗುಂಟೂರು ಪರಿಸರದ ಪ್ರದೇಶಗಳನ್ನು ಹೊಂದಿದ್ದ ವೆಂಗಿಯ ಚಾಲುಕ್ಯರು ಕ್ರಿಸ್ತಶಕ ಏಳನೆಯ ಶತಮಾನದಿಂದ ಹನ್ನೊಂದನೆಯ ಶತಮಾನದ ಅಂತ್ಯದ ವರೆಗೆ ಆಳ್ವಿಕೆ ನಡೆಸಿದರು. ಇವರ ಕಾಲದಲ್ಲಿ ನೂರಾರು ದೇವಾಲಯಗಳು ನಿರ್ಮಾಣಗೊಂಡುದಕ್ಕೆ ಶಾಸನಾಧಾರಗಳಿವೆ. ಆದರೆ ಈವರೆಗೆ ಕೆಲವು ದೇವಸ್ಥಾನಗಳನ್ನಷ್ಟೆ ಗುರುತಿಸಿ ಬೆಳಕಿಗೆ ತರಲಾಗಿದೆ. ಪೂರ್ವ ಗೋದಾವರಿ ಜಿಲ್ಲೆಯ ರಾಜಮಹೇಂದ್ರಿ–ಕಾಕಿನಾಡ ರಸ್ತೆಯಲ್ಲಿರುವ ಬಿಕ್ಕವೋಲುಗ್ರಾಮದ ಚಂದ್ರಶೇಖರ ದೇವಾಲಯ, ಗೋಲಿಂಗೇಶ್ವರ ದೇವಾಲಯ, ರಾಜರಾಜೇಶ್ವರಿ ದೇವಾಲಯ ಮೊದಲಾದ ಒಟ್ಟು ಆರು ದೇವಾಲಯಗಳು ವಾಸ್ತುವಿನ್ಯಾಸ ಹಾಗೂ ಶಿಲ್ಪಗಳ ವಿನ್ಯಾಸವನ್ನು ಗಮನಿಸಿ ಹಾಗೆ ಭಾವಿಸಲಾಗಿದೆ. ಪೂರ್ವ ಗೋದಾವರಿ ಜಿಲ್ಲೆಯ ದ್ರಾಕ್ಷಾರಾಮ, ಚಾಲುಕ್ಯ ಭೀಮಾವರಂ ಮತ್ತು ಗುಂಟೂರು ಜಿಲ್ಲೆಯ ಚೇಬ್ರೋಲುಗಳಲ್ಲಿರುವ ಭೀಮೇಶ್ವರ ದೇವಾಲಯಗಳೂ ಚಾಲುಕ್ಯ ಭೀಮಾವರಂನ ಮಾಂಡವ್ಯ ನಾರಾಯಣ ದೇವಾಲಯವೂ, ಭೀಮಾವರಂಗೆ ಸೇರಿದ ಸೋಮಾರಾಮದ ಸೋಮೇಶ್ವರ ದೇವಾಲಯ, ಅದೇ ಜಿಲ್ಲೆಯ ಪಾಲಕೊಲ್ಲುವಿನಲ್ಲಿರುವರಾಮಲಿಂಗೇಶ್ವರ ದೇವಾಲಯಗಳೂ ಇವರ ಕಾಲದವೆಂದೇ ತಿಳಿಯಲಾಗಿದೆ. ಬೆಜವಾಡದ ಬೃಹತ್ ದ್ವಾರಪಾಲಕ ಶಿಲ್ಪ, ಬಿಕ್ಕವೋಲಿನಲ್ಲಿರುವ ದೊಡ್ಡ ಗಣೇಶ ವಿಗ್ರಹ, ವಿಜಯವಾಡದ ಬಳಿಯ ಜಮದೊಡ್ಡಿ ಪಲ್ಲಿಯಲ್ಲಿರುವ ಅನೇಕ ಶಿಲ್ಪಗಳು ಮತ್ತಿತರ ಎಡೆಗಳಲ್ಲಿ ಕಂಡುಬಂದಿರುವ ಸುಂದರ ಶಿಲ್ಪಗಳು ಈ ವೆಂಗಿ ಚಾಲುಕ್ಯರ ಕಾಲದವೆಂದು ತಿಳಿದಿದ್ದು, ಈ ಎಲ್ಲ ರಚನೆಗಳು ಬಾದಾಮಿಯ ಚಾಲುಕ್ಯ, ರಾಷ್ಟ್ರಕೂಟ, ಪೂರ್ವಗಂಗ, ಪಲ್ಲವ, ಚೋಳ ಶಿಲ್ಪ ಸಂಪ್ರದಾಯಗಳ ಸಂಗಮದಿಂದ ರೂಪುತಳೆದುವೆಂದು ಕಲಾತಜ್ಞರ ಅಭಿಪ್ರಾಯ.

ಆಂಧ್ರ ಪ್ರದೇಶದಲ್ಲಿಯೇ ಕರೀಂನಗರ ಜಿಲ್ಲೆಯ ಪರಿಸರದಲ್ಲಿ ಎಂಟರಿಂದ ಹತ್ತನೆಯ ಶತಮಾನಗಳವರೆಗೆ ಆಳ್ವಿಕೆ ನಡೆಸಿದ ವೇಮುಲವಾಡದ ಚಾಲುಕ್ಯರು ಸಹ ವಾಸ್ತು–ಶಿಲ್ಪ ಕ್ಷೇತ್ರಕ್ಕೆ ತಮ್ಮ ಅಪೂರ್ವ ಕಾಣಿಕೆ ಸಲ್ಲಿಸಿದ್ದಾರೆ. ವೇಮುಲವಾಡದ ರಾಜೇಶ್ವರ ಹಾಗೂ ಭೀಮೇಶ್ವರಾಲಯಗಳು, ಶುಭಧಾಮ ಜಿನಾಲಯ, ಆದಿತ್ಯಗೃಹ, ನಗರೇಶ್ವರಾಲಯಗಳು ಈ ಚಾಲುಕ್ಯರ ಕಾಲದವು.

✡

ಈ ಚಾಲುಕ್ಯ ವಾಸ್ತು–ಶಿಲ್ಪ ಶೈಲಿಯು ಅನಂತರ ಕರ್ನಾಟಕದ ರಾಜಕೀಯ ತೆರೆಯ ಮೇಲೆ ಕಾಣಿಸಿಕೊಂಡ ಹೊಯ್ಸಳರ ಮೇಲೆ ಪ್ರಭಾವ ಬೀರಿತಲ್ಲದೆ, ಸುಧಾರಿಸಿದ ಕಲಾಶೈಲಿಗೂ ಪ್ರೇರಣೆ ನೀಡಿತು.

('ಆಕಾಶವಾಣಿ' ಕೃಪೆ)

ಗಿರಿಜನರು

ಹೆತ್ತವರು ಹಿಡಿದಾ
ಕಪ್ಪು ಕಾಡಿನ ದಾರಿ
ಹೆಜ್ಜೆ ಗುರುತುಗಳಿಲ್ಲ
ಇತಿಹಾಸವಿಲ್ಲ.

ಹೊತ್ತು ಮೂಡುವುದಿಲ್ಲ
ಅತ್ತ ಮುಳುಗುವುದೂ ಇಲ್ಲ
ಚಿತ್ತ ಬೆಳಗುವ ದೀಪದ
ಸುಳಿವಿಲ್ಲ
ಹಸಿವು ನೀರಡಿಕೆ
ಕೂಟ, ನಿದ್ದೆಯ ಬಯಕೆ
ಪರಿಧಿಯ ಸುತ್ತುತ್ತಾ
ಕತ್ತಲ ನಡುಮನೆಯಲ್ಲಿ
ಸುತ್ತು ಹೋಗುವ
ಕಾಯಗಳು.

ಛಲವಿಲ್ಲ, ಬಲವಿಲ್ಲ,
ಫಲದ ಅರಿವಿಲ್ಲ
ವ್ಯಾಕುಲದ
ಹುಟ್ಟುಗಳು
ಚಳಿಮಳೆಗಳಿಲ್ಲ
ಒಂದೆ ಬಗೆ
ಋತುಮಾನಗಳ ಮೀರಿದವರು
ಯಾರೋ ಅಂದರು–
ಗಿರಿಜನರು
ಬದಿರು ಹೊದೆಯುವ
ಬೆದರು ಬೊಂಬೆಗಳು.

ಅಟ್ಟಡವಿಯ ಒಡಲ ಬಗೆದರೆ—
ಹೊರಗೆ, ಸೂರ್ಯ ಲೋಕದ
ವಿಸ್ತಾರ ಬಯಲು
ರೇಶಿಮೆಯ ನಯ
ನಾಗರೀಕತೆ
ಕರೆದರೆ 'ಓ' ಎನ್ನುವರೆ

ಬಿ. ಸಿ. ಸ್ವಾಮಿ



ಆಶಯ

ಸುಳ್ಳು ಸಾಗರದಲ್ಲಿ ಮುತ್ತಾಗಿದೆ
ಹಸಿವು ಹವೆಯ ಅರಮನೆ ಹೊಕ್ಕು ಉರಿಯುತ್ತಿದೆ
ನಕಲಿ ನಗೆ ನಗ್ನ ನೃತ್ಯದಿ ಮಗ್ನ
ಚಂದ್ರ ಬೆಳದಿಂಗಳ ಮಾರಿಕೊಂಡಿದ್ದಾನೆ

ಹೂಗಳ ತುಂಬ ಹಸಿರು ಹಾವು
ನೆನಪುಗಳು ಮಾಯಲಾರದ ಗಾಯ
ಒಡವೆ ಬಂಗಾರಗಳು ಬಂಧನಗಳು
ಮನುಜ ಸಜ್ಜನಿಕೆಯನು ತೂರಿಕೊಂಡಿದ್ದಾನೆ

ಇರದ ರಾಮನಿಗಾಗಿ ಇರುವ ರಾಮನ ತವಕ
ಕೆಂಗಳಲಿ ಕನಸು ಉರಿಬೂದಿ ಈತನಕ
ಕೆಂಪು ಲಂಕೆಯ ತುಂಬ ಹಸಿರು ಬೆಂಕಿ
ಹನುಮ ಆಶಾದ್ವೀಪ ಹಾರಿ ಬಂದಿದ್ದಾನೆ

ಸೂರ್ಯ ಬರುತ್ತಾನೆ ಬೆಳಕು
ನೋಡ ಚಿಮ್ಮುತ್ತದೆ ಸೆಳಕು
ಆಶೆ ಚಿಗುರುತ್ತದೆ ಹೊಳಪು
ಇದರಿಂದ ನನ್ನೊಳಗಿನೊಳಗಿನ ಇವನು ದಾರಿ ಕಂಡಿದ್ದಾನೆ.


—ಹೇಮಾ ಪಟ್ಟಣಶೆಟ್ಟಿ

ಹೆಸರಿಲ್ಲದ ಬಳ್ಳಿ

ಗೀತಾ ನಾಗಭೂಷಣ

ಸಾತವ್ವನ ಸ್ವಭಾವವೇ ವಿಚಿತ್ರ. ಬಾಯಿ ಬಡಕಿ. ನಾಲಿಗೆ ಸ್ವಲ್ಪ ಒರಟು ಖರೇ. ಆದರೆ ಹೃದಯ ಹೂವು.

ಒಂಟಿಯಾಗಿಯೇ ಬಾಲ್ಯ, ಹರೆಯ ಕಳೆದು ಮುಪ್ಪಿಗೆ ತಿರುಗಿದ್ದ ಸಾತವ್ವನದು ತುಂಬು ಬದುಕು. ತನ್ನ ಒಂಟಿತನವನ್ನಾಗಲಿ, ಆಸೆ-ಬಯಕೆಗಳನ್ನಾಗಲಿ, ದುಃಖ, ಸಂಕಟಗಳನ್ನಾಗಲಿ ಒನ್ಮೆಯೂ ಅವಳು ಯಾರ ಮುಂದೆಯೂ ಹೇಳಿಕೊಂಡವಳಲ್ಲ. ಅವಳಿಗೆ ತನ್ನ ದುಃಖ ಚಿಂತೆಗಳು ದೊಡ್ಡವಾಗಿ ಕಂಡಿರಲೇ ಇಲ್ಲವೇನೋ. ಬೇರೆಯವರ ನೋವು ಸಂಕಟಗಳಲ್ಲಿ ಪಾಲ್ಗೊಂಡು, ಅದನ್ನು ಆದಷ್ಟು ಕಡಿಮೆ ಮಾಡುವುದರಲ್ಲಿಯೇ ಅವಳಿಗೆ ಖುಷಿ ಇದ್ದಂತಿತ್ತು. ಎಲ್ಲರ ಒಳಿತಿಗಾಗಿ ಹೆಣಗಾಡುವ ಸಾತವ್ವ ಮಾನವ ಪ್ರೇಮಿಯಾಗಿದ್ದಳು.



ಬೆಳಗ್ಗೆ ನಾನು ವಾಕಿಂಗ್ ಮುಗಿಸಿಕೊಂಡು ವಾಪಸ್ ಬರುತ್ತಿದ್ದಾಗ ಟ್ಯಾಂಕ್‌ಬಂಡ್ ರಸ್ತೆಯ ಅಂಚಿನಲ್ಲಿರುವ ಗುಡಿಸಲ ಗಲ್ಲಿಯ ದಾರಿಯ ಮೇಲೆ ಜನರ ಓಡಾಟ ಜಾಸ್ತಿಯಾಗಿತ್ತು. ಒಂದು ಮನೆಯ ಮುಂದೆ, ಅಂಗಳದಲ್ಲಿ ಗಂಡಸರು ಅಲ್ಲಲ್ಲಿ ಕುಳಿತು ಬೀಡಿ ಎಳೆಯುತ್ತಿದ್ದರು. ಎಲ್ಲೆಡೆ ವಿಚಿತ್ರ ಮೌನ ಮುದ್ದೆ ಮುದ್ದೆಯಾಗಿ, ಮಾತಾಡಿಸಿದವರ ಮೈ ಪರಚುವಂತೆ ವಿಕಾರವಾಗಿ ಮೆತ್ತಿಕೊಂಡಿತ್ತು. ಆಗಸದೆಡೆಗೆ ಜೋಕಾಲಿ ಹಾಕಿ ತೂಗಾಡುವ ಕಡುಗಪ್ಪು ಮೋಡಗಳು, ರೊಯ್ಯನೆ ಬೀಸಿ ಬರುವ ಚಳಿಗಾಳಿಗೆ ಮೈ ಮುರಿದು ಮಗ್ಗಲು ತಿರುಗಿಸುವ ಕಂದಕದ ನೀರಿನ ಪದರುಗಳು.

ನನಗೆ ಆ ಕೇರಿ, ಕೇರಿಯ ಗುಡಿಸಲುಗಳು, ಅದರಲ್ಲಿರುವ ಜನರೆಲ್ಲ ಬಹು ಪರಿಚಿತ. ಏನಾಗಿರ. ಬಹುದೆಂಬ ಕುತೂಹಲದಿಂದ ಟಾರು ರಸ್ತೆ ಬಿಟ್ಟು ಗುಡಿಸಲುಗಳೆಡೆಗೆ ತಿರುಗಿ ಹತ್ತಿರ ಸರಿಯುತ್ತಿರುವಾಗಲೇ ಗುಡಿಸಲ ಒಳಗಿಂದ ಅಳುವ ಹೆಣ್ಣು ದನಿಯೊಂದು ಹರಿದುಬಂದು ಮೌನದ ಮುದ್ದೆಗೆ ಒದೆಯತೊಡಗಿತು–

"ಯಾರಿಗಿ ಏನಾಗ್ಯಾದ್ರೋ ಕಾಶಪ್ಪ?" ನಾನು ಅಂಗಳದ ಗಂಡಸರಲ್ಲೊಬ್ಬನೆಡೆಗೆ ತಿರುಗಿ ಕೇಳಿದೆ.

"ಯವ್ವಾ.. ಸಾತವ್ವಾಯಿ ಸತ್ತಾಳ್ರೀ "

ನಾನು ತಡೆದು ನಿಂತೆ. ಮರುಕ್ಷಣ ಗುಡಿಸಲಲ್ಲಿ ಹೊಕ್ಕು ಕಣ್ಣಾಡಿಸಿದೆ.

ಎಪ್ಪತ್ತೈದು ಎಂಬತ್ತರೊಳಗಿನ ವಯಸ್ಸಿನ ಬಿಳಿ ತಲೆಯ ಮುದುಕಿ ಸಾತವ್ವ ಹೆಣವಾಗ ಒಂದು ಗೋಣಿಚೀಲದ ಮೇಲೆ ಬಿದ್ದಿದ್ದಾಳೆ. ಕೈಗಳನ್ನು ಎದೆಯ ಮೇಲೆ ಜೋಡಿಸಿ, ಕಾಲುಗಳೆರಡೂ ಮಡಿಚಿ, ಮೇಲೆ ಕುತ್ತಿಗೆಯ ವರೆಗೂ ಹೊದೆಸಿದ ಚಾದರ, ಸುತ್ತ ಕುಳಿತು ಕೈಯಲ್ಲಿಯ ಬಟ್ಟೆಯಿಂದ ನೊಣ ಜಾಡಿಸುವ ಒಂದೆರಡು ಹೆಂಗಸರು. ಸ್ವಲ್ಪ ದೂರದಲ್ಲಿ ಕುಳಿತು ನೆನಪಾದಾಗೊಮ್ಮೆ ಯಾರಾದರೂ ಒಂದಾಗೊಮ್ಮೆ ಅಳುದನಿ ಹಾಕುವ ಇಬ್ಬರು ಸೋಗಲಾಡಿ ಬಂಧುಗಳು. ಮತ್ತಷ್ಟು ದೂರದಲ್ಲಿ ಹಾಯಾಗಿ ಎಲೆ ಅಡಿಕೆಯ ಚಂಚಿ ತೆರೆದು ಎಲೆ ತಿನ್ನುತ್ತ, ಪಕ್ಕದಲ್ಲಿ ಮೂಲೆಯ ಆ ಕಡೆಗೆ ಕುಳಿತಲ್ಲಿಂದಲೇ ಪಿಚಕ್ಕನೆ ಉಗುಳಿ ತುಟಿಯೊರೆಸಿಕೊಳ್ಳುವ, ಕೆಲವು ಕೆಲ ಹೆಂಗಸರು.

ಜೀವಂತವಾಗಿದ್ದಾಗ ಸಾತವ್ವ ಕುಲದ, ಕುಲ ಅಲ್ಲದ ಪರಿಚಿತರ್‍ಯಾರಾದರೂ ಸತ್ತಿದ್ದರೆ ಸಾಕು, ಹೆಣಕ್ಕೆ ಹೋಗಿ, ಅವರ ಹಿಂದಿನ ನೆನಪೆಲ್ಲ ಕೆದಕಿ ಹಾಡಿ ಹಾಡಿ ಅತ್ತು, ಹೆಣ ಸಿಂಗಾರ ಮಾಡುತ್ತಿದ್ದ ಸಾತವ್ವನ ಹೆಣ ಈಗ ತನಗಾಗಿ ಅಳುವವರಿಲ್ಲದೆ ಬಾಯಿ ಬಿಗಿದುಕೊಂಡು ಬಿದ್ದಿದೆ "ಕತಿ ಬರದವರ ಬಾಳ್ಯಾನೂ ಕತಿಹಂಗೇ ಆಗ್ತ-ದಂತ್ರಿ ಯವ್ವಾ. ಭಂಗಾರದ್ದಂಥಾ ಜೋಡಿ ಮಕ್ಕಳವಾ. ನಿಮ್ಮಪ್ಪ ಅವ್ವ ಕಲಿಸಿದ ವಿದ್ಯಾ ಅದಾ. ಕೈ ತುಂಬಾ ಪಗಾರ ತಂದುಕೊಡೋ ಗೋರಮೆಂಟ್ ನೋಕರಿ ಅದಾ... ಛಂದಾಗಿ ಇದ್ದೀರಿ. ಕತಿ ಪತಿ ಬರ್ಲಿಕ್ಕ ಹೋಗಬ್ಯಾಡೇ ಮಗಾ... ಅದೆಲ್ಲಾ ಸಾದು ಸನ್ಯಾಸಿಗೋಳ ಕೆಲಸ, ಮತ್ತ ನೀವು ಜೆಂವಾ ಇದ್ದವರ ಮ್ಯಾಲೇ ಕತಿ ಬರೀತಿರೆಂತ, ದುಕ್ಕದ ಮಾತಗೋಳೇ ಇರ್‍ತಾವಂತ. ಬ್ಯಾಡ ಮಗಾ... ಮಕ್ಕಳ ಮಾರಿ ಅರೆ ನೋಡಿ ಅದೆಲ್ಲಾ ಬರ್‍ಯಾದು ಬಿಡು..."

ಹಿಂದೊಮ್ಮೆ ಸಾತವ್ವ ಹೇಳಿದ್ದ ಮಾತುಗಳು ತಟ್ಟನೆ ಕಿವಿಯಲ್ಲಿ ಗಣಗಣಿಸಿದವು.

"ಕತಿ ಬರದವರ ಬಾಳ್ಯಾನೂ ಕತಿಹಂಗs ದುಃಖದ್ದೆ ಆಗ್ತದಂತ ನಿನಗ್ಯಾರು ಹೇಳಿದ್ರೇ ಸಾತವ್ವ? ಅದೆಲ್ಲಾ ಸುಳ್ಳು...."

ನಾನು ಅವಳದ್ದೇ ಧಾಟಿಯಲ್ಲಿ ಉತ್ತರಿಸಿದ್ದೆ.

"ಅದೆಲ್ಲಾ ಸುಳ್ಳೇ ಆಗ್ಲೇ ನನ್ ತಾಯೀ.... ನೀ ಮಾತರ ಕತಿ ಬರೀಬ್ಯಾಡ. ಜೀವಂತ ಇದ್ದವರ ಮ್ಯಾಲರೆ ಬಿಲಕುಲ್ ಬ್ಯಾಡವ್ವಾ..."

"ಸತ್ತವರ ಮ್ಯಾಲ ಬರೀ ಅಂತಿಯೇನು ಹಂಗಾರ?" ನಾನು ನಕ್ಕಿದ್ದೆ.

"ಹೂಂ... ಸತ್ತ ಮ್ಯಾಲ ಏನು ಮಾಡಿದರನೂ ಗೊತ್ತಾಗಂಗಿಲ್ಲಂತ. ಸತ್ತವರ ಮ್ಯಾಲ ಬರೀರಿ ಬೇಕಾದರ. ಹೊಯಿಂದ್ರಿ ಯವ್ವಾ...ನಾ ಸತ್ತಮ್ಯಾಲ ನಂದೊಂದು ಕತಿ ಬರೀರಿ."

"ಸಿಂದೇನದಾ ಅಂತ ನೀ ಸತ್ತ ಮ್ಯಾಲ ಕತಿ ಆಗ್ತಿ ಬಿಡು ಸಾತವ್ವ"

"ಹಾಂಗಲ್ರಿ ಯವ್ವಾ....ದೂರದ ಗುಡ್ಡಾ ಕಣ್ಣೀಗಿ ನುಣ್ಣಗ ಅಂತ. ನಂದು ಹೇಳಕೊಂಡ್ರ ಎಲ್ಲಾ ಹಾಳ ಗ್ವಾಡಿನೇ ಅದಾ. ಖಂಡಗ ದುಕ್ಕದಕ್ಕ ಇದ್ದೀನೇ ತಾಯಿ ನಾ. ನಿನ್ ಮುಂದೆಲ್ಲಾ ಒಮ್ಮೆ ನಾ ಸಾಯಾಕಿಂತಾ ಮದಲ ಹೇಳ್ತಿನೆಂತ...."

ಹಾಗೆ ಹೇಳಿದ್ದ ಸಾತವ್ವ ತನ್ನ ಬದುಕನ್ನೆಲ್ಲ ನನ್ನ ಮುಂದೆ ಎಂದೂ ಬಿಚ್ಚಿಟ್ಟಿರಲಿಲ್ಲವಾದರೂ ಆಗಾಗ, ಅಲ್ಲಲ್ಲಿ, ಅಷ್ಟಿಷ್ಟು ಅವಳ ಮಾತಿನ ಲಹರಿಯ ನಡುವೆ ಬರುತ್ತಿತ್ತು, ನೆನಪಿನ ಪದರುಗಳು ಹಾದು ಹೋಗುತ್ತಿದ್ದವು ; ಸತ್ತ ದಿನಗಳು ಗೋರಿಯಿಂದ ಹೊರ ಬಂದು ಒಂದುಗಳಿಗೆ ಗಾಳಿಯಲ್ಲಿ ಅಡ್ಡಾಡಿ, ಒಳ ಸರಿಯುತ್ತಿದ್ದವು.

ಸಾತವ್ವ ಹುಟ್ಟಿದ್ದು ಕಲಬುರ್ಗಿಗೆ ಹತ್ತಿರದ ಚುಂಚೂರು ಎಂಬ ಹಳ್ಳಿಯಲ್ಲಿ. ಇವಳಿಗೆ ಎರಡು ವರ್ಷಗಳು ತುಂಬಿದಾಗ ಇವಳ ಅವ್ವ ಮತ್ತೊಂದು ಹೆರಿಗೆಯಲ್ಲಿ ನಿತ್ರಾಣವಾಗಿ ಹೋದಳಂತೆ, ಮುಂದೆ ವಾರದಲ್ಲಿಯೇ ಅದೆಂಥದ್ದೋ ಬೇನೆಯಿಂದ ಸತ್ತಾಗ ಸಾತವ್ವ ಅನಾಥೆಯಾದಳು. ಯಾರೋ ದೂರದ ಸಂಬಂಧಿ ಹೆಂಗಸು ಆ ಮಗುವನ್ನು ಕಲಬುರ್ಗಿಗೆ ತಂದು ಸಾಕಿ, ಅದು ಎಂಟು ಹತ್ತು ವರ್ಷಗಳಾದಾಗಲೆ ಸಾಹುಕಾರರ ಮನೆಯಲ್ಲಿ ಕಸಮುಸುರೆ ಕೆಲಸಕ್ಕೆ ಇಟ್ಟಳಂತೆ. ಸರಿ. ಮುಂದೆಲ್ಲ ಸಾತವ್ವ ಹಾರುವರ ಮನೆ ಕಸ ಗುಡಿಸುತ್ತ, ಮುಸುರೆ ತಿಕ್ಕುತ್ತ, ಬಟ್ಟೆ ಒಗೆಯುತ್ತ; ಅವರ ಎಂಜಲನ್ನೇ ತಿನ್ನುತ್ತ, ಅವರು ಉಟ್ಟು ಬಿಟ್ಟದನ್ನೇ ಉಡುತ್ತ ದೊಡ್ಡವಳಾದಳು. ಬೆಳಗ್ಗೆ ನಾಲ್ಕು ಗಂಟೆಗೆ ಎದ್ದು ಕಚ್ಚೆ ಹಾಕಿಕೊಂಡು ಕೆಲಸಕ್ಕೆ ನಿಂತರೆ ರಾತ್ರಿ ಹಾಸಿಗೆಗೆ ಮೈ ಕೊಡಲು ಒಂದು ಗಂಟೆ. ಹೀಗೆ ಕೆಲಸದಲ್ಲಿಯೇ ಸಿಕ್ಕು ಒದ್ದಾಡುತ್ತಲೇ ಬೆಳೆದ ಸಾತವ್ವನ ಮೈಯಲ್ಲಿಯೂ ಹರೆಯ ಏರ ತೊಡಗಿತು.

ಖರೇವಂದ್ರ ಸಾತವ್ವ ಏನೂ ಚೆಲುವೆಯಲ್ಲ. ಹಿಟ್ಟಿನಲ್ಲಿ ಬೆರಳು ಚುಚ್ಚಿದಂತೆ ಸಣ್ಣ ಸಣ್ಣ ಕಣ್ಣು, ಇಷ್ಟಿಷ್ಟೇ ಮೂಗು, ಚಪ್ಪಟೆ ಮುಖ. ಅಷ್ಟೇನೂ ತುಂಬಿಕೊಳ್ಳದ ಗಲ್ಲ ತುಟಿಗಳು. ಎತ್ತರವೂ ತೀರ ಕಡಿಮೆ. ಆದರೆ ಬಣ್ಣ ಮಾತ್ರ ಒಳ್ಳೇ ಸಿಂಬೆಹಣ್ಣಿನದು. ಈಗಲೇ ಹೀಗಿರುವ ಬಣ್ಣ ಅವಳ ಹದಿಹರೆಯದಲ್ಲಿ ಹೇಗಿದ್ದಿರಬಹುದು! ಆ ಬಣ್ಣಕ್ಕೆಯೇ ಬಹಳಷ್ಟು ಗಂಡುಗಳು ಮನಸೋತಿದ್ದರೆ ಅಚ್ಚರಿಯೇನಲ್ಲ. ಒಮ್ಮೆ ಅವಳ ಬಣ್ಣ ಕುರಿತು ನಾನು ಹೊಗಳಿದ್ದಾಗ ಅವಳದ್ದು ಪ್ರಾಮಾಣಿಕ ದಿಟ್ಟ ಉತ್ತರ.

"ಬಣ್ಣಾ ಕಟಗೊಂಡು ಏನ್ಮಾಡ್ಬೇಕೇ ತಾಯಿ.... ಹಣಬರ ಛಂದಿರ್ಬೇಕು ನೋಡು. ಹೆಂಗಸರಿಗಿ."

"ಯಾಕ್ ಹಿಂಗಂತಿ ಸಾತವ್ವ? ನಿನಗ ಏನಾಗೇದ ಈಗ? ನಿನ್‌ಲಿಂದೇ ನಾಲ್ಕು ಮಂದೀಗೆ ಉಪಯೋಗ ಆಗ್ತದ. ಬೇರೆಯವರ ಕಷ್ಟ ಸುಖಕ್ಕ ಆಗ್ತಿ. ಖರೇವಂದ್ರ ನಿಂದೇ ಜೀವನಾ ಸಾರ್ಥಕ ನೋಡು."

"ಅಯ್ ಬಿಡೇ ಯವ್ವಾ....ನಾ ಯಾರಿಗೆ ಏನಾದೇನು? ನನಗೇನು ಗಂಡನಾ, ಮಕ್ಕಳಾ ಏನದಾ ನನಗ ಸೌಭಾಗ್ಯ? ಹೇಳಿ ಕೇಳಿ ಒಂಟಿಗೂಗಿ ನಾನು......"

ಹೀಗೆ ಹೇಳ ಹೇಳುತ್ತಲೇ ಸಾತವ್ವ ಆ ವಿಷಯ ಅಲ್ಲಿಗೇ ಕತ್ತರಿಸಿ ಬೇರೆ ಮಾತೆತ್ತಿಕೊಳ್ಳುತ್ತಿದ್ದಳು. ಅವಳಿಗೆ ತನ್ನ ನೋವು, ಗೋಳು, ಸಂಕಟಗಳನ್ನು ಬೇರೆಯವರ ಮುಂದೆ ಹೇಳಿಕೊಳ್ಳುವುದೇ ಬೇಡವಾಗಿತ್ತು.

ಎಲ್ಲರಂತೆ ಸಾತವ್ವನ ಮದುವೆಯೂ ಆಗಿತ್ತು. ಅವಳು ಮೈನರೆದು ಎರಡು ವರ್ಷಗಳ ನಂತರ ಆ ಗಂಡ ಹಳ್ಳಿಮುಕ್ಕ ಒಂದೇ ವರ್ಷದಲ್ಲಿ ಸಾತವ್ವನ ಹಣೆಯ ಕುಂಕುಮ ಅಳಿಸಿ ಸತ್ತು ಹೋದ. ಸರಿ. ಸಾತವ್ವ ತನ್ನ ಹೊಟ್ಟೆ ಪಾಡಿಗಾಗಿ ಮತ್ತೆ ಕಲಬುರ್ಗಿಗೆ ಬಂದವಳು ಇಲ್ಲೇ ಉಳಿದು ಬಿಟ್ಟಳು. ಮುಂದೆ ಅವಳ ಹರೆಯ

ಒಂಟಿಯಾಗಿ ಸವೆಯತೊಡಗಿದಾಗ ಯಾವನೋ ಒಬ್ಬ ಗಂಟು ಬಿದ್ದು ನಾಲ್ಕೆಂಟು ವರ್ಷ ಮಜಾ ಮಾಡಿ, ಅವಳನ್ನು ಭೋಗಿಸಿ, ಅವಳು ದುಡಿದು ಕೂಡಿಟ್ಟಿದ್ದನ್ನೆಲ್ಲ ಅಪಹರಿಸಿಕೊಂಡು ನಾಪತ್ತೆ ಆದನಂತೆ. ಈಗಲೂ ಅವನ ನೆನಪು ಬಂದರೆ ಸಾತವ್ವನ ಕಣ್ಣಂಚು ಹಸಿಯಾಗುತ್ತವೆ. ಗಂಟಲ ನರಗಳು ಉಬ್ಬಿನಿಂತು ಮಾತು ಮುಗ್ಗರಿಸುತ್ತವೆ.


"ಅವನಿಗಿ ನಂದೆಲ್ಲಾ ಒಪ್ಪಿಸಿ ಬಿಟ್ಟಿದ್ನೆಯವ್ವಾ.... ಮೈ ಮನಸ ಎಲ್ಲಾ. ಭಂಗಾರ, ರುಪೈ ಬೇಕು ಅಂತ ಕೇಳಿದ್ದನಂದರ ಅದುನೂ ಖುಷಿಲಿಂದ ಕೈಯೆತ್ತಿ ಕೊಟ್ಟುಬಿಡ್ತಿದ್ದೆ. ಆದರ ಯಾಕ ಹಾಂಗ ಮಾಡದ್ನೋ ಏನೋ.... ಮಾರಿ ತೋರಿಸಲಾರದ್ಹಾಂಗ ದೇಶಾಂತ್ರ ಹೋಗಿ ಬಿಟ್ಟ... ಈಗ ಏನಾಗ್ಯಾನೋ ಏನೋ...."

ಸಾತವ್ವ ನಿಟ್ಟುಸಿರೆಳೆಯುತ್ತಿದ್ದಳೇ ವಿನಃ ಅವನ ವಿರುದ್ಧ ಒಂದು ಮಾತೂ ಆಡುತ್ತಿರಲಿಲ್ಲ.

ಸಾತವ್ವನ ಸ್ವಭಾವವೇ ವಿಚಿತ್ರ. ಬಾಯಿ ಬಡಕಿ. ನಾಲಿಗೆ ಸ್ವಲ್ಪ ಒರಟು ಖರೇ. ಆದರೆ ಹೃದಯ ಹೂವು. ಮಕ್ಕಳೆಂದರೆ ಅವಳಿಗೆ ಎಲ್ಲಿಲ್ಲದ ಪ್ರೀತಿ. ಗಲ್ಲಿಯ ಯಾವ ಗುಡಿಸಲಲ್ಲಿ ಮಗು ಹುಟ್ಟಿದರೂ ಇವಳು ಕಚ್ಚೆ ಹಾಕಿಕೊಂಡು ಆ ತಾಯಿಯ ಬಾಣಂತನದ ಕೆಲಸವನ್ನು ಮಾಡಲು ಸಿದ್ಧವಾಗುತ್ತಿದ್ದಳು. ಅನಾಥ ಮಕ್ಕಳು ಬೇನೆ ಬಿದ್ದರೆ ದವಾಖಾನೆಗೆ ಒಯ್ದು ತೋರಿಸಿ, ತನ್ನ ದುಡ್ಡು ಕೊಟ್ಟು ಬರುವವಳೂ ಇವಳೇ. ಗಲ್ಲಿಯ ಯಾವ ಮನೆಯಲ್ಲಿ ಯಾರು ಸತ್ತರೂ ಸರಿ. ಇವಳಿಲ್ಲದೆ ಹೆಣ ಎತ್ತುವಂತೆಯೇ ಇರಲಿಲ್ಲ. ಇವಳು ಏರು ದನಿ ತೆಗೆದು ಹಾಡಿ ಹಾಡಿ ಅತ್ತು ಕರೆದು ಹೆಣ ಚೆಂದ ಮಾಡಿದ ನಂತರವೇ ಆ ಹೆಣಕ್ಕೆ ಮಣ್ಣಿಗೆ ಹೋಗಲು ಪರ್ಮಿಶನ್. ಹೆಣ ಚೆಂದ ಮಾಡುವುದರಲ್ಲಿ ಸಾತವ್ವನದು ಎತ್ತಿದ ಕೈ. ಹೀಗಾಗಿ ಸಾತವ್ವ ಅವಿದ್ಯಾವಂತ, ಕೆಳಜಾತಿಯ, ಸಂಸಾರಹೀನ ಗವಾರಳಾದರೂ ಗಲ್ಲಿಯ ಎಲ್ಲರ ತಾಯಿಯಾಗಿ, ಮಗಳಾಗಿ, ತಂಗಿಯಾಗಿ, ಆಯಿ ಆಗಿ ತನ್ನದೇ ಆದ ಒಂದು ವಿಶಿಷ್ಟ ವ್ಯಕ್ತಿತ್ವವನ್ನು ಬೆಳೆಸಿಕೊಂಡಿದ್ದಳು.

ಸಾತವ್ವನ ಹಾಡುಗಾರಿಕೆ ಸುತ್ತಲೆಲ್ಲ ಪ್ರಸಿದ್ಧಿ. ಅವಳಿಗೆ ಎಲ್ಲ ಹಾಡುಗಳು ನಾಲಿಗೆಯ ತುದಿಯಲ್ಲಿಯೇ. ಅವಳು ತನ್ನ ಗಟ್ಟಿ ದನಿಯಲ್ಲಿ ಹಾಡಲು ಪ್ರಾರಂಭಿಸಿದರೆ ಗುಡಿಸಲಗೇರಿಯ ಆ ಕೊನೆಯ ಎಲ್ಲಮ್ಮದೇವಿಯ ಗುಡಿಯಲ್ಲಿಯ ಕಂಚಿನ ಗಂಟೆ ಬಾರಿಸಿದಂತೆಯೇ. ಮದುವೆ, ಸೋಬಾನ, ಕೋಲಾಟ, ನಾಗರಪಂಚಮಿಯ ಜೋಕಾಲಿಯ ಬಳಿಯಲ್ಲೆಲ್ಲ ಅವಳು ಹಾಡಲು ಹಾಜರ. ಹೀಗಾಗಿ ಅವಳಿಗೆ ಹಾಡಿನ ಸಾತವ್ವ ಎನ್ನುವ ಅಡ್ಡಹೆಸರು ಬೇರೆ.

"ಒಂಟಿಯಾಗಿಯೇ ಬಾಲ್ಯ ಹರೆಯ ಕಳೆದು ಮುಪ್ಪಿಗೆ ತಿರುಗಿದ್ದ ಸಾತವ್ವನದು ತುಂಬು



ಬದುಕು. ತನ್ನ ಒಂಟಿತನವನ್ನಾಗಲಿ, ಆಸೆ ಬಯಕೆಗಳನ್ನಾಗಲಿ, ದುಃಖ, ಸಂಕಟಗಳನ್ನಾಗಲಿ ಒಮ್ಮೆಯೂ ಅವಳು ಯಾರ ಮುಂದೆಯೂ ಹೇಳಿಕೊಂಡವಳಲ್ಲ. ಅವಳಿಗೆ ತನ್ನ ದುಃಖ ಚಿಂತೆಗಳು ದೊಡ್ಡವಾಗಿ ಕಂಡಿರಲೇ ಇಲ್ಲವೇನೋ. ಬೇರೆಯವರ ನೋವು, ಸಂಕಟಗಳಲ್ಲಿ ಪಾಲ್ಗೊಂಡು ಅದನ್ನು ಆದಷ್ಟು ಕಡಿಮೆ ಮಾಡುವುದರಲ್ಲಿಯೇ ಅವಳಿಗೆ ಖುಷಿಯಿದ್ದಂತಿತ್ತು, ಮಾನವ ಪ್ರೇಮಿ ಸಾತವ್ವ ಎಲ್ಲರ ಒಳಿತಿಗಾಗಿ ಹೆಣಗಾಡುತ್ತಿದ್ದಳು.

ದನಗಳ ಹಿಂಡೆ ಹಿಡಿಯಲು ಹೋದ ಹರೆಯದ ಪೋರಿ ದನಕಾಯುವ ಪೋರನೊಂದಿಗೆ ನಖರಿ ಆಡುತ್ತ ಕಿಸಿ, ಕಿಸಿ ನಕ್ಕರೆ, ದೊಡ್ಡವರ ಮನೆಯಲ್ಲಿ ಭಾಂಡಿ ತೊಳೆಯಲು ಹೋದ ಹುಡುಗಿ ಅಲ್ಲಿಯ ಹರೆಯದ ಗಂಡಸರೊಂದಿಗೆ ಕಣ್ಣುಗಳಲ್ಲಿಯೇ ಮಾತಾಡುತ್ತ ತುಟಿ ಕೊಂಕಿಸಿ ನಕ್ಕರೆ ಸಾತವ್ವನಿಗೆ ತಟ್ಟನೆ ತಿಳಿಯುತ್ತಿತ್ತು. ಯಾವ ಮುಲಾಜೂ ಇಲ್ಲದೆ ಅವಳು ಅವರನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದಳು.

"ಮುದುಕಾಗಿ ಅವಚಿರಿ ಹಿಡದಾದೇನ್ರೀ ನಿಮಗ ಸಾವುಕಾರ್ರೇ....ಆ ಪೋರಿ ಸಂಗಾಟ ಏನು ನಖರಿ ಚಕರಿ ನಡಸೀರಿ ? ಬಾಯೋರು ಇಲ್ಲೇನು ಮನ್ಯಾಗ ? ನಿಮ್ಮಂಥ ದೊಡ್ಡ ಮಂದೀಗಿ ಇಂಥಾ ಚಿಲ್ಲರಪಣಾ ಶೋಭಾ ಕುಡಂಗಿಲ್ಲ ಬಿಡ್ರಿ. ನಾಳೆ ಬಾಯೋರಿಗಿ ಗೊತ್ತಾದ್ರ ನಿಮ್ಮ ಕಿವಿಹಿಂಡಿ ಒಳಗ ಕೂಡ್ಸಿ ಈ ಪೋರಿಗಿ ಕೆಲಸಾ ಬಿಡಿಸಿ, ಬಾಯಿಗಿ ಮಣ್ಣು ಹಾಕ್ತಾರ ಅಟೆ. ಬಡೂರ ಪೋರಿಗೋಳು ನಿಮ್ಮಸಿ ಕೆಲಸಕ್ಕ ಬರ್ತಾರಂದ್ರ ಅವರಿಗೇನು ಮಾನಾ ಮರ್ಯಾದಿ ಇರಂಗಿಲ್ಲಂತೇ ತಿಳ್ಕೊಂಡಿರೇನು ಮತ್ತ ?"

ಎಂದವಳೇ ಹುಡುಗಿಯೆಡೆಗೆ ತಿರುಗಿ

"ಏ ಕಳ್ಳೀ....ನಡಿ ಮನೀಗಿ....ನಿಮ್ಮಪ್ಪಗ ಹೇಳಿ ನಿನ್ ಪೂಜೆ ಮಾಡಸ್ತೀನೆಂತ. ಭಾಂಡಿ ತೊಳ್ಯಾದು ಬಿಟ್ಟು ಈ ದಾರಿ ಹಿಡದಿದ್ದಿಯೇನೇ ನೀನೂ . ಈ ದಾರಿ ಮ್ಯಾಲ ನಾ ನಡದು, ನೆಳ್ಳಿ ಕಣ್ಣೀರು ಹಾಕ್ಕೋತ ವಾಪಸ್ ತಿರುಗಿ ಬಂದೀನೇ ತಂಗೀ...ಇಲ್ಲಿ ಬರೇ ಬಬಲಿ ಮುಳ್ಳು, ಕೊರಚು ಗಲ್ಲಗೋಳೇ ತುಂಬ್ಯಾವ. ಇದು ನವಾಂಗ ಕೊನಿಗಿ ಮುಟ್ಟಸೋ ದಾರಿ ಅಲ್ಲ ಕಂದಾ ... ನಡು ನೀರಾಗೇ ನಮ್ಮಂಥಾ ಗರೀಬ ಹೆಂಗಸರಿಗಿ ನುಂಗಿ ನೀರ ಕುಡ್ಯಾ ಖತರನಾಕ ದಾರಿ ಇದು. ನಡಿ ಮನೀಗಿ...."

ಎಂದು ಅವಳನ್ನು ಕರೆದುಕೊಂಡೇ ಬರುತ್ತ ಬುದ್ಧಿ ಹೇಳುತ್ತಿದ್ದಳು. "ನನ್ಹಾಂಗ ಆಗಬ್ಯಾಡ್ರೀ ಮಗಾ...ಗರತಿ ಗಂಗವ್ವನ್ಹಾಂಗ ಆಗ್ರಿ....ಸೀತಾ ದೇವಿ ಹಂಗ ಆಗ್ರೀ...ಅತ್ತಿ ಮನೀಗಿ ಸೊಸಿ ಆಗಿ, ತಾಯಿ ಮನೀಗಿ ಮಗಳಾಗಿ ಛಂದಾಗಿ ಬಾಳ್ಯಾ ಮಾಡ್ರಿ ಮಕ್ಕಳೇ..."

ಮದುವೆಯಾಗಿ ಗಂಡನ ಮನೆಗೆ ಹೋದಾ
ಗಿನ ಹೆಣ್ಣುಗಳಿಗೆ ಇದು ಸಾತವ್ವನ ಆಶೀರ್ವಾದ.

ಸಾತವ್ವನ ಜೀವನದಲ್ಲಿ ಮುಚ್ಚುಮರೆ, ಒಳಗೊಂದು ಹೊರಗೊಂದು, ಮಾತಿನಲ್ಲೊಂದು ಮನಸ್ಸಿನಲ್ಲೊಂದು ಅಂತ ಎಂಥ ಮಣ್ಣು ಮಸಿಯೂ ಇರಲಿಲ್ಲ. ಅವಳ ಬದುಕು ಒಂದು ತೆರೆದ ಪುಸ್ತಕ. ಯಾರು ಬೇಕಾದರೂ ಯಾವಾಗ ಬೇಕಾದರೂ ಅದನ್ನು ಓದಬಹುದಾಗಿತ್ತು. ಹಾಗೆ ಓದು ಬಾರದವರಿಗೆ ಅವಳು ತಾನಾಗಿಯೇ ಎಲ್ಲವನ್ನೂ ಪ್ರಾಮಾಣಿಕವಾಗಿ ಹೇಳಿಬಿಡುವ ದಿಟ್ಟೆ. ಅವಳು ಯಾವುದಕ್ಕೂ ಹೆದರುತ್ತಿರಲಿಲ್ಲ. ತನ್ನ ಮನಸಾಕ್ಷಿ ಹೇಳಿದಂತೆ ಕೇಳುವ, ಸಮಾಜದ ಕಟ್ಟು ನಿಯಮ ನಿಬಂಧನೆಗಳಿಗೆ, ಠಕ್ಕ ರೀತಿ ರಿವಾಜುಗಳಿಗೆ ಅಂಜಿ ದಿನಕ್ಕೊಮ್ಮೆ ತಾಸಿಗೊಮ್ಮೆ ಸತ್ತು ಬದುಕುವ ಹೇಡಿಯಾಗಿರಲಿಲ್ಲ ಸಾತವ್ವ. ನೈಜಾಮು ನವಾಬನ ಆಳಿಕೆಯಲ್ಲಿಯೇ ಪೋಲಿಸ ಪೇದೆಯೊಬ್ಬ ಒಂದು ಹೆಣ್ಣನ್ನು ಕೆಡಿಸಲು ನೋಡಿದಾಗ, ಸಿಂಹಿಣಿಯಂತೆ ಅವನ ಕಾಲರ್ ಹಿಡಿದೆಳೆದು ಚಪ್ಪಲಿ ಕಳಚಿ ಹಿಡಿದ ಗಟ್ಟಿ ಜೀವ ಅವಳದ್ದು.

ಸಾತವ್ವ ಮನುಷ್ಯರಿಗಷ್ಟೇ ಅಲ್ಲ. ದೇವರು ದೆವ್ವಗಳಿಗೂ ಕ್ಯಾರೇ ಎಂದು ಹೆದರಿ ಹಿಂದೆ ಸರಿಯುವ ಹೆಣ್ಣಾಗಿರಲಿಲ್ಲ. ರೋಗಪಡ ಪಟ್ಟಿಯ ಯಾವುದೇ ಗುಡಿಸಲಲ್ಲಿ ಯಾರಿಗೇ ಆಗಲಿ ಬೇನೆ ಬಂದರೆ ಆ ಜನಕ್ಕೆ ಮೂಢನಂಬಿಕೆ ಕಾಡುತ್ತಿದ್ದುವು. ದೆವ್ವ ಭೂತ, ಹಾದಿ ಬೀದಿ, ಮರಗವ್ವ ಪೋಚವ್ವ, ಅಂತ ಬಾಳೆಹಣ್ಣು, ತೆಂಗು, ನಿಂಬೆಕಾಯಿ ಎಲ್ಲ ಇಳಿಸಿ ಬಿಸಾಕುವ ಸಾಹಸ ಆ ಜನರಲ್ಲಿ ಇದ್ದಿಲ್ಲ. ತಾವು ಧೈರ್ಯವಂತರೇ ಬೇಕಿಲ್ಲ ಸು. ಸಾತವ್ವಗೆ ಬೇಕಾದ್ದು ಇದುಕ್ಕಿತ್ತು. ಅವಳು ಅಂಥದ್ದಕ್ಕೆಲ್ಲ ಯಾವಾಗಲೂ ತಯಾರು.

"ಸಾತವ್ವಾಯೀ. ಇವತ್ತ ಬಾಳಾಳನ ಅಲ್ಲೇನ?" ಅಂತ ಗುಡಿಸಲಿನ ಗಂಗವ್ವ ಕೇಳುವುದಿತ್ತು.

'ಹೊಯಿಂದಾಗ ಗಂಗಾ ... ಏನಕ?' ತನ್ನ ಅಂಗಳದ ಕಸಗುಡಿಸುತ್ತ ಸಾತವ್ವ ಮಾತಾಡುತ್ತಿದ್ದಳು.

"ಯಾಕೆ ಬಿಡ್ತೀಯೋ.... ನಮ್ಮ ಪೋರಗ ಜಡು ಅಗ್ಯಾದಲ್ಲೇ ... ಮನ್ನ ದುರ್ಗವ್ವನ್ನ ಪೂಜಾರಿ ಬಳ್ಳಿ ಕವಡಿ ಹಾಕಿ ಕೇಳಿಸಿನೋಡಿದರ ಕಾಶಿಬಾಯಿ ತಬ್ಬಿದ ಸಾವಿ ಛಾಯಿ ಹೊಂಟಾದ. ಇಳಿಸಿ ಬಿಕಾಟಬೆ ಕಾಗ್ಯಾದೇ ಆಯೀ ... ನನ್ ಗಂಡಗ ಹೇಳಿದರ ಆ ದೆವ್ವಿನ ಹೆಸರ ಕೇಳಿದರೇ ನಿಂತಲ್ಲೆ ನಿಂತು ಥರಥರನಾಗ ಬಿಟ್ಟ ಹೊಯ್ಕೋತಾನ ಅಂಜಿ.... ನಾನೇ ಹೋಗ್ಬೇಕಂದರ ನನಗೂ ಧೈರ್ಯ ಸಾಲಂಗಿಲ್ಲಾಗ್ಯಾದ ಆಯೀ..."

ಗಂಗವ್ವನ ದೈನೇಸಿ ದನಿ.

"ಹಾಂ ..ಯಾಕ್ ಅಂಜುತಾನಂತ ಸಾಬ್ಯಾ? ಅದೇನು ಇವನ ಹಿಡ್ಕೊಂತಾದಂತಾ ಬಂದು? ನಿನ್ ಗಂಡ ಛಳಿ ಪುಕ್ಕಲಹುಡಿ ಹನಾ ಬಿಡೇ ಗಂಗಾ... ಅದು ಮನ್ಯಾಗೇ ನಿನ್ ಮುಂದೇ ನೋಡ್ತೇನು ಅವನ ಶೂರತನ ಎಲ್ಲಾ ..ಹೊರಗೆ ಯಾರರೆ 'ಯಾಕೋ ಸಾಬ್ಯಾ' ಅಂತ ಕಣ್ಣು ಕೆಂಪದರ ಸಾಕು, ಕುಂಡಿಗೆ ಕಾಲ ಹಚ್ಚಿ ಓಡಿ ಹೋಗ್ತಾನ ಮಗಾ..."


ಎನ್ನುತ್ತ ಸಾತವ್ವ ನಗುವುದಿತ್ತು.

"ಆಯೀ.. ಅದಕ್ಕೇ .... ನೀನೇ ಒಂದೀಟು ಬಿಯ್ಯ ಇಟ್ಟು ಬರ್ತೀಯೇನೆ? ನಿನಗ ಪುಣ್ಯಾ ಬರ್ತದೇ..."

ಗಂಗಾಳ ಅಂಗಲಾಚುವ ದನಿ.

'ಆಗಲೇಳು ಅದಕ್ಕೇನಂತ.. ಅಲ್ಲಿ ತನಕಾ ಬಿಯ್ಯ ಬ್ಬು ಬಂದರ ನನ್ ಕೈ ಕಾಲೇನು ಸವದು ಹೋಗಂಗಿಲ್ಲ. ಹೊಯಿಂದಾ... ಏನೇನು ಬೇಡ್ಯಾದೇ ಆ ಭಾಂಯಿ?"





"ಎಣ್ಣ ಹೋಳಗಿ, ಕೋಳಿಪಲ್ಯಾ, ಗೋಧಿ ರೊಟ್ಟಿ, ಘಾಣ್ಯಾಕೊಟ್ಟ ಬಾನಾ, ಟಂಗ್, ಬಾಳಿ ಹಣ್ಣಾ, ನಿಂಬಿಕಾಯಿ, ಮೂರು ದಿನಸಿನ ಹುವ್ವಾ, ಕರಿಬಟ್ಟಿ, ಎಲಿ, ಸುಣ್ಣಾ, ಕಾಚಾ, ಅಡಕಿ ಮ್ಯಾಲ ಸವ್ವಾ ರೂಪಾಯಿ..."

"ವ್ಯಾರೇ ಗಬರೂ...ಥಂದದಾ ಬಿಡು ... ಆ ದೆವ್ವನೂ ಶೋಕಿಲಾಲ ಅದಾ ಕಾಣಸ್ತದ. ಸಿಂಧಿ ಸೆರಿ, ಬರಾಂಡಿ ಬೇಡಿಲ್ಲನೇ ಕುಡಿಲಕ್ಕ ? ಅಂವಾ ಆ ದುರ್ಗವ್ವನ ಪೂಜಾರಿದೇನು ಕುಂಡಿ ಕಡೀತಾದಂತೇನು... ಅಂವಗೇನು ... ಬ್ಯಾನಿ ಆಗ್ತದ? ಹೇಳಿ ಬಿಡ್ತಾನ ಆಯ್ತು. ಬಡೂರು ಈಟಿಲ್ಲಾ ಎಲ್ಲಿಂದ ತರ್ಲೇಕಂತೇ ಮಗಾ..."

ಸಾತವ್ವನ ಖರೇ ಕಳಕಳಿಯ ದನಿ.

"ಎಲ್ಲಾ ತಂದಿಟ್ಟೀನೆ ಆಯೀ...ನಿನ್ನಿ ಸೋಮವಾರ ನಿನ್ ಮಗನ ಪಗಾರ ಸಿಕ್ತು ದುಡದದ್ದು. ಹೊತ್ತಿರಟಗೇ ಅಡಗಿ ಮಾಡಿ ಬಿದರಬುಟ್ಟಿ ಥುಂಬಿ ಕುಡ್ತಿನೆಂತ...ಒಂದೀಟು ಒಯ್ದು ಭಾಯಿ ಕಟ್ಟಿ ಮ್ಯಾಲ ಇಟ್ಟು ಬಾರೇ ಆಯೀ "

"ಆಯ್ತು ಬಿಡು. ನಿನ್ನ ಗಾಚಾರ ಎಲ್ಲಾ. ಇಲ್ಲಂದ್ರ ಇದೆಲ್ಲಾ ತರಾವರ ಬದಲಿ ಅದೇ ರುಪೈಕೊಟ್ಟು ಪಾರಗ ಭಲೋ ಡಾಕದರನ ಬಲ್ಲಿ ತೋರಿಸಿದರ ಜಲ್ದಿ ಆರಾಮಾಗ್ತಿತ್ತು. ಹೇಳಿದ್ರ ನಿಮಗ ತಿಳಂಗಿಲ್ಲ. ಬರೇ ದೆವ್ವ ದೇವರ ದಿಂಡರ ಅನಕೋಂತೇ ಸಾಯ್ತೀರಿ...ಹೂಂ . ನಮ್ಮಪ್ಪಂ ದೇನು ಗಂಟ ಹೋಗ್ತಾದ ? ಒಯ್ದಿಟ್ಟು ಬರ್ತಿನೆಂತ ಬಿಡು. ಅದರ ಭಾಳ ರಾತರಿ ಮಾಡಬ್ಯಾಡವ್ವೇ ಗಂಗಾ...ದೀಪಾ ಹಚ್ಚಟಗೇ ತಯಾರು ಮಾಡಿಡು. ಆ ದಾರಿಗಿ ಲೈಟಿಲ್ಲ ಮಣ್ಣಿಲ್ಲ. ಅಡವಿ ಧಾರಿ ಬ್ಯಾರೆ, ತೆಗ್ಗಾ ಹೊಡ್ಡಗೋಳು ನಡಬರಕ, ಮುಂದಿ ತಿರುಗ್ಯಾಡಂಗಿಲ್ಲ ನೋಡೂ... ನಾ ಕತ್ತಲಾಗ ಕಣ್ಣ ಕಾಣಸಲಾರ್ದೆ ಎಲ್ಲರೆ ಎಡವಿ ಬಿದ್ದನಂದರ ಆ ಭಾಂಯಿ ದೆವ್ವಾ ಬರ್ಲೇಕು ನೋಡು ನನಗ ಎಬ್ಬಿಸಲಕ್ಕ..."

"ಜಲ್ದಿ ಕುಡ್ತೀನೇ ಆಯಿ..."

ಮಾರನೆಯ ದಿನ ಹೊತ್ತು ಮುಳಗಿ ಕತ್ತಲಾದ ತಾಸ್ಹೊತ್ತಿನಲ್ಲಿ ಸಾತವ್ವ ಎಲ್ಲ ಅಡಿಗೆ ತುಂಬಿದ ಬಿದಿರಬುಟ್ಟಿಯನ್ನು ಕಾಯಿಲೆ ಬಿದ್ದ ಹುಡುಗನ ಮುಖದ ಮೇಲಿಂದ ಮೂರುಸಲ ಇಳಿಸಿ, ಮಾತಾಡದೆ ತಲೆಯ ಮೇಲಿಟ್ಟುಕೊಂಡು ಗಸಗಸನೆ ಕಾಶಿಬಾಯಿ ತೋಟದ ಮೂಲಿ ಭಾಂವಿಯ ದಾರಿ ತುಳಿದಳು. ಭಾವಿಕಟ್ಟೆಯ ಮೇಲೆ ಕುಳಿತು ಬುಟ್ಟಿ ಮುಂದಿಟ್ಟುಕೊಂಡು ಎಣ್ಣೆ ಹೋಳಿಗೆ, ಕೋಳಿಪಲ್ಯ ಹೊರತೆಗೆದಳು.

"ಬಾ.... ಉಣ ಬಾ .. ಬೋಡಿ.... ನಿನ್ ಪುಣ್ಯಾದಲಿಂದ ನನಗನೂ ಎಣ್ಣ ಹೋಳಗಿ ಕೋಳಿ ಪಲ್ಯಾ ಸಿಕ್ತು... ಬಾ... ನಾನೂ ನೀನೂ ಕೂಡೇ ಉಣಾಮೆಂತ. ."

ಎಂದು ತನ್ನಷ್ಟಕ್ಕೆ ತಾನೇ ಮಾತಾಡುತ್ತ ಬಾವಿಯಲ್ಲಿ ದಿಟ್ಟಿಸಿದಳು. ಚಂದಿರನ ಮಸಕು ಬೆಳದಿಂಗಳಿನಲ್ಲಿ ಸ್ತಬ್ಧವಾಗಿ ನಿಂತ ನೀರು ಮೌನ ಸಾಧಿಸಿತು. ಕಣ್ಣೆತ್ತಿದಳು. ಸುತ್ತಮುತ್ತ ಬೆಳೆದು ನಿಂತ ಹುಣಸೆ ಬಬಲಿ ಮರಗಳು ಮಾತಾಡಲಿಲ್ಲ. ದೂರದ ಕರಿ ಹೊಲಗಳ ಮೈ ತುಂಬ ಗಡ್ಡೆಯಾಗಿ ಅವುಚಿ ಮಲಗಿದ್ದ ಪ್ರಶಾಂತತೆ ಮಿಸುಕಾಡಲಿಲ್ಲ.

"ಬಿಡು ಹಂಗಾರ. ನಾನೇ ಉಣತಿನೆಂತ..." ಎನ್ನುತ್ತ ಸಾತವ್ವ ಹೋಳಿಗೆ, ಪಲ್ಯ, ಚಪಾತಿಯನ್ನು ಪಸಂದಾಗಿ ಉಂಡಳು. ಸವ್ವಾ ರೂಪಾಯಿ ಎತ್ತಿಕೊಂಡು ತನ್ನ ಸೀರೆಯ ಬಾಳಿ ಗಂಟಿನಲ್ಲಿಟ್ಟುಕೊಂಡಳು. ತೆಂಗು ಒಡೆದು ಒಳಗಿನ ಕೊಬ್ಬರಿ ತಿನ್ನುತ್ತ ಅಲ್ಲಿಂದ ಎದ್ದು ಹೊರಟಳು.

ಮೂರನೆಯ ದಿನ ಮುಂಜಾನೆ ನಗುತ್ತ ಬೇರೆಯವರ ಮುಂದೆ ಹೇಳುತ್ತಿದ್ದಳು ಸಾತವ್ವ.

"ನಿನ್ನಿ ಆ ಕಾಶಿಬಾಯಿ ತ್ವಾಟದ ಮೂಲಿ ಭಾಂಯಿ ದೆವ್ವ ಪಸಂದಾಗಿ ಹೊಟ್ಟಿ ಥುಂಬಾ ಎಣ್ಣ ಹೋಳಗಿ, ಕೋಳಿಪಲ್ಯಾ, ಉಂಡು ಥೇಕರಿಕೆ ಬಿಟ್ಟತು ನೋಡ್ರೀ ತಂಗಿದೇರೀ. ಇನ್ನ ಮ್ಯಾಲ ಈ ಕೇರಿ ಮಕ್ಕಳ ಕಡಿ ಕಣ್ಣೆತ್ತಿ ನೋಡಂಗಿಲ್ಲ ಅಂತ ಹೇಳ್ಯದ ನೊಡ್ರಿ..."

"ಭಲೋ ಆಯ್ತು ಬಿಡು ಆಯಿ...ಅದರ ಕಾಟ ತಪ್ಪಿದರೆ ಸಾಕು" ಸಾತವ್ವ ಒಳಗೊಳಗೇ ನಗುತ್ತ ಮುಂದೆ ನಡೆಯುತ್ತಿದ್ದಳು...

"ಒಂದು ಮನೀಗಿ ನೀ ಸೊಸಿ ಆಗಲಿಲ್ಲೇ ಆಯಿ... ಇನ್ನೊಂದು ಮನೀಗಿ ನೀ ಮಗಳಾಗಲಿಲ್ಲೇ ಆಯೀ...ನೀ ಹೆಸರಿಲ್ಲದ ಬಳ್ಳಿ ಆಗಿ ನಡದೆಲ್ಲೇ ಆಯಿ...ನಿನ್ನವರು ಅಂತ ನಿನಗ್ಯಾರು ಅಳುವರು ಹರಾರೇ ಆಯೀ..."

ಯಾರೋ ಒಂದು ದೊಡ್ಡ ದನಿ ತೆಗೆದು ಅತ್ತಾಗಲೇ ನನ್ನ ವಿಚಾರ ಸರಣಿ ಕತ್ತರಿಸಿತು. ತಲೆ ಕೊಡವಿದೆ. ಅದೇ ಗಲ್ಲಿಯ ಈರವ್ವ ಹೆಣದ ಬಳಿ ಕುಂತು ಅಳುತ್ತಿದ್ದಳು ಹಾಡಿ ಹಾಡಿ...


ಹೌದು ಸಾತವ್ವನ ಬಾಳೊಂದು ಹೆಸರಿಲ್ಲದ ಬಳ್ಳಿಯೇ ಅನಿಸಿತು. ಅವಳು ಇಂಥವರ ಮಗಳು ಅನ್ನೋದು ಗೊತ್ತಿಲ್ಲ. ಇಂಥವರ ಸೊಸೆ ಅನ್ನುವದೂ ತಿಳಿದಿರಲಿಲ್ಲ. ಯಾರ ಹೆಸರಿನ ಹಂಗೂ ಇಲ್ಲದೆ ಸಾತವ್ವ ತನ್ನ ಹೆಸರಿನಿಂದಲೇ ತನ್ನ ಬದುಕನ್ನು ಬಾಳಿದ್ದಳು; ತನಗೆ ಸರಿ ಕಂಡತೆ ತನ್ನ ಮನಃಸಾಕ್ಷಿ ಒಪ್ಪಿದಂತೆಯೇ ನಡೆದಿದ್ದ ಸಾತವ್ವ ಗಲ್ಲಿಯ ಜನರಿಗೆಲ್ಲ ಬೇಕಾಗಿದ್ದ ವ್ಯಕ್ತಿಯಾಗಿದ್ದಳು.

ಜನರೆಲ್ಲ ಎದ್ದು ನಿಂತರು. ಹಲಗಿ ಬಡಿಯುವವರು ಬಂದರು. ಹೆಣ ಕೂಡಿಸುವ ಕುರ್ಚಿ ತಂದರು. ಆ ಮನೆಯಿಂದ, ಈ ಮನೆಯಿಂದ, ಊರು, ಕೇರಿ, ಸಂದಿಗೊಂದಿಗಳಿಂದ ಜನರು ಅವಸರದ ನಡಿಗೆಯಲ್ಲಿ ಹೆಣ ಸಮೀಪಿಸ ತೊಡಗಿದರು. ಹೆಣ ಎತ್ತುವ ತರಾತುರಿ ಮಾಡುತ್ತ ಮೂರು ನಾಲ್ಕು ಜನ ಗಂಡಸರು ಒಳಗೂ ಹೊರಗೂ ಓಡಾಡುತ್ತ ಸಾತವ್ವನ ಶವದ ಬಳಿ ಬಂದರು.

ನಾನು ಮತ್ತೊಮ್ಮೆ ಸಾತವ್ವನ ಹೆಣವನ್ನು ದಿಟ್ಟಿಸಿ ಅವಳ ಆತ್ಮಕ್ಕೆ ಶಾಂತಿ ಕೋರಿ, ನಿಟ್ಟುಸಿರೆಳೆದು ಅಲ್ಲಿಂದ ಹೊರಟು ಬಂದೆ. ನಾನು ಆ ಜಾಗದಿಂದ ದೂರ ನಡೆದಂತೆಲ್ಲ ಕ್ರಮೇಣ ಹಂತ ಹಂತವಾಗಿ ಅಲ್ಲಿಯ ಸದ್ದು ಗದ್ದಲ, ಗಡಿಬಿಡಿಯ ಮಿಶ್ರದನಿಗಳು, ಹಲಗೆ ಬಾಜಿಯ ಸ್ವರಗಳು ಕ್ಷೀಣಿಸುತ್ತ ನಡೆದು ಒಂದು ಹಂತದಲ್ಲಿ ಬಿಕ್ಕಳಿಸಿ ಸತ್ತವು. ಯಾವ ಸದ್ದೂ ನನಗೆ ಕೇಳಿಸಲ್ಲಿಲ್ಲ. ಆದರೆ ಬಹಳ ದಿನಗಳಾದರೂ ಸಾತವ್ವನ ನೆನಪು ಮಾತ್ರ ನನ್ನ ತಲೆಯಿಂದ, ಮನಸ್ಸಿನಿಂದ ಸಾಯುತ್ತಿಲ್ಲ. ಸತ್ತವರೊಂದಿಗೆ ಅವರ ನೆನಪೂ ಸಾಯಬೇಕೆಂಬ ಕಾಯಿದೆಕಾನೂನುಗಳೇನೂ ಇಲ್ಲವಲ್ಲ. ಸತ್ತವರು, ಅನಂತರ ಏನಾಗುತ್ತಾರೋ ಗೊತ್ತಿಲ್ಲ. ಆದರೆ ಅವರ ನೆನಪುಗಳು ಮಾತ್ರ ಉಳಿದವರ ಸುತ್ತಮುತ್ತ ಆಗಾಗ ಅಸ್ಪಷ್ಟ ಸುಳಿದಾಡುತ್ತ ಕಾಡುತ್ತಲೇ ಇರುತ್ತವೆ. ✿



ಬೆಂಕಿರಾಯ



"ಎಚ್ಚರ ಹುಡುಗಿ" ಅಂತ ಹೇಳಿದ ಬೆಂಕಿರಾಯ ನನಗೆ
"ಕಟ್ಟಬೇಡವೆ ನನ್ನನು ಹಿಡಿದು ನಿನ್ನ ಸೆರಗ ಕೊನೆಗೆ"

"ಎಚ್ಚರ ಹುಡುಗಿ ಬೆಚ್ಚಗೆ ಇರಲು ಹಿಡಿಯಬೇಡ ನನ್ನ"
ನನ್ನ ಪ್ರೀತಿಸುವ ಬೆಂಕಿರಾಯನಿಗೆ. ಏನ ಹೇಳಲಿನ್ನ?
"ಕಟ್ಟಬೇಡವೆ ಸೆರಗಿನ ತುದಿಗೆ ಒಂದೂ ನಿಗಿನಿಗಿ ಕೆಂಡ"
ಬೆಂಕಿರಾಯನಿಗೆ ಗೊತ್ತೇ ಇಲ್ಲ ಬುದ್ಧಿವಾದ ದಂಡ.

"ಬೇಡವೊ ನನಗೆ ನಿನ್ನುಪದೇಶ ಬೂದಿಯಲ್ಲೆ ಮಡಗು
ನಿನ್ನ ಕುಣಿಸುವುದು ಗೊತ್ತೋ ನನಗೆ ನನ್ನ ಕೊನೆಯುವರೆಗು,
ಮಿಂಚು ನೋಟದಲಿ ತಡೆದು ನಿಲ್ಲಿಸುವೆ, ತಂಪಾಗಿಸುವೆನು ನಿನ
ನಿನ್ನ ಧರ್ಮ ನೀನಿಟ್ಟುಕೊ ಅಗ್ನಿ. ನೋಡೆನ್ನ ಧರ್ಮವನ್ನ
ಗಾರ್ಹಪತ್ಯನೊ ಆಹವನೀಯನೊ ದಕ್ಷಿಣನೋ ನೀನು
ಹಾಳು ಹರಟೆಯಲಿ ತೊಡಗಬೇಡವೊ ಅಗ್ನಿವಧೂ ನಾನು
ನಿನ್ನ ಸಖನು ನನ್ನುಸಿರೋ ಅಗ್ನಿ. ಟಗರು ವಾಹನನೆ ಬಾರೊ
ಇಚ್ಛಾರೂಪವತಳೆಯುವೆ ನಾನು. ಇಷ್ಟಾರ್ಥಸಿದ್ಧ ಜಾತೇ."

ಶ್ರೀಧರ

ಸುಮತೀಂದ್ರ ನಾಡಿಗ

ರಾಘಣ್ಣ ಮಾಮಲೇದಾರನಾದದ್ದು…

ಡಾ. ರಾ.ಯ. ಧಾರವಾಡಕರ



ರಾಘಣ್ಣ ಮಾಮಲೇದಾರನಾದಾಗ ನಮ್ಮೂರ ವಿಧವೆಯರಿಗಾದಷ್ಟು ಆನಂದ ಮತ್ತಾರಿಗೂ ಆಗಿರಲಿಲ್ಲ. ಯಾಕಂದರೆ, ಅವರ ಮುಖಂಡ ತಾಲೂಕಿನ ಮುಖ್ಯಸ್ಥನಾಗಿದ್ದ. ಇದಕ್ಕೆ ಕಾರಣ, ರಾಘಣ್ಣ ರೆವಿನ್ಯೂ ಕಾರಕೂನನಿದ್ದಾಗಿನಿಂದಲೂ ಈ ವಿಧವೆಯರ ಮೋಕ್ಷಕ್ಕಾಗಿ ಪ್ರಯತ್ನಿಸುತ್ತಲೇ ಇದ್ದ. ಎಳೆವಯಸ್ಸಿನಲ್ಲಿ ಗಂಡನನ್ನು ಕಳೆದುಕೊಂಡ ಅವರ ಪಾಪದ ಪರಿಮಾರ್ಜನೆ ರಾಘಣ್ಣನ ಪುರಾಣ ಶ್ರವಣದಿಂದ ಆಗುತ್ತಿತ್ತು. ರಾಘಣ

> ‘ಗುದಮುರಗಿ’ ಇದ್ದಲ್ಲಿ ಕಳವು-ದರೋಡೆ-ಕೊಲೆ ಆಗುತ್ತಲೇ ಇರಲಿಲ್ಲ. ಅವನ ಹೆಸರು ಕೇಳಿದ ಕೂಡಲೇ ಚಿಕ್ಕಮಕ್ಕಳು ಚಿಟ್ಟನೆ ಚೀರುತ್ತಿದ್ದರು, ಗರ್ಭಿಣಿಯರು ಗದಗದ ನಡುಗುತ್ತಿದ್ದರು...
>
> ಇಂಥ ಗುದಮುರಿಗಿಯನ್ನು ರಾಘಣ್ಣ ಈಗ ಎದುರು ಹಾಕಿಕೊಂಡಿದ್ದ. ಮೊದಲನೆಯ ಮಹಾಯುದ್ಧದಲ್ಲಿ ನಾಪಿತರನ್ನು ಎದುರು ಹಾಕಿಕೊಂಡರೆ, ಈಗ ಎರಡನೆಯ ಮಹಾಯುದ್ಧದಲ್ಲಿ ಬಲಿಷ್ಠ ಹಿಟ್ಲರ್ ಗುದುಮುರಿಗೆಯನ್ನು ಎದುರು ಹಾಕಿಕೊಂಡಿದ್ದ....

ಮ್ಯಾಟ್ರಿಕ್ಯುಲೇಶನ್ ಆದ ತಕ್ಷಿಗೆ ನೌಕರಿ ಹಿಡಿದ. ಅದೂ ಅವನಿಗೆ ರೆವಿನ್ಯೂ ಇಲಾಖೆಯಲ್ಲಿಯೇ ಸಿಕ್ಕಿತು. ತನ್ನ ಸಹೋದ್ಯೋಗಿಗಳೊಡನೆ ಹೊಂದಿಕೊಳ್ಳದೆ, ಮೈಲಿಗೆಯಾಗದೆ, ರಾಘಣ್ಣ ಇಡೀ ಆಫೀಸಿನಲ್ಲಿ ಒಂದು ನಡುಗಡ್ಡೆಯೇ ಆಗಿ ಉಳಿದಿದ್ದ. ಮುಂಜಾನೆ ಸ್ನಾನ ಸಂಧ್ಯಾದಿಗಳನ್ನು ಮುಗಿಸಿ, ತನ್ನ ಸಾತ್ವಿಕ ಆಹಾರವನ್ನು ಸೇವಿಸಿ, ರಾಘಣ್ಣ ಹತ್ತು ಗಂಟೆಗೆ ಆಫೀಸಿಗೆ ಹೋದನೆಂದರೆ, ಅವನು ಮರಳಿ ಮನೆಗೆ ಬರುವುದು ಸಾಯಂಕಾಲ ಐದು ಗಂಟೆಗೇ. ಈ ಏಳುತಾಸುಗಳ ಅವಧಿಯಲ್ಲಿ ಅವನು ತಿಂಡಿ ತಿನ್ನುವುದಂತೂ ದೂರವಿರಲಿ, ಬಾಯಲ್ಲಿ ಒಂದು ಕಾಳು ನೀರೂ ಸಹ ಹಾಕುತ್ತಿರಲಿಲ್ಲ. ಎರಡೆರಡು ನಿಶ್ಚಕ್ರ ಏಕಾದಶಿ ಮಾಡಿದ ರಾಘಣ್ಣನಿಗೆ ಮುಂಜಾವಿನಿಂದ ಸಾಯಂಕಾಲದವರೆಗೆ ನೀರು ಆಹಾರಗಳನ್ನು ಸ್ವೀಕರಿಸದೆ ಇರುವುದು ಏನೂ ಕಠಿಣವಾದ ಕೆಲಸವಾಗಿರಲಿಲ್ಲ. ಸಾಯಂಕಾಲ ಮನೆಗೆ ಬರುವುದೊಂದೇ ತಡ, ರಾಘಣ್ಣ ಕೈಕಾಲು ತೊಳೆದುಕೊಂಡು ವಸ್ತ್ರಾಂತರವಾಗಿ, ಪೌರಾಣಿಕ ಪೀಠವನ್ನೇ ಅಲಂಕರಿಸುತ್ತಿದ್ದ. ರಾಘಣ್ಣನ ಕೆಳಗೆ ಒಂದು ದೊಡ್ಡ ಮಣೆ, ಹಿಂದೆ ಒಂದು ದೊಡ್ಡ ಮಣೆ, ಎಡಕ್ಕೆ ಬಲಕ್ಕೆ ಥಾಳಾಗಿ ಸಾತ್ವಿಕವಾಗಿ ಬೆಳಗುವ ಎರಡು ದೊಡ್ಡ ಸಮೆಗಳು, ಮುಂದೆ ಹತ್ತಾರು ಸಣ್ಣ ಸಣ್ಣ ನೀರಾಂಜನಗಳು, ಎದುರಿಗೆ ಪುರಾಣಗ್ರಂಥ—ಇವನ್ನೆಲ್ಲ ನೋಡಿದರೆ, ರಾಘಣ್ಣ ಬೆಳಕಿನ ಪುಂಜವೇ ಕಂಡ ಹಾಗೆ ಕಾಣುತ್ತಿದ್ದ. ಅವನು ಕೂಡುವ ಮತ್ತು ಅವನ ಹಿಂದೆ ಇರುವ ಎರಡೂ ದೊಡ್ಡ ಮಣೆಗಳಿಗೆ ನಾಲ್ಕೂ ಮೂಲೆಯಲ್ಲಿ ಹಿತ್ತಾಳೆಯ ಸುಂದರವಾದ ಹೂವುಗಳನ್ನು ಬಡಿದಿರುತ್ತಿದ್ದರು. ರಾಘಣ್ಣ ಮನೆಗೆ ಬಂದು ವಸ್ತ್ರಾಂತರವಾಗುವದರಲ್ಲಿಯೇ ಮನೆಯ ಹೆಂಗಸರು ಪೀಠಕ್ಕೆ ರಂಗವಲ್ಲಿ ಹಾಕಿ, ಇಷ್ಟೆಲ್ಲ ವ್ಯವಸ್ಥೆ ಮಾಡಿಟ್ಟಿರುತ್ತಿದ್ದರು. ರಾಘಣ್ಣನ ಪುರಾಣ ಪ್ರವಚನವನ್ನು ಕೇಳಲು ವಿಧವೆಯರ ತಂಡ ಮಧ್ಯಾಹ್ನ ೪॥ ಗಂಟೆಯಿಂದಲೇ ಹೊರಡುತ್ತಿತ್ತು. ಈ ಗುಂಪಿನಲ್ಲಿ ಸಕೇಶಿಯರಿಗೆ—ಅಂದರೆ ಗಂಡ ಸತ್ತರೂ ತಮ್ಮ ಸೌಂದರ್ಯಕ್ಕೆ ಬಲಿಯಾಗಿ ತಲೆಯ ಮೇಲೆ ಕೂದಲನ್ನಿಟ್ಟುಕೊಂಡ ವಿ — ಧವೆಯರಿಗೆ — ಸ್ಥಾನವಿರುತ್ತಿರಲಿಲ್ಲ. ಶ್ರೀಮಠವೇ ಇಂಥವರಿಗಷ್ಟೇ ಅಲ್ಲದೆ, ಇಂಥವರ ಮನೆಯವರಿಗೂ ಬಹಿಷ್ಕಾರ ಹಾಕಿರುತ್ತಿದ್ದರೆಂದ ಮೇಲೆ ರಾಘಣ್ಣನ ಮಠದಲ್ಲಿ ಇವರು ಸಮಾವೇಶವಾಗುವ ಬಗೆ ಹೇಗೆ? ಹೀಗಾಗಿ, ಹಳೆಯ ಪದ್ಧತಿಯ ವಿಧವೆಯರು ಕೈಯಲ್ಲಿ ಹತ್ತಿಯ ಬುಟ್ಟಿಯನ್ನು ಹಿಡಿದುಕೊಂಡು ಗುಂಪುಗುಂಪಾಗಿ ಹೊರಟರೆ ಸ್ಟಾಲಿನ್‌ನ ಕೆಂಪು ಸೈನ್ಯವೇ ಹೊರಟಂತೆ ಕಾಣುತ್ತಿತ್ತು. ಈ ಲಾಲಬಾವುಟಗಳ ಮಧ್ಯದಲ್ಲಿ ಬಿಳಿಧೋತರ, ಕೆಂಪು ಉಪ್ಪರಣಿ ಹೊತ್ತ ರಾಘಣ್ಣ ಬೆಳಕಿನ ಪಿಂಡದಂತೆ ಕಾಣುತ್ತಿದ್ದ.

ಒಂದು ಬಿಳಿಯ ಕರೋತ್ಕಾಟಿ ಧೋತರ ಉಟ್ಟು, ಶ್ರೀಮಠದವರು ಕೊಟ್ಟ ಒಂದು ಶಾಟಿಯನ್ನು ಹೊದ್ದುಕೊಂಡು ರಾಘಣ್ಣ ಪೀಠಕ್ಕೆ ಬರುತ್ತಲೇ, ವಿಧವೆಯರ ಗುಸುಗುಸು, ಚಿಲಿಪಿಲಿ ಎಲ್ಲವೂ ನಿಂತು ಹೋಗುತ್ತಿತ್ತು. ಬಂದವನೇ ರಾಘಣ್ಣ ವಿಧವೆಯರು ಮಾಡಿಟ್ಟಿದ್ದ ಮಾಲೆಯನ್ನು ತನ್ನ ತುಳಸೀ ಮಣಿಯ ಮೇಲೆ ಧರಿಸಿಕೊಂಡು, ಭಾಗವತ ಗ್ರಂಥಕ್ಕೆ ಕೈಮುಗಿದು, ಕಣ್ಣು ಮುಚ್ಚಿ, ಗಂಭೀರಧ್ವನಿಯಲ್ಲಿ—

ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ
ಚತುರ್ಭುಜಂ
ಪ್ರಸನ್ನವದನಂ ಧ್ಯಾಯೇತ್ ಸರ್ವವಿಘ್ನೋಪ
ಶಾಂತಯೇ॥

ಎಂದಾಗ, ಎಲ್ಲರ ಮನಸ್ಸಿನಲ್ಲಿ ಮಿಂಚಿನ ಗೊಂಚಲು ಮೂಡುತ್ತಿದ್ದವು.

ನಾರಾಯಣಂ ನಮಸ್ಕೃತ್ಯ ನರಂ ಚೈವ
ನರೋತ್ತಮಂ
ದೇವೀಂ ಸರಸ್ವತೀಂ ವ್ಯಾಸಂ ತತೋ ಜಯ
ಮುದೀರಯೇತ್॥

ಎಂದು ಹೇಳಿ, "ಹಿಂದೆ ಒಂದು ಕಾಲಕ್ಕೆ..." ಎಂದು ರಾಘಣ ಪ್ರಾರಂಭಿಸಿದರೆ, ಕೇಳುವವರು ಕೇಳುತ್ತಿದ್ದರು; ಮನೆಯ ಸೊಸೆಯಂದಿರ—ಮಕ್ಕಳ ಚಿಂತೆ ಮಾತಾಡುತ್ತಿದ್ದವರು ಮಾತಾಡುತ್ತಿದ್ದರು; ಹತ್ತಿ ಸ್ವಚ್ಛ ಮಾಡಿ ಶ್ರಾವಣಮಾಸಕ್ಕೆಂದು ಹೂಬತ್ತಿ-ಮಂಗಳಾರತಿ ಬತ್ತಿಗಳನ್ನು ಮಾಡುವವರು ಸ್ವೇಸ್ವೇ ಕರ್ಮಣಿನಿರತಾಃ—ಜೀವನ ತಾರತಮ್ಯದ ಮೇರೆಗೆ ತಮ್ಮ ತಮ್ಮ ಕರ್ಮಗಳಲ್ಲಿ ನಿರತರಾಗಿರುತ್ತಿದ್ದರು. ಕೆಲವರಂತೂ ಸಂಪೂರ್ಣವಾಗಿ ಕಣ್ಣನ್ನೇ ಮುಚ್ಚಿರುತ್ತಿದ್ದರು. ಅವರು ರಾಘಣ್ಣ ಹೇಳುವ ಪುರಾಣದಲ್ಲಿ ಅಷ್ಟರ ಮಟ್ಟಿಗೆ ತಲ್ಲೀನರಾಗಿರುತ್ತಿದ್ದರೋ ಅಥವಾ ಮನೆಯಲ್ಲಿ ಆಗದ ನಿದ್ರೆಯನ್ನು ಇಲ್ಲಿ ತೆಗೆಯುತ್ತಿದ್ದರೋ ತಿಳಿಯುತ್ತಿದ್ದಿಲ್ಲ. ರಾಘಣ್ಣ ಅಹಿಂಸಾವಾದಿ. ಯಾರೂ ತನ್ನ ಪುರಾಣವನ್ನು ಕೇಳಲೇಬೇಕೆಂದು ಅವನು ನಿರ್ಬಂಧ ಪಡಿಸುತ್ತಿರಲಿಲ್ಲ. ಕೊನೆಗೆ ಮಂಗಳಾರತಿಯಾದಾಗಲೇ ಎಲ್ಲರೂ ತಮ್ಮ ತಮ್ಮ ಶಸ್ತ್ರಾಸ್ತ್ರ ಸಹಿತ ಗ್ರಂಥಕ್ಕೆ ನಮಸ್ಕಾರ ಮಾಡಿ ತಮ್ಮ ತಮ್ಮ ಮನೆಯ ಐಹಿಕ ಪ್ರಪಂಚಕ್ಕೆ ಮರಳುತ್ತಿದ್ದರು. ಈ ಶಾಲೆ ಬಿಟ್ಟ ಮೇಲೆ ರಾಘಣ್ಣ ವೇದದ ಓಲೆಗಳನ್ನು ಹಿಡಿದುಕೊಂಡು ಕುಳಿತುಕೊಳ್ಳುತ್ತಿದ್ದ... ಅಧ್ಯಯನಂ ಅಧ್ಯಾಪನಂ ಚ ಬ್ರಾಹ್ಮಣಸ್ಯ ವೃತ್ತಿಃ

ಹೀಗಿದ್ದಾಗ, ತಮ್ಮ ರಾಘಣ್ಣ ಮಾಮಲೇದಾರನಾದನೆಂದಾಗ ವಿಧವೆಯರಿಗೆ ಏಕೆ ಆನಂದವಾಗಬೇಡ!! ಆಗಿನ ಮಾಮಲೇದಾರನೆಂದರೆ, ಈಗಿನ 'ಜೂಜುಬಿ' ತಹಸೀಲದಾರನ ಹಾಗಲ್ಲ. ಈಗ ತಹಸೀಲದಾರ ರೈತರ ಮನೆ-ಮನೆಗೆ ಹೋಗಿ, "ನಿಮಗೆ ರೆಂಟೆಬೇಕೆ? ಕುಂಟೆ ಬೇಕೆ? ಗೊಬ್ಬರ ಬೇಕೆ? ಇತರರ ಹೊಲ ಬೇಕೆ? ಅವರ ಮನೆ ಬೇಕೆ? ಸಾಲ ಬೇಕೆ?" ಎಂದು ಕೇಳುವ ದೇಶಾವರಿ ಅಧಿಕಾರಿಯಲ್ಲ. ಕನ್ನಡಕ್ಕೋರ್ವನ ಪಂಪ ಇದ್ದ ಹಾಗೆ, ಆಗ ತಾಲೂಕಿಗೊಬ್ಬನೆ ಮಾಮಲೆದಾರ. ಅವನ ಅಧಿಕಾರವೇ ಅಧಿಕಾರ; ಅವನ ದರ್ಪವೇ ದರ್ಪ. ಮಾಮಲೇದಾರ ಹೊರಗಿನ ಬಿಸಿಲನ್ನು ಸಹ ಬಡಿಸಿಕೊಳ್ಳುವ ಕಾರಣವಿರಲಿಲ್ಲ. ವಿಜಯದಶಮಿಯ ದಿವಸ ಶಮೀ ಸಂಗ್ರಹ ಸಮಾರಂಭದ ಕಾಲಕ್ಕೆ, ರೆವಿನ್ಯೂ ಕಾರಕೂನರು ಮೊದಲೇ ಹೋಗಿ ಊರ ಹೊರಗೆ, ಆದರೆ ಬಹಳ ದೂರದಲ್ಲಿರದ ಒಂದು ಶಮೀವೃಕ್ಷವನ್ನು ನೋಡಿ ಬಂದಿರುತ್ತಿದ್ದರು. ಸಾಯಂಕಾಲ ೫ ಗಂಟೆಗೆ ಬನ್ನೀತರುವುದಕ್ಕಾಗಿ ಮೆರವಣಿಗೆ ಹೊರಡುತ್ತಿತ್ತು. ಬ್ಯಾಂಡು-ಬಜಂತ್ರಿ, ಅಧಿಕಾರಿ ವರ್ಗ, ವೈದಿಕರು, ಪುರಪ್ರಮುಖರು—ಈ ಚತುರ್ಬಲದೊಡನೆ ಮಾಮಲೇದಾರರ ಸವಾರಿ ಬನ್ನೀ ಮಂಟಪಕ್ಕೆ ಚಿತ್ತೈಸುತ್ತಿತ್ತು. ಸಾಯಂಕಾಲವಾಗಿದ್ದರೂ, ಒಬ್ಬ ಸಿಪಾಯಿ ಮಾಮಲೇದಾರರಿಗೆ ಬಿಸಿಲು ತಾಕಬಾರದೆಂದು ಅವರ ಮೇಲೆ ಒಂದು ಹೊಸ ಛತ್ರಿಯನ್ನು ಹಿಡಿದಿರುತ್ತಿದ್ದ. ಕಲ್ಲಿ ಮೀಸೆಯ ಒಬ್ಬ ಘೋರ ಪೋಲೀಸ್ ಹಿರಿದ ಖಡ್ಗವನ್ನು ಹಿಡಿದುಕೊಂಡು ಅವರ ಮುಂದೆ ಸಾಗಿರುತ್ತಿದ್ದ. ಈಗ ಇಂಥ ರಾಜವೈಭವ ರಾಘಣ್ಣನ ಪಾಲಿಗೆ ಬಂದಿತ್ತು. ಇದು ರಾಘಣ್ಣನ




ಸಾತ್ವಿಕತೆಯ ಫಲವೆಂದು ಕೆಲವರೂ, ವಿಧವೆಯ-ರೆಲ್ಲ ಪುರಾಣ ಶ್ರವಣ ಮಾಡಿ ಎರೆದ ಅವರ ಪುಣ್ಯದ ಫಲವೆಂದು ಕೆಲವರೂ ಹೇಳಿದರೆ, ಅಧಿಕಾರವರ್ಗದ್ದಲ್ಲದರು ಕೇವಲ ಸೀನಿಯಾರಿಟಿ ಎಂದು ಹೇಳುತ್ತಿದ್ದರು. ಏನೇ ಆಗಲಿ— ಈಗ ಮಾಮಲೇದಾರನಾದ ಮೇಲೆಯಂತೂ ಪುರಾಣ ಹೇಳುವಾಗ, ರಾಘಣ್ಣನ ಮುಖದ ಮೇಲೆ ಇನ್ನೂ ಹೆಚ್ಚಿನ ಸಾತ್ವಿಕ ಕಳೆ ಬಂದಿತ್ತು. ಕೆಲವರಂತೂ ಅವನ ತಲೆಯ ಹಿಂದೆ, ಶ್ರೀ ಕೃಷ್ಣನ ತಲೆಯ ಹಿಂದೆ ಕಂಡಂತೆ, ಒಂದು ಪ್ರಭಾ-ವಲಯವೇ ಕಾಣುತ್ತದೆಂದೂ ಹೇಳುತ್ತಿದ್ದರು.

ಶಾಂತಾಕಾರಂ ಭುಜಗಶಯನಂ
ಪದ್ಮನಾಭಂ ಸುರೇಶಂ
ವಿಶ್ವಾಧಾರಂ ಗಗನ ಸದೃಶಂ
ಮೇಘವರ್ಣಂ ಶುಭಾಂಗಂ ।
ಲಕ್ಷ್ಮೀಕಾಂತಂ ಕಮಲನಯನಂ
ಯೋಗಿಭಿರ್ಧ್ಯಾನಗಮ್ಯಂ
ವಂದೇ ವಿಷ್ಣುಂ ಭವ-ಭಯ-ಹರಂ
ಸರ್ವಲೋಕೈಕನಾಥಂ

ಎಂದು ರಾಘಣ್ಣ ಎರಡು ಬೆರಳೆತ್ತಿ ಹೇಳಿದರೆ, ಅವ ಸಾಕ್ಷಾತ್ ಶ್ರೀ- ಮದಾಚಾರ್ಯರೇ ಕಂಡಂತೆ ಕಾಣುತ್ತಿದ್ದ. ಸಂಸ್ಕೃತ ಬಾರದ ಪ್ರಾಕೃತರು ಅವರ ಪ್ರವಚನ ಶ್ರೀ ಮಟ್ಟಿಕಾ ಆಚಾರ್ಯರ ವ್ಯಾಖ್ಯಾನವೆಂದೇ ಹೇಳುತ್ತಿದ್ದರು. ಗಂಥ ಶ್ರೀ ಮದನಾದಿಮೂರ್ತಿ ಆದಿಕೇಶವ ಯಾವ ಪ್ರಾಣಿಗೂ ಅ-ಹಿತವನ್ನು ಬಯಸಿದವನಲ್ಲ; ಯಾರಿಗೂ ಮೋಸಮಾಡಿದವನಲ್ಲ; ಯಾರಿಗೂ ಅನ್ಯಾಯ ಮಾಡಿದವನಲ್ಲ...ಆದರೆ, ಸಂಭಾವಿತರಿಗೆ ಈ ಲೋಕದಲ್ಲಿ ಉಳಿಗಾಲವಿರಬೇಕಲ್ಲ-? ಸಂಭಾವಿತರಿಗೆ ಒದಗುವ ವಿಪತ್ತು ರಾಘಣ್ಣನಿಗೂ ಒದಗಿತು. ವೈದಿಕವೇ ಹೇಳಿಲ್ಲವೆ- ವಿಪದಃ ಸಂತು ನಃ ಶಶ್ವದ್ ಯತ್ರ ಸಂಕೀರ್ತ್ಯತೇ ಹರಿಃ-ಎಂದು ರಾಘಣ್ಣಗೂ ಹಾಗೆಯೇ ಆಯಿತು...

ಒಂದು ಸಲ ಏನಾಯಿತೂ ಅಂದ್ರೆ... ರಾಘಣ್ಣ ಮಾಮಲೇದಾರನಾದ ಮೇಲೆ ಎಲ್ಲರೂ ಅವನಿಂದ ಹೆಚ್ಚನ್ನು ಅಪೇಕ್ಷಿಸಿದರು. ಇದಕ್ಕೆ ಕ್ಷೌರ ನಾಪಿತರೂ ಹೊರಗಾಗಿರಲಿಲ್ಲ.

ಗಾಂಧಿಯುಗದ ಕಾಲವದು. ಆಗ ತಲೆಯ ಬೆಲೆ ಆರು ದುಡ್ಡು ಇತ್ತು. (ಇಂದಿನ ಹೊಸ ಹುಡುಗರಿಗೆ ನಯಾಪೈಸಾ ಕನ್ವರ್ಶನ್ ಒಂದು ಹೇಳಬೇಕಲ್ಲ. ಅದೆಂದರೆ ಸುಮಾರು ೮ ಪೈಸೆ) ರಾಘಣ್ಣನ ತಲೆಯ ಬೆಲೆ ರವೆನ್ಯೂ ಸೇರಿದಿನಿಂದ ಒಂದಾಣೆಯಿಂದ ಅಂದರೆ ಆರು ಪೈಸೆಯಿಂದ ಒಂಬತ್ತು ಪೈಸೆಗೆ ಏರಿತ್ತು. ಹಲ-ವರಂತೂ ಬೆಲ್ಲದ ತುಂಡು. ಒಂದು ಮುಷ್ಟಿ ಹೂಗರಿಬೇಳೆ ಹಾಕಿ ಕ್ಷೌರ ಮಾಡಿಸಿಕೊಳ್ಳುತ್ತಿದ್ದರು. ಕ್ಷೌರವೆಂದರೆ ಈಗಿನ ಹಾಗಲ್ಲ. ತಲೆ, ಮೀಸೆ, ಸ್ವಚ್ಛವಾಗಬೇಕಲ್ಲದೆ, ಎಣ್ಣೆ ಹಾಕಿ ತಲೆ ಅಂಗಾಂಗಗಳನ್ನು ಅರ್ಧತಾಸು ಮಸಾಜ್ ಮಾಡಬೇಕು. ಕಲಿಕಾಲ ಬಂದುದಕೆ ಈ ಆಚರಣೆಯಲ್ಲೂ ಅವನತಿ ಪ್ರಾರಂಭವಾಯಿತು. ರಾಘಣ್ಣ ಮಾಮಲೆದಾರನಾದ ಮೇಲೆ, ಅವನ ಮನೆಯ ಮುಂದೆ ಪಟ್ಟಾಧಾರಿಗಳಾದ ಸಿಪಾಯಿಗಳು ನಿಂತಮೇಲೆ ರಾಘಣ್ಣನ ತಲೆಯ ಬೆಲೆಯೂ ಹೆಚ್ಚಿದೆಯೆಂದು ನಾಪಿತರು ಭಾವಿಸಿದರು. ಹಾಗೆ ನೋಡಿದರೆ, ರಾಘಣ್ಣ ಕ್ಷೌರ ಮಾಡಿಸಿಕೊಳ್ಳುವುದೇ ತಿಂಗಳಿಗೊಂದು ಸಲ. ಹುಣ್ಣಿಮೆ ಅಮಾವಾಸ್ಯೆ, ಏಕಾದಶಿ, ದ್ವಾದಶಿ, ವೈಧೃತಿ, ವ್ಯತೀಪಾತ-ಈ ಎಲ್ಲ ಸರಿ ದಿನಗಳನ್ನು ದಾಟಿದ ಮೇಲೆ ರಾಘಣ್ಣನಿಗೆ ತಿಂಗಳಿಗೆ ಸಿಗುವುದು ಒಂದು ದಿನವೋ ಎರಡು ದಿನವೋ ಅಂಥದರಲ್ಲಿಯೇ. ಒಂದು ಶುಭ



ಮುಹೂರ್ತದಲ್ಲಿ ರಾಘಣ್ಣನ ತಲೆ ನಾಪಿತರ ಕೈ ಸೇರಬೇಕು. ಇಂಥ ಒಂದು ದುರ್ಧರ ಪ್ರಸಂಗ ಬಂದಾಗ, ರಾಘಣ್ಣನ ಸಿಪಾಯರು ಅವನ ಮಾಮೂಲೀ ನಾಪಿತನಾದ ಅಡಿವೆಪ್ಪನಿಗೆ ಹೇಳಿ ಕಳಿಸಿದರು. ಅಡಿವೆಪ್ಪ ಬಂದು ತನ್ನ ಚೀಲ ಮುಂದೆ ಹಾಕಿಕೊಂಡು ಕುಳಿತ. ರಾಘಣ್ಣನ ಸವಾರಿ ಚಿತ್ತೈಸಿತು. ಕ್ಷೌರ ಕರ್ಮವೇನೋ ಮುಗಿಯಿತು. ಆದರೆ ಹಣ ಕೇಳುವಾಗ, ಅಡಿವೆಪ್ಪ ರೇಟ್ ಡಬಲ್ ಮಾಡಿ ಮೂರಾಣೆ ಅಂದ. 'ಊಹೂಂ' ಅಂದರು ರಾಘಣ್ಣ. "ಇಲ್ಲ ಈಗ ಅಪ್ಪಾ ಅವರು ಸಾಹೇಬ್ರಾಗ್ಯಾರೆ, ಮೂರು ಆಣೆ ಕೊಡಲೇ ಬೇಕು" ಎಂದು ಪಟ್ಟು ಹಿಡಿದ ಅಡಿವೆಪ್ಪ. ಯಾಕೆಂದರೆ, ಒಂದು ಸಾರೆ ಅಡಿವೆಪ್ಪ ಧಾರಣೆ ಇಳಿಸಿದರೆ, ರಾಘಣ್ಣ ರಿಟೈರ್ಡ್ ಆಗುವವರೆಗೂ ಅವ ಅಷ್ಟೇ ಸ್ವೀಕರಿಸಬೇಕಾಗುತ್ತಿತ್ತು. ಮಾತು ಮಾತಿಗೆ ಹತ್ತಿತು. ಧ್ವನಿ ಏರಿದವು. ಕಲಿಕಾಲ!! ರಾಘಣ್ಣ ನಿನ್ನನ್ನು ಹೊರಗೆ ಹಾಕಿಸುತ್ತೇನೆ ಅಂದ. ಹೊರಗೆ ಹಾಕುವ ಮೊದಲೆ ದುಡ್ಡು ಇಸಕೊಂಡು ನಾನೇ ಹೊರಗೆ ಹೋಗುತ್ತೇನೆ ಎಂದ ಅಡಿವೆಪ್ಪ. ಹಗ್ಗ ಹರಿಯಲಿಲ್ಲ; ಕೋಲು ಮುರಿಯಲಿಲ್ಲ. ಕೊನೆಗೆ, ರಾಘಣ್ಣನ ಸಿಪಾಯಿ ಹುಸೇನಿಯೇ ಅಡಿವೆಪ್ಪ-ನನ್ನು ಹೊರಗೆ "ಕರೆದು ಅವರು ಆರು ದುಡ್ಡು ಕೊಡಲಿ, ನಾನು ಆರು ದುಡ್ಡು ಕೊಡುತ್ತೇನೆ. ಅವರು ಸಾಹೇಬರು" ಎಂದು ಬುದ್ಧಿವಾದ ಹೇಳಿದ. ಅಡಿವೆಪ್ಪ ತನ್ನ ಮೊಂಡು ಹಟ ಬಿಡಲೇ ಇಲ್ಲ. ಕೊನೆಗೆ, ಹುಸೇನಿ, ಸಾಹೇಬರ ಆರುದುಡ್ಡನ್ನು ಇಸಕೊಂಡು ತನ್ನ ಆರು ದುಡ್ಡನ್ನು ಕೂಡಿಸಿ, ಮೂರಾಣೆ ಮಾಡಿ "ಇಗೋ, ನೀನು ಹೇಳಿದ ಹಾಗೆ ಸಾಹೇಬರೇ ಮೂರಾಣೆ ಕೊಟ್ಟಿರು ನೋಡು, ತಗೊ" ಎಂದು ಹೇಳಿ ಅಡಿವೆಪ್ಪನನ್ನು ಸಾಗುಹಾಕಿದ...

ಆದರೆ, ಅನಿಷ್ಟ ಪ್ರಾರಂಭವಾಯಿತೆಂದರೆ, ಬಿಡಬೇಕಲ್ಲ. ಶನಿಕಾಟ ೭॥ ವರ್ಷ. ತನಗಾದ ಅನುಭವವನ್ನು ಅಡಿವೆಪ್ಪ ತನ್ನ ವೃತ್ತಿಬಾಂಧವರ ಮುಂದೆ ಹೇಳಿದ. ಅವರೂ ಕಿಡಿಕಿಡಿಯಾದರು. ರಾಘಣ್ಣನ ಮುಂದೆ ಕತ್ತಿ ಮಸೆಯುವದಿಲ್ಲ ಎಂದೇ ಪಣ ತೊಟ್ಟರು. ಗಾಂಧಿಕಾಲ ಅದು! ಎಲ್ಲ-ದಕ್ಕೂ ಸತ್ಯಾಗ್ರಹ! ಬಟ್ಟೆಗೆ ಸತ್ಯಾಗ್ರಹ! ಸಿಂದಿಗೆ ಸತ್ಯಾಗ್ರಹ! ಉಪ್ಪಿಗೆ ಸತ್ಯಾಗ್ರಹ!! ಅಂದ ಮೇಲೆ ಕ್ಷೌರ ಪ್ರಪಂಚದಲ್ಲಿ ಏಕೆ ಸತ್ಯಾ-ಗ್ರಹ ಬರಬಾರದು? ರಾಘಣ್ಣನೇನೋ ಈ ಘಟನೆಯನ್ನು ಮರೆತೇ ಬಿಟ್ಟಿದ್ದ. ಆದರೆ ಮರು ತಿಂಗಳು ಮನುಷ್ಯನಿಗೆ ವಯಸ್ಸಾಗುವ ಹಾಗೆ, ರಾಘಣ್ಣನ ಕ್ಷೌರ ಬೆಳೆದು ನಿಂತಿತು. ರಾಘಣ್ಣ ಅಡಿವೆಪ್ಪನಿಗೆ ಹೇಳಿ ಕಳಿಸಿದ. ಅಡಿವೆಪ್ಪ ತನಗೆ ಇನ್ಫ್ಲೂಂಜರ ಜ್ವರ ಬಂದಿದೆ. ಏಳಲು ಸಹ ಆಗುವದಿಲ್ಲ ಎಂದು ಹೇಳಿ ಕಳಿಸಿದ. ರಾಘಣ್ಣ ಮತ್ತೆ ಯಾರನ್ನಾದರೂ ಕರೆಯಿರಿ ಎಂದು ಹೇಳಿದ. ಅಡಿವೆಪ್ಪನ ಪ್ರಚಾರ ಅಡವಿ ಬೆಳೆದ ಹಾಗೆ ಬೆಳೆದು ಊರ ತುಂಬೆಲ್ಲ ಕಸಕಡ್ಡಿ ತುಂಬಿತ್ತು. ರಾಘಣ್ಣ ಹೇಳಿಕಳಿಸುತ್ತಲೇ, ಕೆಲವರು ತಮಗೆ ಛಳಿಜ್ವರ ಬಂದಿದೆಯೆಂದೂ, ಕೆಲವರು ಮನೆಯಲ್ಲಿ ಹೆರಿಗೆಯಾಗಿದೆಯೆಂದೂ ಏನೇನೋ ಸಬೂಬು ಹೇಳಿ ಕಳಿಸಿದರು. ಕೆಲ ತಲೆತಿರುಕ ಯುವಕರು ಅಡಿವೆಪ್ಪಗಾದ ಅವಮಾನ ಸರಿ ಹೊಂದುವವರೆಗೆ ಅವರ ಮನೆ ಕ್ಷೌರಕ್ಕೆ ಹೋಗುವುದೇ ಇಲ್ಲ ಎಂದು ಖಡಾಖಂಡಿತವಾಗಿ ಹೇಳಿ ಕಳಿಸಿಯೇ ಬಿಟ್ಟರು. ಹುಚ್ಚು ಯುವಕ-ರಿಗೆ ಅನುಭವದ ಪಕ್ವತೆ ಬೇಕಲ್ಲ. ರಾಘಣ್ಣ ಬುಸು ಬುಸು ಅಂದ; ಕಿಡಿಕಿಡಿ ಆದ. ಕೊನೆಗೆ "ಎಷ್ಟು ದಿವಸ ಹಟ ಹಿಡೀತಾರೆ ಮುಂಡೆ ಮಕ್ಕಳು. ಹೊಟ್ಟೆಯೇನು ಸಾಗಬೇಕಲ್ಲ. ಇಂದಿಲ್ಲ ನಾಳೆ ತಾವೇ ಬರ್ತಾರೆ" ಎಂದು ಸಮಾಧಾನ ಮಾಡಿಕೊಂಡ. ಆದರೆ, ಆ ಮುಂದೆ

ಮಕ್ಕಳ ಹೊಟ್ಟೆ ಸಾಗಬೇಕಾದರೆ, ರಾಘಣ್ಣನ ತಲೆಯೊಂದೇ ಅವರಿಗೆ ಬೇಕಾಗಿರಲಿಲ್ಲ. ಊರಲ್ಲಿ ಇನ್ನೂ ಐದುನೂರು ತಲೆಗಳಿದ್ದವು. ಹೀಗಾಗಿ, ನಾಪಿತರು ಒಂದು ಕಡೆಗೆ ಉಳಿದರು; ರಾಘಣ್ಣ ಒಂದು ಕಡೆಗೆ ಉಳಿದ. ಈಗಿನ ಹಾಗೆ ಆ ಕಾಲದಲ್ಲಿ ಮುಖ ಕ್ಷೌರವನ್ನು ಮನೆಯಲ್ಲಿ ಮಾಡಿಕೊಳ್ಳುವವರು ಕಡಿಮೆ. ಅದರಲ್ಲಿ ರಾಘಣ್ಣನಂಥ ಮಡಿವಂತರು ನಾಪಿತರು ಹಿಡಿಯಬೇಕಾದ ಅಸ್ತ್ರಗಳನ್ನು ತಲ್ಲೆ ಮಾಡಿ ಕೈಯಲ್ಲಿ ಹೇಗೆ ಹಿಡಿಯುತ್ತಾರೆ ? ಬೇಡ; ದಾಡಿಯಾದರೂ ಹೋಗಿದ್ದರೆ, ರಾಘಣ್ಣ ಮಾಮಲೇದಾರನಾದ ಮೇಲೆ ಕ್ರಾಪನ್ನಾದರೂ ಬಿಟ್ಟಿದ್ದಾನೆಂದು ಹೇಳಬಹುದಿತ್ತು. ಹಾಗೂ ಇರಲಿಲ್ಲ. ತಿಂಗಳು ಹೋಯಿತು; `ಎರಡು ತಿಂಗಳು ಹೋಯಿತು; ಮೂರು ತಿಂಗಳವೂ ಹೋದವು. ರಾಘಣ್ಣನ ಮುಖ ಅವ ತನ್ನ ಪುರಾಣ ಪ್ರವಚನ ಕಾಲದಲ್ಲಿ ಹೇಳುತ್ತಿದ್ದ ನೈಮಿಷಾರಣ್ಯದಂತೆಯೇ ಬೆಳೆದು ನಿಂತಿತು. ಮುಖವೆಲ್ಲ ಕಡಿಯ ಹತ್ತಿತ್ತು. ಕೊನೆಗೆ ತಾಮಸದ ಮುಂದೆ ಸಾತ್ವಿಕ ಸೋಲೊಪ್ಪಬೇಕಾಯಿತು. "ಇಲ್ಲ ಮೂರಾಣೆ ಕೊಡುತ್ತೇನೆ ಕರೆಯಿರಿ" ಎಂದು ಹುಸೇನಿಯ ಕೂಡ ರಾಘಣ್ಣ ಹೇಳಿ ಕಳಿಸಿದ. ನಾಪಿತವೃಂದ, "ಇಲ್ಲ; ಸ್ವಂತ ಸಾಹೇಬರೇ ನಮ್ಮನ್ನು ಕರೆಸಿ; ಇನ್ನು ಮುಂದಿನಿಂದ ಮೂರಾಣೆ ಕೊಡುತ್ತೇನೆ ಎಂದು ಹೇಳಿದರೇ ನಾವು ಬರುತ್ತೇವೆ" ಎಂದು ಬಂದ ರಾಯಭಾರಿಯ ಮೂಲಕವೇ ಹೇಳಿಕಳಿಸಿದರು. ಇನ್ನೇನು ಕ್ಷೌರಕ್ಕಾಗಿ ರಾಘಣ್ಣ ಪರವೂರಿಗೆ ಹೋಗಬೇಕೆ ? ಹೋದರೂ ಊರಜನರಿಗೆ ಈ ಗಾದ್ದಾಂತ ಗೊತ್ತಾಗದೆ ಹೋಗುತ್ತದೆಯೇ ಎಂದು ರಾಘಣ್ಣನೇ "ಸುಖದುಃಖೇ ಸಮೇ ಕೃತ್ವಾ" ಸರಿ, ಮುಂಡೇ ಮಕ್ಕಳು, ಆಗಲಿ ಎಂದ. ಸಂಭ್ರಮವೇ 'ಅಂದೇನು ಸಂಭ್ರಮ! ರಾಘಣ್ಣನ ಮನೆಯ ಅಂಗಳದಲ್ಲೆಲ್ಲ ಇಪ್ಪತ್ತು ಜನ ನಾಪಿತರು; ಕಟ್ಟೆಯ ಮೇಲೆ ರಾಘಣ್ಣ. ಸ್ಥಿತಪ್ರಜ್ಞನ ಹಾಗೆ ನಿಂತ ರಾಘಣ್ಣ "ಆಗಲಿ, ಇನ್ನು ಮುಂದೆ ಮೂರಾಣೆಯನ್ನೇ ಕೊಡುತ್ತೇನೆ" ಎಂದ. ನಾಪಿತರ ಮುಖ ಅರಳಿತು. ಜಯಘೋಷ ಮಾತ್ರ ಹಾಕಲಿಲ್ಲ. ಅವರು ಆ ಕಡೆ ಹೊರಳುತ್ತಲೇ, "ಹುಚ್ಚು ಮುಂಡೇ ಮಕ್ಕಳು–ಮುಂಡೇ ಮಕ್ಕಳಿಗೆ ಈಗ ಹುಚ್ಚೊಂದನ್ನು ಸೇರಿಸಿ.– ಯಾರೂ ಹೇಳುವವರಿಲ್ಲ, ಕೇಳುವವರಿಲ್ಲ, ಹಿರಿಯರಿಲ್ಲ, ಕಿರಿಯರಿಲ್ಲ ! ಕಲಿಕಾಲ" ಎನ್ನುತ್ತ ಅಡುಗೆಯ ಮನೆಯ ಒಳಗೆ ಹೋದ. ಅಡುಗೆ ಮನೆಯಿಂದ ಶ್ರೀ ಹರೀ ಎಂಬ ಉದ್ಗಾರ ಕೇಳಿಸಿತು. ಏನೇ ಆಗಲಿ; ಗಾಂಧೀಜನರು ಮತ್ತು ಬ್ರಿಟಿಶರ ನಡುವೆ ಸಂಧಾನವಾಗಿ ಮರುದಿವಸ ರಾಘಣ್ಣನ ಕೆನ್ನೆ, ಗದ್ದ, ತಲೆಗಳಿಗೆ ಟ್ರಾಕ್ಟರ್ ಹಚ್ಚಲಾಯಿತು. ಕಲಿಕಾಲ !! ಹುಚ್ಚು ಮುಂಡೇ ಮಕ್ಕಳ ಕಾಲ !! ಎಂದು ವಿಧವಾವೃಂದವೂ ಉದ್ಗಾರ ತೆಗೆಯಿತು...

History repeats itself and repeats very badly ಎಂದು ಹೇಳುತ್ತಾರೆ. (ಇತಿಹಾಸ ಪುನರಾವೃತ್ತಿಗೊಳ್ಳುತ್ತಿದೆ, ಬಹಳ ಕೆಟ್ಟ ರೀತಿಯಲ್ಲಿ ಪುನರಾವೃತ್ತಿಗೊಳ್ಳುತ್ತಿದೆ.) ರಾಘಣ್ಣ ಈ ಘಟನೆಯ ಇತಿಹಾಸದಿಂದ ಪಾಠವನ್ನು ಕಲಿತಂತೆ ಕಾಣಲಿಲ್ಲ. ತಾವೇ ಮಡಿವಂತರೆಂದು ತಿಳಿದುಕೊಂಡ ಜನ ಅನೇಕ ಸಲ ತಮ್ಮ ನಾಲಿಗೆಯನ್ನು ಹರಿಬಿಡುತ್ತಿರುವಂತೆ, ರಾಘಣ್ಣನೂ ಹರಿಬಿಡುತ್ತಿದ್ದ. ಇತಿ ಸ್ಕಂದಪುರಾಣೇ ರೇವಾ ಖಂಡೇ ಒಂದು ಅಧ್ಯಾಯ ಮುಗಿದ ಮೇಲೆ—

ಇನ್ನೊಂದು ಸಲ ಏನಾಯಿತೂ ಅಂದರೆ...

ಆಫೀಸಿನ ಆಪ್ತವರ್ತುಲದಲ್ಲಿ ಮಾತಾಡುವಾಗ ಮಾತು ಏನೋ ಹಾಗೆ ಹೀಗೇ ನಡೆದು ಪೋಲೀಸರ ವಿಷಯಕ್ಕೆ ತಿರುಗಿತು. ಪೋಲೀಸರ ಸ್ನೇಹಿತರು ಯಾರು? ಅವರು ಎಂಥ ಕೊಲೆಗಡುಕರು, ಕಳ್ಳರು, ದರೋಡೆಖೋರರ ಕೂಡ ವ್ಯವಹರಿಸಬೇಕಾಗುತ್ತದೆ. ಹೀಗಾಗಿಯೋ ಆ ಕಳ್ಳ-ಕಾಕರು ಹೇಗೆ ಪಾರಾಗಿ ಹೋಗುತ್ತಾರೆ, ಶಿಕ್ಷೆ ತಪ್ಪಿಸಿಕೊಳ್ಳುತ್ತಾರೆ, ಎಂಬ ಬಗ್ಗೆ ಮಾತು ಬಂದಾಗ, ರಾಘಣ್ಣನ ಎಡವಿ- "ಪೋಲೀಸ್ ಮುಂಡೇ ಮಕ್ಕಳೇನು, ನಾಲ್ಕು ರೂಪಾಯಿ ಲಂಚ ಸಿಕ್ಕರೆ ಏನು ಬೇಕಾದ್ದಾದರೂ ಮಾಡುತ್ತಾರೆ–ಅಂದ. ರಾಘಣ್ಣ ಮಾತು ಮುಗಿದಿತ್ತೋ ಇಲ್ಲೋ, ರವಿನ್ಯೂ ವರ್ತುಲ ಕರಗಿತು. ರಾಘಣ್ಣನ ನಾಲಿಗೆ

ಯಿಂದ ಜಾರಿದ ಮಾತಿಗೆ ಪುಕ್ಕ ಚುಂಚು ಮೂಡಿ "ಮಾಮಲೇದಾರ ಸಾಹೇಬ್ರು, ಪೋಲೀಸರೇನು ಬದ್ಮಾಷ್ ಸೂಳೇಮಕ್ಕಳು. ಹರಾಮ್ ತಿನ್ನುವವರು. ನಾಲ್ಕು ರೂಪಾಯಿ ಲಂಚಕ್ಕೆ ಬೇಕಾದ್ದು ಮಾಡುತ್ತಾರೆ. ಕೊಲೆ-ದರೋಡೆ ಸಹ ಮುಂಚ್ಚು ಹಾಕುತ್ತಾರೆ. ಇಲ್ಲಿಯೇ ಇರುವ ಗುದಮುರಗಿ ಫೌಜದಾರನನ್ನು ನೋಡಿರಿ ಎಂದರು" ಎಂದು ಎಲ್ಲ ಕಡೆಗೆ ಗುಸುಗುಸು ಆಯಿತು. ನಿಜವಾಗಿ ಹೇಳಬೇಕಂದರೆ, ರಾಫಣ್ಣನ ಬಯ್ಗಳು ಮುಂಡೇ ಮಕ್ಕಳು, ಹುಚ್ಚ-ಮುಂಡೇಮಕ್ಕಳು ದಾಟಿ, ಎಂದೂ ಪ್ರಮೋಶನ್ ಪಡೆದಿರಲೇ ಇಲ್ಲ. ಆದರೆ, ಜಗತ್ತಿನಲ್ಲಿ ಪಾಪಿಷ್ಠರಿಗೇನು ಕಡಿಮೆ? ಗುಂಪಿನಲ್ಲಿದ್ದವನೋ ಯಾವನೋ ಇದನ್ನು ಮೃದುವಾಗಿ ಗುದಮುರಗಿ ಫೌಜದಾರರ ಕಿವಿಯವರೆಗೂ ಮುಟ್ಟಿಸಿದ. ಛೆ ಹಾಗೆ ಅಂದಿರಲಾರರು ಎಂದು ಮೊದಲಿಗೇನೋ ಅಂದ ಗುದಮುರಗಿ ತಮ್ಮ ಹೆಡ್ಡ ಕಾನ್‌ಸ್ಟೇಬಲನನ್ನು ಕರೆದು "ಏ ಗಂಗ್ಯಾ, ಲೌಡಿಮಗನ್ಯಾ, (ಅದು ಗುದಮುರಿಗೆಯ ಸಂಬೋಧನಾ ವಿಭಕ್ತಿ) ಮಾಮಲೇದಾರ ರಾವ್ ಸಾಹೇಬ್ರು ಇವರು ಹೇಳಿಧಾಂಗ ಅಂದ್ರೇನು? ತಪಾಸು ಮಾಡಿಕೊಂಡು ಬಾರಲೇ ಭೋಸಡಿ ಮಗನೇ" ಎಂದು ಹೇಳಿದ. ಕರ್ತವ್ಯದಕ್ಷನಾದ ಗಂಗ್ಯಾ ಅರ್ಧತಾಸಿನಲ್ಲೇ ಬಂದು ಫೌಜದಾರ ಸಾಹೇಬರೆದುರಿಗೆ ಬಿಲ್ಲು ಸೆಟೆದು ನಿಂತಂತೆ ನಿಂತು ಥಪ್ ಥಪ್ ಎಂದು ಕಾಲು ಬಡೆದು, "ಹೌದು, ಅಂದ್ರಂತೆ ಸಾಹೇಬರೇ" ಎಂದು ವರದಿ ಒಪ್ಪಿಸಿದ, "ಎಶಾ ಇವನ ಹಾರುವ! ಅಳ್ಳಿಟ್ಟು ಇಷ್ಟು ಸೊಕ್ಕಿತೇನು?" ಅಂದವನೇ ಗುದಮುರಗಿ ತನ್ನ ಮೀಸೆ ತಿರುವಿಕೊಂಡ.


ಹಾಗೆ ನೋಡಿದರೆ, 'ಗುದಮುರಗಿ' ಎನ್ನುವದು ಈ ಫೌಜದಾರರ ಹೆಸರೇ ಅಲ್ಲ. ಈ ಫೌಜದಾರನ ಹೆಸರೇನೋ ಯಾರಿಗೂ ಸಂಪೂರ್ಣ ಗೊತ್ತಿಲ್ಲ. ಆದರೆ, ಎಲ್ಲಿಯೋ ಒಂದು ಕಡೆಗೆ ದರೋಡೆಯಾದಾಗ ಕುಸ್ತಿ ಬಲ್ಲ ಆ ಮನೆಯ ವಸ್ತಾದ ಹುಡುಗರು ದರೋಡೆಖೋರರಿಗೆ ತೆಕ್ಕೆ ಬಿದ್ದರಂತೆ. ಖಡಾಖಡಿ ಕುಸ್ತಿ ನಡೆಯಿತಂತೆ. ಅದರಲ್ಲಿ ಬರೀ ಚಡ್ಡಿ, ಬನಿಯನ್ ಧರಿಸಿದ್ದ ದರೋಡೆಖೋರರು ಕೈಗೆ ಸಿಕ್ಕಷ್ಟನ್ನು ಮಾತ್ರ ಅಪಹರಿಸಿಕೊಂಡು ಕಾಲಿಗೆ ಬುದ್ಧಿ ಹೇಳಿದರಂತೆ. ತಪಾಸಣೆಗೆಂದು ಹೋದ ಗುದಮುರಿಗೆಗೆ ಮನೆಯವರು "ದರೋಡೆಖೋರರ ಗುರುತನ್ನು ಹೇಳುವಾಗ `ದರೋಡೆಖೋರರಲ್ಲಿ ಒಬ್ಬ ಒಳ್ಳೆ ಕುಸ್ತಿ ಪೈಲ್ವಾನನಿದ್ದ. ಸರಿಯಾಗಿ ಪೇಚುಹಾಕುತ್ತಿದ್ದ. ಅವನ ತೊಡೆಯ ಮೇಲೆ ಅಜಮಾಸು ನಾಲ್ಕು ಇಂಚಿನ ದೊಡ್ಡ ಕಚ್ಚ ಇತ್ತು" ಎಂದು ಚಹರೆಪಟ್ಟಿ ಹೇಳಿದರಂತೆ. ಗುದಮುರಿಗೆಯ ಕುಶಾಗ್ರಬುದ್ಧಿ ಸಟ್ಟನೆ ಮುಂದೋಡಿತು. ಸ್ವತಃ ಕುಸ್ತಿಯನ್ನು ಚೆನ್ನಾಗಿ ಬಲ್ಲ ಗುದಮುರಗಿ— ಯಾಕಂದರೆ, ಅದೊಂದೇ ಅವನ ಸಾಧನ, ಅವನ ಅಕ್ಷರ ಜ್ಞಾನ 'ಗುದಮುರಗಿ' ಎಂದು ಸಹಿಮಾಡುವ ಮಟ್ಟಿಗ ಮಾತ್ರ ಇತ್ತು—



ಹಬ್ಬದ ದಿನ ಯಾವನಾದ್ರೂ ಒಬ್ಬ ತಲೆ
ಪಕ್ಕರಿಸಿಕೊಳ್ತಾನೇಂತ ಹೇಳ್ತಿದ್ದೆಯಲ್ಲಪ್ಪಾ,
ಇಗೋ ನೋಡು ರಾಮರಾಯರು .....

"ಸಾಕು ಸಿಕ್ರು ಬಿಡ್ರಲೆ, ಹಲಕಟ್ ಸೂಳೇಮಕ್ಕಳು ಎಂದು ಮಂತ್ರ ಪುಷ್ಪ ಉದುರಿಸಿದ...

ಊರಲ್ಲಿ ಮುಂದೆ ಒಂದು ತಿಂಗಳಲ್ಲಿಯೇ ವೀರಭದ್ರದೇವರ ಜಾತ್ರೆ. ಊರಿಗೇ ಭಾರಿ ದೊಡ್ಡ ಜಾತ್ರೆ. ಭಾರತ ಹುಣ್ಣಿವಿ ಮುಂದೆ ಬರುವ ಈ ಜಾತ್ರೆಯಲ್ಲಿ ಎಂತೆಂಥ ಪಗಡದಸ್ತ ಹೋರಿಗಳು, ಎತ್ತುಗಳು, ಕೋಳಿಗಳು, ಚಕ್ಕಡಿಗಳು ಮಾರಾಟಕ್ಕೆ ಬರುತ್ತಿದ್ದವು. ಕಬ್ಬಿನ ರಾಶಿಯಂತೂ ರಷಾಲ್ಲಿರಷಾಲ್ಲಿ ಇರುತ್ತಿತ್ತು. ಈ ಸಮಯಕ್ಕೆ ಭರ್ಜರಿ ಕುಸ್ತಿಗಳೂ ನಡೆಯುತ್ತಿದ್ದವು. ಸುತ್ತಲಿನ ತಾಲೂಕುಗಳ ಸುಪ್ರಸಿದ್ಧ ಪೈಲ್ವಾನರೆಲ್ಲ ಮೀಸೆ ಹುರಿಹಾಕಿಕೊಂಡು ಕುಸ್ತಿಗೆ ಬಂದಿರುತ್ತಿದ್ದರು. ಮೊದಮೊದಲು ಬೆಂಡು-ಬತ್ತಾಸದ ಕುಸ್ತಿ, ಚುರಮುರಿ-ಪುಠಾಣಿ ಕುಸ್ತಿ, ಮುಗಿದ ಮೇಲೆ ಜರದ ಪಾವುಡಾ, ಬೆಳ್ಳಿ ಖಡೆ ಮೊದಲಾದ ಖಡಾಖಡಿ ಕುಸ್ತಿಗಳು ನಡೆಯುತ್ತಿದ್ದವು. ಗುದಮುರಗಿ ಊರ ಒಬ್ಬ ಶ್ರೀಮಂತರ ಹೆಸರಿನಲ್ಲಿ ಈ ಸಲ ಬರೀ ಬೆಳ್ಳಿ ಖಡೆಯಲ್ಲ, ಬಂಗಾರದ ಪದಕವೂ ಅದೆ ಎಂದು ಡಂಗುರ ಹಾಕಿಸಿದ. ಕಳ್ಳ ಯಾವ ಕಂಟಿಯ ಹಿಂದೆ ಅಡಗಿಕೊಂಡು ಕುಳಿತಿದ್ದನೋ, ಅವನ ಬಾಯಲ್ಲಿ ನೀರು ಬಿಟ್ಟಿತು. ಆ ಜಾತ್ರೆಯ ಕೊನೆಯ ದಿವಸ ಆ ಕಳ್ಳನೂ ಕುಸ್ತಿಗೆ ಇಳಿದ. ಬಿನ್ ಡ್ರೆಸ್ಸಿನಲ್ಲಿದ್ದ ಗುದಮುರಗಿಯೇ (ಆ ಕಾಲದ ಯಾವ ಫೌಜದಾರರೂ ಈಗಿನ ನರಪೇತಗಳ ಹಾಗೆ ಡ್ರೆಸ್‌ಧರಿಸುತ್ತಲೇ ಇರಲಿಲ್ಲ) ಕುಸ್ತಿ ನೋಡಲು ಕುಳಿತಿದ್ದ. "ಏ ಲೌಡಿಮಗನ ಗಂಗ್ಯಾ ನೀನೂ ಇಳೀ ಅಲೆ, ಕಣಕ್ಕೆ. ನೋಡು ಯಾವ ಬೋಡ್ಡಿ ಮಗನ ತೊಡೀ ಮ್ಯಾಲ ಕಚ್ಚದ್ಯ" ಎಂದು ಸುಸಂಸ್ಕೃತ ಭಾಷೆಯಲ್ಲಿ ಅಸಿಸ್ಟಂಟ್ ಗಂಗಪ್ಪನಿಗೆ ಹೇಳಿದ. ಕಣಕ್ಕೆ ಇಳಿದ ಗಂಗಪ್ಪ ಮೂರು ಸಲ ನೆಲಕ್ಕೆ ಬಿದ್ದು ಮಣ್ಣು ಮುಕ್ಕಿದ್ದಲ್ಲದೆ, ಆ ಖಡಕ್ ಪೈಲ್ವಾನನ ಹೊಡೆತಕ್ಕೆ ಎರಡು ಹಲ್ಲನ್ನೇ ಕಳೆದುಕೊಂಡಿದ್ದ. ಈ ಹೊಡೆದಾಟದಲ್ಲಿ ಅವನಿಗೂ ಕಚ್ಚು ಕಾಣಸಲಿಲ್ಲ; ನೋಡುವ ಲಕ್ಷವೂ ಉಳಿಯಲಿಲ್ಲ. "ಕೆಲಸ ಆತು ಹೋಗಲೆ ಮಗನೆ" ಅಂದ ಗುದರಮುರಗಿ, ಇಷ್ಟು ಜಂಗೀ ಕುಸ್ತಿ ಆಡಬೇಕಂದರೆ ಇವನೇ ಆ ದರೋಡೆಖೋರನಾಗಿರಬೇಕು, ಅಥವಾ ಅವರ ತಂಡಕ್ಕೆ ಸೇರಿದವನೇ ಆಗಿರಬೇಕು ಎಂದು ಭಾವಿಸಿದ. ಗುದಮುರಗಿ ತನ್ನ ಶರ್ಟ್ ಕಳೆದು, ಒಳ ಚಡ್ಡಿಯನ್ನು ಧರಿಸಿ ಕಣಕ್ಕೆ ಇಳಿದ. ಆ ಪೈಲ್ವಾನ್ ನಾಗರ ಹಾವು ಬಂದಂತೆ ಮತ್ತೆ ಬಂದ. ಚೆನ್ನಾಗಿ ಕುಸ್ತಿ ಪೇಚು ಬಲ್ಲ 'ಗುದಮುರಗಿ' ಅವನ ಚಡ್ಡಿ ಹಿಡಿದು, ನೆಲಕ್ಕೆ ಗಟ್ಟಿಸಿದ. ಚಡ್ಡಿ ಹಿಡಿದಾಗ ಅವನ ತೊಡೆಯ ಮೇಲಿನ ಕಚ್ಚನ್ನು ಗುರುತಿಸದೆ ಬಿಡಲಿಲ್ಲ. ಗುದಮುರಿಗೆಗೆ ಪದಕ ಎಂದು ಜನ ಅಬ್ಬರಿಸಿದರು. ಇಷ್ಟೆ ನನ್ನಂಥವನ ಕೂಡ ಕುಸ್ತಿ ಆಡಿದ ಈ ಜಂಗೀ ಪೈಲ್ವಾನನಿಗೇ ಸಿಗಬೇಕು ಎಂದು ಹೇಳಿ, ಗುದಮುರಗಿ ಆ ಪೈಲ್ವಾನನಿಗೇ ಬಂಗಾರದ ಪದಕ ಕೊಡಿಸಿದ. ಅವ ಪದಕ ತೆಗೆದುಕೊಂಡ ಕೂಡಲೇ "ಭಪ್ಪರೆ ಮಗನೆ, ಏನು ಕುಸ್ತಿ ಆಡಿದೆಲೇ, ಫಸ್ಟ್‌ಕ್ಲಾಸ್ ನೋಡಲೇ ಸೂಳೆಮಗನೆ" ಎಂದವನೇ ಅವನ ಹೆಗಲ ಮೇಲೆ ಕೈಹಾಕಿದ. ಗುದಮುರಗಿ ಹೆಗಲ ಮೇಲೆ ಹಾಕಿದ ಕೈ, ಆ ಪೈಲ್ವಾನನಿಗೆ ಆಜಗರ ಹಾವೇ ಆಯಿತು. ಅವನನ್ನು ಹಾಗೆಯೇ ದಬ್ಬಿಕೊಂಡು, ಪೋಲೀಸ್ ಠಾಣೆಗೆ ಒಯ್ದು ಗುದಮುರಗಿ ಅವನನ್ನು ಜಂತಿಗೆ ಏರಿಸಿ "ಭೋಸಡಿ ಮಗನ್ಯಾ, ಆ ಸಾವಕಾರ ಮನ್ಯಾಗ ದರೋಡೆ ಹಾಕಿದವ ನೀನೇ ಹೌದಲ್ಲೊ? ಹೇಳಲೆ ಬೋಳಿಮಗನೆ" ಎಂದು ಮೊಳೆಜಡೆದ



ತನ್ನ ಚಪ್ಪಲಿಯಿಂದ ಅವನ ಕಪಾಳಕ್ಕೆ ಎರಡು ಬಿಗಿದ. ಪೈಲ್ವಾನನಿಗೆ ಹಿಂದೂ-ಮುಂದೂ ಆಯಿತು. ಹೌದು ಎಂದು ಒಪ್ಪಿಕೊಂಡು ತಾವು ಯಾರ್‍ಯಾರು ಏನೇನು ಎಂದು ಎಲ್ಲಾ ಹೇಳಿದ. ಹೀಗೆ, ಆ ದರೋಡೆಖೋರರನ ಕೂಡ ಕುಸ್ತಿ, 'ಗುದಮುರಿಗೆ' ಹಾಕಿದ್ದರಿಂದ ಈ ಫೌಜದಾರರಿಗೆ ಗುಂದಮುರಗಿ ಫೌಜದಾರ ಎಂದೇ ಹೆಸರುಬಿದ್ದಿತು. 'ಗುಂದಮುರಗಿ' ಇದ್ದಲ್ಲಿ ಕಳವು-ದರೋಡೆ-ಕೊಲೆ ಆಗುತ್ತಲೇ ಇರಲಿಲ್ಲ. ಅವನ ಹೆಸರು ಕೇಳಿದ ಕೂಡಲೇ, ಚಿಕ್ಕಮಕ್ಕಳು ಚಟ್ಟನೆ ಚೀರುತ್ತಿದ್ದರು; ಗರ್ಭಿಣಿಯರು ಗದಗದ ನಡುಗುತ್ತಿದ್ದರು.

ಇಂಥ ಗುದಮುರಿಗೆಯನ್ನು ರಾಘಣ್ಣ ಈಗ ಎದುರು ಹಾಕಿಕೊಂಡಿದ್ದ. ಮೊದಲನೆಯ ಮಹಾಯುದ್ಧದಲ್ಲಿ ನಾಜಿತರನ್ನು ಎದುರು ಹಾಕಿಕೊಂಡರೆ, ಈಗ ಎರಡನೆಯ ಮಹಾಯುದ್ಧದಲ್ಲಿ ಬಲಿಷ್ಠ ಹಿಟ್ಲರ್ ಗುದಮುರಿಗಿಯನ್ನು ಎದುರು ಹಾಕಿಕೊಂಡಿದ್ದ.

ಅದೇನು ಕರ್ಮ-ಧರ್ಮ-ಸಂಯೋಗವೋ, ಅಥವಾ ಆಕಸ್ಮಿಕವೋ— ರಾಘಣ್ಣ ಹೀಗೆ ಅಂದ ಎಂದ ಹದಿನೈದು ದಿವಸಗಳಲ್ಲಿಯೇ ರಾಘಣ್ಣನ ಮನೆಗೆ ದರೋಡೆ ಬಿತ್ತು. ರಾಘಣ್ಣನ ಮನೆಯಲ್ಲಿದ್ದ ೪೦-೫೦ ತೊಲೆ ಬಂಗಾರ, ೫೦-೬೦ ಸಾವಿರ ರೂಪಾಯಿ ಎಲ್ಲಾ ಮಾಯವಾಗಿದ್ದವು. ದರೋಡೆಖೋರರೇ ಧನ-ಕನಕಗಳನ್ನು ಒಯ್ದಿದ್ದರೂ ರಾಘಣ್ಣ ತನ್ನ ಪುರಾಣದ ರೀತಿಯಲ್ಲಿ "ಹೋದರೆ ಹೋಯಿತು: ಕೊಟ್ಟವನೂ ಆ ಶ್ರೀಹರಿಯೇ; ಒಯ್ದವನೂ ಆ ಶ್ರೀಹರಿಯೇ ಎಂದು ಆ ದರೋಡೆಖೋರರಿಗೂ ಶ್ರೀ ಹರಿಯ ಸ್ಥಾನವನ್ನು ಒದಗಿಸಿ ಕೊಟ್ಟಿದ್ದ. ಪ್ರಪಂಚದಲ್ಲಿ ಧ್ರುವರಾಯ, ಪ್ರಹ್ಲಾದ ರಾಜ, ಹರಿಶ್ಚಂದ್ರ, ನಳ-ಎಷ್ಟು ಜನ ಕಷ್ಟ ಬಿಡಲಿಲ್ಲ! ಅವರೆದುರಿಗೆ ತನ್ನ ಹಾನಿಯೇನು ಎಂದು ಪುನಃ ಸುಖದುಃಖೇ ಸಮೇಕೃತ್ವಾ ಮಾಡಿದ. ಆದರೆ, ಜನರೊಂದು ಬಿಡಬೇಕಲ್ಲ. ಬಂದವರೆಲ್ಲ "ಏನು ಸಾಹೇಬ್ರ, ನಿಮ್ಮ ಮನ್ಯಾಗ ಹೀಂಗ ಆಗಬಾರದು ನೋಡ್ರಿ. ನಾಳೆ ಉಳಿದವರಿಗೇನು ಉಳಿಗಾಲ ಅದ? ತಾಲೂಕಿನ ಅರಸರು ನೀವು. ನಿಮ್ಮಲ್ಲೇ ಹೀಂಗಾದ್ರ" ಎಂದರು. ಗುದಮುರಗಿ ಈ ಕಾಲಕ್ಕೆ 'ತಪಾಸಣೆ'ಗೆಂದು ಬೀಟ್ ಮೇಲೆ ಹೋಗಿದ್ದ. ಕೊನೆಗೆ ಯಾರೋ ಒಬ್ಬರು ಹೇಳಿದರು.

"ಸಾಹೇಬ್ರ, ಒಂದ ಕೆಲಸ ಮಾಡ್ರಿ. ಗುದಮುರಗಿ ಫೌಜದಾರ್ರು ಭಾಳ ಖಿಡಕ್ ಅದಾರು ಅವರಿಗೇ ಹೇಳಿ ಕಳಸರಿ ಸಾಹೇಬ್ರ, ಅಂದರ ಏನರೇ ತಜವೀಜು ಆಗ್ತದ"

ಮನಸ್ಸಿರದಿದ್ದರೂ, ಆಯಿತು ಎಂದು ಗುದ-ಮುರಗಿ ಫೌಜದಾರರಿಗೆ ಹುಸೇನಿ ಕೂಡ ಹೇಳಿ ಕಳಿಸಿದರು. 'ತಪಾಸಣೆ' ಯಿಂದ ಹಿಂತಿರುಗಿದ್ದ ಗುದಮುರಗಿ ರಾವಸಾಹೇಬರೆದುರಿಗೆ ಬಂದು ಸಟೆದು ನಿಂತು, ಡಬ್ ಡಬ್ ಎಂದು ಕಾಲು ಬಡೆದು, ತಮ್ಮ ಕೈ: ಮರದ ಕೈಯೋ ಏನೋ ಎಂಬಂತೆ ಸಲಾಮು ಹೊಡೆದು "ನಮಸ್ಕಾರ್ರಿ ಸಾಹೇಬ್ರ, ಏನೋ ಹೇಳಿ ಕಳಿಸಿದ್ರೆಂತ–ಹುಸೇನಿ ಬಂದಿದ್ದ."

"ಅದೇ ರ್ರೀ ಮಿ. ಗುದಮುರಗಿ ಸಾಹೇಬ್ರ..."

"ತಮ ದುರಿಗೆ ನಾವ್ಯಾರು ಸಾಹೇಬರು, ರಾವ್‌ಸಾಹೇಬ್ರ. ಹುಕುಂ ಮಾಡಿರಿ" ಎಂದ ಗುದಮುರಗಿ.

"ಅಲ್ಲಾ... ನಮ್ಮನಿಯೊಳಗ ಈಗ ಎಂಟು ದಿವಸದ ಹಿಂದ..."

"ಎಂಟು ದಿವಸದ ಹಿಂದ, ಏನಾತು ಸಾಯಿಬ್ರ?"

"ನಮ್ಮ ಮನಿಯೊಳಗ ಕಳವಾತು..."

"ಅದ್ಯಾವ್ರಿ ಬದ್ಮಾಷ್ ಸೂಳೆ ಮಗ, ತಮ್ಮ ಮನಿಯೊಳಗ ಕಳವು ಮಾಡಿದವ? ದೇವರಂಥ ಮನಶಾರು ತಾವು? ಇಂಥಾ ಪಾಪ ಮಾಡಿ ಬದಕಿ ಇರಬೇಕಂತಾನೋ ಇಲ್ಲಾಂತಾನೋ?"

"ಅದ್ಕೇರಿ ಸಾಯಿಬ್ರ, ನಿಮಗೆ ಹೇಳಿ ಕಳಿ-ಸಿದೆ..."

ಸಾಯಿಬ್ರ ಸಾಯಿಬ್ರ ಅಂದರ ನನ್ನ ಮನಸ್ಸಿಗೆ ಹ್ಯಾಂಗ್ಯಾಂಗೋ ಆನಸ್ತದ. ತಾವು ಹೇಳ್ರಿ ಸಾಯಿಬ್ರ ಏನಾತು?"

"ನೋಡ್ರಿ. ನಮ್ಮ ಮನಿಯೊಳಗಿಂದ ಸಾಧಾ-ರಣ ೪೦–೫೦ ತೊಲಿ ಭಂಗಾರ, ೫೦–೬೦ ಸಾವಿರ ರೂಪಾಯಿ ದರೋಡೆಖೋರರು ಹೊಡಕೊಂಡು ಹೋಗ್ಯಾರ. ಈಗ ಮನ್ಯಾಗ ಗುಂಜಿ ತೂಕ ಭಂಗಾರ ಸಹಿತ ಉಳಿದಿಲ್ಲ ನೋಡ್ರಿ"

"ಛೆ! ಛೆ! ಸಾಯಿಬ್ರ. ಎಂಥ ಪಾಪಿಷ್ಟ ಇದ್ದಾನು ಅವ? ಅವ ನೀವು ಯಾವುದೋ ನರಕ ಅಂತಿದ್ರಲ್ಲ ಸಾಯಿಬ್ರs ವ್ಯಾಲ ವ್ಯಾಲs— ಆ ರವ್ ರವ್ ನರಕಕ್ಕs ಹೋಗ್ತಾನ ನೋಡ್ರಿ"

ಗುದಮುರಗಿ ಶಬ್ದಗಳ ಅಜ್ಞಾನದ ಬಗ್ಗೆ ರಾಘಣ್ಣಗೆ ನಗು ಬಂದರೂ, ಈಗ ನಗುವ ಸಮಯವಲ್ಲವೆಂದು, ಹಾಗೆಯೇ ಮುಂದುವರಿದ.

"ಅದು ಮುಂದಿನ ಮಾತಾತು. ಈಗ ನೋಡ್ರಿ ಗುದಮುರಗಿ–"

"ಮುಂದ್ಯಾಕ ಸಾಯಿಬ್ರ, ಇದೇ ಜನ್ಮದಾಗ ಅವ ಎರಡೆರಡೂ ಕೈಲೆ ಉಣ್ತಾನ."

"ಅದಿರಲಿ: ಗುದಮುರಗಿ, ನೀವು ನಮಗ ಸಹಾಯ ಮಾಡಲಿಕ್ಕೇ ಬೇಕು. ಕಳ್ಳರನ ಹುಡುಕಿ ತಗೀಲಿಕ್ಕೇ ಬೇಕು. ನಮ್ಮ ಹೆಂಡರು ಮಕ್ಕಳು ಎದಿ ಒಡಕೊಂಡಾರ..."

"ನಾವೇನು ದುಶ್ಕೋಟಿ ಪೋಲೀಸರು ಸಾಹೇ-

ಮಾಡೂ ಆವರು. ನಮ್ಮಂಥ ಪಾಪಿಷ್ಟ ಮುಂಡೆ ಮಕ್ಕಳಿಂದ ಏನಾಗ್ತದ?"

ರಾಘಣ್ಣನ ಮುಖ ಕಪ್ಪಿಟ್ಟಿತು. ಗುದಮುರಗಿ ಒತ್ತುಕೊಟ್ಟು ಹೇಳುವದನ್ನು ನೋಡಿದರೆ ಅವ ತಾನು ಅಂದ ಮಾತನ್ನೇ ಬಡ್ಡಿ ಸಹಿತ ತನಗೆ ಹಿಂದಿರುಗಿಸುತ್ತಿದ್ದಾನೆ ಎಂದು ಅರ್ಥವಾಯಿತು.

"ಅದೇನರ ಇರಲಿ, ಮಿ. ಗುದಮುರಗಿ, ಹ್ಯಾಂಗರs ಮಾಡಿ, ದಯಮಾಡಿ ಹುಡುಕಿ ತಗೀರೆಲ್ಲಾ" ಅಂದ ರಾಘಣ್ಣ.

ಕಾಯಿ ಸಂಪೂರ್ಣ ಹಣ್ಣಾಗಿದೆ, ಇನ್ನು ಹೆಚ್ಚು ಹಿಚುಕಿ ಪ್ರಯೋಜನವಿಲ್ಲಾ ಎಂದು ಗುದಮುರಗಿಗೆ ತೋರಿತು.

"ಚಿಂತಿ ಬಿಡ್ರಿ ಸಾಯಿಬ್ರ. ಒಂದು ವಾರದಾಗ ಕಳ್ಳರನ್ನ ಹಿಡಿದ ತರಲಿಲ್ಲ ಅಂದರ ನಾ ಗುದ-ಮುರಗೀನೇ ಅಲ್ಲ" ಎಂದು ಗುದಮುರಗಿ ತನ್ನ ಜೊಂಡು ಮೀಸೆಗೆ ಕೈ ಹಾಕಿದ.

"Thanksರೆಪಾ, ಅಷ್ಟು ಮಾಡಿರಿ ನೋಡಿರಿ ದಯಮಾಡಿ" ಎಂದು ಉಜಳಣಿ ಮಾಡಿದ ರಾಘಣ್ಣ. ಮತ್ತೆ ಕಟ್ಟಿಗೆ ಕೈ ಸಲಾಮು ಹೊಡೆದು, ರೈಟ್‌ಅಬೌಟ್‌ಟರ್ನ್ ಮಾಡಿ ಗುಡಮುರಗಿ ಮರಳಿದ.

ಈ ಘಟನೆ ನಡೆದ ಆರನೇ ದಿವಸಕ್ಕೇ ಗುದ-ಮುರಗಿ ಇಬ್ಬರು ಕಳ್ಳರನ್ನು ಹಗ್ಗಕಟ್ಟಿ ಹಿಡ

ನಿಲ್ಲಿಸಿದ:

"ಇವರೇರಿ, ಸಾಹೇಬ್ರ ಘಟಿಂಗ್ ಸೂಳೇ ಮಕ್ಕಳು. ನಿಮ್ಮ ಮನಿ ಕನ್ನಾ ಹಾಕಿದವರು. ಇವರ ಮೇಲೆ ಚಾರ್ಜಶೀಟ್ ಹಾಕೇ ಬಿಡ್ತೇನಿ" ಅಂದ.

"ಚಾರ್ಜ ಶೀಟ್ ಪಾರ್ಜ ಶೀಟ್ ಆಮ್ಯಾಲಿ ನಡು. ಬಂಗಾರ ರೊಕ್ಕ, ಅಷ್ಟು ವಸೂಲ ಮಾಡಿಬಿಡಿರಿ" ಅಂದ ರಾಘಣ್ಣ.


ಮರುದಿವಸ ಗುದುಮುರಗಿ ಸಾಹೇಬರೆದುರಿಗೆ ಬಂದು ರೋಖ್ ೨೦ ಸಾವಿರ ರೂಪಾಯಿ, ೧೫ ತೊಲಿ ಬಂಗಾರ ಒಪ್ಪಿಸಿದ. ಅದು ೪೦ ತೊಲಿ, ೫೦ ಸಾವಿರ ಇತ್ತು ಅಂದು ಗೋಗರೆದ ರಾಘಣ್ಣ.


"ಈ ಘಟಿಂಗ ಸೂಳೇಮಕ್ಕಳು ಕಳುವಿನ ರೊಕ್ಕ ಕೈಯೊಳಗ ಸಿಕ್ಕರ ಬಿಟ್ಟಾರ್ರಿ ಸಾಹೇಬ್ರ, ಅವತ್ತೇ ಹತ್ತು ಕುರಿ ಕಡದು ಡಬರಿ ಸೆರೆ ಗಂಟಲಕ್ಕ ಸುರಿವಿಕೊಳ್ಳು ಅವರು ರಂಡ್ಯಾರಿಗೆ ಮಿಂಡ್ಯಾರಿಗೆ ತೂರಿ ಬರೂ ಅವರು."

ಪಿತ — ಸರ್ವನಾಶೇ ಸಮುತ್ಪನ್ನೇ ಅರ್ಧಂ ತ್ಯಜತಿ ಪಂಡಿತಃ ಎಂಬುದು ನೆನಪಾಯಿತು. ಪ್ರಾಚೀನವಾಣಿ ಸುಳ್ಳಿರಲಿಕ್ಕಿಲ್ಲ ಎಂದು ಖಾತ್ರಿಯಾಗಿ ನಂಬಿದ್ದ ರಾಘಣ್ಣ ೧೫ ತೊಲಿ ಬಂಗಾರ, ೨೦ ಸಾವಿರ ರೂಪಾಯಿ ಮೇಲೆ ಬಗೆ ಹರಿಸಿಕೊಂಡು, ಗುದುಮುರಿಗೆ— "ನಿಮಗ ಸ್ಪೇಶಲ್ ಥ್ಯಾಂಕ್ಸರೆಪಾ ಮಿ. ಗುದುಮುರಗಿ, ನೀವಿಲ್ಲಿದ್ದರ ಈ ಗುನ್ಹೆ ತಪಾಸೇ ಆಗ್ತಿದ್ದಿಲ್ಲ ನೋಡ್ರಿ" ಎಂದು ಸರ್ಟಿಫಿಕೇಟನ್ನು ಕೊಟ್ಟ. "ನಾವ್ಯಾವ ಗಿಡದ ತೊಪ್ಪಲರಿ, ಸಾಹೇಬ್ರ? ಎಲ್ಲಾ ಮಾಡೂ ಅವ, ಮಾಡಿಸಿಕೊಳ್ಳೋ ಅವ, ಆ ದೇವರ್ಽ ಇದ್ದಾನ ನೋಡ್ರಿ" ಎಂದು ವೈರಾಗ್ಯದ ಮಾತನ್ನು ಗುದುಮುರಗಿ ಹೇಳಿದ.

ಸುತ್ತಲೂ ನಿಂತಿದ್ದ ನಾಲ್ಕಾರು ಜನ ಗುದ-ಮುರಗಿ ವಾಕ್ಯದಲ್ಲಿ ಹೆಚ್ಚಿನ ಅರ್ಥವನ್ನೂ ಕಂಡರು. ಮಾಡುವವನೂ, ಮಾಡಿಸಿಕೊಳ್ಳುವವನೂ ಅವನೇ ಆದರೆ, ಗುದಮುರಗೀನೇ ನಾಲ್ಕಾರು ದಿವಸಗಳಲ್ಲಿ ಜನ ಏನೋ ಗುಸುಗುಸು ಮಾತಾಡಹತ್ತಿದರು. ನಲವತ್ತು ತೊಲಿ ಬಂಗಾರದಲ್ಲಿ, ಹದಿನೈದು ರಾಘಣ್ಣನಿಗೆ ಮರಳಿ ಬಂದು, ೨೦ ಗುದಮುರಿಗೆಗೆ ಹೋಗಿ, ಐದು ಕಳ್ಳರಿಗೆ ಹೋಗಿತ್ತಂತೆ, ರೋಖ ಹಣವೂ ಇದೇ ಪ್ರಮಾಣದಲ್ಲಿಯೇ ಹಂಚಿಕೆಯಾಗಿತ್ತಂತೆ. ಬಲ್ಲವರಾರು? ...

ಏನೇ ಆಗಲಿ, ಈ ಘಟನೆ ಆದ ಎರಡು ತಿಂಗಳಲ್ಲಿಯೇ ರಾಘಣ್ಣನಿಗೆ ನಮ್ಮೂರಿನಿಂದ ವರ್ಗವಾಯಿತು. ಸರಕಾರವೇ ವರ್ಗ ಮಾಡಿತೆಂದು ಕೆಲವರೂ, ಸ್ವಂತ ರಾಘಣ್ಣನೇ ಮಾಡಿಸಿಕೊಂಡನೆಂದು ಕೆಲವರೂ ತಮಗೆ ತೋಚಿದಂತೆ ಮಾತಾಡಿದರು. ಅದೇನೇ ಆದರೂ, ನಮ್ಮೂರ ವಿಧವೆಯರ ಸಭೆ ಬರಖಾಸ್ತ ಆಯಿತು; ಸಾಹಿತಿಗಳಿಗೆ ಸಾಹಿತ್ಯದ ವಸ್ತು ಮಾಯವಾಯಿತು. ವಿಧವೆಯರೂ ಸಾಹಿತಿಗಳೂ ಈ ವಿಯೋಗಕ್ಕಾಗಿ ಕೂಡಿಯೇ ಕಣ್ಣೀರು ಹಾಕಿದರು. ●









ಝಗಮಗಿಸುವ ದೀಪಾಲಂಕಾರ. ಅದಕ್ಕೆ ತಕ್ಕಂತೆ ಒಳಾಲಂಕಾರ. ಸುತ್ತಲೂ ಮನಸ್ಸಿಗೆ ಹಾಯ್! ಎನಿಸುವ ವಾತಾವರಣ. ಅಲ್ಲಿ ಮೈಸೂರ ಸಿಲ್ಕ, ಶಿಫಾನ್, ರಝರಿ, ಗಾರ್ಡನ್ ಚೈನಾ ಸಿಲ್ಕಗಳ ಸೀರೆಯನ್ನುಟ್ಟು ಕಂಗೊಳಿಸುವ ಜವ್ವನೆಯರ ಓಡಾಟ. ಮಿನಿ, ಮಿಡಿ, ಸಲ್ವಾರ್ ಕಮೀಜ, ಪ್ಯಾಂಟ ಶರ್ಟ ತೊಟ್ಟು ನವಿರಾದ ಮೇಕಪ್‌ಗಳೊಂದಿಗೆ ಘಮಘಮಿಸುವ ಸೆಂಟುಗಳ ಸುಮಧುರ ಸುವಾಸನೆಯನ್ನು ಬೀರುತ್ತ ಯುವಕರ ಜೊತೆಗೆ ಚೆಲ್ಲು ಚೆಲ್ಲಾಟದ ಮಾತುಗಳನ್ನಾಡುತ್ತ ಓಡಾಡುವ ಯುವತಿಯರು. ಫೆದರ ಕಟ್ ಬಾಯಕಟ್‌ಗಳೊಂದಿಗೆ ಬೆಲ್‌ಬಾಟ್ಸ್‌ಗಳನ್ನು ತೊಟ್ಟು ಮುಗುಳ್ನಕ್ಕು ಸ್ವಾಗತಿಸುವ ಕಿಶೋರಿಯರ ವಿನ್ಯಾಸ. ಸೀಟಾದ ಸೂಟನ್ನು ಧರಿಸಿ ತರುಣಿಯರ ಭುಜದ ಮೇಲೆ ಕೈಯಿಟ್ಟು ಮಾತನಾಡುವ ವೈಖರಿ. ಸೊಗಸಾದ ಸಂಭ್ರಮವನ್ನು ಸೂಚಿಸುವ ಇಂತಹ ಕೂಟಗಳು, ಸಮಾರಂಭಗಳು ನಗರಗಳಲ್ಲಿ ನಡೆಯುವ ನಿತ್ಯ ಕಾರ್ಯಕ್ರಮಗಳಾಗಿವೆ. ಇಲ್ಲಿ ನಾವು ಫ್ಯಾಷನ್ನಿನ ನಮೂನೆಗಳನ್ನು ಸಾಕಷ್ಟು ಕಂಡುಕೊಳ್ಳಬಹುದು.

ಮಾನವ ಇಂದು ಫ್ಯಾಷನ್ನಿನ ದಾಸನಾಗಿದ್ದಾನೆ. ದೈನಂದಿನ ಅವಶ್ಯಕತೆಗಳಲ್ಲೂ ಫ್ಯಾಷನ್ನನ್ನು ಸೇರಿಸಿಕೊಂಡಿದ್ದಾನೆಂದರೆ ತಪ್ಪಾಗಲಾರದು.

ಸಾಮಾಜಿಕ ಮನ್ನಣೆ ಪಡೆದ, ಕೆಲವು ಅವಧಿಯವರೆಗೆ ಬಳಕೆಯಲ್ಲಿರುವ, ಸುಲಭವಾಗಿ ಅನುಕರಿಸಬಹುದಾದ, ಮೇಲಿಂದ ಮೇಲೆ ಬದಲಾಗುವ ಸಂಗತಿಗಳೇ ಫ್ಯಾಷನ್ ಎಂದು ಕರೆಯಲ್ಪಡುತ್ತವೆ.

ಈ ಫ್ಯಾಷನ್ನು ಇಂದು ನಿನ್ನೆಯದಲ್ಲ. ಇದಕ್ಕೆ ತನ್ನದೇ ಇತಿಹಾಸವಿದ್ದು ಸಾಮಾಜಿಕ ಜೀವನದ ದಿಕ್‌ಸೂಚಿಯಾಗಿದೆ.

ಫ್ಯಾಷನ್ನಿನ ಹೆಸರಿನಲ್ಲಿ ಎಲ್ಲ ಸಂಸ್ಕೃತಿಗಳಲ್ಲೂ ಎಲ್ಲ ಕಾಲಕ್ಕೂ ಜನರು ತಮ್ಮ ದೇಹಗಳನ್ನು ಹಲವು ರೀತಿಯಲ್ಲಿ ತಿರುಗಿಸಿ, ಹಣ್ಣು ಮಾಡಿದ್ದಾರೆ. ಕಿವಿ ಮತ್ತು ಕೊರಳಲ್ಲಿ ಭಾರವಾದ ಕಬ್ಬಿಣದ ಆಭರಣಗಳನ್ನು ಮೂಗಿನಲ್ಲಿ ದೊಡ್ಡ ದೊಡ್ಡ ಕಬ್ಬಿಣದ ಉಂಗುರಗಳನ್ನು ಹಾಕುತ್ತಿದ್ದರು. ಆದರೆ ಅವು ಈಗ ಹಗುರವಾದ ದೇಹಕ್ಕೆ ಯಾವುದೇ ರೀತಿಯ ತೊಂದರೆ ಕೊಡದ ರೀತಿಯಲ್ಲಿವೆ. ಇಂದು ತೊಡುವ ಬೆಲ್ಟ, ಮದುವೆಯಲ್ಲಿ ತೊಡುವ ಬಂಗಾರದ ಪಟ್ಟಿಗಳು. ೧೬ ನೇ ಶತಮಾನದಲ್ಲಿ ಇಟಲಿಯಲ್ಲಿ ಆಸ್ಥಾನದ ಮಹಿಳೆಯರು ತಮ್ಮ ನಡುವನ್ನು ಸಣ್ಣದಾಗಿ ಮಾಡುವದಕ್ಕೋಸ್ಕರ ಕಠಿಣ ಘನ ಪದಾರ್ಥದ ಬಳೆಯನ್ನೋ ಅಥವಾ ಕಟ್ಟಿಗೆಯ ನಡುಪಟ್ಟಿಯನ್ನು ಧರಿಸಿ ಹದಿಮೂರು ಇಂಚುಗಳಿಗೆ ಇಳಿಸಬೇಕಾಗುತ್ತಿತ್ತು. ಈ ಪಟ್ಟಿಯು ನಡುವಿನ ಎಲ್ಲ ಚರ್ಮವನ್ನು ಒತ್ತಿ ಅದು ಕಾಣದಂತೆ ಮಾಡಿಬಿಡುತ್ತಿತ್ತು. ಟೊಂಕವನ್ನು ಬಿಗಿಯಾಗಿ ಕಟ್ಟಲು ಉಪಯೋಗಿಸುತ್ತಿದ್ದ ಕಟ್ಟಿಗೆಯ ತುಂಡುಗಳು ಮೈಗೆ ಚುಚ್ಚುವಂತೆ ಒಳಸೇರುತ್ತಿದ್ದವು. ೧೮ನೇ ಶತಮಾನದ ಮಹಿಳೆಯರು ತಮ್ಮ ಟೊಂಕದ ಎರಡೂ ಬದಿಗೆ 'ಪ್ಯಾನಿಯರ್ಸ' ಎಂಬ ಬುಟ್ಟಿಯನ್ನು ಧರಿಸುತ್ತಿದ್ದರು. ಅದು ಕೂಡ್ರಲು ಅವರಿಗೆ ಅಡ್ಡಿಯನ್ನುಂಟು ಮಾಡುತ್ತಿತ್ತು. ಎಲಿಝಬೆಥ್‌ಳ ಕಾಲದ ಸ್ತ್ರೀಯರು ಕುತ್ತಿಗೆಗಳ ಸುತ್ತಲೂ 'ರಫ್' ಎಂಬ ಪೋಷಾಕವನ್ನು ಧರಿಸುತ್ತಿದ್ದು ಅದು ಬಗ್ಗಿ ಏನಾದರೂ ತಿನ್ನಲು ಆತಂಕವನ್ನುಂಟು ಮಾಡುತ್ತಿತ್ತು.

ಹೀಗೆ ಫ್ಯಾಷನ್ನಿನ ದೃಷ್ಟಿಯಲ್ಲಿ ಇತಿಹಾಸವನ್ನು ಇಣುಕಿದಾಗ ಇಂದಿನ ಆಧುನಿಕ ಫ್ಯಾಷನ್ ಜೀವನವನ್ನು ಹೆಚ್ಚು ಸುಲಭಗೊಳಿಸಿದ್ದು ಜನರ ಮೇಲೆ ತುಂಬಾ ಪ್ರಭಾವ ಬೀರಿದೆ ಇಂದು ಫ್ಯಾಷನ್ ಸ್ಪರ್ಧೆ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟಕ್ಕೇರಿದೆ.

ಫ್ಯಾಶನ್ ಜೀವನದ ಪ್ರತಿ ರಂಗದಲ್ಲಿಯೂ ತನ್ನ ಕೈಯನ್ನು ಚಾಚಿದೆ. ವೈಚಾರಿಕ ವಿಷಯದಲ್ಲಿ ಇಂದು ವೈಜ್ಞಾನಿಕ ರೂಪದಲ್ಲಿ ಎಲ್ಲವನ್ನು ತರ್ಕದ ಒರೆಗಲ್ಲಿಗೆ ಹಚ್ಚಿ ನೋಡುವ ಫ್ಯಾಷನ್





ರೂಪದರ್ಶಿಗಳು :

ಕು. ಸೆಲೀನ ವರ್ಗೀಸ

ಕು. ಶಕೀಲಾ ಸೈಗಲ್

ಚಿತ್ರಗಳು :

ಕ್ಷತ್ರಿ ಆರ್ಟ್ ಸ್ಟುಡಿಯೋ











ಚಕೆಯುಕ್ತಿದೆ ಮತ್ತು ವೈಜ್ಞಾನಿಕ ದೃಷ್ಟಿಯ ಹೆಸರಿನಲ್ಲಿ ಧರ್ಮ, ನೀತಿ, ತತ್ವಶಾಸ್ತ್ರಗಳನ್ನು ಅಧಿಕಾರವಿಲ್ಲದೇ ಟೀಕಿಸುವದು ಫ್ಯಾಷನ್ನಾಗಿದೆ. ಮಾತನಾಡುವ ರೀತಿಯಲ್ಲಿ ಪದಗಳ ಅವಶ್ಯಕತೆ ಇರಲಿ, ಇಲ್ಲದಿರಲಿ ಇಂಗ್ಲೀಷ ಪದಗಳನ್ನು ಸೇರಿಸಿ ಮಾತನಾಡುವುದು ಫ್ಯಾಷನ್ನಾಗಿದೆ. ದುಃಶ್ಚಟಗಳನ್ನು ಬಿಡದೇ ಅನುಸರಿಸುವದು ಫ್ಯಾಷನ್ನಾಗಿದೆ. ಕಟ್ಟಡಗಳ ರಚನೆಯಲ್ಲಿ, ವಾಹನಗಳ ಮಾದರಿಯಲ್ಲಿ, ಗೃಹಾಲಂಕಾರ ವಸ್ತುಗಳಲ್ಲಿ ಅಲ್ಲದೇ ಧಾರ್ಮಿಕವಾಗಿ ಪೂಜಿಸುವ ದೇವರುಗಳು ಸಹಿತ ಒಬ್ಬೊಬ್ಬರಾಗಿ ಪ್ರಚಾರದಲ್ಲಿರುವುದು ಫ್ಯಾಷನ್ನಾಗಿರುತ್ತದೆ. ಸಾಹಿತ್ಯದಲ್ಲೂ ಮನರಂಜಿಸುವ ಕಾರ್ಯಕ್ರಮಗಳೂ ಒಂದೊಂದು ರೀತಿಯ ಫ್ಯಾಷನ್ನುಗಳಾಗಿವೆ.

ಚಲನಚಿತ್ರ ರಂಗದಲ್ಲಿ ನಟ ನಟಿಯರು ಫ್ಯಾಷನ್ನು ಹುಟ್ಟಿಸುವ ಯಂತ್ರಗಳಂತಿದ್ದಾರೆ. ಸಿನೇಮಾ ಹೆಸರಿನಲ್ಲಿ ನಟ ನಟಿಯರ ಹೆಸರಿನಲ್ಲಿ, ಸೀರೆ, ಬಳೆ, ಹೇರಕ್ಲಿಪ್, ಚಪ್ಪಲ ಸಹಿತ ಪ್ರಚಾರದಲ್ಲಿರುವದನ್ನು ಕಾಣುತ್ತೇವೆ.

ತೀವ್ರಗತಿಯಲ್ಲಿ ಮತ್ತು ಹೆಚ್ಚು ಆಕರ್ಷಿಸುವ ಫ್ಯಾಷನ್ನುಗಳೆಂದರೆ ಉಡುಪು ಮತ್ತು ಶೃಂಗಾರ ಸಾಧನಗಳು. ಆಧುನಿಕ ಫ್ಯಾಷನ್ ಯುಗದಲ್ಲಿ ವಸ್ತ್ರ ವಿನ್ಯಾಸವು ಒಂದು ಅಗಾಧ ಕಲೆಯಾಗಿಯೇ ಬೆಳೆದಿದೆ. ಅದರಂತೆ ದೇಹ ರಚನೆಗೆ ಹೊಂದು-ವಂತಹ ವಸ್ತ್ರಗಳನ್ನು ಧರಿಸಿ ತನ್ನ ದೇಹ ಸೌಂದರ್ಯ ಅಧಿಕಗೊಳಿಸುವದು ಒಂದು ಕಲೆಯಾಗಿದೆ. ಒಮ್ಮೆ ಕಾಲು, ತೊಡೆಗಳನ್ನು ಪ್ರದರ್ಶಿಸುವದು ಫ್ಯಾಷನ್ನಾದರೆ ಇನ್ನೊಮ್ಮೆ ಕುತ್ತಿಗೆ ತೋಳುಗಳನ್ನು ಪ್ರದರ್ಶಿಸುವದು ಫ್ಯಾಷನ್ನಾಗಿ ಬಿಡುತ್ತದೆ. ಒಮ್ಮೆ ನಿರಾಭರಣ ಸುಂದರಿಯರಾಗಿ ಕಂಗೊಳಿಸಿದರೆ ಇನ್ನೊಮ್ಮೆ ಗಂಗೆ ಗೌರಿಯರಂತೆ ಸಾಲಂಕೃತ ಸುಂದರಿಯರಾಗಿ ಪ್ರದರ್ಶಿಸುತ್ತಾರೆ. ಬಂಗಾರದ ಆಭರಣಗಳಿ-ದ್ದರೂ ಗಿಲೀಟಿನ ಆಭರಣಗಳನ್ನು ತೊಡುವದು ಫ್ಯಾಷನ್ನಾಗುತ್ತದೆ. ಆಗ ಆಭರಣಗಳನ್ನು ಒದಗಿಸುವ ಪುರುಷರ ಮನಸ್ಸಿಗೆ ಹಾಯ್ ಎನಿಸಿದರೂ ಬಂಗಾರದ ಆಭರಣಗಳ ಮೆರಗು ಮಹತ್ವ ಯಾವುದಕ್ಕೂ ಬರುವದಿಲ್ಲ.

ಸೀರೆ ಉಡುವದು ನಮ್ಮ ಸಂಸ್ಕೃತಿಯ ಪ್ರತೀಕ ಹೌದು. ಅದರಲ್ಲೂ ನಾವು ಆಗಾಗ ಬದಲಾವಣೆಯನ್ನು ಕಾಣುತ್ತೇವೆ. ಒಮ್ಮೆ ಸೀರೆಯ ಸೆರಗಿನಿಂದ ಮೈಯನ್ನು ಪೂರ್ತಿ ಮುಚ್ಚುವದು ಫ್ಯಾಷನ್ನಾದರೆ, ಇನ್ನೊಮ್ಮೆ ತೆಳುವಾದ ಸೆರಗನ್ನು ಎದೆಯ ಮೇಲೆ ಹರಹು-ವದು ಫ್ಯಾಷನ್ನಾಗುತ್ತದೆ. ಸೆರಗು ಒಮ್ಮೆ ಪಾದದ ತುದಿ ಮುಟ್ಟಿದರೆ ಇನ್ನೊಮ್ಮೆ ಭುಜದ ಮೇಲೇರಿರುತ್ತದೆ. ಜಂಪರಗಳ ಬಟನ್‌ಗಳು ಸುತ್ತಲೂ ಆಗಾಗ ಅಡ್ಡಾಡಿ; ಒಮ್ಮೆ ನಾಪತ್ತೆ-ವಾಗಿ ಬಿಡುತ್ತವೆ. ಜಂಪರಿನ ತೋಳುಗಳು ಏರಿ, ಇಳಿದು ಒಮ್ಮೆಲೇ ಇಲ್ಲವಾಗಿ ಬಿಡುತ್ತವೆ. ಇನ್ನೂ ಕಣ್ಣಿನಿಂದ ವರ್ಣಿಸಲಾರದಷ್ಟು ವಿನ್ಯಾಸವುಳ್ಳ ಪೋಷಾಕುಗಳಾದ, ಸ್ಕರ್ಟ, ಮಿನಿ, ಮಿಡಿ, ಸಲ್ವಾರ ಕಮೀಜ, ಜೀನ್ ಪ್ಯಾಂಟ, ಬೆಲ್ ಬಾಟಂಗಳಂತೂ ಅಗಾಧ ರೀತಿಯಲ್ಲಿ ಪ್ರಚಾರದಲ್ಲಿರುವದನ್ನು ಕಾಣುತ್ತಿರುತ್ತೇವೆ.

ಸೌಂದರ್ಯದ ಕಡೆಗೆ ಹೆಚ್ಚು ಗಮನವಿತ್ತಂತೆ ಅಲ್ಲಲ್ಲಿ ನಾಯಿಕೊಡೆಗಳಂತೆ ಹುಟ್ಟಿಕೊಂಡಿರುವ ಬ್ಯೂಟಿ ಪಾರ್ಲರ್‌ಗಳಿಗೆ ಸಾಲುಗಟ್ಟಿನಿಂತ ಯುವ್ವನೆಯರು, ಕಿಶೋರಿಯರು, ಮುದುಕಿಯರು ಒಳಹೋಗಿ ಹೊರಗೆ ಬರುವದರಲ್ಲಿ ತಮ್ಮ ರೂಪವನ್ನೇ ಬದಲಿಸಿಕೊಂಡಿರುತ್ತಾರೆ. ಗಂಡಸರು ಹೊರಗೆ ನಿಂತು ತಮ್ಮ ಹೆಂಡಂದಿರು ಮುಂದೆ ಬಂದು ನಿಂತರೂ ಗುರುತಿಸುವದು ಕಷ್ಟವಾಗುತ್ತದೆ.

ಇಂದು ಸ್ತ್ರೀಯರು ಪುರುಷ ವೇಷಧಾರಿಯರಾಗಿ ಪುರುಷನ ಸಮಾನ ಕೆಲಸಮಾಡುತ್ತಿದ್ದು. ಗಂಡುಬೀರಿ ಎನಿಸಿದರೂ ಶೌರ್ಯ ಸಾಹಸದ ಪ್ರತೀಕವಾಗಿದ್ದಾಳೆ, ಆದರೆ ಅದರಂತೆ ಗಂಡಸು ಹೆಂಗಸರಂತೆ ಸೀರೆ ಉಟ್ಟರೆ ಮಾತ್ರ ಅಪಹಾಸ್ಯಕ್ಕೆ ಗುರಿಯಾಗಬೇಕಾಗುತ್ತದೆ. ಗಂಡಸು ಗಂಡಸಿನಂತಿದ್ದರೇ ಒಳ್ಳೆಯದು. ಗಂಡಸು ಉಡುವ ಪ್ಯಾಂಟು. ಸ್ತ್ರೀಯರು ಉಡುವ ಸೀರೆ ಫ್ಯಾಷನ್ ಅಂತಾ ಅಲ್ಲ ಆದರೆ, ಪ್ಯಾಂಟಿನ ಮಾದರಿ, ಬಣ್ಣ ವಿನ್ಯಾಸ. ಸೀರೆಯ ಅಂಚು, ಬಣ್ಣ. ಇಂತಹದನ್ನು ಫ್ಯಾಷನ್ನು ನಿರ್ಧರಿಸುತ್ತದೆ.





ಗಂಡಸರೂ ಸಹಿತ ಈ ಫ್ಯಾಷನ್ನಿಗೆ ಹೊರತಾಗಿಲ್ಲ. ಮೀಸೆ ಬಿಡುವದು ಒಮ್ಮೆ ಫ್ಯಾಷನ್ನಾದರೆ, ಗಡ್ಡ ಬಿಡುವದು ಇನ್ನೊಮ್ಮೆ ಫ್ಯಾಷನ್ನಾಗುತ್ತದೆ. ತಲೆಗೂದಲಕ್ಕೂ ಡ್ಯಾನಿ ಕಟ್, ಅಮಿತಾಬ್‌ಬಚ್ಚನ್‌ಕಟ್, ನ್ಯಾರೋ, ಬೆಲ್, ಎಲಿಫಂಟ ಬಾಟಮ್ ಪ್ಯಾಂಟುಗಳು ಒಮ್ಮೊಮ್ಮೆ ಪ್ರಚಾರದಲ್ಲಿರುತ್ತವೆ. ಸೂಟ ಧರಿಸುವದು ಒಮ್ಮೆ ಫ್ಯಾಷನ್ನಾದರೆ, ಜುಬ್ಬಾ ತೊಡುವದು ಇನ್ನೊಮ್ಮೆ ಫ್ಯಾಷನ್ನಾಗುತ್ತದೆ. ಒಮ್ಮೊಮ್ಮೆ ಎಲ್ಲಿ ನೋಡಿದಲ್ಲಿ ಸಫಾರಿಧಾರಿಗಳೇ. ಆಫೀಸಿನಲ್ಲಿ ಜವಾನನಿಂದ ಹಿಡಿದು, ಕ್ಲಾರ್ಕ, ಮ್ಯಾನೇಜರ, ಡೈರೆಕ್ಟರವರೆಗೂ ಸಫಾರಿಧಾರಿಗಳೇ. ಹೊರಗಿನಿಂದ ಬಂದವರು ಜವಾನನ್ನೇ ಮ್ಯಾನೇಜರ ಎಂದು ತಿಳಿಯುವ ಪ್ರಸಂಗಗಳು ಅನೇಕ.

ಪಾಶ್ಚಾತ್ಯರ ಅನುಕರಣೆ ಫ್ಯಾಷನ್ನಾಗಿ ಬದಲುಗೊಂಡಿದೆ. ಪರದೇಶಗಳಿಗೆ ಹೋಗುವದು ಹೆಚ್ಚು ಹೆಚ್ಚಾಗುತ್ತಿದ್ದು ಫ್ಯಾಷನ್ನಿನ ಏನಿಮ ಯುವ್ರ ಭರದಿಂದ ಸಾಗಿದೆ. ಇಂದು ಪ್ಯಾರೀಸಿನಲ್ಲಿ ಹುಟ್ಟಿಕೊಂಡ ಫ್ಯಾಷನ್ ಶೀಘ್ರವಾಗಿ ಉಳಿದ ದೇಶಗಳಿಗೂ ಮುಟ್ಟಿ ತಮ್ಮ ಪ್ರಭಾವವನ್ನು ಬೀರಿರುತ್ತವೆ. ಫ್ಯಾಷನ್ನಿನ ಹುಟ್ಟು ಮೊದಲು ಶ್ರೀಮಂತರಲ್ಲಿ ಉದಯವಾಗುತ್ತದೆ. ಉದ್ದಿಮೆದಾರರು ಅದನ್ನು ನೋಡಿ ಕೆಳಗಿನ ವರ್ಗದ ಜನರಿಗೂ ಮುಟ್ಟುವಂತೆ ಅದೇ ಮಾದರಿಯನ್ನು ಕಡಿಮೆ ಬೆಲೆಯಲ್ಲಿ ಸಿಗುವಂತೆ ಹೆಚ್ಚು ಪ್ರಚಾರ ಮಾಡುತ್ತಾರೆ. ಶ್ರೀಮಂತರು ತಮ್ಮದೇ ಅನುಕರಣೆಯೆಂದು ಅಸಂತುಷ್ಟರಾಗಿ ಹೊಸ ಮಾದರಿಗಾಗಿ ಶೋಧಿಸುತ್ತಾರೆ. ಇಂಥ ಚಟುವಟಿಕೆ ಕೊನೆಯಿಲ್ಲದೆ ಸಾಗುತ್ತದೆ.

ಫ್ಯಾಷನ್ನಿಗಾಗಿ ದೊಡ್ಡ ದೊಡ್ಡ ಉದ್ದಿಮೆದಾರರು ಫ್ಯಾಷನ್ ನಕ್ಷೆಗಾರರ ಮೂಲಕ ಜನರ ಆಶೆ ಆಕಾಂಕ್ಷೆ, ಅಭಿರುಚಿಗಳನ್ನು ಅರಿತು ಉತ್ಪಾದಕರಿಗೆ ಲಾಭವನ್ನುಂಟು ಮಾಡುವಂಥ ಫ್ಯಾಷನ್ನನ್ನು ಶೋಧಿಸುತ್ತಾರೆ. ಜಂದ್ರಾ ರೋಡ್ಸ ಎಂಬ ವಿದೇಶಿವಸ್ತ್ರ ವಿನ್ಯಾಸಕಿ ಸೀರೆಯಲ್ಲಿ ಡಿಸೈನ ಮಾಡಿರುವದಲ್ಲದೇ ಗಂಡಸರ ಕುರ್ತಾ ಪೈಜಾಮುಗಳಿಗೂ ಡಿಸೈನ್ ಮಾಡುವವಳಿದ್ದಾಳೆ ಅಂದರೆ ಆಶ್ಚರ್ಯಪಡಬೇಕಾಗಿಲ್ಲ. ಇವರು ತಮ್ಮ ನಮೂನೆಗಳನ್ನು ಚಲನಚಿತ್ರದ ಮೂಲಕ ಜಾಹೀರಾತಿನ ಮೂಲಕ, ಟಿ ವಿ. ಗಳ ಮೂಲಕ ಪ್ರಚುರಗೊಳಿಸಿ ಹೆಚ್ಚು ಪ್ರಭಾವ ಶಾಲಿಗಳಾಗಿ ಮಾಡುತ್ತಾರೆ.

ಮಿಸ್ ವರ್ಲ್ಡ, ಮಿಸ್ ಇಂಡಿಯನ್, ಮಿಸ್ ಕರ್ನಾಟಕ ಇಂತಹ ಸೌಂದರ್ಯ ಸ್ಪರ್ಧೆಗಳು ಫ್ಯಾಷನ್ನಿನ ಪ್ರಚಾರ ಮಾಡುವದರ ಜೊತೆಗೆ ಉದ್ದಿಮೆದಾರರ ಉದ್ದಿಮೆಯನ್ನು ಹೆಚ್ಚಿಸಲು ಸಹಾಯ ಮಾಡುತ್ತವೆ.

ಹಿಂದಿಗಿಂತ ಇಂದು ಸ್ತ್ರೀಯರು ಫ್ಯಾಷನ್ನಿಗೆ ಹೆಚ್ಚು ಹೆಚ್ಚು ಮಾರುಹೋಗುತ್ತಿದ್ದಾರೆ. ಇಂತಹ ಪ್ರವೃತ್ತಿ ಏಕೆ ಬೆಳೆಯುತ್ತದೆ? ಎಂಬ ಪ್ರಶ್ನೆಗೆ ಮನಶ್ಶಾಸ್ತ್ರಜ್ಞರು ಹೀಗೆ ಅಭಿಪ್ರಾಯ ಪಡುತ್ತಾರೆ.

೧) ಒಂದೇ ತೆರನಾದ ಜೀವನ ಬಹುಬೇಗನೇ ಬೇಸರ ತರುತ್ತದೆ. ಅಂತೆಯೇ ಬದಲಾವಣೆಯು ಮಾನವಜೀವನದ ಮೂಲ ಸೂತ್ರ.

೨) ಮನುಷ್ಯನ ಸ್ವಭಾವ ಅನುಕರಣೀಯವಾಗಿದ್ದು ಅದು ಫ್ಯಾಷನ್ನನ್ನು ಸ್ವೀಕರಿಸುವಲ್ಲಿ ಬಹು ಬೇಗನೆ ಸಹಾಯ ಮಾಡುತ್ತದೆ.

೩) ಸಮಾಜದಲ್ಲಿ ತನ್ನ ಪ್ರತಿಷ್ಠೆ, ವ್ಯಕ್ತಿತ್ವ ಸ್ಥಾಪಿಸಲು

೪) ಅಲಂಕಾರದ ಬಯಕೆಯನ್ನು ಪೂರೈಸಿಕೊಳ್ಳಲು.

೫) ಜೀವನವನ್ನು ಹೆಚ್ಚು ಸುಖಮಯಗೊಳಿಸಲು.

೬) ವೈಯಕ್ತಿಕ ಕುಂದುಕೊರತೆಗಳನ್ನು ಮುಚ್ಚಿಕೊಳ್ಳಲು.

೭) ಸಂಸ್ಕೃತರು, ಸುಧಾರಿಸಿದವರು, ಮುಂದುವರೆದವರು ಎಂದು ತೋರಿಸಿಕೊಳ್ಳಲು

ಫ್ಯಾಷನ್ನನ್ನು ಅನುಸರಿಸುವವರು ಯಾವ ಟೀಕೆಗೂ ಮಣಿಯದೇ ತಮ್ಮದೇ ಆದ ಜಗತ್ತಿನಲ್ಲಿವಿಹರಿಸಿದರೆ, ಅನಾನುಕೂಲತೆಗೆ ಫ್ಯಾಷನ್ನನ್ನು ಅನುಸರಿಸದವರು ಒಳಗೊಳಗೆ ನೊಂದುಕೊಳ್ಳುವದು ಖಂಡಿತ. ಒಟ್ಟಿನಲ್ಲಿ ನಾವಿರುವದು ಇಂದು ಫ್ಯಾಶನ್ ಯುಗದಲ್ಲಿ. ಯಾವ ಹೊತ್ತಿಗೆ ಯಾವ ತೆರನಾದ ತೆರೆ ಬಂದು ಅಪ್ಪಳಿಸುವದೋ ಆ ತೆರೆಗೆ ಕೊಚ್ಚಿ ಹೋಗುವ ಸ್ಥಿತಿಯಲ್ಲಿ ನಾವಿದ್ದೇವೆ. ✡

ಸಾಲ ಬಿತ್ತುವ ಕಲೆ

ಓದುಗರ ಅಂಕಣ

ಇದೊಂದು ನಿದರ್ಶನ

"ಅಯ್ಯೋ, ನನ್ನ ಕರ್ಮ ನೋಡ್ರಿ......ಎಂಥಾ ಛಂದ ನನ್ನ ಸಂಸಾರ ತೂಗಿಸ್ಕೊಂಡು ಹೊಂಟಿದ್ಲು. ಏಕಾಏಕಿ ಎಲ್ಲಾನೂ ನನ್ನ ಕೊಳ್ಳಾಗ ಹಾಕಿ ನಡು ನೀರಾಗ ಕೈಬಿಟ್ಟು ಇಂದ ಶಿವನಪಾದಕ ಸೇರಿಬಿಟ್ಲು ರೀ......"

ಪರಿಚಿತನೋರ್ವ ನನ್ನ ಬಳಿ ಬಂದು ಬಹುರೂಪದಲ್ಲಿ ದುಃಖಿಸತೊಡಗಿದ.

ಸಾವು ನೋವಿನ ಸುದ್ದಿ ಕೇಳಿದಾಕ್ಷಣ ಎಂಥವರಲ್ಲೂ ದಯೆ ಅನುಕಂಪ ದುಃಖಗಳು ಹುಟ್ಟುವುದು ಸಹಜವಲ್ಲವೇ ?

ಸುದ್ದಿ ಕೇಳಿ ನನಗೂ ಬೇಜಾರಾಯಿತು. ಪರಿಚಿತನನ್ನು ಪರಿಪರಿಯಾಗಿ ಸಂತೈಸಿದೆ. ಮಕ್ಕಳ ಮುಖ ನೋಡಿ ದುಃಖ ಮರೆಯಲು ಹೇಳಿದೆ. ಅವನ ತುಂಬಿದ ಸಂಸಾರ ಕಣ್ಮುಂದೆ ಬಂದು ನನ್ನ ಕಣ್ಣಲ್ಲೂ ನೀರಾಡಿತು.

"ಎಂಥಾ...ಅಚಾನಕ... ಆಘಾತ... ರೀ...ಆಕಿ ಶವಸಂಸ್ಕಾರಕ್ಕ...ಸಹಿತ...ನನ್ನ... ಕಿಸೇದಾಗ... ರೊಕ್ಕ... ಇಲ್ಲ..."

ದುಃಖಿಸುತ್ತ ಅಪರಿಚಿತ ಹೇಳಿದಾಗ ಏನೂ ಚಿಂತೆ ಮಾಡಬಾರದೆಂದು ತಿಳಿಸಿ ನನ್ನ ಬಳಿಯ ಹಣ ಕೊಟ್ಟೆ. ಇಂತಹ ಪ್ರಸಂಗದಲ್ಲಿ ಸಂಕೋಚಪಡಬಾರದೆಂದು ಬುದ್ಧಿವಾದ ಹೇಳಿ ಕಳಿಸಿದೆ.

ಮರುದಿನವೆ ನನ್ನ ಮಿತ್ರನೋರ್ವನಿಗೂ ಈ ವಿಷಯ ಹೇಳಿದೆ. ಇಬ್ಬರೂ ಸೇರಿ ಪರಿಚಿತನ ಮನೆಯತ್ತ ಹೆಜ್ಜೆ ಹಾಕಿದೆವು. ಮಕ್ಕಳಿಗೆಂದು ದಾರಿಯಲ್ಲಿ ತಿಂಡಿ, ಹಣ್ಣು ಹಂಪಲ ಕೊಂಡೆವು.

ಅಂಗಳದಲ್ಲಿ ಆಡುತ್ತಿದ್ದ ಪರಿಚಿತನ ಮಕ್ಕಳನ್ನು ನೋಡಿ ಕಸಿವಿಸಿಯಾಯಿತು. ಪಾಪ ತಬ್ಬಲಿಯಾದವಲ್ಲ! ಎಂದು ಬೇಜಾರೆನಿಸಿತು. ಆವರಿಗೆಲ್ಲ ತಂದ ತಿಂಡಿ ಹಣ್ಣು ಹಂಚಿ ನಿಮ್ಮ ತಂದೆ ಎಲ್ಲಿದ್ದಾರೆ? ಎಂದು ಪ್ರಶ್ನಿಸಿದೆ.

"ಅಪ್ಪ ಊರಾಗ ಇಲ್ಲ ಅವ್ವ ಒಳಗಿದ್ದಾಳ ಬರ್ರೀ......"

ಮಕ್ಕಳ ಉತ್ತರದಿಂದ ನಮಗೆ ತೀವ್ರ ಆಘಾತ! ಆದರೂ ಸಾವರಿಸಿಕೊಂಡು ಒಳ ನಡೆದೆವು.

"ಬರ್ರೀ ಅಣ್ಣಾರ... ಭಾಳ ಅಪರೂಪಕ್ಕೆ ಬಂದ್ರಿ...."

ಆದರದಿಂದ ಆಮಂತ್ರಿಸಿದವರಾರು ಗೊತ್ತೆ?

ಪರಿಚಿತನ ಪತ್ನಿಯೆ.

ನಿಧಾನವಾಗಿ ನಾನು ವಿಷಯ ವಿವರಿಸಿದೆ.

"ಅಣ್ಣಾರ... ಇದೇನೂ ಹೊಸಾದಲ್ಲರಿ. ಇವ್ರ ಸಾಲದ ಶೂಲಕ್ಕ ಸಿಕ್ಕು ನಾನು ಮತ್ತು ನನ್ನ ಮಕ್ಕಳು ದಿನಾಲೂ ಸಾಯೋದು ಹುಟ್ಟೋದು ಇದ್ದದ್ದ...ಇಂಥಾವ್ರನ್ನ ಪಡಕೊಂಡು ಬಂದೀವಲ್ಲ: ಇದು ನಮ್ಮ ದುರ್ಭಾಗ್ಯ..."ಪರಿಚಿತನ ಪತ್ನಿ ದುಃಖಿಸುತ್ತಿದ್ದಳು.

ಸಾಲ ಕೇಳುವವರ ಕೀಳು ಮಟ್ಟಕ್ಕೆ ಇದೊಂದು ಉತ್ತಮ ನಿದರ್ಶನವೆಂದುಕೊಂಡೆ ನಾನು. ಮಕ್ಕಳು ಮಾತ್ರ ತಿಂಡಿ ಹಣ್ಣುಗಳಲ್ಲಿ ಸಂಭ್ರಮಪಡುತ್ತಿದ್ದವು.

ಕೊತ್ತಲ ಮಹಾದೇವಪ್ಪ
ಲಕ್ಷ್ಮೇಶ್ವರ

ತಿರುವು ಮುರುವು



ಮಾರ್ಕೆಟ್ಟಿನಲ್ಲಿ ಕಾಯಿಪಲ್ಲೆ ಕೊಂಡು ಚಿಲ್ಲರೆಯನ್ನು ಪರ್ಸಿಗೆ ಹಾಕುತ್ತಿದ್ದೆ.

"ಮಧು... ನೂರರ ಚಿಲ್ಲರೆ ಇದೆಯಾ ? ನನಗೆ ೧೦ರೂ. ಬೇಕಾಗಿದೆ. ಕಾಯಿಪಲ್ಲೆಯಾತ ಚಿಲ್ಲರೆಯಿಲ್ಲವೆನ್ನುತ್ತಿದ್ದಾನೆ." ಎನ್ನುತ್ತ ಪರಿಚಿತರೊಬ್ಬರು ಕಾಣಿಸಿಕೊಂಡರು. ನನ್ನ ಬಳಿಯಂತೂ ನೂರಕ್ಕೆ ಚಿಲ್ಲರೆಯಿರಲಿಲ್ಲ. "೧೦ರೂ. ಕೊಟ್ಟರು; ನಂತರ ಕೊಡುತ್ತೇನೆ" ಎಂದಾಗ ಮರುಮಾತಿಲ್ಲದೇ ಕೊಟ್ಟೆ.

ಕೆಲ ದಿನ ನಂತರ ದಾರಿಯಲ್ಲಿ ಸಿಕ್ಕ ಅವರನ್ನು ಮತ್ತೆ ಈ ಬಗ್ಗೆ ಕೇಳಿದಾಗ "ನಮಗೆ ಮಾನ ಮರ್ಯಾದೆ ಇಲ್ಲವೇನ್ರಿ... ಎಲ್ಲಿ ಬೇಕೊ ಅಲ್ಲಿ ಕೇಳೊದಾ ? ಏನು ಸಾವಿರ ರೂ. ಕೊಟ್ಟದ್ದೀರಾ. ಜುಜುಬಿ ಹತ್ತು ರೂಪಾಯಿಗೆ ಹೀಗಾ ಮಾಡೋದು" ಎಂದು ನನ್ನನ್ನೇ ಬಯ್ಯುತ್ತ ಠೀವಿಯಿಂದ ಹೋಗಿಬಿಡುವದೆ. ಸಾಲ ಕೊಟ್ಟವರು ನಾನೋ ಅವರೋ ಎಂಬ ಗೊಂದಲದಲ್ಲಿ ನಾನು ಬಿದ್ದೆ.

ಮಧುಕುಮಾರಿ
ರಾಯಚೂರು.

ಸಾಲ ತಂದಿತ್ತ ಸರ್ವಜ್ಞ

ನನ್ನ ಗಳಸ್ಯ-ಕಂಠಸ್ಯ ಗೆಳೆಯ ಭಾರೀ ಕೃಪಣ. ಚಿಕ್ಕಾಸನ್ನು ಕೂಡ ಯಾರಿಗೂ ಕೈಯೆತ್ತಿ ಕೊಡದವ ಅಂಥವನಲ್ಲಿ ನಾನೊಂದು ಬಾರಿ ಐದುಸಾವಿರ ರೂ. ಸಾಲ ಕೇಳಿದೆ. ಬ್ಯಾಂಕಿನಲ್ಲಿ ಅವನು ಹತ್ತುಸಾವಿರ ಠೇವಣಿ ಮಾಡಿದ್ದು ನನಗೊಬ್ಬನಿಗೆ ಮಾತ್ರ ಗೊತ್ತು. ಸಾಲಕ್ಕಾಗಿ ನಾನಾ ರೀತಿ ಪುಸಲಾಯಿಸಿದೆ. ನನ್ನ ಧ್ಯೇಯ, ವಿಚಾರ, ನಿಯತ್ತು ಎಲ್ಲವನ್ನೂ ವಿವರಿಸಿ ಮೋಡಿ ಹಾಕಲೆತ್ನಿಸಿದೆ. ಆದರೂ ಆತ ಜಪ್ಪೆನ್ನಲಿಲ್ಲ.

"ಹೋಗೊ... ಸಾಲ ಮಾಡೋ ಶೂರ ನೀನು. ತಿರುಗಿ ಮುಟ್ಟಿಸೊ ತಾಕತ್ತಾದರೂ ನಿನ್ನಲ್ಲಿದೆಯಾ?" ಎಂದ.

ನನ್ನ ಮಿತ್ರನಿಗೆ ಸಾಹಿತ್ಯದಲ್ಲಿ ಭಾರೀ ಆಸಕ್ತಿಯಾದ್ದರಿಂದ, ಆ ಬಾಣಬಿಡತೊಡಗಿದೆ. ತಟ್ಟನೆ ಆತ ಸರ್ವಜ್ಞನ ವಚನ ಹಾಡಿ ನನ್ನನ್ನು ಸಮಾಧಾನಿಸಲೆತ್ನಿಸಿದ:

ಸಾಲವನು ಕೊಂಬಾಗ ಹಾಲೋಗರವ
ಉಂಡಂತೆ
ಸಾಲಿಗರು ಬಂದೆಳೆವಾಗ
ಕಿಬ್ಬದಿಯ ಕೀಲು ಮುರಿದಂತೆ ಸರ್ವಜ್ಞ ॥

ಆದರೆ ನಾನೂ ಪ್ರಸಂಗಾವಧಾನ ಬುದ್ಧಿ ಉಪಯೋಗಿಸಿ ವಚನ ಹಾಡಿ ಬಿಟ್ಟೆ

ಎಂಟೆರಡು ಬಂಟನಾದರೂ
ಗಂಟೆನಾಲ್ಕು ಸೇವಕನಾದರೂ
ಸಾಲವೋಡಿಯು ನೆಂಟು ಕಾಂಬ ಸರ್ವಜ್ಞ ॥
ಆಶೆ ಅಧಿಕಾರಕ್ಕಿಂತ ಅಧಿಕ
ಸ್ನೇಹ ಸಮ್ಮಿಳಿತ ಸುಖ
ಕೈ ಹಿಡಿದಾಗ ಸಾಲ ಸಿಕ್ಕೀತು ಸರ್ವಜ್ಞ ॥

ಕೊನೆಗೂ ನನ್ನ ಮಾತಿನ ಕಲಾವಂತಿಕೆ ಅವನನ್ನು ಮೆಚ್ಚಿಸಿ ನನಗೆ ಸಾಲ ತಂದಿತ್ತಿತು. "ಸಾಲ ದೈವತ್ವವು ತಪ್ಪೆ ನಮಃ" ಎಂದು ನಮಿಸಿದೆ.

ಜಿ. ಎಸ್. ಶಿರೂರ
ಗುಳೇದಗುಡ್ಡ



ಸಾಲ ಎತ್ತುವುದು ಒಂದು ಕಲೆ. ಇದು ಎಲ್ಲರಿಗೂ ಸಿದ್ಧಿಸುವಂಥದಲ್ಲ. ಚಿಕ್ಕಾಸು ಬಿಡಲೊಲ್ಲದವರಿಂದ ಕೆಲವರು ನಾಜೂಕಾಗಿ ಸಾಲ ಎತ್ತಿ ಬಿಡುತ್ತಾರೆ. ಸಾಲ ಕೊಟ್ಟವ ಕೋಡಂಗಿಯಾಗುತ್ತಾನೆ. ಕರ್ಮವೀರ ದೀಪಾವಳಿ ವಿಶೇಷಾಂಕಕ್ಕೆ ಈ ಬಾರಿ ಓದುಗರು ಈ ವಿಶಿಷ್ಟ ಕಲೆಯ ಸಿಹಿ-ಕಹಿ ಪ್ರಸಂಗಗಳನ್ನು ಹಂಚಿ ಕೊಂಡಿದ್ದು, ಆಯ್ದ ಕೆಲವನ್ನು ಇಲ್ಲಿ ಪ್ರಕಟಿಸಿದ್ದೇವೆ.

ಚೀಟಿ ಅಲ್ಲ ಸಾಲ

ಅಂದು ಹತ್ತನೇ ತಾರೀಖು. ಹತ್ತು-ಮೂವತ್ತಕ್ಕೇ ಆಫೀಸಿಗೆ ಬಂದರೂ ಮನಸ್ಸು ಎಲ್ಲೋ ಇತ್ತು. ಕಾರಣ ಜೇಬಿನಲ್ಲಿ ಕಾಸಿಲ್ಲ. ಆವತ್ತಿನ ಖರ್ಚಿಗಾದರೂ ಹತ್ತು-ಇಪ್ಪತ್ತು ರೂ. ಹುಟ್ಟಿಸಬೇಕಾಗಿತ್ತು. ಈ ಆಲೋಚನೆಯಲ್ಲಿರುವಾಗಲೇ......

ಸಹೋದ್ಯೋಗಿ ಮೂರ್ತಿ ಸಹ ಅಂದು ಬೇಗನೆ ಬಂದರು.

"ಹಲೋ ಮೂರ್ತಿ"

"ಒಂದು ಇಪ್ಪತ್ತು ರೂಪಾಯಿ ಇದೆಯಾ" ಎಂದೆ

"ಸಾರಿ. ಇಲ್ಲವಲ್ಲ" ಎಂದರು.

(ಮೂರ್ತಿ ಬಹಳ ಲೆಕ್ಕಾಚಾರದ ಮನುಷ್ಯ. ಹಾಗೇ ದುಡ್ಡು ಕೊಡುವುದು ಸ್ವಲ್ಪ ಕಷ್ಟ. ಆದರೆ "ಚೀಟಿಗೆ" ಸೇರಲು ಮುಂದು.)

ತಕ್ಷಣ ಮಾತು ಬದಲಿಸಿದೆ "ತಮಾಷೆಗೆ ಕೇಳಿದೆ" ಎಂದೆ.

ಸ್ವಲ್ಪ ಹೊತ್ತು ಬಿಟ್ಟು "ಮೂರ್ತಿ, ಚೀಟಿಗೆ ಸೇರ್ತೀರಾ?" ಎಂದೆ. "ಇಪ್ಪತ್ತು ರೂ. ಚೀಟಿ. ಹತ್ತು ತಿಂಗಳು ಎರಡನೂರ ರೂ. ಲಾಟರಿ ಎತ್ತಿ ಹೆಸರು ತೆಗೆಯುವುದು?

ನಿಮ್ಮ ಹೆಸರೂ ಹಾಕಿಕೊಂಡಿದ್ದೇನೆ" ಎಂದು ಹತ್ತು ಜನರ ಪಟ್ಟಿ ತೋರಿಸಿದೆ.

"ಸರಿ ಆಗಬಹುದು. ಚೀಟಿ ಎಂದು?"

"ಈವತ್ತೇ. ಹೇಗಿದ್ದರೂ ಇಂದು ಹತ್ತನೇ ತಾರೀಖು. ಚೀಟಿ ಆರಂಭಕ್ಕೆ ಸರಿಯಾದ ದಿನ ಎಂದೆ."

"ಸಲ್ಪ ಸಮಯ ಬಿಟ್ಟು ಇಪ್ಪತ್ತು ಕೊಡ್ತೀನಿ"

"ಸರಿ ಅಂದೆ"

"ಸ್ವಲ್ಪ ಸಮಯದ ನಂತರ..."

"ಮೂರ್ತಿ ಇಪ್ಪತ್ತು ಕೊಡ್ತೀರಾ?"

"ಉಳಿದವರ ಹಣ ಬಂತೆ?"

"ಇಲ್ಲ ಅವರೆಲ್ಲಾ ಐವತ್ತು ರೂ. ಚೀಟಿ ಹಾಕ ಅಂದರು. ಆದರೆ "ರಿಸ್ಕ್" ಏಕೆ ಅಂತ ಆಗಲ್ಲಾ ಎಂದೆ. ಈಗ ಎರಡೇ ಚೀಟಿ ಮಾಡೋದು ಅಂತ ನಿರ್ಧಾರ ಮಾಡಿದ್ದೀನಿ. ಹೇಗೂ ಎರಡು ತಿಂಗಳಿಗೇ ಮುಗಿದು ಹೋಗುತೆ. ನಿಮ್ಮದು ಮತ್ತು ನಮ್ಮದು."

"ಎರಡೇ ಚೀಟೀನಾ?"

"ಹೌದು"

"ಸರಿ ನಿಮ್ಮದು ಇಪ್ಪತ್ತು ಹಾಕಿ" ಎಂದರು.

ನಾನೇ ಚೀಟಿ ಓನರ್ ಅಲ್ವೇ.?

"ನೀವು ಇಪ್ಪತ್ತು ಕೊಡಿ. ನಂದು ಮೊದಲನೇ ಚೀಟಿ."

ಮುಂದಿನ ತಿಂಗಳು ನಿಮ್ಮದು ಎರಡನೇ ಚೀಟಿ ಎಂದೆ.

ಮೂರ್ತಿ ಸರಿಯಾಗಿ ಅರ್ಥ ಆಯಿತೋ ಇಲ್ಲವೊ ಇಪ್ಪತ್ತು ರೂ. ಅಂತೂ ಕೊಟ್ಟರು. ಜತೆಗೆ ಮುಂದಿನ ಚೀಟಿ ನನ್ನದು ಎಂದು ಜ್ಞಾಪಿಸಿದರು.

ಮುಂದಿನ ತಿಂಗಳು ಎರಡನೇ ಚೀಟಿ ಅಲ್ಲ, ಇಪ್ಪತ್ತು ರೂ. ಸಾಲ ಮೂರ್ತಿಗೆ ಮುಟ್ಟಿಸಿದೆ.

ನಾರಾಯಣ
ಬೆಂಗಳೂರು

ಈಗ ಅನುಭೋಗಸ್ರಿ...

"ಸಾಲ ಸಿಗತತಿ ಅಂದ್ರ ಏನs ಮಾಡಾಕೂ ಹೇಸಾವ್ರಲ್ಲರಿ ಇಲ್ಲಿ ಜನಾ... ಗಂಟು ಮಾಡೋ ಹುಚ್ಚ ಐತ್ರೀ ಇವಕ್ಕ...... ಅದಕ್ಕs ಯಾರs ಹೆಂಗs ಬಂದು ಕೇಳಿದ್ರೂ ಒಂದು ದುಡ್ಡು ಸೈತ ಕೊಡಬ್ಯಾಡ್ರಿ. ಒಂದ ಪ್ಯಾಳೆ ಕೊಟ್ರಿ ಅಂದ್ರ ಅದು ಹೋತಂತ ತಿಳೀರಿ......"

ಗೌಡರು ಹೀಗೆ ತಮ್ಮ ಗ್ರಾಮದ ಬಗ್ಗೆ ವಿವರಣೆಯಿತ್ತು ನನ್ನನ್ನು ಎಚ್ಚರಿಸಿದರು. ಗ್ರಾಮ ಸುಧಾರಣಾ ಕಾರ್ಯಕ್ರಮದಡಿ ಆ ಗ್ರಾಮಕ್ಕೆ ಹೋಗುತ್ತಿದ್ದ ನನಗೆ ಅವರು ಎಲ್ಲ ರೀತಿಯ ನೆರವು ನೀಡುತ್ತ ಅತ್ಯಂತ ಆಪ್ತರಾಗಿದ್ದರು. ಗ್ರಾಮದಲ್ಲೇ ಆತ ಶ್ರೀಮಂತ ಹಾಗೂ ಗೌರವಾನ್ವಿತ ವ್ಯಕ್ತಿ. ಒಂದು ದಿನ ಅವರೇ ಬಂದು,

"ಸಾಹೇಬ್ರ ಅರ್ಜಂಟಾಗಿ ಮುನ್ನೂರು ರೂಪಾಯಿ ಬೇಕಾಗ್ಯಾವ. ನಾಳೆ ನಾಡದ ಕೊಡ್ತೀನಿ ಕೊಡ್ರಿ..." ಎಂದು ಅನ್ನಬೇಕೆ !

ಇಲ್ಲವೆನ್ನಲಾಗದೇ ಕೊಟ್ಟೆ. ಮುಂದೆ ಅವರು ನನಗೆಂದೂ ಸಿಗಲೇ ಇಲ್ಲ. ಅಂತೂ ಒಮ್ಮೆ ಬಸ್ ಸ್ಟ್ಯಾಂಡಿನಲ್ಲಿ ನಿಂತಿದ್ದಾಗ ಬಾರ್ ಒಂದರಿಂದ ಅವರು ಹೊರಬರುತ್ತಿದ್ದುದನ್ನು ಕಂಡೆ. ಅಡ್ಡಗಟ್ಟಿ ನಿಂತು ಹಣ ಕೇಳಿದರೆ ಅವರೆಂದಿದ್ದೇನು...

"ಸಾಹೇಬ್ರ ನಮ್ಮೂರಾಗs ಯಾರಿಗೂ ಸಾಲ ಕೊಡಬ್ಯಾಡ್ರಿ ಅಂತ ನಿಮಗs ಎಷ್ಟ ಸರ್ತಿ ಹೇಳಿದ್ರಿ. ಈಗ ಅನುಭೋಗಸ್ರಿ..."

ಕೋರಗಲ್ ವಿರುಪಾಕ್ಷಪ್ಪ
ಹಾವೇರಿ.

ಸಕ್ಸೆಸ್‌ಫುಲ್



ನನ್ನ ಕಷ್ಟಕಾಲದಲ್ಲೆಲ್ಲ ನೆರವಾದ ನನ್ನ ಆತ್ಮೀಯ ಮಿತ್ರನೋರ್ವ ಅಂದು ನೂರು ರೂ. ಕಡ ಕೇಳಿದ. ನನ್ನ ಬಳಿ ಹಣವಿರದ ಕಾರಣ ಇಲ್ಲವೆನ್ನಬೇಕಲ್ಲ ಎಂದು ಬೇಜಾರಾಗಿ ಸುಮ್ಮನೆ ಕುಳಿತಿದ್ದೆ.

ಪತ್ನಿಯನ್ನು ಕಂಡೊಡನೆ ತಟ್ಟನೆ ಒಂದು ಪ್ಲ್ಯಾನ್ ಹೊಳೆಯಿತು.

"ಛೇ... ನಮ್ಮ ಸೊಸಾಯಿಟಿಯವರಿಗೆ ಬುದ್ಧಿಯೇ ಇಲ್ಲ" ಎಂದು ಗೊಣಗಿ ಸುಮ್ಮನೇ ಕುಳಿತೆ. ಇದನ್ನು ಕೇಳಿಸಿಕೊಂಡ ನನ್ನಾಕೆ ಏನಾಯ್ತೆಂದು ಪ್ರಶ್ನಿಸಿದಾಗ

ತಿಂಗಳ ಕೊನೆಯವಾರವೆಂದು ಅವರಿಗೆ ಅರ್ಥವಾಗಬಾರದಾ! ಒಳ್ಳೆ ಕ್ವಾಲಿಟಿ ಅಕ್ಕಿ ಕೊಡ್ತಾರಂತೆ. ನನ್ನ ಬಳಿಯಂತೂ ದುಡ್ಡಿಲ್ಲ ಏನು ಮಾಡ್ಬೇಕೊ...!" ಎಂದು ಸುಮ್ಮನಾಗಿಬಿಟ್ಟೆ.

"ಅಕ್ಕಿ" ಎಂದೊಡನೆ ಕಿವಿ ನಿಮಿರಿದ ನನ್ನಾಕೆ ಎದ್ದು ಬಂದು ತನ್ನ ಬಳಿಯ ನೂರು ರೂ. ತಂದು ನನಗೆ ಸಾಲವಾಗಿ ಕೊಟ್ಟು ತಕ್ಷಣ ಅಕ್ಕಿ ತರುವಂತೆ ಅಪ್ಪಣೆ ಮಾಡಿದಳು. ಹೆಚ್ಚಿಗೆ ಕೊಟ್ಟರೂ ಬಿಡಬಾರದೆಂದಳು.

ಕೈಚೀಲ ಹಿಡಿದು ಮನೆಯಿಂದ ಹೊರಬಿದ್ದು ಮಿತ್ರನಿಗೆ ನೂರು ರೂ. ಕೊಟ್ಟೆ. ಅಕ್ಕಿ ತೀರಿದ್ದರಿಂದ ಹಣ ಕೊಟ್ಟು ಹೇಳಿ ಬಂದಿದೀನಿ ಎಂದು ಪತ್ನಿಗೆ ಸಬೂಬು ಹೇಳಿ ಎರಡೂ ಕಡೆ ಮಾನ ಕಾಯ್ದುಕೊಂಡೆ. ಪ್ಲ್ಯಾನ್ ಸಕ್ಸೆಸ್‌ಫುಲ್ ಆಗಿತ್ತು.

ಪಿ. ಎಸ್. ಅಪರಂಜಿ
ಅಂಚಿಕಾನಾಟ



ವಿಶೇಷ ರಿಯಾಯ್ತಿ

ದೀಪಾವಳಿ ಹಬ್ಬಕ್ಕಾಗಿ ಊರಿಗೆ ಹೊರಟಿದ್ದೆ. ನಿಲ್ದಾಣದ ಬಳಿ "ಹಬ್ಬದ ನಿಮಿತ್ತ ಶೇಕಡಾ ನಲವತ್ತು ವಿಶೇಷ ರಿಯಾಯ್ತಿ" ಎಂಬ ಫಲಕ ಗಮನ ಸೆಳೆಯಿತು. ಆಶೆಯೇನೋ ಬಹಳ. ಆದರೆ ಹಣಕ್ಕಾಗಿ ಯೋಚಿಸುತ್ತ ಆ ಕಡೆ ಈ ಕಡೆ ನೋಡುತ್ತಿರಲು ಮಿತ್ರ ಮುರಳಿ ಬರುತ್ತಿದ್ದುದನ್ನು ಕಂಡೆ. ನನ್ನ ಪರ್ಸನ್ನು ಜೇಬಿಗೆ ಸೇರಿಸಿದೆ. ಅವನು ನನ್ನ ಸಮೀಪಕ್ಕೆ ಬರಲು,

"ಮುರಳಿ, ನಾನು ಪೂರ್ಣ ಮುಳುಗಿ ಹೋಗಿಬಿಟ್ಟಿರುವೆ. ನೀನು ಈಗ ಸಹಾಯ ಮಾಡದಿದ್ದರೆ ಸಾವೇ ಗತಿ" ಎಂದು ರೋದಿಸ ತೊಡಗಿದೆ. ಮುರಳಿ ಗಾಬರಿಗೊಂಡು ಸಮಾಧಾನಿಸಿದಾಗ ಪರ್ಸನ್ನು ಯಾರೋ ಹೊಡೆದಿರುವರೆಂದು ತಿಳಿಸಿ ಮುನ್ನೂರು ರೂ. ಸಾಲ ಕೇಳಿದೆ. ಅವನು ಕೊಂಚ ಅನುಮಾನಿಸಿದ.

ಮುರಳಿ, ನನ್ನ-ನಿನ್ನ ಹತ್ತು ವರ್ಷದ ಸ್ನೇಹದ ಬಗ್ಗೆ ನಿನಗೆ ಸಂಶಯವಿದ್ದರೆ ಎನ್ನುತ್ತ ಬೆರಳಿನುಂಗುರ ತೆಗೆದು ಕೊಡಲು ಮುಂದಾದಾಗ ಮುರಳಿ ಸಾವರಿಸಿಕೊಂಡು ಆ ಕ್ಷಣವೇ ಹಣವಿತ್ತ.

ದೇವಾಧಿದೇವ ತಿರುಪತಿ ತಿಮ್ಮಪ್ಪನೇ ಸಾಲ ಮಾಡಿರುವಾಗ ನನ್ನಂಥವರು ಸಾಲ ಮಾಡದಿರಲು ಸಾಧ್ಯವೆ? ಎಂದುಕೊಂಡು ಅಂಗಡಿಯತ್ತ ನಡೆದೆ.

ದತ್ತಾತ್ರೇಯ ಕುಲಕರ್ಣಿ
ಶಿವಮೊಗ್ಗ



ಭಲೇ ಅದೃಷ್ಟವೇ....

ಒಮ್ಮೆ ನಾನು ಸಿಟಿಬಸ್ಸಿಗಾಗಿ ಕಾಯುತ್ತ ನಿಂತಿದ್ದೆ. ನಿಂತೂ ನಿಂತೂ ಬೇಜಾರಾಯ್ತು. ಬಸ್ಸಿನ ಪತ್ತೆಯೇ ಇಲ್ಲ. ಗಡಿಯಾರವೂ ನನ್ನ ಪರಿವೆ ಇಲ್ಲದೆ ಎಂದಿನಂತೆ ಓಡುತ್ತಿತ್ತು.

ಹಳೆಯ ಮಿತ್ರನೊಬ್ಬ ಆಗ ಮೋಟರ ಬೈಕ್ ಮೇಲೆ ಬಂದಾಗ ಓಯಸಿಸ್ ಕಂಡ ಅನುಭವ. ಕುಶಲ ಸಂಭಾಷಣೆಯ ನಂತರ "ಡ್ರಾಪ್ ಕೊಡುತ್ತೇನೆ ಕುಳಿತುಕೋ" ಅಂದ. ಭಲೇ ಅದೃಷ್ಟವೇ...... ಎಂದು ಖುಷಿಯಿಂದ ಜಿಗಿದು ಕುಳಿತೆ. ಸ್ವಲ್ಪ ದೂರ ಹೋದ ನಂತರ ಒಂದು ಪೆಟ್ರೋಲ ಪಂಪಿನ ಮುಂದೆ ನಮ್ಮ ಬೈಕ್ ನಿಂತಿತು. ಪೆಟ್ರೋಲ ತುಂಬಿಸಿದ ನಂತರ ನನ್ನ ಮಿತ್ರ ಹಣಕ್ಕಾಗಿ ಕಿಸೆ ತಡಕಾಡ ತೊಡಗಿದ- ಛೇ...... ಪರ್ಸ ಮನೆಯಲ್ಲೇ ಉಳಿಯಿತೂಂತ ಕಾಣುತ್ತೆ...... ಎಂದು ಚಡಪಡಿಸಹತ್ತಿದ. ಏನೂ ತಿಳಿದುಕೋ ಬೇಡ್ವೋ... ಎನ್ನುತ್ತ ಆತ ತಲೆ ಕೆರೆಯುತ್ತ ನಿಲ್ಲುತ್ತಿದ್ದಂತೆಯೆ ನಾನೇ ಕಿಸೆಯಿಂದ ಹಣ ತೆಗೆದುಕೊಟ್ಟೆ.

'ನಾಳೆನೇ ನಿಮ್ಮನೆಗೆ ಬಂದು ಹಣ ಕೊಡ್ತೀನಿ' ಅಂದ ಮಿತ್ರ ಇನ್ನೂ ಬಂದಿಲ್ಲ. ಸಾಲ ಪಡೆದನೋ ನನ್ನ ಕಿಸೆಗೆ ಶೂಲ ಇರಿದನೋ ಹಣ ಹೋಗಿದ್ದಂತೂ ನಿಜ.

ಗೋ ಮು ಖಟಾವಕರ
ನವಲಗುಂದ.



ಸೀರಿಯಸ್ಸಾಗಿದೆ....

ಸಾಲದ ರೂಪ ಎಂಬುದು ದೇವರೆಂದು ಎಲ್ಲರಿಗೂ ಇದ್ದುದರಲ್ಲಿಯೇ ಹೊಂದಿಕೊಂಡು ಬಾಳುವ ಪತಿ ಪತ್ನಿಯರು ನಾವು. ಒಂದು ದಿನ ಮುಂಜಾನೆ ಮಿತ್ರನೊಬ್ಬ ಓಡೋಡುತ್ತ ನಮ್ಮನೆಗೆ ಬಂದು "ನನ್ನ ಮಗನಿಗೆ ಸೀರಿಯಸ್ಸಾಗಿದೆ. ಒಂದು ದಿನದ ಮಟ್ಟಿಗೆ ಇಪ್ಪತ್ತೈದು ರೂ. ಕೊಡು" ಅಂದ. ನನ್ನ ಬಳಿಯಂತೂ ಹಣವಿರಲಿಲ್ಲ. ಸಹಾಯಕೆಯಲ್ಲಿ ಕರುಣೆ ಉಕ್ಕ ಬೇಕೆ! ಮನೆ ಮಾಲೀಕರಿಂದ ಸಾಲ ತರುವಂತೆ ಹೇಳಿದಳು.

ಸಾಲ ಮಾಡಲು ಹೆದರುವವನಾದರೂ ಪತ್ನಿಗೆ ಹೆಚ್ಚು ಬೆಲೆ ಕೊಡುವವನಾದ್ದರಿಂದ ಮನೆಯತ್ತ ನಡೆದೆ. ಆತ ನನ್ನನ್ನು ಗೌರವದಿಂದಲೇ ಸ್ವಾಗತಿಸಿದ. ಹರಟೆ ಪ್ರಾರಂಭವಾಯ್ತು. ರಾಜಕೀಯ, ಹವಾ, ತಿಂಡಿ, ಎಲ್ಲವೂ ಬಂತು. ಆದರೂ ಸಾಲ ಕೇಳಲು ನನ್ನ ಸ್ವರವೇಳುತ್ತಿಲ್ಲ. ಸಾಕಷ್ಟು ವೇಳೆ ಕಳೆಯಿತು. ಹೊರಗೆ ಕೆಲಸ ನೆಪವೂ ಮಾಡಿಕೊಂಡು ನನ್ನಾಕೆ ಎರಡು-ಮೂರು ಬಾರಿ ಅಲ್ಲಿ ಸುಳಿದಾಡಿದ್ದು ಆಯ್ತು. ಕೊನೆಗೂ ಧೈರ್ಯ ಮಾಡಿ ಇಪ್ಪತ್ತೈದು ರೂ. ಕೇಳಿದೆ. ಒಮ್ಮೆಲೆ ಬೇಜಾರು, ತಿರಸ್ಕಾರರೂಪ ತಳೆದರು ನಮ್ಮ ಮನೆ ಮಾಲೀಕರು. ಜೇಬಿನಿಂದ ಹತ್ತು ರೂ. ತೆಗೆದು ಇಷ್ಟೇ ಇದೆಯೆಂದು ಹೇಳಿ ಮುಂಜಿನ ಬಾಗಿಲಿಟ್ಟು ಒಳಹೋಗಿಬಿಟ್ಟರು.

ಅಪಮಾನದಿಂದ ಕುಗ್ಗಿ ಹೋದರೂ ಮಿತ್ರನ ಕಷ್ಟ ನೆನಪಾಗಿ ಎಲ್ಲ ನುಂಗಿದೆ.


ಸಂಜೆ ವಿಪರೀತ ತಲೆನೋವೆಂದು ನನ್ನಾಕೆಯೊಡನೆ ತಿರುಗಾಡಲು ಹೋದಾಗ ಮಾರ್ಕೆಟ್ಟಿನಲ್ಲಿ ಕಂಡದ್ದೇನು?

ಬೇನಸಾಗಿ ಇಪ್ಪತ್ತೈದು ರೂ. ಕೈಗಡ ಕೇಳಿದ ಮಿತ್ರ ಕೈ ತುಂಬ ಸಾಮಾನು ಹಿಡಿದು ಪತ್ನಿಯೊಡನೆ ಸ್ಟೋರಿನ ಅಂಗಡಿಯಿಂದ ಹೊರಬರುತ್ತಿದ್ದ. ರಂಗು ರಂಗಿನ ಬಟ್ಟೆ ಧರಿಸಿದ್ದ ಮಗು ಕೇಕೆ ಹಾಕಿ ನಗುತ್ತಿತ್ತು.

ಬೆಳಗಿನ ಘಟನೆ ನೆನಪಾಗಿ ನನಗೆ ಕೋಪ ತಿರಸ್ಕಾರ ಉಕ್ಕಿ ಬಂತು.

ವಿಜಾಪುರ
ಸಿ. ಎಂ. ಚನ್ನಬಸಯ್ಯ

ಎಂಓ ಸಹಕರಿಸಿತು



ಒಮ್ಮೆ ನಾನು ತುರ್ತಾಗಿ ಊರಿಗೆ ಹೋಗಬೇಕಿತ್ತು. ಹಣ ಇರಲಿಲ್ಲ. ನನ್ನ ಗೆಳೆಯರ ಮನೆಗಳೂ ದೂರ ಇದ್ದವು. ಹಣಕ್ಕಾಗಿ ಏನು ಮಾಡಲಿ ಎಂದು ಯೋಚಿಸಿದಾಗ ಶ್ರೀನಿವಾಸ ನೆನಪಾದ. ಅವನೋ ಜಿಪುಣ. ಆದರೂ ಅವನಿಂದ ನಾನು ಅನೇಕ ಬಾರಿ ಸಾಲ ಪಡೆದಿದ್ದು ಇನ್ನೂ ಇಪ್ಪತ್ತೈದು ರೂ. ಗಳು ಬಾಕಿ ಉಳಿದಿತ್ತು. ಈಗ ಹೇಗೆ ಅವನಿಂದ ಹಣ ಕೇಳಲಿ ಎಂದು ಆಲೋಚಿಸಿದಾಗ ಉಪಾಯ ಹೊಳೆಯಿತು. ಆಗಲೇ ಪೋಸ್ಟ ಕಟ್ಟಿತ್ತು. ಹೋಗಿ ಕಾಲೇಜ ನೋಟೀಸ್ ಬೋರ್ಡಿನ ಎಂ. ಓ. ವಿಭಾಗದಲ್ಲಿ, ಅವತ್ತಿನ ದಿನಾಂಕದ ಕೆಳಗೆ ನನ್ನ ಹೆಸರನ್ನೂ ಬರೆದೆ. ನಂತರ ಶ್ರೀನಿವಾಸನಲ್ಲಿಗೆ ಹೋಗಿ, ನನ್ನ ಎಂ. ಓ. ಬಂದಿದೆ, ಆದರೆ ಪೋಸ್ಟ ಕಟ್ಟಿದ್ದರಿಂದ ನಾಳೆ ಬಿಡಿಸಿಕೊಂಡು ನಿನ್ನ ಹಣ ಕೊಡುವೆ. ಈಗ ಊರಿಗೆ ಹೋಗಬೇಕಾದ್ದರಿಂದ ರೂ. ೨೫ ಕೊಡು ಎಂದೆ. ಅವನು ನಂಬದಿದ್ದಾಗ ಕರೆದುಕೊಂಡು ಬಂದು ನೋಟೀಸ್ ಬೋರ್ಡ ತೋರಿಸಿ ಹಣ ಪಡೆದು ಊರ ಬಸ್ಸು ಹತ್ತಿದೆ.

ಟಿ. ಎನ್. ಸವಡಿ
ಕೊಪ್ಪಳ

ಸಾಲತಜ್ಞ

ಅಂದೊಂದು ದಿನ. ಸಾಲ ಹುಟ್ಟಿಸಲು ಆಡಬಾರದ ಆಟ ಆಡಿದ ದಿನ, ಹೂಡಬಾರದ ಉಪಾಯ ಹೂಡಿದ ದಿನ. ಬೆಳಿಗ್ಗೆಯಿಂದ ಸಂಜೆವರೆಗೆ ಮಾಡಿದ ಪ್ರಯತ್ನಗಳೆಲ್ಲಾ ವಿಫಲ. ಸಾಲ ಎತ್ತುವುದರಲ್ಲಿ ನಿಪುಣನೆಂದು ಹೆಸರಾದ ವ್ಯಕ್ತಿಗೆ ಸೋಲೆ?

ಸಂಜೆ ನಂತರ ಬಿಸಿ ಕಾಫಿ ಹೀರಿದ ಮೇಲೆ ಮಿಂಚಿನಂತೆ ಹೊಸ ಆಲೋಚನೆ ಹೊಳೆದೇ ಬಿಟ್ಟಿತು.

ಬಡ್ಡಿ ರಾಮಣ್ಣ ಕಣ್ಮುಂದೆ ಬಂದ. ಬಡ್ಡಿ ವ್ಯವಹಾರದಲ್ಲಿ ಚುರುಕಾದರೂ ಒಮ್ಮೊಮ್ಮೆ ಎಡವುವುದೂ ಉಂಟು.

"ಸರಿ"

ಇವನಿಗೇ ಬಲೆ ಬೀಸುವುದು ಒಳ್ಳೆಯದು. ರಾಮಣ್ಣ ನನಗೆ ಬಡ್ಡಿಗೆ ದುಡ್ಡು ಕೊಡುವುದು ನಿಲ್ಲಿಸಿ ಬಹಳೇ ದಿನ ಆಗಿದೆ. ಅವನಿಂದ ಸಾಲ ಪಡೆಯಬೇಕಾದರೆ ಹೊಸ ಉಪಾಯವೇ ಬೇಕು.

ತಕ್ಷಣವೇ ಆಪ್ತ ಗೆಳೆಯ ಗುರು ಬಳಿ ಓಡಿದೆ. 'ಏನಯ್ಯ ಬಂದೆ?' ಎಂದ.

"ಗುರೂ"

"ಏನಯ್ಯ?"

ತಕ್ಷಣ ನನಗೆ ಎಡರುಸಾವಿರ ರೂ, ಬೇಕು. ಹೆದರಬೇಡ ಸಾಲ ಅಲ್ಲ. ನಿನಗೆ ಸಾಲ ಕೊಡುವ ಚೈತನ್ಯ ಇಲ್ಲವೆಂದು ನನಗೆ ಗೊತ್ತು.

"ಮತ್ತೆ?"

ಕೇವಲ ಒಂದೆರಡು ಗಂಟೆಯಷ್ಟು ಮಟ್ಟಿಗೆ ನನಗೆ ಎರಡುಸಾವಿರ ರೂ. ಬೇಕು ಹೇಗೂ ನಿನಗೆ ಇಂದು ಸಂಬಳ ಬಂದಿದೆ.

"ಸರಿ ಏಕೆ ?"

"ಆಮೇಲೆ ಹೇಳ್ತೀನಿ. ನಂಬಿಕೆ ಇದ್ದರೆ ಕೊಡು."

ಗುರು ಕೊಟ್ಟ ಎರಡುಸಾವಿರ ರೂ. ತೆಗೆದುಕೊಂಡು ಬಡ್ಡಿ ರಾಮಣ್ಣನ ಮನೆಗೆ ಓಡಿದೆ.

ರಾಮಣ್ಣ ಆಗ ತಾನೆ ಊಟ ಮಾಡಿ ಸೋಫಾ ಮೇಲೆ ಕುಳಿತಿದ.

"ಏನಯ್ಯಾ...... ಬಹಳ ದಿನದ ಮೇಲೆ, ಹೇಗಿದೀಯಾ? ತಾಪತ್ರಯ ಗೀಪತ್ರಯ ಎಲ್ಲ ಕಳೀತಾ" ಎಂದ, ಆದರದಿಂದ ಬರಮಾಡಿಕೊಳ್ಳುತ್ತ.

"ಈಗೇನೂ ಇಲ್ಲಪ್ಪ, ಎಲ್ಲಾ ಕಳೀತು, ಆರಾಮವಾಗಿದ್ದೀನಿ."

"ಅರೆ ಹೌದಾ? ಪರವಾಗಿಲ್ಲಯ್ಯಾ" ಎಂದು ಆಶ್ಚರ್ಯ ಪಡುತ್ತ.

"ಏನೀಕಡೇ ಸವಾರಿ?" ಅಂದ.

"ಇಲ್ಲೇ ಯಾರಿಗೋ ಬಡ್ಡೀಗೆ ದುಡ್ಡು ಕೊಟ್ಟಿದ್ದೆ. ವಾಪಸ್ ತೆಗೆದುಕೊಂಡು ಹೋಗೋಕ್ಕೆ ಬಂದಿದ್ದೆ ಎಂದು ಹೇಳಿ ಗುರೂ ಕೊಟ್ಟಿದ್ದ ಎರಡುಸಾವಿರ ರೂ. ಎಣಿಸುತ್ತಾ ಹೇಳಿದೆ" ಕಣ್ಣಂಚಿನಲ್ಲೇ ರಾಮಣ್ಣನನ್ನು ಗಮನಿಸದೇ ಇರಲಿಲ್ಲ.

"ಏನಯ್ಯಾ ನೀನು, ನೀನು,......"

"ಹೌದು ನಾನು ನಾನೇ, ನಿನ್ನಂತೆಯೇ ಬಡ್ಡಿ ವ್ಯವಹಾರ ಶುರು ಮಾಡಿದೀನಿ ಈಗ ಹಾಯಾಗಿದ್ದೀನಿ..."ಎಂದು "ರೀಲ್" ಬಿಟ್ಟೆ.

ಆ ರಾಮಣ್ಣನಿಗೆ ಆಶ್ಚರ್ಯವೋ ಆಶ್ಚರ್ಯ, ಜತೆಗೆ ಕೈಯಲ್ಲಿದ್ದ ದುಡ್ಡು ಅವನ ಅನುಮಾನ ಬಗೆಹರಿಸಿತ್ತು.

"ಬಡ್ಡಿ ವ್ಯವಹಾರ ಮಾಡೋ ಅಷ್ಟು ದುಡ್ಡು ನಿನಗೆಲ್ಲಿಂದ ಬಂತು?"

"ಊರಿಂದು ಯಾವುದೋ ಜಮೀನು ವಿವಾದ ಇತ್ತು. ಅದು ಇತ್ಯರ್ಥವಾಗಿ ಮೂವತ್ತು ಸಾವಿರ ರೂ. ಬಂತು. ಅದನ್ನೇ ಬಂಡವಾಳ ಮಾಡಿಕೊಂಡು ನಿನ್ನ ವೃತ್ತಿಯನ್ನೇ ಆರಂಭಿಸಿದ್ದೇನೆ."

"ಬಡ್ಡಿ ಹೇಗೆ" ರಾಮಣ್ಣ ಕುತೂಹಲದಿಂದ ಪ್ರಶ್ನಿಸಿದ.

ನೂರಕ್ಕೆ ತಿಂಗಳಿಗೆ ಹತ್ತು ರೂಪಾಯಿ

"ಅಯ್ಯೋ ನಾನು ಆರರಂತೆ ಕೊಡ್ತಿದೀನಲ್ಲಯ್ಯಾ."

"ನಾನು ಹತ್ತುಕ್ಕೆ ಕಡಿಮೆ ಕೊಡೋದಿಲ್ಲ" ಅಂದೆ ಎರಡುಸಾವಿರ ಜೇಬಿಗೆ ಸಹಜವಾಗೇ ರಾಮಣ್ಣನಿಗೆ ನಂಬಿಕೆ. ಜತೆಗೆ ಆಸೆ ಚಿಗುರಿತು. (ಆಸೆ ಅಲ್ಲ, ದುರಾಸೆ) ಕೇರಿಸುತ್ತಾ.

"ನಿನ್ನ ಕಡೇ ಒಳ್ಳೇ ಪಾರ್ಟಿಗಳಿದಾರಾ?"

"ಏಕೆ"

"ನನ್ನದೂ ಸ್ವಲ್ಪ ವ್ಯವಹಾರ ಮಾಡಿಸಿ ಕೊಡಯ್ಯ ಹತ್ತರ ಹಾಗೆ."

ರಾಮಣ್ಣ "ಲೈನಿಗೆ" ಬರುತ್ತಿದ್ದಾನೆಂದು ತಿಳಿಯಿತು.

"ಆಗಬಹುದು" ಒಮ್ಮೆಲೇ ಒಪ್ಪಿಕೊಂಡರೆ ಸಂದೇಹ ಬರಬಹುದೆಂದು, "ನನ್ನದೊಂದು ಷರತ್ತು" ಎಂದೆ.

"ಏನದು?" ಅಂದ ರಾಮಣ್ಣ.

"ನಿನಗೆ ಹತ್ತರ ಹಾಗೆ ಬಡ್ಡಿ ವ್ಯವಹಾರ ಮಾಡಿಸಿಕೊಟ್ಟರೆ ನನಗೆ ಎರಡು ಪರ್ಸೆಂಟ್ ಕಮಿಶನ್ ಕೊಡಬೇಕು." ಹಾಗೆ ಮಾಡಿದರೂ ನಿನಗೆ ನಷ್ಟವಿಲ್ಲ, ನಿನಗೆ ಈಗ ಬರುತ್ತಿರುವುದಕ್ಕಿಂತ ಎರಡು ಪರ್ಸೆಂಟ್ ಹೆಚ್ಚಿಗೇ ಬರುತ್ತದೆ."

"ಜತೆಗೆ ಮತ್ತೊಂದು ಷರತ್ತು. ನಮ್ಮ ಕಡೆಯವರು ಎರಡು–ಮೂರು ತಿಂಗಳಿಗೆ ಯಾರೂ ತೆಗೆದುಕೊಳ್ಳುವುದಿಲ್ಲ. ನಿನಗೂ ಹೆಚ್ಚಿಗೆ ಲಾಭವಾಗುವುದಿಲ್ಲ ಕನಿಷ್ಟ ಆರು ತಿಂಗಳ ಮಟ್ಟಿಗಾದರೂ ಬಡ್ಡಿಗೆ ಬಿಡಬೇಕು. ಮನಸ್ಸಿನಲ್ಲೇ ಭದ್ರಮಾಡಿಕೊಳ್ಳುತ್ತಾ ಹೇಳಿದೆ.

"ರಾಮಣ್ಣನಿಗೆ ಸಮ್ಮತಿಯಾಯಿತು."

"ಎಷ್ಟು ಕೊಡಲಿ?"

ಹೆಚ್ಚು ತೆಗೆದುಕೊಳ್ಳಲು ಧೈರ್ಯ ಸಾಲದೆ ಆರು ಸಾವಿರ ಎಂದೆ.

ರಾಮಣ್ಣ ಆರು ಸಾವಿರ ತಂದು ಕೊಟ್ಟ. "ನಂಬಿಕೆ ಇರಲಿ" ಎಂದು ಬೀಳ್ಕೊಟ್ಟ.

ಗುರೂಗೆ ಥ್ಯಾಂಕ್ಸ್ ಹೇಳಿ ಅವನ ಎರಡುಸಾವಿರ ವಾಪಸ್ ಕೊಟ್ಟೆ. ವಿಷಯ ತಿಳಿಸಿದಾಗ ಅವನು ಬಿದ್ದು ಬಿದ್ದು ನಕ್ಕ.

ಕೆ. ಎಸ್. ಎನ್.



ಉಳಿದದ್ದು ಇಟ್ಟುಕೋ

ಎಂದಿನಂತೆ ಅಂದೂ ಕಾಫಿಗೂ ಕಾಸಿಲ್ಲದ ಪರಿಸ್ಥಿತಿ. ಐದು, ಹತ್ತು ಕೇಳಿದರೆ ತಮಗೆ ಇಲ್ಲವೆಂದು ರಾಗ ಎಳೆಯುವವರೇ ಹೆಚ್ಚು.

ಕಾಫಿ ಹೀರದಿದ್ದ ರೂ ತಲೆ ಚುರುಕಾಯಿತು. ಮನಸ್ಸಿನಲ್ಲೇ ಹೊಸ ಆಲೋಚನೆ ಹೊಳೆಯಿತು.

ಪಕ್ಕದಲ್ಲೇ ಆಫೀಸಿನಲ್ಲಿ ಕುಳಿತಿದ್ದ ಸಹೋದ್ಯೋಗಿಯೊಬ್ಬನನ್ನು "ಟೂ ಟೆನ್ಸ್" ಇದೆಯಾ ಎಂದೆ.

ಚಿಲ್ಲರೆ ಕೇಳುವೆನೆಂದುಕೊಂಡು ಅವನು ಇದೆಯೆಂದು ತನ್ನ ಜೇಬಿಗೆ ಕೈ ಹಾಕಿದ.

ಹಾಗಾದರೆ ನನಗೆ ಹತ್ತು ರೂ. ಸಾಲ ಕೊಟ್ಟು ಉಳಿದದ್ದು ನೀನು ಇಟ್ಟುಕೋ ಅಂದೆ.

ದುಡ್ಡು ಇದೆಯೆಂದು ಒಪ್ಪಿಕೊಂಡ ಅವನು ನುಣುಚಿಕೊಳ್ಳಲು ಉಪಾಯವಿಲ್ಲದೆ ಹತ್ತರ ನೋಟು ಕೈಗಿತ್ತ.

ಸತ್ಯ
ಬೆಂಗಳೂರು



ಅಪರಿಚಿತ

ಅಪರಿಚಿತನೊಬ್ಬ ಏದುಸಿರು ಬಿಡುತ್ತ ಓಡಿ ಬಂದು ನಮ್ಮನೆ ಬಾಗಿಲಿಗೆ ನಿಂತಾಗ ನನಗೆ ದಿಗಿಲು.

"ನನ್ನ ಹೆಸರು ರುದ್ರೇಶ ಅಂತ. ನಿಮ್ಮ ಭಾವನವರು ನನಗೆ ತುಂಬ ಪರಿಚಿತರು" ಎಂದು ನುಡಿದ.

ಭಾವನವರ ಪರಿಚಿತನಾದ್ದರಿಂದ ಒಳಗೆ ಕರೆದೆ.

"ಪಟ್ಟದಕಲ್ಲಿನಿಂದ ಬಂಡಿ ಮೇವು ಹೇರಿಕೊಂಡು ಮೋಸಿಗಿಗೆ ಹೊರಟಿದ್ದೆ. ನಿಮ್ಮ ಊರಿನ ಕ್ರಾಸಿನ ಹತ್ತಿರ ಬಂಡಿಯ ಇರುಸು ಮುರಿದಿದೆ. ರಿಪೇರಿಗಾಗಿ ನೂರು ರೂ. ಸಾಲವಾಗಿ ಕೊಡಿ. ನಂತರ ಅದನ್ನು ನಿಮ್ಮ ಭಾವನವರ ಕೈಗೆ ಮುಟ್ಟಿಸುತ್ತೇನೆ" ಎಂದ.

ಭಾವನಿಗೆ ಬೇಕಾದವನಾದ್ದರಿಂದ ಇಲ್ಲವೆನ್ನಲಾಗದೆ ಹಣ ಕೊಟ್ಟೆ.

ಮುಂದೆ ಕೆಲ ದಿನ ನಂತರ ಬದಾಮಿಗೆ ಹೋದಾಗ ಭಾವ ಸಿಕ್ಕಿದ್ದರು. "ನೋಡಪ್ಪಾ ನಮ್ಮ ಊರಿನ ರುದ್ರೇಶ ಮೊನ್ನೆ ವಿಜಾಪುರಕ್ಕೆ ಹೋಗಿ ನಿಮ್ಮ ಕಾಕಾನ ಹತ್ತಿರ ನನ್ನ ಹೆಸರು ಹೇಳಿ 2000 ರೂ. ಕಿತ್ತಿದ್ದಾನಂತೆ. ನಿನ್ನ ಬಳಿಯೇನಾದರೂ ಬಂದರೆ ಹೀಗೆಲ್ಲ ಸಿಕ್ಕಿ ಹಾಕಿಕೋ ಬೇಡ... ಎನ್ನಬೇಕೆ...!!

ರಾಜಶೇಖರ ಕಟಗೇರಿ
ಬೊಳಚಗುಡ್ಡ



ಈ ಊರಿನ ಎಲ್ಲರಿಂದಲೂ ಸಾಲ ಪಡೆದಿದ್ದಾಯ್ತು... ಬದುಕಲು ಬೇರೆ ಊರು ನೋಡಬೇಕು

ಬಾಲಪ್ರಪಂಚ



ಮಾನವನಾಗು

ಮಗು

ಅಮ್ಮಾ ಅಮ್ಮಾ ಕೇಳಮ್ಮಾ
ನಾನೇನಾಗಲಿ ಹೇಳಮ್ಮಾ
ವಿದ್ಯೆಯು ಕಲಿತು ಬುದ್ಧಿಯು ಬಲಿತು
ಶಾಲೆಯ ಶಿಕ್ಷಕನಾಗಲೆ ನಾನು?
ಅಪ್ಪನ ಹಾಗೆ ಡಾಕ್ಟರನಾಗಿ
ರೋಗಿಯ ಸೇವೆಯ ಮಾಡಲಿಯೇನು?
ದೇಶದ ರಕ್ಷಣೆ ಮಾಡಲು ನನಗೆ
ಶಿಸ್ತಿನ ಸಿಪಾಯಿಯಾಗುವ ಬಯಕೆ
ಜನರಿಗೆ ನ್ಯಾಯವ ದೊರಕಿಸಿ ಕೊಡಲು
ನ್ಯಾಯಾಧೀಶನು ಆದರೆ ಸಾಕೆ?
ಕಷ್ಟದ ದುಡಿಮೆಗೆ ಬೆಲೆಯನು ನೀಡಲು
ಆಗಲಿಯೇನು ಕಾರ್ಮಿಕ ನಾಯಕ
ಮಂತ್ರಿಯು ಆಗಲೆ ತಾಂತ್ರಿಕನಾಗಲೆ
ಸ್ವಂತದ ಕಾಯಕ ಮಾಡುತ ಸಾಗಲೆ?
ನಾನೇನಾಗಲಿ ಯಾವುದನರಸಲಿ
ಅಮ್ಮಾ ನೀನು ಹೇಳೌ ಈಗಲೆ

ತಾಯಿ

ಕೇಳೈ ಕೇಳೈ ಮುದ್ದಿನ ಕಂದ
ನಿನ್ನೀ ನುಡಿಯು ಬಲು ಆನಂದ
ಡಾಕ್ಟರನಾಗು ಶಿಕ್ಷಕನಾಗು
ಶಿಸ್ತಿನ ಸೈನಿಕ ನೀನಾಗು
ರೈತನೆ ಆಗು ಕಾರ್ಮಿಕನಾಗು
ಮಂತ್ರಿಯ ಪದವಿಗೆ ನೀಹೋಗು
ಏನೇಯಾದರು ಎಲ್ಲಿಗೆ ಹೋದರು
ಮೊದಲಿಗೆ ಮಾನವ ನೀನಾಗು

+ ಶಂ. ಗು. ಬಿರಾದಾರ

ದಿಲ್‌ದಾರ್-ನೌಷಾದ್

ನೌಷಾದ್ ಒರ್ವ ಮುಗ್ಧ ಬಾಲಕ. ದಿನವೂ ತಂದೆಯೊಡನೆ ತಮ್ಮ ಹೊಲದ ಕೆಲಸಕ್ಕೆ ಹೋಗುತ್ತಿದ್ದ. ಹೊಲವೇ ಇವರ ಬದುಕಿಗೆ ಆಧಾರವಾಗಿತ್ತು. ನೌಷಾದ ತುಂಬ ಮುಗ್ಧ. ದಯಾಳು ಹಾಗೂ ಪ್ರೇಮಮಯಿ.

ಒಂದು ದಿನ ಎಂದಿನಂತೆ ಹೊಲದಲ್ಲಿ ಕೆಲಸ ಮಾಡುತ್ತಿದ್ದ. ಮೇಲೆ ಹಾರುತ್ತಿದ್ದ ಪುಟ್ಟ ನವಿಲೊಂದು ಪಟ್ಟನೇ ಕೆಳಗೆ ಬಂದು ಬಿತ್ತು. ಅದರ ಕಾಲಿಗೆ ಗಾಯವಾಗಿತ್ತು. ರಕ್ತ ಸುರಿಯುತ್ತಿತ್ತು. ವಿಲವಿಲನೆ ಒದ್ದಾಡುತ್ತಿದ್ದ ನವಿಲನ್ನು ನೋಡಿದವನೇ ನೌಷಾದ್ ಧಾವಿಸಿಬಂದ. 'ಓಹ್! ಹೊನ್ನ ಬಣ್ಣದ ನವಿಲು'. ಎಂದು ಉದ್ಗರಿಸಿದ.

"ನೌಷಾದ್, ಹೀಗೆಯೇ ನಾನು ಹಾಯಾಗಿ ಹಾರುತ್ತ ಹೊರಟಿದ್ದೆ. ನಿಮ್ಮ ಊರಿನ ಕೆಟ್ಟ ಹುಡುಗರು ನನಗೆ ಕಲ್ಲು ಹೊಡೆದರು, ಇದೋ ಕಾಲಿಗೆ ಎಷ್ಟೊಂದು ಗಾಯವಾಗಿದೆ". ನವಿಲು ಮಾತನಾಡಿತು. ನೌಷಾದನಿಗೆ ಆಶ್ಚರ್ಯ. ಪ್ರೀತಿಯಿಂದ ಅದರ ಮೈದಡವಿದ. ನವಿಲು ನೋವಿನಿಂದ ನರಳಿತು.

ನೌಷಾದ್ ಅದನ್ನೆತ್ತಿಕೊಂಡ. ಪ್ರೀತಿಯಿಂದ ಎದೆಗವಚಿಕೊಂಡ. ನೀರಿನಿಂದ ಅದರ ಗಾಯ ತೊಳೆದು ತನಗೆ ಗೊತ್ತಿದ್ದ ಮೂಲಿಕೆ ಔಷಧಿ ಹಚ್ಚಿದ. ಅಂಗವಸ್ತ್ರವನ್ನೇ ತುಸು ಹರಿದು ಪಟ್ಟಿ ಕಟ್ಟಿದ. ತನ್ನ ಬುತ್ತಿಗಂಟು ಬಿಚ್ಚಿ ನವಿಲಿಗೆ ಊಟಕೊಟ್ಟ. ಮೆತ್ತಗಿನ ಹುಲ್ಲು ತಂದು ಮರವೊಂದರ ನೆರಳಿನಲ್ಲಿ ಹಾಸಿ ನವಿಲನ್ನು ಮಲಗಿಸಿದ. ಮನೆಗೆ ಬರುವಾಗ ಅದನ್ನು ಹೊತ್ತು ತಂದ.

ಮಗನ ಪ್ರಾಣಿದಯೆ ಕಂಡು ನೌಷಾದ್‌ನ ತಂದೆತಾಯಿಗೆ ಅಪಾರ ಸಂತೋಷವಾಯಿತು. ಅವನ ಆರೈಕೆಯಲ್ಲಿ ನವಿಲು ಬೇಗನೆ ಗುಣಹೊಂದಿತು. "ನೌಷಾದ್, ನವಿಲು ಈಗ ಆರಾಮಾಗಿದೆ. ಅದನ್ನು ಕಾಡಿಗೆ ಬಿಟ್ಟು ಬಂದು ಬಿಡು" ಎಂದು ಅವನ ತಂದೆತಾಯಿ ಹೇಳಿದರು.

"ಇಲ್ಲ, ನಾನಿದನ್ನು ಮನೆಯಲ್ಲೇ ಇಟ್ಟುಕೊಳ್ಳುವೆ. ಪ್ರೀತಿಯಿಂದ ಸಾಕುವೆ" ಎಂದು ಹಟ ಹಿಡಿದ. ಅವನ ತಂದೆತಾಯಿ ಒಪ್ಪಿಕೊಂಡರು.

ನೌಷಾದ್ ನವಿಲಿಗೆ "ದಿಲ್‌ದಾರ್" ಎಂದು ಹೆಸರಿಟ್ಟ. ಪ್ರೀತಿಯಿಂದ ಸಾಕತೊಡಗಿದ. ಮಾತು ಬರುತ್ತಿದ್ದ ಅದಕ್ಕೆ ಹಾಡು ಕೂಡ ಕಲಿಸಿದ. ದಿಲ್‌ದಾರ್ ಇಂಪಾಗಿ ಹಾಡುತ್ತಿತ್ತು.

ಹೊನ್ನ ನವಿಲಿನ ಕೀರ್ತಿ ದಿನೇ ದಿನೇ ಎಲ್ಲೆಡೆ ಹಬ್ಬಿತು.

ಆ ವರ್ಷ ಎಲ್ಲೆಡೆ ಮಳೆಯೇ ಆಗ

ಲಿಲ್ಲ. ಹೀಗಾಗಿ ಬರಗಾಲ ಬಿತ್ತು. ಜನ ಅನ್ನ ನೀರಿಗಾಗಿ ಪರದಾಡ ತೊಡಗಿದರು. ನೌಷಾದನ ಮನೆಯಲ್ಲೂ ಅನ್ನ ನೀರಿಗೆ ಗತಿಯಿಲ್ಲದಾಯಿತು.

ಹೊನ್ನ ನವಿಲಿನ ಕೀರ್ತಿ ಕೇಳಿ ಊರ ಧನಿಕ ಅದನ್ನು ಕೊಳ್ಳಲು ಬಂದ. "ಸಾವಿರ ಸುವರ್ಣ ನಾಣ್ಯ ಕೊಡುವೆ. ಈ ನವಿಲನ್ನು ನನಗೆ ಕೊಡು" ಎಂದು ಕೇಳಿದ.

ನೌಷಾದ್ ಮಾತ್ರ ಒಪ್ಪಲಿಲ್ಲ. ಪ್ರಿಯ ಮಿತ್ರನನ್ನು ಎಂದಿಗೂ ಮಾರಲಾರೆ ಎಂದ.

ಹೊಟ್ಟೆಗಾಗಿ ನೌಷಾದನ ತಂದೆ ತಮ್ಮ ಹೊಲವನ್ನೇ ಮಾರಬೇಕಾಯಿತು. ನಂತರ ಸಾಕಷ್ಟು ಸಾಲ ಕೂಡ ಮಾಡಿದರು. ಸಾಲಗಾರರು ಹಣ ಕೇಳುತ್ತ ದಿನವೂ ನೌಷಾದನ ಮನೆಗೆ ಬರತೊಡಗಿದರು. "ನಾಳೆ, ಸಾಲದ ಹಣ ಕೊಡದೆ ಹೋದರೆ ಮನೆಯನ್ನೆ ಜಪ್ತಿ ಮಾಡುವೆವು." ಎಂದು ಬೆದರಿಸಿ ಹೋದರು. ನೌಷಾದನ ತಂದೆತಾಯಿ ತಲೆಯ ಮೇಲೆ ಕೈಹೊತ್ತು ಕುಳಿತರು.

ಮರುದಿನ ಸಾಲಗಾರರು ಬಂದರು. ಮನೆಯಲ್ಲಿದ್ದ ಸಾಮಾನನ್ನೆಲ್ಲ ಎತ್ತಿ ಹೊರಗೆಸೆಯತೊಡಗಿದರು. ನೌಷಾದನ ತಂದೆತಾಯಿ ಅಳತೊಡಗಿದರು. ನೌಷಾದನೂ ದುಃಖಿಸುತ್ತಿದ್ದ. ದಿಲ್‌ದಾರನಿಗೂ ದುಃಖ ಉಕ್ಕಿಬಂತು. ಆಗ ಅದು ನೇರವಾಗಿ ಹಿಂದೆ ತನ್ನನ್ನು ಕೊಳ್ಳಲು ಬಂದಿದ್ದ ಧನಿಕನ ಮನೆಗೆ ಹಾರಿತು.

"ಅಯ್ಯಾ ಧನಿಕ. ಹಿಂದೆ ನನ್ನನ್ನು ಕೊಳ್ಳಲು ಬಂದಿದ್ದೆಯಲ್ಲವೆ? ಈಗ ಇದೋ ನಾನೇ ಬಂದಿರುವೆ. ಆದ್ದರಿಂದ ನನ್ನ ನೌಷಾದನಿಗೆ ತಕ್ಷಣ ನೂರು ಸುವರ್ಣ ನಾಣ್ಯ ತಲುಪಿಸು" ಎಂದಿತು.

ನವಿಲು ತಾನೇ ಬಂದಿದ್ದನ್ನು ಕಂಡು ಧನಿಕನಿಗೆ ಆನಂದವಾಯಿತು.

ಸ್ವತಃ ತಾನೆ ನೌಷಾದನಿಗೆ ನೂರು ವರಹ ತಲುಪಿಸಲು ಹೋದ. ನೌಷಾದ ಆಗಲೇ ತನ್ನ 'ದಿಲ್‌ದಾರ'ನನ್ನು ಹುಡುಕುತ್ತಿದ್ದ.

ಅಲ್ಲಿಯ ಪರಿಸ್ಥಿತಿ ಕಂಡು ಧನಿಕನಿಗೆ ನವಿಲಿನ ಔದಾರ್ಯದ ಅರಿವಾಯಿತು.

ಸುದ್ದಿ ತಿಳಿದ ನೌಷಾದ ದುಃಖಿಸತೊಡಗಿದ. "ಇಲ್ಲ ನಾನದನ್ನು ಮಾರಲಾರೆ, ದಿಲ್‌ದಾರ ಇಲ್ಲದೇ ನಾನು ಬದುಕಲಾರೆ" ಎಂದು ಪರಿತಪಿಸಿದ.

ನೌಷಾದ್ ಹಾಗೂ ದಿಲ್‌ದಾರರ ತ್ಯಾಗಬುದ್ಧಿ ಹಾಗೂ ಪರಸ್ಪರ ಪ್ರೀತಿಗೆ ಧನಿಕ ಮೆಚ್ಚಿದ. ಆ ನೂರು ವರಹಗಳನ್ನು ನೌಷಾದನಿಗೆ ಕಾಣಿಕೆಯೆಂದು ಕೊಟ್ಟು ನವಿಲನ್ನು ಮರಳಿ ತಂದಿತ್ತ. ನೌಷಾದ್-ದಿಲ್‌ದಾರ್ ಸುಖವಾಗಿ ಜೊತೆಯಾಗಿ ಬಾಳಿದರು.

- ಅನುರಾಧಾ





ಆಮೆ ಮತ್ತು ಹಂಸಗಳು

ಕಾಡಿನಲ್ಲಿ ಬೀಡು ಬಿಟ್ಟ
ಎರಡು ಹಂಸಕೆ
ಕಂಡಿತೊಂದು ಹೊಂಡದಲ್ಲಿ
ನೀರು ವಾಸಕೆ

'ನೀನು ನಾನು ಇಬ್ಬರೂನು
ಇಲ್ಲೆ ನಿಲ್ಲುವ
ತಿನ್ನಲೆಂದು ಮೀನು ಕಪ್ಪೆ
ಎಲ್ಲ ಕೊಲ್ಲುವ'

ಎಂದು ಎರಡು ಅಂದುಕೊಂಡು
ಅಲ್ಲೆ ನಿಂತವು
ಆಮೆಯನ್ನು ಗೆಳೆಯನಾಗಿ
ಮಾಡಿಕೊಂಡವು

ದಿನವು ಕಳೆಯೆ ಮಳೆಯು ನಿಂತು
ನೀರು ಬತ್ತಿತು
ಮುಂದೆ ಏನು ಗತಿಯು ಎಂದು
ಚಿಂತೆ ಹತ್ತಿತು

'ದೂರ ದೂರ ಹಾರಿ ನಾವು
ಬೇರೆ ಕೊಳವನು
ಹುಡುಕಿ ನೋಡಿ ಕೆಳಗೆ ಇಳಿದು
ಪಡೆವ ತಳವನು'

ತಿಳಿದು ಹೀಗೆ ಗೆಳೆಯನೊಡನೆ
ಸಲಹೆ ಕೇಳಲು

ಆಮೆ ಕೂಡ ಒಪ್ಪಿ ಒಡನೆ
ತಲೆಯ ಕುಣಿಸಲು

ಎಲ್ಲ ಸರಿಯೆ ಮುಂದುವರಿಯೆ
ಸಿದ್ಧ ಸೂಚನೆ
ಆಮೆ ಹಾರಲೆಂತು ಎಂದು
ಒಂದೆ ಯೋಚನೆ!

ಸುತ್ತ ಮುತ್ತ ಹುಡುಕಿ ಒಂದು
ಕೋಲ ತಂದವು
ಅತ್ತ ಇತ್ತ ಕೊಕ್ಕಿನಲ್ಲಿ
ಹಿಡಿದು ನಿಂತವು!

ನಡುವೆ ಆಮೆ ಕಚ್ಚಿ ಹಿಡಿಯೆ
ಮೇಲು ಮೇಲಕೆ
ಏರಿ ಏರಿ ಹಾರಿ ಹಾರಿ
ಹೊರಟವೆಲ್ಲ ದೂರಕೆ

ಗಗನದಲ್ಲಿ ನೀಲಿಯಲ್ಲಿ
ಬೆಳ್ಳ ಬೆಳ್ಳಗೆ
ಕಂಡ ಹಂಸ ಆಮೆ ಕಂಡು
ನೆಲದ ಜನರಿಗೆ

ಅಂತು ಇಂತು ನಗೆಯು ಬಂತು
ಎಲ್ಲ ನಕ್ಕರು!
ಕೋಪಗೊಂಡ ಆಮೆ ಬಯ್ಯೆ,
'ಎಲ್ಲ ಠಕ್ಕರು'

ಹಿಡಿತ ಕಳಚಿ ಆಮೆ ಬಿತ್ತು
ಸತ್ತು ನೆಲದಲಿ
ಮಗುವೆ ತಿಳಿ ಹಿಡಿತವಿರಲಿ
ನಿನಗೆ ಮಾತಲಿ

ಟಿ. ಎಸ್. ನಾಗರಾಜಶೆಟ್ಟಿ

ನಾಂಗೋಲಿಯದ ಮಹಾರಾಣಿಗೆ ಒಂದು ವಿಚಿತ್ರವಾದ ಜ್ವರ ಬಂದಿತ್ತು. ಬಹಳ ವರ್ಷಗಳ ಹಿಂದೆ. ಅರಮನೆ ವೈದ್ಯರು ಹೇಳಿದರು, " ಈಕೆ ಪ್ರತಿನಿತ್ಯ ಒಂದು ಗಿಣಿ ಮಾಂಸ ತಿನ್ನಬೇಕು. ಎಪ್ಪತ್ತೊಂದು ದಿನ ಆದ ಮೇಲೆ ರೋಗ ಸಂಪೂರ್ಣವಾಗಿ ವಾಸಿಯಾಗತ್ತೆ", ಅಂತ.

" ಎಪ್ಪತ್ತೊಂದು ಗಿಣಿಗಳನ್ನ ಯಾರು ತಂದು ಕೊಡ್ತಾರೋ ಅವರಿಗೆ ಭಾರಿ ಬಹುಮಾನ ಕೊಡ್ತೀನಿ ", ಅಂತ ರಾಜ ಊರಿನ ಬೀದಿ ಬೀದಿಗಳಲ್ಲಿ ಡಂಗುರ ಹೊಡೆಸಿದ.

ಬಹುಮಾನ ಪಡೆಯೋಕ್ಕೆ ಅನೇಕರಿಗೆ ಆಸೆ ಆಯಿತು. ಆದರೆ ಒಟ್ಟಿಗೆ ಎಪ್ಪತ್ತೊಂದು ಗಿಣಿ ಹಿಡಿಯೋದು ಸುಲಭ ಅಲ್ಲ ' ಅಂತ ಹಕ್ಕಿ ಹಿಡಿಯೋವ್ರಿಗೂ ಗೊತ್ತು,

ಅದೇ ಊರಿನಲ್ಲಿ ಸುಲೇಮಾನ್ ಅಂತ ಒಬ್ಬ ಇದ್ದ. ಅವನು ಯೋಚಿಸಿದ. " ಆ ದೇವರ ಗುಡ್ಡದ ಪಕ್ಕದಲ್ಲಿರೊ ದೊಡ್ಡ ಮರದಲ್ಲಿ ಗಿಣಿಗಳ ಗುಂಪೇ ಇದೆ. ಪ್ರತಿ ನಿತ್ಯ ರಾತ್ರಿ ಅಲ್ಲೇ ನಿದ್ರೆ ಮಾಡ್ತವೆ. ಈವತ್ತೇ ಹೋಗಿ ಎಷ್ಟು ಗಿಣಿಗಳಿವೆಯೋ! ಎಣಿಸಿಕೊಂಡು ಬರ್ತೀನಿ ".

ಸುಲೇಮಾನ್ ಸಂಜೆ ಗಿಣಿಗಳನ್ನ ಎಣಿಸಿದಾಗ, ಅವನಿಗೆ ಬಹಳ ಆಶ್ಚರ್ಯ ಆ ಗಿಣಿಗಳ ಗುಂಪಿನಲ್ಲಿ ಸರಿಯಾಗಿ ಎಪ್ಪತ್ತೊಂದು ಗಿಣಿಗಳೇ ಇದ್ದವು.

ದೊಡ್ಡ ಮರವನ್ನು ಆವರಿಸುವಂತಹ ದೊಡ್ಡ ಬಲೆಯನ್ನು ಕೊಂಡುಕೊಂಡ. ಅದನ್ನು ಹಾಕುವ ರೀತಿಯನ್ನೂ ಚೆನ್ನಾಗಿ ಅಭ್ಯಾಸ ಮಾಡಿದ.

ಸುಲೇಮಾನ್ ಸತತವಾಗಿ ಪ್ರಯತ್ನಿಸುತ್ತಾ ಇದ್ದಿದ್ದನ್ನ ಗಿಣಿಗಳ ಗುಂಪಿನ ನಾಯಕ ನೋಡಿತು. " ಸೋದರ ಸೋದರಿಯರೇ, ಈವತ್ತು ರಾತ್ರಿ ಇದೇ ಮರದ ಮೇಲೆ ಮಲಗಿದರೆ ಬಲೆಗೆ ಬಿಳ್ತೀವಿ. ಆದ್ದರಿಂದ ದೇವರ ಗುಡ್ಡದಲ್ಲಿರೊ ಗುಹೆಯಲ್ಲಿ ಇರೋಣ," ಅಂತ ಹೇಳಿತು. ಗಿಣಿಗಳೆಲ್ಲಾ ಗುಡ್ಡದ ಮೇಲಿನ ಗುಹೆ ಸೇರಿದವು.

ಸುಲೇಮಾನನಿಗೆ ಸಿಟ್ಟು ಬಂತು. ಅವನೇನೂ ಸುಮ್ಮನೆ ಇರಲಿಲ್ಲ. ಬಲೆ ತೆಗೆದುಕೊಂಡು ಗುಡ್ಡ ಹತ್ತೋಕ್ಕೆ ಶುರುಮಾಡಿದ.


ಗಿಣಿಗಳ ನಾಯಕ ಪುನಃ ಇದನ್ನು ನೋಡಿತು. ಈ ಸಾರಿ ಹೇಳಿತು. " ಈ ಸ್ಥಳವೂ ಸರಿಯಿಲ್ಲ. ನಡೆಯಿರಿ ಬೇರೆ ಕಡೆಗೆ ಹೋಗೋಣ."

" ದಿನಾಲೂ ಓಡಾಡುತ್ತಾ ಹೊಸ ಜಾಗ ಹುಡುಕೋಕ್ಕೆ ನಮ್ಮ ಕೈಲಾಗೊಲ್ಲ," ಅಂತ ವಯಸ್ಸಾದ ಗಿಣಿಗಳು ಗೊಣಗಾಡಿದವು.

ಸಂಪಟೂರು ವಿಶ್ವನಾಥ್

ಓಡಾಡ್ತಾ ಬೇರೆ ಗೂಡು ಹುಡುಕದೆ ಇದ್ರೆ ಆ ಬೇಟೆಗಾರನ ಕೈಲಿ ಸಿಕ್ಕಿ ಹಾಕ್ಕೊಳ್ಳೋದು ಖಂಡಿತ. ನೀವು ಇಲ್ಲೇ ಇರೊದಾದ್ರೆ ನಾನೂ ನಿಮ್ಮೊಟ್ಟಿಗೆ ಇರ್ತೀನಿ. ನಾಯಕನಾದ ನಾನು ನನ್ನ ಕ್ಷೇಮ ಮಾತ್ರ ಯೋಚಿಸೋದು ಸರಿಯಲ್ಲ. "ನಾಯಕ ಹೇಳಿತು

ಬುದ್ಧಿವಂತ ಗಿಣಿ ಹೇಳಿದ ಹಾಗೆಯೇ, ಸುಲೇಮಾನ್ ಬಲೆ ಬಿಡ್ಸಿದ. ಎಲ್ಲಾ ಗಿಣಿಗಳೂ ಸಿಕ್ಕಿ ಬಿದ್ದವು. ಎಪ್ಪತ್ತು ಗಿಣಿಗಳೂ ಕಿರಿಚಾಡುತ್ತಾ ಬಿಡಿಸಿಕೊಳ್ಳೊಕ್ಕೆ ಒದ್ದಾಡಿದವು. ನಾಯಕ ಗಿಣಿ ಹೇಳಿತು, " ಬಲೆಯನ್ನ ಭದ್ರವಾಗಿ ಹೆಣೆದಿದ್ದಾರೆ.



ಬರೀ ಒದ್ದಾಡೋದರಿಂದ ಬಿಡಿಸಿಕೊಳ್ಳೋಕ್ಕಾಗೊಲ್ಲ. ಬುದ್ಧಿಯನ್ನು ಖರ್ಚು ಮಾಡಿ ಉಪಾಯ ಹುಡುಕಬೇಕು. ನಾನು ಈಗ ಹೇಳೊದನ್ನ ಗಮನವಿಟ್ಟು ಕೇಳಿ. ನಾವೆಲ್ಲಾ ಸತ್ತ ಹಾಗೆ ನಟಿಸಬೇಕು. ಬೆನ್ನಿನ ಮೇಲೆ ಬಿದ್ದುಕೊಂಡು, ಕಾಲುಗಳನ್ನು ಮುದುರಿಕೊಂಡು, ತಲೆಯನ್ನು ಒರೆಯಾಗಿ ಇಟ್ಟುಕೊಂಡಿರಬೇಕು. ಬೇಟೆಗಾರ ಈ ಗುಡ್ಡವನ್ನು ಸುಲಭವಾಗಿ ಹತ್ತಿ ಬರೊಕ್ಕೆ ಆಗೊಲ್ಲ. ಬಲೆಯನ್ನು ಬಿಡಿಸಿ ನೆಲಕ್ಕೆ ಎಸೆಯುತ್ತಾನೆ. ನೆಲದ ಮೇಲೆ ಬಿದ್ದ ತಕ್ಷಣ ನಾವು ಅಲುಗಾಡಬಾರದು. ಅವನು ಎಣಿಸುತ್ತಾ ಹೋಗುತ್ತಾನೆ. ಎಪ್ಪತ್ತೊಂದು ಅಂದ ತಕ್ಷಣ ಎಲ್ಲರೂ ಹಾರಿ ಹೋಗೋಣ. "

ಬುದ್ಧಿವಂತ ಗಿಣಿ ಹೇಳಿದ ಹಾಗೆ ಎಲ್ಲವೂ ಬೆನ್ನಿನ ಮೇಲೆ ಬಿದ್ದುಕೊಂಡವು. ಬೇಟೆಗಾರ ಕಷ್ಟಪಟ್ಟು ಗುಡ್ಡ ಹತ್ತಿದ. ಗಿಣಿಗಳನ್ನು ನೋಡಿದ. ' ಎಲ್ಲಾ ಗಿಣಿಗಳೂ ಹೇಗೆ. ಒಟ್ಟಿಗೆ ಸತ್ತವು ? ಹೇಗಾದರೂ ಸತ್ತಿರಲಿ. ನನಗೆ ಒಟ್ಟಿಗೇ ಸಿಕ್ಕಿತಲ್ಲಾ ಅಷ್ಟೇ ಸಾಕು ' ಎಂದುಕೊಂಡ. ಒಂದೊಂದೇ ಗಿಣಿಯನ್ನು ಬಲೆಯಿಂದ ಬಿಡಿಸಿ ನೆಲದ ಮೇಲೆ ಎಸೆದ. ಪ್ರತಿಯೊಂದನ್ನು ಎಸೆದ ಮೇಲೂ, " ಒಂದು ", " ಎರಡು ", " ಮೂರು", " ನಾಲ್ಕು ", ಅಂತ ಎಣಿಸುತ್ತಾ ಹೋದ

ಎಪ್ಪತ್ತನೆಯ ಗಿಣಿ ನೆಲದ ಮೇಲೆ ಬೀಳುವ ವರೆಗೂ ಎಲ್ಲಾ ಚೆನ್ನಾಗೇ ನಡೆಯಿತು. ನಾಯಕ ಗಿಣಿಯೇ ಎಪ್ಪತ್ತೊಂದನೆಯದಾಗಿತ್ತು. ಪಾಪ, ಅದರ ಕಾಲು ಬಲೆಯಲ್ಲಿ ಸಿಕ್ಕಿಕೊಂಡಿತ್ತು. ಅದರ ಕಾಲನ್ನು ಬಿಡಿಸ್ತಾ ಇದ್ದಾಗ, ಸುಲೇಮಾನನ ಕಾಲಿನ ಪಕ್ಕದಲ್ಲಿದ್ದ ಸಣ್ಣ ಕಲ್ಲೊಂದು ಕೆಳಕ್ಕೆ ಬಿತ್ತು. ಸುಲೇಮಾನ " ಎಪ್ಪತ್ತೊಂದು ", ಅಂದ. ಅಷ್ಟು ಹೊತ್ತೂ ಸುಮ್ಮನೆ ಬಿದ್ದುಕೊಂಡಿದ್ದ ಹಕ್ಕಿಗಳು ಕೊನೆಯ ಸೋದರ ಭೂಮಿ ಸೇರಿದ್ದಾನೆ ಅಂದುಕೊಂಡವು. ಕೂಗುತ್ತಾ ಪುರ್ರನೆ ಆಕಾಶಕ್ಕೆ ಹಾರಿದವು. •

ಸುಲೇಮಾನ ಎಪ್ಪತ್ತೊಂದನೆ ಗಿಣಿಯನ್ನು ಭದ್ರವಾಗಿ ಹಿಡಿದುಕೊಂಡ. ಅವನಿಗೆ ತಾನು ಮೋಸ ಹೋಗಿದ್ದರ

ಅರಿವಾಯಿತು. ನಾಯಕ ಗಿಣಿಗೆ ಹೇಳಿದ, ನಿನ್ನನ್ನ ಏನು ಮಾಡಿದರೂ ಬಿಡೊದಿಲ್ಲ. ಆ ಎಪ್ಪತ್ತನ್ನಂತೂ ಪುನಃ ಹಿಡಿಯೊಕ್ಕಾಗೊಲ್ಲ. ನಿನ್ನ ನನ್ನ ಮನೆಗೆ ತೆಗೆದು ಕೊಂಡುಹೋಗಿ ಕೊಂದು ತಿಂದು ಹಾಕುತ್ತೇನೆ".

ಗಿಣಿಯ ಕಾಲುಗಳನ್ನು ಕಟ್ಟಿ ಮನೆಯ ಕಡೆಗೆ ಹೊರಟ. ಮನೆ ತಲುಪುವ ವೇಳೆಗೆ ಅವನ ಕೋಪ ಕಡಿಮೆಯಾಗಿತ್ತು. ಇದನ್ನು ನೋಡಿದ ಬುದ್ಧಿವಂತ ಗಿಣಿ ಹೇಳಿತು, "ಅಯ್ಯಾ, ನಾನು ಮುದಿಗಿಣಿ, ನನ್ನ ಮಾಂಸ ಗಟ್ಟಿಯಾಗಿ. ರುಚಿ ಇರೊಲ್ಲ ನನಗೆ ಬುದ್ಧಿ ಇದೆ. ಮಾತು ಬರುತ್ತೆ. ನೀನು ನನ್ನನ್ನು ಶ್ರೀಮಂತ ವರ್ತಕನಿಗೆ ಮಾರಿ ಬಿಡು. ನಾನು ಅವನ ಅಂಗಡಿಯನ್ನು ಕಳ್ಳರು ದೋಚದ ಹಾಗೆ ಕಾಪಾಡ್ತೀನಿ. ಅಲ್ಲದೆ ಅವನು ನಿನಗೆ ಬೇಕಾದಷ್ಟು ಹಣವನ್ನು ಕೊಡ್ತಾನೆ".

ಸುಲೇಮಾನ ಹಾಗೆ ಮಾಡಿದ. ರಾಣಿಯ ರೋಗ ಹಾಗೆ ವಾಸಿ ಆಯಿತು. ಸಾಹುಕಾರ ವರ್ತಕನಿಂದ ನೂರು ಬೆಳ್ಳಿ ವರಹಗಳನ್ನು ಪಡೆದುಕೊಂಡ. ಬುದ್ಧಿವಂತ ಗಿಣಿ ಒಂದೆರಡು ವರ್ಷ ಬಂಧನದಲ್ಲೇ ಕಳೆಯಿತು. ಆಮೇಲೆ ವರ್ತಕನ ಮಕ್ಕಳು ಅವಕ್ಕೆ ಸ್ವತಂತ್ರ ಕೊಟ್ಟರು. ತನ್ನ ಗುಂಪನ್ನು ಸೇರಿಕೊಂಡು ಸುಖವಾಗಿತ್ತು.

(ಆಧಾರಿತ)





ನೀ ಕೊಡುವೆಯಾದರೆ

ಭಾರತೀಯ ಸಂಸ್ಕೃತಿಯ
ಅವಳ ಧೃತಿ, ಗತಿ, ಮತಿಯ
ನಾಡ ಹಕ್ಕಿಯು ಕಂಠ ಸಿರಿಯಾಗಿರೆ

ಇನ್ನೊಮ್ಮೆ ಜನುಮವನು
ನೀ ಕೊಡುವೆಯಾದರೆ
ಮಾನವನ ಜೀವವನೆ ನೀಡಯ್ಯ ನನಗೆ

ನಾದಲೀಲಾ ಲೋಲನಾಗಿ
ಬಾನಾಡಿಯಂತೆ, ಹಾರಿ ಹಾಡುವೆನಯ್ಯ
ನನ್ನಂದದೊಳು ಜಗದಂದವನೆ ನಿಲಿಸಿ
ನಿಮ್ಮಂದಕೇ ನಲಿಯುವೆನು ಸ್ವಾಮಿ

ಆ ದೇಶ, ಈ ದೇಶ
ಆ ಭಾಗ್ಯ, ಈ ಭಾಗ್ಯ
ನಾನು ಬೇಡೆನು ತಂದೆ
ಭಾರತದ ಮಡಿಲಿನೊಳೇ ಹುಟ್ಟಿಸೆನ್ನ

ಯುಗಧರ್ಮದಂಗಳದಿ, ಕುಣಿದು ಮಣಿದು
ಛಂದ ಸ್ವಚ್ಛಂದದೊಳು ದಣಿಯುವೆನಯ್ಯ
ತಣಿಯುವೆನಯ್ಯ

ಕರುನಾಡಿನೊಳು ಜನಿಸಿ
ಕನ್ನಡವ ನುಡಿಗಲಿತು
ಕನ್ನಡಕೆ ದುಡಿಗಲಿತು
ಕನ್ನಡ್ಗೆ ಕೀರುತಿಗೆ ಮಡಿಗೊಳುವೆ ದೇವ

ಅಯ್ಯ ಶ್ರೀ ಸಂಗಮನಾಥಯ್ಯ
ನಿಮ್ಮ ಕರುಣಾ ಕಟಾಕ್ಷವನು ಸದಾ
ಇರಿಸು ಇರಿಸಯ್ಯ

ಸಂಗಮೇಶ ಹೊಸಮನಿ

ಸ್ವಾತಂತ್ರ್ಯೋತ್ಸವ: ನಲವತ್ತು

I

[illegible] ವರ್ಷ ಸ್ವಾತಂತ್ರ್ಯ ಕಂಡ
ವರ್ಷವೇ ನಾ ಹುಟ್ಟಿದ್ದೇನು
ನನ್ನ ಶಾಲೆಯ ಜಾತಕ ಸಾರುತ್ತದೆ.

ಹಾಗ ಹುಟ್ಟಿದ ವರ್ಷದಲ್ಲಿ
ಆ ವರ್ಷವನ್ನು [illegible]
ಅಪ್ಪ —

ಕಾಮನ ಹುಣ್ಣಿಮೆಯ ತಂಪಲ್ಲಿ
ಉಂಟಾದ ಹೆಂಗಳು ನಗೆಯೊಡನೆ
ಸಿರಿಯು ಸಂಪತ್ತಲ್ಲಿ
ಮತ್ತೆ ಮತ್ತದೇ ಕನಸು [illegible].

ಈಗಾಗ.
ನನ್ನ ಹುಟ್ಟು ಮತ್ತು
ಈ ಸ್ವಾತಂತ್ರ್ಯದ ಗುಟ್ಟಿನ ಹುಬ್ಬುಗಳ ಕಿತ್ತು
ಒಟ್ಟೊಟ್ಟಿಗೇ ಸಾಗಿ ಬೆಟ್ಟಗೆ
ಉರುಳುರುಳುತ್ತಿವೆ.

II

[illegible] ಹಬ್ಬ ಹುಣ್ಣಿಮೆ
ಎಲ್ಲೆಲ್ಲೂ ಜಯಕಾರ, ತೋರಣ, ಸಡಗರ.

ರಾಷ್ಟ್ರಪಿತ ಕನಸು
ಸ್ವಾತಂತ್ರ್ಯ ಕರೆದಾಗಲೇ
ಒಂದೆ ಮನೆ [illegible]

ಇಬ್ಬರಿಗೂ ರಣರಂಗ
ರಕ್ತದೋಕುಳಿ [illegible]
ಮತ್ತೂ ಏಕೆ?

ಕುರುಕ್ಷೇತ್ರ ಮದ್ದಿನ [illegible]
ಮುಸ್ಸಂಜೆ [illegible]
ಉಸಿರಾದ ಈ ಕಲಹಕ್ಕದಿರಾಗಿ
[illegible] ಹೆಜ್ಜೆನ ವಿಫಲ?

[illegible] ಗಳೆಲ್ಲಿ?
[illegible] ಹಾಲು, ಕಳೆಯು [illegible]
ಹುಟ್ಟುಬಟ್ಟೆಗಳಲ್ಲಿದ್ದ ಉಣ್ಣೆ [illegible]
ಮುರಿದು ಕೈ, ಮುರಿದ ಮನಸ್ಸು—
[illegible] ರೈಲು, ಪಾರ್ಕ್ [illegible] ಕನಸುಗಳು
ಮಕ್ಕಳ್ಳ ಹೊಸ [illegible] ಗದ್ದಲ... ..

III

[illegible] ಈ ಬದಿಗೆ
[illegible]
[illegible]

[illegible] ಕಡೆಗೆ [illegible] ಮಾಡಿ
[illegible] ತಡಕಿ [illegible]
[illegible]
ಅಸಂಖ್ಯ ಚೆಲುವೆಯರು—
ಬಲಾತ್ಕಾರಕ್ಕೊಳಗಿದ ಪಿಂಡಗಳ
ತಮ್ಮ [illegible] ಗರ್ಭಗಳಲ್ಲಿ [illegible]
[illegible]
ಹೊಸಗಾಲ ಬೆಳಕಿನೆಡೆ.
[illegible]
[illegible]
[illegible] ಕೈಗೊಂಡ
[illegible] ಹರಕೆಯ ಕುರಿಗಳ—ದಂಡು
[illegible]
ಹುಟ್ಟು ಸಡಗರದ
ಮತ್ತೆಲ್ಲಿ ಕವಿತೆ
[illegible] ಕೋಟಿ [illegible]
. . . .
ಈ [illegible] ಬಳಿ ಸುಳಿವ ಪಾಚಿ
[illegible]
[illegible]
[illegible] ಕಾರ್ಯ
ಕಾರಣ ಬೇಕಲ್ಲವೆ?

* ಕಾಳೇಗೌಡ ನಾಗವಾರ

12155

ನಾಗತಿಹಳ್ಳಿ ಚಂದ್ರಶೇಖರ

ಒನ್ ಟೂ ಒನ್ ಡಬಲ್ ಫೈವ್ ಅಂದ್ರೇನು
ಹೇಳು ನೋಡೋಣ— ಎಂದರು ಸವಾಲು ಹಾಕುವವರಂತೆ.
ಅವಳು "ನನಗೆ ಅಷ್ಟು ಗೊತ್ತಿಲ್ವಾ? ಟೋಟಲ್
ಹದಿನಾಲ್ಕು ಅಂತ!" ಎಂದು ಸರಳ ಉತ್ತರ ಹೇಳಿದಾಗ
ಕ್ಯಾಪ್ಟನ್ ಹಣೆ ಚಚ್ಚಿಕೊಂಡರು.
'ಹೋಗ್ಲಿ ನೀನೇ ಹೇಳಪ್ಪ!
ನಮ್ಮ ಕಾಲೇಜಿನಲ್ಲೂ ಕೆಲವು ಹುಡುಗೀರು
ಹಾಗೆ ಬರೆದುಕೊಂಡಿರ್ತಾರೆ— ನೋಟ್‌ಬುಕ್ ಮೇಲೆ'
ಎಂದಳು
ಕ್ಯಾಪ್ಟನ್ ಒಳಗೊಳಗೇ ಪ್ರೇಮಭಾವದಿಂದ
ಮಿಡುಕಿದರೂ ತೋರಿಸಿಕೊಳ್ಳದೆ, ಉತ್ಸಾಹದಿಂದ
"ನಾಳೆ ಹೇಳ್ತೇನಿ" ಅಂದರು.

ಇವರು ಒಬ್ಬಂಟಿಗರಾಗಿದ್ದು, ಯಾವುದಕ್ಕೂ ನಾಯಕರಾಗಿಲ್ಲದಿದ್ದರೂ ತಮ್ಮನ್ನು ತಾವು "ಕ್ಯಾಪ್ಟನ್" ಎಂದು ಕರೆದುಕೊಳ್ಳುತ್ತಿದ್ದರು. ಯಾರಾದರೂ ಅವರ ಹೆಸರು ಹಿಡಿದು ಕರೆದರೆ ಅವರಿಗೆ ಬೇಸರವಾಗುತ್ತಿತ್ತು. ಎಲ್ಲರೂ 'ಕ್ಯಾಪ್ಟನ್' ಎಂದೇ ಕರೆಯ ಬೇಕಾಗಿತ್ತು. ದೇಹಕ್ಕೆ ಮುದಿತನ ಬರುವ ವರೆಗೆ ಕತ್ತೆಯಂತೆ ದುಡಿದುಕೊಂಡು ಅನಂತರ ಕಡ್ಡಾಯ ನಿವೃತ್ತಿಯ ಮೇಲೆ ಮನೆಗೆ ಕಳಿಸಿದ ನಂತರ ಅವರು "ಕ್ಯಾಪ್ಟನ್" ಆದದ್ದು. ಲಂಚ ವಿಲ್ಲದೆ ಸಿಗುವ ಕೆಲಸ ಎಂದರೆ ಆರ್ಮಿಯಲ್ಲಿ ಮಾತ್ರ ಎಂದು ಗೊತ್ತಾದ ಮೇಲೆ ಸೈನಿಕ ಸೇವೆಗೆ ಸೇರಿ ದ್ದರು. ದೇಶದ ಯಾವ ಯಾವ ಗಡಿಗಳಲ್ಲಿ ಏನೇನು ಸಾಹಸ ಮಾಡಿದರು ಎಂಬುದನ್ನು ಆಗಾಗ ಹೆಂಡತಿ, ಮಗಳು, ಗೆಳೆಯರು...ಹೀಗೆ ಸಿಕ್ಕ ಸಿಕ್ಕ ವರ ಹತ್ತಿರ ವರ್ಣಿಸುತ್ತಿದ್ದುಂಟು. ಆದರೆ ಸತ್ಯ ವೇನೆಂದರೆ ಕ್ಯಾಪ್ಟನ್‌ರವರು ಸೇವಾವಧಿ ಪೂರ್ತಾ ಅಲ್ಲಿ ಡ್ರಮ್ ಬಾರಿಸಿಕೊಂಡಿದ್ದರಂತೆ. ಈ ಅಂತೆ ಕಂತೆಗಳೇನೇ ಇರಲಿ, ಅವರು ನಿವೃತ್ತಿಯಾದ ಮೇಲೆ ಶಿಸ್ತಿನ ಸಿಪಾಯಿ ಆಗಿದ್ದಾರೆ.

ಎಕ್ಸ್‌ಸರ್ವೀಸ್‌ಮನ್‌ಗಳಿಗೇನು ಎಲ್ಲಿ ಬೇಕಾದ್ರೂ ಕೆಲಸ ಸಿಗುತ್ತೆ–ಅಂತಾರಲ್ಲ, ಆದರೆ ಕ್ಯಾಪ್ಟನ್‌ಗೆ ಎಲ್ಲಿಯೂ ವಾಚ್‌ಮನ್ ಕೆಲಸ ಕೂಡಾ ಸಿಗಲಿಲ್ಲ. 'ಇಷ್ಟಾದರೂ ಕ್ಯಾಪ್ಟನ್ ಠಾಕುಠೀಕಾಗಿ ಬೂಟು ಧರಿಸಿ ಶಿಸ್ತಿನಿಂದಲೇ ನೌಕರಿ ಹುಡುಕಿದ್ದುಂಟು. ಸಂದರ್ಶನಗಳಿಗೆ ಲೆಫ್ಟ್ ರೈಟ್ ನಡೆದು ಸೆಲ್ಯೂಟ್ ಹೊಡೆದದ್ದೂ ಆಯಿತು. ಅವರ ನಲವತ್ತೊಂಬತ್ತ ನೆಯ ವಯಸ್ಸಿನಲ್ಲಿ ಕೊನೆಗೂ ನೌಕರಿ ದಕ್ಕಿತು.

ಆ ಥೇಟರಿನಲ್ಲಿ ಮ್ಯಾನೇಜರ ಹುದ್ದೆ ಬಹಳ ವರ್ಷಗಳಿಂದ ಖಾಲಿ ಬಿದ್ದಿತ್ತು. ಹಾಗೆ ನೋಡಿದರೆ ಆ ಥೇಟರಿಗೆ ಮ್ಯಾನೇಜರನ ಅವಶ್ಯಕತೆ ಇರಲಿಲ್ಲ. ಅವ್ಯವಸ್ಥೆಯ ಗೂಡಾಗಿತ್ತು: ಪ್ರೇಕ್ಷಕರು ಆಡಿಟೋರಿಯಂ ಒಳಗಡೆಯೇ ತಿಂಡಿ ತೀರ್ಥ ಬೀಡಿ ಸಿಗರೇಟು ಉಗುಳು ಎಲ್ಲಾ ಆಗುತ್ತಿತ್ತು. ಸೀಟು ಮುರಿದು ಹೋಗಿದ್ದವು. ಥೇಟರ್ ಮಳೆ ಬಂದಾಗ ಮಾತ್ರ ಸೋರುತ್ತಿತ್ತು. ಕೆಲವು ಟಿಕೆಟ್ಟು ಗಳನ್ನು ಮಾತ್ರ ಕೌಂಟರಿನಲ್ಲಿ ಕೊಡುತ್ತಿದ್ದರು. ಉಳಿದವು ಕಾಳಸಂತೆಯಲ್ಲಿ ಅಧಿಕೃತವಾಗಿ ಮಾರಾಟ ವಾಗುತ್ತಿದ್ದವು. ಯಾರು ಯಾವ ಕೆಲಸ ಬೇಕಾ ದರೂ ಮಾಡಬಹುದಿತ್ತು. ಪೋಸ್ಟರು ಅಂಟಿ ಸುವ ಹೀರ ಒಂದೊಂದು ದಿನ ಆಪರೇಟರ್ ಆಗು ತ್ತಿದ್ದ. ಸತ್ಯನಾರಾಯಣ ಶೆಟ್ಟಿ ಮೊದಲು ತಾನೇ ಟಿಕೇಟ್ ಇಶ್ಯೂ ಮಾಡಿ ನಂತರ ಗೇಟಿಗೆ ಬಂದು

ನಿಲ್ಲುತ್ತಿದ್ದ. ಅಲ್ಲಿದ್ದ ನೌಕರರಿಗೆ ಎಲ್ಲ ಕೆಲಸ ಗೊತ್ತಿದ್ದವು. ಅಲ್ಲಿ ಛೇಂಜ್ ಓವರ್ ಸಿಸ್ಟಂ ಪ್ರೊಜೆಕ್ಟರ್ ಇದ್ದುದರಿಂದ ಹೀರ ಮರೆತು ಚಿತ್ರದ ಕೊನೆಯ ರೀಲನ್ನು ಮೊದಲಿಗೆ ಹಾಕಿ ಜನರನ್ನು ಆಗಾಗ ಬೆಚ್ಚಿಬೀಳಿಸುತ್ತಿದ್ದ. ಥೇಟರಿನ ಮ್ಯಾನೇಜರ್ ಹುದ್ದೆಗೆ ಕ್ಯಾಪ್ಟನ್ ಆಯ್ಕೆಯಾದಾಗ ಮಾಲೀಕರು "ಇನ್ನು ಮೇಲೆ ಈ ಥೇಟರ ನಿಮ್ಮದು ಅಂತ ತಿಳಿದುಕೊಳ್ಳಿ. ಈಗಿರುವ ಕೆಟ್ಟ ಹೆಸರು ಹೋಗಬೇಕು. ನಾವು ಯಾವದಕ್ಕೂ ಅಡ್ಡ ಬರುವದಿಲ್ಲ. ಒಳ್ಳೆಯ ಚಿತ್ರಮಂದಿರ ಅಂತ ಹೆಸರು ತರಬೇಕು" ಎಂದರು. ಶಿಸ್ತಿನ ಸಿಪಾಯಿ ಆಗಿದ್ದ ಕ್ಯಾಪ್ಟನ್‌ಗೆ ಅಷ್ಟು ಸಾಕಾಯಿತು.

ಒಂದೇ ವಾರದಲ್ಲಿ ಥೇಟರ್‌ಗೆ ಹೊಸ ರೂಪ ಬಂದಿತು. ಬ್ಲಾಕ್ ಮಾರ್ಕೆಟ್ ರದ್ದಾಯಿತು. ಪ್ರತಿ ಶೋಗೆ ಆಡಿಟೋರಿಯಂ ಸ್ವಚ್ಛವಾಗ ತೊಡಗಿತು. ಒಳಗೆ ಬೀಡಿ ಹಚ್ಚಿದವರನ್ನು ಸ್ವತಃ ಕ್ಯಾಪ್ಟನ್ ಎತ್ತಿ ಹೊರಹಾಕುತ್ತಿದ್ದರು. ಕುರ್ಚಿಗಳು ರಿಪೇರಿಯಾದವು. ತಿಗಣೆಗಳನ್ನು ಸಾಮೂಹಿಕವಾಗಿ ಕೊಲ್ಲಲಾಯಿತು. ಒಬ್ಬರಿಗೆ ಒಂದೇ ಟಿಕೆಟ್. ಎಲ್ಲರೂ ಕ್ಯೂನಲ್ಲೇ ಬರಬೇಕು. ನಿಗದಿತ ಸಮಯಕ್ಕೆ ಟಿಕೆಟ್ಟು ವಿತರಣೆ, ಪ್ರದರ್ಶನ ಶುರು. ಥೇಟರಿನ ತಲೆ ಮೇಲೆ ಇದ್ದ ನೀಲಿ ಬಣ್ಣದ ನಿಯಾನ್ ದೀಪದ ಹೆಸರು ಮತ್ತೆ ಹಚ್ಚಿಕೊಳ್ಳು ತೊಡಗಿತು. ಕ್ಯಾಪ್ಟನ್ ಲಾಠಿ ಹಿಡಿದು ಖುದ್ದಾಗಿ ತಾವೇ ಕ್ಯೂ ಹತ್ತಿರ ನಿಲ್ಲುತ್ತಿದ್ದರು. ಬಂದೋಬಸ್ತ್ ಆಯಿತು.

ಪೀಕಲಾಟ ಬಂದಿದ್ದು ಅಲ್ಲಿನ ನೌಕರರಿಗೆ. ಉಡಾಳರಾಗಿದ್ದವರು ಈಗ ಸರಿಯಾಗಿ ಕೆಲಸಕ್ಕೆ ಬಂದು ಹೇಳಿದ್ದನ್ನು ಮಾಡಲೇಬೇಕಾಯ್ತು. ಕ್ಯಾಪ್ಟನ್ ಸ್ಟ್ರಿಕ್ಟ್ ಅಂದರೆ ಸ್ಟ್ರಿಕ್ಟ್. ಮೊಸಾಯಿಕ್ ಫ್ಲೋರಿನ ಮೇಲೆ ಮಿಲಿಟರಿ ಬೂಟುಗಳನ್ನು ಟರಟರಗುಟ್ಟಿಸುತ್ತಾ ಬಂದರೆ ಗೇಟ್‌ಕೀಪರುಗಳು ಪ್ರತಿ ಬಾರಿಯೂ ಸೆಲ್ಯೂಟ್ ಹೊಡೆಯುತ್ತಿದ್ದರು. ಕಷ್ಟಕ್ಕೆ ಸಿಕ್ಕಿದವನೆಂದರೆ ಸತ್ಯನಾರಾಯಣ ಶೆಟ್ಟಿ ಮತ್ತು ಹೀರ. ಸ. ನಾ. ಶೆಟ್ಟಿ ಬುಕ್ಕಿಂಗ್ ಕ್ಲಾರ್ಕ್ ಆದ್ದರಿಂದ ಮುಂಚೆ ಕಾಳಸಂತೆ ವ್ಯವಹಾರ



ನಡೆಸುತ್ತಿದ್ದ. ಅಲ್ಲದೆ ರಶ್ ಇದ್ದಾಗ ಬಹಳ ಜನಕ್ಕೆ ಚಿಲ್ಲರೆ ಕೊಡದೆ ಸತಾಯಿಸುತ್ತಿದ್ದ. ಬಿ.ಎಸ್.ಸಿ ಓದಿ ನೌಕರಿ ಸಿಕ್ಕಿರಲಿಲ್ಲವಾದ್ದರಿಂದ ಇಲ್ಲಿ ಸೇರಿದ್ದ. ಕ್ಯಾಪ್ಟನ್ ಅವನನ್ನು ಕರೆದು ಛೀಮಾರಿ ಹಾಕಿದ ಮೇಲೆ ನಿರ್ವಾಹವಿಲ್ಲದೆ ಶೆಟ್ಟಿ ತನ್ನ ಹಲ್ಕಟ್‌ಗಿರಿಗಳನ್ನು ನಿಲ್ಲಿಸಬೇಕಾಯಿತು.

ಪೀರನದು ಬೇರೆ ಕಥೆ. ಮಹಾ ಶೋಕಿ ಲಾಲ. ಸಿನಿಮಾದ ಹೀರೋಗಳಂತೆ ಬಟ್ಟೆ ತೊಟ್ಟು ಕ್ರಾಪು ಬಿಟ್ಟು ತುಟಿಯಲ್ಲಿ ಸಿಗರೇಟು ಹಚ್ಚಿ ಹೊರಟರೆ ಯಾರೂ ಅವನನ್ನು ಪೋಸ್ಟರ್ ಅಂಟಿಸುವ ಹುಡುಗ ಅನ್ನಲಾಗದು. ಮೈಗಳ್ಳ, ಥಳಕು ಜಾಸ್ತಿ. ಅವನ ಮಹದಾಸೆ ಸಿನಿಮಾದಲ್ಲಿ ನಟಿಸುವುದು. ಬಿಟ್ಟಿ ಸಿನಿಮಾ ಆದ್ದರಿಂದ ಅನೇಕ ಬಾರಿ ನೋಡುವುದು, ಯಾವುದೋ ಆರ್ಕೆಸ್ಟ್ರಾಗಳಲ್ಲಿ ಹಾಡಲು ಹೋಗುವುದು, ವಾರಕ್ಕೆ ಮೂರು ದಿನ ರಜೆ ಬೇಡುವುದು, ಇಂಥ ನಾನಾ ಖಯಾಲಿಯ ತರುಣ. ಎಲ್ಲಾ ಅವನನ್ನು 'ಏಕ್‌ದಿನ್‌ಕಾ ಸುಲ್ತಾನ್' ಅನ್ನುತ್ತಿದ್ದುದೂ ಉಂಟು.


ಕ್ಯಾಪ್ಟನ್ ಮ್ಯಾನೇಜರ್ ಆಗಿ ಬಂದ ಮೇಲೆ ಪೀರ ಅವರಿಗೂ ಏನೇನೋ ಸಬೂಬು ಹೇಳಿ ಕೆಲಸಕ್ಕೆ ತಪ್ಪಿಸಿಕೊಳ್ಳುತ್ತಿದ್ದ. ಒಂದು ದಿನ ಸಿಕ್ಕಿ ಬಿದ್ದ. ಅವನಿಗೆ ಹುಶಾರಿಲ್ಲ ಅಂತ ರಜೆ ತೆಗೆದುಕೊಂಡು ಹೋಗಿದ್ದ. ಆ ರಾತ್ರಿ ಅವನ ಅಪ್ಪ ಥೇಟರಿಗೆ ಬಂದು ಮಗ ಒಂದು ವಾರದಿಂದ ಮನೆಗೆ ಬಂದಿಲ್ಲ ಅಂತ ದೂರಿದ! ಮರುದಿನ ಪೀರ ಕೆಲಸಕ್ಕೆ ಬಂದಾಗ ಕ್ಯಾಪ್ಟನ್ ಬಾಲ್ಕನಿಯ ಕಾರಿಡಾರಿನಲ್ಲೇ ಲಾತಾ ಕೊಟ್ಟರು. "ಆರ್ಕೆಸ್ಟ್ರಾಗೆ ಹೋಗಿದ್ದೆ ಸಾರ್" ಅಂತ ಹಲ್ಲುಗಿಂಜಿದ್ದ. "ಯಾವುದಾದರೂ ಒಂದು ಕೆಲಸ ಮಾಡು. ಆರ್ಕೆಸ್ಟ್ರಾಗೇ ಹೋಗಿ ಬಿಡು. ಬೇರೆಯವನನ್ನು ತೆಗೆದುಕೊಳ್ತೇನೆ." ಎಂದು ಗದರಿಸಿದ ಮೇಲೆ "ತಪ್ಪಾಯ್ತು ಸಾರ್" ಎಂದು ಕ್ಯಾಪ್ಟನ್‌ರ ಕಾಲು ಹಿಡಿದಿದ್ದ. ಈ ಪ್ರಸಂಗವು ಬಹಿರಂಗವಾಗಿ ನಡೆದು ಬಾಲ್ಕನಿ ಬುಕ್ಕಿಂಗ್ ಕ್ಲಾರ್ಕ್ ಆಗಿದ್ದ ಶಿವಶಂಕರ ಮರೆಯಲ್ಲಿ ನಿಂತು ಕಿಸಿಕಿಸಿ ನಕ್ಕಿದ್ದ. ಪೀರ, ಶಿವಶಂಕರ ಮೇಲೆ ಏನೋ ಒಂದು ಚಾಡಿ ಹೇಳಿದ್ದೂ ಆಯಿತು. ಟಿಕೇಟು ಕೊಡುವಾಗ ಹುಡುಗಿಯರ ಬೆರಳು ಚಿವುಟುತ್ತಾನೆ ಅಂತ! ಕ್ಯಾಪ್ಟನ್‌ರವರು ಶಿವಶಂಕರನನ್ನೂ ಕರೆದು ಲಾಠಿಯಿಂದ ಎರಡು ಬಿಗಿದರು. ಪೀರನಿಗೆ ಜೀವಕ್ಕೆ ಸಮಾಧಾನವಾಯಿತು. ಮೊದಲು ಅವಮಾನ; ನಂತರ ಸಮಾಧಾನ.

✡

ಸೆಕೆಂಡ್ ಶೋ ನಡೆಯುತ್ತಿತ್ತು. ಕ್ಯಾಪ್ಟನ್‌ಗೆ ಮನಸ್ಸು ತುಸು ಕಸಿವಿಸಿಯಾಗಿತ್ತು. ನಾಳೆ ಶೋಗೆ ಬರಬೇಕಾಗಿದ್ದ ಬಾಕ್ಸ್ ಇನ್ನೂ ಬರಲಿಲ್ಲ. ಪೀರನನ್ನು ಕರೆದು ಬಸ್‌ಸ್ಟ್ಯಾಂಡ್‌ಗೆ ಹೋಗಿ ನೋಡಿಕೊಂಡು ಬಾ ಎಂದರು. ತಲೆ ಅಡಿಸಿ ಹೊರಟ. ಟಿಕೇಟುಗಳ ಮಾರಾಟದ ವಿವರಗಳನ್ನು ರಿಜಿಸ್ಟರಿಗೆ ಬರೆದರು. ಹಣವನ್ನು ಲೆಖ್ಖ ಮಾಡಿ ಬೀರುವಿಗಿಟ್ಟರು. ಥೇಟರಿನ ಸುತ್ತ ಒಂದು ರೌಂಡ್ ಹಾಕಿ ಬಂದರು. ಚನ್ನಿಂಗನಿಗೆ ಕಾರಿಡಾರಿನ ದೀಪಗಳನ್ನು ಆರಿಸು ಎಂದರು. ಎದುರಿಗೆ ನಿಂತಿದ್ದ ಒಂಟಿ ಲೂನಾವನ್ನು ಪಾರ್ಕಿಂಗ್‌ಗೆ ತಳ್ಳಿಸಿದರು. "ಕ್ಯಾಂಟೀನಿನವನಿಗೆ ಕಾಫಿ ಚೆನ್ನಾಗಿರೋಲ್ಲ. ಈ ಸಾರಿ ಕಂಟ್ರಾಕ್ಟ್ ಬೇರೆಯವನಿಗೆ ಕೊಡ್ತೀನಿ" ಎಂದು ಬೆದರಿಕೆ ಹಾಕಿದರು. ಕ್ಯಾಬಿನ್‌ಗೆ ಹೋಗಿ "ಈ ವಾರದಿಂದ ಹೊಸ ಸ್ಲೈಡ್ಸ್ ಹಾಕು" ಎಂದು ಸೂಚಿಸಿದರು. ಬೆಳಗ್ಗೆ ಒಂಬತ್ತಕ್ಕೆ ಬಂದವರು ರಾತ್ರಿ ಹನ್ನೊಂದು ಗಂಟೆಯವರೆಗೂ ಥೇಟರಿನಲ್ಲೇ ಇರುತ್ತಿದ್ದರು. ಕ್ಯಾಪ್ಟನ್ ಸ್ಟ್ರಿಕ್ಟು ಎಂದರೆ ಸ್ಟ್ರಿಕ್ಟು.

ಮತ್ತೆ ಆಫೀಸಿಗೆ ಬಂದವರು ಹೊರಡುವ ತಯಾರಿಯಲ್ಲಿದ್ದರು. ಫೋನು ಅರಚಿತು.

ಸೋಲು



ಆ ಹುಡುಗ
"ನಿನ್ನ ಚೆಲುವಿಗೆ ಮನ
ಸೋತೆ" ಎಂದಾಗ
ಈಕೆ ಮೈಮರೆತಳು
ಕೊನೆಗೆ ಆತ
ಇವಳನ್ನೇ ಮರೆತ
ಈಕೆ ಸೋತಳು.

—ಎಚ್. ಡುಂಡಿರಾಜ್

ಕ್ಯಾಪ್ಟನ್‌ಗೆ ಗೊತ್ತು. ನಾಳೆ ಮಾರ್ನಿಂಗ್ ಶೋಗೆ ಸಿನಿಮಾ ಛೇಂಜ್ ಆಗುತ್ತಿದೆ. ಕೆ ಇ ಬಿಯವರೋ, ಕಮರ್ಶಿಯಲ್ ಟ್ಯಾಕ್ಸಿನವರೋ, ಸಿಟಿ ಮುನಿಸಿಪಾಲಿಟಿಯವರೋ ಮ್ಯಾಜಿಸ್ಟ್ರೇಟರ ಮಕ್ಕಳೋ, ಪೋಲಿಸ್ ಡಿಪಾರ್ಟ್‌ಮೆಂಟಿನವರೋ ನಾಳೆಗೆ ಟಿಕೆಟ್ ಬೇಕು ಅಂತ ಕೇಳಲು ಫೋನ್ ಮಾಡಿರಬೇಕು. ಕ್ಯಾಪ್ಟನ್‌ಗೆ ಇವರನ್ನೆಲ್ಲಾ ಕಂಡರೆ ಸಿಟ್ಟು. ಎಲ್ಲರಂತೆ ಕ್ಯೂನಲ್ಲಿ ಬಂದೇ ಟಿಕೆಟ್ ತೆಗೆದುಕೊಳ್ಳಲು ಏನಾಗಿದೆ ಧಾಡಿ? ಕ್ಯಾಪ್ಟನ್ ಆರ್ಮಿಯಲ್ಲಿದ್ದವರು. ಸ್ಟ್ರಿಕ್ಟ್ ಅಂದ್ರೆ ಸ್ಟ್ರಿಕ್ಟ್.

ಫೋನ್ ಎತ್ತುವುದೇ ಬೇಡ ಅನಿಸಿತು. ಆದರೆ ಟ್ರಿಣ್ ಟ್ರಿಣ್ ನಿಲ್ಲಲಿಲ್ಲ. ಅಕಸ್ಮಾತ್ ಥೇಟರಿನ ಮಾಲೀಕರು ಫೋನ್ ಮಾಡಿದ್ದರೆ? ಹಂಚಿಕೆದಾರರ ಕಚೇರಿಯಿಂದ ಬಂದ ಕಾಲ್ ಆಗಿದ್ದರೆ? ಒಲ್ಲದಮನಸ್ಸಿನಿಂದ ಫೋನ್ ಎತ್ತಿದರು.

ಮಧುರ ಕಂಠದ ಬಾಲೆ ಉಲಿದಳು:

"ಹಲೋ... ಕ್ಯಾಪ್ಟನ್ ತಾನೆ?"

ಕ್ಯಾಪ್ಟನ್‌ಗೆ ವಿಸ್ಮಯ!

"ಹೌದು...ನಾನೇ...ಮಾತಾಡ್ತಿರೋದ."

"ಕ್ಯಾಪ್ಟನ್, ನಿಮ್ಜೊತೆ ತುಂಬಾ ಮಾತನಾಡಬೇಕು ಅನ್ಸತ್ತೆ. ನನಗೊತ್ತು ನೀವಿಷ್ಟು ಹೊತ್ನಲ್ಲಿ ಮಾತ್ರ ಫ್ರೀ ಆಗಿರೋದು ಅಂತ...

"ನೀವು ಯಾರು...ಗೊತ್ತಾಗ್ಲಿಲ್ಲ?..."

"ನೋಡೋಣ...ಗೆಸ್ ಮಾಡಿ...?"

"ಇಲ್ಲ...ಆಗ್ತಾ ಇಲ್ಲ...ನಿಮ್ಮ ಹೆಸರು?"

"ನೋ...ನೋ...ಖಂಡಿತಾ ಹೇಳಲ್ಲ... ಒಂದಷ್ಟು ಕ್ಲೂ ಕೊಡ್ತೀನಿ. ನಾನಿರೋದು ನಿಮ್ಮ ಥೇಟರ್ ಎದುರಿಗಿರೋ ಗರ್ಲ್ಸ್ ಕಾಲೇಜಿನಲ್ಲಿ. ಫಸ್ಟ್ ಇಯರ್ ಪಿ.ಯು.ಸಿ. ...ತುಂಬಾ ಶ್ರೀಮಂತರ ಮಗಳು... ನಿತ್ಯ ನಿಮ್ಮನ್ನು ನೋಡ್ತೀನಿ... ನಿಮ್ಮ ಡಿಸಿಪ್ಲಿನ್... ನಿಮ್ಮ ಡ್ಯೂಟಿ ... ಐ ಲೈಕ್ ಇಟ್... ನನ್ನ ಹೆಸ್ರು ಕೇಳಿದ್ರಲ್ಲ?... ಸದ್ಯಕ್ಕೆ ಒನ್ ಟೂ ಒನ್ ಡಬಲ್ ಫೈವ್ ಅಂತಿಟ್ಕೊಳ್ಳಿ..."

"ಒನ್ ಟೂ ಒನ್ ಡಬಲ್ ಫೈವ್?"

"ಹೌದು ಈಗ್ಲಾದ್ರೂ ತಿಳೀತಾ?"

ಕ್ಯಾಪ್ಟನ್ ಆ ಧ್ವನಿಯಲ್ಲಿದ್ದ ಉಲ್ಲಾಸ ಕೋಮಲತೆಗೆ ಕರಗಿ ಹೋದರು. 12155 ಅಂದರೆ ಏನೆಂದು ಹೊಳೆಯಲಿಲ್ಲ... ತಡವರಿಸಿದರು...

"ಅದೂ...ಅದೂ... ಒನ್ ಟೂ ವನ್ ಅಂದರೆ..."

"ಕ್ಯಾಪ್ಟನ್... ಡ್ಯಾಡಿ ಬಂದರು ಅಂತ ಕಾಣುತ್ತೆ ಕಾರಿನ ಶಬ್ದ ಆಗ್ತಿದೆ. ನಾಳೆ ಮಾರ್ನಿಂಗ್ ಶೋಗೆ ಬರ್‍ತೀನಿ... ನೋಡೋಣ ಗುರ್ತು ಹಿಡೀ... ತೀರಾ ಅಂತ... ಕ್ಯಾಪ್ಟನ್...ಐ ಲವ್ 'ಯು..." ...ಚೆಲುವೆ ಫೋನ್ ಆತುರವಾಗಿ ಕೆಳಗಿಟ್ಟಳು.

ಎಂಥೆಂಥ ಫಿರಂಗಿ ಗುಂಡುಗಳಿಗೂ ಜಗ್ಗದೆ ಇದ್ದ ಎದೆ 12155 ಳ ಧ್ವನಿಗೆ ಕರಗಿ ಝುಳಝುಳ ನೀರಾಯಿತು. ಕ್ಯಾಪ್ಟನ್ ಬದುಕಿನಲ್ಲಿ ಇವ್ವಾಗಿವ್ವ ಸಂಭವಿಸಿದ್ದಿಲ್ಲ. ಅಪ್ಪ ತೋರಿಸಿದವಳನ್ನು ಮದುವೆಯಾಗಿ ಸ್ಟ್ರಿಕ್ಟಾಗಿ ಜೀವನ ಮಾಡಿಕೊಂಡಿದ್ದವರು. ರಾತ್ರಿ ಹನ್ನೊಂದು ಘಂಟೆಯಲ್ಲಿ ಪಿಯುಸಿ ಹುಡುಗಿ ಐ ಲವ್ ಯು ಅನ್ನುವುದೆಂದರೇನು? ದೇಹದ ತುಂಬಾ ಸಂತಸದ ಭಾವ ಸಂಚರಿಸಿತು. ಸಾಕಷ್ಟು ಕೂದಲಿಲ್ಲದ ಕ್ಯಾಪ್ಟನ್‌ರ ಮೈ ಕೂಡಾ ರೋಮಾಂಚನಗೊಂಡಿತು. ಎಂಥ ಫೋನನ್ನು ಮಿಸ್ ಮಾಡಿಕೊಳ್ಳುತ್ತಿದ್ದೆ ಎಂದು ಯೋಚಿಸಿದರು. ಯಾಕೋ ಕನ್ನಡಿ ನೋಡಿಕೊಳ್ಳಬೇಕೆನಿಸಿತು. ಸಿಂಕ್ ಬಳಿಗೆ ಬಂದು ಇಣುಕಿದರು. ತಮ್ಮ ರೂಪವನ್ನು ತಾವೇ ವಿಮರ್ಶಿಸಿದರು. ತಾನು ಚೆನ್ನಾಗಿದ್ದೇನೆ ಅನಿಸಿತು. ಸ್ವಲ್ಪ ಕೆನ್ನೆ ಒಳಗೆ ಹೋಗಿದ್ದರೂ ಕೆಂಪಗಿವೆ ಅನಿಸಿತು. ಕಣ್ಣುಗಳಲ್ಲಿ ಕಾಂತಿ ಇದೆ ಎಂದನಿಸಿತು. ಮೀಸೆಯನ್ನು ಹುರಿಮಾಡಿಕೊಂಡರು. ಯಾವ



ದಾನರೂ ಹುಡುಗಿ ತಮಾಷೆ ಮಾಡುತ್ತಿರಬಹುದೆ ಎಂದು ಅನುಮಾನ ಬಂದರೂ ಆ ಧ್ವನಿಯಲ್ಲಿದ್ದ ಕೋಮಲತೆ, ಮಾಧುರ್ಯ, ಮುಗ್ಧತೆಗಳು ಅಂಥವಳಲ್ಲ ಎಂದು ಸಮಾಧಾನ ಕೊಟ್ಟವು. 12155ಎಂದರೇನೆಂದು ತಿಳಿಯದೆ ಕಂಗಾಲಾದರು. ಅದೇ ಕಾಲೇಜಿನಲ್ಲಿ ತನ್ನ ಮಗಳೂ ಪಿಯುಸಿ ಕಲಿಯುತ್ತಿದ್ದಾಳೆ. ಅವಳನ್ನು ಕೇಳಲೆ ಎಂದು ಯೋಚಿಸಿದರು. ಇದೆಲ್ಲ ಹೆಂಡತಿಗೆ ಗೊತ್ತಾಗಿ ಹಗರಣವಾದರೇನು ಗತಿ?

ಸಣ್ಣಗೆ ಶಿಳ್ಳೆ ಹಾಕುತ್ತಾ ಆಫೀಸಿನ ಬಾಗಿಲು ಹಾಕಿ ಹೊರಡುವುದರಲ್ಲಿದ್ದಾಗ ವೀರ ಬಾಕ್ಸ್ ಹೊತ್ತುಕೊಂಡು ಬರುತ್ತಿದ್ದ. ಬೆಳಗ್ಗೆ ಲಾತ ಕೊಟ್ಟಿದ್ದಕ್ಕೆ ಕ್ಯಾಪ್ಟನ್‌ಗೆ ಮನಸ್ಸು ಕರಗಿತು. ಹತ್ತಿರಕ್ಕೆ ಕರೆದು "ಇನ್ಮೇಲೆ ಹಾಗೆಲ್ಲ ಒಬ್ಬರ ಮೇಲೊಬ್ರು ಚಾಡಿ ಹೇಳಬೇಡಿ... ಹೋಗು... ಈ ರಾತ್ರಿ ಪೋಸ್ಟರ್ ಅಂಟಿಸಿ ಬಾ.... ಬಾಕ್ಸ್ ಬಂದಿದ್ದು ಲೇಟಾಗಿದೆ.... ಬೇಗನೆ ಅಂಟಿಸ ಬೇಕು...." ಎಂದು ಹೇಳಿ ಸ್ಕೂಟರ್ರೇರಿ ಮನೆ ಕಡೆ ಹೊರಟರು. ಮ್ಯಾನೇಜರು ಕೋಪ ಮರೆತಿದ್ದಕ್ಕೆ ವೀರನಿಗೂ ಸಮಾಧಾನವಾಯ್ತು. ಬಾಕ್ಸ್ ಹೊತ್ತು ತಂದಿದ್ದರಿಂದ ಮೈ ಎಲ್ಲಾ ಬೆವರಿತ್ತು. "ಥತ್ತೇರಿಕೆ ಎಂದು ಕರ್ಚೀಫಿನಿಂದ ಮುಖ ಒರೆಸಿಕೊಂಡ.

✡

ಕ್ಯಾಪ್ಟನ್ ಮನೆಗೆ ಬಂದಾಗ ಹೆಂಡತಿ, ಮಗಳು ಕಾಯುತ್ತಿದ್ದರು. ಅಪ್ಪ ಖುಷಿಯ ಮೂಡ್‌ನಲ್ಲಿದ್ದುದರಿಂದ ಮಗಳಿಗೂ ಆಶ್ಚರ್ಯ. ಸದಾ ಮನೆಯಲ್ಲೂ ಕ್ಯಾಪ್ಟನ್ ತರವೇ ಇರುತ್ತಿದ್ದ ಅಪ್ಪ ಮಗಳನ್ನು ಕರೆದು—"ಹೇಗಿದೆ ಕಾಲೇಜು?... ಚೆನ್ನಾಗಿ ಓದ್ತಿದ್ದೀಯೊ ?" ಎಂದಾಗ ಅವಳಿಗೆ ನಂಬಲಿಕ್ಕೇ ಆಗಲಿಲ್ಲ. ಮತ್ತೆ ಅಪ್ಪನ ಪ್ರಶ್ನೆ— "ನಿಮ್ಮ ಕಾಲೇಜ್ನಲ್ಲಿ ತುಂಬಾ ವಿಚಿತ್ರವಾದ ಹೆಸರಿಟ್ಟು-ಕೊಂಡಿರೋರು ಯಾರಾದ್ರೂ ಇದ್ದಾರಾ?" ಎಂದರು. ಮಗಳು ಮೋರೆ ಊದಿಸಿ... "ನನ್ನ ಹೆಸರೇ ವಿಚಿತ್ರವಾಗಿರೋದು. ಅಲುಮೇಲು ಮಂಗಮ್ಮ ಅಂತ ಯಾಕೆ ಇಡಬೇಕಾಗಿತ್ತು? ಎಲ್ಲಾ ನನ್ನನ್ನು ರೇಗಿಸ್ತಾರೆ!" ಎಂದಳು. ಹೆಂಡತಿ, "ಸುಮ್ನಿರೇ ಅದು ದೇವರ ಹೆಸರು ! "ಎಂದು ಸಮಾಧಾನ ಪಡಿಸಿದಳು. ಕ್ಯಾಪ್ಟನ್ ಮತ್ತೆ ಪ್ರಶ್ನೆ ಇಟ್ಟರು... "ಒನ್ ಟೂ ಒನ್ ಡಬ್ಬಲ್‌ಫೈವ್ ಅಂದ್ರೇನು ಹೇಳು ನೋಡೋಣ ? ಎಂದರು ಸವಾಲು ಹಾಕುವವರಂತೆ—ಅವಳು "ನನಗೆ ಅಷ್ಟು ಗೊತ್ತಿಲ್ವಾ ? ಟೋಟಲ್ ಹದಿನಾಲ್ಕು ಅಂತ ! " ಎಂದು ಸರಳ ಉತ್ತರ ಹೇಳಿದಾಗ ಕ್ಯಾಪ್ಟನ್ ಹಣೆ ಚಚ್ಚಿಕೊಂಡರು. "ಹೋಗ್ಲಿ ನೀನೇ ಹೇಳಪ್ಪ ! ... ನಮ್ಮ ಕಾಲೇಜಿನಲ್ಲೂ ಕೆಲವು ಹುಡುಗೀರು ಹಾಗೆ ಬರೆದುಕೊಂಡಿರ್ತಾರೆ—ನೋಟ್‌ಬುಕ್ ಮೇಲೆ" ಎಂದಳು. ಕ್ಯಾಪ್ಟನ್ ಒಳಗೊಳಗೇ ಪ್ರೇಮ ಭಾವದಿಂದ ಮಿಡುಕಿದರೂ ತೋರಿಸಿಕೊಳ್ಳದೆ ಉತ್ಸಾಹದಿಂದ "ನಾಳೆ ಹೇಳ್ತೀನಿ" ಅಂದರು.

ರಾತ್ರಿಯೆಲ್ಲಾ ಗಂಡ ಖುಷಿಯಲ್ಲಿ ಹೊರಳಾಡುವುದನ್ನು ಕಂಡು ಹೆಂಡತಿ ತನ್ನ ಪಾಡಿಗೆ ತಾನು ಮುಸುಗಿಕ್ಕಿ ಮಲಗಿದಳು. ಕ್ಯಾಪ್ಟನ್ ಇಡೀ ರಾತ್ರಿ ಕಣ್ಣು ಬಿಟ್ಟುಕೊಂಡೇ ನಿದ್ರೆ ಮಾಡಿದರು. ತಡವಾಗಿ ಬಂದ ನಿದ್ರೆಯಲ್ಲಿ ಫ್ರೆಶ್ ಆದ ಬಾಲೆಯೊಬ್ಬಳು ಲಿರಿಲ್ ಜಾಹೀರಾತಿನಲ್ಲಿ ಬಂದಂತೆ ಸ್ಲೋ ಮೋಶನ್ ನಡಿಗೆಯಲ್ಲಿ ಬಂದು ಅಪ್ಪಿ-ಕೊಂಡಂತಾಯ್ತು.

✡

ಎಂದಿಗಿಂತ ಅರ್ಧ ಘಂಟೆ ಬೇಗ ಎದ್ದು ಸ್ನಾನ ಮುಗಿಸಿ ಅನಂತರ ನೆನಪಾಗಿ ಶೇವ್ ಮಾಡಿ ಮೀಸೆ ಟ್ರಿಮ್‌ಮಾಡಿ, ಸಫಾರಿ ಸೂಟು ಹಾಕಿದರು. ಹೆಂಡತಿ ಪುರಾತನ ಕಾಲದಲ್ಲಿ ತಂದಿಟ್ಟಿದ್ದ ಸೆಂಟನ್ನು ತೋಳಿನ ಸಂದಿಗೆ ಸುರಿದುಕೊಂಡರು. ಸ್ಕೂಟರಿಗೂ ಮಜ್ಜನ ಮಾಡಿಸಿದರು. ಕಿತ್ತು ಹೋಗಿದ್ದ ಶೂಗಳಿಗೆ ಪಾಲಿಶ್ ಮೆತ್ತಿದರು. ಮಗಳು ಕೇಳಿದಳು— "ಯಾರಾದ್ರೂ ಗೆಸ್ಟ್ ಬರ್ತಾರೇನು ಡ್ಯಾಡಿ ಥೇಟರ್‌ಗೆ ? '' ಕ್ಯಾಪ್ಟನ್ ಸುಮ್ಮನೆ ಮುಗುಳ್ನಕ್ಕರು. "ಡ್ಯಾಡಿ ಈವತ್ತು ಮಾರ್ನಿಂಗ್ ಶೋಗೆ ಬರ್ಲಾ ? " ಮತ್ತೆ ಮಗಳ ಪ್ರಶ್ನೆ. ಕೂಡಲೇ ಕ್ಯಾಪ್ಟನ್ ಸಿಟ್ಟಿಗೆದ್ದರು—"ಎಲ್ಲಾದರೂ ಉಂಟೆ ? ಭಾನುವಾರ ನೋಡಿದರಾಯ್ತು... ಕ್ಲಾಸಿಗೆ ಹೋಗು."

✡

" ಟು ಸರ್ ವಿಥ್ ಲವ್ " ಇಂಗ್ಲಿಷ್ ಚಿತ್ರ. ಕಾಲೇಜು ಹುಡುಗ ಹುಡುಗಿಯರೇ ತುಂಬಿಕೊಂಡಿದ್ದರು. ಕ್ಯಾಪ್ಟನ್ ಎಂದಿಗಿಂತ ಹೆಚ್ಚು ಶಿಸ್ತಿನಿಂದ ಅಡ್ಡಾಡಿದರು. ಹುಡುಗಿಯರ ಗುಂಪುಗಳು ನಿಂತಿದ್ದವು. ಕಿಲಕಿಲ ನಕ್ಕು ಮುತ್ತು ಉದುರಿಸುತ್ತಿದ್ದವು. ಇವರಲ್ಲಿ 12155 ಯಾರಿರಬಹುದು ಎಂದು ತಲೆಕೆಡಿಸಿಕೊಂಡರು. ಪ್ರತಿಯೊಂದು ಹುಡುಗಿಯೂ ತನ್ನನ್ನೇ ನೋಡಿ ನಗುತ್ತಿರುವಂತೆ ಭಾಸವಾಯಿತು. ಬಾಲ್ಕನಿ ಕ್ಯೂ ಹತ್ತಿರ ಗಸ್ತು ತಿರುಗಿದರು.

ಶಿವಶಂಕರ ತನ್ನನ್ನು ಗಮನಿಸುತ್ತಿರಬಹುದೆ ಅನ್ನಿಸಿತು. ಕೈ ಕೈ ಹಿಸುಕಿಕೊಂಡರು. ಚಿತ್ರ ಮಂದಿರ ಭರ್ತಿಯಾಗಿ ಆಟ ಶುರುವಾಯಿತು. ಬೇಸತ್ತು ಕಿಟಕಿಯಾಚೆ ನೋಡಿದರು. ಥೇಟರ ಬಾಗಿಲಲ್ಲಿ ಒಂಟಿ ಹುಡುಗಿ ನಿಂತಿದ್ದಳು. ಎದೆ ಕಳಕ್ ಅಂದಂತಾಗಿ ಧಾವಿಸಿ ಬಂದರು. ತುಂಡು ಲಂಗದ ಹುಡುಗಿ. ಕೆಂಪಗಿದ್ದಾಳೆ. ಲಿಪ್‌ಸ್ಟಿಕ್ ಯಾವುದು ಕೆನ್ನೆಯಾವುದು ಎಂದು ಪ್ರತ್ಯೇಕಿಸಲಾರದಷ್ಟು ಕೆಂಪು...ಹಿಮ್ಮಡಿ ಎತ್ತರಿಸಿದ ಚಪ್ಪಲಿ, ಕಾಲಿನ ಉಗುರುಗಳಿಗೂ ಕೈನ ಉಗುರುಗಳಿಗೂ ಪೇಂಟು ಬಳಿದಿದಾಳೆ. ಬಾಬ್‌ಕಟ್. ತೆಳು ಶರೀರ. ಹರೆಯಕ್ಕೆ ಈವತ್ತು ಬೆಳಗ್ಗೆ ಕಾಲಿಟ್ಟವಳಂತೆ ನಾಚಿಕೆ ಇದೆ. ಪುಟ್ಟ ಸ್ತನಗಳು ಮೊಳಕೆಒಡೆದು ಚಾಚುತ್ತಿವೆ. ಹೌದು ಇದೇ ಬಾಯಿ ಇದೇ ಕಂಠ...ರಾತ್ರಿ ತನಗೆ ಮಾತಾಡಿದ್ದು ಇವಳೇ. ತನ್ನನ್ನು ಕಾಯುತ್ತಾ ನಿಂತಿದ್ದಾಳೆ...ಅವಳ ಆತಂಕ, ನಿರೀಕ್ಷೆ ನೋಡಿದರೇ ಗೊತ್ತಾಗುತ್ತೆ. ಕ್ಯಾಪ್ಟನ್ ಮಾತನಾಡಿಸಲು ಪೀಠಿಕೆಯಾಗಿ ಒಂದು ಮುಗುಳ್ನಗೆಯೊಡನೆ ಬಂದರು. ವೀರ ಆ ಹುಡುಗಿಯನ್ನು ''ಹೋಗಿಹೋಗಿ...ಹೌಸ್‌ಫುಲ್ ಆಯ್ತು ಗೇಟ್

ಹಾಕ್ತೀನಿ..." ಎಂದು ಕಳಿಸುತ್ತಿದ್ದ. ಪಾಪಿ ನನ್ಮಗ ...ನನ್ನ ಪ್ರೇಯಸಿಯನ್ನು ಆಟೆಗೆ ದಬ್ಬುವಷ್ಟು ಅಹಂಕಾರ ಬಂತೆ ಇವನಿಗೆ ?

ಕ್ಯಾಪ್ಟನ್ ಆ ಚಿಗರೆಮರಿಯ ಬಳಿ ಸಾರಿದರು. ಅವಳು ಇನ್ನಷ್ಟು ಹೆದರಿಕೊಂಡಳು. ಕ್ಯಾಪ್ಟನ್ ಕಣ್ಣಿನಿಂದ ಪ್ರೇಮದ ಬಾಣಗಳು ಸುಯ್ಯನೆ ಹೊರಟವು. ಅವಳಿಗೂ ಮಾತನಾಡಲು ತೋಚ ಲಿಲ್ಲ. ಅಷ್ಟರಲ್ಲಿ ಹೀರೊಹೊಂಡಾ ಒಂದರಲ್ಲಿ ಒಬ್ಬ ನವಯುವಕ ಡುಗುಡುಗು ಬಂದು ಅವಳ ಮುಂದೆ ಚಕ್ಕನೆ ನಿಲ್ಲಿಸಿದ. ಬಾಡಿದ್ದ ಅವಳ ಮುಖ ಅರಳಿತು. "ಕ್ಯಾ ಯಾರ್ ಇತನಾ ಲೇಟ್? " ಎಂದು ಅವನ ಬೆನ್ನಿಗೆ ಗುದ್ದಿ ಹಿಂದೆ ಕೂರು ತ್ತಿದ್ದಂತೆ ಯುವಕ ಫಸ್ಟ್ ಗೇರಿಗೆ ಹಾಕಿ ಹಾರಿ ಹೋದ.

✡

ಕ್ಯಾಪ್ಟನ್ ಆಫೀಸಿಗೆ ಹೋಗಿ ಸುಮ್ಮನೆ ಕುಳಿತರು. ಊಟಕ್ಕೂ ಹೋಗಲಿಲ್ಲ. ಇಡೀ ಅಲಂಕಾರ ವೇಸ್ಟಾಗುತ್ತಿದೆ ಅನ್ನಿಸಿತು. ರಾತ್ರಿ ಹತ್ತೂವರೆಯಾಯಿತು. ಫೋನು ಬರುತ್ತದೆ ಎಂದು ಖಚಿತವಾಗಿ ಅನಿಸಿ ಮಧ್ಯೆ ಯಾವನಾದರೂ ಆಫೀಸಿಗೆ ತಲೆ ಹಾಕಿ ಡಿಸ್ಟರ್ಬ್ ಮಾಡುತ್ತಾರೆ ಅನಿಸಿ ಎಲ್ಲರಿಗೂ ಕೆಲಸ ನೇಮಿಸಿದರು. ಪೀರನಿಗೆ "ಲೇ... ಮೈನ್ ರೋಡ್‌ನಲ್ಲಿ ಒಂದೂ ವಾಲ್‌ಪೋಸ್ಟ ಕಾಣಸ್ತಾ ಇಲ್ಲ...ಹೋಗ್ಬೋಗು...ಎಲ್ಲಾ ಕಡೆ ಅಂಟಿಸಿ ಬಾ" ಎಂದು ಬೈದು ಅಟ್ಟಿದರು. ಬುಕ್ಕಿಂಗ್ ಕ್ಲರ್ಕ್‌ಗಳನ್ನು ಮನೆಗೆ ಕಳಿಸಿದರು. ಗೇಟ್ ಕೀಪರುಗಳನ್ನು ಗೇಟು ಬಿಟ್ಟು ಕದಲದಂತೆ ...ಬಿಟ್ಟುಹೊರಡಿಸಿದರು. ಹತ್ತೂನಲವತ್ತೈದಕ್ಕೆ ಸರಿಯಾಗಿ ಫೋನು ಕೂಗಿತು. ಗಬಕ್ಕನೆ ಎತ್ತಿಕೊಂಡರು.

ಅದೇ ಕಂಠ ಅದೇ ಮಾಧುರ್ಯ...ಅದೇ ಕೋಮಲತೆ...ಈ ಬಾರಿ 12155 ಮುನಿಸಿನಲ್ಲಿ ಮಾತನಾಡಿದಳು:

"ಹೋಗಿ ಕ್ಯಾಪ್ಟನ್...ನನ್ನನ್ನು ನೀವು ಮಾತಾಡಸ್ಲೇ ಇಲ್ಲ. ನಾನಾದ್ರೂ ಮಾತಾಡಿಸೋಣ ಅಂದ್ರೆ ಡ್ಯಾಡಿ ಜತೇಲೇ ಇದ್ರು...ಕ್ಯಾಪ್ಟನ್ ನನಗೆ ನಿಮ್ಮನ್ನು ಮಾತನಾಡಿಸಬೇಕು...ನನ್ನ ಆಸೆಗಳನ್ನೆಲ್ಲಾ ನಿಮ್ಮತ್ರ ಹೇಳಿಕೊಳ್ಳಬೇಕು ಅಂತ ಎಷ್ಟು ಆಸೆ ಇತ್ತು ಗೊತ್ತಾ ? ಕ್ಯೂನಲ್ಲಿ ನಿಂತಾಗ ನಿಮ್ಮನ್ನು ಮನಸಾರೆ ನೋಡ್ದೆ. ಆ ಸಫಾರಿ ಎಷ್ಟು ಚೆನ್ನಾಗಿ ಸೂಟ್ ಆಗುತ್ತೆ ಗೊತ್ತಾ ? ಧರ್ಮೇಂದ್ರ ಥರಾ ಕಾಣಿಸ್ತಿದ್ರಿ...ಐ ಲವ್ ಯು ಕ್ಯಾಪ್ಟನ್...ಇಂಟರ್‌ವಲ್‌ನಲ್ಲಾದ್ರೂ ಮಾತನಾಡೋಣ ಅಂತ ಪಾಪ್‌ಕಾರ್ನ್ ತರೋ ನೆವದಲ್ಲಿ ಹೊರಗೆ ಬಂದೆ: ನೀವು ಕಾಣಿಸ್ಲಿಲ್ಲ. ಆಫೀಸಿಗೆ ಬರೋದಕ್ಕೆ ಧೈರ್ಯ ಸಾಲಲಿಲ್ಲ... 12155 ಅಂದ್ರೆ ಏನು ಅಂತ ಗೊತ್ತಾಯ್ತಾ ?"

"ಅದು ಇನ್ನೂ...ನನಗೆ..."

"ಏನು ಕ್ಯಾಪ್ಟನ್ ನೀವು...? ಮಿಲ್ಟ್ರೀನಲ್ಲಿದ್ದೋರು...ಅಷ್ಟು ಗೊತ್ತಾಗಲ್ವಾ? ಓ.ಕೆ. ಇನು ಒಂದುವಾರ ಟೈಂ...ಮುಂದಿನ ಭಾನುವಾರ ಸಂಜೆ ಏಳು ಗಂಟೆಗೆ ಪ್ಯಾಲೇಸ್ ಹಿಂದೆ ಕಾಳಿಕಾಂಬ ಗುಡಿ ಇದೆಯಲ್ಲ ... ಅಲ್ಲಿ ಭೇಟಿಯಾಗ್ಬೇಕು...ನಾನು ಆಟೋದಲ್ಲಿ ಬರ್‍ತೀನಿ...ಖಂಡಿತಾ ಬರಬೇಕು...

"ಶೂರ್...ಖಂಡಿತಾ ಬರ್‍ತೀನಿ..."

"ಈವತ್ತಿನ ಥರಾ ಮಾಡಬಾರ್ದು...ಬ್ಲೂ-ಎಲ್ಲೋ ಕಲರ್ ಮಿಡ್ಡಿ ಹಾಕಿರ್‍ತೀನಿ...

ಓ.ಕೆ...

"ನೀವು ಈವತ್ತು ಗೇಟ್ ಹತ್ತಿರ ನಿಂತಿದ್ದ ಯಾವುದೋ ಹುಡುಗೀನ ಮಾತಾಡಿಸೋದಿಕ್ಕೆ ಹೋಗ್ತಿದ್ರಲ್ಲ...ನಾನು ಬಾಲ್ಕನಿ ಹತ್ರ ನಿಂತು ನೋಡ್ತಿದ್ದೆ...ನನಗೆ ಭಯ ಆಗ್ತಿತ್ತು... ನಿಮಗೆಲ್ಲಿ ಆ ಹುಡುಗಿ ಇನ್‌ಸಲ್ಟ್ ಮಾಡ್ತಾಳೋ ಅಂತ ...ಸಂಡೇ ಕನ್‌ಫ್ಯೂಸ್ ಮಾಡ್ಕೋಬೇಡಿ ..

"ಖಂಡಿತಾ ಇಲ್ಲ..."

"ಕ್ಯಾಪ್ಟನ್...ನಂದು ದೊಡ್ಡ ಕತೆ. ಡ್ಯಾಡಿ ತುಂಬಾ ಸ್ಟ್ರಿಕ್ಟ್. ಅಮೇರಿಕಾದಲ್ಲಿರೋ ಸೋದರ ಮಾವನಿಗೆ ಕೊಟ್ಟು ಮದ್ವೆ ಮಾಡಬೇಕು ಅಂತ ಅವರ ಆಸೆ. ಆದ್ರೆ ಕ್ಯಾಪ್ಟನ್ ನಾನು ನಿಮ್ಮನ್ನು ಬಿಟ್ಟು ಬಾಳಲಾರೆ. ಇವರು ಯಾವತ್ತು ನನ್ನನ್ನು ಇಂಡಿಯಾದಿಂದ ಖಾಲಿ ಮಾಡಿಸ್ತಾರೊ ಗೊತ್ತಿಲ್ಲ...ಕ್ಯಾಪ್ಟನ್ ಐ ಲವ್ ಯು...

ನನ್ನಗ್ನೊತ್ತು ...ನಿಮ್ಗೆ ಮದ್ವೆಆಗಿದೆ. ನಿಮ್ಮ ಮಗಳು ನನ್ನ ಕ್ಲಾಸ್‌ಮೇಟ್. ಆದ್ರೂ ಕ್ಯಾಪ್ಟನ್ ನೀವಿಲ್ಲದೆ ನಾನು ಬಾಳಲಾರೆ...ಕ್ಯಾಪ್ಟನ್ ಒಂದು ಕಿಸ್ ಮಾಡ್ತೀನಿ...ಡ್ಯಾಡಿ ಬರ್‍ತಿದಾರೆ. ಫೋನು ಇಡ್ತೀನಿ...ಗುಡ್‌ನೈಟ್..."

ಫೋನಿನಲ್ಲಿ ಹಾದು ಬಂದ ಕಿಸ್‌ಗೆ ಕ್ಯಾಪ್ಟನ್ ತುಟಿ ಒದ್ದೆಯಾಯಿತು. ರೋಮಾಂಚನದಿಂದ ಹೃದಯ ಭರ್ತಿಯಾಗಿ ನರಳಿದರು.

✡

ಮುಂದಿನ ಭಾನುವಾರ ಸಂಜೆ ಏಳು ಗಂಟೆ...

ಅಂದರೆ ಇನ್ನೂ ಕಳೆಯಬೇಕಾದ ಕ್ಷಣಗಳು ಎಷ್ಟೊಂದು ಲಂಬ !

ಐದು ರಾತ್ರಿ... ಐದು ಹಗಲು...

ನೂರ ಹದಿನಾರು ಗಂಟೆಗಳು...

ಆರು ಸಾವಿರದ ಒಂಭೈನೂರ ಅರವತ್ತು ನಿಮಿಷ ಗಳು ! ...ನಲವತ್ತೊಂದು ಸಾವಿರದ ಏಳುನೂರ ಅರವತ್ತು ಸೆಕೆಂಡುಗಳು!

ಕಾಲ ದೀರ್ಘ ಅನಿಸಿದಾಗ ವಿರಹದುರಿ ಹೆಚ್ಚಾ ಯಿತು. ಆ ವೇಳೆಗೆ 12155 ಎಂದರೇನೆಂದು ತಿಳಿಯಬೇಕೆಂದು ಸರ್ವಪ್ರಯತ್ನ ಮಾಡಿದರು. ಗೆಳೆಯನೊಬ್ಬ ಹತ್ತಿರದ ಠಾಣೆಯಲ್ಲಿ ಎಸ್. ಐ. ಆಗಿದ್ದ. ವನ್‌ಟೂವನ್ ಡಬ್ಬಲ್ ಫೈವ್ ಎಂದರೆ ಏನು ಎಂದು ಕೇಳಿದರು. ನಮ್ಮಲ್ಲಿ ಪೇದೆಗಳಿಗೆ ಕೊಡುವುದು ಮಿನಿಮಮ್ ಮೂರೇ ನಂಬರು. ಐದು ನಂಬರು ಬರೋಲ್ಲ ಅಂದರು, ಎಸ್. ಐ. ಕೊನೆಗೆ ಅದು ಅವಳ ಫೋನ್ ನಂಬರ್‍ರಾಗಿರ ಬಹುದೇ ಎಂದು ಭಾವಿಸಿ ಎನ್‌ಕ್ವಯರಿಗೆ ಫೋನ್ ಮಾಡಿ ವಿಚಾರಿಸಿದರು. ಈ ಊರಿನಲ್ಲಿ ಏನಿದ್ದರು ಡಬ್ಬಲ್ ಟೂ ನಿಂದ ಸ್ಟಾರ್ಟಾಗುತ್ತೆ. ಸಿಕ್ಸ್ ಡಿಜಿಟ್ಸ್ ಬರುತ್ತೆ. ನಿಮ್ಮ ನಂಬರಿನ ಫೋನು ಯಾರಿಗೂ ಇಲ್ಲ ಎಂದಳು ಆಪರೇಟರಿಣಿ. ಜನರಲ್ ನಾಲೆಡ್ಜ್ ಬುಕ್ ಹುಡುಕಿದರು. 12155 ಯಾವುದರ ಅಬ್ರಿವೇಶನ್ ಕೂಡಾ ಆಗಿರಲಿಲ್ಲ. ಈ ಹುಡುಕಾಟದಲ್ಲಿ ಭಾನುವಾರ ಸಂಜೆಯ ಏಳು ಗಂಟೆ ಬಂದೇ ಬಿಟ್ಟಿತು.

✡

ಆರೂಮುಕ್ಕಾಲಿಗೇ ಕಾಳಿಕಾಂಬ ಗುಡಿಯ ಹತ್ತಿರ ಬಂದರು. ಸ್ಕೂಟರನ್ನು ದೂರದಲ್ಲಿ ನಿಲ್ಲಿಸಿದರು. ಮೆಚ್ಚಿನ ಸಫಾರಿ ಹಾಕಿದ್ದರು. ಯಾರಾದರೂ ಪರಿಚಿತರು ಕಂಡರು ಅನ್ನಿಸಿದಾಗ ಕಾಳಿಕಾಂಬೆಯ ಮೇಲೆ ಭಕ್ತಿ ನಟಿಸುವರು. ಗುಡಿಗೆ ಪ್ರದಕ್ಷಿಣೆ ಹಾಕಿದರು. ಏಳಾಯಿತು .. ಏಳೂವರೆ ಯಾಯಿತು... ಎಂಟಾಯಿತು. ಕೊನೆಗೆ ಭಕ್ತರೆಲ್ಲ ಹೊರಟು ಹೋದರು... ಪೂಜಾರರೂ ಬೀಗ ಹಾಕಿದರು... 12155 ಬರಲಿಲ್ಲ. ಕ್ಯಾಪ್ಟನ್ ಕಸಿವಿಸಿಗೊಂಡರು. ಹಿಂದೆ ಎಲ್ಲಾದರೂ ನಿಂತಿರ ಬಹುದೆ ಎಂದು ಗುಡಿಯ ಸುತ್ತ ಹುಡುಕಾಡಿದರು. ಸನಿಹದಲ್ಲಿದ್ದ ಹೆದ್ದಾರಿಯಲ್ಲಿ ಮೋಟಾರು ಕಾರು ಗಳು ಭೋರೆಂದು ಹರಿಯುತ್ತಿದ್ದವು. ವಿಳಾಸ ತಪ್ಪಿತೆ ? ಸಮಯ ಸರಿಯಾಗಿ ಕೇಳಿಸಿಕೊಂಡೆನೋ ಇಲ್ಲವೊ? ಬೇರೆ ಕಾಳಿಕಾಂಬ ಗುಡಿ ಇರುಬಹುದೆ? ಎಂತೆಲ್ಲಾ ಯೋಚಿಸುವಷ್ಟರಲ್ಲಿ ಆಟೋ ಒಂದು ಗುಡಿಯ ಕಡೆಗೇ ಬರತೊಡಗಿತು. ಹೃದಯದ ಬಡಿತ ಹೆಚ್ಚಾಯಿತು. ಅಂತೂ 12155 ಕೊನೆಗೂ ಬಂದಳು ಎಂದು ತವಕದಿಂದ ಇಣುಕಿದರು.

ಅದು ಖಾಲಿ ಆಟೋ... ಡ್ರೈವರ್ ಕೆಳಗಿ-ಳಿದ... "ಏನ್ಸಾರ್ ನೀವಿಲ್ಲಿ?" ಅಂದ. ಅವನ ಪರಿಚಯ ಕ್ಯಾಪ್ಟನ್‌ಗಂತೂ ಇರಲಿಲ್ಲ. "ಅದ್ರೆ ನೀವು ನನಗ್ಗೊತ್ತು. ಥೇಟರ್ ಮ್ಯಾನೇಜರ್ ಅಲ್ವಾ ಸಾರ್?... ಇಷ್ಟೊತ್ತಿನಲ್ಲಿ ಇಲ್ಲೆಲ್ಲಾ ನಿಲ್ಲಬಾರ್ದು ಸಾರ್. ನೀವು ಆಗ್ನಿಂದ ಇಲ್ಲೇ ನಿಂತಿದ್ದನ್ನು ನೋಡ್ದೆ. ಆಟೋ ಕಾಯ್ತಿದ್ದೀರಿ ಅಂತ ಬಂದೆ. ಬನ್ನಿ ಸಾರ್ ಥೇಟರ್‌ಗೆ ಬಿಡ್ತೀನಿ..." ಎಂದ "ಇಲ್ಲಿ ಯಾಕೆ ನಿಲ್ಲಬಾರ್ದು?" ಎಂದು ಕೇಳಿದಾಗ "ಇಲ್ಲಿ ಸೂಳೇರ ಕಾಟ ಸಾರ್... ಕೈ ಹಿಡ್ಕೊಬಿಟ್ಟಾ ಕಿತ್ಕೊಂಡು ಹೋಗ್ತಾರೆ. ಭಾಳ ಕೆಟ್ಟ ಜಾಗ" ಎಂದ ಅವನು. ಕ್ಯಾಪ್ಟನ್ "ಇರಲಿ ಹೋಗಪ್ಪಾ... ನಾನು ದೇವಸ್ಥಾನಕ್ಕೆ ಬಂದಿದ್ದೆ.... ಹೋಗ್ತೀನಿ... ನನ್ನ ಸ್ಕೂಟರ್‍ರಿದೆ." ಎಂದರು. ಆಟೋದವನು "ನಿಮ್ಮಂಥಾ ಮರ್ಯಾದಸ್ತರು ನಿಲ್ಲೋ ಜಾಗ ಅಲ್ಲಾ ಸಾರ್..." ಎಂದು ಹೇಳುತ್ತಾ ಹೊರಟ.

ಕ್ಯಾಪ್ಟನ್‌ಗೆ ತುಂಬಾ ಬೇಸರ ಆಯಿತು. ನಿಧಾನ ವಾಗಿ ಬಂದು ಸ್ಕೂಟರ್ ಸ್ಟಾರ್ಟ್ ಮಾಡಿದರು. ಜೀವನದಲ್ಲಿ ಎಲ್ಲವೂ ನಶ್ವರ ಎಂಬ ವೈರಾಗ್ಯ ಮೂಡಿತ್ತು. ನಿಧಾನವಾಗಿ ಸ್ಕೂಟರನ್ನು ಥೇಟರಿನ ಕಡೆಗೆ ಓಡಿಸುತ್ತಿದ್ದರು. ಸರ್ಕಲಿನಲ್ಲಿ ವೀರ ರಸ್ತೆಯ ಮೇಲೆ ಪೋಸ್ಟರು ಹಾಸಿಕೊಂಡು ಅದಕ್ಕೆ ಪೇಸ್ಟು ಸವರುತ್ತಿದ್ದ. ಹತ್ತಿರದಲ್ಲಿ ಸ್ಕೂಟರು ನಿಲ್ಲಿಸಿ ಅವನನ್ನು ಇನ್‌ಸ್ಪೆಕ್ಷನ್ ಮಾಡಲು ಬಂದವರಂತೆ ಸೋಗು ಹಾಕಿ ಸುಮ್ಮನೆ ನೋಡುತ್ತಾ ನಿಂತರು. ವೀರ ಬಾಯಲ್ಲಿ ಸಿಗರೇಟಿನ ತುಂಡು ಸಿಕ್ಕಿಸಿ ಕೊಂಡು ಮೂಗಿನಲ್ಲೇ ಯಾವುದೋ ಹಿಂದಿ ಹಾಡುತ್ತಾ ಚಕಚಕನೆ ಪೇಸ್ಟು ಬಳಿದು ಏಣಿ ಹತ್ತಿ ಆರುಶೀಟಿನ ಪೋಸ್ಟರನ್ನು ಒಂದರ ಪಕ್ಕಕ್ಕೊಂದು ಅಂಟಿಸುತ್ತಿದ್ದ. ಪುಟ್ಟ ಹುಡುಗರು ಯಾವ ಸಿನಿ ಮಾದ್ದು ಅಂತ ನಿಂತು ನೋಡಿ ಓದತೊಡಗಿದರು. ವೀರ "ಲೆ, ಯಾರಾದ್ರೂ ಪೋಸ್ಟರ್ ಹರಿದು ಹಾಕಿದರೆ ಕಾಲು ಮುರೀತೀನಿ..." ಎಂದು ಆ ಹುಡುಗರಿಗೆ ಎಚ್ಚರಿಕೆಯನ್ನೂ ಕೊಟ್ಟ. ಒಮ್ಮೆ ಕೆಮ್ಮಿದರು. ವೀರ ತಿರುಗಿ ನೋಡಿ. ಬೆಚ್ಚಿ.... ಸಿಗರೇಟು ಬಿಸಾಕಿ ಪೇಸ್ಟು ಮೆತ್ತಿದ ಕೈನಿಂದಲೇ ಸೆಲ್ಯೂಟ್ ಹೊಡೆದ. "ಪೀರ...ನಾನು ಎಲ್ಲಾ ಬೀದಿಗಳಲ್ಲೂ ಚೆಕ್ ಮಾಡ್ತಿದ್ದೀನಿ... ಹುಷಾರ್" ಎಂದರು. ಕ್ಯಾಪ್ಟನ್ ಹೊರಟಾಗ ವೀರ "ಸಾರ್... ಇವತ್ತು ಬೇಗನೆ ಅಂಟಿಸಿ ಮನೆಗೆ ಹೋಗ್ತೀನಿ... ನಾಳೆ ಬರ್‍ತೀನಿ... ಹೋಗಲಾ ಸಾರ್...? ಎಂದ. ಕ್ಯಾಪ್ಟನ್ ಮನಸ್ಸು ಕರಗಿ "ಹೋಗು, ನಾಳೆ ಬೇಗನೆ ಬಾ" ಎಂದು ಸೂಚನೆ ಕೊಟ್ಟರು.

ಥೇಟರ್‌ಗೆ ಬಂದು ಕ್ಯಾಂಟೀನಿನಿಂದ ಒಂದು ಕಪ್ ಬಿಸಿ ಕಾಫಿ ತರಿಸಿ ಕುಡಿದು ಟೇಬಲ್ ಮೇಲೆ ತಲೆ ಇಟ್ಟರು. ಫೋನು ಕರೆಯಿತು. ಸಿಟ್ಟಿನಿಂದಲೇ ಎತ್ತಿಕೊಂಡರು.

"ನನಗ್ಗೊತ್ತು ಕ್ಯಾಪ್ಟನ್...ನನ್ನ ಮೇಲೆ ನಿಮಗೆ ಸಿಟ್ಟು ಬಂದಿದೆ... ಬೇಕಾದ್ರೆ ನನ್ನನ್ನು ಕೊಂದು ಬಿಡಿ... ಕ್ಯಾಪ್ಟನ್, ಆದ್ರೆ ನಾನು ನಿಮ್ಮನ್ನು ಪ್ರೀತಿಸ್ತೀನಿ..." ಆ ಧ್ವನಿಯಲ್ಲಿದ್ದ ಗೋಗರೆತ, ದೈನ್ಯತೆಗೆ ಕರಗಿ ಹೋದರು.

"ನೋಡಿ.... ನೀವು ಯಾರು ಅಂತ ಹೇಳಿ. ನಾನು ನಿಮಗೋಸ್ಕರ ಒಂದ್ ಗಂಟೆ ಆ ಕತ್ಲಲ್ಲಿ ಕಾಯ್ತಾ ನಿಂತಿದ್ದೆ... ನಿಮಗೆ ಕೊಡಬೇಕು ಅಂತ ಒಂದು ಮನೋಹರ ರೋಸ್ ತಂದಿದ್ದೆ..."



ಸಮಯಸ್ಫೂರ್ತಿಯಿಂದ ಕ್ಯಾಪ್ಟನ್ ಒಂದು ಸುಳ್ಳನ್ನೂ ಸೇರಿಸಿದರು.

"ನಾನು ತುಂಬಾ ನತದೃಷ್ಟೆ ಕ್ಯಾಪ್ಟನ್.... ಶಾಪಿಂಗ್ ಹೋಗ್ತೀನಿ ಅಂತ ಆರು ಗಂಟೆಗೇ ಹೊರಟೆ. ಡ್ಯಾಡಿಗೆ ಅನುಮಾನ ಬಂತು. ನಡಿ ನಾನೂ ಬರ್ತೀನಿ ಅಂತ ಕಾರು ತಗೊಂಡು ಹೊರಟ್ರು. ಡ್ಯಾಡಿಗೆ ಅನುಮಾನ ಬರಬಾರದು ಅಂತ ಅವರ ಜತೆ ಸುಮ್ನೆ ಶಾಪಿಂಗ್ ಮಾಡ್ದೆ. ಬರುವಾಗ ಕಾಳಿಕಾಂಬ ಗುಡಿ ಮುಂದಿನ ರಸ್ತೇಲೇ ಕರಕೊಂಡು ಬಂದೆ. ನೀವು ದೂರದಲ್ಲಿ ಸ್ಕೂಟರ್ ನಿಲ್ಸಿ ಗುಡಿ ಹತ್ರ ಕಾಯ್ತಾ ನಿಂತಿದ್ರಿ. ನಾನೆಷ್ಟು ಚಡಪಡಿಸ್ದೆ ಗೊತ್ತಾ ಕ್ಯಾಪ್ಟನ್? ಕಾರಿನಲ್ಲಿ ಕುಳಿತೇ ಡ್ಯಾಡಿಗೆ ಕಾಣದ ಹಾಗೆ ವಿಶ್ ಮಾಡ್ದೆ... ನೀವು ರಿಕ್ಷಾಗಳನ್ನೇ ಗಮನಿಸ್ತಿದ್ರಿ... ಪ್ಲೀಸ್ ಎಕ್ಸ್‌ಕ್ಯೂಸ್‌ಮಿ..."

"ನೀವು ಈಗ್ಲಾದ್ರೂ ನಿಮ್ಮ ಹೆಸರು "ಹೇಳ್ತೀರಾ?"

"ಕ್ಯಾಪ್ಟನ್, 'ನೀವೂ' ಅನ್ಬೇಡಿ.... 'ನೀನು' ಅನ್ನಿ ಸಾಕು...ಕೊನೆಗೂ ನನ್ನ ಹೆಸರು ಹೊಳೆಯ-ಲಿಲ್ಲವಾ?

"ಇಲ್ಲ ನಾನು ಸೋತೆ."

"ಅದಕ್ಕೆ ದಂಡ?"

"ಏನು ಬೇಕು ಹೇಳು"

"ಹಂಡ್ರೆಡ್ ಕಿಸಸ್."

ಕ್ಯಾಪ್ಟನ್‌ಗೆ ಹೃದಯಾಘಾತವಾದಷ್ಟು ಸಂತೋಷವಾಯ್ತು. ಫೋನಿಗೆ ಮುತ್ತಿಟ್ಟರು. ಅವಳೂ ಮುತ್ತಿಟ್ಟಳು. ಇಬ್ಬರ ಈ ಆಟದಲ್ಲಿ ಎರಡೂ ಕಡೆಯ ರಿಸೀವರುಗಳು ಎಂಜಲಿನಿಂದ ತೇವ-ಗೊಂಡವು. ತಾನು ಅವಳನ್ನೇ ತಬ್ಬಿ ಹಿಡಿದಿ-ದ್ದೇನೆ ಎಂದು ಭ್ರಮಿಸಿ ವಿಲವಿಲಿ ಒದ್ದಾಡಿದರು.

"ಕ್ಯಾಪ್ಟನ್ ಯೂ ಆರ್ ಟೂ ಸ್ವೀಟ್"

"ನೀನೂ ಅಷ್ಟೆ."

"ಎಂಥಾ ಸಂದರ್ಭದಲ್ಲೂ ನನ್ನ ಕೈ ಬಿಡಲ್ಲ ತಾನೆ?"

"ಖಂಡಿತಾ ಇಲ್ಲ... ನಿನ್ನ ಬಿಟ್ಟು ಬದುಕೋ ಶಕ್ತಿ ನನಗೂ ಇಲ್ಲ."

"ನನ್ನ ಹೆಸರು ಏನು ಅಂತ ನೀವೇ ಕಂಡು-ಹಿಡೀಬೇಕು"

"ನನ್ಕೈಲಿ ಆಗಲ್ಲ...ಪ್ಲೀಸ್ ಹೇಳು...ನಿನ್ನ ಹೆಸರು...ನಿನ್ನ ತಂದೆ ಹೆಸರು.... ನನಗೆ ನಿನ್ನ ಫೋಟೋ ಬೇಕು..."

"ಮೊದಲು 12155 ಅಂದ್ರೆ ಏನೂಂತ ಹೇಳಬೇಕು. ನೀವು ಹೇಳಿದ ಮೇಲೆ ನಾನು ನಿಮಗೆ ಫೋಟೋ ಕೊಡೋದು...ಅಯ್ಯಯ್ಯೋ ಡ್ಯಾಡಿ ಬರ್‍ತಾ ಇದ್ದಾರೆ..."

...ಟಕ್ ಎಂದು ಫೋನಿಟ್ಟ ಸದ್ದು.

ಗಾಂಜಾ. ರಮ್ಮು ಎಲ್ಲವನ್ನೂ ಒಟ್ಟಿಗೇ ಸೇವಿಸಿದ ಮತ್ತಿನಲ್ಲಿ ಕ್ಯಾಪ್ಟನ್ ಒಂದಕ್ಕೆ ಒರಗಿ ಕಣ್ಣು ಮುಚ್ಚಿದರು. ಕಾಯುತ್ತ ನಿಂತುದಕ್ಕೆ ಕಾಣಿಸಿಕೊಂಡಿದ್ದ ಕಾಲುನೋವೆಲ್ಲಾ ಮಂಗ-ಮಾಯವಾಯಿತು. ಲೋಕವೇ ಪ್ರಳಯವಾದರೂ ನಾನು ಅವಳ ಕೈ ಬಿಡುವುದಿಲ್ಲ. ಎಂಬ ತೀರ್ಮಾ-ನಕ್ಕೆ ಬಂದರು. ಹಾಡೊಂದು ಸಿಳ್ಳೆಯ ರೂಪದಲ್ಲಿ ಕಾಣಿಸಿಕೊಂಡಿತು. ಸಂತೋಷ ಚಿತ್ತರಾಗಿ ಮನೆಯ ಕಡೆ ಹೊರಟರು.

✡

ಕ್ಯಾಪ್ಟನ್ ಪ್ರೇಮ ವ್ಯವಹಾರದಲ್ಲಿ ಸಿಕ್ಕಿ ಬಿದ್ದ ಮೇಲೆ ಸ್ಟ್ರಿಕ್ಟು ಕಡಿಮೆಯಾಯ್ತು. ಸಾತ್ವಿಕರಾದರು. ಲಾಠಿ ಪ್ರಯೋಗಿಸುವುದನ್ನು ಕಡಿಮೆ ಮಾಡಿದರು. ಶಿವಶಂಕರ ಚಾಡಿ ಹೇಳಿದರೆ ಅವನಿಗೆ ವಿವೇಕ ಹೇಳಿ ಕಳುಹಿಸುತ್ತಿದ್ದರು. ವೀರನಿಗೆ ಮೂರು ದಿನ ರಜೆಯೂ ಸಿಕ್ಕಿತು. ಗೇಟ್ ಕೀಪರುಗಳು ಸರಿಯಾಗಿ ಸೆಲ್ಯೂಟ್ ಹೊಡೆಯದಿದ್ದರೂ ಅಂಥ ಬೇಸರವೇನೂ ಆಗುತ್ತಿರಲಿಲ್ಲ. ಪ್ರೇಮದ ಕುಲುಮೆಗೆ ಬಿದ್ದು ಅವರ ಆಟಾಟೋಪಗಳು ದಹನಗೊಂಡಿದ್ದವು. ಮಾಲೀಕರಿಂದ, ಹಿಡಿದು ಅವರ ಹೆಂಡತಿ, ಮಗಳು ಎಲ್ಲರಿಗೂ ಆಶ್ಚರ್ಯವಾಗಿತ್ತು. ಆದರೆ 12155 ಪ್ರಕರಣ ಯಾರಿಗೂ ತಿಳಿಯಲಿಲ್ಲ.


ಒಂದು ದಿನ ಕ್ರ್ಯೂ ಕಂಟ್ರೋಲ್ ಮಾಡುತ್ತಾ ನಿಂತ ಕ್ಯಾಪ್ಟನ್ ಶೋ ಶುರುವಾದ ಮೇಲೆ ಆಫೀಸಿಗೆ ಬಂದಾಗ ಟೇಬಲ್ ಮೇಲೆ ಗುಲಾಬಿಯ ಗುಚ್ಛ ನಗುನಗುತ್ತಾ ಕುಳಿತಿತ್ತು. **CAPTAIN I LOVE YOU—12155** ಎಂದು ಬರೆದ ಚೀಟಿ ಸಿಕ್ಕಿಸಿತ್ತು. ಬಾಗಿಲು ಭದ್ರಪಡಿಸಿ ಗುಚ್ಛವನ್ನು ಅಪ್ಪಿಕೊಂಡರು. ಅದನ್ನು ಯಾರಿಗೂ ಕಾಣದಂತೆ ಬೀರುವಿನ ತಳಭಾಗದಲ್ಲಿಟ್ಟು ಮೇಲೆ ಹಳೆಯ ವಾಲ್‌ಪೋಸ್ಟರುಗಳನ್ನು ಮುಚ್ಚಿದರು.

ಆ ಹುಡುಗಿ ರಾತ್ರಿ ತಪ್ಪದೆ ಫೋನ್ ಮಾಡುವಳು. ಕೃತಕವಲ್ಲದ ಬಾಲಿಶ ಧ್ವನಿ...ಅಸಹಾಯಕತೆ, ತೊಂದರೆಗೆ ಸಿಕ್ಕಿಕೊಂಡವಳಂತೆ ಆರ್ತತೆ, ಪ್ರೀತಿ, ಮಾಧುರ್ಯ ಎಲ್ಲವೂ ಇದೆ. ಹೆಸರು ಹೇಳಲು ಸಂಕೋಚ ಪಡುತ್ತಾಳೆ. ಕ್ಯಾಪ್ಟನ್ ಈಗಾಗಲೇ ಗುಡ್ಡದ ಹತ್ತಿರ ಒಂದು ಗಂಟೆ, ಪಾರ್ಕಿನ ಬಳಿ ಒಂದು ಗಂಟೆ ಕಾದು ಬಂದಿದ್ದಾರೆ. ಭೇಟಿಯಾಗದಿದ್ದರೂ ಪ್ರೇಮ ಮಾತ್ರ ಅಳಿದಿಲ್ಲ. "ಕ್ಯಾಪ್ಟನ್...ನಮ್ಮ ತಂದೆ ನನ್ನನ್ನು ಫಾರಿನ್‌ಗೆ ಕಳಿಸಲು ಯೋಚಿಸ್ತಿದ್ದಾರೆ. ಅದು ಅನಿವಾರ್ಯವಾದರೆ ಈ ನನ್ನ ದೇಹಾನ ನಿಮಗೆ ಸಮರ್ಪಿಸಿ ಹೋಗ್ತೀನಿ", "ಕ್ಯಾಪ್ಟನ್ ನೀವು ನನ್ನ ಮನಸ್ಸು ಕದ್ದು ಬಿಟ್ರಿ...ನಿಮಗೆ ಮದ್ವೆ ಆಗಿದೆ ಅಂತ ಗೊತ್ತು ...ನಿಮ್ಮ ಮನೇಲಿ ಕಸ ಗುಡಿಸೋ ಕೆಲ್ಸ ಕೊಡಿ ಸಾಕು", "ಕ್ಯಾಪ್ಟನ್ ನೀವು ನನ್ನ ಕೈ ಬಿಟ್ರೆ ಆತ್ಮಹತ್ಯೆ ಮಾಡಿಕೊಳ್ತೀನಿ".

ಒನ್ ಟೂ ಒನ್ ಡಬ್ಬಲ್‌ಫೈವ್ ಕ್ಯಾಪ್ಟನ್‌ರ ಮೈ ಮನಸ್ಸುಗಳನ್ನೆಲ್ಲಾ ಆಕ್ರಮಿಸಿದಳು. ಕ್ಯಾಪ್ಟನ್‌ರವರಲ್ಲಾದ ಮಾರ್ಪಾಡು ಥೇಟರಿನ ಹುಡುಗರಿಗೆಲ್ಲಾ ಅಚ್ಚರಿ ತಂದಿತ್ತು. ಅಂದು ಕ್ಯಾಂಟೀನಿನಲ್ಲಿ ಅವರೆಲ್ಲಾ ಕೂಡಿ ಚರ್ಚಿಸುತ್ತಿದ್ದರು. ಮ್ಯಾನೇಜರ್ ಬಂದು ನಿಂತದ್ದೇ ಯಾರಿಗೂ ಗೊತ್ತಿಲ್ಲ. ವೀರ ಶೋಲೆಯ ಗಬ್ಬರ್‌ಸಿಂಗ್ ಡೈಲಾಗ್ ಹೊಡೆದು "ಯೇ ದುನಿಯಾ ಮೇ ಕೋಯೀ ದೀವಾರ್ ನಹೀ ಗಬ್ಬರ್ ಕು ಬೀಸ್ ಸಾಲ್ ರಕ್ ಸಕೇ" ಎಂದು ಅಭಿನಯಿಸಿ ನಗಿಸುತ್ತಿದ್ದ. "ಸಂಜೀವ್‌ಕುಮಾರ್‌ದು ಮಾಡೋ" ಎಂದು ಹುಡುಗರು ಹುರಿದುಂಬಿಸುತ್ತಿದ್ದರು. ಕ್ಯಾಪ್ಟನ್ ಅಲ್ಲೇ ನಿಂತಿದ್ದು ಕಂಡು ಎಲ್ಲರೂ ಬೆಚ್ಚಿದರು. ಆದರೆ ಕ್ಯಾಪ್ಟನ್ ಸಿಟ್ಟುಗೊಳ್ಳಲಿಲ್ಲ. ನಗುತ್ತಾ ನೋಡುತ್ತಾ ನಿಂತರು. ಸಂದರ್ಭವನ್ನು ಉಪಯೋಗಿಸಿಕೊಂಡು ಶಿವಶಂಕರ ಹೇಳಿದ :

"ಈ ವೀರ ಬಡ್ಡೀಮಗ ಸಾಮಾನ್ಯದವನಲ್ಲ ಸಾರ್... ಸಾಬರಾಗಿದ್ರೂ ಹರಿಕಥೆ ಮಾಡ್ತಾನೆ. ಆರ್ಕೆಸ್ಟ್ರಾದಲ್ಲಿ ಹಾಡ್ತಾನೆ. ಸಖತ್ ಜೋಕ್ಸ್ ಹೇಳ್ತಾನೆ..." ಕ್ಯಾಪ್ಟನ್‌ಗೆ ಏನೋ ಅನ್ನಿಸಿ ಕಣ್ಸನ್ನೆಯಿಂದಲೇ ಅವನನ್ನು ಕರೆದು ಆಫೀಸಿಗೆ ಬಂದರು. ವೀರ ಅಳುಕುತ್ತಾ ಹೋದ. ಖುರ್ಚಿ ಕೊಟ್ಟು ಕೂರಿಸಿದರು. ವೀರನಿಗೆ ವಿಪರೀತ ಆಶ್ಚರ್ಯ.

"ನನಗೊಂದು ಜೋಕ್ ಹೇಳ್ತೀಯಾ?...



"ಏ...ಇಲ್ಲ...ಸಾರ್...ಬರಲ್ಲ . ಸುಮ್ನ ಅವಂ ಮುಂದೆ ತಮಾಷೆಗೆ..."

"ಇರಲಿ...ನಾನೊಂದು ಒಗಟು ಕೇಳ್ತೀನಿ ....ಹೇಳ್ತೀಯಾ?"

"ನನಗೆಲ್ಲಿ ಬರುತ್ತೆ....ಸಾರ್....ಏಳನೇಕ್ಲಾಸ್ಸು ಓದಿದ್ದು.. ಪ್ಲೀ ಪ್ಲೀ..."

"...ಇರಲಿ ಟ್ರೈ ಮಾಡು...ನೀನು ಈ ಒಗಟು ಬಿಡಿಸಿದ್ರೆ ಬುಕ್ಕಿಂಗ್ ಕ್ಲರ್ಕ್ ಮಾಡ್ತೀನಿ."

ಪೀರನ ಕಣ್ಣು ಅರಳಿತು. ಆ ಪ್ರಮೋಶನ್ ಬಲು ದಿನಗಳ ಕನಸು! "ಪಿಕ್ಚರ್ ವಿಷ್ಯ ಎಷ್ಟು ಬೇಕಾದ್ರೂ ಕೇಳಿ ಸಾರ್. ಇಪ್ಪತ್ತು ವರ್ಷದ ಹಿಂದೆ ಹೇಮಾಮಾಲಿನಿ, ಮಮ್ತಾಜ್ ಉಟ್ಟ ಸೀರೆ ಕಲರ ಬೇಕಾದ್ರೆ ಹೇಳ್ತೀನೆ...ಮೀನಾ ಕುಮಾರಿ ಸಿನಿಮಾದ ಕಥೆ ಬೇಕಾದ್ರೂ ಹೇಳ್ತೀನಿ"

"ಅದಲ್ಲ, ಇದು ಗಣಿತ..."

"ನನಗೆ ಲೆಕ್ಕ ಬರಲ್ಲ ಸಾರ್...ಹೇಳಿ, ಟ್ರೈ ಮಾಡ್ತೀನಿ..." ಕ್ಯಾಪ್ಟನ್ ಮೆಲ್ಲಗೆ ಬಾಯಿಬಿಟ್ಟರು,

ಪೀರ...ನಿನಗೆ ಒನ್ ಟೂ ಒನ್ ಡಬಲ್‌ಫೈವ್ ಅಂದ್ರೆ ಏನು ಗೊತ್ತಾ?" ಕೂಡಲೇ ಪೀರ ಏನೋ ಯೋಚಿಸತೊಡಗಿ

ಸರ್...ಒಂದಿಷ್ಟು ಸುಮ್ಮನ ಇರಿ...ನನಗೆ ಏನೇನೋ ನೆನಪಾಗ್ತಾ ಇದೆ...

ನೆನಪು ಮಾಡ್ಕೊ...ಬೇಗ...ಪೀರನ ಮುಖದಲ್ಲಿ ನಾಚಿಕೆ ಸುಳಿಯಿತು...

"ಸಾರ್...ಇದು ಲವ್‌ಗೆ ಸಂಬಂಧ-ಪಟ್ಟಿದ್ದಾ?" ಈಗ ಕ್ಯಾಪ್ಟನ್‌ಗೂ ನಾಚಿಕೆ!

ಹೌದು ...ಪರವಾಗಿಲ್ಲ ಹೇಳು...

"ಒಂದ್ಸಾರಿ ನಾನು ಆಫೀಸ್ ಕಸ ಹೊಡೀವಾಗ ಒಂದು ಫೋನ್ ಬಂದಿತ್ತು...ನೀವಿರ್‍ಲಿಲ್ಲ ಸಾರ್...ಯಾರೋ ಹುಡುಗಿ ಫೋನ್ ಮಾಡಿದ್ಲು. ಕ್ಯಾಪ್ಟನ್ ಬೇಕು ಅಂದ್ಲು. ಅವರಿಲ್ಲ ಏನಾದ್ರೂ ಹೇಳಬೇಕಾ ಅಂದೆ. ಏನಿಲ್ಲ. ವನ್ ಟೂ ಡಬ್ಬಲ್ ಫೈವ್ ಫೋನ್ ಮಾಡಿದ್ಲು ಅನ್ನಿ. ಗೊತ್ತಾಗುತ್ತೆ ಅಂತ ಫೋನ್ ಇಟ್ಟು ಬಿಟ್ಟಳು...

"ಅದನ್ನು ಬೇರೆ ಯಾರತ್ರಾನೂ ಹೇಳಲಿಲ್ಲ ತಾನೇ?"

ಖಂಡಿತಾ ಇಲ್ಲ ಸಾರ್..."

"ಚೆನ್ನಾಗಿ ಯೋಚ್ಸಿ ಮಾಡಿ ಹೇಳು... ಹಾಗಂದ್ರೆ ಏನು?" ಕ್ಯಾಪ್ಟನ್ ಪುಸಲಾಯಿಸಿದರು.

ಪೀರನಿಗೆ ಥಕ್ಕನೆ ಅರ್ಥ ಹೊಳೆದಂತಾಗಿ "ಗೊತ್ತಾಯ್ತು ಸಾರ್. ಗೊತ್ತಾಯ್ತು" ಎಂದ. ಕ್ಯಾಪ್ಟನ್ ತವಕದಿಂದ "ಏನು?" ಅಂದರು,

"ಅಯ್ಯೋ ಅದು ಹಳೇ ಜೋಕ್ ಸಾರ್. ಹತ್ತು ವರ್ಷದ ಹಿಂದೆ ಇಂಗ್ಲೀಷ್ ಸಿನಿಮಾದಲ್ಲೇ ಉಪಯೋಗಿಸಿಬಿಟ್ಟಿದ್ದಾರೆ. ಒನ್ ಟೂ ಒನ್ ಡಬ್ಬಲ್ ಫೈವ್ ಪ್ರೇಮಿಗಳ ಸಿಂಬಲ್ ಸಾರ್. ಹಾಗಂದ್ರೆ 'ಕಿಸ್' ಅಂತ ಅರ್ಥ ಸಾರ್..." ಕ್ಯಾಪ್ಟನ್‌ಗೆ ಈಗಲೂ ಅರ್ಥವಾಗಲಿಲ್ಲ. ಪೀರ ಬರೆದು ತೋರಿಸಿದ.

"ನೋಡಿ ಸಾರ್, ಮೊದಲಿನ ಅಕ್ಷರ 1 ಮತ್ತು 2 ಕೂಡಿಸಿ ಬರದರೆ "K" ಆಗುತ್ತೆ ಎರಡನೆಯದು 1 ಆಗುತ್ತೆ... ಡಬ್ಬಲ್ ಫೈವ್‌ನ್ನು ಡಬ್ಬಲ್ ಎಸ್ ಮಾಡಿಕೊಳ್ಳಿ. ಆಗ KISS ಆಗುತ್ತೆ!"

ಪೀರ ಬುಕ್ಕಿಂಗ್ ಕ್ಲರ್ಕ್ ಆದ.

ಕ್ಯಾಪ್ಟನ್‌ದು ಮಾತು ಅಂದ ಮೇಲೆ ಮಾತು.

✡

ಆದರೆ...

ಆ ರಾತ್ರಿ ಅವಳಿಂದ ಫೋನ್ ಸಂದೇಶ ಬರಲಿಲ್ಲ.. ತಮ್ಮ ಪತ್ತೇದಾರಿಕೆಯನ್ನು ವಿವರಿಸಿ, ಖುಷಿಪಟ್ಟು ಮಿಲನಕ್ಕೆ ಅಣಿಯಾಗಬೇಕೆಂದಿದ್ದ ಕ್ಯಾಪ್ಟನ್‌ಗೆ ಆ ರಾತ್ರಿ ನಿರಾಸೆಯಾಯಿತು. ತಾನೇ ಕಂಡುಹಿಡಿದೆ ಎಂದು ಕೊಚ್ಚಿಕೊಳ್ಳಲು ಯೋಚಿಸಿದರು. ಈಗ ಪೀರನನ್ನು ಜೊತೆಯಲ್ಲಿಯೇ ಇಟ್ಟುಕೊಳ್ಳುವರು. ಆದರೆ ಎರಡು ದಿನ ಮೂರು ದಿನವಾದರೂ ಅವಳಿಂದ ಕರೆ ಬರಲಿಲ್ಲ.

ಮರುದಿನದ ಲೋಕಲ್ ಪತ್ರಿಕೆಯೊಂದು ದಪ್ಪಕ್ಷರಗಳಲ್ಲಿ ಮೂಡಿದ್ದ ವರದಿ ಓದಿ ಕ್ಯಾಪ್ಟನ್ ಕುಸಿದು ಬಿದ್ದರು. "ನಗರದ ಭಾರೀ ಶ್ರೀಮಂತರ ಮಗಳು ನಿದ್ರೆಗುಳಿಗೆಗಳನ್ನು ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಬಲವಂತವಾಗಿ ಆಕೆಯ ಮದುವೆಯನ್ನು ನಡೆಸಲು ಯೋಜಿಸಲಾಗಿತ್ತು ಎನ್ನಲಾಗಿದೆ. ಆದರೆ ಆಕೆ ವಿವಾಹಿತ ಪುರುಷರೊಬ್ಬರನ್ನು ಪ್ರೀತಿಸುತ್ತಿದ್ದಳು. ಇನ್ನೂ ಪಿ ಯು ಸಿ ಕಲಿಯುತ್ತಿದ್ದ ಈ ಬಾಲಿಕೆಯ ಸಾವು ನಿಗೂಢವಾಗಿದೆ. ವಿದೇಶದಲ್ಲಿದ್ದ ವರನಿಗೆ ಮದುವೆ ಮಾಡುವ ಪ್ರಯತ್ನವನ್ನು ವಿರೋಧಿಸಿ ಆತ್ಮಹತ್ಯೆ ಮಾಡಿಕೊಂಡಿರಬಹುದೆಂದು ಊಹಿಸಲಾಗಿದೆ. ಆಕೆ ಪ್ರೀತಿಸುತ್ತಿದ್ದ ವಿವಾಹಿತ ಪುರುಷ ಯಾರು ? ಎಂಬುದನ್ನು ತನಿಖೆ ಮಾಡಲಾಗುತ್ತಿದೆ."

ಕ್ಯಾಪ್ಟನ್‌ಗೆ ಛಳಿಜ್ವರ ಬಂತು. ರಕ್ತ ಬತ್ತಿ ಹೋದಂತಾಗಿ ನಿಶ್ಶಕ್ತಿಯಿಂದ ಬಳಲಿ ಹಾಸಿಗೆ ಹಿಡಿದರು. ಅವರಿಗೆ ಏನಾಗಿದೆ ಎಂದು ಯಾರಿಗೂ ತಿಳಿಯಲಿಲ್ಲ. ಥೇಟರ್‌ಗೆ ಹೋಗಲು ಶಕ್ತಿ ಸಾಲದೆ ಮನೆಯಲ್ಲೇ ಮಲಗಿದರು. ಮಾಲೀಕರು ಬಂದು ಅವರನ್ನು ನರ್ಸಿಂಗ್ ಹೋಂಗೆ ಸೇರಿಸಿ ಒಂದು ವಾರ ಬೆಡ್‌ರೆಸ್ಟ್‌ಗೆ ಅವಕಾಶಕೊಟ್ಟರು. ತಮ್ಮ ಜೀವಿತದಲ್ಲಿ ಹಿಂದೆಂದೂ ಇಂಥ ದುರವಸ್ಥೆಗೆ ಸಿಕ್ಕಿಕೊಂಡಿದ್ದಿಲ್ಲ... ತನ್ನಿಂದ ತರುಣಿಯ ಸಾವು ಉಂಟಾಯ್ತು... ನಾನು ಹೇಗಾದರೂ ಮಾತನಾಡಿಸಿ ಅವಳಿಗೆ ಧೈರ್ಯ ತುಂಬಬೇಕಿತ್ತು. ಆದರೆ ನಾನೇ ವಿಳಂಬ ಮಾಡಿ ಅವಳನ್ನು ಕೊಂದೆ. ಪೋಲೀಸರು ತನಿಖೆ ಮಾಡುತ್ತಾರೆ. ಸುದ್ದಿ ಊರಿಗೆಲ್ಲಾ ಹರಡುತ್ತದೆ. ಹೇಗೆ ತಲೆ ಎತ್ತಿ ಬಾಳುವುದು ?

ಮೂರು ದಿನಕ್ಕೇ ಕೃಶವಾಗಿಬಿಟ್ಟರು. "ಏನಿಲ್ಲ ...ಅಸಿಡಿಟಿ ಆಗಿದಾರೆ" ಎಂದು ಡಾಕ್ಟರ್ ಧೈರ್ಯ ಕೊಟ್ಟರೂ ಕ್ಯಾಪ್ಟನ್‌ರ ಹೆಂಡತಿ, ಮಗಳು ಆತಂಕದಿಂದ ಕೊರಗಿದರು. ಗೆಳೆಯರು, ಥೇಟರ್ ಮಾಲೀಕರು ಬಂದು ನೋಡಿಕೊಂಡು ಹೋದರು. ಹೇಗಿದ್ದ ಕ್ಯಾಪ್ಟನ್ ಹೇಗಾದರು ಎಂದು ಸಿಂಪಥಿಗಳ ಸುರಿಮಳೆಯಾಯಿತು.

ಕ್ಯಾಪ್ಟನ್ ಇದೀಗ ಪಶ್ಚಾತ್ತಾಪಪಡುವ ಮೈವೆತ್ತ ಮೂರ್ತಿಯಾಗಿದ್ದರು. [illegible] ಕಾಣದ ಲೋಕ ಸೇರಿದ ಪ್ರಿಯತಮೆಯನ್ನು ನೆನೆದು ಹಲುಬುವರು. "ನಿಮ್ಮ ಮನಸ್ಸಿನಲ್ಲಿ ಏನಿದೆ ಹೇಳಿ" ಎಂದು ಯಾರು ಎಷ್ಟು ಪೀಡಿಸಿದರೂ ಬಾಯಿ ಬಿಡಲಿಲ್ಲ. ಮುಂದೇನಾಗುತ್ತದೋ ಎಂಬ ಭಯದಲ್ಲಿ ನರಳಿದರು.

ನರ್ಸಿಂಗ ಹೋಂನಲ್ಲಿ ಒಬ್ಬರೇ ಮಲಗಿದ್ದರು. ಪೀರ ಕಾಣಿಸಿಕೊಂಡ. ಅವನ ಕಣ್ಣಲ್ಲೂ ನೀರು. ಅವನನ್ನು ಹತ್ತಿರ ಕರೆದು ಕೈ ಹಿಡಿದು ಕೊರಳು ತಬ್ಬಿಕೊಂಡರು. ಅತ್ತೂ ಬಿಟ್ಟರು. ತನ್ನ ಬಗ್ಗೆ ಕ್ಯಾಪ್ಟನ್‌ಗಿರುವ ಪ್ರೀತಿ ಕಂಡು ಅವನಿಗೂ ಮನಸ್ಸು ತೇವಗೊಂಡಿತು. ಹೇಗೆ ನಡೀತಿದೆ ಥೇಟರು? ಎಲ್ಲಾ ಚೆನ್ನಾಗಿದ್ದೀರಾ ? ಎಂದಾಗ ಪೀರ "ನಮ್ದಿರ್ಲಿ ಸಾರ್... ನೀವೇನ್ಸಾರ್ ಹೀಗಾಗ್ಬಿಟ್ರಿ... ಏನೋ ಜ್ವರ ಬಂದೈತೆ. ವಾಸಿಯಾಗುತ್ತೆ ಅಂತ ನಾನು ಸುಮ್ನಿದ್ದೆ. ವಾರಗಟ್ಟಲೆ ನರ್ಸಿಂಗ್ ಹೋಂನಲ್ಲಿ ಯಾಕಿದ್ದೀರಿ.... ? " ಪೀರನ ಮಾತಿಗೆ ಅವರ ಕಣ್ಣಿನ ಅಣೆಕಟ್ಟು ಒಡೆಯಿತು. ಅವನಿಗೆ ಎಲ್ಲವೂ ಗೊತ್ತಿದೆ. ಮುಚ್ಚಿಡಲು ಸಾಧ್ಯವೆ ? ತಲೆದಿಂಬಿನ ಅಡಿಯಲ್ಲಿದ್ದ ಲೋಕಲ್ ಪೇಪರ್ ತೆಗೆದು ತೋರಿಸಿ "ಕೊನೆಗೂ 12155 ಹೋಗಿ ಬಿಟ್ಟಳು. " ಎಂದು ಕಣ್ಣೀರಿಟ್ಟರು... ಪೀರನಿಗೆ ಏನು ಹೇಳಬೇಕೋ ತಿಳಿಯಲಿಲ್ಲ.

ಇದ್ದಕ್ಕಿದ್ದ ಹಾಗೆ ಕ್ಯಾಪ್ಟನ್‌ಗಿಂತ ಜೋರಾಗಿ ಅಳತೊಡಗಿದ. ಬೆಡ್‌ಶೀಟ್ ಮೇಲಿದ್ದ ಅವರ ಕಾಲುಗಳನ್ನು ಹಿಡಿದು ಗೋಳೋ ಅನ್ನ ತೊಡಗಿದ. ಅವನನ್ನು ಸಮಾಧಾನ ಪಡಿಸುವ ಹೊಣೆ ಕ್ಯಾಪ್ಟನ್ ಮೇಲೇ ಬಿತ್ತು. ಪೀರ ಅತ್ತುಕೊಂಡು ಹೇಳದ ..."ನಿಮ್ಮ ದಮ್ಮಯ್ಯ. ನನ್ನ ಕ್ಷಮಿಸಿಬಿಡಿ ಸಾರ್ ...ಆ ಪೇಪರ್‌ನಲ್ಲಿ ಬಂದಿರೋ ಹುಡುಗೀನೇ ಬೇರೆ. ನಿಜವಾದ 12155 ನೇ ಬೇರೆ." ಕ್ಯಾಪ್ಟನ್ ದಿಗ್ಗನೆ ಎದ್ದು ಕುಳಿತರು... "ಹೌದು ಸಾರ್... ನೀವು ತುಂಬಾ ಸ್ಟ್ರಿಕ್ಟ್ ಆಗಿದ್ದಿರಲ್ಲ ? ಆಟ ಆಡಿಸಬೇಕು ಅಂತ ನಾನೇ ನನ್ನ ಫ್ರೆಂಡ್ ಮನೆಯಿಂದ ಫೋನ್ ಮಾಡ್ತಿದ್ದೆ. ನಾನು ಆರ್ಕೆಸ್ಟ್ರಾದಲ್ಲೂ ಲೇಡೀಸ್ ವಾಯ್ಸ್‌ನಲ್ಲಿ ಹಾಡ್ತೀನಿ... ತಮಾಷೆಮಾಡಬೇಕು ಅಂತ ಹೋಗಿ ಏನೇನೋ ಆಯ್ತು... ನನಗೆ ಅನ್ನ ಕೊಟ್ಟ ಧಣಿ ನೀವು... ನನ್ನ ಕೆಲ್ಸದಿಂದ ತಗೀಬೇಡಿ ...ಇನ್ಮೇಲೆ ಹಾಗೆಲ್ಲ ಮಾಡೊಲ್ಲ"

ಕ್ಯಾಪ್ಟನ್ ಸುತ್ತ ಲೋಕವೆಲ್ಲ ತಿರುಗಿತು. "ಹೌದೇನೋ ಪೀರ" ಎಂದು ಮತ್ತೊಮ್ಮೆ ಖಾತರಿಪಡಿಸಿಕೊಂಡರು. ಆತ್ಮಹತ್ಯೆ ಮಾಡಿಕೊಂಡವಳೇ ಬೇರೆ... ನಿಜವಾದ ವನ್ ಟೂವನ್ ಡಬ್ಬಲ್ ಫೈವ್ ಪೀರನೆ ! ಸಿಟ್ಟು ಉಕ್ಕಿ ಬಂತು. ಅದರೂ ತಡೆದುಕೊಂಡು "ಹಾಳಾಗಿ ಹೋಗ್ಲಿ... ಇದನ್ನು ಯಾರತ್ರಾನೂ ಹೇಳಬೇಡ ...ನಾಳೆಯಿಂದ ಕೆಲಸಕ್ಕೆ [illegible]... ಇನ್ನು ಮೇಲೆ ನೀನು ಆಪರೇಟರ್ ಅಸಿಸ್ಟೆಂಟ್"ಎಂದರು.

ನಂತರ ದಿನಗಳಲ್ಲಿ ಕ್ಯಾಪ್ಟನ್‌ರ ಬೂಟಿನ ಸದ್ದುಗಳು ಥೇಟರಿನ ಮೊಸಾಯಿಕ್ ಫ್ಲೋರಿನ ಮೇಲೆ ಅಷ್ಟು ಸ್ಟ್ರಾಂಗ್ ಆಗಿ ಕೇಳಿಸುತ್ತಿರಲಿಲ್ಲ. ●

ಹಕ್ಕಿಗಳಿರದ ನಾಡಿಲ್ಲ



"ನಿಮಗೆಲ್ಲ
ಪುನರ್ ಜನ್ಮ
ಸಿಗುವಂತಾದರೆ
ನೀವೆಲ್ಲ
ಮುಂದಿನ
ಜನ್ಮದಲ್ಲಿ
ಏನಾಗಿ
ಹುಟ್ಟಬಯಸುವಿರಿ "?
ಎಂದು
ಬಾಲಕ
ಬಾಲಿಕೆಯರನ್ನು
ಪ್ರಶ್ನಿಸಲಾಯಿತು.
ಎಲ್ಲ ಬಾಲಕರು
ತಾವು ಹಕ್ಕಿಗಳಾಗಿ ಹುಟ್ಟುವ
ಬಯಕೆ
ವ್ಯಕ್ತಪಡಿಸಿದರು.
ಆದರೆ
ಬಾಲಕಿಯರಲ್ಲಿ
ಅರ್ಧದಷ್ಟು ಮಂದಿ
ತಾವು ಬಾಲಕರಾಗಿ
ಹುಟ್ಟಲು ಇಚ್ಛಿಸಿದರೆ,
ಉಳಿದವರು
ಹಕ್ಕಿಗಳಾಗುವ ಆಸೆ
ತೋರಿಸಿದರಂತೆ ! ಹೌದು
ಹಕ್ಕಿಗಳ ಜೀವನದಂತಹ
ಸ್ವರ್ಗಸದೃಶವಾದ
ಸುಂದರ ಬದುಕು
ಯಾರಿಗೆ ತಾನೆ
ಬೇಡ ?

ಚಿತ್ರ ಲೇಖನ :
ಡಾ. ಎನ್. ಎ. ಮಧ್ಯಸ್ಥ

ಹಕ್ಕಿಗಳು ಜೀವಜಗತ್ತಿನ ಅದ್ಭುತ ಸೃಷ್ಟಿ. ಬಹುಶ ನಿಸರ್ಗ ಬೇರೆಲ್ಲೂ ತನ್ನ ಕೌಶಲ್ಯವನ್ನು ಇಷ್ಟೊಂದು ವೈಭವದಿಂದ ಕೇಂದ್ರೀಕರಿಸಿದಂತಿಲ್ಲ. ಎಷ್ಟೊಂದು ವೈವಿಧ್ಯ! ಎಂಥಹ ಸೌಂದರ್ಯ, ಸಾಮರ್ಥ್ಯ ಮತ್ತು ಚಾತುರ್ಯ ! ಏನು ಕಂಠ, ವರ್ಣವಿನ್ಯಾಸ ? ಉತ್ತರ ಧ್ರುವದಿಂದ ದಕ್ಷಿಣ ಧ್ರುವದವರೆಗೂ. ಎತ್ತರದ ಹಿಮಶಿಖರಗಳಿಂದ ಹಿಡಿದು. ವಿಶಾಲ ಸಮುದ್ರಗಳವರೆಗೂ. ಕಾಡು ಮೇಡುಗಳಿಂದ ಹಿಡಿದು ಕಣಿವೆ ಕಂದರಗಳಲ್ಲೂ ಕಂಡುಬರುವ ಏಕೈಕ ಜೀವಿಗಳೆಂದರೆ ಹಕ್ಕಿಗಳು. ಇಷ್ಟೇ ಅಲ್ಲ. ಸಹಸ್ರಾರು ವರ್ಷ ಕಾಲನ ಪರೀಕ್ಷೆಯಲ್ಲಿ ಗೆದ್ದ ಜೀವಿ ಪ್ರಾಕಾರಗಳಿವು.



ಅನಾದಿ ಕಾಲದಿಂದಲೂ ಮಾನವನಿಗೆ ಹಕ್ಕಿಗಳು ತೀರ ನಿಕಟ. ಫ್ರಾನ್ಸ್ ಮತ್ತು ಸ್ಪೇನ್ ದೇಶಗಳ ಗುಹೆಗಳಲ್ಲಿ ಕಂಡುಬರುವ ಸುಮಾರು ೨೨ ಸಹಸ್ರ ವರ್ಷಗಳ ಹಿಂದಿನ, ಅಂದರೆ ಹಳೆ ಶಿಲಾಯುಗದ ಹಕ್ಕಿ ಚಿತ್ರಗಳು ಹಕ್ಕಿ-ಮಾನವ ಸಂಬಂಧದ ಪ್ರಾಚೀನತೆಯ ಪ್ರತೀಕ. ಅವು ಮಾನವನಿಗೆ ಇಷ್ಟೊಂದು ಹತ್ತಿರವಾಗಿರಲು ಅನೇಕ ಕಾರಣಗಳಿವೆ. ಮಾನವನ ಆಹಾರವಾಗಿ, ಶುಭಾಶುಭಗಳ ಹರಿಕಾರರಾಗಿ, ದೈವೀಶಕ್ತಿಯ ಪ್ರತೀಕವಾಗಿ, ಸಂವಹನ ಮಾಧ್ಯಮವಾಗಿ, ಪ್ರಾಕೃತಿಕ ಜಾಡಮಾಲಿಗಳಾಗಿ ಹಕ್ಕಿಗಳು ಮಾನವರನ್ನು ಆಕರ್ಷಿಸಿದ್ದರೆ ಆಶ್ಚರ್ಯವಿಲ್ಲ. ರಾಮಾಯಣ, ಮಹಾಭಾರತ ಮತ್ತು ಗ್ರೀಕ್ ಪುರಾಣಾದಿಯಾಗಿ ಅನೇಕ ಪ್ರಾಚೀನ ಸಾಹಿತ್ಯಗಳಲ್ಲಿ ಹಕ್ಕಿಗಳಿಗೆ ವಿಶೇಷ ಸ್ಥಾನವಿದೆ. ರೋಮನ್ನರ ಕಾಲದಲ್ಲಿ ಪ್ರತಿ ಹಕ್ಕಿಯೂ ಒಂದಲ್ಲ ಒಂದು ಶಕುನದ ಸಂಕೇತವಾಗಿತ್ತು.

ಇಂದಿಗೂ ಮಾನವರನ್ನು ಬೇರೆಲ್ಲವುಗಳಿಗಿಂತ ಹೆಚ್ಚು ಆಕರ್ಷಿಸುವ ಜೀವಿಗಳೆಂದರೆ ಹಕ್ಕಿಗಳು. ಅವುಗಳ ಸ್ವಚ್ಛಂದ ಬದುಕಿನ ಬಗ್ಗೆ ಅಚ್ಚರಿ ಪಡದವರಿಲ್ಲ. ಒಂದು ದಶಕದ ಹಿಂದೆ ರೊಡೇಶಿಯಾದ ಪ್ರಾಥಮಿಕ ಶಾಲೆಯೊಂದರಲ್ಲಿ ನಡೆಸಿದ ಸಮೀಕ್ಷೆ ಇಲ್ಲಿ ಉಲ್ಲೇಖಾರ್ಹ: "ನಿಮಗೆಲ್ಲ ಪುನರ್ಜನ್ಮ ಸಿಗುವಂತಾದರೆ ನೀವೆಲ್ಲ ಮುಂದಿನ ಜನ್ಮದಲ್ಲಿ ಏನಾಗಿ ಹುಟ್ಟಬಯಸುವಿರಿ"? ಎಂದು ಬಾಲಕ ಬಾಲಕಿಯರನ್ನು ಪ್ರಶ್ನಿಸಲಾಯಿತು. ಎಲ್ಲ ಬಾಲಕರು ತಾವು ಹಕ್ಕಿಗಳಾಗಿ ಹುಟ್ಟುವ ಬಯಕೆ ವ್ಯಕ್ತಪಡಿಸಿದರು. ಆದರೆ ಬಾಲಕಿಯರಲ್ಲಿ ಶೇಕಡಾ ೫೦ ರಷ್ಟು ಮಂದಿ ತಾವು ಬಾಲಕರಾಗಿ ಹುಟ್ಟಲು ಇಚ್ಛಿಸಿದರೆ ಉಳಿದವರು ಹಕ್ಕಿಗಳಾಗುವ ಆಸೆ ತೋರಿಸಿದರಂತೆ ! ಹೌದು. ಹಕ್ಕಿಗಳ ಜೀವನದಂತಹ ಸ್ವರ್ಗಸದೃಶವಾದ ಸುಂದರ ಬದುಕು ಯಾರಿಗೆ ತಾನೆ ಬೇಡ ?

ಹಕ್ಕಿಯೊಂದರ ತಂತ್ರಜ್ಞಾನ

ದಕ್ಷಿಣ ಅಮೇರಿಕಾದಲ್ಲಿ ಪ್ರತಿವರ್ಷ ಸಹಸ್ರಾರು ಜನರು 'ಚಾಗಾಸ್' ಎಂಬ ಮಾರಕ ರೋಗವೊಂದಕ್ಕೆ ಬಲಿಯಾಗುತ್ತಿದ್ದರು. ಬಾರ್ಬಿರೊ ಎಂಬ ಕೀಟಗಳಿಂದ ಹರಡಲ್ಪಡುವ ಚಾಗಾಸ್ ರೋಗವು ಟ್ರಿಪನೋಸೋಮ್ ಎಂಬ ಸೂಕ್ಷ್ಮ ಜೀವಿಯಿಂದ ಉಂಟಾಗುತ್ತದೆ. ಬಾರ್ಬಿರೊ ಕೀಟಗಳು ಸಾಮಾನ್ಯವಾಗಿ ಗೋಡೆಗಳ ಬಿರುಕುಗಳಲ್ಲಿರುವದರಿಂದ ಗೋಡೆಗಳ ಬಿರುಕು ಮುಚ್ಚದೆ ಬಾರ್ಬಿರೊ ಕೀಟಗಳ ನಿಯಂತ್ರಣ ಮತ್ತು ಚಾಗಾಸ್ ರೋಗದ ತಡೆ ಅಸಾಧ್ಯವಾಗಿತ್ತು.

ಈ ದಿಸೆಯಲ್ಲಿ ಚಿಂತಿಸುತ್ತಿದ್ದ ವಿಜ್ಞಾನಿಯೊಬ್ಬನಿಗೆ ಪರಿಹಾರ ದೊರೆತಿದ್ದು ದಕ್ಷಿಣ ಅಮೆರಿಕಾದ ರೂಫಸ್ ಓವನ್ ಹಕ್ಕಿಯಿಂದ. ಓವನ್ ಹಕ್ಕಿಗಳು ಸಗಣ-ಮರಳು ಮಿಶ್ರಣದಿಂದ ಚೆಂಡಿನಂತಹ ಗಟ್ಟಿಯಾದ ಹಾಗೂ ಬಿರುಕು ಬಿಡದ ಗೂಡು ಕಟ್ಟುತ್ತವೆ. ಈ ತಂತ್ರ ಜ್ಞಾನವನ್ನು ಉಪಯೋಗಿಸಿಕೊಂಡು ಪ್ರಾಯೋಗಿಕವಾಗಿ ಕೆಲವು ಗುಡಿಸಲುಗಳ ಗೋಡೆಗಳಿಗೆ ಗಾರೆ ಮಾಡಲಾಯಿತು: ಒಂದು ವರ್ಷದ ನಂತರವೂ ಗೋಡೆಗಳಲ್ಲಿ ಬಿರುಕು ಕಾಣಲಿಲ್ಲ. ಇದರಿಂದ ಉತ್ತೇಜನಗೊಂಡು ಈ ವಿಶೇಷ ಗಾರೆಯನ್ನು ಅನಂತರ ವ್ಯಾಪಕವಾಗಿ ಬಳಸಲಾಯಿತು. ಹೀಗಾಗಿ ಬಾರ್ಬಿರೊ ಕೀಟಗಳನ್ನು ಯಶಸ್ವಿಯಾಗಿ ನಿಯಂತ್ರಿಸಿ ಸಹಸ್ರಾರು ಮಾನವಜೀವಗಳನ್ನು ಉಳಿಸಲು ಸಾಧ್ಯವಾಯಿತು.

ಹಾರುವ ಯಂತ್ರಗಳು :

ಹಕ್ಕಿಗಳು ಹಾರುವ ಯಂತ್ರಗಳೆಂದೇ ಪ್ರಸಿದ್ಧ. ಆದರೆ ಅವುಗಳ ಹಾರುವ ರೀತಿ ಮತ್ತು ಇಂಧನ ಮಿತವ್ಯಯವನ್ನು ಯಾವ ಯಂತ್ರಕ್ಕೂ ಹೋಲಿಸಲಾಗದು. ಉದಾಹರಣೆಗೆ: ದಕ್ಷಿಣ ಅಮೆರಿಕಾದ ಚಿಕ್ಕ ವಾರ್ಬ್ಲರ್ ಹಕ್ಕಿ ವೆನಿಜುವೆಲಾದಿಂದ ಉತ್ತರ ಅಮೆರಿಕಾದ ಅಲಾಸ್ಕಾದವರೆಗಿನ ದೂರ ಕ್ರಮಿಸಲು ಉಪಯೋಗಿಸುವ ಇಂಧನ ಕೇವಲ ಹತ್ತು ಗ್ರಾಮ್ ಕೊಬ್ಬು. ನಮ್ಮ ವಿಮಾನಗಳಿಗೆ ಇದನ್ನು ಹೋಲಿಸುವುದಾದರೆ ಈ ಹಕ್ಕಿಯ ಸಾಮರ್ಥ್ಯ ಸುಮಾರು ಮುನ್ನೂರು ಪಟ್ಟು ಹೆಚ್ಚು.

ಹಕ್ಕಿಗಳು ವಲಸೆಹೋಗುವುದು ಜೀವ ಜಗತ್ತಿನ ಒಂದು ವಿಸ್ಮಯ. ಉದಾಹರಣೆಗೆ: ಉತ್ತರ ಧ್ರುವ ಪ್ರದೇಶದಲ್ಲಿಯ ಪಾರಿವಾಳಕ್ಕಿಂತ ತುಸು ದೊಡ್ಡದಾದ ಟರ್ನ್ ಹಕ್ಕಿಗಳು ಚಳಿಗಾಲದಲ್ಲಿ ವಲಸೆ ಹೊರಟು ದಕ್ಷಿಣ ಧ್ರುವ ಸೇರುತ್ತವೆ. ಈ ವಲಸೆಯಲ್ಲಿ ಅವು ಕ್ರಮಿಸುವ ದೂರ ಹದಿನೆಂಟು ಸಹಸ್ರ ಕಿ.ಮೀ. ಅಂತೆಯೇ ಬೇಸಿಗೆಯಲ್ಲಿ ಅವು ಪುನಃ ಹದಿನೆಂಟುಸಹಸ್ರ ಕಿ. ಮೀ. ಚಲಿಸಿ ಸ್ವದೇಶಕ್ಕೆ ಹಿಂದಿರುಗುತ್ತವೆ. ಟರ್ನ್ ಹಕ್ಕಿಗಳ ಈ ಮೂವತ್ತಾರು ಸಹಸ್ರ ಕಿ.ಮೀ. ದೂರದ ಚಲನೆ ಹಕ್ಕಿ ಪ್ರಪಂಚದಲ್ಲಿಯೇ ಒಂದು ದಾಖಲೆ. ಕೆಲವು ಸ್ವಿಫ್ಟ್ ಹಕ್ಕಿಗಳು ಪ್ರತಿದಿನ ಸುಮಾರು ಒಂಭೈನೂರು ಕಿ.ಮೀ. ಸಂಚರಿಸಿ ಕೀಟ ಹುಳು ಹುಪ್ಪಟೆ ಹೆಕ್ಕಿತಿನ್ನುವುದು ಇನ್ನೊಂದು ಅಪೂರ್ವ ಉದಾಹರಣೆ.

ನಿಪುಣ ಹಾಡುಗಾರರು :


ವಸಂತದಲ್ಲಿ ಕೋಗಿಲೆಯ ಮಧುರ ಕಂಠ ಅದೆಷ್ಟು ಕವಿ-ಹೃದಯ ತಟ್ಟಿಲ್ಲ: ಆದರೆ ಹಕ್ಕಿ ಜಗತ್ತಿನಲ್ಲಿ ಕೋಗಿಲೆಗಿಂತಲೂ ಮಧುರವಾಗಿ, ಹೆಚ್ಚು ವಿಸ್ತಾರವಾಗಿ ಹಾಡುವ ಅನೇಕ ಹಕ್ಕಿಗಳಿವೆ. ಇವುಗಳಲ್ಲಿ ಅಣಕ ಹಕ್ಕಿ (Mocking bird)ಗೆ ಪ್ರಥಮ ಸ್ಥಾನ. ಗುಬ್ಬಚ್ಚಿಯನ್ನು ಹೋಲುವ ಅವುಗಳಿಗಿಂತ ತುಸು ದೊಡ್ಡದಾದ ಈ ಹಕ್ಕಿಗಳು ಸುಮಾರು ಐವತ್ತು ವಿಧದ ಸ್ವರಗಳನ್ನು



[illegible]
ಪಿನ ಮೃಗಾಲಯವೊಂದಕ್ಕೆ ಕೆಲವು ನೈಟಿಂಗೇಲ್ ಪಕ್ಷಿಗಳನ್ನು ತರಿಸಿ ಗೂಡುಗಳಲ್ಲಿ ಇಡಲಾಗಿತ್ತು. ಆದರೆ ಮರುದಿನ ನೈಟಿಂಗೇಲ್ ಹಕ್ಕಿಯ ಮಧುರ ಸ್ವರ ಸುತ್ತಮುತ್ತಲಿನ ಮರಗಳಿಂದಲೂ ಕೇಳಿ ಬರಲಾರಂಭಿಸಿತು. ಈ ಹಕ್ಕಿಗಳಾದರೋ ಗೂಡುಗಳಲ್ಲಿ ಬಂಧಿತ. ಅವುಗಳ ಸ್ವರ ಮಾತ್ರ ಮರಗಳ ತುದಿಯಿಂದ, ಇದು ಹೇಗೆ ಸಾಧ್ಯ ? ಸೂಕ್ಷ್ಮವಾಗಿ

[illegible] ಗೇಲ್ ಹಕ್ಕಿಗಳ ಹಾಡನ್ನು ಆಲೈಸಿದ ಅಣಕು ಹಕ್ಕಿಗಳು ಅವುಗಳಂತೆ ಹಾಡತೊಡಗಿದುದೇ ಈ ಗೊಂದಲಕ್ಕೆ ಕಾರಣವೆಂದು ತಿಳಿಯಿತು. ನಮ್ಮ ಸುತ್ತಮುತ್ತಲಿರುವ ಕಾಜಾಣ, ಮೈನಾ, ಗಿಳಿ ಮೊದಲಾದ ಹಕ್ಕಿಗಳು ಕೂಡ ಅನೇಕ ಹಕ್ಕಿಗಳ ಸ್ವರವನ್ನು ಅಣಕಮಾಡಬಲ್ಲವು.

ಹಾರಿ ಹೋದ ಹಕ್ಕಿ



ನಿಸರ್ಗದ ಬಗ್ಗೆ ಅಪಾರ ಕಳಕಳಿಯಿದ್ದ ಡಾ. ಸಲೀಮ್ ಭಾರತದ ಕೆಲವೇ ನಿಸರ್ಗ ಸಂರಕ್ಷಣಾ ತಜ್ಞರಲ್ಲಿ ಒಬ್ಬರು. ನಿಸರ್ಗದ ಅದರಲ್ಲೂ ನಮ್ಮ ಪ್ರೀತಿಯ ಕಾಲಕ್ಕೆ ಹಕ್ಕಿಗಳ ಬಗ್ಗೆ ಅವರು ಇಂದಿನ ಜನಕ್ಕೆ ನೀಡಿದ ಸಂದೇಶವನ್ನು ಇಲ್ಲಿ ನೆನಪಿಸಿಕೊಳ್ಳುತ್ತಿದ್ದೇವೆ.

ಡಾ. ಸಲೀಮ್ ಅಲಿಯವರ ಪುಸ್ತಕಗಳನ್ನು ಓದಿದ್ದ, ಅವರ ಬಗೆಗಿನ ಬರಹಗಳನ್ನು ಕೇಳಿದ್ದ ನನಗೆ ಅವರನ್ನು ವೈಯಕ್ತಿಕವಾಗಿ ಭೇಟಿಯಾಗುವ ಅವಕಾಶ ಕಳೆದ ವರ್ಷದ ಅಕ್ಟೋಬರ್ ತಿಂಗಳಲ್ಲಿ ಒದಗಿತ್ತು. ಬೊಂಬಾಯಿ ನ್ಯಾಚುರಲ್ ಹಿಸ್ಟರಿ ಸೊಸೈಟಿಯ ಆತ್ಮೀಯ ಮಿತ್ರರಾದ ಜೆ. ಎಸ್ ಸೆರಾವೊ ಈ ಅನೌಪಚಾರಿಕ ಭೇಟಿಗೆ ಕಾರಣರಾಗಿದ್ದರು. ಸೆರಾವೊ ಒಂದು ಕಾಲದಲ್ಲಿ ಡಾ. ಅಲಿಯವರ ಆಪ್ತ ಕಾರ್ಯದರ್ಶಿಯಾಗಿದ್ದರು, ಮತ್ತು ಇಂದಿಗೂ ಅವರ ಆತ್ಮೀಯರು. ಫೋನು ಕರೆಯಲ್ಲಿ ನಮ್ಮ ಭೇಟಿಯ ಬಗ್ಗೆ ಪ್ರಸ್ತಾಪಿಸಿದಾಗ ಕೂಡಲೇ ಬರುವಂತೆ ಆಹ್ವಾನ. ಸಂಜೆ ಐದರ ಹೊತ್ತು ಪಾಲಿ ಹಿಲ್‌ನ ಬಂದರಿನ ಪೋರ್ಟ್ ಕ್ವೀನ್ ಸೇರಿ, ಮೂರನೇ ಮಹಡಿ ಹತ್ತಿ ಮೂರುವತ್ತನೇ ಕೊಠಡಿ ಸೇರಿದೆವು. ಬಾಗಿಲು ತೆರೆದಿತ್ತು, ಒಳಗೆ ಹೋಗುತ್ತಿದ್ದಂತೆ, ಡಾ. ಅಲಿಯವರಿಂದ ತಿಳಿನಗೆಯ ಸ್ವಾಗತ. ತೊಂಬತ್ತರ ಗಡಿದಾಟಿದ, ಕೃಶದೇಹದ ಬಿಳಿ ಗಡ್ಡದ ವ್ಯಕ್ತಿಯ ತಲೆಗೆ ಟೊಪ್ಪಿ ಏನೋ ಒಂದು ಆಕರ್ಷಣೆಯಿತ್ತು.

ಕಣ್ಣಲ್ಲಿ ಹೊಳೆಯಿತ್ತು. ಆತ್ಮೀಯತೆಯ ಭಾವ ಹೊಮ್ಮಿ, ಬಿನಸ್ಸೋಸ್ಟ್ ಟೈಪಿಸುತ್ತಿದ್ದ ಅವರು ಅದನ್ನು ನಿಲ್ಲಿಸಿ, ನಮ್ಮೊಂದಿಗೆ ಸುಮಾರು ಮುಕ್ಕಾಲು ತಾಸು ಲೋಕಾಭಿರಾಮವಾಗಿ ಮಾತನಾಡಿದರು.

"ಯುವಜನರಲ್ಲಿ, ನಮ್ಮ ನೈಸರ್ಗಿಕ ಸಂಪತ್ತು ಅದರಲ್ಲೂ ಪಕ್ಷಿ ಜೀವಿಗಳ ಬಗ್ಗೆ ಹೆಚ್ಚು ಆಸಕ್ತಿ ಬೆಳೆಯಬೇಕು. ಆಸಕ್ತಿ ವೈವಿಧ್ಯಮಯ ಜೀವಜಾತಿಗಳ ಸುಂದರ ಕೆಲಸ ಮಹಾಜನ್ಮಕ್ಕೆ ಅವರದ್ದು. ಈ ಬಗ್ಗೆ ಶಾಲಾ ಕಾಲೇಜುಗಳಲ್ಲೂ ಪ್ರಯತ್ನ ನಡೆಯಬೇಕು."

"ಇಂದು ಹಕ್ಕಿಗಳನ್ನು ನೋಡಿ, ಅವುಗಳನ್ನು ಗುರುತಿಸಿ ಪಟ್ಟಿ ಮಾಡುವುದು ಅಥವಾ ವರ್ಗೀಕರಿಸುವುದು ಅಷ್ಟೊಂದು ಮುಖ್ಯವಲ್ಲ. ಅಂತಹ ಕೆಲಸವನ್ನು ಭಾರತದಲ್ಲಿ ನಾವು ಈಗಾಗಲೇ ಸಾಕಷ್ಟು ಮಾಡಿದ್ದೇವೆ. ಇಂದು ಹಕ್ಕಿಗಳ ಬಗ್ಗೆ ಆಳವಾದ ಅಧ್ಯಯನ ಮಾಡುವವರು ಬೇಕು. ಅವುಗಳ ಆಹಾರಾಭ್ಯಾಸ, ವಸತಿ, ಗೂಡು, ಸಂಘಜೀವನ, ವಲಸೆ, ಪರಿಸರದೊಂದಿಗಿನ ಸಂಬಂಧ ಇತ್ಯಾದಿಗಳ ಅಧ್ಯಯನ ತುರ್ತಾಗಿ ನಡೆಯಬೇಕಾಗಿದೆ." ಇದು ಅವರು ವಿಶೇಷವಾಗಿ ಯುವಜನರಿಗೆ ಕೊಟ್ಟ ಸಂದೇಶ.

ಕೊನೆಯುಸಿರು ಎಳೆಯುವವರೆಗೂ ಬಿಡುವಿಲ್ಲದ ಕಾರ್ಯಕ್ರಮ, ಭೇಟಿಗಳು, ಸಂದರ್ಶನಗಳು, ಅಧ್ಯಯನ, ಚಿಂತನ, ಚರ್ಚೆ ಹೀಗೆ ಹಕ್ಕಿಯಂತೆ ಸದಾ ಕಾರ್ಯತತ್ಪರತೆ ಸಾಲಿಮರದ್ದು ರಾವ್ಯ ಸಭಾಸದ್ಯತನ.

೧೮೯೬ ರ ನವೆಂಬರ್ ೧೨ ರಂದು ಜನಿಸಿದ ಡಾ. ಸಲೀಮ್ ಅಲಿಯವರು ಇದೇ ಜೂನ್ ೨೦ ರಂದು ನಿಧನರಾದರು. ಅವರ ನಿಧನದಿಂದ ಪಕ್ಷಿಲೋಕಕ್ಕೆ ತುಂಬಲಾರದ ನಷ್ಟವಾಗಿದೆ. ಹಕ್ಕಿ ವಿಜ್ಞಾನಕ್ಕೆ ತುಂಬಲಾರದ ನಷ್ಟ. ಹಕ್ಕಿಲೋಕದ ಈ ಧೀಮಂತನನ್ನು ಎಂದೆಂದೂ ಮರೆಯಲಾಗದು.

ಭಾವುಕತೆ :

ಹಕ್ಕಿಗಳು ಭಾವುಕಜೀವಿಗಳು ಎಂಬ ಪ್ರತೀತಿಯೂ ಇದೆ. ಈಗ ಒಂದೆರಡು ವರ್ಷಗಳ ಹಿಂದೆ ನಡೆದ ಒಂದು ಘಟನೆ ಇಲ್ಲಿ ಸ್ಮರಣೀಯ. ಹಲವಾರು ದಿನಗಳ ಪರಿಶ್ರಮದಿಂದ ಬುಲ್‌ಬುಲ್ ಹಕ್ಕಿಗಳ ಜೋಡಿಯೊಂದು ಗೂಡುಕಟ್ಟಿ, ಮೊಟ್ಟೆಯಿಟ್ಟು, ಮರಿ ಮಾಡಿದ್ದವು. ಮರಿಗಳಿಗೆ ಸಂಭ್ರಮದಿಂದ ಹುಳುಗಳನ್ನು ತಿನ್ನಿಸುವುದಲ್ಲದೆ ಇತರ ಯಾವ ಪ್ರಾಣಿಯೂ ಹತ್ತಿರ ಬರದಂತೆ ನೋಡಿಕೊಳ್ಳುತ್ತಿದ್ದವು. ಒಂದು ಮುಂಜಾನೆ ಇದ್ದಕ್ಕಿದ್ದಂತೆ ಭಾರೀ ಮಳೆ. ಮನೆಯ ಛಾವಣಿಯ ನೀರು ನೇರವಾಗಿ ಬುಲ್‌ಬುಲ್ ಗೂಡಿನ ಮೇಲೆ ಬಿದ್ದು ಗೂಡನ್ನು ಹಾಳುಗೆಡವಿತು. ಗೂಡಿನೊಳಗಿದ್ದ ಮರಿಗಳು ನೀರುಪಾಲಾದವು. ನೀರಿನಲ್ಲಿ ಬಿದ್ದು ಚೀರಾಡುತಿದ್ದ ಮರಿಗಳು ಹತ್ತಿರದಲ್ಲಿಯೇ ಕುಳಿತಿದ್ದ ಕಾಗೆಯ ಪಾಲಾಗಿದ್ದವು. ಮರಿಯ ಚೀತ್ಕಾರ ಕೇಳಿಸಿಕೊಂಡ ಬುಲ್‌ಬುಲ್ ಹಕ್ಕಿಗಳು ಧಾವಿಸಿ ಬಂದು ನೋಡಿ ಅಸಹಾಯಕರಾಗಿ ಕೂಗಲಾರಂಭಿಸಿದವು. ಸುಮಾರು ಒಂದೆರಡು ಘಂಟೆಗಳ ಕಾಲ ಈ ಹಕ್ಕಿಗಳ ಆರ್ತನಾದ ಹೇಳತೀರದು. ಅನಂತರ ಅವು ಕೆಲವು ದಿನಗಳವರೆಗೆ ಪ್ರತಿದಿನ ಮುಂಜಾನೆ ತಮ್ಮ ಮರಿಗಳು ನೀರುಪಾಲಾದ ಸ್ಥಳದ ಹತ್ತಿರ ನಿಂತು ಕೂಗುತ್ತಿದ್ದವು. ಹೀಗಾದ ಕೆಲಕಾಲದ ನಂತರ ಅವು ಮತ್ತೆ ಅಲ್ಲಿ ಸುಳಿಯಲೇ ಇಲ್ಲ.

ವಸ್ತುಸ್ಥಿತಿಯೆಂದರೆ ಹಕ್ಕಿಗಳ ಈ ಭಾವುಕತೆ ತಾತ್ಕಾಲಿಕ. ಇದು ಒಂದು ಅನುಭವವಾಗಿ ಅವುಗಳಲ್ಲಿ ಉಳಿಯುವುದಿಲ್ಲ. ಇದನ್ನೇ ಇನ್‌ಸ್ಟಿಂಕ್ಟ್ ಎನ್ನುವುದು.

ಹಕ್ಕಿಗಳು ಅನ್ಯೋನ್ಯ ಜೀವನಕ್ಕೂ ಎತ್ತಿದ ಕೈ. ಭಾರತದ ಸಾರಸ ಕ್ರೌಂಚ ಇದಕ್ಕೊಂದು ಒಳ್ಳೆಯ ಉದಾಹರಣೆ. ವಯಸ್ಸಿಗೆ ಬಂದ ಸಾರಸ ಗಂಡು ಹೆಣ್ಣು ಹಕ್ಕಿಗಳು ಒಮ್ಮೆ ಒಂದುಗೂಡಿದವೆಂದರೆ ಮತ್ತೆ ಜೀವನ ಪರ್ಯಂತ ಅವು ಸಂಗಾತಿಗಳಾಗಿ ಉಳಿಯುತ್ತವೆ. ಒಂದೊಮ್ಮೆ ಗಂಡು ಅಥವಾ ಹೆಣ್ಣು ತೀರಿಕೊಂಡಲ್ಲಿ ಬದುಕಿ ಉಳಿದ ಹಕ್ಕಿ ಇನ್ನೊಂದರ ಸಂಗ ಮಾಡಲಾರದು. ಅಂತಹ ಬಿಡಿಸಲಾಗದ ಅನ್ಯೋನ್ಯ ದಾಂಪತ್ಯ ಸಂಬಂಧ ಅವುಗಳಲ್ಲಿ. ಆದ್ದರಿಂದಲೇ ಸಾರಸ ಹಕ್ಕಿಗಳು ನಮ್ಮ ಸಂಸ್ಕೃತಿಯಲ್ಲಿ ಪವಿತ್ರ ಮತ್ತು ಅವುಗಳಿಗೆ ವಿಶೇಷ ರಕ್ಷಣೆ.

ಆಹಾರ ವೈಖರಿ

ವಿವಿಧ ಹಕ್ಕಿಗಳು ಬಹುತೇಕ ಎಲ್ಲ ಪ್ರಾಣಿಗಳನ್ನು ತಿಂದು ತೇಗುವವಾದರೂ ಕೀಟಗಳು ಅವುಗಳಿಗೆ ಪ್ರಶಸ್ತ. ಇದಕ್ಕೆ ಒಂದು ಕಾರಣ ಕೀಟಗಳ ಸಂಖ್ಯಾಪ್ರಾಬಲ್ಯ. ಆದ್ದರಿಂದಲೇ ಹಕ್ಕಿಗಳ ಆಹಾರದಲ್ಲಿ ಕೀಟಗಳ ಪಾಲು ಹೆಚ್ಚು. ಹಕ್ಕಿಗಳ ಆಹಾರಾವಶ್ಯಕತೆಗಳೂ ವಿಭಿನ್ನ. ಉಳಿದ ಪ್ರಾಣಿಗಳಿಗೆ ಹೋಲಿಸಿದರೆ ಸಾಮಾನ್ಯ.



ವಾಗಿ ಹಕ್ಕಿಗಳು ಹೆಚ್ಚು ಆಹಾರ ತಿನ್ನುತ್ತವೆ. ಅವು ಸದಾ ಲವಲವಿಕೆಯಿಂದಿರುವುದರಿಂದ ಹೆಚ್ಚು ಆಹಾರ ಅನಿವಾರ್ಯ. ಉದಾಹರಣೆಗೆ: ವಾರ್ಬ್ಲರ್ ಹಕ್ಕಿಯೊಂದು ಪ್ರತಿದಿನ ತನ್ನ ದೇಹದ ಶೇಕಡಾ ಎಂಬತ್ತರಷ್ಟು ಆಹಾರ ತಿನ್ನುತ್ತದೆ. ಇದರ ಆಹಾರ ಕೀಟಗಳು. ಹೆಜ್ಜಾರ್ತಿಯೊಂದಕ್ಕೆ ಪ್ರತಿದಿನ ಎರಡು ಕಿಲೋಗ್ರಾಮ್ ಮೀನುಗಳ ಅಗತ್ಯವಿದೆ. ಇದು ಹೆಜ್ಜಾರ್ತಿಯ ದೇಹತೂಕದ ಶೇಕಡಾ ಐವತ್ತರಷ್ಟು.

ಹಕ್ಕಿಗಳಿಲ್ಲದಿರುತ್ತಿದ್ದರೆ.

ನಮ್ಮ ಪರಿಸರದಲ್ಲಿ ಹಕ್ಕಿಗಳು ನಿರ್ವಹಿಸುವ ಪಾತ್ರ ಅತ್ಯಂತ ಮಹತ್ವಪೂರ್ಣ. ಸತ್ತ ಪ್ರಾಣಿಗಳನ್ನು ಹೆಕ್ಕಿ ತಿನ್ನುವ ಜಾಡಮಾಲಿಗಳಾಗಿ, ಹಾನಿಕಾರಕ ಕೀಟಗಳನ್ನು ತಿಂದು ನೈಸರ್ಗಿಕ ಕೀಟನಾಶಕಗಳಾಗಿ, ಅನೇಕ ಹೂವುಗಳ ಪರಾಗಸ್ಪರ್ಶಕರಾಗಿ. ಉತ್ತಮ ಗೊಬ್ಬರವಾದ ಗ್ವಾನೊ ಉತ್ಪಾದಕರಾಗಿ ಹಕ್ಕಿಗಳು ನಿರ್ವಹಿಸುವ ಕಾರ್ಯ ಎಣೆಯಿಲ್ಲದ್ದು. ಉದಾಹರಣೆಗೆ; ನೈಸರ್ಗಿಕ ಜಾಡಮಾಲಿಗಳಾದ ಕಾಗೆ, ಹದ್ದು ಗಿಡುಗಗಳು ಒಂದೊಮ್ಮೆ ಇಲ್ಲದಿರುತ್ತಿದ್ದರೆ ಸತ್ತ ಇಲಿ, ಹೆಗ್ಗಣಗಳ ರಾಶಿ ಕೊಳೆತುನಾರಿ ಪರಿಸರ ಅಸಹ್ಯವಾಗುತ್ತಿತ್ತು. ಬಹುಶಃ ಇಂತಹ ಪರಿಸರ ಮಾಲಿನ್ಯ ತಡೆಗೆ ನಿಸರ್ಗದ ಕೊಡುಗೆ ಈ ಕಾಗೆ, ಹದ್ದುಗಳು.

ಹಕ್ಕಿಗಳು ನಿರ್ವಹಿಸುವ ಇನ್ನೊಂದು ಮಹತ್ತರ ಪಾತ್ರವೆಂದರೆ ಜೈವಿಕ ಕೀಟನಾಶಕಗಳಾಗಿ, ಮುಂಜಾನೆಯಿಂದ ಸಂಜೆಯವರೆಗೆ ಹೊಲ, ಗದ್ದೆಗಳಲ್ಲಿ ಸುತ್ತಿ, ತಿರುಗಿ ಕೀಟಗಳನ್ನು ಆರಿಸಿ ತಿನ್ನುವ ಅವುಗಳ ಸ್ವಭಾವ ಕೀಟ ನಿಯಂತ್ರಣಕ್ಕೆ ನಿಸರ್ಗವೇ ಸೃಷ್ಟಿಸಿದ ಒಂದು ಮಾರ್ಗೋಪಾಯ. ಪ್ರತಿಹಕ್ಕಿ ಉದಾ: ಕ್ರೌಂಚ, ಕನಿಷ್ಠ ೩೦೦ ರಿಂದ ೮೦೦ ಕೀಟಗಳನ್ನು ಪ್ರತಿದಿನ ತಿನ್ನುತ್ತದೆ ಎಂದರೆ ಅವುಗಳ ಮಹತ್ವದ ಅರಿವಾದೀತು. ಒಂದೊಮ್ಮೆ ಈ ಬೆಳ್ಳಕ್ಕಿ ಅಥವಾ ಕ್ರೌಂಚಗಳು ಮುಷ್ಕರ ಹೂಡಿದ್ದ ವೆಂದರೆ, ಪರಿಣಾಮ ಹೇಳತೀರದಷ್ಟು ಗಂಭೀರ. ಪೈರು, ಪಚ್ಚೆಗಳೆಲ್ಲಾ ಕೀಟಗಳ ಪಾಲು. ಹಸುರಿಲ್ಲದೆ ಇತರೆ ಪ್ರಾಣಿಗಳ ಆಹಾರಕ್ಕೂ ತತ್ವಾರ. ಇಡೀ ಆವಾಸದಲ್ಲೇ ಅಸಮತೋಲ! ಈ ಅಸಂಖ್ಯ ಹಕ್ಕಿಗಳ ವಿಸರ್ಜನೆ ಕೂಡಾ ಒಂದು ಅತ್ಯಂತ ಸಾರವತ್ತಾದ ಗೊಬ್ಬರ. ಅಂದರೆ ಈ ಹಕ್ಕಿಗಳು ರೈತರ ನಿಜವಾದ ಮಿತ್ರ.

ಕರ್ನಾಟಕ, ವಲಸೆ ಬರುವ ಹಕ್ಕಿಗಳ ಸ್ವರ್ಗ. ಇಲ್ಲಿನ ಹಿತ, ಮಿತ ಹವಾ ಗುಣ, ವಿಪುಲ ಆಹಾರ ವಿವಿಧ ಭೌಗೋಲಿಕ ವಿಭಾಗ ಹಕ್ಕಿಗಳನ್ನು



ಆಕರ್ಷಿಸಿರುವುದರಲ್ಲಿ ಆಶ್ಚರ್ಯವಿಲ್ಲ. ಕರ್ನಾಟಕ ದಾದ್ಯಂತ ದೊಡ್ಡ ಚಿಕ್ಕ ಅನೇಕ ಪಕ್ಷಿಧಾಮಗಳಿವೆ. ಇವುಗಳಲ್ಲಿ ರಂಗನತಿಟ್ಟು, ಕೊಕ್ಕರೆ ಬೆಳ್ಳೂರು, ಮಂಡಗದ್ದೆ, ಗುಡುವಿ ಮೊದಲಾದವು ಮುಖ್ಯ ವಾದವು. ಬಲು ದೂರದಿಂದ ಬಂದ ವಿವಿಧ ಹಕ್ಕಿಗಳು ಇಲ್ಲಿ ಪಟ್ಟಣಕಟ್ಟಿವೆ. ಇಕ್ಕಟ್ಟಾದ ಸ್ಥಳದಲ್ಲಿ ಅವುಗಳ ಸಾಮೂಹಿಕ ಜೀವನ ನಗರ ವಾಸಿಗಳಿಗೊಂದು ಒಳ್ಳೆಯ ಪಾಠ. ಪಕ್ಷಿಗಳಲ್ಲಿ ಘರ್ಷಣೆಯ ಬದಲು ಹೊಂದಾಣಿಕೆ ಇದೆ. ಹೋರಾಟದ ಬದಲು ಸಹಕಾರವಿದೆ, ಸ್ಪರ್ಧೆಯ ಬದಲು ತಿಳುವಳಿಕೆ ಇದೆ. ಆದ್ದರಿಂದಲೇ ನೂರಾರು ಬಿಳಿಯ ಐಬಿಸ್, ತುಪ್ಪಳ, ಹೆಜ್ಜಾರ್ಲೆ, ಸ್ಟೋರ್ಕ್, ಹಾವುಹಕ್ಕಿ, ನೀರು ಕಾಗೆ ಒಟ್ಟಾಗಿ ಒಂದೇ ಪಕ್ಷಿಧಾಮದಲ್ಲಿ ಕಂಡುಬರುತ್ತವೆ.

ಬಲುದೂರದಿಂದ ವಲಸೆ ಬರುವ ಹಕ್ಕಿಗಳು ಪಕ್ಷಿಧಾಮಗಳಿಗೆ ಮಾತ್ರ ಮೀಸಲಾಗಿರದೆ ಉಳಿದೆಡೆಯಲ್ಲೂ ಕಂಡುಬರುತ್ತವೆ. ಇಂತಹ ಹಕ್ಕಿಗಳ ಬಗ್ಗೆ ನಮ್ಮ ನಾಡಿನ ಮಟ್ಟಿಗೆ ಹೇಳುವುದಾದರೆ ನಮ್ಮ ಜ್ಞಾನ ಅತ್ಯಲ್ಪ. ಉದಾಹರಣೆಗೆ ಕರ್ನಾಟಕ ಕರಾವಳಿ ತೀರಕ್ಕೆ ಬರುವ ಹಕ್ಕಿಗಳಾದ ವಿವಿಧ ರೀತಿಯ ಟರ್ನ್‌ಗಳು, ಸ್ಯಾಂಡ್‌ಪೈಪರ್‌ಗಳು, ಪ್ಲೋವರ್‌ಗಳು, ಕರ್ಲ್ಯೂ, ಪಿಂಟೈಲ್ ಇವುಗಳ ಬಗ್ಗೆ ಇಂದಿಗೂ ವೈಜ್ಞಾನಿಕ ಅಧ್ಯಯನ ನಡೆದಿಲ್ಲ. ಉತ್ತರ ಏಷ್ಯಾ ಮತ್ತು ಯುರೋಪ ಖಂಡಗಳಿಂದ ಬರುವ ಹಕ್ಕಿಗಳು ಇವೆಂದು ಸಾಮಾನ್ಯವಾಗಿ ತಿಳಿಯುವುದಾದರೂ ಅವುಗಳ ನಿಜವಾದ ಸ್ಥಳ, ಅವು ವಲಸೆ ಹೋಗುವ ದೂರ, ಕ್ರಮಿಸುವ ದಾರಿ, ಅಗತ್ಯವಾದ ಕಾಲಾವಕಾಶ ಇತ್ಯಾದಿಗಳ ಬಗ್ಗೆ ನಾವಿನ್ನೂ ಕತ್ತಲೆಯಲ್ಲಿದ್ದೇವೆ.

ಜೀವಂತ ಸಂಸ್ಕೃತಿ :

ಹಕ್ಕಿಗಳು ನಮ್ಮ ಸಂಸ್ಕೃತಿಯಲ್ಲಿ ಹಾಸು ಹೊಕ್ಕಾಗಿವೆ. ಒಂದು ದೃಷ್ಟಿಯಲ್ಲಿ ಅವು ಜೀವಂತ ಸಂಸ್ಕೃತಿಯೇ. ಆದ್ದರಿಂದಲೇ ಹಕ್ಕಿಗಳ ವೀಕ್ಷಣೆ ಅವುಗಳ ಬಗೆಗಿನ ಆಸಕ್ತಿ, ಭರತ ಖಂಡದ ಸಂಸ್ಕೃತಿಯ ಪ್ರತೀಕ. ಹಕ್ಕಿ ವೀಕ್ಷಣೆ ಕೇವಲ ಕಾಲ ಕಳೆಯುವ ಹವ್ಯಾಸವಲ್ಲ. ಅದೊಂದು ಅಗಾಧ, ಅನಂತ ಅಧ್ಯಯನದ ಬುನಾದಿ. ಪ್ರಖ್ಯಾತ ಹಕ್ಕಿ ವಿಜ್ಞಾನಿ ಡಾ॥ಸಲೀಂ ಅಲಿಯವರು ಒಮ್ಮೆ ಹೇಳಿದ್ದರು, "ನಿಮಗೆ ಜೀವನ ಪರ್ಯಂತ ಬೇಸರ ಹಿಡಿಸದ ಏಕೈಕ ಹವ್ಯಾಸವೆಂದರೆ ಹಕ್ಕಿ ವೀಕ್ಷಣೆ." ನಿಜ. ಎಷ್ಟೊಂದು ವೈಚಿತ್ರ್ಯ ಈ ಹಕ್ಕಿ ಜಗತ್ತಿನಲ್ಲಿ. ಅಸಂಖ್ಯ ವರ್ಣ ವೈಖರಿ, ವಿಭಿನ್ನ ವಿನ್ಯಾಸ, ನಿಗೂಢ ವಲಸೆ, ಅಪೂರ್ವ ಪ್ರಣಯ ಲಾಸ್ಯ, ವಿಶಿಷ್ಟ ಮರಿಗಳ ಲಾಲನೆ-ಪಾಲನೆ, ಚೈತನ್ಯ ಪೂರ್ಣ ಬದುಕು, ಲವಲವಿಕೆಯ ಜೀವನ ಒಂದೇ, ಎರಡೇ? ತಿಳಿಯಲು ಪ್ರಯತ್ನಿಸಿದಷ್ಟು ಮತ್ತಷ್ಟು ಗೂಢ ಈ ಹಕ್ಕಿಗಳ ಬದುಕು, ಬವಣೆ. ಒಟ್ಟಿನಲ್ಲಿ ಹಕ್ಕಿಗಳ ಬದುಕು ಅದ್ಭುತ, ಅನಂತ, ಅವುಗಳ ನಲಿವೇ ಸಗ್ಗ. ●

ನನ್ನ ಪುಟ್ಟ ಪ್ರಪಂಚ

ಮರಗಿಡ ಪ್ರಾಣಿ ಪಕ್ಷಿಗಳ ನನ್ನ
ಪುಟ್ಟ ಪ್ರಪಂಚದ ಒಳಗೆ ಒಮ್ಮೊಮ್ಮೆ
ಮನುಷ್ಯರೂ ನುಸುಳಿಕೊಳ್ಳುತ್ತಾರೆ. ಅನಾಮತ್ತಾಗಿ
ಸುತ್ತಸೇರಿದ್ದ
ಮರಗಿಡ ಬಳ್ಳಿಗಳು, ಅಳಿಲು, ಗುಬ್ಬಿ, ಬೆಳ್ಳಕ್ಕಿಗಳು ಸುತ್ತ
ಮಾಯೆಯ ಬಲೆ ನೇಯುತ್ತಿರಲು,
ಅಪರಿಚಿತರಾಗನುನಕ್ಕೆ ಗಡಬಡಿಸಿ
ಚೆಲ್ಲಾಪಿಲ್ಲಿಯಾಗುತ್ತಾವೆ. ನಾಚಿಕೆಯಿಂದ
ಮುದುಡಿಕೊಳ್ಳುತ್ತಾ, ಅವನತಮುಖಿಗಳಾಗಿ
ಕುಗ್ಗುತ್ತ, ಕುಗ್ಗುತ್ತಾ ಇಲ್ಲವಾಗುತ್ತಾವೆ.

ಹೀಗೆ-ನನಗರಿವಿಲ್ಲದಂತೆಯೇ ನನ್ನ ಪುಟ್ಟ ಪ್ರಪಂಚ
ಮನುಷ್ಯರಿಂದಲೇ ತುಂಬಿ, ಹಲೋ ಹಲೋ ಹೇಳುತ್ತ
ಸೂಟು ತೊಡಿಸುತ್ತಾರೆ ನನಗೆ ಭಾಷೆ ತಿದ್ದುತ್ತಾರೆ
ಗಂಭೀರತೆಯ ಮುಖವಾಡ ತೊಡಿಸುತ್ತಾರೆ. ನೃತ್ಯಕಾರ
ಹರಡಿ, ತಲೆ ನೇವರಿಸಿ
ಗಡಿಯಾರ ನಡೆಯ ಲಯದಲಿ ಸುತ್ತಿ
ಇಂಚಿಂಚು ಕರಗಿಸಿ ನನ್ನ
ನೆಲದಲಿ ಬೋರಲಾಗಿಸುತ್ತಾರೆ.

ಆಯಾಸಗೊಂಡ ಕಣ್ಣುಗಳು ಬಿಟ್ಟೂಬಿಡದೆ ತೆರೆದಾಗ
ಕಾಣಿಸುತ್ತದೆ ನನ್ನ ಪುಟ್ಟ ಪ್ರಪಂಚದೆಲ್ಲೆಡೆಯಲ್ಲಿ
ಎರಡೇ ಆಯಾಮದ ನಾನು-ನನ್ನನಾವರಿಸಿರುವ
ಹಸಿರೆಲೆ ಚೂರುಗಳು, ಪ್ರಾಣಿಗಳ ರೋಮಗಳು, ಹಕ್ಕಿಗಳ ಗರಿಗಳು.

—ಸುಬ್ರಾಯ ಚೊಕ್ಕಾಡಿ



ವನ್ಯಜೀವಿಗಳ ಅಳಿವು-ಉಳಿವು



ಲೇಖನ :
ಪಾಂಡುರಂಗ ಹೆಗಡೆ
ಚಿತ್ರಗಳು :
ಸಿ. ಎಚ್. ಬಸಪ್ಪನವರ

ಅಸ್ಸಾಮ್ ರಾಜ್ಯದ ಕಾಝಿರಾಂಗಾ ಅರಣ್ಯ ಕ್ಷೇತ್ರ. ಮುಂಜಾನೆಯ ಹೊಂಬೆಳಕು ಮೂಡುವುದರ ಮೊದಲು, ಇನ್ನೂ ನಸುಗತ್ತಲು ಇರುವಾಗಲೇ ಆನೆಯ ಮೇಲೆ ಕುಳಿತು ಕಾಡನ್ನು ಪ್ರವೇಶಿಸಿದ್ದೆವು. ಪೂರ್ವ ದಿಕ್ಕಿನಿಂದ ರವಿಯ ಕಿರಣಗಳು ಉದಯಿಸುತ್ತಿದ್ದಂತೆ ಮುಸುಕಾಗಿದ್ದ ದೃಶ್ಯ ನಿಖರವಾಗಿ ಗೋಚರವಾಗತೊಡಗಿತು. ದೂರದಲ್ಲಿ ಗುಡ್ಡ, ಗುಡ್ಡದ ತಪ್ಪಲಿನಲ್ಲಿ ವಿಶಾಲವಾದ ಮೈದಾನ. ಎರಡು ಆಳೆತ್ತರ ಬೆಳೆದು ನಿಂತಿರುವ ಹಸಿರು ಹುಲ್ಲು, ಅಲ್ಲಲ್ಲಿ ಎದ್ದು ನಿಂತ ಹಸಿರು ಗಿಡ-ಮರಗಳು. ಬ್ರಹ್ಮಪುತ್ರಾ ನದಿಯ ದಡದಲ್ಲಿನ ವಿಶಿಷ್ಟವಾದ ಪ್ರಸಿದ್ಧ ಕಾಝಿರಾಂಗಾ ಅರಣ್ಯ ಕ್ಷೇತ್ರ ಇದಾಗಿತ್ತು. ಪ್ರಕೃತಿಯ ರಮಣೀಯ ದೃಶ್ಯವನ್ನು ನೋಡುತ್ತ ಮೈ ಮರೆತ್ತಿದ್ದಾಗ ಜೊತೆಗಿದ್ದ ಮಾವುತನು ದೂರದಲ್ಲಿ ಹುಲ್ಲಿನ ಮಧ್ಯೆ ನಿಂತಿದ್ದ ಚಿಕ್ಕ ಆನೆಯಂತಿರುವ ಪ್ರಾಣಿಯನ್ನು ತೋರಿಸಿದ. ದಪ್ಪ ಕಪ್ಪು ಚರ್ಮದ, ದೈತ್ಯಾಕಾರದ ಒಂಟಿ ಕೊಂಬಿನ ಘೇಂಡಾಮೃಗ! ನಾವು ಕುಳಿತಿದ್ದ ಆನೆಯತ್ತ ದೃಷ್ಟಿ ಬೀರಿ ಪುನಃ ಹುಲ್ಲು ಮೇಯುವ ಕಾರ್ಯವನ್ನು ಮುಂದುವರೆಸಿತು. ಜಗತ್ತಿನಲ್ಲಿ ಅಪರೂಪದ ಪ್ರಾಣಿ ಎನಿಸಿದ ಈ ಒಂಟಿ ಕೊಂಬಿನ ಘೇಂಡಾಮೃಗದ ದರ್ಶನದ ಜೊತೆ ನಾವು ವಿವಿಧ ಪಶು ಪಕ್ಷಿಗಳನ್ನು, ಆನೆಯ ಹಿಂಡನ್ನು ನೋಡಿದೆವು.

ಕೆಲವು ವರ್ಷಗಳ ಹಿಂದೆ ಹಿಮಾಲಯದ ಬ್ರಹ್ಮಪುತ್ರಾ ನದಿಯ ದಡದಲ್ಲಿ ವಿಪುಲವಾಗಿ ಆಡಾಡುತ್ತಿದ್ದ ಈ ಘೇಂಡಾಮೃಗವು ಈಗ ಬೆರಳೆಣಿಕೆಯಷ್ಟು ಮಾತ್ರ ಉಳಿದುಕೊಂಡಿದೆ. ಕಾಝಿರಾಂಗಾ ಅರಣ್ಯದಲ್ಲಿಯೂ ಅದರ ಕೊಂಬಿನ ಕಳ್ಳ ಸಾಗಾಣಿಕೆದಾರರು ಈ ವನ್ಯ ಜೀವಿಯ ಬಲಿ ತೆಗೆದುಕೊಳ್ಳುತ್ತಿದ್ದಾರೆ.

ಉತ್ತರ ಭಾರತದ ಹಿಮಾಲಯದ ಪರ್ವತ ಶ್ರೇಣಿಗಳಲ್ಲಿ ವಿಶ್ವವಿಖ್ಯಾತ ಕಸ್ತೂರಿ ಮೃಗಗಳ ತವರೂರಾದರೆ, ಹಿಮಾಚ್ಛಾದಿತ ಶಿಖರಗಳ ಮಧ್ಯೆ ಬಿಳಿಯ ಬಣ್ಣದ ಹಿಮಚಿರತೆಗಳೂ ವಾಸಿಸುತ್ತವೆ. ರಾಜಸ್ಥಾನದ ಮರುಭೂಮಿಯೂ ವಿಶಿಷ್ಟವಾದ ಪಕ್ಷಿ ಸಂಕುಲಕ್ಕೆ ಅನುವು ಮಾಡಿಕೊಟ್ಟಿದೆ. ಗುಜರಾತ ರಾಜ್ಯದ ಗಿರ್ ಅರಣ್ಯ ಪ್ರದೇಶವು ಭಾರತೀಯ ಸಿಂಹಗಳಿಗೆ ಪ್ರಸಿದ್ಧಿ ಪಡೆದಿವೆ. ದಿಲ್ಲಿಯ ಹತ್ತಿರ ಭರತಪುರದಲ್ಲಿ ಅಂತರರಾಷ್ಟ್ರೀಯ ಪಕ್ಷಿಗಳು ಪ್ರತಿ

ವರ್ಷ ವಲ್ಪಸೆ ಒಂದು ಸಭೆ ನಡೆಸುತ್ತಿವೆ. ದಕ್ಷಿಣ ಭಾರತದ ಸಹ್ಯಾದ್ರಿ ಪರ್ವತಗಳು ವಿವಿಧ ಜಾತಿಯ ವನಸ್ಪತಿಗಳಿಗೆ, ವನ್ಯಜೀವಿಗಳಿಗೆ ಆಶ್ರಯ ನೀಡಿದೆ. ಪ್ರಕೃತಿಯ ವೈವಿಧ್ಯತೆಯನ್ನು ತನ್ನಲ್ಲಿ ಅಡಗಿಸಿಕೊಂಡಿರುವ ಭಾರತವು ಒಂದು ವಿಶಿಷ್ಟ ಲೋಕವಾಗಿದ್ದು ವಿವಿಧ ಸಸ್ಯ ವರ್ಗಕ್ಕೆ ಪ್ರಾಣಿಗಳಿಗೆ, ಪಕ್ಷಿ ಸಂಕುಲಕ್ಕೆ ತವರೂರಾಗಿದೆ. ಭಾರತದಲ್ಲಿರುವ ವನ್ಯಜೀವಿಗಳ, ಪಕ್ಷಿ ಸಂಕುಲದ ವೈವಿಧ್ಯತೆ ಬೇರೆಡೆಗೆ ಕಾಣಸಿಗದು. ಇಡೀ ಯುರೋಪ ಖಂಡದಲ್ಲಿ ಇರುವ ವಿವಿಧ ಜಾತಿಯ ಗಿಡಗಳಿಗಿಂತ ಹೆಚ್ಚು ಜಾತಿಯ ಸಸ್ಯಗಳು ಭಾರತದ ಒಂದು ಹೆಕ್ಟರ್ ಕಾಡಿನಲ್ಲಿದೆ! ಈ ವಿವಿಧತೆಯು ನಮ್ಮಲ್ಲಿಯ ವನ್ಯಜೀವಿಗಳ ಪಕ್ಷಿ ಸಂಕುಲಗಳ ಆಧಾರ.

ಇಂದು ನಾವು ಸಂರಕ್ಷಿಸಬೇಕಾಗಿರುವುದು ಕೇವಲ ಕೆಲವು ವಿಶಿಷ್ಟ ಪ್ರಾಣಿಗಳನ್ನಲ್ಲ. ಈ ಪ್ರಾಣಿಗಳು, ಪಕ್ಷಿಗಳು ವಾಸಿಸಲು ಬೇಕಾಗು ವಂತಹ ಪ್ರಾಕೃತಿಕ ಆವಾಸಗಳನ್ನು ಸೃಷ್ಟಿಸುವುದು ಮಹತ್ವದ ಅಂಶ ವಾಗಿದೆ.

ಐತಿಹಾಸಿಕ ಸತ್ಯ

ಭಾರತದ ಉಪಖಂಡದಲ್ಲಿ ಮನುಷ್ಯ ಮತ್ತು ಇತರ ವನ್ಯಜೀವಿಗಳು ಐವತ್ತು ಸಾವಿರ ವರ್ಷ ದಿಂದ ಸಹಜೀವನ ಮಾಡಿಕೊಂಡು ಬಂದಿದ್ದಾರೆ. ಈ ಐವತ್ತು ಸಾವಿರ ವರ್ಷಗಳಲ್ಲಿ ೪೫ ಸಾವಿರ ವರ್ಷ ಮನುಷ್ಯ ಬೇಟೆಯಾಡಿ, ಅಲೆಮಾರಿಯಾಗಿ ಜೀವನ ನಡೆಸಿದ. ಮನುಷ್ಯನು ಕೃಷಿ ಮಾಡಲು ಆರಂಭಿಸಿದ್ದು ೫ ಸಾವಿರದಿಂದ ೮ ಸಾವಿರ ವರ್ಷ ಗಳ ಹಿಂದೆ. ಅರಣ್ಯವನ್ನು ಕಡಿದು ಕೃಷಿ ಮಾಡಲು ತೊಡಗಿದಾಗ ಬೆಳೆಗಳನ್ನು ನಾಶ ಪಡಿಸುವ ವನ್ಯಜೀವಿಗಳನ್ನು ನಾಶಮಾಡ ತೊಡಗಿದ. ಇಂದು ವನ್ಯಜೀವಿಗಳು ನಾಶವಾಗಿ ಅದೇ ಮನುಷ್ಯ ಕೃಷಿ ಮಾಡುವಾಗ ಕ್ರಿಮಿ-ಕೀಟ ಗಳನ್ನು ನಾಶಪಡಿಸುವ ಪ್ರಯತ್ನದಲ್ಲಿರುವನು. ಈ ಕೃಷಿ ಆಧಾರಿತ ಸಮಾಜವು ಪ್ರಮುಖವಾಗಿ ನದಿ, ಕೊಳ್ಳದ ಪ್ರದೇಶದಲ್ಲಿ ಹರಡಿದ್ದವು. ದುರ್ಗಮವಾದ ಗುಡ್ಡಗಾಡು ಪ್ರದೇಶಗಳು ಮನುಷ್ಯನ ಚಟುವಟಿಕೆಯಿಂದ ದೂರವಾಗಿ ಉಳಿದು ಅಲ್ಲಿನ ವನ್ಯಜೀವಿಗಳು, ವಿವಿಧ ಜಾತಿಯ ವನಸ್ಪತಿಗಳು ಉಳಿದುಕೊಂಡು ಬಂದವು. ಅವುಗಳ ರಕ್ಷಣೆ ನಿರಂತರವಾಗಿ ನಡೆದು ಬಂದಿತು.



ಈ ಪ್ರಾಕೃತಿಕ ಆವಾಸಗಳು ಬ್ರಿಟಿಷ್ ಆಡಳಿತ ಬಂದ ನಂತರ ತೀವ್ರ ಗತಿಯಲ್ಲಿ ನಾಶವಾಗ ತೊಡಗಿತು. ಬ್ರಿಟಿಷರು ಭಾರತಕ್ಕೆ ಆಗಮಿಸಿ ದಾಗ ಭಾರತದ ಹಲವಾರು ಕ್ಷೇತ್ರಗಳಲ್ಲಿ ಹುಲಿ-ಸಿಂಹದ ಹಿಂಡು ತಿರುಗಾಡುತ್ತಿದ್ದವು. ಬಿಳಿಯರು ಜೊತೆಗೆ ತಂದ ತುಪಾಕಿಗಳಿಂದಾಗಿ ಭಾರತದ ವನ್ಯಜೀವಿಗಳು ಬಿಳಿಯರ, ನಮ್ಮ ಮಹಾ ರಾಜರ ತುಪಾಕಿಗಳಿಗೆ ಬಲಿಯಾಗತೊಡಗಿದವು. ಈ ಶಿಕಾರಿಯ ಹುಚ್ಚಿನಿಂದಾಗಿ ಹತ್ತೊಂಬತ್ತನೆಯ ಶತಮಾನದ ಮುಕ್ತಾಯದ ಹೊತ್ತಿಗೆ ಸಿಂಹಗಳ ಸಂಖ್ಯೆ ಕೇವಲ ೨೦ಕ್ಕೆ ಇಳಿದಿತ್ತು!

ತುಪಾಕಿಗಳಿಂದ ಶಿಕಾರಿ ಮಾಡುವ ಪರಂಪರೆಗಿಂತ ಬ್ರಿಟಿಷ್ ಆಡಳಿತದ ದಿನಗಳಲ್ಲಿ ನಡೆದ ಅರಣ್ಯ ನಾಶವು ವನ್ಯಜೀವಿಗಳ ಉಳಿವಿಗೆ ವಿನಾಶ ಕಾರಿಯಾಗಿದ್ದವು. ಸಾಮುದಾಯಿಕ ಅರಣ್ಯವನ್ನು ದುರ್ಗಮ ಕ್ಷೇತ್ರದ ವನ ಸಂಪತ್ತನ್ನು ಸರಕಾರದ ಸ್ವತ್ತು ಎಂದು ಘೋಷಿಸಿ ಹಡಗು ನಿರ್ಮಾಣಕ್ಕಾಗಿ, ಉದ್ದಿಮೆಗಳಿಗಾಗಿ ದೊಡ್ಡ ಪ್ರಮಾಣದ ಅರಣ್ಯ ನಾಶವನ್ನು ಪ್ರಾರಂಭಿಸಿತು. ಬಿಳಿಯರು ಅಮೇರಿಕಾ, ಆಸ್ಟ್ರೇಲಿಯಾದಲ್ಲಿ ನಡೆಸಿದ ಅರಣ್ಯ ನಾಶದ ಇತಿಹಾಸವು ಭಾರತದಲ್ಲಿ ಪುನರಾವರ್ತನೆಯಾಯಿತು. ಇದರಿಂದಾಗಿ ವನ್ಯಜೀವಿಗಳ ಪ್ರಾಕೃತಿಕ ಆವಾಸಗಳು ನಾಶವಾದವು.

ಸ್ವತಂತ್ರ ಭಾರತದಲ್ಲಿ

ಬಿಳಿಯರ ಆಳಿಕೆ ಮುಗಿದ ನಂತರ, ಬ್ರಿಟಿಷರು ನಾಶ ಮಾಡಿದ ಅರಣ್ಯ ಸಂಪತ್ತಿನ ಪರಂಪರೆಯನ್ನು ಅವರು ಪಾಲಿಸಿದ ನೀತಿಗಳನ್ನು ಮುಂದುವರೆಸಿಕೊಂಡು ಬಂದೆವು. ಇದರ ಪರಿಣಾಮವೆಂದ ಹಾಗೆ ಇತ್ತೀಚಿನ ಉಪಗ್ರಹ\ಚಿತ್ರಗಳ ಅಧ್ಯಯನ ಮಾಡಿ ಸರಕಾರವು-ರಾಷ್ಟ್ರದ ಅರಣ್ಯ ಕ್ಷೇತ್ರವು ಒಟ್ಟು ಭೂಭಾಗದ ಶೇಕಡಾ ೧೧ರಷ್ಟೂ ಇಲ್ಲ ಎಂದು ಹೇಳಿದೆ. ಸ್ವತಂತ್ರ ಭಾರತದ ಆಡಳಿತದಲ್ಲಿ ನಿರಂತರವಾಗಿ ಹಸಿರುವನವನ್ನು ಬಲಿಕೊಟ್ಟು ಪ್ರಗತಿಯನ್ನು ಸಾಧಿಸುವ ಹುನ್ನಾರು ಮಾಡಿದರು. ಇದರ ಪರಿಣಾಮವಾಗಿ ಇಂದು ನಾವು ಬರಗಾಲದ ಬವಣೆಯ ಜೊತೆಯಲ್ಲಿ ಪ್ರವಾಹದ ಸಂಕಟವನ್ನೂ ಎದುರಿಸುತ್ತಿದ್ದೇವೆ. ಸರಕಾರಿ ಅಂಕಿ ಅಂಶಗಳ ಪ್ರಕಾರ ೧೯೫೨ ರಲ್ಲಿ ೧೩ ಜಾತಿಯ ವನ್ಯಜೀವಿಗಳು ವಿನಾಶದ ಅಂಚಿನಲ್ಲಿ ಇದ್ದವು. ೧೯೮೪ ರಲ್ಲಿ ಈ ಸಂಖ್ಯೆ ೭೦ಕ್ಕೆ ಏರಿದೆ. ವನ್ಯಜೀವಿಗಳು

ವಾಸಿಸುತ್ತಿದ್ದ ಪರಿಸರ ನಾಶವಾದಾಗ ಹಲವು ಪ್ರಾಣಿಗಳು ವಿನಾಶವಾಗುವದು ಸಹಜ.

ಅರಣ್ಯನಾಶದ ಜತೆ ವನ್ಯಜೀವಿಗಳ ನಾಶ ನಡೆದು, ಕಾಡಿನಲ್ಲಿರುವ ಅತೀ ವಿರಳವಾದ, ಅಪರೂಪದ ಸಸ್ಯ ಸಂಪತ್ತು ಸಹ ಲುಪ್ತವಾಗುತ್ತಲಿದೆ. ಪಾಂಡೀಚೇರಿಯ ಫ್ರೆಂಚ್ ಸಂಸ್ಥೆಯ ವಿಜ್ಞಾನಿಯಾದ ಮೆಹರೊಮಜೀಯ ಪ್ರಕಾರ "ಜೋಗ ಜಲಪಾತದ ಸುತ್ತಮುತ್ತ ಕಾಣಸಿಗುತ್ತಿದ್ದ ವಿಶಿಷ್ಟವಾದ ಹುಲ್ಲು ಲಿಂಗನಮಕ್ಕಿ ಜಲಾಶಯದ ನಿರ್ಮಾಣದ ನಂತರ ಕಾಣೆಯಾಗಿದೆ. ಸಹ್ಯಾದ್ರಿಯ ಪರ್ವತಶಿಖರಗಳಲ್ಲಿ ಹಲವಾರು ವನಸ್ಪತಿಗಳು ಅವುಗಳನ್ನು ಗುರುತಿಸುವ, ಅಧ್ಯಯನ ನಡೆಯಿಸುವ ಮುನ್ನ ನಾಶವಾಗಿವೆ" ಎಂದು ಹೇಳುತ್ತಾರೆ.

ಪರಿಣಾಮ

ಅರಣ್ಯ ನಾಶವಾದಾಗ ಪರಿಸರ ಸಮತೋಲನ ನಾಶವಾಗಿ ಮನುಷ್ಯನ ಜೀವನದ ಮೇಲೆ ದುಷ್ಪರಿಣಾಮ ಬೀರಿದ ಹಲವಾರು ನಿದರ್ಶನಗಳಿವೆ. ಮಾಗೋಡು ಜಲಪಾತದ ಹತ್ತಿರ ವಾಸಿಸುವ ಸಿದ್ದಿ ಜನಾಂಗದ ಫಕೀರನು ಹೇಳುವಂತೆ "ಹದಿನೈದು ವರ್ಷದ ಹಿಂದೆ ಬಹಳ ಕಾಡು ಇತ್ತು. ಹುಲಿ, ಚಿರತೆಗಳ ಜತೆಗೆ ಕಾಡುನಾಯಿಗಳಿದ್ದವು. ಕಾಡುನಾಯಿಗಳು ಕಾಡುಹಂದಿಗಳನ್ನು ಬೇಟೆಯಾಡಿ ತಿನ್ನುತ್ತಿದ್ದವು. ಕಾಡು ಕಡಿಯಲು ಬಂದು ಶಿಕಾರಿ ಮಾಡುವವರು ಕಾಡುನಾಯಿಯನ್ನು ಬೇಟೆಯಾಡಿದರು. ಇದರಿಂದಾಗಿ ಕಾಡುಹಂದಿಗಳ ಸಂಖ್ಯೆ ಮಿತಿಮೀರಿ ಹೊಲದಲ್ಲಿರುವ ಬೆಳೆ ಹಾಗೂ ಭತ್ತದ ಗದ್ದೆಯನ್ನು ನಾಶಪಡಿಸತೊಡಗಿವೆ." ಕಾಡಿನಲ್ಲಿದ್ದ ನೈಸರ್ಗಿಕ ಸಮತೋಲನವು ಏರುಪೇರಾಗಿ ಜನಜೀವನದ ಮೇಲೆ ಪರಿಣಾಮ ಬೀರಿದೆ.

ಅರಣ್ಯ ನಾಶದಿಂದ ಜಲಚರಜೀವಿಗಳ ಮೇಲೂ ಪರಿಣಾಮ ಬೀರುವದೆಂದು ಹೇಳಿದರೆ ಆಶ್ಚರ್ಯವಾಗಬಹುದು. ಪರ್ವತಪ್ರದೇಶಗಳಲ್ಲಿರುವ ಗಿಡಮರಗಳ ಎಲೆ ಕೊಳೆತು ಗೊಬ್ಬಾಗಿ ನದಿಯ ನೀರಿನ ಜತೆ ಸಮುದ್ರ ಸೇರಿದಾಗ, ಸಮುದ್ರದಲ್ಲಿ ಜೀವಿಸುವ ಪ್ರಾಣಿಗಳಿಗೆ ಆಹಾರವಾಗುತ್ತದೆ. ನದಿಕೊಳ್ಳದ ಅರಣ್ಯ ನಾಶವಾಗುತ್ತಿರುವ ಹಾಗೆ ಸಮುದ್ರ ಸೇರುವ ನೀರಿನಲ್ಲಿ ಗೊಬ್ಬಿನ ಪ್ರಮಾಣ ಕಡಿಮೆಯಾಗಿ ಜಲಚರ ಜೀವಿಗಳಿಗೆ ಆಹಾರದ ಕೊರತೆ ಉಂಟಾಗಿದೆ. ಇದರಿಂದಾಗಿ ಮೀನು ಹಿಡಿದು ಜೀವಿಸುವ ಮೀನುಗಾರರು ಮೀನಿನ ಬರದಿಂದ ಗಂಡಾಂತರವನ್ನು ಎದುರಿಸುತ್ತಿದ್ದಾರೆ.

ಪಕ್ಷಿಸಂಕುಲ ನಾಶವಾಗುತ್ತಿರುವ, ಕ್ಷೀಣಿಸುತ್ತಿರುವ ಸೂಚನೆಗಳೂ ಕಂಡುಬರುತ್ತಿವೆ. ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದಲ್ಲಿ ಭಾರತದಲ್ಲಿ ವಾಸಿಸುವ ಪಕ್ಷಿ ಸಂಕುಲದ ಶೇಕಡಾ ೭೫ ರಷ್ಟು ಕಂಡುಬಂದಿದೆ ಎಂದು ಬ್ರಿಟಿಷ್ ಅಧ್ಯಯನ ಸ್ಪಷ್ಟಪಡಿಸಿದೆ. ಹಕ್ಕಿಗಳ ಅಧ್ಯಯನದ ಇತ್ತೀಚಿನ ವರದಿಗಳ ಪ್ರಕಾರ ಇಲ್ಲಿಯ ಪಕ್ಷಿಸಂಕುಲಗಳಲ್ಲಿ ಹಲವಾರು ಜಾತಿಯ ಪಕ್ಷಿಗಳು ಕಾಣೆಯಾಗಿವೆ. ಅಧ್ಯಯನ ಮಾಡಿದ ವಿಜ್ಞಾನಿಗಳ ಪ್ರಕಾರ, ತೀವ್ರ ಪ್ರಮಾಣದ ಅರಣ್ಯನಾಶ, ನೈಸರ್ಗಿಕ ಅರಣ್ಯ ಕಡಿದು ಒಂದೇ ಜಾತಿಯ ಗಿಡಗಳ ನೆಡುತೋಪನ್ನು ನೆಟ್ಟಿರುವದು, ದೊಡ್ಡ ಆಣೆಕಟ್ಟುಗಳ ನಿರ್ಮಾಣ ಇವೇ ಮುಂತಾದ ಕಾರಣದಿಂದಾಗಿ ಪಕ್ಷಿ ಜಾತಿಯು ನಾಶವಾಗುತ್ತಲಿದೆ.

ಚೀನಾದಲ್ಲಿ ಕ್ರಾಂತಿಯ ಬಿಸಿ ಮಾಯುವ ಮೊದಲು ಅಲ್ಲಿಯ ನೀತಿನಿರ್ಣಾಯಕರ ಕರೆಗೆ ಓಗೊಟ್ಟು ಜನರು ಹಕ್ಕಿ-ಪಕ್ಷಿಗಳನ್ನು ಸಂಪೂರ್ಣವಾಗಿ ನಿರ್ಮೂಲನ ಮಾಡಿದರು. ಇದರಿಂದ ಕೃಷಿಗೆ ಆಗುವ ಹಾನಿಯನ್ನು ತಪ್ಪಿಸಲು ಸಾಧ್ಯ ಎಂದು ಅವರ ಅಭಿಮತವಾಗಿತ್ತು. ಆದರೆ ಪಕ್ಷಿ ಸಂಕುಲದ ನಾಶದ ಜೊತೆಗೆ ಹೊಲಗದ್ದೆಗಳಲ್ಲಿ ಕ್ರಿಮಿಕೀಟಗಳು ಅಸಾಧ್ಯ ಪ್ರಮಾಣದಲ್ಲಿ ಹೆಚ್ಚಾದವು. ಈ ಕ್ರಿಮಿ ಕೀಟಗಳನ್ನು ತಿನ್ನುವ ಪಕ್ಷಿಗಳು ಇಲ್ಲದೆ ಅವುಗಳ ನಿಯಂತ್ರಣ ಒಂದು ದೊಡ್ಡ ಸಮಸ್ಯೆಯಾಯಿತು! ಒಂದು ಸಮಸ್ಯೆಯನ್ನು ಬಗೆಹರಿಸಲು ಹೋಗಿ ಮತ್ತೂ ಗಂಭೀರ



ವಾದ ಸಮಸ್ಯೆಯನ್ನು ತಂದುಕೊಂಡಿದ್ದರು. ನೈಸರ್ಗಿಕ ನಿಯಂತ್ರಣವನ್ನು ಬುಡ-ಮೇಲು ಮಾಡಿದ ಚೀನಾ ಜನರ ಕ್ರಮದಿಂದ ಇನ್ನೂ ದುಷ್ಪರಿಣಾಮಗಳನ್ನು ಎದುರಿಸುತ್ತಿದೆ.

ಸಂರಕ್ಷಣೆ

ಇತ್ತೀಚಿನ ವರ್ಷಗಳಲ್ಲಿ ವನ್ಯಜೀವಿಗಳ ರಕ್ಷಣೆಗಾಗಿ ವಿವಿಧ ಯೋಜನೆಗಳು ರೂಪುಗೊಂಡಿವೆ. ಈ ಯೋಜನೆಗಳು ಸಿದ್ಧವಾಗುವದಕ್ಕಿಂತ ಮುಂಚೆ ಭಾರತದಲ್ಲಿ ಪರಂಪರಾಗತವಾಗಿ ವನ್ಯಜೀವಿಗಳ, ಪರಿಸರ ಸಂರಕ್ಷಣೆಯ ಪದ್ಧತಿಯು ನಡೆದು ಬಂದಿದೆ. ರಾಜಸ್ಥಾನದ ಮರುಭೂಮಿಯಲ್ಲಿ ಉದಯಿಸಿದ ಬಿಶ್‌ನೋಯಿ ಸಮಾಜವು ಪ್ರಮುಖವಾಗಿ ಗಿಡಮರಗಳ, ವನ್ಯಜೀವಿಗಳ ರಕ್ಷಣೆಗೆ ಹೆಚ್ಚಿನ ಮಹತ್ವನೀಡಿದರು. ಈ ಜನಾಂಗದ ೩೬೩ ಜನರು ೨೫೦ ವರ್ಷದ ಹಿಂದೆ ಖೇಜಡಿ ಎಂಬ ಗಿಡದ ರಕ್ಷಣೆಗಾಗಿ ತಮ್ಮ ಪ್ರಾಣವನ್ನು ಬಲಿಕೊಟ್ಟರು. ಇಂದಿಗೂ ಸಹ ಬಿಶನೋಯಿ ಜನಾಂಗದ ಹಳ್ಳಿಗಳಲ್ಲಿ ವಿಪುಲವಾಗಿ ಗಿಡಮರಗಳೂ, ಸುತ್ತಲೂ ನಿರ್ಭಯವಾಗಿ ನಲಿದಾಡುವ ನವಿಲು ಮತ್ತು ಜಿಂಕೆಗಳ ಹಿಂಡನ್ನು ನೋಡಬಹುದಾಗಿದೆ.

ಕರ್ನಾಟಕದ ಮಲೆನಾಡಿನ ಕ್ಷೇತ್ರದಲ್ಲಿ ಕಾಡಿನಲ್ಲಿ ವನದೇವತೆಯನ್ನು ಪೂಜೆಮಾಡುವ ಪರಿಪಾಠ ಬೆಳೆದು ಬಂದಿತ್ತು. ಕೊಡಗಿನಲ್ಲಿ ಅಲ್ಲಿಯ ಪೂರ್ವಜರು "ದೇವರ ಕಾಡು" ಎಂದು ಅರಣ್ಯದಲ್ಲಿ ಸಂರಕ್ಷಿತ ಕ್ಷೇತ್ರವನ್ನು ಸ್ಥಾಪಿಸಿದ್ದರು. ಇಂತಹ ದೇವರ ಕಾಡಿನಲ್ಲಿ ಪ್ರಾಣಿಗಳು, ವನ್ಯಜೀವಿಗಳು ರಕ್ಷಣೆ ಪಡೆಯುತ್ತಿದ್ದವು. ನಮ್ಮ ಸಂಸ್ಕೃತಿಯಲ್ಲಿ ಋಷಿಮುನಿಗಳ ಆಶ್ರಮದಲ್ಲಿ ವನ್ಯಜೀವಿಗಳ, ಮನುಷ್ಯನ ನಡುವಿನ ಸಾಮರಸ್ಯದ ಪ್ರತೀಕದಂತಿದ್ದವು.

ಪರಂಪರಾಗತವಾದ ಈ ಪದ್ಧತಿಯಲ್ಲಿ ಅರಣ್ಯ, ಸಸ್ಯಸಂಪತ್ತು ಮತ್ತು ಜನರ ನಡುವೆ ಸಾಮರಸ್ಯ ಮತ್ತು ಸಮಗ್ರತೆಯ ಅಂಶಗಳಿದ್ದವು. ಈ ಸಮಗ್ರತೆಯ ಭಾವದಿಂದಾಗಿ ಪರಿಸರ ಸಂರಕ್ಷಣೆಯು, ವನ್ಯಜೀವಿಗಳನ್ನು ಸಂರಕ್ಷಿಸುವ ಕಾರ್ಯ ಸುಲಭವಾಗಿತ್ತು.

ಭಾರತದಲ್ಲಿ ವನ್ಯಜೀವಿಗಳ ನಾಶದ ಗಂಭೀರತೆಯ ಅರಿವು ಮೂಡಿದ್ದು ಇತ್ತೀಚೆಗೆ. ೧೯೭೨ ರಲ್ಲಿ ಸರಕಾರವು ವನ್ಯಜೀವಿಗಳ ಸಂರಕ್ಷಣೆಯ ಕಾಯಿದೆಯನ್ನು ಜಾರಿಗೊಳಿಸಿತು. ನಾಶವಾಗುತ್ತಿರುವ ಹಲವಾರು ಪ್ರಾಣಿಗಳ ರಕ್ಷಣೆಗಾಗಿ ಅವು

ಕರ್ನಾಟಕದಲ್ಲಿ ಸಂರಕ್ಷಣಾ ಕಾರ್ಯಕ್ರಮ

ನಮ್ಮ ದೇಶದ ಇತರ ಭಾಗಗಳಿಗಿಂತ ಸಂಪದ್ಭರಿತ ವನ್ಯ ಸಂಪತ್ತು ಹಾಗೂ ಅಪರೂಪದ ಮತ್ತು ವೈವಿಧ್ಯಮಯ ಪ್ರಾಣಿ ವರ್ಗವನ್ನು ಹೊಂದಿರುವ ನಾಡು ನಮ್ಮ ಕರ್ನಾಟಕ. ಅಪಾಯದ ಅಂಚಿನಲ್ಲಿರುವ ಹಲವು ಅಪರೂಪದ ಪ್ರಾಣಿಗಳನ್ನು ಒಳಗೊಂಡಂತೆ ವನ್ಯಮೃಗಗಳ ಸಂರಕ್ಷಣೆಗಾಗಿ ರಾಜ್ಯದಲ್ಲಿ ಅನೇಕ ಅಗತ್ಯ ಕಾರ್ಯಕ್ರಮಗಳನ್ನು ರೂಪಿಸಿ ಕಾರ್ಯಗತ ಮಾಡಲಾಗುತ್ತಿದೆ.

೧೯೭೨ ರಲ್ಲಿ ಕೇವಲ ಒಂದು ರಾಷ್ಟ್ರೀಯ ಉದ್ಯಾನವನ ಮತ್ತು ಒಂಬತ್ತು ಅಭಯಾರಣ್ಯಗಳು ಇದ್ದ ಕರ್ನಾಟಕದಲ್ಲಿ ಈಗ ಮೂರು ರಾಷ್ಟ್ರೀಯ ಉದ್ಯಾನವನಗಳು ಹಾಗೂ ೧೫ ವನ್ಯಮೃಗ ಅಭಯಾರಣ್ಯಗಳು ಇದ್ದು ಇವು ಒಟ್ಟು ೯೯೦೫. ೯೦ ಚದುರ ಕಿಲೋಮೀಟರ ವಿಸ್ತೀರ್ಣದಲ್ಲಿ ಹರಡಿಕೊಂಡಿವೆ.

ಅಧಿಕೃತವಾಗಿ ಘೋಷಿಸಲ್ಪಟ್ಟ ಅಭಯಾರಣ್ಯಗಳ ಜೊತೆಗೆ ಮಂಡ್ಯ ಜಿಲ್ಲೆಯ ಮದ್ದೂರು ಬಳಿ ಜನಾಕರ್ಷಣೀಯ ಕೊಕ್ಕರೆ ಬೆಳ್ಳೂರು ಪಕ್ಷಿಧಾಮವಿದೆ. ಈ ಸಣ್ಣ ಗ್ರಾಮದಲ್ಲಿ ಹಾಲಿ, ಹುಣಸೆ, ಬೇವು ಮುಂತಾದ ವಿವಿಧ ಜಾತಿಯ ಮರಗಳು ದಟ್ಟವಾಗಿದ್ದು ವಲಸೆ ಬರುವ ಹಕ್ಕಿಗಳಿಗೆ ಗೂಡು ಕಟ್ಟಿ ಮರಿ ಮಾಡಲು ಉತ್ತಮ ಪರಿಸರವಿದೆ. ಸ್ಥಳೀಯ ಗ್ರಾಮಸ್ಥರು ಹಕ್ಕಿಗಳ ರಕ್ಷಣೆಯಲ್ಲಿ ಆಸಕ್ತಿ ಹೊಂದಿರುವುದರಿಂದ ಪಕ್ಷಿಗಳಿಗೆ ಉತ್ತಮ ಆಸರೆ ದೊರೆತಂತಾಗಿದೆ.

೧೯೭೦ ರಲ್ಲಿ ಅಭಯಾರಣ್ಯಗಳನ್ನು ವ್ಯವಸ್ಥೆ ಮಾಡುವಾಗ ತೇವಾಂಶದಿಂದ ಕೂಡಿದ ಎಲೆಯುದುರುವ ಕಾಡುಗಳನ್ನು ಆರಿಸಲಾಗುತ್ತಿತ್ತು. ಪ್ರಾಕೃತಿಕ ಸಮತೋಲನ ಕಾಪಾಡಿಕೊಂಡು ಬರಲು ಮತ್ತು ನಶಿಸುತ್ತಿರುವ ಅಪರೂಪದ ವನ್ಯಪ್ರಾಣಿಗಳನ್ನು ಸಂರಕ್ಷಿಸಲು ಒಂದೇ ವಿಧದ ಪರಿಸರ ಸೂಕ್ತವಲ್ಲವೆಂದು ಅಧ್ಯಯನಗಳಿಂದ ತಿಳಿದುಬಂದಿತು. ಎಲ್ಲ ಬಗೆಯ ಪರಿಸರಗಳಿಗೆ ಅನುಗುಣವಾಗಿ ಅಭಯಾರಣ್ಯಗಳನ್ನು ವ್ಯವಸ್ಥೆ ಮಾಡುವದು ಅಗತ್ಯವಾಯಿತು. ಇದರಲ್ಲಿ ನಶಿಸುತ್ತಿರುವ ಅಪರೂಪದ ಸಸ್ಯಗಳು, ಅಪಾಯದ ಅಂಚಿನಲ್ಲಿರುವ ಪ್ರಾಣಿಗಳಾದ ನೀಲಗಿರಿ ಲಾಂಗರ, ತೋಳ, ಮಲಬಾರ ಬೆಕ್ಕು ಮುಂತಾದವುಗಳ ರಕ್ಷಣೆಗಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು.

ಈ ದಿಸೆಯಲ್ಲಿ ರಾಜ್ಯ ವನ್ಯಜೀವಿ ಸಲಹಾ ಮಂಡಳಿಯು ಸಮ್ಮತಿಯಂತೆ ಉಪಸಮಿತಿಯೊಂದನ್ನು ರಚಿಸಿದ್ದು ಅದು ಈಗಾಗಲೇ ಸರಕಾರಕ್ಕೆ ಸೂಕ್ತ ಶಿಫಾರಸ್ಸುಗಳೊಡನೆ ವರದಿಯೊಂದನ್ನು ಸಲ್ಲಿಸಿದೆ. ಪಶ್ಚಿಮ ಘಟ್ಟಗಳ ನಿತ್ಯ ಹರಿದ್ವರ್ಣ ಕಾಡುಗಳಲ್ಲಿ ಅಭಯಾರಣ್ಯಗಳ ಪ್ರದೇಶ ಹೆಚ್ಚಿಸುವದು. ದಾಂಡೇಲಿ ಮತ್ತು ಶೆಟ್ಟಿಹಳ್ಳಿ ಕಾಡುಗಳಲ್ಲಿ ಅಭಯಾರಣ್ಯಗಳ ವಿಸ್ತೀರ್ಣ ಕಡಿಮೆ ಮಾಡುವದು ಇವು ಈ ವರದಿಯಲ್ಲಿಯ ಮುಖ್ಯಾಂಶಗಳು.

೧೯೮೩ ರಲ್ಲಿ ನಡೆಸಿದ ವನ್ಯಪ್ರಾಣಿಗಳ ಗಣತಿ ಪ್ರಕಾರ ರಾಜ್ಯದ ಅರಣ್ಯದಲ್ಲಿ ಈಗ ೭೦೪ ಗಂಡು ಮತ್ತು ೨೦೬೮ ಹೆಣ್ಣಾನೆಗಳೂ ಸೇರಿದಂತೆ ಒಟ್ಟು ೩,೫೭೯ ಆನೆಗಳು ಹಾಗೂ ೫೩,೧೬೬ ಕಾಡೆಮ್ಮೆಗಳು ಇವೆ.


ಅದೇ ರೀತಿ ೧೯೮೪ ರಲ್ಲಿ ನಡೆಸಿದ ಹುಲಿ ಮತ್ತು ಚಿರತೆಗಳ ಗಣತಿ ಕರ್ನಾಟದಲ್ಲಿ ೭೩ ಗಂಡು, ೯೪ ಹೆಣ್ಣು, ೩೫ ಮರಿಗಳೂ ಸೇರಿದಂತೆ ೨೦೨ ಹುಲಿಗಳನ್ನು ಮತ್ತು ೩೩೯ ಚಿರತೆಗಳನ್ನು ಗುರುತಿಸಿದೆ.

ಆನೆಗಳು ಬೆಳೆ ನಾಶ ಮಾಡುವುದು. ಹುಲಿ ಚಿರತೆಗಳು ದನಕರುಗಳನ್ನು ಹಾಗೂ ಮನುಷ್ಯರನ್ನು ಕೊಲ್ಲುತ್ತಿರುವುದು ವನ್ಯ ಸಂರಕ್ಷಣೆಯಲ್ಲಿ ದೊಡ್ಡ ಸಮಸ್ಯೆಯಾಗಿದೆ. ರೈತರು ವನ್ಯಜೀವಿಗಳ ಉಪಟಳ ತಾಳಲಾರದೆ ಅವುಗಳನ್ನು ಕೊಲ್ಲುವ ಅಥವಾ ಅವುಗಳಿಗೆ ವಿಷ ಉಣಿಸುವ ಹಂತಕ್ಕೆ ಹೋಗುತ್ತಾರೆ. ಇದನ್ನು ತಡೆಯಲು ವನ್ಯಜೀವಿಗಳಿಂದ ಆದ ಬೆಳೆನಾಶಕ್ಕೆ ದನಕರುಗಳ ಸಾವಿಗೆ ಹಾಗೂ ಪೆಟ್ಟು ತಿಂದವರಿಗೆ ಪರಿಹಾರ ಕೊಡುವ ವ್ಯವಸ್ಥೆಯನ್ನು ರಾಜ್ಯ ಸರಕಾರ ಜಾರಿಗೆ ತಂದಿದೆ.

ಪ್ರತಿಷ್ಠಿತ ರಾಷ್ಟ್ರೀಯ ಉದ್ಯಾನವನ ಹಾಗೂ ಅಭಯಾರಣ್ಯಗಳಲ್ಲಿ ಸಂಶೋಧನೆ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳನ್ನು ನಡೆಸುವ ಉದ್ದೇಶವುಳ್ಳ ೮೦ ಲಕ್ಷ ರೂ. ಗಳ ಯೋಜನೆಯೊಂದನ್ನು ಕೇಂದ್ರ ಪರಿಸರ ಇಲಾಖೆಗೆ ಸಲ್ಲಿಸಲಾಗಿದೆ. ನಶಿಸುತ್ತಿರುವ ವನ್ಯಮೃಗ ಹಾಗು ಸಸ್ಯವರ್ಗಗಳ ರಕ್ಷಣೆ, ಪ್ರಾಣಿಗಳ ಜೀವನ ಶೈಲಿಯ ಕುರಿತು ಸಂಶೋಧನೆ ನಡೆಸುವುದು ಇದರಲ್ಲಿ ಸೇರಿದೆ.

ಅರಣ್ಯ ಸಂರಕ್ಷಣೆ ಬಗ್ಗೆ ಸಾರ್ವಜನಿಕರು ಅದರಲ್ಲೂ ಯುವಕರು ಹೆಚ್ಚಿನ ಆಸಕ್ತಿ ತೋರಿದ್ದಾರೆ.

ಎಂ. ಕೆ. ಅಪ್ಪಯ್ಯ
ಚೀಫ್ ವೈಲ್ಡ್ ಲೈಫ್ ವಾರ್ಡನ್



ಗಳ ಬೇಟೆಯಾಡುವುದನ್ನು ಪ್ರತಿಬಂಧಿಸಲಾಯಿತು. ಇದರ ಜೊತೆಗೆ ಸರಕಾರವು ಕೆಲ ವಿಶೇಷ ಯೋಜನೆಗಳನ್ನು ಹಾಕಿಕೊಂಡಿದೆ. ಇವುಗಳಲ್ಲಿ ಪ್ರಮುಖವಾದುದೆಂದರೆ ರಾಷ್ಟ್ರೀಯ ಉದ್ಯಾನಗಳ ಮತ್ತು ಅಭಯಾರಣ್ಯಗಳ ಸ್ಥಾಪನೆ. ರಾಷ್ಟ್ರದ ಒಟ್ಟು ಭೂಭಾಗದ ಶೇಕಡಾ ಎರಡರಷ್ಟು ಪ್ರದೇಶದಲ್ಲಿ ಈ ತರಹ ಅಭಯಾರಣ್ಯಗಳನ್ನು ಸ್ಥಾಪಿಸಿ ವನ್ಯಜೀವಿಗಳು ತಮ್ಮ ಸ್ವಾಭಾವಿಕ ಪ್ರದೇಶದಲ್ಲಿ ಬದುಕುವ ಅವಕಾಶವನ್ನು ಒದಗಿಸಿದೆ.


ಈ ಶತಮಾನದ ಆರಂಭದಲ್ಲಿ ೪೦೦೦೦ ಹುಲಿಗಳಿದ್ದುದು ೧೯೭೨ ರಲ್ಲಿ ಕೇವಲ ಎರಡು ಸಾವಿರ ಮಾತ್ರ ಉಳಿದಿತ್ತು. ನಶಿಸುತ್ತಿರುವ ಹುಲಿಯ ಸಂರಕ್ಷಣೆಗಾಗಿ ವಿಶೇಷ ಯೋಜನೆಯೊಂದನ್ನು ಕಾರ್ಯರೂಪದಲ್ಲಿ ತರಲಾಯಿತು. ಅಂತಾರಾಷ್ಟ್ರೀಯ ಸಹಯೋಗ ಪಡೆದು ಈ ಕಾರ್ಯಕ್ರಮವನ್ನು ಹಲವಾರು ರಾಜ್ಯಗಳು ಜಾರಿಗೊಳಿಸಿದವು. ಕರ್ನಾಟಕದ ಬಂಡೀಪುರ ಅಭಯಾರಣ್ಯವೂ ಈ ಯೋಜನೆಯೊಳಗೆ ಒಂದಾಗಿದೆ. ಕ್ರಮೇಣವಾಗಿ ಹುಲಿಗಳ ಸಂಖ್ಯೆ ಹೆಚ್ಚುತ್ತಲಿದೆ. ಕಾಡಿನ ರಾಜನೆಂದು ಪ್ರಸಿದ್ಧಿ ಪಡೆದಿರುವ ಸಿಂಹದ ಸಂಖ್ಯೆ ಕೇವಲ ೨೦ ಇದ್ದದ್ದು ಇಂದು ಸಂರಕ್ಷಣೆ ಪಡೆದ ನಂತರ ೨೦೦ ಕ್ಕೆ ಏರಿದೆ.

ಭಾರತದಲ್ಲಿ ೫೯ ರಾಷ್ಟ್ರೀಯ ಉದ್ಯಾನಗಳು, ೨೫೪ ಅಭಯ ಅರಣ್ಯಗಳನ್ನು ಸ್ಥಾಪಿಸಿದರೂ ಪ್ರಾಣಿಗಳ ಸಂತತಿಯು ಕಾಣೆಯಾಗುತ್ತಿರುವದು ಕಡಿಮೆಯಾಗಿಲ್ಲ. ೧೯೫೨ ರಲ್ಲಿ ಹದಿಮೂರು ಪ್ರಾಣಿಗಳು ವಿನಾಶದ ಅಂಚಿನಲ್ಲಿದ್ದವು. ೧೯೮೪ ರಲ್ಲಿ ಈ ಸಂಖ್ಯೆ ಇಪ್ಪತ್ತಕ್ಕೆ ಏರಿದೆ. ಹಿಮ ಚಿರತೆಯಂತಹ ಅಪರೂಪದ ವನ್ಯಜೀವಿಗಳು ಇನ್ನು ಕಾಣಸಿಗಲಾರವು. ಸರಕಾರದ ಕಾಯಿದೆ ಇದ್ದರೂ ಸಹ ಹಣದ ಆಸೆಗಾಗಿ ಕಸ್ತೂರಿ ಮೃಗದ ಬೇಟೆ ನಿರಂತರವಾಗಿ ನಡೆಯುತ್ತಲಿದೆ. ಭಾರತದಿಂದ ಅನಧಿಕೃತವಾಗಿ ಕಸ್ತೂರಿಯನ್ನು ಜಪಾನಕ್ಕೆ ಸಾಗಿಸಿ ಪ್ರತಿ ವರ್ಷ ಮೂರು ಕೋಟಿ ರೂಪಾಯಿಯ ವ್ಯಾಪಾರವಾಗುತ್ತದೆ. ಕಾಝಿರಾಂಗಾದ ಅಭಯಾರಣ್ಯದಲ್ಲಿರುವ ಘೇಂಡಾಮೃಗದ, ಬಂಡೀಪುರ, ನಾಗರಹೊಳೆಯಲ್ಲಿ ಅಡ್ಡಾಡುವ ಆನೆಗಳ ದಂತವನ್ನು ಸಾಗಿಸುವ ಕಳ್ಳ ಸಾಗಾಣಿಕೆದಾರರು ಅವನ್ನು ಆಧುನಿಕ ಶಸ್ತ್ರಗಳಿಂದ ಬೇಟೆಯಾಡತೊಡಗಿದ್ದಾರೆ. ಮನುಷ್ಯರ ಈ ಧನದ ದಾಹಗಳಿಂದಾಗಿ ಹಲವಾರು ವನ್ಯಜೀವಿಗಳು ಕಾಣೆಯಾಗಿವೆ.

ಹಣದ ಆಸೆಯಿಂದ ನಾವು ಪರಿಸರ ಸಮತೋಲನದಲ್ಲಿ ಪ್ರಮುಖ ಪಾತ್ರ ವಹಿಸುವ ಕಪ್ಪೆಗಳನ್ನು ಹಿಡಿದು ಅದರ ಮಾಂಸವನ್ನು ಪರದೇಶಗಳಿಗೆ ಕಳುಹಿಸುತ್ತೇವೆ. ಈ ಕಪ್ಪೆಗಳು ನಾಶ ಮಾಡುತ್ತಿದ್ದ ಸೊಳ್ಳೆಗಳು ಹೆಚ್ಚಾಗಿ ಇಂದು ನಿಯಂತ್ರಿಸಲೂ, ಸಾಧ್ಯವಿಲ್ಲದ ಹಂತ ತಲುಪಿದೆ. ಹೀಗೆ ಹಾವಿನ ಚರ್ಮದ ಮಾರಾಟ ಮಾಡಿ ವಿದೇಶಿ ವಿನಿಮಯ ಗಳಿಸುವ ಕಾರ್ಯವೂ ನಡೆಯಿತು. ೧೯೭೬ ರಲ್ಲಿ ಹಾವಿನ ಚರ್ಮದ ರಫ್ತನ್ನು ಪ್ರತಿಬಂಧಿಸಲಾಯಿತು. ಆದರೆ ಪುನಃ ೧೯೭೯ ರಲ್ಲಿ ದಾಸ್ತಾನಾಗಿದ್ದ ಹಾವಿನ ಚರ್ಮದ ಮಾರಾಟವಾಗಲು ಸಹಾಯವಾಗುವಂತೆ ಪ್ರತಿಬಂಧವನ್ನು ತೆಗೆದುಹಾಕಲಾಯಿತು. ಇಂದು ಅಂತಾರಾಷ್ಟ್ರೀಯ ಕಳ್ಳ ಸಾಗಾಣಿಕೆದಾರರ ಹಾವಳಿಯಿಂದಾಗಿ ವನ್ಯಜೀವಿಗಳ ಉಳಿವಿಗೆ ಗಂಡಾಂತರ ಒದಗಿಬಂದಿದೆ. ಈ ಹಾವಳಿಯನ್ನು ಶೀಘ್ರವಾಗಿ ತಡೆಯುವದು ಅವಶ್ಯಕ.

ನಾವು ಇಂದು ಸಂರಕ್ಷಿಸಬೇಕಾಗಿರುವದು ಕೇವಲ ಕೆಲವು ವಿಶಿಷ್ಟ ಪ್ರಾಣಿಗಳನ್ನಲ್ಲ. ಈ ಪ್ರಾಣಿಗಳು, ಪಕ್ಷಿಗಳು ವಾಸಿಸಲು ಬೇಕಾಗುವಂತಹ ಪ್ರಾಕೃತಿಕ ಆವಾಸಗಳನ್ನು ಸೃಷ್ಟಿಸುವದು ಅಥವಾ ಅರಣ್ಯವನ್ನು ರಕ್ಷಿಸುವದು ಬಹಳ ಮಹತ್ವದ ಅಂಶವಾಗಿದೆ. ಭಾರತದಲ್ಲಿನ ವಿವಿಧ ಪ್ರಾಕೃತಿಕ ಸಂಪತ್ತನ್ನು ರಕ್ಷಿಸುವ ಸಮಗ್ರ ಯೋಜನೆ ರೂಪುಗೊಳ್ಳಬೇಕಾಗಿದೆ. ಆದರೆ ಇಂದಿನ ಪರಿಸ್ಥಿತಿಯಲ್ಲಿ ಭೂಮಿಯ ಮೇಲೆ ಮನುಷ್ಯನ ಸಂಖ್ಯೆ ಮಿತಿಮೀರಿರುವದರಿಂದ ಪ್ರಾಕೃತಿಕ ಸಂಪತ್ತು ತೀವ್ರಗತಿಯಲ್ಲಿ ಕ್ಷೀಣಿಸುತ್ತಿದೆ. ಮನುಷ್ಯನು ಇತರ ಜೀವಿಗಳೊಡನೆ ಸಹಬಾಳ್ವೆ ಮಾಡುವ ವಿಚಾರ ಮಾಯವಾಗಿ ತಾನೇ ಎಲ್ಲ ಜೀವಿಗಳನ್ನು ಸಂಹರಿಸಿ ಅಧಿಪತಿಯಾಗುವ ಪ್ರಯತ್ನದಲ್ಲಿದ್ದಾನೆ.

ಬಂಡೀಪುರ ಅಭಯಾರಣ್ಯದಲ್ಲಿ ಒಂದೆಡೆ ವಿವಿಧ ವನ್ಯಜೀವಿಗಳ ಚಿತ್ರಪ್ರದರ್ಶನದ ಕೊಠಡಿಯೊಂದು ಇದೆ. ಅಲ್ಲಿ ಚಿತ್ರಪ್ರದರ್ಶನದ ಕೊನೆಯಲ್ಲಿ ಒಂದು ಪರದೆಯ ಮೇಲೆ "ವಿಶ್ವದ ಅತ್ಯಂತ ಭಯಾನಕ ಪ್ರಾಣಿಯ ದರ್ಶನವಾಗಬೇಕಾದರೆ ಈ ಪರದೆಯನ್ನು ಎತ್ತಿ ನೋಡಿ" ಎಂದು ಬರೆದಿದೆ. ಈ ಪರದೆಯನ್ನು ಎತ್ತಿ ನೋಡಿದರೆ ಕನ್ನಡಿಯಲ್ಲಿ ಕಾಣುವದು ನಮ್ಮ ಪ್ರತಿಬಿಂಬ! ಹೌದು ಎಷ್ಟು ನಿಜ. ಇಂದು ಪ್ರಪಂಚದ ಭಯಾನಕ ಪಶು ಮನುಷ್ಯ, ಅವನಿಂದ ಇತರ ಜೀವಿಗಳು ನಿರ್ನಾಮವಾಗುತ್ತಿವೆ. □



ವೈಶೇಷಿಕ ದರ್ಶನ

ಡಾ. ಟಿ. ಎಸ್. ರಾಮಾನುಜಂ

ಸಂಸ್ಕೃತ ವಾಙ್ಮಯದಲ್ಲಿ ಷಡ್ದರ್ಶನಗಳು ಒಂದು ಮಹಾವಿಚಾರ ಕ್ರಾಂತಿಯ, ಜ್ಞಾನ ಮಾರ್ಗದ ಉದಯವನ್ನು ತೋರಿಸುತ್ತವೆ. ಸಾಂಖ್ಯಯೋಗ, ನ್ಯಾಯ, ವೈಶೇಷಿಕ, ಪೂರ್ವ ಮೀಮಾಂಸೆ, ಉತ್ತರಮೀಮಾಂಸಾ ದರ್ಶನಗಳಲ್ಲಿ ಒಂದೊಂದೂ ತತ್ವದರ್ಶನದ ಅನ್ವೇಷಣೆಯ ಸ್ವತಂತ್ರಪಥವನ್ನು ತೋರಿಸಿದ್ದು ಭಾರತೀಯ ಋಷಿಗಳ ಜ್ಞಾನಯಜ್ಞದ ಪರಿಣತ ಫಲಗಳಾಗಿವೆ.

ಇವಿಷ್ಟೂ ದರ್ಶನಗಳಲ್ಲಿ ವೈಶೇಷಿಕ ದರ್ಶನವು ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದೆ. ಇಂದಿನ ವಿಜ್ಞಾನವು ವಿಶ್ಲೇಷಿಸಿರುವ ಅನೇಕ ವಿಚಾರಗಳನ್ನು ಆ ದರ್ಶನದಲ್ಲಿ ನಾವು ಕಾಣ ಬಹುದು. ಈ ದರ್ಶನಕ್ಕೆ ಪದಾರ್ಥಧರ್ಮಗಳನ್ನು ವಿವರಿಸುವ ಶಾಸ್ತ್ರವೆಂದೂ ಹೆಸರು. ಕಣಾದ ಮುನಿಯಿಂದ ಪ್ರತಿಪಾದಿತವಾದ ಈ ಶಾಖೆಯಲ್ಲಿ ಪರಮಾಣು ಸಿದ್ಧಾಂತ, ಗುರುತ್ವ, ಕರ್ಮ ಅಂದರೆ 'ಕ್ರಿಯೆ'ಯ ವಿಚಾರ ಮುಂತಾದ ಭೌತಶಾಸ್ತ್ರದ ವಿಚಾರಗಳನ್ನು ಕಾಣುತ್ತೇವೆ.

ಶತಮಾನಗಳ ಹಿಂದೆಯೇ ಪರಮಾಣುವಿನ ಬಗ್ಗೆ ಚಿಂತಿಸಿ ಪ್ರಪಂಚದ ಮೂಲವನ್ನು ಅದರಲ್ಲಿ ಗುರುತಿಸಿ ಪರಮಾಣು ಸಂಯೋಗದಿಂದ ಪ್ರಪಂಚದ ಉತ್ಪತ್ತಿಯ ವಿಚಾರವನ್ನು ಖಚಿತ ವಾಗಿ, ವೈಜ್ಞಾನಿಕವಾಗಿ ರೂಪಿಸಿರುವವರಲ್ಲಿ ವೈಶೇಷಿಕರೇ ಮೊದಲಿಗರು ಎಂದು ಹೇಳಿದರೆ ಇಂದು ಅನೇಕರಿಗೆ ಆಶ್ಚರ್ಯವಾಗಬಹುದು.

ಯಾವುದು ಕೊನೆಯ ಅವಯವ ವಾಗಿ, ಮತ್ತೆ ಒಡೆಯಲು ಸಾಧ್ಯ ವಾಗುವುದಿಲ್ಲವೊ ಅದೇಪರಮಾಣು. ಯಾವುದನ್ನು ಒಡೆಯಬಹುದೋ ಅದು ವೈಶೇಷಿಕರ ಪ್ರಕಾರ ಪರ ಮಾಣುವಲ್ಲ. ಅದು ಕೇವಲ ಪರ ಮಾಣು ಪುಂಜ. ಅಂದರೆ, ಅದು ಕಾರ್ಯವಾಗುತ್ತದೆಯೆ ವಿನಾ ಮೊದಲ ಕಾರಣವಾಗುವುದಿಲ್ಲ.

ದರ್ಶನವೆಂದರೆ ಭಾರತೀಯ ಪರಂಪರೆಯಲ್ಲಿ ಇಂದು ನಾವು ಅರ್ಥಮಾಡಿಕೊಳ್ಳುವ ವೇದಾಂತ ವೆಂಬ ಪದದೊಳಗಿನ ಅರ್ಥವನ್ನು ಮಾತ್ರ ಒಳ ಗೊಂಡಿರುವ ಪದವಲ್ಲ. ಸತ್ಯವನ್ನು ನಿರೂಪಿಸುವ ಯಾವುದೇ ಜ್ಞಾನಶಾಖೆ ದರ್ಶನವೆನಿಸಬಹುದು. ವೇದಾಂತವೂ ದರ್ಶನವೇ, ವಿಜ್ಞಾನವೂ ದರ್ಶನವೇ. ಆದರೆ ವಿಜ್ಞಾನ ದರ್ಶನವಾಗುವುದು, ಅದು ಪರಮಾರ್ಥಸತ್ಯವನ್ನು ತೋರಿಸುವ ಸಾಮರ್ಥ್ಯವನ್ನು ಪಡೆದಾಗ ಮಾತ್ರ. ಯಾವುದೇ ಸಿದ್ಧಾಂತವೂ ಕೂಡ ದರ್ಶನದ ಮಟ್ಟಕ್ಕೆ ಬರಬೇಕಾದರೆ ಸತ್ಯದರ್ಶನ ಸಾಮರ್ಥ್ಯವನ್ನು ಪಡೆದಾಗಲೇ. ಇದರಿಂದಲೇ ಭಾರತದಲ್ಲಿ ದರ್ಶನ ವಿಜ್ಞಾನಗಳು ಬೇರೆಬೇರೆ ಜ್ಞಾನಮಾರ್ಗಗಳಾಗ ಲಿಲ್ಲ. ಎರಡೂ ಸಮಾನಾಂತರವಾಗಿ ಹೊರಟರೆ ಆಗ ಎರಡೂ ಸತ್ಯವಾಗಲೂ ಸಾಧ್ಯವಿಲ್ಲ. ಒಂದು ಸುಳ್ಳಾದರೆ ಆ ಮಾರ್ಗಕ್ಕೆ ವೈಯರ್ಥ್ಯ ಬರುತ್ತದೆ. ವಿಜ್ಞಾನ ನಿಜವಾದರೆ ದರ್ಶನ ಏನಾಗಬೇಕು. ಅಥವಾ ದರ್ಶನ ಸತ್ಯವಾದರೆ ವಿಜ್ಞಾನ ಏನಾಗ ಬೇಕು ಎಂಬ ಪ್ರಶ್ನೆ ಏಳುತ್ತದೆ. ಎರಡೂ ಪರಸ್ಪರ ಪೂರಕವಾಗಬೇಕು. ಆಗ ಏಕೀಭಾವ ವುಂಟಾಗುತ್ತದೆ. ಈ ತಥ್ಯದರ್ಶನದಿಂದ ಪ್ರಾಚೀನ ಭಾರತದ ಭೌತಶಾಸ್ತ್ರವೆನ್ನಬಹುದಾದ ವೈಶೇಷಿಕ ಮಾರ್ಗವು ದರ್ಶನವಾಗಿ, ವಿಶಿಷ್ಟದರ್ಶನವಾಗಿ ಇತರ ದರ್ಶನಗಳಿಗೆ ಪೂರಕವಾಗಿ ನಿಂತಿದೆ.

ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ, ಸಮವಾಯವೆಂಬ ಭಾವಾತ್ಮಕ ಪದಾರ್ಥಗಳಿಂದ

ಆರಂಭಿಸಿ ಅಭಾವವೆಂಬ ಸಪ್ತಮ ಪದಾರ್ಥವನ್ನು ಸೇರಿಸಿಕೊಂಡು ಇಡೀ ಭೌತ, ಅಭೌತ, ವಿಶ್ವವನ್ನು ವಿಳುವಿಭಾಗಗಳಲ್ಲಿ ಅಳವಡಿಸಿಕೊಂಡಿದೆ ಈ ದರ್ಶನ. ಇವುಗಳಲ್ಲಿ ದ್ರವ್ಯವಿಭಾಗ ಬಹಳ ಕುತೂಹಲಕರ. ಪೃಥಿವೀ, ಅಪ್, ತೇಜಸ್, ವಾಯು, ಆಕಾಶ, ಕಾಲ, ದಿಕ್, ಆತ್ಮ, ಮನಸ್ಸು ಗಳೆಂಬ ಒಂಭತ್ತು ದ್ರವ್ಯಗಳನ್ನು ವೈಶೇಷಿಕರು ಗುರುತಿಸಿದ್ದಾರೆ. ಮೊದಲ ಐದು ಪಂಚಭೂತ ಗಳು. ಇಲ್ಲಿಯ ವಿಶೇಷವೆಂದರೆ ಆತ್ಮ ಅಂದರೆ ಜೀವಾತ್ಮ ಮತ್ತು ಪರಮಾತ್ಮಗಳೆರಡೂ 'ದ್ರವ್ಯ' ವಾಗಿಯೇ ಪರಿಗಣಿತವಾಗಿರುವುದು. ಅವೂ ಪದಾರ್ಥಗಳೇ. ಚಿತ್, ಅಚಿತ್ ಎರಡೂ ಪದಾರ್ಥಗಳೇ.

ಪೃಥಿವೀ ತತ್ವವು ಪರಮಾಣುಗಳಲ್ಲಿ ನಿತ್ಯ-ವಾದರೆ 'ಸ್ಥೂಲ' ಅಂದರೆ ಪರಮಾಣುಗಳಿಂದ ಉಂಟಾದ ಪೃಥಿವೀ ಪದಾರ್ಥಗಳಲ್ಲಿ ಅದು ಅನಿತ್ಯ. ಹಾಗೆಯೇ ಅಪ್, ತೇಜಸ್, ವಾಯು ತತ್ವಗಳೂ ಕೂಡ. ಈ ಪರಮಾಣು ಸಿದ್ಧಾಂತ ಗಮನೀಯವಾದ ಒಂದು ಸಿದ್ಧಾಂತ. ಪ್ರಪಂಚ ಉತ್ಪತ್ತಿಯಾಗಬೇಕಾದರೆ, ಪರಮಾಣು ಸಂಯೋಗದಿಂದಲೇ ಎರಡು ಪರಮಾಣುಗಳು ಸೇರಿದರೆ ಒಂದು ದ್ವ್ಯಣುಕವಾಗುತ್ತದೆ. ಮೂರು ದ್ವ್ಯಣುಕಗಳು ಸೇರಿದರೆ ಒಂದು ತ್ರ್ಯಣುಕ ಉತ್ಪತ್ತಿಯಾಗುತ್ತದೆ. ಹೀಗೆಯೇ ಚತುರಣುಕ. ಪಂಚಾಣುಕ, ಷಡಣುಕ, ಹೀಗೆಯೇ ಕಾರ್ಯಗಳು ಉತ್ಪನ್ನವಾಗುತ್ತಾ ಹೋಗುತ್ತವೆ. ಕೊನೆಗೆ ನಮಗೆ ಕಾಣುವ ಪದಾರ್ಥಗಳ ಸೃಷ್ಟಿ ಹೀಗೆಯೇ, ಜಲವೂ ಹೀಗೆಯೇ, ತೇಜಸ್ಸೂ ಹೀಗೆಯೇ, ವಾಯುವೂ ಹೀಗೆಯೇ,. ಆಕಾಶಮಾತ್ರ ವಿಭು ನಿತ್ಯ. ಅದು ಪರಮಾಣು ರೂಪಕ್ಕೆ ಹೋಗುವುದಿಲ್ಲ. ಅದು ನಿರವಯವಿ. ಪ್ರಪಂಚದ ಉತ್ಪತ್ತಿಯಂತೆಯೇ ವಿನಾಶ ಅಥವಾ ಪ್ರಳಯವೂ. ಪ್ರಪಂಚವು ಭಾಗಗಳಾಗಿ ಒಡೆದು ಕೊನೆಗೆ ಪರಮಾಣುಗಳಾಗಿ ಒಡೆದು ಪರಮಾಣು ರೂಪಕ್ಕೆ ಬಂದು ಬಿಡುತ್ತದೆ. ಇದೇ ಪ್ರಳಯ.

ಪರಮಾಣುಗಳನ್ನು ಮತ್ತೆ ಒಡೆಯುವಂತಿಲ್ಲ. ಅವಕ್ಕೆ ಭಾಗಗಳಿಲ್ಲ, ಅಂದರೆ ಅವಯವಗಳಿಲ್ಲ. ಅದೇ ಕೊನೆಯ ಅವಯವ. ಯಾವುದೇ ಪದಾರ್ಥವನ್ನು ಒಡೆಯುತ್ತಾ ಹೋದರೆ ಅದು ಕೊನೆಗೆ ಒಂದೆಡೆ ಮುಗಿಯಬೇಕು. ಈ ಕೊನೆಯೇ ಪರಮಾಣು. ಇದೂ ವಿನಾಶಿಯಾದರೆ ಇದಕ್ಕೆ ಕೊನೆಯೇ ಇರುವುದಿಲ್ಲ. ಇದಕ್ಕೆ ಕೊನೆಯಂತೂ ಇರಬೇಕು ಎನ್ನುವುದೇ ಸರಿಯಾದ ತರ್ಕ. ಈ ಕೊನೆಯೇ ಪರಮಾಣು. ಅಂದರೆ ಯಾವುದನ್ನು ಮುಂದಕ್ಕೆ ಒಡೆಯಲು ಸಾಧ್ಯವಿಲ್ಲವೋ, ಅಂದರೆ ಯಾವುದು ಕೊನೆಯ ಅವಯವವೋ ಅದೇ ಪರ-ಮಾಣು. ಇಲ್ಲಿರುವ ತರ್ಕವನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಪರಮಾಣುವನ್ನು ಒಡೆಯಬಹುದು ಎಂಬುದಲ್ಲ ಇಲ್ಲಿಯ ವಿಚಾರ. ಯಾವುದು ಕೊನೆಯ ಅವಯವವಾಗಿ, ಮತ್ತೆ ಒಡೆಯಲು ಸಾಧ್ಯವಾಗುವುದಿಲ್ಲವೋ ಅದೇ ಪರಮಾಣು. ಇದು ತರ್ಕಬದ್ಧ ಸಿದ್ಧಾಂತ. ಯಾವುದನ್ನು ಒಡೆಯಬಹುದೋ ಅದು ವೈಶೇಷಿ-ಕರ ಪ್ರಕಾರ ಪರಮಾಣುವಲ್ಲ. ಅದು ಕೇವಲ ಪರಮಾಣು ಪುಂಜವಾಗುತ್ತದೆ. ಅಂದರೆ ಅದು ಕಾರ್ಯವಾಗುತ್ತದೆಯೇ ವಿನಾ ಮೊದಲ ಕಾರಣವಾಗುವುದಿಲ್ಲ.

ಅನಂತ ಸಂಖ್ಯೆಯಲ್ಲಿ ಪರಮಾಣುಗಳಿದ್ದರೂ, ಪ್ರತಿಪರಮಾಣುವೂ ಪ್ರತ್ಯೇಕ. ಈ ಪ್ರತ್ಯೇಕತೆಗೆ ಕಾರಣ ಅವುಗಳಲ್ಲಿರುವ ವಿಶೇಷವೇ. ಇದೇ ವಿಶೇಷವೆಂಬ ಪದಾರ್ಥ. ಇದರಿಂದಲೇ ವೈಶೇಷಿಕ-ವೆಂದು ಈ ದರ್ಶನಕ್ಕೆ ಹೆಸರು ಬಂದಿರುವುದು.


ಅಂತೂ ಈ ತರ್ಕಬದ್ಧ ಪರಮಾಣು ಸಿದ್ಧಾಂತವೇ ವೈಶೇಷಿಕದರ್ಶನದ ವಿಶೇಷವೆಂದು ಹೇಳಬಹುದು. ತನ್ಮಾತ್ರಗಳೆಂಬ ರೂಪದಲ್ಲಿ ಇದೇ ತತ್ವ ಸಾಂಖ್ಯದಲ್ಲಿದ್ದರೂ, ಹಾಗೆಯೇ ಜೈನ ದರ್ಶನದಲ್ಲೂ ಇದಕ್ಕೆ ಸ್ಥಳವಿದ್ದರೂ ಕೂಡ, ಇದಕ್ಕೆ ಒಂದು ಖಚಿತಸ್ವರೂಪ ಕೊಟ್ಟಿರುವುದು ವೈಶೇಷಿಕ ದಾರ್ಶನಿಕರೇ.

ಈ ದರ್ಶನದಲ್ಲಿ ಬರಿಯ ಪಂಚಮಹಾಭೂತ-ಗಳ ವಿಶ್ಲೇಷಣೆ ಮಾತ್ರವಲ್ಲ. ಜ್ಞಾನವಿಚಾರ, ಪ್ರಮಾಣವಿಚಾರ, ಮೋಕ್ಷವಿಚಾರ ಮುಂತಾದವೂ ಕೂಡ ಸವಿಸ್ತಾರವಾಗಿ ಪ್ರತಿಪಾದಿತವಾಗಿವೆ. ಸ್ವಪ್ನವಿಚಾರ ಕೂಡ ಕಣಾದ ಸೂತ್ರಕ್ಕೆ ಭಾಷ್ಯ-ಬರೆದ ಪ್ರಶಸ್ತಪಾದರಿಂದ ಅಧ್ಯಯನ ಮಾಡಲ್ಪ-ಟ್ಟಿದೆ. ಸ್ವಪ್ನದ ಮೇಲೆ ಧಾತುಗಳ ಪ್ರಭಾವ, ಸಂಸ್ಕಾರದ ಪ್ರಭಾವ, ಅದೃಷ್ಟಮೂಲಕ ಸ್ವಪ್ನ-ಗಳು, ಅಂದರೆ ಭವಿಷ್ಯಸೂಚಕ ಸ್ವಪ್ನಗಳು, ಹೀಗೆ ಸ್ವಪ್ನದ ಅಧ್ಯಯನವು ಸ್ಥೂಲವಾಗಿಯಾದರೂ, ಖಚಿತವಾಗಿ ಮಾಡಲ್ಪಟ್ಟಿದೆ.

ಮುಖ್ಯವಾಗಿ ಬೌದ್ಧ ಧರ್ಮದ ಸಿದ್ಧಾಂತ ಗಳನ್ನು ದೂರೀಕರಿಸಲು ವೈಶೇಷಿಕದರ್ಶನ ಹೊರಟಿತಾದರೂ, ಅದು ಯಾವುದೋ ಒಂದು ಅವಧಿಯಲ್ಲಿ ಭೌತಪ್ರಪಂಚದ ವಿಶ್ಲೇಷಣೆಯಲ್ಲಿ ಭಾರತೀಯ ತತ್ವಚಿಂತಕರು ಮಾಡಿದ ಸಫಲ ಪ್ರಯತ್ನವನ್ನು ತೋರಿಸುತ್ತದೆ. ದುರದೃಷ್ಟ ವಶಾತ್ ಪರಕೀಯರ ದಾಳಿ ಮುಂತಾದ ಕಾರಣ ಗಳಿಂದ ಹತ್ತನೆಯ ಶತಮಾನದವರೆಗೆ ಹರಿದು ಬಂದ ಈ ಅದ್ಭುತ ಬೆಳವಣಿಗೆ ನಂತರ ನಿಂತು ಹೋಯಿತು. ಮಹೋಜ್ವಲವಾದ ಒಂದು ಜ್ಞಾನಮಾರ್ಗ ಅಲ್ಲಿಗೆ ಅಸ್ತಂಗತವಾದುದು ನಮ್ಮ ದೇಶದ ದುರ್ದೈವ.

ಈ ದರ್ಶನದ ಬೆಳವಣಿಗೆಯ ಕೊನೆಯ ಅವಧಿಯಲ್ಲಿ ವೈಶೇಷಿಕವು ನ್ಯಾಯಶಾಸ್ತ್ರದ ಜೊತೆ ಸಮ್ಮಿಳಿತವಾಗಿ ಬೆಳೆದು ಬಂದಿತು. ನ್ಯಾಯ ಶಾಸ್ತ್ರದ ತರ್ಕಪ್ರೌಢಿಮೆ ವೈಶೇಷಿಕ- ಸಿದ್ಧಾಂತ ಗಳಿಗೆ ಸೇರಿಕೊಂಡು ನ್ಯಾಯವು ನವ್ಯನ್ಯಾಯ ವೆಂದು ಕರೆಸಿಕೊಂಡಿತು. ವೈಶೇಷಿಕವು ಪ್ರಾಚೀನ ನ್ಯಾಯವಾಯಿತು. ಆದರೂ ಕೊನೆಕೊನೆಗೆ ಬಂದ ಗ್ರಂಥಗಳು ವೈಶೇಷಿಕ ಸಿದ್ಧಾಂತಗಳನ್ನು ನವೀನ ನ್ಯಾಯದ ತರ್ಕಸರಣಿಯಲ್ಲಿ ಹೇಳಲು ಪ್ರಾರಂಭಿ ಸಿದವು.

ಜವರಾಯನಿಗೆ



ನಿನ್ನ ಕಂಡವರೆಲ್ಲ ಬೆಚ್ಚಿಬೀಳುವರಲ್ಲ !
ಜನನದಿಂದಲೆ ಬಂದ ಪರಮಾಪ್ತ ಸಖಿನೀನು !

ನಾಲ್ಕೈದು ಸಲ ಬಂದು ತಟ್ಟಿ ಕರೆದರು ನೀನು
ಎಳ್ಳನಿತು ಹೆದರದೆಯೆ ನಾನು ಜಪ್ಪೆನಲಿಲ್ಲ.

ನೂರೆಂಟು ಆಸೆಗಳ ಕನಸುಗಳನೆಲ್ಲ
ಹೊತ್ತು ಎದೆಯೆಲಿ ಬಾಳಬವರ ನಡೆಸಿದೆ ನಾನು.

ಕೈಗೂಡಿದವು ಕೆಲವು, ಹಲವು ಜಾರಿದರೂನು
ಸಫಲವಾಯಿತ್ತೆಂದೆ ಭಾವಿಸಿದೆ ಬಾಳೆಲ್ಲ !

ನಾಡಿನುದ್ದಕು ಹೆಸರು, ಹತ್ತಾರು ಜನಕೆಲ್ಲ
ಬೇಕಾದ ಅಕ್ಕರಿಗ, ಮಠಮಾನ್ಯಗಳಿಗೂನು

ಮೆಚ್ಚಿನೂಳಿಗದವನು. ಇಷ್ಟು ಸಾಕಿನ್ನೇನು ?
ಧನ್ಯವಾಗಿದೆ ಜೀವ! ಹೆಚ್ಚಿನಾಸೆಯೆ ಇಲ್ಲ.

ಬೇಗ ನೀ ಬಂದೆನ್ನ ಕೊಂಡಯ್ಯೊ ಜವರಾಯ
ನಿನ್ನ ಸ್ವಾಗತಕೆಂದೆ ಸಿದ್ಧವೆನ್ನೀಕಾಯ


ದ. ಲ. ಕೆರೂರ

ಇದು ಹೇಗೇ ಇರಲಿ, ಯಾವ ಮತವನ್ನೂ ನಂತರ ಬಂದ ವೇದಾಂತಸಿದ್ಧಾಂತಗಳು ಮಾಡಿದಂತೆ ಅಂಟಿಸಿಕೊಳ್ಳದೆ ಒಂದು ಶುದ್ಧಜ್ಞಾನ ಶಾಖೆಯಾಗಿ ಬಂದ ಕೆಲವೇ ದರ್ಶನಗಳಲ್ಲಿ ವೈಶೇಷಿಕವೂ ಒಂದು. ಈ ಪದಾರ್ಥಶಾಸ್ತ್ರವು ಹಾಗೆಯೇ ಮುಂದುವರೆದಿದ್ದರೆ, ಇಂದಿನ ವಿಜ್ಞಾನ ಸಾಧನೆಗಳ ಕರ್ತೃಗಳು ಭಾರತೀಯರೇ ಆಗುತ್ತಿದ್ದರೇನೋ.

ವೈಶೇಷಿಕ ಸೂತ್ರಗಳ ಪ್ರವಕ್ತಾರನಾದ ಕಣಾದ ಮುನಿಯ ಬಗ್ಗೆ ಒಂದು ರೋಚಕವಾದ ಕಥೆಯಿದೆ. ಇಡೀ ಜೀವಿತದಲ್ಲಿ 'ಕಣ'ಗಳ ಬಗ್ಗೆಯೇ ಅಂದರೆ ಪರಮಾಣುಗಳ ಬಗ್ಗೆಯೇ ಯೋಚಿಸುತ್ತಿದ್ದ ಆ ಋಷಿಗೆ ಅವಸಾನ ಕಾಲ ಬಂದಾಗ, ಕೊನೆಯಲ್ಲಿ ಭಗವಂತನ ನಾಮಸ್ಮರಣೆ ಮಾಡಲಿ, ಸದ್ಗತಿಯು ದೊರಕಲಿ ಎಂದು ಆಪ್ತೇಷ್ಟರು "ಪ್ರಪಂಚಕ್ಕೆ ಮೂಲಕಾರಣವಾದ ಪರವಸ್ತುವನ್ನು ಸ್ಮರಿಸಿಕೋ" ಎಂದರಂತೆ. ಕಣಾದ ಋಷಿಗೋ ಪ್ರಪಂಚಕ್ಕೆ ಮೂಲ ಪರಮಾಣುಗಳೇ ಆದ್ದರಿಂದ ತಕ್ಷಣವೇ ಆ ಋಷಿಯು ಪೀಲವ: ಪೀಲವ: ಎಂದು ಹೇಳುತ್ತಾ ಪ್ರಾಣಬಿಟ್ಟನಂತೆ. ಪೀಲು ಎಂದರೆ ಪರಮಾಣು. ಪೀಲವ: ಎಂದರೆ ಪರಮಾಣುಗಳು. ಈ ಕಥೆ ಪರಮಾಣು ಸಿದ್ಧಾಂತದ ಬಗ್ಗೆ ಆ ಮಹರ್ಷಿಯ ತಾದಾತ್ಮ್ಯ ಎಷ್ಟಿತ್ತು ಎಂಬುದನ್ನು ತೋರಿಸುತ್ತದೆ. ಕೊನೆಯುಸಿರಿನವರೆಗೆ ಪರಮಾಣುಗಳ ಬಗ್ಗೆಯೇ ಯೋಚಿಸುತ್ತಿದ್ದ ಆ ಋಷಿಯ, ಆ ಜ್ಞಾನಿಯ ಬಗ್ಗೆ ಇಂದು ನಾವು ಯೋಚಿಸುವುದನ್ನೂ ನಿಲ್ಲಿಸಿದ್ದೇವೆ ಎಂಬುದೇ ಮನಸ್ಸಿಗೆ ನೋವುಂಟು ಮಾಡುವ ವಿಷಯ. ಒಂದು ಗುರಿಗಾಗಿ, ಲೋಕಹಿತದ ಗುರಿಗಾಗಿ ಜ್ಞಾನದ ಅನ್ವೇಷಣೆಯಲ್ಲಿ ಸ್ವಹಿತವನ್ನು ತ್ಯಾಗಮಾಡಿ ಜೀವನವನ್ನು ಜ್ಞಾನಕ್ಕಾಗಿ ಮುಡಿಪಿಟ್ಟ ಅಂತಹ ಜ್ಞಾನಿಗಳು ನಮ್ಮ ದೇಶದಲ್ಲಿ ಅಪಾರ. ಮೀಮಾಂಸಾಸೂತ್ರಗಳ ಪ್ರಣೇತೃವಾದ ಜೈಮಿನಿಮಹರ್ಷಿ, ಸಾಂಖ್ಯದರ್ಶನದ ಪ್ರವಕ್ತಾರರಾದ ಕಪಿಲಮುನಿ, ಯೋಗಸೂತ್ರ ಪ್ರಣೇತಾರರಾದ ಪತಂಜಲಿಮುನಿ, ಮುಂತಾದ ಜ್ಞಾನಿಗಳೆಲ್ಲ ಜ್ಞಾನಕ್ಕಾಗಿ ತಮ್ಮನ್ನು ಅರ್ಪಿಸಿಕೊಂಡವರು. ತಪಶ್ಚರ್ಯೆಯಿಂದ ಪರಮಾರ್ಥ ಸತ್ಯವನ್ನು ತಮ್ಮದೇ ರೀತಿಯಲ್ಲಿ ಕಂಡುಕೊಂಡವರು. ನಿರುಕ್ತದ ಯಾಸ್ಕರನ್ನಾಗಲಿ, ವ್ಯಾಕರಣದ ಪಾಣಿನಿ ಮಹರ್ಷಿಯನ್ನಾಗಲಿ, ಮಹಾಭಾಷ್ಯದ ಪತಂಜಲಿಯನ್ನಾಗಲಿ, ನ್ಯಾಯಶಾಸ್ತ್ರದ ಗೌತಮರನ್ನಾಗಲಿ, ವೇದಭಾಷ್ಯಗಳನ್ನು ಬರೆದ ಸಾಯಣಾಚಾರ್ಯರನ್ನಾಗಲಿ ಭಾರತೀಯರು ಹೇಗೆ ಮರೆಯಲು ಸಾಧ್ಯ ? ನಾವು ನಮ್ಮ ಪ್ರಾಚೀನ ಮುನಿಗಳನ್ನೂ ಅವರ ತಪ:ಫಲಗಳಾದ ದರ್ಶನಗಳನ್ನೂ ನೆನಪಿನಲ್ಲಿಡಬೇಕು. ಆ ಅನರ್ಘ್ಯ ರತ್ನಗಳಿಂದ ಉಪಯೋಗವನ್ನು ಪಡೆಯಬೇಕು. ನಮ್ಮ ಜ್ಞಾನ ಜೀವನವನ್ನು ಶ್ರೀಮಂತವಾಗಿಸಿಕೊಳ್ಳಬೇಕು.

ಆಧುನಿಕ ವಿಜ್ಞಾನದ ದೃಷ್ಟಿಯಿಂದ ನಾವು ನಮ್ಮ ಪ್ರಾಚೀನದರ್ಶನಗಳ ಅಧ್ಯಯನ ಮಾಡುವುದು ಉಚಿತ. ಜ್ಯೋತಿಷ ವಿಜ್ಞಾನ, ಶುಲ್ಬ ಸೂತ್ರಗಳಲ್ಲಿ ಉಕ್ತವಾಗಿರುವ ಜ್ಯಾಮಿತಿಗಳ ಸಿದ್ಧಾಂತ, ಸಾಂಖ್ಯದರ್ಶನದಲ್ಲಿ ಪ್ರತಿಪಾದಿತವಾಗಿರುವ ವಿಶ್ವದ ವಿಕಾಸ, ಉಪನಿಷತ್ತಿನ ಆತ್ಮ-ಪರಮಾತ್ಮ ಸಿದ್ಧಾಂತ, ವೈಶೇಷಿಕರ ಪರಮಾಣು ಸಿದ್ಧಾಂತ, ಆಯುರ್ವೇದ, ಯೋಗದ ಪ್ರಾಯೋಗಿಕ ಮಾರ್ಗ, ಪುರಾಣಗಳ ಕಥೆಯಲ್ಲಿ ಅಡಗಿರುವ ಬ್ರಹ್ಮಾಂಡದಲ್ಲಾದ ಅದ್ಭುತ ವಿದ್ಯಮಾನಗಳು, ಒಂದು ಉಜ್ವಲ ಸಂಸ್ಕೃತಿಯ ಅನ್ವೇಷಣೆ, ಸಿದ್ಧಿಗಳ ಅವಶೇಷಗಳಾಗಿ ಇಂದು ಉಳಿದಿವೆ. ಪೂರ್ಣಮದ: ಪೂರ್ಣಮಿದಂ ಎಂಬುದರಲ್ಲಿ ಅಡಗಿರುವ ಅನಂತದ ಗಣಿತ ರಹಸ್ಯ, ಅಣೋರಣೀಯಾನ್ ಎಂಬಲ್ಲಿರುವ ವೈದಿಕಪರಮಾಣು ರಹಸ್ಯ, ಸವಿತಾಯಂತ್ರೈ: ಪೃಥಿವೀಂ ಅರಮ್ಣಾತ್ ಎಂಬ ಋಗ್ವೇದ ಮಂತ್ರದಲ್ಲಿರುವ ಸೂರ್ಯನ ಆಕರ್ಷಣೆಯಿಂದ ಭೂಮಿಯು ತನ್ನ ಕಕ್ಷೆಯಲ್ಲಿರುವ ಆಕಾಶಕಾಯ ರಹಸ್ಯ, ವೈಶೇಷಿಕದರ್ಶನದ 'ಕರ್ಮ' ಪದಾರ್ಥ ವಿಚಾರದಲ್ಲಿ ಬರುವ 'ಕ್ರಿಯಾಸೂತ್ರಗಳು' ಈಗಲೂ ವಿಜ್ಞಾನಕ್ಕೆ ಸವಾಲಾಗಿರುವ ಪುನರ್ಜನ್ಮ ಸಿದ್ಧಾಂತ. ಹೀಗೆ ಅನಂತವಾಗಿರುವ ವೈಜ್ಞಾನಿಕ ರಹಸ್ಯಗಳು ನಮ್ಮ ವೇದರಾಶಿಯಲ್ಲಿ, ಇತಿಹಾಸ ಪುರಾಣಗಳಲ್ಲಿ, ದರ್ಶನಗಳಲ್ಲಿ ಅಡಗಿವೆ. ಇವುಗಳನ್ನು ಪ್ರವೇಶಿಸಿ ಅವುಗಳಲ್ಲಿರುವ ರಹಸ್ಯಗಳನ್ನು ಹೊರಗೆಡಹುವ ಪ್ರಯತ್ನವನ್ನು ನಾವು ಮಾಡದಿದ್ದರೆ ನಮ್ಮ ಪರಂಪರೆಯನ್ನೇ ಕಡೆಗಣಿಸಿದಂತೆ. ಪರಂಪರೆಯಿರಲಿ, ಒಂದು ಮಹತ್ವಾದ ಜ್ಞಾನ ಪ್ರಪಂಚದಿಂದ ನಾವು ವಿಮುಖರಾದಂತಾಗುತ್ತದೆ.

ಎಲ್ಲವೂ ನಮ್ಮಲ್ಲಿತ್ತು ಎನ್ನುವುದು ಎಷ್ಟು ತಪ್ಪೋ, ಅಷ್ಟೇ ತಪ್ಪು ನಮ್ಮಲ್ಲಿ ಏನೂ ಇರಲಿಲ್ಲ ಎನ್ನುವುದೂ ಕೂಡ. ಉಪಲಬ್ಧ ಜ್ಞಾನವನ್ನು ಅದು ಯಾವುದೇ ಅವಧಿಯದಿರಲಿ, ಸ್ವೀಕರಿಸಿ ವಿಶ್ಲೇಷಿಸುವುದು ನಮ್ಮ ಕರ್ತವ್ಯವಾಗಬೇಕು. ನಮ್ಮೆಲ್ಲ ದರ್ಶನಗಳ ಪ್ರವಕ್ತಾರರ ಹೆಸರಿರಲಿ, ದರ್ಶನಗಳ ಹೆಸರನ್ನೂ ಅರಿಯದ ಭಾರತೀಯರ ಒಂದು ತಲೆಮಾರು ಬರುತ್ತಿರುವುದು ಒಳ್ಳೆಯದೆಂದು ತೋರುವುದಿಲ್ಲ. ಬೇರನ್ನು ಬಿಟ್ಟು ಯಾವ ಮರವೂ ನಿಲ್ಲುವಂತಿಲ್ಲ. ನಮ್ಮ ಬೇರುಗಳನ್ನು ನಾವು ಮರೆಯುವಂತಿಲ್ಲ. □



ಹಸಿರು ಚಿನ್ನಾದ

ಹಸಿರು ಬಸಿರಿನ ಬಾಲೆ
ಹಸಿರು ಬಸಿರಿನ ಬಾಲೆ
ಬಯಕೆ ಕಂಗಳ ಹೊತ್ತು
ತೇಲಾಡಿ ಮುಳುಗಾಡಿ
ನೀನಾಗಿ ನೀನಾಗಿ
ನಿನ್ನ ನಾದದಲಿ ನೀ ಮುಳುಗಿದ್ದೆ

ನಿನ್ನ ನಾದದಲಿ ನೀ ಮುಳುಗಿದ್ದೆ
ನಾದ ಹಸಿರು
ಸುನಾದ ಸುನೀಲಿ ತಂಪು
ತಂಪು ಬಿಂಪಿನ ರಂಗದಲಿ
ರಂಗವಲ್ಲಿಯು ಚೆಲ್ಲಿದೆ
ಚೆಲ್ಲಾಟವಾಡಿದೆ
ಮನಕೆ ಮಂಗಳವ ನೀಡಿದೆ.

ಮಂಗಳ ಭಾಷ್ಯದಿ ಲಾಸ್ಯವ ತುಂಬಿದ
ಲಾಸ್ಯ ಲಾವಣ್ಯಮೂರ್ತಿ ನೀನಾದೆ
ಚಿನ್ನಾದ ದುಂಬಿ ನೀನಾದೆ
ಸುಮ್ಮಾನ ದುಂಬಿ ನೀನಾದೆ

ನಾದನಾದದಲಿ
ಅನುರಣಿತ 'ನಾದ'ವಾಗಿ

ಹೊರಹೊಮ್ಮಿ ಓಡೋಡಿ ಬಂದೆ !
ಓಲಾಡಿ ನಿಂದೆ !
ನಿಃಸ್ಥಲ ನಿಃಕರಣ ನಿಃಶೂನ್ಯ ನಿಯೋಗದಲಿ
ನೀ ನಿಂದೆ !
ನೀನಾಗಿ ನಿಂತೆ
ನಿಂತೆ ನಿಂತೆ
ಹಸಿರು ಬಸಿರಿನ ಬಾಲೆ
ಹಸಿರು ಬಸಿರಿನ ಬಾಲೆ !

ಶಿವಶಂಕರ ಕಣಾಜನವರ



ಪ್ರೇಂಕುಮಾರ್
ಪ್ರಾಣಿಶಾಸ್ತ್ರ
ಸಚಿವ ಸಂಪುಟ
ರಾಜಕಾರಣಿ
ಅತ್ಯಾಚಾರ
ಮತೀಯ ಗಲಭೆ
ಭಯೋತ್ಪಾದನೆ
ಭ್ರಷ್ಟಾಚಾರ
ತೆರಿಗೆ
ಬೆಲೆಗಳು
ಶ್ರೀ ಸಾಮಾನ್ಯ ನರಪ್ರಾಣಿ
ಭ್ರಷ್ಟಾಚಾರ

ವಿವಾಹ ಸಿದ್ಧನ್

■ ಎಂ. ಎಸ್. ನರಸಿಂಹಮೂರ್ತಿ

ಮದುವೆ ಛತ್ರವೊಂದರಲ್ಲಿ ಭಾರಿ ಸಭೆ. ನೂರಾರು ಗಂಡು ಹೆಣ್ಣುಗಳು ಅತ್ತಿಂದಿತ್ತ ಠಳಾಯಿಸುತ್ತ ಖುಷಿಯಾಗಿದ್ದ ಹೊಸ ದೃಶ್ಯ. ಮದುವೆಯ ಹೊಸ್ತಿಲಲ್ಲೆ ನಿಂತ ಈ ಹೆಣ್ಣುಗಳಿಗೆ 'ಪೇರೊ'ಂದು ಸಿಕ್ಕಿದರೆ ಬಲಗಾಲು ಮುಂದಿಟ್ಟು ಸೇರನ್ನು ಒದೆಯಲು ಅಡ್ಡಿಯೇನಿಲ್ಲ. ಸೇರೇನೋ ಸದಾ ಸಿದ್ಧ. ಆದರೆ 'ಪೇರ'ನ್ನು ಹುಡುಕಲು ಇನ್ನೆಷ್ಟು 'ಮ್ಯಾರೇಜ್ ಬ್ಯೂರೋ'ಗಳಿಗೆ ಹೆಸರು ನೀಡಬೇಕೋ !

ಕಾರ್ಯಕ್ರಮದ ವ್ಯವಸ್ಥಾಪಕ ವಿಶ್ವ ಎಲ್ಲ ಸ್ಥಳಗಳಲ್ಲಿ ಕಾಣಿಸಿಕೊಳ್ಳುತ್ತ ಲೆಕ್ಕಾಚಾರವಾಗಿ ಐದು ನಿಮಿಷದಲ್ಲಿ ಏಳು ಬಾರಿ ನಗುತ್ತಿದ್ದ. ಐದು ಬಾರಿ ಮುಖ ಅರಳಿಸುತ್ತಿದ್ದ. ಮೂರು ಬಾರಿ ತಲೆ ಕೊಡುವುತ್ತಿದ್ದ. ಒಂದು ಬಾರಿ ಟೇಬಲ್ ಗುದ್ದುತ್ತಿದ್ದ. ವಿಶ್ವ ತೊಟ್ಟಿದ್ದುದು ಬಿಳಿ ಜುಬ್ಬ. ಮೇಲೊಂದು ಮಾವ ಕೊಟ್ಟ ಶಲ್ಯ. ಬಿಳಿ ಪಂಚೆಯನ್ನು ಬುಕ್‌ಫ್ರೋಸ್ಟ್ ಮಾದರಿ ಸುತ್ತಿ ದಟ್ಟಿ ಉಟ್ಟುಕೊಂಡಿದ್ದ.

'ನಮಸ್ಕಾರ ! ಬನ್ನಿ ಬನ್ನಿ. ಸ್ಮಾರ್ತರಾದರೆ ಈ ಕಡೆ ಹೋಗಿ, ಮಾಧ್ವರಾದರೆ ಆ ಕಡೆ ಹೋಗಿ. ಮೂರುನಾಮವಾದರೆ ನನ್ನ ಬಳಿಯೇ ಇರಿ' ಎಂದು ವಿಶ್ವ ಬಂದವರನ್ನು ಉಪಚರಿಸಿ ಗುಂಪು ಬೆಳೆಸುತ್ತಿದ್ದ.

'ಈ ಮ್ಯಾರೆಜ್ ಬ್ಯೂರೋ ಶುರುಮಾಡೋ ಐಡಿಯಾ 'ಯಾರು ಹಾಕ್ಕೊಟ್ಟಿದ್ದು ?' ಎಂದು ನಾನು ಕೇಳಿದ್ದಕ್ಕೆ ವಿಶ್ವ ಮತ್ಸಾರ ಮುಖವೋ ನೋಡಿ ಪ್ರತಿ ನಕ್ಕು 'ನಮಸ್ಕಾರ. ಬನ್ನಿ. ಎಲ್ಲ ದೈವೇಚ್ಛೆ' ಎಂದ.

ಯಾರೋ ಕನ್ಯಾಪಿತೃ ಬಂದು ನನ್ನ ಮುಖವನ್ನೇ ನೋಡಿದರು. ಈ ಕಾರ್ಯಕ್ರಮಕ್ಕೆ ತಿಂಡಿ ಸರಬರಾಜು ಮಾಡಲು ಬಂದಿರೋ ಹೋಟೆಲ್ ಯಜಮಾನ ನಾನು ಎಂದು ನಿಜ ಹೇಳಿಬಿಡಲೇ ಎನ್ನಿಸಿದರೂ ಸ್ವಲ್ಪ ಕಾಲ ತಡೆದೆ. ಆತ ಅಗಲವಾಗಿ ನಕ್ಕ.

'ನೀವೇನು ಭಾರಧ್ವಜದವರಾ? ' ಎಂದ.

'ಕಾಂಗ್ರೆಸ್ ಧ್ವಜದವ' ಎಂದೆ ನಗುತ್ತ.

'ನಿಮ್ಮ ಗೋತ್ರ ಯಾವುದು ಅಂತ ನಾನು ಕೇಳಿದ್ದು.'

'ಗೋತ್ರ ಭಾರವೇನಲ್ಲ. ಕಾಶ್ಯಪ ಗೋತ್ರ' ಎಂದೆ.

'ಎಲ್ಲಿ ಕೆಲ್ಸ ಮಾಡ್ತೀರ ?'

'ಇಲ್ಲಿ ತಿಂಡಿ ವ್ಯವಸ್ಥೆ ನಂದೇ ಸ್ವಾಮಿ. ಪೂರಿ, ಉಪ್ಪಿಟ್ಟು, ಕೇಸರಿ ಬಾತು. ಕಾಫೀ ಟೀ ಎಲ್ಲಾ ನಾನೇ ಸರಬರಾಜು ಮಾಡ್ತಿರೋದು' ಎಂದು ಒಪ್ಪಿಕೊಂಡೆ.

'ಅನ್ನದಾತಾ ಸುಖೀಭವ' ಎಂದವರು ಅಂದಾಗ,

'ಅನ್ನ ತಂದಿಲ್ಲ ಸ್ವಾಮಿ, 'ತಿಂಡಿದಾತಾ ಸುಖೀಭವ' ಎಂದು ಆಶೀರ್ವದಿಸಿ' ಎಂದು ಕೈಮುಗಿದೆ.

'ತುಂಬಾ ಚೆನ್ನಾಗಿ ಮಾತಾಡ್ತಾರೆ' ಎಂದಾತ ತನ್ನ ಹೆಂಡತಿಗೆ ಪರಿಚಯಿಸಿದ. ಐವತ್ತು ವರುಷದ ಆಕೆ ಮೂವತ್ತರ ರೀತಿಯಲ್ಲಿ ಮೇಕಪ್ ಮಾಡಿಕೊಂಡಿದ್ದರು. ರೇಷ್ಮೆ ಸೀರೆಗೆ ತಕ್ಕ ತುರುಬು. ತುರುಬಿಗೆ ತಕ್ಕ ವ್ಯಾನಿಟಿ ಬ್ಯಾಗು.

"ನೀವೇನು ಗಂಡೇನಪ್ಪ?" ಎಂದಾಕೆ ಕೇಳಿದಾಗ ನಾನು ಗಡಿಬಿಡಿಗೊಂಡು, 'ನಿಮಗೆ ಅನುಮಾನ ಇದ್ರೆ ಕಷ್ಟ' ಎಂದಷ್ಟೇ ಹೇಳಿ ಸುಮ್ಮನಾದೆ.

'ನಮ್ಮ ಕೇತೂಗೆ ಸರಿಯಾದ ಜೋಡಿ' ಎಂದಾಕೆ ಮೆಚ್ಚುಗೆಯಿಂದ ಹೇಳಿ, 'ನಮ್ಮ ಕೇತೂಗೆ ತಮಾಷೆ ಮಾತು ಅಂದ್ರೆ ಇಷ್ಟ' ಎಂದಳು.

ಕೇತು ಯಾರೋ ತಿಳಿಯಲಿಲ್ಲ. ರಾಹು ಜೊತೆ ಬರುವ ಕೇತು ಇರಬಹುದೆ? ಧೂಮಕೇತು ಇರಬಹುದೆ? ಎಂದೆಲ್ಲಾ ಯೋಚಿಸಿದೆ. ನನ್ನ ಗ್ರಹಗತಿ ಅಲ್ಲಿಗೇ ಮುಗಿಯದೆ ಆಕೆ ಕೇಳಿದಳು.

'ನಮ್ಮ ಕೇತು ಇವರ ಕಿವಿಗೆ ಬರಬಹುದಲ್ಲ?'

ಕಿವಿಯೊಳಗೆ ಜೇನುಹುಳ ಹೊಕ್ಕಂತಾಗಿ ಪಟಪಟನೆ ತಲೆ ಕೊಡವಿದೆ.

'ಇಲ್ಲ ಕಣೆ. ಅವಳು ಇವರ ಭುಜಕ್ಕೆ ಬರಬಹುದು. ಅವಳೇನೂ ಅಂಥ ಎತ್ತರ ಇಲ್ಲ.'

'ಎತ್ತರ ಇದ್ದಾಳೆರೀ. ದಪ್ಪ ಇರೋದರಿಂದ ಉದ್ದ ಕಾಣೋಲ್ಲ' ಎಂದ ಆಕೆ, 'ಅವರ ಉದ್ದ ಎಷ್ಟೋ ವಿಚಾರಿಸಿ' ಎಂದಳು ಗಂಡನಿಗೆ.

'ನಿಮ್ಮ ಉದ್ದ ಎಷ್ಟು?' ಎಂದ ಆತ.

'ಉದ್ದ ಅಲ್ಲ ಸ್ವಾಮಿ, ಎತ್ತರ ಅಂತ ಕೇಳಿ.'

'ಎಲ್ಲಾ ಒಂದೇ. ಮಲಗಿದಾಗ ಉದ್ದ' ನಿಂತಾಗ ಎತ್ತರ' ಎಂದಾತ ಸಮರ್ಥಿಸಿಕೊಂಡ.

'ಈಗ ಯಾವುದು ಹೇಳಲಿ ನಿಮಗೆ?'

'ಹೈಟ್ ಹೇಳಿ ಸ್ವಾಮಿ' ಎಂದ ಕನ್ಯಾಪಿತೃ.

> ಪ್ರತಿಯೊಬ್ಬ ಹುಡುಗನೂ ಒಂದೊಂದು ಹುಡುಗಿಯನ್ನು ಮುಂದೆ ನಿಲ್ಲಿಸಿಕೊಂಡು ಉಪ್ಪಿಟ್ಟು ತಿನ್ನುತ್ತಿದ್ದಾನೆ. ಕೆಲವು ಪಡ್ಡೆ ಹುಡುಗರಿಗೆ ಹುಡುಗಿಯರ ಸಾಮೀಪ್ಯ ತಲೆ ಕೆಡಿಸಿ, ಉಪ್ಪಿಟ್ಟು ಯಾವುದು, ಕೇಸರಿ ಭಾತ್ ಯಾವುದು ತಿಳಿಯದಾಗಿದೆ........ ಪ್ರಥಮ ನೋಟದಲ್ಲಿ ಮುಳುಗಿ ಹೋಗಿ ಮೆಣಸಿನಕಾಯಿಯನ್ನು ಗೋಡಂಬಿಯೆಂದು ತಿನ್ನುತ್ತಿದ್ದಾರೆ. ದ್ರಾಕ್ಷಿಯನ್ನು ಕರಿಬೇವೆಂದು ಉಗಿಯುತ್ತಿದ್ದಾರೆ........



'ನನ್ನ ಹೈಟು, ವೈಟು ಈವರೆಗೆ ಯಾರೂ ಅಳೆದಿಲ್ಲ ಸ್ವಾಮಿ.'

'ಏನೊಂದು ಆರಡಿ ಇರಬಹುದಾ ?.

'ಇನ್ನೂ ಸ್ವಲ್ಪ ಕಡಿಮೆ ಮಾಡಿ. ನೀವು ಅಷ್ಟು ಹೇಳಿದರೆ ನಾನು ಪ್ಯಾಂಟು ಷರಟುಗಳು ಬದಲಿಸ ಬೇಕಾಗುತ್ತೆ.'

'ಹೋಗ್ಲಿ, ಐದು ಅಡಿ ಇಟ್ಕೋ ಬಹುದಾ?' ಆತ ನನ್ನ ತಲೆ ಮತ್ತು ಕಾಲುಗಳನ್ನು ಒಟ್ಟಿಗೇ ಕಣ್ಣಲ್ಲೆ ಅಳೆದ. ಅಷ್ಟರಲ್ಲಿ ಆಕೆ ಹೇಳಿದಳು.

'ನಮ್ಮ ಕೇತು ಐದೂಕಾಲಡಿ ಇದ್ದಾಳೆ. ಇವರ್ನ ಇನ್ನೂ ಸ್ವಲ್ಪ ಜಾಸ್ತಿ ಮಾಡಿ.'

ಅಷ್ಟಾಗುವ ವೇಳೆಗೆ ವಿಶ್ವ ಬಂದವನೇ: ವಿಚಾರ ಕೇಳಿತಿಳಿದು 'ಐದೂವರೆ ಅಡಿಗೆ' ಲೆಕ್ಕ ಫೈಸಲ್ ಮಾಡಿ, ಮತ್ತೆ ಚೌಕಾಶಿ ಬೇಡವೆಂದು ಹೇಳಿದ.

ಅಲ್ಲಿಂದ ಥಟ್ಟನೆ ಜಾರಿಕೊಂಡ ನಾನು ತಿಂಡಿ ವ್ಯವಸ್ಥೆ ನೋಡುತ್ತ ವಿಶಾಲ ಹಾಲ್‌ಗೆ ಬಂದೆ. ನೂರಾರು ತರುಣ ತರುಣಿಯರ ಮಧ್ಯೆ ನುಗ್ಗಿ ಓಡಾಡಿ ಉಸ್ತುವಾರಿ ನೋಡಿದೆ.

ಪ್ರತಿಯೊಬ್ಬ ಹುಡುಗನೂ ಒಂದೊಂದು ಹುಡುಗಿಯನ್ನು ಮುಂದೆ ನಿಲ್ಲಿಸಿಕೊಂಡು ಉಪ್ಪಿಟ್ಟು ತಿನ್ನುತ್ತಿದ್ದಾನೆ. ಕೆಲವು ಪಡ್ಡೆ ಹುಡುಗರಿಗೆ ಹುಡುಗಿಯರ ಸಾಮಿಪ್ಯ ತಲೆಕೆಡಿಸಿ ಉಪ್ಪಿಟ್ಟು ಯಾವುದು ಕೇಸರಿ ಬಾತು ಯಾವುದು ತಿಳಿಯದಾಗಿದೆ.

ಪ್ರಥಮ ನೋಟದಲ್ಲಿ ಮುಳುಗಿಹೋಗಿ ಮೆಣಸಿನಕಾಯನ್ನು ಗೋಡಂಬಿ ಎಂದು ತಿನ್ನುತ್ತಿದ್ದಾರೆ. ದ್ರಾಕ್ಷಿಯನ್ನು ಕರಿಬೇವು ಎಂದು ಉಗಿಯುತ್ತಿದ್ದಾರೆ.

ಈ ದಿನದ ಸ್ನೇಹಕೂಟದಲ್ಲಿ ಕೊನೆಯ ಪಕ್ಷ ಒಂದು ಐವತ್ತು ಜೋಡಿಗಳಾದರೂ ಹೊಂದಾಣಿಕೆ ಆಗುತ್ತವೆ ಎನ್ನಿಸಿತು. ಮುಂದಿನ ತಿಂಗಳು ಧರ್ಮಸ್ಥಳದಲ್ಲಿ ಸಾಮೂಹಿಕ ಮದುವೆಗಳೂ ಏರ್ಪಡಿಸಿದರೆ, ಅತಿ ಕಡಿಮೆ ಖರ್ಚಿನಲ್ಲಿ ಹೋಲ್‌ಸೇಲ್ ಮದುವೆಗಳು ಮಾಡಿದ ಖ್ಯಾತಿ ವಿಶ್ವನಿಗೆ ಬರುತ್ತದೆ ಎಂದುಕೊಂಡೆ.

ಒಂದು ಸುತ್ತು ಹೊಡೆದು ವಿಶ್ವನ ಬಳಿಗೆ ಬಂದೆ. ಕೇಳಿದೆ.

'ಛತ್ರದ ಬಾಡಿಗೆ, ತಿಂಡಿ ಖರ್ಚು ಸೇರಿ ಐದು ಸಾವಿರ ರೂಪಾಯಿ ಖರ್ಚಾಗಿರಬೇಕು ನಿನಗೆ. ಅಷ್ಟು ಹಣಕ್ಕೆ ಏನು ವ್ಯವಸ್ಥೆ ಮಾಡಿದೆ ? ನಿನಗೆ ನಷ್ಟ ಅಲ್ವ ?' ಎಂದೆ.

'ಸಾವಿರ ಜನ ರಿಜಿಸ್ಟರ್ ಮಾಡಿಸಿದ್ದಾರೆ. ರಿಜಿಸ್ಟ್ರೇಷನ್ ತಲೆಗೆ ನೂರು ರೂಪಾಯಿ.'

'ಏನು! ಒಂದು ಲಕ್ಷ ರೂಪಾಯಿ ಆಯ್ತಲ್ಲ?' ಎಂದೆ ಆಶ್ಚರ್ಯದಿಂದ.

'ಮದುವೆ ಸೆಟಲ್ ಆದರೆ ಐನೂರು ಕೊಡ ಬೇಕು'

'ಆಮೇಲೆ?'

'ವರದಕ್ಷಿಣೆ ಪಡೆದರೆ ಅದರಲ್ಲಿ ಶೇಕಡಾ ಹತ್ತು ನಮ್ಮ ಸಂಸ್ಥೆಗೆ'

ವಿಶ್ವನ ವ್ಯವಹಾರ ಜ್ಞಾನಕ್ಕೆ ತಲೆದೂಗಿದೆ,

'ನೂರು ರೂಪಾಯಿ ಅಂದ್ರೆ ದುಬಾರಿ ಆಯ್ತಲ್ಲ?'

'ಮನೆಗಳಲ್ಲಿ ವಧು ಪರೀಕ್ಷೆ ಇಟ್ಟುಕೊಂಡರೆ ಎಷ್ಟು ಖರ್ಚಾಗುತ್ತೆ? ಅಲ್ಲದೆ ಐನೂರು ವರಗಳನ್ನು ಇಲ್ಲಿ ಒಟ್ಟಿಗೆ ಪರೀಕ್ಷೆ ಮಾಡಬಹುದು. 'ಮಾಸ್ ಟೆಸ್ಟಿಂಗ್! ಈ ಅನುಕೂಲ ಮನೇಲಿ ಸಿಗುತ್ತಾ? ಸಿಕ್ರೂ ಮನೆ ಹಿಡಿಸುತ್ತಾ? ಹಿಡಿಸಿದ್ರೂ ಒಂದು ಹುಡಗೀನ ನೋಡೋಕೆ ಐನೂರು ಜನ ದಂಡೆತ್ತಿ ಬಂದರೆ ಅವಳ ಮಾನಸಿಕ ಆಘಾತದ ಬಗ್ಗೆ ಯೋಚಿಸು' ಎಂದು ಭಾಷಣ ಬಿಗಿದ.

ಅಷ್ಟರಲ್ಲಿ ಒಂದು ಹುಡುಗ, ಹುಡುಗಿ ಒಟ್ಟಿಗೆ ಕೈ ಹಿಡಿದು ಬಂದರು. ಅವರ ಜೊತೆ ಅವರಿಗೆ ಸಂಬಂಧಿಸಿದ ಹಿರಿಯರು.

'ನಮ್ಮ ಮದುವೆ ಸೆಟಲ್ ಆಯ್ತು.' ಎಂದರು. ಎಲ್ಲರ ಗಮನ ಇತ್ತ ಹರಿಯಿತು. ವಿಶ್ವ ಎರಡು ಹಾರಗಳನ್ನು ನೀಡಿದ, ಪರಸ್ಪರ ಹಾರ ಹಾಕಿಸಿ ಕೈ ಕುಲುಕಿದ.

'ನಿಮ್ಮ ಮ್ಯಾರೇಜ್ ಬ್ಯೂರೋದಿಂದ ತುಂಬಾ ಸಹಾಯ ಆಯ್ತು' ಎಂದು ಒಬ್ಬಾಕೆ ಹೇಳಿದಳು.

'ಒಂದು ರೀತಿ ಸಿಟಿ ಮಾರ್ಕೆಟ್‌ಗೆ ಹೋಗಿ ತರಕಾರಿ ಕೊಂಡ ಅನುಭವ ಇಲ್ಲಿ. ಎಲ್ಲ ಥರ ಜನವೂ ಸಿಗ್ತಾರೆ. ಎಳೆಯರು, ಬಲಿತವರು, ನಡು ವಯಸ್ಸಿನವರು, ಯಾರಿಗೆ ಯಾರು ಬೇಕೋ ಜಮಾಯಿಸಿಕೊಂಡು ಮದುವೆ ಆಗಬಹುದು' -ಒಬ್ಬಾತ ಅಭಿಮಾನದಿಂದ ಹೇಳಿದ.

ನಿಷ್ಕರ್ಶೆ ಆದ ಜೋಡಿ ನಗುತ್ತಾ ಹೊರಟಿತು.

ಕೇತು ಅವರ ಅಪ್ಪ ಅಮ್ಮ ನನ್ನ ಬಳಿಗೆ ಬಂದು, 'ತಿಂಡಿ ಚೆನ್ನಾಗಿದೆ ಸ್ವಾಮಿ' ಎಂದರು.

'ನಮ್ಮ ಅಡಿಗೆಯವ ಮಾಡಿದ್ದು' ಎಂದೆ.

'ನಿಮ್ಮದು ಹೋಟೆಲ್ ವ್ಯಾಪ್ಯಾರಾನಾಪ್ಪ ?' ಆಕೆ ಕೇಳಿದಳು.

'ಹೌದು ಅತ್ತೆ' ಎಂದು ಬಿಟ್ಟೆ. ಅತ್ತೆ ಉಬ್ಬಿ ಉದ್ದಿನ ಬೋಂಡವಾದಳು.

'ದಿನಕ್ಕೆ ಎಷ್ಟು ತಿಂಡಿ ಖರ್ಚಾಗುತ್ತೆ?' ಎಂದು ಕೆದಕಿ ಕೇಳಿದಳು.

'ನಿನ್ನೆ ಏಳನೂರಾಮೂವತ್ತು ಇಡ್ಲಿ, ಐದು-ನೂರಾಹನ್ನೆರಡು ದೋಸೆ, ಹದಿಮೂರು ಬಕೆಟ್ ಚಟ್ನಿ ಖರ್ಚಾಗಿತ್ತು' ಎಂದೆ ಕರಾರುವಕ್ಕಾಗಿ,

'ಈ ದಿನ ನೀವು ಇಲ್ಲಿದ್ದೀರಲ್ಲ, ಹೋಟೆಲ್ಗೆ ರಜಾನಾ?' ಮತ್ತೆ ಕೇಳಿದಳು.

'ಹಾಗೇನಿಲ್ಲ, ಹೋಟೆಲ್ ನಡೀತಿದೆ' ,

'ಗಲ್ಲದ ಮೇಲೆ ?'

'ನನ್ನ ಹೆಂಡ್ತಿ ಕೂತ್ಕೋತಾಳೆ' ಎಂದು ಹೇಳಿದ ಕೂಡಲೇ ಅವಳು ಸಿಟ್ಟಾದಳು. ಸಪ್ಪಗಾದಳು, ಗಂಡನ ಕೈ ಎಳೆಯುತ್ತಾ ಹೇಳಿದಳು.

'ಹಯ್ಯೋ ಬನ್ನಿ ಬನ್ನಿ. ನನಗೆ ಬೇಕಾದಷ್ಟು ಬೇರೆ ಕೆಲಸ ಇದೆ. ಅವರಿಗೆ ಎಷ್ಟು ಇಡ್ಲಿ ಖರ್ಚಾದರೆ ನಮಗೆ ಏನಂತೆ ?' ಎಂದು ಗೊಣಗುತ್ತ ನಡೆದಳು.

ಮತ್ತೆರಡು ಜೋಡಿ ಕುದುರಿತು, ಅವರು ವಿಶ್ವನಿಗೆ ವಂದನೆ ಹೇಳಿದರು.

'ನಿಮ್ಮಲ್ಲಿ ರಿಜಿಸ್ಟರ್ ಮಾಡಿಸಿದ್ದು ಸಾರ್ಥಕ ಆಯ್ತು ವಿಶ್ವನಾಥ್. ನಿಮ್ಮ ಸಹಾಯ ನಮಗೆ ಮಕ್ಕಳಾಗೋವರ್ಗೂ ಮರೆಯೊಲ್ಲ' ಎಂದು ಹೇಳಿ ಹೋದರು.

ಒಂದು ತಾಸಿನಲ್ಲಿ ಇಡೀ ಛತ್ರ ಖಾಲಿಯಾಗಿ ಎಲ್ಲೆಲ್ಲೂ ಎಂಜಲ ತಟ್ಟೆಗಳು, ಲೋಟಗಳು, ಸ್ಪೂನುಗಳು ಅನಾಥವಾಗಿ ಬಿದ್ದಿದ್ದವು. ಛತ್ರಕ್ಕೆಲ್ಲ ನಾನು, ವಿಶ್ವ ಮತ್ತು ಕೆಲಸಗಾರರು ಉಳಿದೆವು.

ಸ್ವಾಗತ ಕೋಣೆಯಲ್ಲಿ ಕುಳಿತ ವಿಶ್ವ ಹಣದ ಲೆಕ್ಕಾಚಾರ ನೋಡುತ್ತಿದ್ದ. ಮುಂದಿನ ಸ್ನೇಹ ಕೂಟಕ್ಕೆ ಕೆಲವರು ಹಣ ನೀಡಿ, ನೋಂದಾಯಿಸಿ ಹೋಗಿದ್ದರು.

'ನೂರು ರೂಪಾಯಿಗೆ ಎಷ್ಟು ಸಲ ಉಪ್ಪಿಟ್ಟು ತಿನ್ನಿಸ್ತೀಯಾ?' ನಾನು ಕೇಳಿದೆ.

'ಮೂರು ಸ್ನೇಹಕೂಟಗಳಿಗೆ ಆಹ್ವಾನ ಕಳಿಸ್ತೀವಿ. ಅಷ್ಟರಲ್ಲಿ ಸೆಟಲ್ ಆಗ್ದೆ ಇದ್ರೆ ಅವರು ಐವತ್ತು ರೂಪಾಯಿ ಕೊಟ್ಟು ಮೆಂಬರ್‌ಶಿಪ್ ನವೀಕರಿಸಬೇಕು' ಎಂದ.

'ಇವತ್ತು ಮೂರು ಜೋಡಿಗಳು ಸೆಟಲ್ ಆದವಲ್ಲ. ಅವರು ತಲಾ ಐನೂರು ಯಾವಾಗ ಕೊಡ್ತಾರೆ ?'

'ಅವರು ನಮ್ಮ ಪೈಕೀನೇ ಬಿಡು'

'ಅಂದ್ರೆ ?'

'ಒಂದು ಸಭೆ ಕರೆದ ಮೇಲೆ ಮೂರು ನಾಲ್ಕು ಜೋಡಿಯಾದ್ರೂ ಹೊಂದಾಣಿಕೆ ಆಗಬೇಕು ಅಲ್ವ? ಇಲ್ಲ ಅಂದ್ರೆ ನಮ್ಮ 'ವಿವಾಹ ಸದನ'ದ ಮೇಲೆ ನಂಬಿಕೆ ಹೊರಟು ಹೋಗುತ್ತೆ ಜನಕ್ಕೆ'

'ಬಿಡಿಸಿ ಹೇಳು' ಎಂದೆ.

'ಮೊದಲು ಬಂದು ಸೆಟಲ್ ಆಯ್ತು ಅಂತ ಹೇಳೀ ಹಾರ ಹಾಕಿಸಿಕೊಂಡು ಹೋದರಲ್ಲ. ಅವರಿಗೆ ಈಗಾಗ್ಲೇ ಮದುವೆ ಆಗಿ ಒಂದು ವರುಷ ಆಯ್ತು'

'ಪಸಂದ್ !'

"ನಮ್ಮ ಸಮ್ಮುಖದಲ್ಲಿ ಸೆಟಲ್ ಮಾಡಿಕೊಂಡು ಬೇರೆಯವರಿಗೆ ಉತ್ಸಾಹ ತುಂಬಿ ಎಂದು ನಾನೇ ಕರೆದಿದ್ದ"

'ಈ ನಾಟಕ ಯಾಕೆ ?'

'ಋಣಾನುಬಂಧ ಇದ್ರೆ ಹೊಸ ಜೋಡಿಗಳೂ ಹರಡಬಹುದು. ಪ್ರಯತ್ನ ನಮ್ಮದಷ್ಟೆ. ಫಲಾಫಲ ಗಳು ದೇವರದು' ಎಂದ,

'ಖರ್ಚು ಕಳೆದು ತೊಂಬತ್ತು ಸಾವಿರ ಕಮಾಯಿಸಿಬಿಟ್ಟೆ' ಎಂದೆ ಅಸೂಯೆ ನಟಿಸುತ್ತ.

'ಎಲ್ಲಿ ಬಂತು? ಇನ್ನೂ ಎರಡು ಸ್ನೇಹ ಕೂಟ ಗಳು ಏರ್ಪಡಿಸೋ ಜವಾಬ್ದಾರಿ ಇದೆಯಲ್ಲ?'

'ಏನಾದ್ರೂ ಮಾಡ್ಕೋ. ನಾನು ಬರ್‍ತೀನಿ. ಟೆಂಪೋ ಬಂದಾಯ್ತು' ಎಂದೆ.

'ನಿನ್ನಿಂದ ಒಂದು ಸಹಾಯ ಆಗಬೇಕು' ಎಂದ

'ಏನು ಮಾಡಬೇಕು?'

'ಮುಂದಿನ ಸಭೆಗೆ ನೀನು. ನಿಮ್ಮಾಕೆ ದಯಮಾಡಿ ಬಂದು ನಮ್ಮ ಸಮ್ಮುಖದಲ್ಲಿ ಮದುವೆ ಸೆಟಲ್ ಮಾಡ್ಕೋಬೇಕು.'

ನಾನು ಸುಸ್ತಾದೆ.

'ಎಳೇ ಮಗೂನ ಏನು ಮಾಡೋಣ?'

'ನಮ್ಮನೇಲಿ ಬಿಟ್ಟು ಬಾ. ವಿಶಾಲೂ ನೋಡ್ಕೋತಾಳೆ'

'ಯಾರಾದ್ರೂ ನೋಡಿ ಗುರ್ತು ಹಿಡಿದರೆ?'


'ಬ್ಯೂಟಿ ಪಾರ್ಲರ್‌ಗೆ ಕಳಿಸಯ್ಯ. ಅವರು ಸಿಂಗಾರಮಾಡಿ ಕಳಿಸಿದರೆ ನಿನ್ನ ಹೆಂಡ್ತಿ ನಿನಗೇ ಗುರ್ತು ಸಿಗೊಲ್ಲ'

'ಅದು ಮಾತ್ರ ಅಪಾಯದ ಕೆಲ್ಸ. ಸಾಧ್ಯವಿಲ್ಲ' ಎಂದೆ.

'ಯಾಕೆ?'


'ಯಾವೋನಾದ್ರೂ ನಮ್ಮಾಕೇನ ನೋಡಿ ಮೆಚ್ಚಿ ಮದುವೆ ಆಗಲೇಬೇಕು ಅಂತ ಪಟ್ಟು ಹಿಡಿದು ಕೂತ್ರೆ ನನ್ನಗತಿ?' ಎಂದು ರೇಗುತ್ತಾ ಅಲ್ಲಿಂದ ಹೊರಬಂದೆ.

□



ಜ್ಯೋತಿಷಿ: ಶ್ರೀ ಎನ್. ಕೆ. ಜೋಗಳೇಕರ
೮-72, ತೇಜಸ್ವಿನಗರ, ಧಾರವಾಡ. ಫೋ.೮೦೨೮೮

ವಿಕ್ರಮ ಸಂವತ್ಸರದ ೨೦೪೪ ರ ಭವಿಷ್ಯ ಅರ್ಥಾತ್ ೧೯೦೯ ಪ್ರಭವ ಸಂವತ್ಸರದ ಕಾರ್ತಿಕ ಶುದ್ಧ ಪ್ರತಿಪದೆಯಿಂದ ೧೯೧೦ ನೇ ವಿಭವ ಸಂವತ್ಸರದ ಅಶ್ವಿನ ಬಹುಳ ಅಮಾವಾಸ್ಯೆಯ ವರೆಗೆ ಅಂದರೆ ಕ್ರಿಸ್ತಶಕೆ ೧೯೮೭ ನೇ ಅಕ್ಟೋಬರ ೨೩ ರಿಂದ ೧೯೮೮ ರ ನವೆಂಬರ ೯ ನೇ ತಾರೀಖಿನ ವರೆಗೆ ಅರ್ಥಾತ್ ಈ ದೀಪಾವಳಿಯಿಂದ ಮುಂದಿನ ದೀಪಾವಳಿಯವರೆಗಿನ ವರುಷ ಭವಿಷ್ಯ.



ಮೇಷ

ಈ ರಾಶಿಯವರಿಗೆ ಎಲ್ಲ ವಿಷಯಗಳಲ್ಲಿಯೂ ಪ್ರಗತಿದಾಯಕ ವರುಷವಾಗಿದ್ದು ಪೂರ್ವಾರ್ಧಕ್ಕಿಂತ ಉತ್ತರಾರ್ಧವು ಹೆಚ್ಚು ಪ್ರೋತ್ಸಾಹದಾಯಕ.

ಈ ರಾಶಿಯವರ ಈ ವರುಷದ ಗ್ರಹಗತಿಯನ್ನು ಪರಾಮರ್ಶಿಸಲಾಗಿ ಕಳೆದ ಎರಡೂಕಾಲು ವರುಷದಿಂದ ಅನಿಷ್ಟಫಲದಾಯಕನಾಗಿದ್ದ ಅಷ್ಟಮ ಶನಿಯು ಇದೇ ವರುಷ ೧೬-೧೨-೧೯೮೭ ರಿಂದ ನಿರ್ಗಮಿಸಿ ಬರಲಿರುವ ಒಂಬತ್ತನೇ ಶನಿಯು ವರುಷಾಂತ್ಯದ ವರೆಗೂ ಮಧ್ಯಮ ಫಲವನ್ನು ಕೊಡುವನು. ಇದರಂತೆ ಕಳೆದ ವರುಷದಿಂದ ಅಶುಭ ಫಲದಾಯಕನಾಗಿದ್ದ ರಾಹು, ಸಂವತ್ಸರದ ಅಂತ್ಯದಲ್ಲಿ ಅಂದರೆ ೬-೩-೧೯೮೮ ರಿಂದ ನಿರ್ಗಮಿಸಿ ಬರಲಿರುವ ಹನ್ನೊಂದನೇ ರಾಹುವಿನ ಅತ್ಯಂತ ಶುಭ ಫಲವು ವರುಷಾಂತ್ಯದ ವರೆಗೂ ದೊರೆಯುತ್ತದೆ. ಇದೂ ಅಲ್ಲದೇ, ಕಳೆದ ವರುಷದಿಂದ ಅಶುಭ ಫಲದಾಯಕನಾದ ಹನ್ನೆರಡನೇ ಗುರುವು ಕೂಡ ೩-೨-೧೯೮೮ ರಿಂದ ನಿರ್ಗಮಿಸಿ ಬರಲಿರುವ ಮಧ್ಯಮ ಫಲದಾಯಕ ಜನ್ಮಸ್ಥ ಗುರುವು ಹಾಗೂ ೧೯-೬-೧೯೮೮ ರಿಂದ ಬರಲಿರುವ ಎರಡನೇ ಶುಭ ಫಲದಾಯಕ ಗುರುವು ವರುಷಾಂತ್ಯದ ವರೆಗೂ ಇರುತ್ತಾನೆ. ಹೀಗೆ ನಿಮ್ಮ ಗ್ರಹಗತಿ ಇರುವುದರಿಂದ ಪ್ರೋತ್ಸಾಹದಾಯಕ ವರುಷವಾಗಿದ್ದು ನಿಮ್ಮೆಲ್ಲ ಆಶೆ ಆಕಾಂಕ್ಷೆಗಳು ಈ ವರುಷ ಈಡೇರುವುದರಲ್ಲಿ ಸಂದೇಹವಿಲ್ಲ. ಆರೋಗ್ಯ ದೃಷ್ಟಿಯಿಂದ ನೋಡಿದರೆ ವರುಷದ ಮುಕ್ಕಾಲು ಅವಧಿಯ ವರೆಗೆ ಚೆನ್ನಾಗಿರುವುದಾದರೂ ನವೆಂಬರ್ ೧೫ ರಿಂದ ಏಪ್ರಿಲ್ ೧೨ ರ ವರೆಗೆ ಮತ್ತು ಜುಲೈ ೧೬ ರಿಂದ ಅಗಷ್ಟ ೧೬ ರ ವರೆಗಿನ ಮೂರು ತಿಂಗಳು ಕಾಲ ಮಾತ್ರ ಕುಸು ಕಿರುಕಳ ಪೀಡೆ ಇರುತ್ತದೆ. ಆರ್ಥಿಕ ದೃಷ್ಟಿಯಿಂದ ನೋಡಿದರೆ ಕಳೆದ ವರುಷಕ್ಕಿಂತ ಈ ವರುಷ ಉತ್ತಮವಿದ್ದು, ಕಳೆದ ವರುಷ ಮಾಡಿದ್ದ ಸಾಲವನ್ನು ತೀರಿಸುವ ಶಕ್ತಿ ಈ ವರುಷದಲ್ಲಿ ಬರುತ್ತದೆ. ಅದರಲ್ಲಿಯೂ ಜನೇವರಿ ೧೪ ರಿಂದ ಮಾರ್ಚ ೧೫ ರ ವರೆಗೆ, ಜೂನ್ ೧೫ ರಿಂದ ಜುಲೈ ೧೫ ರ ವರೆಗೆ ಹಾಗು ಅಗಷ್ಟ ೧೫ ರಿಂದ ಅಕ್ಟೋಬರ ೧೮ ರ ವರೆಗಿನ ಕಾಲ ಪ್ರೋತ್ಸಾಹದಾಯಕವಾಗಿದ್ದು ಈ ಕಾಲದಲ್ಲಿ ನಿರೀಕ್ಷಿಸಿದ ಮೂಲದಿಂದ ಹಣ ಸಂದಾಯವಾಗುವುದಲ್ಲದೇ, ದತ್ತಕ, ವಾರಸಾ, ಲಾಟರಿ, ಬಕ್ಷೀಸ, ಕಮೀಷನ್ ಮೊದಲಾದ ವಿಧದಿಂದ ಆಕಸ್ಮಿಕ ಧನಪ್ರಾಪ್ತಿಯಾಗುವುದರಿಂದ ಸಾಲಗಾರರ ಕಾಟದಿಂದ ಮುಕ್ತರಾಗುವಿರಿ. ಆದರೆ ಪೂರ್ವಾರ್ಧವು ಪ್ರತಿಕೂಲವು, ಅದರಲ್ಲಿಯೂ ಅಕ್ಟೋಬರ್ ೨೩ ರಿಂದ ಜನೇವರಿ ೧೩ ರ ವರೆಗಿನ ಕಾಲ ತೀರ ಪ್ರತಿಕೂಲವಾಗಿದ್ದು, ಆದಾಯಕ್ಕಿಂತ ಖರ್ಚು ಹೆಚ್ಚು ಆದರೂ ಕಳೆದ ವರುಷಕ್ಕಿಂತ ನಿಮ್ಮ ಆರ್ಥಿಕ ಸ್ಥಿತಿ ಸಮಾಧಾನಕರವೆನ್ನಬಹುದು. ಕೋರ್ಟು ಕಚೇರಿ ಮೊದಲಾದ ಯಾವುದೇ ಪ್ರಕಾರದ ವ್ಯಾಜ್ಯಗಳಿಗೆ ಮಿಶ್ರಫಲದಾಯಕ ವರುಷವಾಗಿದೆ. ಪೂರ್ವಾರ್ಧವು ಪ್ರತಿಕೂಲವಾಗಿದ್ದರೆ, ಉತ್ತರಾರ್ಧವು ಉತ್ತೇಜಕವಾಗಿದೆ. ಆದುದರಿಂದ ನೊಕದ್ದಮೆಗಳನ್ನು ಉತ್ತರಾರ್ಧದ ವರೆಗೆ ಮುಂದೂಡುವುದೇ ವಿಹಿತ.

ಈ ರಾಶಿಯ ನೌಕರ ವರ್ಗದವರಿಗೆ ಈ ವರುಷದ ಮಧ್ಯದಿಂದ ಅನುಕೂಲವಾಗಿದೆ. ಕಳೆದ ವರುಷ ವರಿಷ್ಠರೊಡನೆ ಉಂಟಾಗಿದ್ದ ತಪ್ಪು ತಿಳುವಳಿಕೆ ಕ್ರಮೇಣ ದೂರಾಗಿ ಸಹಾಯ ಸಹಕಾರ ಹೆಚ್ಚುವುದು. ಅದರಲ್ಲಿಯೂ ಜನೇವರಿ ೧೪ ರಿಂದ

ಮಾರ್ಚ್ ೧೪ ರ ವರೆಗೆ, ಹಾಗೂ ಜೂನ್ ೧೫ ರಿಂದ ಅಕ್ಟೋಬರ್ ೧೮ ರ ವರೆಗಿನ ಈ ಅವಧಿಯಲ್ಲಿ ನೌಕರಿಯಲ್ಲಿ ಬಡತಿ, ನಿರುದ್ಯೋಗಿಗಳಿಗೆ ಉದ್ಯೋಗ ಲಭಿಸುವಿಕೆ, ಅನುಕೂಲ ಜಾಗೆಗೆ ಬದಲಿ, ಮೊದಲಾದ ಶುಭ ಘಟನೆಗಳು ಜರಗುವವು. ಆದರೆ ಜನೇವರಿ ೧೪ ರಿಂದ ಜುಲೈ ೧೫ ರ ವರೆಗಿನ ಈ ಆರು ತಿಂಗಳ ಕಾಲದಲ್ಲಿ ಮೇಲಿಂದ ಮೇಲೆ ಬದಲಿ ಇಲ್ಲವೇ ಬಹಳ ತಿರುಗಾಟದ ಕೆಲಸ ಬೀಳಬಹುದಾಗಿದೆ. ಹಂಗಾಮಿ ನೌಕರರ ಅಸ್ಥಿರತೆಯು ಉತ್ತರಾರ್ಧದಿಂದ ದೂರವಾಗುತ್ತದೆ. ಈ ರಾಶಿಯ ಬಾಹ್ಯ ಹಾಗೂ ತಾಂತ್ರಿಕ ಕೆಲಸಗಾರರಿಗೂ, ಗಿರಣಿ ಕಾರಖಾನೆಗಳ ಕಾರ್ಮಿಕರಿಗೂ ಶನಿ–ರಾಹುಗಳು ಶುಭರಿರುವುದರಿಂದ ಉತ್ತೇಜಕ ವರುಷವಾಗಿದ್ದು ಅವರ ಅನೇಕ ಬೇಡಿಕೆಗಳು ಉತ್ತರಾರ್ಧದಲ್ಲಿ ಈಡೇರುವವು.


ಈ ರಾಶಿಯ ಸಾಹಿತಿ, ಲೇಖಕ, ಕಲಾವಿದ, ಶಿಕ್ಷಕ, ಅಧ್ಯಾಪಕ, ಪತ್ರಿಕೋದ್ಯಮಿ ಡಾಕ್ಟರ, ವಕೀಲ, ಚಾರ್ಟರ್ಡ್ ಅಕೌಂಟೆಂಟ್, ನ್ಯಾಯಾಧೀಶ, ಪ್ರಕಾಶಕ ಮೊದಲಾದ ಬುದ್ಧಿ ಜೀವಿಗಳಿಗೆಲ್ಲ ಮಿಶ್ರಫಲದಾಯಕ ವರುಷವಾಗಿದೆ. ಪೂರ್ವಾರ್ಧವು ಪ್ರತಿಕೂಲವಾಗಿದ್ದರೆ ಉತ್ತರಾರ್ಧವು ಉತ್ತೇಜಕವಿದೆ. ಅಂದರೆ ಅಕ್ಟೋಬರ್ ೨೬ ರಿಂದ ಏಪ್ರಿಲ್ ಕೊನೆಯ ವರೆಗಿನ ಕಾಲ ತಾಪದಾಯಕವಾಗಿದ್ದು ಉದ್ಯೋಗದಲ್ಲಿ ಹಿನ್ನಡೆ, ಮಿಥ್ಯಾಪವಾದ, ಆರ್ಥಿಕ ಮುಗ್ಗಟ್ಟನ್ನು ಎದುರಿಸಬೇಕಾಗುತ್ತದೆ. ಮೇ ೧ ರಿಂದ ನವೆಂಬರ್ ೯ ರ ವರೆಗಿನ ಕಾಲ ಪ್ರೋತ್ಸಾಹದಾಯಕವಾಗಿದ್ದು, ಉದ್ಯೋಗದಲ್ಲಿ ಸ್ಥಿರತೆ, ಪ್ರಗತಿ, ಮನ್ನಣೆ, ದೊರೆಯುವುದಲ್ಲದೇ ಸರಕಾರದಿಂದಲೂ, ಸಂಘ ಸಂಸ್ಥೆಗಳಿಂದಲೂ ಪ್ರಶಸ್ತಿ ಪದಕ, ಮಾನ ಸನ್ಮಾನ ಪಡೆಯುವರಲ್ಲದೆ, ದ್ರವ್ಯಾನುಕೂಲತೆಯನ್ನು ಪಡೆಯುವರು. ಅಲ್ಲದೆ ಪರದೇಶ ಪರ್ಯಟನದ ಯೋಗವೂ ಉಂಟು.

ಈ ರಾಶಿಯ ಸ್ವತಂತ್ರ ವ್ಯಾಪಾರ ಉದ್ಯೋಗಸ್ಥರಿಗೂ, ಉದ್ಯಮದಾರರಿಗೂ, ಹಂಚಿಕೆದಾರರು, ಕಮಿಶನ್ ಏಜೆಂಟರಿಗೂ, ಗಿರಣಿ ಕಾರಖಾನೆ, ಚಾಳ, ಟಾಕೀಜ, ಹೋಟೆಲ ಮೊದಲಾದ ಮಾಲಕ ವರ್ಗದವರಿಗೂ ಪೂರ್ವಾರ್ಧವು ಪ್ರತಿಕೂಲವಾಗಿದ್ದು, ನೌಕರರ ಸಮಸ್ಯೆ ಸರಕಾರದ ನಿರ್ಬಂಧಗಳ, ಮಶಿನರಿಗಳ ತೊಂದರೆಗಳಿಂದಲೂ, ಉದ್ಯೋಗ ಕುಂಠಿತವಾಗುತ್ತದೆ. ಆದರೆ ಉತ್ತರಾರ್ಧವು ಉತ್ತೇಜಕವಿದ್ದು ಪೂರ್ವಾರ್ಧದಲ್ಲಿದ್ದ ಎಲ್ಲ ತೊಂದರೆಗಳು ನಿವಾರಣೆಯಾಗಿ ಕುಂಠಿತವಾಗಿದ್ದ ಉದ್ಯೋಗ ಮತ್ತೆ ಚೇತರಿಸಿಕೊಳ್ಳುತ್ತದೆ. ಹೊಸದಾಗಿ ಉದ್ಯೋಗ ಪ್ರಾರಂಭಿಸಬೇಕೆನ್ನುವವರು, ಮಧ್ಯದಲ್ಲಿ ಪ್ರಾರಂಭಿಸಲಿ. ಉತ್ತರಾರ್ಧದಲ್ಲಿ ಸ್ಥಿರತೆ ಬರುತ್ತದೆ.


ಈ ರಾಶಿಯ ಕೃಷಿಕ ವರ್ಗದವರಿಗೆ ಪ್ರಗತಿದಾಯಕ ವರುಷವಾಗಿದೆ. ವಶ್ತಿ ಹಾಕಲ್ಪಟ್ಟ ಹೊಲ ಮನೆಗಳನ್ನು ಬಿಡಿಸಿಕೊಳ್ಳುವ ಶಕ್ತಿ ಬರುತ್ತದೆ ಹಾಗು ಹೊಸದಾಗಿ ದನ ಕರುಗಳನ್ನು, ಬೇಸಾಯಕ್ಕೆ ಬೇಕಾಗುವ ಉಪಕರಣಗಳನ್ನು ಕೊಳ್ಳುವ ಶಕ್ತಿಯೂ ಸಹ ಬರುತ್ತದೆ.

ಕಳೆದ ಅನೇಕ ವರುಷಗಳಿಂದ ಪ್ರಯತ್ನಿಸುತ್ತಿರುವ ಈ ರಾಶಿಯ ವಧೂವರರಿಗೆ ಈ ವರುಷ ಕಂಕಣ ಬಲ ಕೂಡಿ ಬಂದಿದೆ. ಅದರಲ್ಲಿಯೂ ಡಿಸೆಂಬರ್ ೧೬ ರಿಂದ ಜುಲೈ ೧೫ ರ ವರೆಗಿನ ಈ ಕಾಲದಲ್ಲಿ ವಿವಾಹ ಜರುಗಿ ಗೃಹಸ್ಥಾಶ್ರಮದ ಜೀವನದಲ್ಲಿ ಪಾದಾರ್ಪಣ ಮಾಡುವರು. ಅಷ್ಟಮ ಶನಿ ಹಾಗೂ ಹನ್ನೆರಡನೇ ಗುರುವಿನಿಂದಾಗಿ ಒಡೆದುಹೋಗಿದ್ದ ಏಕತ್ರ ಕುಟುಂಬ ಮತ್ತೆ ಒಂದುಗೂಡುವುದು. ತಪ್ಪು ತಿಳಿವಳಿಕೆ ಗೃಹ ಕಲಹದಿಂದ ಅಶಾಂತಿಯಿಂದಿದ್ದ ಮನೆ ಈ ವರುಷ ಮತ್ತೆ ನಂದನವನದಂತೆ ಶೋಭಿಸುವುದು. ಗೃಹಿಣಿಯರಿಗೆ, ವಿವಾಹಿತ ಪುರುಷರಿಗೆಲ್ಲ ಈ ವರುಷ ಪ್ರಗತಿದಾಯಕವಿದ್ದು ಜನೇವರಿ ೧೪ ರಿಂದ ಜುಲೈ ೧೫ ರ ವರೆಗೆ ಹಾಗು ಅಗಷ್ಟ ೧೫ ರಿಂದ ನವೆಂಬರ್ ೯ ರ ವರೆಗಿನ ಈ ಕಾಲದಲ್ಲಿ ಆಸ್ತಿ, ವಾಹನ. ಬೆಲೆಯುಳ್ಳ ವಸ್ತು ಒಡವೆಗಳ ಸಂಪಾದನೆ, ತೀರ್ಥಯಾತ್ರಾ ಸಂದರ್ಶನ ಮೊದಲಾದ ಮಹತ್ವದ ಸಂಗತಿಗಳು ಜರುಗುವವು. ಈ ರಾಶಿಯ ಗರ್ಭಿಣಿಯರಿಗೆ ಮಿಶ್ರಫಲದಾಯಕ ವರುಷವು. ಹೆರಿಗೆಯು ಪೂರ್ವಾರ್ಧದಲ್ಲಿ ಆದರೆ ಕಷ್ಟದಾಯಕದ್ದು, ಶಸ್ತ್ರಕ್ರಿಯೆ ಅನಿವಾರ್ಯವಾಗುತ್ತದೆ. ಉತ್ತರಾರ್ಧದಲ್ಲಿಯಾದರೆ ಸುಖ ಪ್ರಸವವಾಗುತ್ತದೆ.

ಈ ರಾಶಿಯ ಸಾಮಾಜಿಕ ಕಾರ್ಯ ಕರ್ತರಿಗೆ ವರುಷದ ಮಧ್ಯದಿಂದ ಬರುವ ಜನ್ಮಸ್ಥ ಗುರುವಿನಿಂದಲೂ ಉತ್ತರಾರ್ಧದಿಂದ ಬರುವ ಶುಭ ಫಲದಾಯಕ ದ್ವಿತೀಯ ಗುರುವಿನಿಂದಲೂ ಪ್ರೋತ್ಸಾಹದಾಯಕ ವರುಷವಾಗಿದೆ. ನೀವು ದೋಷಮುಕ್ತರಾಗುವಿರಿ. ಜನೇವರಿ ೧೪ ರಿಂದ ಜುಲೈ ೧೫ ರ ವರೆಗೆ ಹಾಗು ಆಗಷ್ಟ ೧೫ ರಿಂದ ನವೆಂಬರ್ ೯ ರ ವರೆಗಿನ ಈ ಕಾಲದಲ್ಲಿ ಕಳೆದುಕೊಂಡಿದ್ದ ಸ್ಥಾನಮಾನ ಅಧಿಕಾರ ಮತ್ತೆ ಪಡೆಯುವಿರಲ್ಲದೇ ಅನೇಕ ಸಂಘ ಸಂಸ್ಥೆಗಳ ಪದಾಧಿಕಾರಿಗಳಾಗಿ ಗಣ್ಯವ್ಯಕ್ತಿಗಳಾಗುವಿರಿ. ಇದೇ ಅವಧಿಯಲ್ಲಿ ಜರುಗಲಿರುವ ಯಾವುದೇ ಚುನಾವಣೆಯಲ್ಲಿ ಸ್ಪರ್ಧಿಸಿದರೂ ಜಯ ಖಂಡಿತ.



ಈ ರಾಶಿಯ ವಿದ್ಯಾರ್ಥಿಗಳಿಗೆ ವರುಷದ ಮಧ್ಯದಿಂದ ಬರುವ ಜನ್ಮಸ್ಥ ಗುರು ಹಾಗು ಉತ್ತರಾರ್ಧದಿಂದ ಬರುವ ದ್ವಿತೀಯ ಗುರುವಿನಿಂದಾಗಿ ಪ್ರೋತ್ಸಾಹದಾಯಕ ವರುಷವಾಗಿದೆ. ಮನೆಯಲ್ಲಿಯ ವಿಷಮ ವಾತಾವರಣದಿಂದಲೂ, ಶಿಕ್ಷಕರ ಅವಕೃಪೆಯಿಂದಲೂ ಕಳೆದ ವರುಷ ಕುಂಠಿತವಾಗಿದ್ದ ಶಿಕ್ಷಣ ಮತ್ತೆ ಮುಂದುವರೆಯುವುದಲ್ಲದೆ ಶಿಕ್ಷಕರ ಕೃಪಾಛತ್ರಕ್ಕೆ ಒಳಗಾಗುವಿರಿ. ನಿಂತಿದ್ದ ಶಿಷ್ಯ ವೃತ್ತಿ, ವಿದ್ಯಾರ್ಥಿ ವೇತನ ಮತ್ತೆ ಮುಂದುವರೆಯುವುದು. ಜನೇವರಿ ೧೪ ರಿಂದ ಜೂನ ೧೫ ರ ವರೆಗೆ ಕಟ್ಟಿದ ವಿದ್ಯಾರ್ಥಿಗಳು ಸಾದಾ ರೀತಿಯಿಂದ ತೇರ್ಗಡೆ ಆಗುತ್ತಿದ್ದರೆ, ಜೂನ ೧೬ ರಿಂದ ವರುಷಾಂತ್ಯದ ವರಗೆ ನಡೆಯಲಿರುವ ಪರೀಕ್ಷೆಗಳಿಗೆ ಕಟ್ಟಿದ ವಿದ್ಯಾರ್ಥಿಗಳು ದರ್ಜೆ, ಶ್ರೇಣಿಯಲ್ಲಿ ತೇರ್ಗಡೆ ಆಗುವರಲ್ಲದೇ, ಪ್ರಶಸ್ತಿ ಪದಕಗಳು ಲಭ್ಯವಾಗುವುವು. ಹೆಚ್ಚಿನ ಶಿಕ್ಷಣಕ್ಕಾಗಿ ಇಲ್ಲವೇ ಸಂಶೋಧನೆಗಾಗಿ ಅವರು ವಿದೇಶಿ ಯಾತ್ರೆಯನ್ನು ಕೈ ಕೊಳ್ಳಬಹುದಾಗಿದೆ. ಆದರೆ ಯಾವ ವಿದ್ಯಾರ್ಥಿಗಳ ಪರೀಕ್ಷೆಯು ಅಕ್ಟೋಬರ ೨೬ ರಿಂದ ಜನವರಿ ೧೪ ರ ವರೆಗೆ ಜರುಗಲಿದೆಯೋ ಅಂಥ ವಿದ್ಯಾರ್ಥಿಯ ಪರೀಕ್ಷೆಯ ಫಲಿತಾಂಶ ಸಂಶಯಾಸ್ಪದವು. ಒಟ್ಟಿನಲ್ಲಿ ಈ ರಾಶಿಯವರಿಗೆ ಪ್ರೋತ್ಸಾಹದಾಯಕ ವರುಷ.



ವೃಷಭ

ಈ ರಾಶಿಯವರಿಗೆ ಮುಂಬರುವ ಅಷ್ಟಮ ಶನಿ ಹಾಗೂ ಹನ್ನೆರಡನೆ ಮತ್ತು ಜನ್ಮಸ್ಥ ಗುರುವಿನಿಂದಾಗಿ ನಿರುತ್ಸಾಹದಾಯಕ ವರುಷವಾಗಿದೆ.


ಈ ರಾಶಿಯವರ ಈ ವರುಷದ ಗ್ರಹಗತಿಯನ್ನು ಅವಲೋಕಿಸಲಾಗಿ, ೧೬-೧೨-೧೯೮೭ ರಿಂದ ಬರುವ ಅಷ್ಟಮ ಶನಿಯ ಅನಿಷ್ಟತೆಯನ್ನು ಎದುರಿಸಬೇಕಾಗುತ್ತದಲ್ಲದೆ ಇದುವರೆಗೆ ಶುಭಫಲವನ್ನು ಕೊಡುತ್ತಿದ್ದ ಹನ್ನೊಂದನೇ ಗುರುವು ಕೂಡ ೩-೨-೧೯೮೮ ರಿಂದ ನಿರ್ಗಮಿಸಿ ಅಂದೇ ಬರಲಿರುವ ೧೨ ನೇ ಗುರು ಅಶುಭ ಫಲಕೊಡವನು. ೧೯-೬-೧೯೮೮ ರಿಂದ ಬರುವ ಜನ್ಮಸ್ಥ ಗುರುವು ಕೂಡ ಮಧ್ಯಮ ಫಲದಾಯಕನು. ಆದರೆ ಸಂವತ್ಸರಾಂತ್ಯದಲ್ಲಿ ಶುಭಫಲದಾಯಕ ಹನ್ನೊಂದನೆ ರಾಹು ನಿರ್ಗಮಿಸಿದರೂ, ಬರಲಿರುವ ಹತ್ತನೇ ರಾಹುವಿನ ಶುಭ ಫಲ ಮಾತ್ರ ವರುಷಾಂತ್ಯದ ವರೆಗೂ ಇರುತ್ತದೆ.

ಈ ರಾಶಿಯವರ ಆರೋಗ್ಯ ವರುಷವಿಡೀ ಚೆನ್ನಾಗಿರದು. ಒಂದಿಲ್ಲೊಂದು ಕಿರುಕಳ ಪೀಡೆ, ಉಪದ್ರವ ಇದ್ದೇ ಇರುತ್ತದೆ. ಅಲ್ಲದೇ ನವೆಂಬರ್ ೧೫ ರಿಂದ ಫೆಬ್ರುವರಿ ೧೨ ರ ವರೆಗೆ ಏಪ್ರಿಲ್ ೧೪ ರಿಂದ ಜೂನ್ ೧೫ ರ ವರೆಗೆ ಹಾಗೂ ಆಗಷ್ಟ

೧೯ ರಿಂದ ಸಪ್ಟೆಂಬರ್ ೧೬ ರ ವರೆಗಿನ ಈ ಆರು ತಿಂಗಳು ಕಾಲದಲ್ಲಿ ರೋಗ ಉಲ್ಬಣಿಸುವುದಲ್ಲದೇ, ಅಪಘಾತದ ಭೀತಿಯೂ ಉಂಟು. ಆದುದರಿಂದ ಈ ಅವಧಿಯಲ್ಲಿ ಈ ರಾಶಿಯ ವಾಹನ ಚಾಲಕರು, ಬಾಹ್ಯ ಹಾಗು ತಾಂತ್ರಿಕ ಕೆಲಸಗಾರರು, ವರ್ಕಶಾಪ, ಮಶೀನ ಶಾಪ ಮೊದಲಾದ ಮಶಿನರಿಗಳಲ್ಲಿ ಕಾರ್ಯ ಮಾಡುವವರು ವಿಶೇಷ ಎಚ್ಚರಿಕೆಯಲ್ಲಿ ಇರುವುದು ಅವಶ್ಯ. ಆರ್ಥಿಕ ದೃಷ್ಟಿಯಿಂದ ನೋಡಿದರೆ ಈ ವರುಷ ತೀರ ತಾಪದಾಯಕವಾಗಿದೆ. ಡಾಕ್ಟರ್, ವಕೀಲರುಗಳ ಬಿಲ್ಲುಗಳಿಗಾಗಿ ಮುಕ್ಕಾಲು ಆದಾಯ ಖರ್ಚಾಗುತ್ತದೆ. ಆದಾಯ ಅಲ್ಪ, ವೆಚ್ಚ ವಿಪರೀತ, ಸಾಲಗಾರರ ಕಾಟ ಹೆಚ್ಚಿ, ಹೊಸ ಸಾಲದ ಪರದಾಟದಲ್ಲಿಯೇ ವರುಷವಿಡೀ ಕಳೆಯಬೇಕಾಗುತ್ತದೆ. ಆದಾಗ್ಯೂ ಅಕ್ಟೋಬರ್ ೨೩ ರಿಂದ ಡಿಸೆಂಬರ್ ೧೬ ರ ವರೆಗೆ, ಹಾಗೂ ಫೆಬ್ರುವರಿ ೧೩ ರಿಂದ ಏಪ್ರಿಲ ೧೨ ರ ವರೆಗಿನ ಅವಧಿ ಇದ್ದುದರಲ್ಲಿಯೇ ಅನುಕೂಲವಿದ್ದು, ನಿರೀಕ್ಷಿಸಿದ ಮೂಲದಿಂದ ದ್ರವ್ಯಾನುಕೂಲತೆಯಾಗಿ ಅವಮಾನದ ಪ್ರಸಂಗ ತಪ್ಪುವುದು. ಆದರೆ ಡಿಸೆಂಬರ್ ೧೭ ರಿಂದ ಫೆಬ್ರುವರಿ ೧೨ರ ವರೆಗೆ, ಹಾಗೂ ಏಪ್ರಿಲ ೧೨ ರಿಂದ ಜೂನ್ ೧೫ ರ ವರೆಗಿನ ಈ ನಾಲ್ಕು ತಿಂಗಳ ಕಾಲ ಆರ್ಥಿಕ ಸ್ಥಿತಿಯು ಪರಾಕಾಷ್ಠೆ ಮುಟ್ಟಿ ನಿಮ್ಮ ಸತ್ವ ಪರೀಕ್ಷೆಯಾಗುವುದಾದರೂ ಅದರಲ್ಲಿ ಜಯ ಗಳಿಸುವಿರಿ.

ಕೋರ್ಟು, ಕಚೇರಿ ಮೊದಲಾದ ಯಾವುದೇ ಪ್ರಕಾರದ ವ್ಯಾಜ್ಯಗಳಿಗೆ ಈ ವರುಷ ಕೈ ಹಾಕದಿರುವುದೇ ಹಿತಕರವು.

ಅಷ್ಟಮ ಶನಿ ಹನ್ನೆರಡನೇ ಗುರುವಿನಿಂದಾಗಿ ಈ ರಾಶಿಯ ನೌಕರ ವರ್ಗದವರಿಗೆ ಪ್ರತಿಕೂಲ ವರುಷವಾಗಿದೆ. ಮೇಲಧಿಕಾರಿಗಳ ಉಪಟಳಕ್ಕೆ ಇಲ್ಲವೆ ಹಿಂಬಡತಿಯ ಮೂಲಕ ರಾಜೀನಾಮೆ ಕೊಡುವ ಪ್ರಸಂಗ ಬರುವುದು. ಅಶುಭಸ್ಯ ಕಾಲಹರಣಂ ಎಂಬಂತೆ ತಾಳ್ಮೆಯಿಂದ ಇದ್ದರೆ ಎಲ್ಲವೂ ಸರಿಯಾಗುತ್ತದೆ. ಇದ್ದುದರಲ್ಲಿಯೇ



ಅಮ್ಮಾ, ಒಂದ್ಸಲ್ ಪಟಾಕೀನಾದ್ರೂ ಹಾಕಿ ತಾಯಿ !

ಬೆಳುದಿಂಗಳು



ನೀನು ಒಲಿದು ಬಂದುದಕೆ ನನ್ನ ಜೀವನದಲಿ
ಬಿಸಿಲೂ ಕೂಡ ಮಧು ಬೆಳುದಿಂಗಳಾಗಿದೆ !
ಗೆಳತಿ ! ಏನೆಂಥ ಸೊಗಸು ಪ್ರೇಮ ಬಂಧನ
ನಿನ್ನಲಿ ಮನವಿದೆ, ನೀನು ಮನದಲಿರುವೆ !

—ಡಾ. ಪಂಚಾಕ್ಷರಿ ಹಿರೇಮಠ

ಅಕ್ಟೋಬರ್ ೨೩ ರಿಂದ ಏಪ್ರಿಲ ೧೨ ರ ವರೆಗಿನ ಕಾಲ ತುಸು ಅನುಕೂಲವಿದ್ದು ಈ ಕಾಲದಲ್ಲಿ ಮಾತ್ರ ವರಿಷ್ಠರ ತಪ್ಪು ತಿಳುವಳಿಕೆ ದೂರಾಗುತ್ತದೆಯಲ್ಲದೇ ನಿರುದ್ಯೋಗಿಗಳಿಗೆ ತುಸು ಆಸರೆ ದೊರೆಯುತ್ತದೆಯಾದರೂ ಉಳಿದ ಆರು ತಿಂಗಳು ಅಸಹನೀಯವಾಗಿದೆ. ಹಂಗಾಮಿ ನೌಕರದಾರರಿಗೆ ಅಸ್ಥಿರತೆಯಲ್ಲಿ ಇದೊಂದು ವರುಷ ಕಳೆಯಬೇಕಾಗುತ್ತದೆ. ಈ ರಾಶಿಯ ಬಾಹ್ಯ ಹಾಗು ತಾಂತ್ರಿಕ ಕೆಲಸಗಾರರಿಗೆ ಗಿರಣಿ ಕಾರಖಾನೆಗಳ ಕಾರ್ಮಿಕ ವರ್ಗದವರಿಗೆಲ್ಲ ಅಷ್ಟಮ ಶನಿಯಿಂದಾಗಿ ನಿರುತ್ಸಾಹದಾಯಕ ವರುಷವಾಗಿದೆ. ಇದ್ದುದರಲ್ಲಿಯೇ ಪೂರ್ವಾರ್ಧವು ತುಸು ಪ್ರಗತಿದಾಯಕ ಇದ್ದು ಈ ಅವಧಿಯಲ್ಲಿ ಅವರ ಕೆಲ ಬೇಡಿಕೆಗಳು ಕೆಲ ಮಟ್ಟಿಗೆ ಈಡೇರುತ್ತವೆ. ಈ ರಾಶಿಯ ಕೃಷಿ ವರ್ಗದವರಿಗೆ ನಿರುತ್ಸಾಹದಾಯಕ ವರುಷವಾಗಿದೆ. ನಿರೀಕ್ಷಿಸಿದಷ್ಟು ಬೆಳೆ ಬಾರದಿರುವುದರಿಂದ ಸಾಲ ಮಾಡುವ ಇಲ್ಲವೇ ಹೊಲ ಮನೆಗಳನ್ನು ಒತ್ತಿ ಹಾಕಬಹುದಾದ ಪ್ರಸಂಗ ಬರಬಹುದು.


ಈ ರಾಶಿಯ ಸಾಹಿತಿ, ಲೇಖಕ, ಕಲಾವಿದ, ಶಿಕ್ಷಕ, ಅಧ್ಯಾಪಕ, ಪತ್ರಿಕೋದ್ಯಮಿ, ಡಾಕ್ಟರ, ವಕೀಲ, ಚಾರ್ಟರ್ಡ ಅಕೌಂಟೆಂಟ್, ನ್ಯಾಯಾಧೀಶ ಮೊದಲಾದ ಬುದ್ಧಿಜೀವಿಗಳಿಗೆಲ್ಲ ಅಷ್ಟಮ ಶನಿ ಹಾಗು ಹನ್ನೆರಡನೆ ಹಾಗು ಜನ್ಮಸ್ಥ ಗುರುವಿನಿಂದಾಗಿ ತಾಪದಾಯಕ ವರುಷವಾಗಿದೆ. ಉದ್ಯೋಗದಲ್ಲಿ ಚಟುವಟಿಕೆ ಕಂಡು ಬರುವುದಿಲ್ಲ. ಮಿತ್ರರೆ ಶತ್ರುಗಳಾಗುವುದರಿಂದ ಮಿಥ್ಯಾಪವಾದವನ್ನು ಎದುರಿಸಬೇಕಾಗುತ್ತದೆ. ಆದರೆ ಅಕ್ಟೋಬರ್ ೨೪ ರಿಂದ ಏಪ್ರಿಲ ೧೨ ರ ವರೆಗೆ ಹಾಗು ಜೂನ್ ೧೯ ರಿಂದ ಅಗಸ್ಟ ೧೬ ರ ವರೆಗಿನ ಕಾಲ ತುಸು ಪ್ರಗತಿದಾಯಕವಿದೆ. ಈ ರಾಶಿಯ ಸ್ವತಂತ್ರ ವ್ಯಾಪಾರ ಉದ್ಯೋಗಸ್ಥರಿಗೂ, ಉದ್ದಿಮೆದಾರರಿಗೂ, ಕಮಿಶನ್ ಏಜೆಂಟರಿಗೂ, ಹಂಚಿಕೆದಾರರಿಗೂ, ಗಿರಣಿ ಕಾರಖಾನೆ, ಚಾಳ, ಟಾಕೀಜ, ಹೋಟೇಲಗಳ ಮಾಲಿಕ ವರ್ಗದವರಿಗೆಲ್ಲ ಉತ್ಸಾಹದಾಯಕ ವರುಷವಿದಾಗಿಲ್ಲ. ನೌಕರ ಸಮಸ್ಯೆಯಲ್ಲದೇ, ಸರಕಾರದ ನಿರ್ಬಂಧಗಳನ್ನು, ಮಶಿನರಿ ತೊಂದರೆಗಳನ್ನು ಎದುರಿಸಬೇಕಾಗುವುದರಿಂದ ಉದ್ಯೋಗದಲ್ಲಿ ಕುಂಠಿತವಾಗುತ್ತದೆ. ಇದ್ದುದರಲ್ಲಿಯೇ ಪೂರ್ವಾರ್ಧವು ತುಸು ಪ್ರಗತಿದಾಯಕವಿದೆ.

ಹೊಸ ಉದ್ಯಮಗಳನ್ನು ಪ್ರಾರಂಭಿಸಬೇಕೆಂಬ ವಿಚಾರ ಈ ವರುಷ ಕೈ ಬಿಡುವುದೇ ಹಿತಕರ.

ಈ ರಾಶಿಯು ವಧೂವರರಿಗೆ ಮಿಶ್ರ ಫಲದಾಯಕ ವರುಷವಾಗಿದೆ. ವರುಷದ ಪ್ರಾರಂಭದ ಮೂರು ತಿಂಗಳು ಹಾಗೂ ಕೊನೆಯ ಮೂರು ತಿಂಗಳು ಪ್ರೋತ್ಸಾಹದಾಯಕವಾಗಿದ್ದು, ಈ ಕಾಲದಲ್ಲಿ ನಿರ್ವಿಘ್ನವಾಗಿ ವಿವಾಹ ಜರಗುತ್ತದೆ. ಆದರೆ ಮಧ್ಯದ ಆರು ತಿಂಗಳು ಕಾಲ ಪ್ರತಿಕೂಲವಿದ್ದು ಈ ಅವಧಿಯಲ್ಲಿ ಮದುವೆ ನಿಶ್ಚಿತವಾದರೆ ತೊಂದರೆ ಇದೆ. ಈ ರಾಶಿಯ ವಿವಾಹಿತ ಸ್ತ್ರೀ ಪುರುಷರಿಗೂ ಗೃಹಿಣಿಯರಿಗೂ ಅಷ್ಟಮ ಶನಿ ಹಾಗೂ ಹನ್ನೆರಡನೇ ಜನ್ಮಸ್ಥ ಗುರುವಿನಿಂದಾಗಿ ಅಶಾಂತಿಯ ವರುಷವಾಗಿದೆ. ಪ್ರತಿನಿತ್ಯದ ಗೃಹ ಕಲಹದಿಂದಾಗಿ ನಿದ್ರಾ ರಹಿತವಾದ ಹಲವು ರಾತ್ರಿಗಳನ್ನು ಕಳೆಯಬೇಕಾಗುತ್ತದೆ. ತಪ್ಪು ತಿಳುವಳಿಕೆಯಿಂದಲೂ ಚಾಡಿಯ ಪ್ರಭಾವದಿಂದಲೂ ಏಕತ್ರ ಕುಟುಂಬ ಒಡೆದು ಹೋಗಬಹುದಾಗಿದೆ. ಅದರಲ್ಲಿಯೂ ಏಪ್ರಿಲ ೧೨ ರಿಂದ ಸಪ್ಟೆಂಬರ ೧೬ ರ ವರೆಗಿನ ಕಾಲದಲ್ಲಿ ಗೃಹ ಕಲಹ ಪರಾಕಾಷ್ಠೆ ಮುಟ್ಟುತ್ತದೆ. ಈ ರಾಶಿಯ ಗರ್ಭಿಣಿಯರಿಗೂ ಪ್ರತಿಕೂಲ ವರುಷವಾಗಿದ್ದು ಕಷ್ಟ ಪ್ರಸವವಾಗುವದಲ್ಲದೇ ಶಸ್ತ್ರ ಕ್ರಿಯೆ ಅನಿವಾರ್ಯವಾಗಬಹುದಾಗಿದೆ.

ಈ ರಾಶಿಯ ರಾಜಕೀಯ ಸಾಮಾಜಿಕ ಕಾರ್ಯಕರ್ತರಿಗೆಲ್ಲ ಈ ವರುಷ ಚೆನ್ನಾಗಿರುವದಿಲ್ಲ. ಚುನಾವಣೆ ಮೊದಲಾದ ಜಂಜಾಟದಿಂದ ದೂರ ಇರುವುದೇ ಹಿತಕರವು. ಮಿತ್ರರೇ ಶತ್ರುಗಳಾಗುವುದರಿಂದ ಮಿಥ್ಯಾಪವಾದವನ್ನು ಎದುರಿಸಬೇಕಾಗುತ್ತದೆ. ಅಲ್ಲದೇ ಸ್ಥಾನ ಮಾನಕ್ಕೆ ಅಧಿಕಾರಕ್ಕೆ ಚ್ಯುತಿ ಇದೆ. ಈ ರಾಶಿಯ ವಿದ್ಯಾರ್ಥಿಗಳಿಗೆ ತೀರ ಅನಿಷ್ಟವಾದ ವರುಷವಾಗಿದ್ದು ಶಿಕ್ಷಕರ ಅವಕೃಪೆಯಿಂದಲೂ ಮನೆಯಲ್ಲಿಯ ವಿಷಮ ವಾತಾವರಣದಿಂದಲೂ ಆರ್ಥಿಕ ಮುಗ್ಗಟ್ಟಿನಿಂದಲೂ, ಶಾರೀರಕ ಪೀಡೆಯಿಂದಲೂ ಶಿಕ್ಷಣ ಮುಂದುವರಿಸುವುದೇ ಕಠಿಣವಾಗುತ್ತದೆ. ಇದ್ದುದರಲ್ಲಿ ಪೂರ್ವಾರ್ಧವು ತುಸು ಅನುಕೂಲವು. ಅದರಲ್ಲಿಯೂ ಅಕ್ಟೋಬರ ೨೩ ರಿಂದ ಡಿಸೆಂಬರ ೧೬ ರ ವರೆಗೆ ಹಾಗೂ ಫೆಬ್ರುವರಿ ೧೨ ರಿಂದ ಏಪ್ರಿಲ್ ೧೨ ರ ವರೆಗೆ ಜರುಗಲಿರುವ ಪರೀಕ್ಷೆಗೆ ಕಟ್ಟಿದ

ವಿದ್ಯಾರ್ಥಿಗಳು ಹೇಗೋ ಎಂತೋ ತೇರ್ಗಡೆ ಆಗುವರು. ಆದರೆ ಕಳೆದ ವರುಷ ಸಂಪಾದಿಸಿದ ವಿದ್ಯಾರ್ಥಿ ವೇತನ, ಶಿಷ್ಯವೃತ್ತಿಯನ್ನು ಪಡೆಯಲು ಹೆಣಗಾಡಬೇಕಾಗುತ್ತದೆ. ಆದರೆ ಉಳಿದ ಅವಧಿಯಲ್ಲಿ ಪರೀಕ್ಷೆಗೆ ಕಟ್ಟಿದ ವಿದ್ಯಾರ್ಥಿಗಳ ಫಲಿತಾಂಶ ಸಂಶಯಾಸ್ಪದವು. ಒಟ್ಟಿನಲ್ಲಿ ಈ ರಾಶಿಯು ಎಲ್ಲ ವರ್ಗದವರಿಗೂ ಎಲ್ಲ ದೃಷ್ಟಿಯಿಂದಲೂ ಪ್ರತಿಕೂಲ ವರುಷವಾಗಿದೆ. ಈ ಅಶುಭ ನಿವಾರಣೆಗಾಗಿ ಶನಿ ಗುರು ಜಪ ಇಲ್ಲವೆ ನವಗ್ರಹ ಶಾಂತಿ ಮಾಡಿಸಿರಿ ಇಲ್ಲವೇ ಮಾರುತಿ, ದತ್ತಾತ್ರೇಯ ಪ್ರಾರ್ಥನೆಯಿಂದ ಅಶುಭ ಫಲ ಕಡಿಮೆ ಆಗುವದರಲ್ಲಿ ಸಂದೇಹವಿಲ್ಲ.



ಮಿಥುನ


ಈ ವರುಷ ಈ ರಾಶಿಯ ಎಲ್ಲ ವರ್ಗದವರಿಗೂ ಎಲ್ಲ ದೃಷ್ಟಿಯಿಂದಲೂ ಯಾವ ಹೆಚ್ಚಿನ ಶುಭ ಅಶುಭ ಘಟನೆಗಳು ಜರುಗದೆ ಯಥಾಸ್ಥಿತಿಯೇ ಮುಂದುವರೆಯುತ್ತದೆ.

ಈ ವರೆಗೆ ಆರನೇಯವನಾಗಿ ಶುಭ ಫಲ ಕೊಡುತ್ತಿದ್ದ ಶನಿಯು ವರುಷಾಂತ್ಯದಲ್ಲಿ ಅಂದರೆ ೧೭-೧೨-೧೯೮೭ ರಿಂದ ಏಳನೇಯವನಾಗುವುದರಿಂದ ಶುಭ ಫಲದ ಪ್ರಮಾಣ ಕಡಿಮೆ ಆದರೂ ಅಶುಭ ಫಲ ಕೊಡುವುದಿಲ್ಲ. ಇದರಂತೆ ಕಳೆದ ವರ್ಷದಿಂದ ದಶಮನಾಗಿ ಶುಭ ಫಲ ಕೊಡುತ್ತಿದ್ದ ರಾಹು ಸಂವತ್ಸರಾಂತ್ಯದಿಂದ ನವಮನಾಗಿ ಬರುವುದರಿಂದ ಶುಭ ಫಲದ ಪ್ರಮಾಣ ಕಡಿಮೆ ಆದರೂ ಆತನು ಅಶುಭ ಫಲವನ್ನು ಕೊಡಲಾರ. ಆದರೆ ಕಳೆದ ವರುಷದಿಂದ ಹತ್ತನೇ - ಹನ್ನೊಂದನೆಯವನಾಗಿದ್ದ ಗುರುವು ೧೯-೬-೧೯೮೮ ರಿಂದ ೧೨ ನೆಯವನಾಗಿ ಅಶುಭ ಫಲಕೊಡುವವನಾಗಿದ್ದರೂ ಅವನ ಅಶುಭ ಫಲ ಮೃಗಶಿರಾ, ಆರಿದ್ರಾ ಮೊದಲೆರಡು ಚರಣದವರಿಗೆ ಮಾತ್ರವಿದ್ದು, ಆರಿದ್ರಾ ಕೊನೆಯ ಎರಡು ಹಾಗು ಪುನರ್ವಸು ನಕ್ಷತ್ರದ ಮಿಥುನ ರಾಶಿಯವರಿಗೆ ಗುರುವಿನ ಶುಭ ಫಲವೇ ದೊರೆಯುತ್ತದೆ. ಹೀಗಾಗಿ ಈ ರಾಶಿಯವರಿಗೆ ಎಲ್ಲ ದೃಷ್ಟಿಯಿಂದ ಯಾವ ಏರಿಳಿತ ಇರದೆ ಯಥಾಸ್ಥಿತಿ ಮುಂದುವರೆಯುತ್ತದೆ.

ಆರೋಗ್ಯ ದೃಷ್ಟಿಯಿಂದ ನೋಡಿದರೆ ವರುಷ ಮುಕ್ಕಾಲು ಅವಧಿಯ ವರೆಗೆ ಚನ್ನಾಗಿರುವುದಾದರೂ ಮೇ ೧೫ ರಿಂದ ಜುಲೈ ೧೫ ರ ವರೆಗೆ ಹಾಗು ಸಪ್ಟೆಂಬರ ೧೬ರಿಂದ ಅಕ್ಟೋಬರ ೧೬ ರ ವರೆಗಿನ ಮೂರು ತಿಂಗಳು ಮಾತ್ರ ಆರೋಗ್ಯ ಕಿಂಚತ್ ಕೆಡಬಹುದಾಗಿದೆ. ಈ ರಾಶಿಯವರ ಆರ್ಥಿಕ ಸ್ಥಿತಿ ಅತ್ಯಂತ ತೃಪ್ತಿಕರವಾಗಿದೆ. ಅದರಲ್ಲಿಯೂ ನವೆಂಬರ ೧೫ ರಿಂದ ಜನೇವರಿ ೧೪ರ ವರೆಗಿನ ಕಾಲ ಹಾಗು ಫೆಬ್ರುವರಿ ೧೨ ರಿಂದ ಜೂನ ೧೫ ರ ವರೆಗಿನ ಈ ಆರು ತಿಂಗಳ ಕಾಲದಲ್ಲಿ ನೀರೀಕ್ಷಿಸಿದ ಮೂಲದಿಂದ ಹಣ ಬರುವುದಲ್ಲದೇ ದತ್ತಕ, ವಾರಸಾ, ಬಕ್ಷೀಸ ಲಾಟರಿ, ಕಮಿಶನ, ಮೊದಲಾದ ಮೂಲದಿಂದಲೂ ಆಕಸ್ಮಿಕ ಧನ ಪ್ರಾಪ್ತಿಯಾಗಿ ಹಿಂದಿನ ಸಾಲವೆಲ್ಲ ತೀರಿಸಿ ಸ್ಥಾವರ ಆಸ್ತಿ ಸಂಪಾದಿಸಬಹುದಾಗಿದೆ. ಅಲ್ಲದೇ ವಾಹನ ಮನೆಕೊಳ್ಳಬಹುದಾಗಿದೆ. ತೀರ್ಥಕ್ಷೇತ್ರ ಸಂದರ್ಶನ, ಪರದೇಶ ಪರ್ಯಟನಗಳಂಥ ಶುಭ ಘಟನೆಗಳೂ ಜರುಗಬಹುದಾಗಿದೆ. ಕೋರ್ಟು ಕಚೇರಿ ಮೊದಲಾದ ಯಾವುದೇ ಬಗೆಯ ವ್ಯಾಜ್ಯ ದಾವೆ ಜಯ ಖಂಡಿತ.

ಈ ರಾಶಿಯ ನೌಕರ ವರ್ಗದವರಿಗೆ ಶುಭದಾಯಕ ವರುಷವಾಗಿದೆ. ಅದರಲ್ಲಿಯೂ ಅಕ್ಟೋಬರ ೨೩ ರಿಂದ ಜನೇವರಿ ೧೪ ರ ವರೆಗೆ ಹಾಗು ಫೆಬ್ರುವರಿ ೧೨ ರಿಂದ ಜೂನ ೧೬ ರ ವರೆಗಿನ ಕಾಲ ಬಹಳ ಶುಭದಾಯಕವಿದ್ದು ಈ ಕಾಲದಲ್ಲಿ ನೌಕರಿಯಲ್ಲಿ ಬಡತಿ, ಅನುಕೂಲ ಜಾಗೆಗೆ ಬದಲಿ, ನಿರುದ್ಯೋಗಿಗಳಿಗೆ ಉದ್ಯೋಗ ಲಭಿಸುವಿಕೆ, ಹಂಗಾಮಿ ನೌಕರರಿಗೆ ಉದ್ಯೋಗದಲ್ಲಿ ಸ್ಥಿರತೆ ಮೊದಲಾದ ಶುಭ ಘಟನೆಗಳು ಜರುಗುವವು. ಈ ರಾಶಿಯ ಬಾಹ್ಯ ಹಾಗು ತಾಂತ್ರಿಕ ಕೆಲಸಗಾರರಿಗೂ, ಗಿರಣಿ ಕಾರಖಾನೆಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರಿಗೂ ಶನಿ ರಾಹುಗಳು ಅನುಕೂಲವಿರುವುದರಿಂದ ಅವರ ಅನೇಕ ಬೇಡಿಕೆಗಳು ಸಂವತ್ಸರಾಂತ್ಯದ ವರೆಗೆ ಈಡೇರಬಹುದಾಗಿದೆ. ಈ ರಾಶಿಯ ಕೃಷಿಕ ವರ್ಗದವರಿಗೆ ಶನಿ ರಾಹುಗಳು ಶುಭರಿರುವುದರಿಂದ ಪ್ರೋತ್ಸಾಹದಾಯಕ ವರುಷವಾಗಿದ್ದು ನೀರೀಕ್ಷೆಗಿಂತ ಅಧಿಕ ಫಸಲು ಬಂದು ಹೊಸದಾಗಿ ದನಕರುಗಳನ್ನು ಟ್ರ್ಯಾಕ್ಟರ್ ಪಂಪಸೆಟ್ಟು ಮೊದಲಾದ ಕೃಷಿ ಉಪಕರಣ ಕೊಳ್ಳುವ ಶಕ್ತಿ ಬರುತ್ತದೆ.

ಈ ರಾಶಿಯ ಸಾಹಿತಿ, ಲೇಖಕ, ಕಲಾವಿದ, ಶಿಕ್ಷಕ, ಅಧ್ಯಾಪಕ, ಪತ್ರಿಕೋದ್ಯಮಿ, ಡಾಕ್ಟರ, ವಕೀಲ, ಚಾರ್ಟರ್ಡ ಅಕೌಂಟಂಟ, ನ್ಯಾಯಾಧೀಶ ಮೊದಲಾದ ಬುದ್ಧಿಜೀವಿಗಳಿಗೆಲ್ಲ ಮಿಶ್ರ ಫಲದಾಯಕ ವರುಷವಿದು. ಆದರೆ ಅಕ್ಟೋಬರ ೨೩ ರಿಂದ ಜೂನ ೧೯ ರ ವರೆಗಿನ ಕಾಲ ಪ್ರೋತ್ಸಾಹದಾಯಕವಿದ್ದು, ಈ ಕಾಲದಲ್ಲಿ ಉದ್ಯೋಗದಲ್ಲಿ ಪ್ರಗತಿ, ಸ್ಥಿರತೆ, ಮನ್ನಣೆ ದೊರೆಯುವುದಲ್ಲದೇ ಸರಕಾರದಿಂದಲೂ ಸಂಘ



ಸಂಸ್ಥೆಗಳಿಂದಲೂ ಪ್ರಶಸ್ತಿ, ಪದಕ, ಬಹುಮಾನಾದಿಗಳು ಗೌರವ ಧನ ದೊರೆಯುವುದಲ್ಲದೇ ವಾಹನ ಸೌಖ್ಯ, ಪರದೇಶ ಪರ್ಯಟನಗಳಂಥ ಶುಭ ಘಟನೆಗಳು ಜರುಗುವವು. ಆದರೆ ಜೂನ ೧೯ ರಿಂದ ವರುಷಾಂತ್ಯದ ವರೆಗಿನ ಐದು ತಿಂಗಳು ತಾಪದಾಯಕವಿದ್ದು, ಮಿತ್ರರೇ ಶತ್ರುಗಳಾಗುವುದರಿಂದ, ಮಿಥ್ಯಾಪವಾದವನ್ನು ಎದುರಿಸಬೇಕಾಗುತ್ತದೆ. ಅಲ್ಲದೇ ಉದ್ಯೋಗದಲ್ಲಿ ಚಟುವಟಿಕೆ ಕುಂಠಿತವಾಗುತ್ತದೆ. ಇದರಂತೆ ಈ ರಾಶಿಯ ಸ್ವತಂತ್ರ ವ್ಯಾಪಾರ ಉದ್ಯೋಗಸ್ಥರಿಗೂ, ಕಮಿಶನ ಏಜಂಟರಿಗೂ ಹಂಚಿಕೆದಾರರಿಗೆ, ಗಿರಣಿ ಕಾರಖಾನೆ ಟಾಕೀಜ, ಚಾಳ ಹೋಟೆಲಗಳಂಥ ಮಾಲಕ ವರ್ಗದವರಿಗೆಲ್ಲ ಮಿಶ್ರ ಫಲದಾಯಕ ವರುಷವಾಗಿದೆ. ಪೂರ್ವಾರ್ಧವು ಪ್ರೋತ್ಸಾದಾಯಕವಾಗಿದ್ದು, ಉದ್ಯೋಗದಲ್ಲಿ ಪ್ರಗತಿಯಾಗುವುದಲ್ಲದೆ, ಹೊಸದಾಗಿ ಜಾಗೆ, ಉದ್ಯೋಗದ ಉಪಕರಣಗಳನ್ನು, ಮಶಿನರಿಗಳನ್ನು ಕೊಳ್ಳುವ ಶಕ್ತಿ ಬರುತ್ತದೆ. ಆದರೆ ಉತ್ತರಾರ್ಧವು ಪ್ರತಿಕೂಲವಿದ್ದು, ನೌಕರರ ಸಮಸ್ಯೆಗಳಿಂದಲೂ ಸರಕಾರದ ನಿರ್ಬಂಧಗಳಿಂದಲೂ, ಮಶಿನರಿಗಳ ತೊಂದರೆಗಳಿಂದಲೂ ಉದ್ಯೋಗ ಕುಂಠಿತವಾಗುತ್ತದೆ.

ಈ ರಾಶಿಯ ವಧೂವರರಿಗೆ ಮಿಶ್ರ ಫಲದಾಯಕ ವರುಷವಾಗಿದೆ, ಪೂರ್ವಾರ್ಧವು ಪ್ರೋತ್ಸಾಹದಾಯಕವಾಗಿದ್ದು ನಿರ್ವಿಘ್ನವಾಗಿ ವಿವಾಹ ಜರುಗಿ ಗೃಹಸ್ಥಾಶ್ರಮಕ್ಕೆ ಪಾದಾರ್ಪಣ ಮಾಡುವರು. ಆದರೆ ಉತ್ತರಾರ್ಧವು ಪ್ರತಿಕೂಲವಿರುವುದರಿಂದ ಉತ್ತರಾರ್ಧದಲ್ಲಿ ವಿವಾಹ ಗೊತ್ತು ಮಾಡಿದರೆ ಗೊತ್ತು ಮಾಡಿದ ಮದುವೆ ಮುಂದೂಡಬಹುದಾಗಿದೆ. ಇದರಂತೆ ಈ ರಾಶಿಯ ವಿವಾಹಿತ ಸ್ತ್ರೀ ಪುರುಷರಿಗೂ ಕೂಡಾ ಮಿಶ್ರಫಲದಾಯಕ ವರುಷವಾಗಿದ್ದು, ಪೂರ್ವಾರ್ಧವು ಪ್ರಗತಿದಾಯಕವಿದ್ದು, ಬೆಲೆಯುಳ್ಳ ವಸ್ತು, ಒಡವೆಗಳ ಖರೀದಿ, ವಾಹನ ಮಶಿನರಿಗಳ ಖರೀದಿ, ತೀರ್ಥಕ್ಷೇತ್ರ ಸಂದರ್ಶನ, ಮನೆಯಲ್ಲಿ ಮಂಗಲ ಕಾರ್ಯ ಜರುಗುವಿಕೆ, ಮೊದಲಾದ ಶುಭ ಘಟನೆಗಳು ಜರಗುವವು. ಆದರೆ ಜೂನ ೧೯ ರಿಂದ ಬರುವ ಹನ್ನೆರಡನೇ ಅಶುಭ ಗುರುವಿನಿಂದಾಗಿ ಮನೆಯಲ್ಲಿಯ ನಿತ್ಯದ ಗೃಹಕಲಹದಿಂದಲೂ ಮಿಥ್ಯಾಪವಾದದಿಂದಲೂ ಚಾಡಿಯ ಪ್ರಭಾವದಿಂದಲೂ ಮನೆಯಲ್ಲಿಯ ವಾತಾವರಣ ಕಲುಷಿತಗೊಳ್ಳುತ್ತದೆ. ಇದರಂತೆ ಈ ರಾಶಿಯ ಗರ್ಭಿಣಿಯರಿಗೂ ಕೂಡಾ ಮಿಶ್ರ ಫಲದಾಯಕ ವರುಷವಾಗಿದೆ. ಅಕ್ಟೋಬರ ೨೩ ರಿಂದ ಮೇ ೧೪ ರ ವರೆಗೆ ಹೆರಿಗೆ ಆದರೆ ಸುಖ ಪ್ರಸವವೂ ಗಂಡು ಸಂತಾನದ ಯೋಗವೂ ಇದ್ದರೆ, ಮೇ ೧೫ ರಿಂದ ವರುಷಾಂತ್ಯದ ವರೆಗಿನ ಕಾಲದಲ್ಲಿ ಹೆರಿಗೆ ಆದರೆ ಕಷ್ಟ ಪ್ರಸವವಾಗುತ್ತದೆ.


ಈ ರಾಶಿಯ ರಾಜಕೀಯ, ಸಾಮಾಜಿಕ ಕಾರ್ಯಕರ್ತರಿಗೆಲ್ಲ ಪ್ರಾರಂಭದ ಏಳು ತಿಂಗಳು ಶುಭವಿದ್ದರೆ, ಕಡೆಯ ಐದು ತಿಂಗಳು ತಾಪದಾಯಕವಿರುತ್ತವೆ. ಮೊದಲಿನ ಏಳು ತಿಂಗಳಲ್ಲಿ ಪ್ರತ್ಯಕ್ಷ ರಾಜಕೀಯದಲ್ಲಿ ಪ್ರವೇಶಿಸಿ ಸ್ಥಾನಮಾನ, ಅನೇಕ ಸಂಘ ಸಂಸ್ಥೆಗಳ ಪದಾಧಿಕಾರಿಗಳಾಗಿ ಗೌರವ ಸ್ಥಾನಮಾನ ಅಧಿಕಾರ ಪಡೆಯುವರಲ್ಲದೆ ಜಿಲ್ಲಾ, ರಾಜ್ಯ ರಾಷ್ಟ್ರಮಟ್ಟದ ಧುರೀಣರಾಗುವರು. ಇದೇ ಸಮಯದಲ್ಲಿ ಚುನಾವಣೆ ಜರುಗಿದಲ್ಲಿ ಅತ್ಯಧಿಕ ಮತದಿಂದ ಆರಿಸಿ ಬರಬಹುದಾಗಿದೆ. ಆದರೆ ಕೊನೆಯ ಐದು ತಿಂಗಳುಗಳು ತಾಪದಾಯಕವಾಗಿದ್ದು, ಮಿತ್ರರೇ ಶತ್ರುಗಳಾಗುವದರಿಂದ, ಸ್ಥಾನಮಾನ ಅಧಿಕಾರಕ್ಕೆ ಚ್ಯುತಿ ಬರುತ್ತದೆ. ಈ ರಾಶಿಯ ವಿದ್ಯಾರ್ಥಿಗಳಿಗೂ ಕೂಡ ಮಿಶ್ರಫಲದಾಯಕ ವರುಷವಿದೆ. ಪೂರ್ವಾರ್ಧವು ಪ್ರೋತ್ಸಾಹದಾಯಕವಿದ್ದು, ಶಿಕ್ಷಣದಲ್ಲಿ ಪ್ರಗತಿ ಸಾಧಿಸುವರು, ಪೂರ್ವಾರ್ಧದಲ್ಲಿ ಪರೀಕ್ಷೆಗೆ ಕಟ್ಟಿದ ವಿದ್ಯಾರ್ಥಿಗಳು ಶ್ರೇಣಿ ದರ್ಜೆಯಲ್ಲಿ ತೇರ್ಗಡೆಯಾಗುವರಲ್ಲದೇ ವಿದ್ಯಾರ್ಥಿ ವೇತನವನ್ನು, ಶಿಷ್ಯ ವೃತ್ತಿಯನ್ನು ಪಡೆಯುವರು. ಆದರೆ ಉತ್ತರಾರ್ಧದಲ್ಲಿ ಪರೀಕ್ಷೆಗೆ ಕಟ್ಟಿದ ವಿದ್ಯಾರ್ಥಿಗಳು ಸಾದಾ ತರಗತಿಯಲ್ಲಿ ಹೆಣಗಾಡಬೇಕಾಗುತ್ತದೆ. ಒಟ್ಟಿನಲ್ಲಿ ಈ ರಾಶಿಯ ಎಲ್ಲ ವರ್ಗದವರಿಗೂ ಪೂರ್ವಾರ್ಧವು ಪ್ರೋತ್ಸಾಹದಾಯಕವಿದ್ದರೆ, ಉತ್ತರಾರ್ಧವು ನಿರುತ್ಸಾಹದಾಯಕವಿದೆ. ಮೃಗಶಿರಾ ಹಾಗೂ ಆರಿದ್ರಾದ ಮೊದಲೆರಡು ಚರಣದವರಿಗೆ ತೊಂದರೆ ಇದ್ದರೆ ಆರಿದ್ರಾ ಕೊನೆಯ ಎರಡು ಚರಣದವರಿಗೂ, ಪುನರ್ವಸು ನಕ್ಷತ್ರದವರಿಗೂ ತೊಂದರೆಗಳಿಲ್ಲ.



ಕರ್ಕ

ಈ ರಾಶಿಯವರಿಗೆ ಈ ವರುಷವೆಂದರೆ ಅವರ ಜೀವನದಲ್ಲಿಯೇ ಸುವರ್ಣಕಾಲವಿದ್ದು, ಜೀವನದ ಎಲ್ಲ ದೃಷ್ಟಿಯಿಂದಲೂ ಅತ್ಯಂತ ಯಶೋದಾಯಕವೂ ಸುಖಪ್ರದವೂ ಆಗಿದೆ.

ಈ ರಾಶಿಯುವರ ಈ ವರುಷ ಗ್ರಹಗತಿಯನ್ನು ಪರಿಶೀಲಿಸಲಾಗಿ, ಪ್ರಾರಂಭದ ಮೂರು ತಿಂಗಳು ಹಾಗೂ ಕೊನೆಯ ಐದು ತಿಂಗಳು ಅತ್ಯಂತ ಶುಭ ಫಲದಾಯಕ ೯ ನೇ ಹಾಗು ೧೧ ನೇ ಗುರುವಿನ ಕೃಪಾದೃಷ್ಟಿಯನ್ನು ಹಾಗು ೧೭-೧೨-೧೯೮೭ ರಿಂದ ಆರನೇ ಶುಭ ಫಲದಾಯಕ ಶನಿಯ ಕೃಪಾಕಟಾಕ್ಷಕ್ಕೂ ಒಳಗಾಗುವಿರಿ. ಆದರೆ ಸಂವತ್ಸರದ ಅಂತ್ಯದಲ್ಲಿ ಬರುವ ಅಷ್ಟಮ



ರಾಹುವಿನ ಅನಿಷ್ಟ ಫಲ ಮಾತ್ರ ವರುಷಾಂತ್ಯದ ವರೆಗೂ ಇರುತ್ತದೆ. ಆದರೆ ಎರಡು ಪ್ರಬಲ ಗ್ರಹಗಳಾದ ಗುರು ಶನಿಯ ಅನುಗ್ರಹವನ್ನು ಪಡೆದ ನೀವು ಈ ವರುಷ ಸುದೈವಿಗಳಾಗಿದ್ದು ಇವರೆಲ್ಲ ಬಹುದಿನಗಳ ಆಶೆ ಆಕಾಂಕ್ಷೆಗಳನ್ನು ಈಡೇರಿಸುವುದರಲ್ಲಿ ಸಂದೇಹವಿಲ್ಲ.

ನಿಮ್ಮ ಆರೋಗ್ಯ ವರುಷದ ಮುಕ್ಕಾಲು ಅವಧಿಯ ವರೆಗೆ ಚೆನ್ನಾಗಿರುವುದಾದರೂ ಅಕ್ಟೋಬರ ೨೩ ರಿಂದ ನವೆಂಬರ ೨೩ ರ ವರೆಗೆ ಹಾಗು ಫೆಬ್ರುವರಿ ೧೨ ರಿಂದ ಮಾರ್ಚ ೧೫ ರ ವರೆಗೆ ಮತ್ತು ಜೂನ ೧೫ ರಿಂದ ಜುಲೈ ೧೫ ರ ವರೆಗಿನ ಮೂರು ತಿಂಗಳಲ್ಲಿ ಮಾತ್ರ ತುಸು ಕಿರುಕಳ ಪೀಡೆ ಉಂಟಾಗಬಹುದಾಗಿದೆ. ಆರ್ಥಿಕ ದೃಷ್ಟಿಯಿಂದ ನೋಡಿದರೆ ನಿರೀಕ್ಷಿಸಿದ ಮೂಲ ದಿಂದಲೂ ಬರಬೇಕಾಗಿದ್ದ ಮೂಲದಿಂದಲೂ ಈ ವರುಷ ಹಣ ಬರುವುದಲ್ಲದೇ ನವೆಂಬರ ೧೫ ರಿಂದ ಫೆಬ್ರುವರಿ ೧೨ ರ ವರೆಗೆ ಏಪ್ರಿಲ್ ೧೨ ರಿಂದ ಜೂನ ೧೫ ರ ವರೆಗೆ, ಅಗಷ್ಟ ೧೫ ರಿಂದ ನವೆಂಬರ್ ೯ ರ ವರೆಗಿನ ಕಾಲದಲ್ಲಿ, ದತ್ತಕ ವಾರಸಾ, ಭಕ್ಷೀಸ, ಬಹುಮಾನ, ಕಮಿಶನ್, ಲಾಟರಿ, ಮೊದಲಾದ ಮೂಲದಿಂದ ಆಕಸ್ಮಿಕ ಧನ ಪ್ರಾಪ್ತಿ ಆಗುವುದರಿಂದ ಆರ್ಥಿಕ ಸ್ಥಿತಿ ತೃಪ್ತಿಕರವಿರುತ್ತದೆ. ಅಲ್ಲದೇ ಕಳೆದ ಅನೇಕ ವರುಷಗಳಿಂದಿದ್ದ ಸಾಲಗಳನ್ನು ತೀರಿಸುವ ಶಕ್ತಿ ಬರುತ್ತದಲ್ಲದೆ, ವಾದ ಸ್ಪರ್ಧೆ, ಕೋರ್ಟು ಕಚೇರಿ ಮೊದಲಾದ ಯಾವುದೇ ಪ್ರಕಾರದ ವ್ಯಾಜ್ಯ ಗಳಲ್ಲಿಯೂ ಎಲ್ಲ ಪ್ರಕಾರದ ದಾವೆಗಳಲ್ಲಿಯೂ ಜಯಮಾಲೆ ನಿಮ್ಮ ಕೊರಳಿಗೆ ಕಟ್ಟಿಟ್ಟದ್ದು.

ಈ ರಾಶಿಯ ನೌಕರ ವರ್ಗದವರಿಗಂತೂ ಅಪೂರ್ವ ವರುಷವಾಗಿದೆ. ಅದರಲ್ಲಿಯೂ ನವೆಂಬರ ೧೫ ರಿಂದ ಫೆಬ್ರುವರಿ ೧೨ ರ ವರೆಗೆ, ಏಪ್ರಿಲ ೧೨ ರಿಂದ ಜೂನ ೧೫ ರ ವರೆಗೆ ಮತ್ತು ಅಗಷ್ಟ ೧೫ ರಿಂದ ಅಕ್ಟೋಬರ ೧೮ ರ ವರೆಗಿನ ಈ ಏಳು ತಿಂಗಳ ಕಾಲವಂತೂ ಬಹಳೇ ಸ್ಮರಣೀಯ ಕಾಲವಿದ್ದು. ಈ ಕಾಲದಲ್ಲಿ ನೌಕರಿ ಯಲ್ಲಿ ಬಡತಿ. ಅನುಕೂಲ ಜಾಗೆಗೆ ಬದಲಿ. ಎರಡೆರಡು ಹುದ್ದೆಗಳ ಕಾರ್ಯ ನಿರ್ವಹಿಸುವ ಸುಯೋಗವೂ ಉಂಟು. ಅಲ್ಲದೇ ಮೇಲೆ ಬರೆದ ಅವಧಿಯಲ್ಲಿ ನಿರುದ್ಯೋಗಿಗಳಿಗೆ ಉದ್ಯೋಗ ಲಭಿಸುತ್ತದೆ. ಹಂಗಾಮಿ ನೌಕರರಿಗೆ ಉದ್ಯೋಗ ದಲ್ಲಿ ಸ್ಥಿರತೆ ಬರುತ್ತದೆ. ಈ ರಾಶಿಯ ಬಾಷ್ಪ ಹಾಗೂ ತಾಂತ್ರಿಕ ಕೆಲಸಗಾರರಿಗೂ, ಗಿರಣಿ ಕಾರಖಾನೆಗಳ ಕಾರ್ಮಿಕರಿಗೂ ಪ್ರೋತ್ಸಾಹ ದಾಯಕ ವರುಷವಾಗಿದ್ದು ಬಹಳ ದಿನಗಳಿಂದ ನೆನೆಗುದಿಗೆ ಬಿದ್ದಿದ್ದ ಬೇಡಿಕೆಗಳೆಲ್ಲವೂ ಈಡೇರು ವುದರಲ್ಲಿ ಸಂದೇಹವಿಲ್ಲ. ಈ ರಾಶಿಯ ಕೃಷಿ ವರ್ಗದವರಿಗೆ ಅತ್ಯಂತ ಶುಭ ಫಲದಾಯಕ ಆರನೇ ಶನಿಯಿಂದಾಗಿ ಪ್ರೋತ್ಸಾಹದಾಯಕ ವರುಷವಾಗಿದೆ. ನಿರೀಕ್ಷೆಗಿಂತಲೂ ಅಧಿಕ ಫಸಲು ಬರುವುದರಿಂದ, ಹಿಂದಿನ ಸಾಲ ಸೂಲಗಳೆಲ್ಲ ತೀರಿಸುವ ಶಕ್ತಿ ಬರುವುದಲ್ಲದೇ ಹೊಸದಾಗಿ



"ಈ ಪೇಪರ್‌ನ್ನು ಜೋಪಾನವಾಗಿ ಇಟ್ಟಿರ-ಬೇಕು. ಇನ್ನು ಹತ್ತು ವರ್ಷಗಳ ನಂತರ '೧೯೮೭ ರಲ್ಲಿ ದರಗಳು ಎಷ್ಟೊಂದು ಅಗ್ಗ-ವಾಗಿದ್ದವು!' ಅಂತ ಹೊಟ್ಟೆ ಉರಿ ಪಡ-ಬಹುದು—!"

ಜಾಗೆ. ಮನೆ, ತೋಟ, ಗದ್ದೆ, ಕೊಳ್ಳುವ ಹಾಗೂ ಕೃಷಿಗೆ ಬೇಕಾಗಬಹುದಾದ ಉಪಕರಣ ಗಳನ್ನು' ದನಕರುಗಳನ್ನು ಟ್ರಕ್, ಟ್ರ್ಯಾಕ್ಟರ, ಪಂಪಸೆಟ್ಟು ಮೊದಲಾದವುಗಳನ್ನು ಕೊಳ್ಳುವ ಇಲ್ಲವೆ ನವೀಕರಿಸುವ ಸಾಮರ್ಥ್ಯವು ಈ ವರುಷ ದಲ್ಲಿ ಉಂಟಾಗುತ್ತದೆ.

ಈ ರಾಶಿಯ ಲೇಖಕ, ಸಾಹಿತಿ, ಕಲಾವಿದ, ಶಿಕ್ಷಕ, ಅಧ್ಯಾಪಕ, ಪತ್ರಿಕೋದ್ಯಮಿ, ಚಾರ್ಟರ್ಡ ಅಕೌಂಟಂಟ, ಡಾಕ್ಟರ, ವಕೀಲ, ನ್ಯಾಯಾಧೀಶ, ಮೊದಲಾದ ಬುದ್ಧಿ ಜೀವಿಗಳಿಗೆಲ್ಲ, ಪ್ರಾರಂಭದ ಮೂರು ತಿಂಗಳ ವರೆಗೆ ಅತ್ಯಂತ ಶುಭ ಫಲ ದಾಯಕ ಒಂಭತ್ತನೇ ಗುರುವೂ, ಕೊನೆಯ ಐದು ತಿಂಗಳು ಅತ್ಯಂತ ಶುಭ ಫಲದಾಯಕ ಹನ್ನೊಂದನೆಯ ಗುರುವಿನಿಂದಾಗಿ ಅವರ ಜೀವನದಲ್ಲಿಯೇ ಸ್ಮರಣೀಯ ವರುಷ ವಾಗಿದ್ದು, ಉದ್ಯೋಗದಲ್ಲಿ ಪ್ರಗತಿ, ಇರುವು ದಲ್ಲದೆ, ಸರಕಾರ, ಹಾಗೂ ಸಂಘ ಸಂಸ್ಥೆಗಳಿಂದ ಪ್ರಶಸ್ತಿ ಪದಕ, ಬಕ್ಷೀಸ, ಬಹುಮಾನ ನಾದಿ ದೊರೆಯುವುದಲ್ಲದೇ ಗೌರವ ಧನವನ್ನು, ಮಾಸಾಶನವನ್ನು ಪಡೆಯುವರು. ಆಸ್ತಿ ವಾಹನ ಮನೆ ಸಂಪಾದಿಸುವರಲ್ಲದೇ, ಪರದೇಶ ಪರ್ಯಟನದ ಯೋಗವೂ ಉಂಟು. ಈ ರಾಶಿಯ ಸ್ವತಂತ್ರ ವ್ಯಾಪಾರ ಉದ್ಯೋಗ ಸ್ಥರಿಗೂ, ಹಂಚಿಕೆದಾರರಿಗೂ, ಕಮೀಶನ ಏಜೆಂಟರಿಗೂ, ಗಿರಣಿ, ಕಾರಖಾನೆ, ಹೋಟೆಲ, ಚಾಳ, ಟಾಕೀಜಗಳ ಮಾಲಕ ವರ್ಗದವರಿಗೆಲ್ಲ

ಗುರು ಶನಿಯರು ಶುಭರಿರುವು ವರುಷ ಉಂಟಾಗಿದ್ದ ನೌಕರರ ಸಮಸ್ಯೆಗಳು, ಸರಕಾರದ ನಿರ್ಬಂಧನೆಗಳು ದೂರಾಗಿ ಉದ್ಯೋಗ ದಲ್ಲಿ ಇಮ್ಮಡಿ ಪ್ರಗತಿ ಹೊಸ ಉದ್ಯೋಗ ಶುಭ ಯೋಗ ಉಂಟು.

ಕಳೆದ ಅನೇಕ ವರುಷದಿಂದ ಗೃಹಸ್ಥಾಶ್ರಮ ಕ್ಕಾಗಿ ಹಾತೊರೆಯುತ್ತಿರುವ ಈ ರಾಶಿಯ ವಧೂವರರಿಗೆ ಈ ವರುಷ ಅವರ ಮನೋರಥ ಈಡೇರುವುದರಲ್ಲಿ ಸಂದೇಹವಿಲ್ಲ. ಅರ್ಥಾತ್ ಈ ವರುಷ ಗೃಹಸ್ಥಾಶ್ರಮಕ್ಕಾಗಿ ಪಾದಾರ್ಪಣ ಮಾಡುವರು. ಈ ರಾಶಿಯ ವಿವಾಹಿತ ಪುರುಷ ರಿಗೂ, ಗೃಹಿಣಿಯರಿಗೂ ಶುಭ ಫಲದಾಯಕ ಗುರುವಿನಿಂದಾಗಿ ಪ್ರೋತ್ಸಾಹದಾಯಕ ವರುಷ ವಾಗಿದೆ. ತಪ್ಪು ತಿಳಿವಳಿಕೆಯಿಂದಲೂ ಚಾಡಿಯ ಪ್ರಭಾವದಿಂದಲೂ ಒಡೆದು ಹೋಗಿದ್ದ ಏಕತ್ರ ಕುಟುಂಬ ಮತ್ತೆ ಒಂದಾಗುವುದಲ್ಲದೇ ಆಪ್ತೇಷ್ಟ ರಲ್ಲಿ ಉಂಟಾಗಿದ್ದ ಭಿನ್ನಾಭಿಪ್ರಾಯ ದೂರಾಗಿ ಮತ್ತೆ ಪ್ರೀತಿ ವಿಶ್ವಾಸ ಕುದುರುತ್ತದೆ. ಈ ವರುಷ ದಲ್ಲಿ ಬೆಲೆಯುಳ್ಳ ವಸ್ತು ಒಡವೆಗಳ ಖರೀದಿ, ಜಾಗೆ, ಮನೆ, ವಾಹನಗಳ, ಸಂಪಾದನೆ, ತೀರ್ಥ ಯಾತ್ರಾ ಸಂದರ್ಶನ, ಪರದೇಶ ಪರ್ಯಟನ ಕೈಕೊಳ್ಳ ಬಹುದಾಗಿದೆಯಲ್ಲದೆ, ಮನೆಯಲ್ಲಿ ಮಂಗಲ ಕಾರ್ಯ ಜರುಗುವಿಕೆ ಮೊದಲಾದ ಸ್ಮರಣೀಯ ಘಟನೆಗಳು ಈ ವರುಷ ಜರುಗ ಬಹುದಾಗಿದೆ. ಈ ರಾಶಿಯ ಗರ್ಭಿಣಿಯರಿಗೂ ಕೂಡ ಈ ವರುಷ ಶುಭವಿದ್ದು ಸುಖ ಪ್ರಸವ ಹಾಗೂ ಗಂಡು ಸಂತಾನ ಪ್ರಾಪ್ತಿಯ ಯೋಗ.

ಗುರು ಶನಿಗಳಂಥ ಎರಡು ಪ್ರಬಲ ಗ್ರಹಗಳ ಬೆಂಬಲ ಪಡೆದ ಈ ರಾಶಿಯ ರಾಜಕೀಯ, ಸಾಮಾಜಿಕ ಕಾರ್ಯಕರ್ತರಿಗೆಲ್ಲ ಅಪೂರ್ವ ವರುಷವಾಗಿದೆ. ಪ್ರತ್ಯಕ್ಷ ರಾಜಕೀಯದಲ್ಲಿ ಭಾಗವಹಿಸಿ ಅನೇಕ ಸಂಘ ಸಂಸ್ಥೆಗಳ ಪದಾಧಿ ಕಾರಿಗಳಾಗಿಯೂ, ಗೌರವ ಸ್ಥಾನಮಾನ ಅಧಿಕಾರ ಪಡೆಯುವರಲ್ಲದೇ ಜಿಲ್ಲಾ, ರಾಜ್ಯ, ರಾಷ್ಟ್ರಮಟ್ಟದ ಧುರೀಣರಾಗುವುದರಲ್ಲಿ ಸಂದೇಹವಿಲ್ಲ. ಈ ವರುಷದಲ್ಲಿ ಜರುಗಬಹು ದಾದ ಯಾವುದೇ ಚುನಾವಣೆಯಲ್ಲಿ ಸ್ಪರ್ಧಿಸಿದಲ್ಲಿ ಅವಿರೋಧ ಆಯ್ಕೆ ಇಲ್ಲವೇ ಅತ್ಯಧಿಕ ಬಹು ಮತದಿಂದ ಆಯ್ಕೆ ಆಗಬಹುದಾಗಿದೆ. ಈ ರಾಶಿಯ ವಿದ್ಯಾರ್ಥಿಗಳಿಗೆ ಅತ್ಯಂತ ಶುಭ ಫಲ ದಾಯಕ ಗುರುವಿನಿಂದಾಗಿ ಪ್ರೋತ್ಸಾಹಯುಕವಾ ವರುಷವಾಗಿದೆ. ಕುಂಠಿತವಾಗಿದ್ದ ಶಿಕ್ಷಣ ಮತ್ತೆ ಮುಂದುವರೆಯುವುದಲ್ಲದೇ ಈ ವರುಷದಲ್ಲಿ ಜರುಗಬಹುದಾದ ಯಾವುದೇ ಪ್ರಕಾರದ ಪರೀಕ್ಷೆ ಕಟ್ಟಿದಲ್ಲಿ ಯಶಸ್ಸು ಖಂಡಿತ. ಅದರಲ್ಲಿಯೂ ನವೆಂಬರ ೧೫ ರಿಂದ ಫೆಬ್ರುವರಿ ೧೨ ರ ವರೆಗೆ ಹಾಗೂ ಜುಲೈ ೧೫ ರಿಂದ ಅಕ್ಟೋಬರ ೧೮ ರ ವರೆಗೆ ಜರುಗುಬಹು ದಾದ ಪರೀಕ್ಷೆಗೆ ಕಟ್ಟಿದ ವಿದ್ಯಾರ್ಥಿಗಳು ಶ್ರೇಣಿ, ದರ್ಜೆಯಲ್ಲಿ ತೇರ್ಗಡೆಯಾಗುವುದಲ್ಲದೇ, ವಿದ್ಯಾರ್ಥಿ ವೇತನವನ್ನು ಶಿಷ್ಯ ವೃತ್ತಿಯನ್ನು

ಪಡೆಯುವವರಲ್ಲದೇ ಹೆಚ್ಚಿನ ಶಿಕ್ಷಣಕ್ಕಾಗಿ ಇಲ್ಲವೆ ಸಂಶೋಧನೆಗಾಗಿ ಪರದೇಶ ಸಂಚಾರದ ಶುಭ ಯೋಗವೂ ಉಂಟು.

ಸಿಂಹ

ಈ ರಾಶಿಯ ಎಲ್ಲ ವರ್ಗದವರಿಗೂ ಎಲ್ಲ ದೃಷ್ಟಿಯಿಂದಲೂ ಅಶುಭ ಹಾಗೂ ತಾಪದಾಯಕ ವರುಷವಾಗಿದೆ.


ಈ ರಾಶಿಯವರ ಈ ವರುಷದ ಗ್ರಹಸ್ಥಿತಿಯನ್ನು ನೋಡಲಾಗಿ ವರುಷದ ಪ್ರಾರಂಭದ ಮೂರು ತಿಂಗಳು ಅಷ್ಟಮ ಗುರುವಿನ ಅನಿಷ್ಟತೆಯನ್ನು, ವರುಷದ ಕೊನೆಯ ನಾಲ್ಕು ತಿಂಗಳ ಕಾಲ ದಶಮ ಗುರುವಿನ ಅಶುಭ ಫಲವನ್ನು ಅನುಭವಿಸುವದರೊಂದಿಗೆ ಮುಂಬರುವ ಡಿಸೆಂಬರ ೧೭ ರಿಂದ ಪಂಚಮ ಶನಿಯ ಅನಿಷ್ಟತೆಯನ್ನು ಎದುರಿಸಬೇಕಾಗುತ್ತದೆ. ಆದರೆ ಕಳೆದ ವರುಷದಿಂದ ಅಶುಭ ಫಲವನ್ನು ಕೊಡುತ್ತಿದ್ದ ಅಷ್ಟಮ ರಾಹು ಮಾರ್ಚ ೬ ರಿಂದ ನಿರ್ಗಮಿಸಿದರೂ ಮುಂಬರುವ ಏಳನೇಯ ರಾಹು ಶುಭ ಫಲವನ್ನು ಕೊಡಲಾರ. ಹೀಗೆ ಅನೇಕ ಗ್ರಹಗಳ ಅವಕೃಪೆಗೆ ಪಾತ್ರರಾದ ನಿಮಗೆ ಈ ವರುಷವೆಂದರೆ ನಿಮ್ಮ ಜೀವನದ ಸತ್ವಪರೀಕ್ಷೆಯೇ ಆಗಿದೆ. ಧೈರ್ಯಶಾಲಿಗಳಾದ ನೀವು ಇಂಥ ಕಠಿಣ ಪರಿಸ್ಥಿತಿಯಿಂದ ಪಾರಾಗುವಿರಿ. ಆದರೆ ಮಾತಿನಿಂದ ಶತ್ರುಗಳನ್ನು ನಿರ್ಮಾಣ ಮಾಡಿಕೊಳ್ಳುವ ನಿಮ್ಮ ಸ್ವಭಾವದಲ್ಲಿ ಮಾರ್ಪಾಟು ಮಾಡಿಕೊಳ್ಳಿರಿ. ಅಲ್ಲದೆ ಎಲ್ಲ ಸಂಕಟಗಳಿಂದ ಪಾರು ಮಾಡಲು ನಿತ್ಯ ಆ ವಿಘ್ನೇಶ್ವರನನ್ನು ಪ್ರಾರ್ಥಿಸಿರಿ.

ಈ ರಾಶಿಯವರ ಆರೋಗ್ಯ ವರುಷವಿಡೀ ಚೆನ್ನಾಗಿರದು. ಒಂದಿಲ್ಲೊಂದು ಕಿರುಕುಳ ಪೀಡೆ, ಉಪದ್ರವ ಇದ್ದೇ ಇರುತ್ತದೆ. ಅದರಲ್ಲಿಯೂ ನವೆಂಬರ ೧೫ ರಿಂದ ಜನೇವರಿ ೧೪ ರ ವರೆಗೆ ಹಾಗೂ ಜುಲೈ ೧೫ ರಿಂದ ಅಕ್ಟೋಬರ ೧೮ ರ ವರೆಗಿನ ಈ ಐದು ತಿಂಗಳ ಕಾಲ ತೀರ ಪ್ರತಿಕೂಲವಿದ್ದು ಈ ಕಾಲದಲ್ಲಿ ರೋಗ ಉಲ್ಬಣವಾಗುವುದಲ್ಲದೇ ಶತ್ರುಪೀಡೆ, ಅಪಘಾತದ ಭಯವೂ ಉಂಟು. ಆದ್ದರಿಂದ ವಾಹನ ಚಾಲಕರು ಹಾಗು ವರ್ಕಶಾಪ ಮಶೀನ ಶಾಪಗಳಲ್ಲಿ ಕೆಲಸ ಮಾಡುವ ಮಶಿನರಿ ಕೆಲಸಗಾರರು, ಬಾಹ್ಯ ಹಾಗು ತಾಂತ್ರಿಕ ಕೆಲಸಗಾರರು ಈ ಕಾಲದಲ್ಲಿ ವಿಶೇಷ ಎಚ್ಚರಿಕೆ ವಹಿಸಬೇಕು. ಆರ್ಥಿಕ ದೃಷ್ಟಿಯಿಂದ ನೋಡಿದರೆ ತೀರ ತಾಪದಾಯಕ ವರುಷವಾಗಿದೆ. ಡಾಕ್ಟರ, ವಕೀಲರುಗಳ ಬಿಲ್ಲುಗಳಿಗಾಗಿಯೇ ಮುಕ್ಕಾಲು ಆದಾಯ ಖರ್ಚಾಗುತ್ತದೆ. ಆದಾಯ ಅಲ್ಪ, ವೆಚ್ಚ ವಿಪರೀತ. ಸಾಲಗಾರರ ಕಾಟ ಹೆಚ್ಚಾಗಿ ಹಳೇ ಸಾಲ ತೀರಿಸಲು ಹೊಸ ಸಾಲದ ಪರದಾಟದಲ್ಲಿಯೇ ವರುಷವಿಡೀ ಕಳೆಯಬೇಕಾಗುತ್ತದೆ. ಆದಾಗ್ಯೂ ೩-೨-೧೯೮೮ ರಿಂದ ೨೯-೬-೧೯೮೮ ರ ವರೆಗಿನ ಅಲ್ಪಾವಧಿಯ ಕಾಲ ಉಚ್ಚನೇ ಗುರುವಿನ ಶುಭ ಫಲದಿಂದಾಗಿ ನಿರೀಕ್ಷಿತ ಮೂಲದಿಂದ ದ್ರವ್ಯಾನುಕೂಲತೆಯಾಗುವುದಲ್ಲದೇ ಬರಬೇಕಾಗಿದ್ದ ಹಣವು ಈ ಅವಧಿಯಲ್ಲಿ ಬರುವುದರಿಂದ ಅವಮಾನದ ಪ್ರಸಂಗ ತಪ್ಪುವುದು. ಆದರೆ ನವೆಂಬರ ೧೫ ರಿಂದ ಜನೇವರಿ ೧೪ ರ ವರೆಗೆ ಹಾಗು ಜುಲೈ ೧೫ ರಿಂದ ಅಕ್ಟೋಬರ ೧೮ ರ ವರೆಗಿನ ಈ ಐದು ತಿಂಗಳ ಕಾಲ ನಿಮ್ಮ ಆರ್ಥಿಕ ಪರಿಸ್ಥಿತಿಯು ಪರಾಕಾಷ್ಠೆ ಮುಟ್ಟಿ ನಿಮ್ಮ ಸತ್ವ ಪರೀಕ್ಷೆಯಾಗುವುದಾದರೂ ಅದರಲ್ಲಿಯೂ ಜಯಗಳಿಸುವಿರಿ. ಕೋರ್ಟು ಕಚೇರಿ ಮೊದಲಾದ ಯಾವುದೇ ಪ್ರಕಾರದ ವ್ಯಾಜ್ಯಗಳಿಗೆ ಈ ವರುಷ ಕೈ ಹಾಕದಿರುವುದೇ ಹಿತಕರವು.

ಈ ರಾಶಿಯ ನೌಕರ ವರ್ಗದವರಿಗೆ ಪ್ರತಿಕೂಲ ವರುಷವಾಗಿದೆ. ಅನಪೇಕ್ಷಿತ ಸ್ಥಳಕ್ಕೆ ಬದಲಿ ಆಗುವುದರಿಂದ ಮೇಲಧಿಕಾರಿಗಳ ಉಪಟಳ ಇಲ್ಲವೆ ಹಿಂಬಡತಿ ಮೂಲಕ, ರಾಜ

ಅಶುಭಸ್ಯ ಕಾಲಹರಣಂ ಎಂಬಂತೆ ತಾಳ್ಮೆಯಿಂದ ಇದ್ದರೆ ಎಲ್ಲವೂ ಸರಿಯಾಗುತ್ತದೆ. ನಿರುದ್ಯೋಗಿಗಳಿಗೆ ಅಸಹನೀಯ ವರುಷವಾದರೂ ೩-೨-೧೯೮೮ ರಿಂದ ೧೬-೭-೧೯೮೮ ರ ಕಾಲದಲ್ಲಿ ತುಸು ಆಸರೆ ಸಿಗುತ್ತದೆ. ಹಂಗಾಮಿ ನೌಕರರು ಇದೂ ಒಂದು ವರುಷ ಅಸ್ಥಿರತೆಯಲ್ಲಿಯೇ ಕಳೆಯಬೇಕಾಗುತ್ತದೆ. ಈ ರಾಶಿಯ ಬಾಹ್ಯ ಹಾಗೂ ತಾಂತ್ರಿಕ ಕೆಲಸಗಾರರಿಗೆ, ಗಿರಣಿ ಕಾರಖಾನೆಗಳ ಕಾರ್ಮಿಕ ವರ್ಗದವರಿಗೆಲ್ಲ ಶನಿ ರಾಹುಗಳು ಅಶುಭರಿರುವುದರಿಂದ ನಿರುತ್ಸಾಹ ದಾಯಕ ವರುಷವಾಗಿದ್ದರೂ, ಕಳೆದ ವರುಷಕ್ಕಿಂತ ತುಸು ನೆಟ್ಟಗೆ. ಅಲ್ಲದೇ ಫೆಬ್ರುವರಿ ೨ ರಿಂದ ಜುಲೈ ೧೫ ರ ವರೆಗಿನ ಕಾಲದಲ್ಲಿ ಅವರ ಕೆಲ ಬೇಡಿಕೆಗಳು ಈಡೇರಬಹುದಾಗಿದೆ. ಎಲ್ಲ ಬೇಡಿಕೆಗಳಿಗೆ ಒತ್ತಾಯ ಮಾಡದೇ ಹೊಂದಾಣಿಕೆ ಮನೋವೃತ್ತಿಯಿಂದ ವರ್ತಿಸುವುದೇ ಹಿತಕರವು. ಈ ರಾಶಿಯ ಕೃಷಿ ವರ್ಗದವರಿಗೂ ಪ್ರತಿಕೂಲ ವರುಷ.

ಈ ರಾಶಿಯು ಲೇಖಕ, ಸಾಹಿತಿ, ಕಲಾವಿದ, ಶಿಕ್ಷಕ, ಅಧ್ಯಾಪಕ, ಪತ್ರಿಕೋದ್ಯಮಿ ಡಾಕ್ಟರ್, ವಕೀಲ, ಚಾರ್ಟರ್ಡ ಅಕೌಂಟಂಟ್, ನ್ಯಾಯಾಧೀಶ ಮೊದಲಾದ ಬುದ್ಧಿಜೀವಿಗಳಿಗೆಲ್ಲ ಮಿಶ್ರ ಫಲದಾಯಕ ವರುಷವಿದು. ವರುಷ ಪ್ರಾರಂಭದ ಮೂರು ತಿಂಗಳು ಹಾಗು ಕೊನೆಯ ನಾಲ್ಕು ತಿಂಗಳು ಪ್ರತಿಕೂಲವಾಗಿದ್ದು, ಉದ್ಯೋಗದಲ್ಲಿ ಚಟುವಟಿಕೆ ಇರುವುದಿಲ್ಲ, ಮಿತ್ರರೇ ಶತ್ರುಗಳಾವುದರಿಂದ ಮಿಥ್ಯಾಪವಾದವನ್ನು ಎದುರಿಸಬೇಕಾಗುತ್ತದೆ. ಆದರೆ ೩-೨-೧೯೮೮ ರಿಂದ ೧೯-೬-೧೯೮೮ ರ ವರೆಗಿನ ಈ ಕಾಲದಲ್ಲಿರುವ ಒಂಬತ್ತನೇ ಶುಭ ಫಲದಾಯಕ ಗುರುವಿನಿಂದಾಗಿ ಉದ್ಯೋಗದಲ್ಲಿ ಪ್ರಗತಿಯಾಗುವುದಲ್ಲದೆ ಸರಕಾರದಿಂದಲೂ,



ಧನ, ಮಾಸಾಶನ ಮೊದಲಾದ ಶುಭ ಘಟನೆಗಳು ಜರುಗಬಹುದಾಗಿದೆ.

ಈ ರಾಶಿಯ ಸ್ವತಂತ್ರ ವ್ಯಾಪಾರಸ್ಥರಿಗೂ, ಹಂಚಿಕೆದಾರರಿಗೂ, ಕಮಿಶನ್ ಏಜೆಂಟರಿಗೂ, ಗಿರಣಿ ಕಾರಖಾನೆ, ಚಾಳ, ಟಾಕೀಜ, ಹೋಟೆಲಗಳ ಮಾಲಕ ವರ್ಗದವರಿಗೆಲ್ಲ ಉತ್ಸಾಹದಾಯಕ ವರುಷವಾಗಿಲ್ಲ. ನೌಕರರ ಸಮಸ್ಯೆಗಳಿಂದಲೂ ಸರಕಾರದ ನಿರ್ಬಂಧಗಳಿಂದಲೂ ಮಾಶಿನರಿಗಳ ತೊಂದರೆಯಿಂದಲೂ ಉದ್ಯೋಗದಲ್ಲಿ ಹಿನ್ನಡೆ ಹಾಗೂ ಕುಂಠಿತವಾಗುತ್ತದೆ. ಆದರೂ ಫೆಬ್ರುವರಿ ೩ ರಿಂದ ಜುಲೈ ೧೫ ರ ವರೆಗಿನ ಕಾಲ ತುಸು ಉತ್ತೇಜಕವಿದ್ದು ಕುಂಠಿತವಾಗಿದ್ದ ಉದ್ಯೋಗ ಹೇಗೋ ಎಂತೋ ಚೇತರಿಸಿಕೊಳ್ಳುತ್ತದೆ.

ವರುಷದ ಪ್ರಾರಂಭದ ಮೂರು ತಿಂಗಳ ಕಾಲ ಅಷ್ಟಮ ಗುರು ಹಾಗೂ ವರುಷಾಂತ್ಯದ ನಾಲ್ಕು ತಿಂಗಳ ಕಾಲ ದಶಮದ ಗುರುವಿನಿಂದಾಗಿ ಈ ರಾಶಿಯ ವಧೂವರರಿಗೆ ಪ್ರತಿಕೂಲ ವರುಷವಿದು. ಮದುವೆ ನಿಶ್ಚಯವಾದರೂ ಮುಂದೂಡಬಹುದಾಗಿದೆ. ಆದರೆ ಫೆಬ್ರುವರಿಯಿಂದಜೂನದ ವರೆಗಿನ ಕಾಲದಲ್ಲಿ ಮಾತ್ರ ತುಸು ಪ್ರೋತ್ಸಾಹದಾಯಕವಿದೆ. ಈ ರಾಶಿಯ ವಿವಾಹಿತ ಪುರುಷರಿಗೂ, ಗೃಹಿಣಿಯರಿಗೂ, ಅಷ್ಟಮ ಹಾಗು ದಶಮ ಗುರುವಿನಿಂದಾಗಿ ಅಶಾಂತಿಯ ವರುಷವಾಗಿದೆ. ಚಾಡಿಯ ಪ್ರಭಾವದಿಂದಲೂ, ಮಿಥ್ಯಾಪವಾದದಿಂದಲೂ ನಿತ್ಯದ ಗೃಹಕಲಹ. ಫೆಬ್ರುವರಿಯಿಂದ ಜೂನದ ವರೆಗಿನ ಕಾಲ ತುಸು ಅನುಕೂಲವಿದ್ದು ತಪ್ಪು ತಿಳಿವಳಿಕೆ ದೂರಾಗಿ ಮತ್ತೆಲ್ಲ ಪರಸ್ಪರ ವಿಶ್ವಾಸ ಕುದುರಬಹುದಾಗಿದೆ. ಈ ರಾಶಿಯ ಗರ್ಭಿಣಿಯರಿಗೆ ಮಿಶ್ರಫಲದಾಯಕ ವರುಷವಾಗಿದೆ. ಯಾರ ಹೆರಿಗೆಯು ಅಕ್ಟೋಬರ್ ೨೩ ರಿಂದ ಫೆಬ್ರುವರಿ ೨ ರ ವರೆಗೆ ಹಾಗು ಜುಲೈ ೧೫ ರಿಂದ ನವೆಂಬರ್ ೯ ರ ವರೆಗೆ ಜರುಗುವುದೋ ಅಂಥವರ ಕಷ್ಟ ಪ್ರಸವವಾದರೆ ಫೆಬ್ರುವರಿ ೩ರಿಂದ ಜುಲೈ ೧೪ ರ ವರೆಗೆ ಪ್ರಸವವಾದರೆ ಸುಖಪ್ರಸವವಾಗುತ್ತದೆ.

ಈ ರಾಶಿಯ ರಾಜಕೀಯ, ಸಾಮಾಜಿಕ ಕಾರ್ಯಕರ್ತರಿಗೆ ಈ ವರುಷ ಚೆನ್ನಾಗಿರುವುದಿಲ್ಲ. ಮಿತ್ರರೇ ಶತ್ರುಗಳಾಗುವದರಿಂದ ಸ್ಥಾನಮಾನ, ಅಧಿಕಾರಕ್ಕೆ ಚ್ಯುತಿ ಇದೆ. ಚುನಾವಣೆ ಮೊದಲಾದ ಜಂಜಾಟದಿಂದ ದೂರ ಇರುವುದೇ ಹಿತಕರವು. ಈ ರಾಶಿಯ ವಿದ್ಯಾರ್ಥಿಗಳಿಗೆ ಅನಿಷ್ಟದಾಯಕ ವರುಷವಾಗಿದೆ. ವಿದ್ಯಾರ್ಥಿವೇತನ ಹಾಗೂ ಶಿಷ್ಯವೃತ್ತಿ ಕಳೆದುಕೊಳ್ಳಬಹುದಾಗಿದೆ. ಆದರೆ ಯಾವ ವಿದ್ಯಾರ್ಥಿಗಳ ಪರೀಕ್ಷೆ ಹಾಗೂ ಫಲಿತಾಂಶ ೩-೨-೧೯೮೮ ರಿಂದ ೧೯-೬-೧೯೮೮ ರ ವರೆಗೆ ಜರುಗುವುದೂ ಅಂಥ ವಿದ್ಯಾರ್ಥಿಗಳು ಹೇಗೋ ಎಂತೋ ತೇರ್ಗಡೆ ಆಗುವರು. ಉಳಿದ ಅವಧಿಯಲ್ಲಿ ಕಟ್ಟಿದ ವಿದ್ಯಾರ್ಥಿಗಳ ಫಲಿತಾಂಶ ಸಂಶಯಾಸ್ಪದವು.



ಕನ್ಯಾ

ಈ ರಾಶಿಯವರಿಗೆ ಮಿಶ್ರಫಲದಾಯಕ ವರುಷವಿದು. ವರುಷ ಪ್ರಾರಂಭದ ಮೂರು ತಿಂಗಳು ಹಾಗೂ ಕೊನೆಯ ನಾಲ್ಕು ತಿಂಗಳು ಕಾಲ ಪ್ರೋತ್ಸಾಹದಾಯಕವಿದ್ದರೆ, ಮಧ್ಯದ ಐದು ತಿಂಗಳ ಕಾಲ ತಾಪದಾಯಕದ್ದು ಇರುತ್ತದೆ.

ಈ ರಾಶಿಯವರ ಈ ವರುಷದ ಗ್ರಹಗತಿಯನ್ನು ಅವಲೋಕಿಸಲಾಗಿ ವರುಷದ ಪ್ರಾರಂಭದ ಮೂರು ತಿಂಗಳು ಏಳನೇ ಗುರುವಿನ ಶುಭಫಲವನ್ನು, ವರುಷದ ಕೊನೆಯ ನಾಲ್ಕು ತಿಂಗಳು ಕಾಲ ಒಂಬತ್ತನೇ ಗುರುವಿನ ಶುಭ ಫಲವನ್ನು, ಸಂವತ್ಸರಾಂತ್ಯದಿಂದ ಆರನೇ ರಾಹುವಿನ ಶುಭ ಫಲವನ್ನು ಪಡೆಯುವಿರಿ. ಆದರೆ ಕಳೆದ ಎರಡೂವರೆ ವರುಷದಿಂದ ಶುಭ ಫಲವನ್ನು ಕೊಡುತ್ತಿದ್ದ ಮೂರನೇ ಶನಿಯು ೧೭-೬-೧೯೮೭ ರಿಂದ ನಿರ್ಗಮಿಸಿ, ಅಂದೇ ಬರುವ ನಾಲ್ಕನೇ ಶನಿಯ ಅಶುಭ ಫಲವು ವರುಷಾಂತ್ಯದ ವರೆಗೂ ಇರುತ್ತದೆ. ಇದಲ್ಲದೇ ೩-೧೨-೧೯೮೮ ರಿಂದ ೧೮-೬-೧೯೮೮ರ ವರೆಗಿನ ಐದು ತಿಂಗಳ ಕಾಲ ಅಷ್ಟಮ ಗುರುವಿನ ಅನಿಷ್ಟತೆಯನ್ನು ಎದುರಿಸಬೇಕಾಗುತ್ತದೆ. ಹೀಗೆ ನಿಮ್ಮ ಗ್ರಹಸ್ಥಿತಿ ಮಿಶ್ರಫಲದಾಯಕ.

ಆರೋಗ್ಯ ದೃಷ್ಟಿಯಿಂದ ಪರಿಶೀಲಿಸಿದರೆ ವರುಷದ ಬಹುಕಾಲ ಅವಧಿಯ ವರೆಗೆ ಚೆನ್ನಾಗಿದ್ದರೂ. ಡಿಸೆಂಬರ ೧೬ ರಿಂದ ಜನೇವರಿ ೧೩ರ ವರೆಗೆ, ಮಾರ್ಚ ೧೫ ರಿಂದ ಜೂನ ೧೬ರ ವರೆಗಿನ ಕಾಲದಲ್ಲಿ ತುಸು ಕೆಡಬಹುದಾಗಿದೆ. ಆರ್ಥಿಕ ದೃಷ್ಟಿಯಿಂದ ಪರಿಶೀಲಿಸಿದರೆ ಮಿಶ್ರ ಫಲದಾಯಕ ವರುಷವಾಗಿದೆ. ಅಕ್ಟೋಬರ ೨೩ ರಿಂದ ಫೆಬ್ರುವರಿ ೩ರ ವರೆಗೆ ಹಾಗೂ ಜೂನ ೧೯ ರಿಂದ ನವೆಂಬರ ೯ರ ವರೆಗಿನ ಕಾಲ ಅನುಕೂಲವಿದ್ದು ನಿರೀಕ್ಷಿಸಿದ ಮೂಲದಿಂದ ಹಣ ಬರುವುದಲ್ಲದೆ ದತ್ತಕ, ವಾರಸಾ ಭಕ್ಷೀಸ, ಬಹುಮಾನ, ಲಾಟರಿ, ಕಮಿಶನ, ಮೊದಲಾದ ರೀತಿಯ ಆಕಸ್ಮಿಕ ಧನ ಪ್ರಾಪ್ತಿಆಗಿ ಆರ್ಥಿಕ ಸ್ಥಿತಿ ತೃಪ್ತಿಕರವಿರುತ್ತದೆ. ಆದರೆ ಫೆಬ್ರುವರಿ ೩ ರಿಂದ ಜೂನ ೧೮ ರ ವರೆಗಿನ ಕಾಲ ತೀರ ಪ್ರತಿಕೂಲವಿದ್ದು, ಡಾಕ್ಟರ, ವಕೀಲರ ಬಿಲ್ಲುಗಳಿಗಾಗಿಯೇ ಮುಕ್ಕಾಲು ಆದಾಯ ಖರ್ಚಾಗುವುದಲ್ಲದೇ, ಆದಾಯ ಅಲ್ಪ, ಖರ್ಚು ವಿಪರೀತ, ಆದರೂ ಜೂನ ೧೯ ರಿಂದ ಬರುವ ಅತ್ಯಂತ ಶುಭ ಫಲದಾಯಕ ಒಂಬತ್ತನೇ ಗುರುವಿನಿಂದಾಗಿ ಆರ್ಥಿಕ ಸ್ಥಿತಿ ಹಿಡಿತದಲ್ಲಿ ಬರುತ್ತದೆ. ಹಾಗೂ ಉತ್ತರಾರ್ಧವು ತೃಪ್ತಿಕರವಿರುತ್ತದೆ. ಕೋರ್ಟು,

[illegible]
ಯಶಸ್ಸು ಲಭಿಸುತ್ತದೆ.

ಈ ರಾಶಿಯ ನೌಕರ ವರ್ಗದವರಿಗೆ ಮಧ್ಯದ ಐದು ತಿಂಗಳ ಕಾಲದ ಹೊರತಾಗಿ ಉಳಿದ ಅವಧಿ ಉತ್ತೇಜಕವಾಗಿದೆ. ಅದರಲ್ಲಿಯೂ ಅಕ್ಟೋಬರ ೨೩ ರಿಂದ ಫೆಬ್ರುವರಿ ೨ ರ ವರೆಗೆ ಹಾಗೂ ಜೂನ ೧೫ ರಿಂದ ನವೆಂಬರ ೯ ರ ವರೆಗಿನ ಕಾಲ ಪ್ರೋತ್ಸಾಹದಾಯಕವಿದ್ದು ಈ ಕಾಲದಲ್ಲಿ ನೌಕರಿಯಲ್ಲಿ ಬಡತಿ, ಅನುಕೂಲ ಜಾಗೆಗೆ ಬದಲಿ, ನಿರುದ್ಯೋಗಿಗಳಿಗೆ ಉದ್ಯೋಗ ಲಭಿಸುವಿಕೆ, ಹಂಗಾಮಿ ನೌಕರವರ್ಗದವರಿಗೆ ಅಸ್ಥಿರತೆ ದೂರಾಗುವಿಕೆ, ಮೊದಲಾದ ಶುಭ ಘಟನೆಗಳು ಜರುಗುವುದಲ್ಲದೆ ಜೂನ ೧೯ ರಿಂದ ನವೆಂಬರ ೯ ರ ವರೆಗಿನ ಕಾಲದಲ್ಲಿ ಎರಡೆರಡು ಹುದ್ದೆಗಳ ಕಾರ್ಯ ನಿರ್ವಹಣೆಯ ಸುಯೋಗವೂ ಲಭಿಸುತ್ತದೆ. ಈ ರಾಶಿಯ ಗಿರಣಿ, ಕಾರಖಾನೆ, ವರ್ಕಶಾಪ, ಮಶೀನಶಾಪಗಳಲ್ಲಿ ಕೆಲಸ ಮಾಡುವ ಮಶಿನರಿ ಹಾಗೂ ತಾಂತ್ರಿಕ ಕೆಲಸಗಾರರಿಗೂ, ಕಾರ್ಮಿಕರಿಗೂ, ಬಾಹ್ಯ ಹಾಗೂ ಸಂಚಾರಿ ಕೆಲಸಗಾರರಿಗೆಲ್ಲ ಮಿಶ್ರ ಫಲದಾಯಕ ವರುಷವಾಗಿದೆ. ಪೂರ್ವಾರ್ಧವು ಪ್ರತಿಕೂಲ ವಿದ್ದರೆ, ಉತ್ತರಾರ್ಧವು ಉತ್ತೇಜಕವಿದೆ. ಪೂರ್ವಾರ್ಧದಲ್ಲಿ ಅಧಿಕಾರಿಗಳೊಂದಿಗೆ ಮತಭೇದ ಹೆಚ್ಚಾಗಿ ಘರ್ಷಣೆಗೆ ಇಳಿಯುವ ಪ್ರಸಂಗ ಬಂದರೆ, ಉತ್ತರಾರ್ಧದಲ್ಲಿ ಎಲ್ಲವೂ ಸೌಹಾರ್ದಯುತವಾಗಿ ಬಗೆಹರಿಯುವುದಲ್ಲದೇ ಅನೇಕ ಬೇಡಿಕೆಗಳೂ ಈಡೇರುವವು. ಈ ರಾಶಿಯ ಕೃಷಿ ವರ್ಗದವರಿಗೂ ಕೂಡ ಮಿಶ್ರ ಫಲದಾಯಕ ವರುಷವಾಗಿದೆ. ಮುಂಗಾರಿ ಪೀಕು (ಫಸಲು) ಕೈ ಕೊಟ್ಟರೆ, ಹಿಂಗಾರಿ ಫಸಲು ಕೈ ಹಿಡಿಯುವುದು ಅರ್ಥಾತ್ ಪೂರ್ವಾರ್ಧದಲ್ಲಿ ಆದ ಹಾನಿ ಉತ್ತರಾರ್ಧದಲ್ಲಿ ತುಂಬಿಕೊಳ್ಳುವುದು.

ಈ ರಾಶಿಯ ಲೇಖಕ, ಸಾಹಿತಿ, ಚಾರ್ಟರ್ಡ ಅಕೌಂಟಂಟ, ಕಲಾವಿದ, ಪತ್ರಿಕೋದ್ಯಮಿ, ಶಿಕ್ಷಕ, ಅಧ್ಯಾಪಕ, ಡಾಕ್ಟರ್, ವಕೀಲ, ನ್ಯಾಯಾಧೀಶ ಮೊದಲಾದ ಬುದ್ಧಿ ಜೀವಿಗಳಿಗೆಲ್ಲ ವರುಷದ ಪ್ರಾರಂಭದ ಮೂರು ತಿಂಗಳ ಕಾಲ ಏಳನೇ ಗುರುವು, ಕೊನೆಯ ನಾಲ್ಕು ತಿಂಗಳ ಕಾಲ ಒಂಬತ್ತನೇ ಗುರುವಿನ ಶುಭ ಫಲದ ಕಾರಣ ಪ್ರೋತ್ಸಾಹದಾಯಕವಾಗಿದೆ. ಅದರಲ್ಲಿಯೂ ಅಕ್ಟೋಬರ್ ೨೩ ರಿಂದ ಫೆಬ್ರುವರಿ ೨ ರ ವರೆಗೆ ಹಾಗು ಜೂನ್ ೧೯ ರಿಂದ ನವಂಬರ್ ೯ ರ ವರೆಗಿನ ಕಾಲದಲ್ಲಿ ಉದ್ಯೋಗದಲ್ಲಿ ಪ್ರಗತಿ, ಆಗುವುದಲ್ಲದೆ, ಸಂಘ ಸಂಸ್ಥೆಗಳಿಂದಲೂ, ಪ್ರಶಸ್ತಿ, ಬಹುಮಾನ, ಗೌರವಧನ, ಮಾಸಾಶನ ಮೊದಲ[illegible] [illegible]ನ್ಯಾನುಕೂಲತೆಯಾಗುವುದಲ್ಲದೇ, ಉದ್ಯೋಗದಲ್ಲಿ ಪ್ರಗತಿಯಾಗಿ, ವಾಹನ, ಮನೆ ಆಸ್ತಿ ಸಂಪಾದನೆ, ಪರದೇಶ ಪರ್ಯಟನ ಮೊದಲಾದ ಸ್ಮರಣೀಯ ಘಟನೆಗಳು ಜರುಗುವವು. ಆದರೆ ಫೆಬ್ರುವರಿ ೩ ರಿಂದ ಜೂನ್ ೧೯
[illegible] ರ ವರೆಗಿನ ಮಧ್ಯದ ಐದು ತಿಂಗಳ ಕಾಲ ತಾಪದಾಯಕವಿದ್ದು, ಉದ್ಯೋಗದಲ್ಲಿ ಚಟುವಟಿಕೆ ಇರುವುದಿಲ್ಲವಷ್ಟೇ ಅಲ್ಲ ಮಿತ್ರರೇ ಶತ್ರುಗಳಾಗುವುದರಿಂದ ಮಿಥ್ಯಾಪವಾದವನ್ನು ಎದುರಿಸಬೇಕಾಗುತ್ತದೆ. ಆದರೆ ಜೂನ ೧೯ ರಿಂದ ಎಲ್ಲವೂ ಸರಿಯಾಗುತ್ತದೆ. ಇದರಂತೆ ಈ ರಾಶಿಯ ಸ್ವತಂತ್ರ ವ್ಯಾಪಾರ ಉದ್ಯೋಗಸ್ಥರಿಗೆ, ಗಿರಣಿ, ಕಾರಖಾನೆ, ಚಾಳ, ಟಾಕೀಜ, ಹೋಟೆಲಗಳ ಮಾಲಕ ವರ್ಗದವರಿಗೆಲ್ಲ ಮಿಶ್ರ ಫಲದಾಯಕ ವರುಷವಿದು. ಹೊಸ ಉದ್ಯೋಗ ಇಲ್ಲವೇ ಇದ್ದ ಉದ್ಯೋಗದ ಶಾಖೆಗಳನ್ನು ಪ್ರಾರಂಭಿಸುವುದಲ್ಲದೇ, ಉದ್ಯೋಗಕ್ಕೆ ಬೇಕಾಗಬಹುದಾದ ಉಪಕರಣಗಳನ್ನು ಕೊಳ್ಳುವ ಶಕ್ತಿ ಬರುತ್ತದೆ. ಆದರೆ ಫೆಬ್ರುವರಿ ೩ ರಿಂದ ಜೂನ್ ೧೮ ರ ವರೆಗಿನ ಮಧ್ಯದ ಐದು ತಿಂಗಳ ಕಾಲ ತಾಪದಾಯಕವಾಗಿದ್ದು, ಸರಕಾರದ ನಿರ್ಬಂಧಗಳಿಂದ ಕಾರ್ಮಿಕರ ಅಸಹಕಾರ ಹಾಗೂ ಮಶಿನರಿಗಳ ತೊಂದರೆಯಿಂದಾಗಿ ಉದ್ಯೋಗದಲ್ಲಿ ವ್ಯತ್ಯಯ ಮತ್ತು ಉತ್ಪಾದನೆ ಕುಂಠಿತ ಆದರೆ ಜೂನ್ ೧೯ ರಿಂದ ಎಲ್ಲವೂ ಸರಿಯಾಗುತ್ತದೆ.

ಕಳೆದ ಅನೇಕ ವರುಷಗಳಿಂದ ಗೃಹಸ್ಥಾಶ್ರಮಕ್ಕಾಗಿ ಹಾತೊರೆಯುತ್ತಿರುವ ಈ ರಾಶಿಯ ವಧೂವರರಿಗೆ ಅವರ ಮನೋರಥ ಈಡೇರುವುದರಲ್ಲಿ ಸಂದೇಹ ವಿಲ್ಲ. ಅರ್ಥಾತ್ ಗೃಹಸ್ಥಾಶ್ರಮ ಜೀವನಕ್ಕೆ ಪಾದಾರ್ಪಣ ಮಾಡುವರು. ಆದರೆ ಫೆಬ್ರುವರಿಯಿಂದ ಜೂನದವರೆಗಿನ ಐದು ತಿಂಗಳ ಕಾಲ ತೀರ ಪ್ರತಿಕೂಲವಿದ್ದು ಈ ಕಾಲದಲ್ಲಿ ಮದುವೆ ನಿಶ್ಚಿತವಾದರೆ ಮುಂದೂಡಬಹುದಾಗಿದೆ. ಈ ರಾಶಿಯ ವಿವಾಹಿತ ಪುರುಷರಿಗೂ ಗೃಹಿಣಿಯರಿಗೂ ಮಿಶ್ರಫಲದಾಯಕ ವರುಷವಾಗಿದೆ. ಪೂರ್ವಾರ್ಧವು ಪ್ರತಿಕೂಲವಿದ್ದು, ಮನೆಯಲ್ಲಿಯ ವಿಷಮ ವಾತಾವರಣದಿಂದಲೂ. ಬಾಡಿಯ ಪ್ರಭಾವದಿಂದಲೂ ಗೃಹಕಲಹದಿಂದಲೂ ಏಕತ್ರ ಕುಟುಂಬ ಒಡೆಯಬಹುದಾಗಿದೆ. ಆದರೆ ಉತ್ತರಾರ್ಧವು ಉತ್ತೇಜಕವಾಗಿದ್ದು ಒಡೆದು ಹೋಗಿದ್ದ ಏಕತ್ರ ಕುಟುಂಬ ಮತ್ತೆ ಒಂದಾಗುವುದು. ತಪ್ಪು ತಿಳಿವಳಿಕೆ
[illegible] ಕುದುರುವುದು, ಅಲ್ಲದೆ ಬೆಲೆಯುಳ್ಳ ವಸ್ತು ಒಡವೆಗಳ ಖರೀದಿ, ಆಸ್ತಿ, ವಾಹನ, ಮನೆ ಸಂಪಾದನೆ, ತೀರ್ಥಕ್ಷೇತ್ರ ಸಂದರ್ಶನ ಮೊದಲಾದ ಸ್ಮರಣೀಯ ಘಟನೆಗಳು ಜರುಗಬಹುದಾಗಿದೆ. ಈ ರಾಶಿಯ ಗರ್ಭಿಣಿಯರಿಗೂ ಮಿಶ್ರಫಲದಾಯಕ ವರುಷವಾಗಿದೆ. ಹೆರಿಗೆಯು ಪೂರ್ವಾರ್ಧದಲ್ಲಿ ಆದರೆ ಕಷ್ಟ ಪ್ರಸವವೂ, ಉತ್ತರಾರ್ಧದಲ್ಲಿ ಆದರೆ ಸುಖ ಪ್ರಸವವೂ ಹಾಗೂ ಗಂಡು ಸಂತಾನದ ಯೋಗವು ಉಂಟು.

ಈ ರಾಶಿಯ ರಾಜಕೀಯ ಹಾಗು ಸಾಮಾಜಿಕ ಕಾರ್ಯಕರ್ತರಿಗೂ, ರಾಜಕಾರಣಿಗಳಿಗೂ ಮಿಶ್ರ ಫಲದಾಯಕ ವರುಷವು. ವರುಷದ ಪ್ರಾರಂಭದ ಮೂರು ತಿಂಗಳು ಹಾಗೂ ಕೊನೆಯ ನಾಲ್ಕು ತಿಂಗಳ ಕಾಲ ಪ್ರೋತ್ಸಾಹದಾಯಕವಿದ್ದು ಪ್ರತ್ಯಕ್ಷ ರಾಜಕೀಯದಲ್ಲಿ ಪ್ರವೇಶಿಸಿ ಜಿಲ್ಲೆ, ರಾಜ್ಯ, ರಾಷ್ಟ್ರ ಮಟ್ಟದ ಧುರೀಣರಾಗುವುದಲ್ಲದೇ ವಿವಿಧ ಮಂಡಳ, ನಿಗಮಗಳ, ಗೌರವಾನ್ವಿತ ಸ್ಥಾನಮಾನ, ಅಧಿಕಾರ ಪಡೆಯುವರು. ಇದೇ ಅವಧಿಯಲ್ಲಿ ಚುನಾವಣೆಗಳಿದ್ದರೆ, ಅವಶ್ಯ ಸ್ಪರ್ಧಿಸಬಹುದು, ಯಶಸ್ಸು ಖಂಡಿತ, ಆದರೆ ಫೆಬ್ರುವರಿ ೩ ರಿಂದ ಜೂನ್ ೧೮ ರ ವರೆಗಿನ ಕಾಲ ತಾಪದಾಯಕವಿದ್ದು ಸ್ಥಾನಮಾನಕ್ಕೂ ಚ್ಯುತಿ ಇದೆ.

ಈ ರಾಶಿಯ ವಿದ್ಯಾರ್ಥಿಗಳಿಗೆ ಮಿಶ್ರ ಫಲದಾಯಕ ವರುಷವಾಗಿದೆ. ವರುಷದ ಪ್ರಾರಂಭದ ಮೂರು ತಿಂಗಳು ಹಾಗು ಕೊನೆಯ ನಾಲ್ಕು ತಿಂಗಳ ಕಾಲ ಪ್ರೋತ್ಸಾಹದಾಯಕವಿದ್ದು, ಈ ಕಾಲದಲ್ಲಿ ಪರೀಕ್ಷೆ ಹಾಗು ಫಲಿತಾಂಶ ಪ್ರಕಟನೆ ಇದ್ದರೆ ದರ್ಜೆ, ಶ್ರೇಣಿಯಲ್ಲಿ ತೇರ್ಗಡೆ ಆಗಿ ಪ್ರಶಸ್ತಿ ಪದಕ, ಪಡೆಯಬಹುದಾಗಿದೆ. ಆದರೆ ಫೆಬ್ರುವರಿ ೩ ರಿಂದ ಜೂನ್ ೧೮ ರ ವರೆಗಿನ ಕಾಲ ತೀರ ಪ್ರತಿಕೂಲವಿದ್ದು, ಮನೆಯಲ್ಲಿಯ ವಿಷಮ ವಾತಾವರಣದಿಂದಲೂ, ಶಿಕ್ಷಕರ ಅವಕೃಪೆಯಿಂದಲೂ, ಶಾರೀರಿಕ ಪೀಡೆಯಿಂದಲೂ, ಆರ್ಥಿಕ ಮುಗ್ಗಟ್ಟಿನಿಂದಲೂ ಶಿಕ್ಷಣ ಮುಂದುವರೆಸುವುದಾಗಲಿ, ಪರೀಕ್ಷೆ ಕಟ್ಟುವುದಕ್ಕಾಗಲೀ ತೊಂದರೆ ಬರುತ್ತದೆ. ಆದರೆ ಜೂನ್ ೧೯ ರ ಮೇಲೆ ಎಲ್ಲವೂ ಸರಿಯಾಗುತ್ತದೆ.



ತುಲಾ

ಈ ರಾಶಿಯುವರಿಗೆ ಈ ವರುಷ ಉದ್ಯೋಗ ಆರ್ಥಿಕ ದೃಷ್ಟಿಯಿಂದ ಉತ್ಸಾಹದಾಯಕವಾದರೆ ಕೌಟುಂಬಿಕ ಹಾಗೂ ಶೈಕ್ಷಣಿಕ ದೃಷ್ಟಿಯಿಂದ ನಿರುತ್ಸಾಹದಾಯಕವಿದೆ. ಹಾಗೂ ಶ್ರಮಜೀವಿಗಳಿಗೂ ತಾಂತ್ರಿಕ ವರ್ಗದವರಿಗೂ ಪ್ರಗತಿದಾಯಕವಿದ್ದರೆ ಬುದ್ಧಿ ಜೀವಿಗಳಿಗೆ ಪ್ರತಿಕೂಲ ವರುಷವಿದು.

ಈ ರಾಶಿಯುವರ ಈ ವರುಷದ ಗ್ರಹಗತಿಯನ್ನು ಪರಿಶೀಲಿಸಲಾಗಿ ಕಳೆದ ಏಳೂವರೆ ವರುಷದಿಂದ ಇದ್ದ ಸಾಡೇಸಾತಿಯಿಂದ ೧೭-೧೨-೧೯೮೭ ರಿಂದ ಮುಕ್ತರಾಗುವಿರಿ. ಇಷ್ಟೇಅಲ್ಲ ಅಂದಿಸಿಂದಲೇ ಬರಲಿರುವ ೩ ನೇ ಶುಭ ಫಲದಾಯಕ ಶನಿಯು ವರುಷಾಂತ್ಯದ ವರೆಗೂ ಇರುತ್ತಾನೆ. ಇದರಂತೆ ಸಂವತ್ಸರಾಂತ್ಯದ ವರೆಗೂ ಆರನೇ ರಾಹುವಿನ ಶುಭ ಫಲ ಇದ್ದೇ ಇರುತ್ತದೆ ೬-೩-೧೯೮೮ ರಿಂದ ಬರಲಿರುವ ಪಂಚಮ ರಾಹು ಕೂಡ ಹಾನಿದಾಯಕನಾಗಲಾರನು. ಆದರೆ ವರುಷ ಪ್ರಾರಂಭದ ಮೂರು ತಿಂಗಳು ಆರನೇ ಗುರುವಿನ ಅಶುಭ ಫಲವಿದ್ದರೆ ವರುಷಾಂತ್ಯದ ವರೆಗಿನ ನಾಲ್ಕು ತಿಂಗಳು ಅಷ್ಟಮ ಗುರುವಿನ ಅನಿಷ್ಟತೆ ಇದೆ. ಹೀಗೆ ನಿಮ್ಮ ಗ್ರಹಗತಿ ಇರುವುದರಿಂದ ಮಿಶ್ರಫಲದಾಯಕ ವರುಷವಿದು.

ಆರೋಗ್ಯ ದೃಷ್ಟಿಯಿಂದ ನೋಡಿದರೆ ದೈಹಿಕವಾಗಿ ಚೆನ್ನಾಗಿರುತ್ತದೆ. ಆದರೆ ಮಾನಸಿಕ ನೆಮ್ಮದಿ ಇಡೀ ವರುಷ ದೊರೆಯುವದಿಲ್ಲ. ಹೀಗಾಗಿ ದೈಹಿಕವಾಗಿ ತುಸು ಕಿರುಕಳ ಇದ್ದೇ ಇರುತ್ತದೆ. ಆದರಲ್ಲಿಯೂ ಜನೇವರಿ ೧೪ ರಿಂದ ಫೆಬ್ರುವರಿ ೧೨ ರ ವರೆಗೆ ಹಾಗೂ ಸಪ್ಟಂಬರ ೧೬ ರಿಂದ ನವಂಬರ ೯ ರ ವರೆಗಿನ ಕಾಲದಲ್ಲಿ ತುಸು ಕೆಡಬಹುದಾಗಿದೆ. ಆರ್ಥಿಕ ದೃಷ್ಟಿಯಿಂದ ನೋಡಿದರೆ ಬರತಕ್ಕ ಹಣವು ಲಭಿಸುವದಲ್ಲದೇ, ನಿರೀಕ್ಷಿಸಿದ ಮೂಲದಿಂದ ಹಣ ಬರುವುದಲ್ಲದೇ, ಡಿಸೆಂಬರ ೧೫ ರಿಂದ ಜನೇವರಿ ೧೪ ರ ವರೆಗೆ ಹಾಗು ಫೆಬ್ರುವರಿ ೧೨ ರಿಂದ ಮೇ ೧೫ ರ ವರೆಗೆ ಹಾಗು ಜುಲೈ ೧೫ ರಿಂದ ಸಪ್ಟಂಬರ ೧೬ ರ ವರೆಗಿನ ಈ ಕಾಲದಲ್ಲಿ ,ದತ್ತಕ, ಪಾರಿಸಾ, ಬಕ್ಷೀಸು, ಬಹುಮಾನ, ಕಮೀಶನ್, ಮೊದಲಾದ ರೀತಿಯಿಂದ ಆಕಸ್ಮಿಕ ಧನ ಪ್ರಾಪ್ತಿ ಆಗಿ ಆರ್ಥಿಕ ಸ್ಥಿತಿ ಇಡೀ ವರುಷ ತೃಪ್ತಿಕರವಿರುತ್ತದೆ. ವಾದ ಸ್ಪರ್ಧೆ, ಕೋರ್ಟು, ಕಚೇರಿಗಳ ವ್ಯಾಜ್ಯದಲ್ಲಿ ಮಿಶ್ರಫಲವಿದೆ. ಫೌಜುದಾರಿ, ಕಾರ್ಮಿಕ ತಂಟೆ, ವಾಹನಗಳ ತಂಟೆಗಳಲ್ಲಿ ಜಯಖಂಡಿತವಿದ್ದರೆ ದಿವಾಣಿ ಶೈಕ್ಷಣಿಕ, ರಾಜಕೀಯ ಸಂಬಂಧಿಸಿದ ವ್ಯಾಜ್ಯಗಳಲ್ಲಿ ಅಪಜಯವಿದೆ.

ಈ ರಾಶಿಯ ನೌಕರ ವರ್ಗದವರಿಗೆ ಆರ್ಥಿಕ ದೃಷ್ಟಿಯಿಂದ ಈ ವರುಷ ಪ್ರೋತ್ಸಾಹದಾಯಕವಾಗಿದೆ. ಆದರೆ ಸ್ಥಾನಮಾನ ಅಧಿಕಾರ ದೃಷ್ಟಿಯಿಂದ ನಿರುತ್ಸಾಹದಾಯಕವಿದೆ. ನಿರುದ್ಯೋಗಿಗಳಿಗೆ ಆಶಾದಾಯಕ ವರುಷವಾಗಿದೆ. ಹಂಗಾಮಿ ನೌಕರವರ್ಗದವರಿಗೆ ಈ ವರುಷ ಸ್ಥಿರತೆ ಉಂಟಾಗುತ್ತದೆ. ಡಿಸೆಂಬರ ೧೫ ರಿಂದ ಜನೇವರಿ ೧೪ ರ ವರೆಗೆ, ಫೆಬ್ರುವರಿ ೧೨ ರಿಂದ ಮೇ ೧೫ ರ ವರೆಗೆ ಹಾಗು ಜುಲೈ ೧೫ ರಿಂದ ಸಪ್ಟಂಬರ ೧೬ ರ ವರೆಗಿನ ಈ ಆರು ತಿಂಗಳ ಕಾಲ ಪ್ರೋತ್ಸಾಹದಾಯಕವಿದ್ದು, ಈ



ಜಾತಿ-ಮಲ್ಲಿಗೆ

ಈ ಮಲ್ಲಿ-ಗೆ
ತನ್ನವರೊಡನೆ ತಳುಕಿ
ತುಳುತುಳುಕಿ
ತನ್ನ ಖುಷಿ-ಖಾಯಿಷಿಗೆ
ಖಯಾಲಿಗೆ
ನವಾಬೀ ಪೌಲಿನಲಿ
ತೆತ್ತುಕೊಳ್ಳವ ತೆವಲು—
ಅಮಲು !

—ಎಂ. ಅಕಬರ ಅಲಿ

ಕಾಲದಲ್ಲಿ ನೌಕರಿಯಲ್ಲಿ ಬಡತಿ, ನಿರುದ್ಯೋಗಿಗಳಿಗೆ ಉದ್ಯೋಗ ಲಭಿಸುವಿಕೆ, ಹಂಗಾಮಿ ನೌಕರ ವರ್ಗದವರಿಗೆ ಉದ್ಯೋಗದಲ್ಲಿ ಸ್ಥಿರತೆ, ಮೊದಲಾದ ಶುಭ ಘಟನೆಗಳು ಜರುಗಿದರೆ, ಆಕ್ಟೋಬರ ೨೩ ರಿಂದ ಡಿಸೆಂಬರ ೧೫ ರ ವರೆಗೆ, ಜನೇವರಿ ೧೪ ರಿಂದ ಫೆಬ್ರುವರಿ ೧೧ ರ ವರೆಗೆ, ಮೇ ೧೫ ರಿಂದ ಜುಲೈ ೧೪ ರ ವರೆಗೆ ಹಾಗು ಸಪ್ಟಂಬರ ೧೬ ರಿಂದ ನವಂಬರ ೯ ರ ವರೆಗಿನ ಈ ಆರು ತಿಂಗಳ ಕಾಲ ತೀರ ತಾಪದಾಯಕವಾಗಿದ್ದು ಅನಪೇಕ್ಷಿತ ಸ್ಥಳಕ್ಕೆ ಬದಲಿ, ವರಿಷ್ಠರ ಕಿರುಕಳ, ಅಧಿಕಾರ ಸ್ಥಾನಕ್ಕೆ ಚ್ಯುತಿ ಮೊದಲಾದ ಅಶುಭ ಫಲಗಳು ದೊರೆಯಬಹುದಾಗಿದೆ. ಈ ರಾಶಿಯ ಗಿರಣಿ, ಕಾರಖಾನೆಯ ಕಾರ್ಮಿಕರಿಗೂ ಬಾಹ್ಯ ಹಾಗು ತಾಂತ್ರಿಕ ಕೆಲಸಗಾರರಿಗೂ, ವರ್ಕಶಾಪ, ಮಶೀನಶಾಪಗಳಲ್ಲಿ ಕೆಲಸ ಮಾಡುತ್ತಿರುವ ಮಶಿನರಿ ಕೆಲಸಗಾರರಿಗೂ ಶನಿ ರಾಹುಗಳು ಶುಭರಿರುವುದರಿಂದ ಪ್ರೋತ್ಸಾಹದಾಯಕವಿದೆ. ಅವರ ಬಹಳಷ್ಟು ಬೇಡಿಕೆಗಳು ಈಡೇರಬಹುದಾಗಿದೆ, ಈ ರಾಶಿಯ ಕೃಷಿ ವರ್ಗದವರಿಗೂ ಪ್ರೋತ್ಸಾಹದಾಯಕ ವರುಷವಾಗಿದೆ. ನಿರೀಕ್ಷಿಸಿದ್ದಕ್ಕಿಂತಲೂ ಅಧಿಕ ಫಸಲು ಒಂದು ಹಿಂದಿನ ಸಾಲಗಳೆಲ್ಲ ತೀರಿಸಿ ಹೊಸದಾಗಿ ಹೊಲ ಮನೆ, ಜಾಗೆ, ಟ್ರಕ್, ಟ್ರ್ಯಾಕ್ಟರ, ಪಂಪಸೆಟ್ಟು, ದನಕರುಗಳನ್ನು, ಖರೀದಿಸುವ ಶಕ್ತಿ ಬರುತ್ತದೆ. ಆದರೆ ನೆರೆಹೊರೆಯುವರ ತಗಾದೆಯಿಂದಾಗಿ ಕೋರ್ಟಿನ ಕಟ್ಟೆ ಹತ್ತುವ ಪ್ರಸಂಗ ಬರುತ್ತದೆ.

ವರುಷದ ಪ್ರಾರಂಭದ ಮೂರು ತಿಂಗಳ ಕಾಲ ಆರನೇ ಹಾಗು ಕೊನೆಯ ನಾಲ್ಕು ತಿಂಗಳ ಕಾಲ ಅಷ್ಟಮ ಗುರುವಿನ ಅಶುಭ ಫಲದಿಂದಾಗಿ ಈ ರಾಶಿಯ ಲೇಖಕ, ಸಾಹಿತಿ, ಕಲಾವಿದ,ಶಿಕ್ಷಕ, ಅಧ್ಯಾಪಕ, ಚಾರ್ಟರ್ಡ ಅಕೌಂಟಂಟ, ಪತ್ರಿಕೋದ್ಯಮಿ, ಡಾಕ್ಟರ, ವಕೀಲ, ನ್ಯಾಯಾಧೀಶ ಮೊದಲಾದ ಬುದ್ಧಿ ಜೀವಿಗಳಿಗೆಲ್ಲ ಪ್ರತಿಕೂಲ ವರುಷವಿದು, ಆರ್ಥಿಕ ದೃಷ್ಟಿಯಿಂದ ಉತ್ತಮವಿದ್ದರೂ, ಸ್ಥಾನಮಾನ ಅಧಿಕಾರಕ್ಕೆ ಎರವಾಗಬೇಕಾಗುತ್ತದೆ. ಅದರಲ್ಲಿಯೂ ಆಕ್ಟೋಬರ ೨೩ ರಿಂದ ಫೆಬ್ರುವರಿ ೧೨ ರ ವರೆಗೆ ಹಾಗು ಮೇ ೧೫ ರಿಂದ ಜುಲೈ ೧೫ ರ ವರೆಗೆ ಹಾಗು ಸಪ್ಟಂಭರ ೧೬ ರಿಂದ ನವಂಬರ ೯ ರ ವರೆಗಿನ ಈ ಕಾಲದಲ್ಲಿ ಅವಮಾನಕರ ಪ್ರಸಂಗವನ್ನು ಎದುರಿಸಬೇಕಾಗುತ್ತದೆ. ಇದರಂತೆ ಈ ರಾಶಿಯ ಸ್ವತಂತ್ರ ವ್ಯಾಪಾರ ಉದ್ಯೋಗಸ್ಥರಿಗೂ, ಕಮಿಶನ್, ಏಜೆಂಟರಿಗೂ ಪಂಚೀದಾರರಿಗೂ, ಗಿರಣಿ, ಕಾರಖಾನೆ, ಚಾಳ ಟಾಕೀಜ, ಹೊಟೆಲಗಳ ಮಾಲಕ ವರ್ಗದವರಿಗೆಲ್ಲ ಈ ವರುಷ ಉದ್ಯೋಗ, ಆರ್ಥಿಕ ದೃಷ್ಟಿಯಿಂದ ಪ್ರಗತಿದಾಯಕವಿದ್ದು ಮಶಿನರಿ ತೊಂದರೆ ಇರುವದಿಲ್ಲ. ಆದರೆ ಸರಕಾರದ ನಿರ್ಬಂಧಗಳನ್ನು, ನೌಕರರ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಅದರಲ್ಲಿಯೂ ವರುಷದ ಪ್ರಾರಂಭ ಎರಡು ತಿಂಗಳು ಹಾಗು ಕೊನೆಯ ಎರಡು ತಿಂಗಳುಗಳ ಕಾಲ ನೌಕರರ ಸಮಸ್ಯೆ, ಸರಕಾರದ ನಿರ್ಬಂಧಗಳಿಂದ ಉದ್ಯೋಗಕ್ಕೆ ವ್ಯತ್ಯಯವಿದೆ.

ಈ ರಾಶಿಯ ವಧೂವರರಿಗೆ ಫೆಬ್ರುವರಿ ೩ ರಿಂದ ಜೂನ ೧೯ ರ ವರೆಗಿನ ಏಳನೇ ಗುರುವಿನ ಅವಧಿಯು ಮಾತ್ರ ಶುಭವಿದ್ದು ಈ ಕಾಲದಲ್ಲಿ ವಿವಾಹ ಸಾಂಗವಾಗಬಹುದಾಗಿದೆ. ಆದರೆ ಉಳಿದ ಅವಧಿಯಲ್ಲಿ ವಿವಾಹ ನಿಶ್ಚಿತವಾದರೆ ತೊಂದರೆಯಾಗಬಹುದು. ವರುಷದ ಪ್ರಾರಂಭದ

ನಿನ್ನ ಕೃಪೆ




ತೊಳ ತೊಳಗಿ ಬೆಳಗಿದವು
ನಿನ್ನ ಕೃಪೆಯಿಂದ ಎದೆಯ ದೀಪ !
ಆ ಮಂದಾರ ಬೆಳಕಿನಲಿ
ಕಂಗೊಳಿಸಿದವು ಮೂರು ಲೋಕಗಳು !

—ಡಾ. ಪಂಚಾಕ್ಷರಿ ಹಿರೇಮಠ

ಮೂರು ತಿಂಗಳು ಆರನೇ ಹಾಗು ವರುಷದ ಕೊನೆಯ ನಾಲ್ಕು ತಿಂಗಳು ಎಂಟನೇ ಗುರುವಿನ ಅನಿಷ್ಟತೆಯಿಂವಾಗಿ ಈ ರಾಶಿಯ ವಿವಾಹಿತ ಪುರುಷರಿಗೂ, ಗೃಹಿಣಿಯರಿಗೂ ಅಶಾಂತಿಯ ವರುಷವಾಗಿದೆ. ನಿತ್ಯದ ಗೃಹಕಲಹ, ಅಪ್ತೇಷ್ಟ ರಲ್ಲಿ ತಪ್ಪು ತಿಳವಳಿಕೆ ಆದರಲ್ಲಿಯೂ ಅಕ್ಟೋಬರ ೨೬ ರಿಂದ ಡಿಸೆಂಬರ ೧೬ ರ ವರೆಗೆ ಹಾಗು ಮೇ ೧೫ ರಿಂದ ಜುಲೈ ೧೫ ರ ವರೆಗೆ ಹಾಗು ಸಪ್ಟಂಬರ ೧೬ ರಿಂದ ನವಂಬರ ೯ ರ ವರೆಗಿನ ಕಾಲದಲ್ಲಿ ಗೃಹಕಲಹದ ಪರಾಕಾಷ್ಠೆ. ಈ ರಾಶಿಯ ಗರ್ಭಿಣಿ ಸ್ತ್ರೀಯರಿಗೆ ಕಷ್ಟ ಪ್ರಸವ ವಾಗುವದಲ್ಲದೇ ಶಸ್ತ್ರಕ್ರಿಯೆ ಅನಿವಾರ್ಯ. ಹೆರಿಗೆಯನ್ನು ದವಾಖಾನೆಯಲ್ಲಿಯೇ ಮಾಡಿಸಿಕೊಳ್ಳುವದು ಹಿತಕರವು.

ಈ ರಾಶಿಯ ರಾಜಕೀಯ, ಸಾಮಾಜಿಕ ಕಾರ್ಯಕರ್ತರಿಗೆಲ್ಲ ವರುಷದುದ್ದಕ್ಕೂ ಗುರುವು ಅಶುಭನಿರುವುದರಿಂದ ಪ್ರತಿಕೂಲ ವರುಷ ವಾಗಿದೆ.

ವರುಷ ಪ್ರಾರಂಭದ ಮೂರು ತಿಂಗಳ ಕಾಲ ಆರನೇ ಹಾಗು ಕೊನೆಯ ನಾಲ್ಕು ತಿಂಗಳ ಕಾಲ ಎಂಟನೇ ಅಶುಭ ಫಲದಾಯಕ ಗುರುವಿನಿಂದಾಗಿ ಈ ರಾಶಿಯ ವಿದ್ಯಾರ್ಥಿಗಳಿಗೆ ಪ್ರತಿಕೂಲ ವರುಷವಿದು. ಮನೆಯಲ್ಲಿಯ ವಿಷಮ ವಾತಾವರಣದಿಂದಾಗಿ,ಶಿಕ್ಷಕರ ಅವಕೃಪೆಯಿಂದಾಗಿ ಶಿಕ್ಷಣ ಮುಂದುವರಿಸುವುದೇ ಕಠಿಣ ವಾಗುತ್ತದೆ. ಫೆಬ್ರುವರಿ ೩ ರಿಂದ ಜೂನ ೧೪ ರ ವರೆಗಿನ ಏಳನೇ ಗುರು ಇರುವ ಅವಧಿಯಲ್ಲಿ ಯಾವ ವಿದ್ಯಾರ್ಥಿಗಳು ಪರೀಕ್ಷೆಗೆ ಕಟ್ಟುವರೋ ಅವರು ತೇರ್ಗಡೆ ಆಗುವವರೇನೋ ನಿಜ. ಆದರೆ ಕಳೆದ ವರುಷ ಗಳಿಸಿದ್ದ ಶಿಷ್ಯ ವೃತಿ, ವಿದ್ಯಾರ್ಥಿ ವೇತನ ಮುಂದುವರಿಸಲು ಹೆಣಗಾಡಬೇಕಾಗುತ್ತದೆ. ಒಟ್ಟಿನಲ್ಲಿ ಈ ರಾಶಿಯವರಿಗೆ ಈ ವರುಷ ಮಿಶ್ರಫಲದಾಯಕವಿದ್ದು, ಉದ್ಯೋಗ ಆರ್ಥಿಕದಲ್ಲಿ ಪ್ರಗತಿದಾಯಕ ಇದ್ದರೆ ಕೌಟುಂಬಿಕ, ಶೈಕ್ಷಣಿಕ ದೃಷ್ಟಿಯಿಂದ ಪ್ರತಿಕೂಲ. ಇದ ರಂತೆ ಕಾರ್ಮಿಕರಿಗೂ, ಬಾಹ್ಯ ಹಾಗು ತಾಂತ್ರಿಕ ವರ್ಗದವರಿಗೆ ಪ್ರಗತಿದಾಯಕವಿದ್ದರೆ, ಬುದ್ಧಿ ಜೀವಿಗಳಿಗೆ ಪ್ರತಿಕೂಲವು. ಗುರುವಿನ ಅಶುಭ ಫಲ ಕಡಿಮೆ ಮಾಡಿಕೊಳ್ಳಲು ಗುರುವಿನ ಶಾಂತಿ ಬೃಹಸ್ಪತಿ ಸ್ತೋತ್ರ, ಶ್ರೀ ಗುರುದತ್ತ ಇಲ್ಲವೆ ಶ್ರೀ ರಾಘವೇಂದ್ರಸ್ವಾಮಿ ನಾಮಸ್ಮರಣೆಯಿಂದ ಅನಿಷ್ಟ ನಿವಾರಣೆ ಆಗುತ್ತದೆ.



ವೃಶ್ಚಿಕ

ಈ ರಾಶಿಯ ಎಲ್ಲ ವರ್ಗದವರಿಗೆ ಎಲ್ಲ ದೃಷ್ಟಿಯಿಂದಲೂ ಇದು ಪ್ರೋತ್ಸಾಹ ದಾಯಕ ವರುಷವಾಗಿದೆ.

ಈ ರಾಶಿಯವರ ಈ ವರುಷದ ಗ್ರಹಸ್ಥಿತಿ ಯನ್ನು ನೋಡಲಾಗಿ, ಕಳೆದ ಎರಡೂವರೆ ವರುಷದಿಂದ ನಿಮ್ಮ ರಾಶಿಯಲ್ಲಿ ಕ್ಯಾಂಪ ಮಾಡಿದ್ದ ಶನಿಯು ಬರುವ ಡಿಸೆಂಭರ ೧೭ ರಿಂದ ನಿಮ್ಮ ರಾಶಿಯನ್ನು ಬಿಟ್ಟು ಮಗ್ಗಲು ಮನೆಗೆ (ಧನು ರಾಶಿಗೆ) ಹೋಗುವುದರಿಂದ ಎರಡನೇಯವನಾಗಿ ಅಶುಭ ಫಲದ ಪ್ರಮಾಣ ಕಡಿಮೆ ಮಾಡುವನು. ಇದರಂತೆ ವರುಷ ಪ್ರಾರಂಭದ ಮೂರು ತಿಂಗಳು ಐದನೇ ಹಾಗು ಕೊನೆಯ ನಾಲ್ಕು ತಿಂಗಳು ಕಾಲ ಏಳನೇ ಗುರುವಿನ ಶುಭ ಫಲವಂತೂ ಇದ್ದೇ ಇರುತ್ತದೆ. ಆದರೆ ಮಾರ್ಚ ೬ ರಿಂದ ಬರುವ ಚತುರ್ಥ ರಾಹುವಿನ ಅನಿಷ್ಟ ಫಲ ವರುಷಾಂತ್ಯದವರೆಗೆ ಇರುತ್ತದೆ.

ಆರೋಗ್ಯ ದೃಷ್ಟಿಯಿಂದ ನೋಡಿದರೆ ಮುಕ್ಕಾಲು ಅವಧಿಯ ವರೆಗೆ ಚೆನ್ನಾಗಿದ್ದರೂ ನವೆಂಬರ ೧೫ ರಿಂದ ಡಿಸೆಂಬರ ೧೬ ರ ವರೆಗೆ, ಫೆಬ್ರುವರಿ ೧೨ ರಿಂದ ಮಾರ್ಚ ೧೪ ರ ವರೆಗೆ ಹಾಗು ಜೂನ ೧೫ ರಿಂದ ಜುಲೈ ೧೫ ರ ವರೆಗಿನ ಕಾಲವಲ್ಲಿ ಮಾತ್ರ ಕೆಡಬಹುದಾಗಿದೆ. ಅಲ್ಲದೇ ಈ ಅವಧಿಯಲ್ಲಿ ಶತ್ರುಪೀಡೆ, ಅಪಘಾತದ ಭಯವೂ ಉಂಟು. ಆದ್ದರಿಂದ ವಾಹನ ಚಾಲಕ, ಪ್ರವಾಸಿ ಉದ್ಯೋಗಸ್ಥ, ವರ್ಕಶಾಪ, ಮಶಿನ ಶಾಪಗಳಲ್ಲಿ ಕೆಲಸ ಮಾಡುವ ತಾಂತ್ರಿಕ ಕೆಲಸಗಾರರು, ವಿಶೇಷ ಎಚ್ಚರಿಕೆಯಲ್ಲಿರುವುದು ಅವಶ್ಯ. ಪಂಚಮ ಹಾಗು ಏಳನೇ ಗುರುವಿನ ಶುಭಫಲವು ಬಹಳ ಅವಧಿಯವರೆಗೆ ಇರುವುದರಿಂದ ನಿಮ್ಮ ಆರ್ಥಿಕಸ್ಥಿತಿ ಈ ವರುಷ ಸುಧಾರಿಸುತ್ತದಲ್ಲದೇ ಸಾಲಗಾರರ ಕಾಟದಿಂದಲೂ ಮುಕ್ತರಾಗುವಿರಿ. ಇಷ್ಟೆ ಅಲ್ಲದೇ ಡಿಸೆಂಬರ್ ೧೫ ರಿಂದ ಫೆಬ್ರುವರಿ ೧೨ ರವರೆಗೆ ಎಪ್ರಿಲ್ ೧೨ ರಿಂದ ಮೇ ೧೫ ರ ವರೆಗೆ ಜುಲೈ ೧೫ ರಿಂದ ಅಕ್ಟೋಬರ್ ೧೮ ರ ವರೆಗಿನ ಈ ಆರು ತಿಂಗಳ ಕಾಲದಲ್ಲಿ ನಿರೀಕ್ಷಿಸದ ಮೂಲದಿಂದ ಹಣ ಸಂದಾಯವಾಗುವುದಲ್ಲದೆ ದತ್ತಕ, ವಾರಸಾ, ಬಕ್ಷೀಸ್, ಬಹುಮಾನ, ಲಾಟರಿ, ಮೊದಲಾದ ರೀತಿಯಿಂದ ಆಕಸ್ಮಿಕ ಧನಪ್ರಾಪ್ತಿಯಾಗಿ ನಿಮ್ಮ ಆರ್ಥಿಕ ಸ್ಥಿತಿ ಹಿಡಿತದ ಲ್ಲಿರುತ್ತದೆ. ಆದರೆ ಫೆಬ್ರುವರಿ ೧೨ ರಿಂದ ಮಾರ್ಚ ೧೪ ರ ವರೆಗೆ ಹಾಗೂ ಮೇ ೧೫ ರಿಂದ ಜುಲೈ ೧೫ ರ ವರೆಗಿನ ಮೂರು ತಿಂಗಳ ಕಾಲ ಆದಾಯ ಕ್ಕಿಂತಲೂ ವೆಚ್ಚ ವಿಪರೀತ. ದಿವಾಣಿ, ನೌಕರಿ ರಾಜಕೀಯಗಳಿಗೆ ಸಂಬಂಧಿಸಿದ ವ್ಯಾಜ್ಯಗಳಿಗೆ ಉತ್ತರಾರ್ಧದಲ್ಲಿ ಯಶಸ್ಸು ದೊರೆತರೆ, ಫೌಜುದಾರಿ ವ್ಯಾಜ್ಯಗಳಿಗೆ ಪೂರ್ವಾರ್ಧದಲ್ಲಿ ಯಶಸ್ಸು ಸಿಗುತ್ತದೆ.

ಈ ರಾಶಿಯ ನೌಕರ ವರ್ಗದವರಿಗೆ ಮಧ್ಯದ ೫ ತಿಂಗಳ ಹೊರತಾಗಿ ಉಳಿದ ಅವಧಿ ಉತ್ತೇಜಕ ವಿದೆ. ಆದರಲ್ಲಿಯೂ ಡಿಸೆಂಬರ್ ೧೫ ರಿಂದ ಫೆಬ್ರುವರಿ ೧೨ ರ ವರೆಗೆ, ಎಪ್ರಿಲ ೧೨ ರಿಂದ ಮೇ ೧೫ ರ ವರೆಗೆ ಹಾಗು ಜುಲೈ ೧೫ ರಿಂದ ಅಕ್ಟೋಬರ್ ೧೮ ರ ವರೆಗಿನ ಈ ಆರು ತಿಂಗಳ ಕಾಲ ಪ್ರೋತ್ಸಾಹದಾಯಕವಿದ್ದು, ನೌಕರಿಯಲ್ಲಿ ಬಡತಿ, ಅನುಕೂಲ ಜಾಗೆಗೆ ಬದಲಿ, ನಿರುದ್ಯೋಗಿ ಗಳಿಗೆ ಉದ್ಯೋಗ ಲಭಿಸುವಿಕೆ, ಹಂಗಾಮಿ ನೌಕರ ವರ್ಗದವರಿಗೆ ಉದ್ಯೋಗದಲ್ಲಿ ಸ್ಥಿರತೆ ಮೊದ ಲಾದ ಶುಭ ಘಟನೆಗಳು ಜರುಗುವವು. ಗಿರಣಿ ಕಾರಖಾನೆಗಳ ಕಾರ್ಮಿಕ ವರ್ಗದವರಿಗೆ, ಬಾಹ್ಯ ಕೆಲಸಗಾರರಿಗೆ, ವರ್ಕಶಾಪ್, ಮಶೀನ ಶಾಪ್ ಗಳಲ್ಲಿ ಕೆಲಸ ಮಾಡುವ ತಾಂತ್ರಿಕ ವರ್ಗದವರಿಗೆ ಶನಿ ರಾಹುಗಳು ಅಶುಭರಿರುವುದರಿಂದ ಈ ವರುಷ ಹೇಳಿಕೊಳ್ಳುವಷ್ಟು ಪ್ರೋತ್ಸಾಹದಾಯ ಕವಾಗಿಲ್ಲ. ಈ ರಾಶಿಯ ಕೃಷಿ ವರ್ಗದವರಿಗೆ ಪೂರ್ವಾರ್ಧವು ಪ್ರತಿಕೂಲವಿರುವುದರಿಂದ, ಮುಂಗಾರಿ ಬೆಳೆ ಕೈ ಕೊಡುತ್ತದೆ. ಆದರೆ ಉತ್ತರಾರ್ಧವು ಉತ್ತೇಜಕವಿರುವುದರಿಂದ, ಹಿಂಗಾರಿ ಬೆಳೆ ಕೈ ಹಿಡಿಯುವುದರಿಂದ ಹಿಂದಿನ ಸಾಲಗಳೆಲ್ಲ ತೀರಿಸಿ ಹೊಸ ಜಾಗೆ, ಹೊಲ ಗದ್ದೆ ತೋಟ ದನ ಕರು ಟ್ರಾಕ್ಟರ ಟ್ರಕ್ ಪಂಪಸೆಟ್ಟ ಮೊದಲಾದ ಕೃಷಿ ಉಪಕರಣಗಳನ್ನು ಕೊಳ್ಳುವ ಶಕ್ತಿ ಬರುತ್ತದೆ.

ಈ ರಾಶಿಯ ಸಾಹಿತಿ, ಲೇಖಕ, ಕಲಾವಿದ, ಪತ್ರಿಕೋದ್ಯಮಿ, ಶಿಕ್ಷಕ, ಅಧ್ಯಾಪಕ, ಚಾರ್ಟರ್ಡ್ ಅಕೌಂಟಂಟ ಡಾಕ್ಟರ, ವಕೀಲ, ನ್ಯಾಯಾಧೀಶ ಮೊದಲಾದ ಬುದ್ಧಿ ಜೀವಿಗಳಿಗೆಲ್ಲ ವರುಷ ಪ್ರಾರಂಭದ ಮೂರು ತಿಂಗಳು ಐದನೇ ಹಾಗು ಕೊನೆಯ ನಾಲು


ತಿಂಗಳುಗಳು ಏಳನೇ ಶುಭ ಫಲದಾಯಕ ಗುರುವಿನಿಂದಾಗಿ ಉದ್ಯೋಗದಲ್ಲಿ ಪ್ರಗತಿ, ಸರಕಾರದಿಂದಲೂ, ಸಂಘ ಸಂಸ್ಥೆಗಳಿಂದಲೂ ಪ್ರಶಸ್ತಿ ಪದಕ ಬಕ್ಷೀಸ್, ಬಹುಮಾನಾದಿ ದೊರೆಯುವುದಲ್ಲದೇ ಗೌರವ ಧನ ಮಾಸಾಶನ ಮೊದಲಾದ ದ್ರವ್ಯಾನುಕೂಲತೆ ಆಗಿ ವಾಹನ ಆಸ್ತಿ ಮನೆ ಸಂಪಾದಿಸುವರು. ತೀರ್ಥ ಯಾತ್ರೆ, ಪರದೇಶ ಪರ್ಯಟನಗಳಂಥ ಶುಭ ಸ್ಮರಣೀಯ ಘಟನೆಗಳು ಜರುಗುವವು. ಆದರೆ ಫೆಬ್ರುವರಿ ೧೨ ರಿಂದ ಮಾರ್ಚ ೧೫ ರ ವರೆಗೆ ಹಾಗೂ ಮೇ ೧೫ ರಿಂದ ಜುಲೈ ೧೫ ರ ವರೆಗಿನ ಮೂರು ತಿಂಗಳ ಕಾಲ ತುಸು ಪ್ರತಿಕೂಲ. ಮಿತ್ರರೇ ಶತ್ರುಗಳಾಗುವುದರಿಂದ ಮಿಥ್ಯಾಪವಾದ ಭಯ. ಇದರಂತೆ, ಈ ರಾಶಿಯ ಸ್ವತಂತ್ರ ವ್ಯಾಪಾರ ಉದ್ಯೋಗಸ್ಥರಿಗೆ, ಗಿರಣಿ ಕಾರಖಾನೆ, ಚಾಳ ಟಾಕೀಜ ಹೊಟೆಲ್‌ಗಳಂಥ ಮಾಲಕ ವರ್ಗದವರಿಗೆ ಮಿಶ್ರಫಲದಾಯಕ ವರುಷವಿದು. ವರುಷದ ಪ್ರಾರಂಭದ ಮೂರು ತಿಂಗಳು ಹಾಗೂ ಕೊನೆಯ ನಾಲ್ಕು ತಿಂಗಳ ಕಾಲ ಪ್ರೋತ್ಸಾಹದಾಯಕವಾಗಿದ್ದು ಉದ್ಯೋಗದಲ್ಲಿ ಪ್ರಗತಿ ಆಗುವುದಲ್ಲದೇ ಹೊಸ ಉದ್ಯೋಗ ಇಲ್ಲವೇ ಇದ್ದ ಉದ್ಯೋಗದ ಹೊಸ ಶಾಖೆಗಳನ್ನು ಪ್ರಾರಂಭಿಸಬಹುದಾಗಿದೆ. ಅಲ್ಲದೇ ಉದ್ಯೋಗಕ್ಕೆ ಬೇಕಾಗಬಹುದಾದ ಹೊಸ ಉಪಕರಣಗಳನ್ನು ಕೊಳ್ಳಬಹುದಾಗಿದೆ. ಇಲ್ಲವೇ ನವೀಕರಿಸಬಹುದಾಗಿದೆ. ಆದರೆ ಫೆಬ್ರುವರಿ ೧೨ ರಿಂದ ಜುಲೈ ೧೫ ರ ವರೆಗಿನ ಮಧ್ಯದ ಐದು ತಿಂಗಳ ಕಾಲ ತಾಪದಾಯಕವಾಗಿದ್ದು, ಸರಕಾರದ ನಿರ್ಬಂಧ, ಕಾರ್ಮಿಕರ ಅಸಹಕಾರ, ಮಶಿನರಿ ತೊಂದರೆ, ಉದ್ಯೋಗದಲ್ಲಿ ವೃತ್ತಿಯಲ್ಲಿ ತೊಂದರೆಗಳನ್ನು ಎದುರಿಸಬೇಕಾಗುತ್ತದೆ.

ವರುಷ ಪ್ರಾರಂಭದ ಮೂರುತಿಂಗಳವರೆಗೆ, ಐದನೇ ಹಾಗೂ ಕೊನೆಯ ನಾಲ್ಕು ತಿಂಗಳವರೆಗೆ ಏಳನೇ ಶುಭ ಫಲದಾಯಕ ಗುರುವಿನಿಂದಾಗಿ ಈ ರಾಶಿಯ ವಧೂವರರಿಗೆ ವಿವಾಹ ಯೋಗ ಕೂಡಿ ಬಂದಿದ್ದು, ನಿರ್ವಿಘ್ನ ವಿವಾಹ ಆಗುವದು. ಆದರೆ ವಿವಾಹಿತ ಪುರುಷ ಗೃಹಿಣಿಯರಿಗೆ ಇದು ಮಿಶ್ರಫಲದಾಯಕ ವರುಷವಾಗಿದೆ. ಪೂರ್ವಾರ್ಧವು ಪ್ರತಿಕೂಲವಿದ್ದು, ನಿತ್ಯದ ಗೃಹಕಲಹದಿಂದ, ಮಾನಸಿಕ ನೆಮ್ಮದಿ ಇರುವುದಿಲ್ಲ. ಆದರೆ ಉತ್ತರಾರ್ಧವು ಉತ್ತೇಜಕವಿದ್ದು ಆಪ್ತೇಷ್ಟರಲ್ಲಿಯ ತಪ್ಪು ತಿಳಿವಳಿಕೆ ದೂರಾಗುವುದಲ್ಲದೇ ಮತ್ತೆ ಪರಸ್ಪರ ವಿಶ್ವಾಸ ಕುದುರುವುದು. ಇಷ್ಟೇ ಅಲ್ಲದೆ ಬೆಲೆಯುಳ್ಳ ವಸ್ತು ಒಡವೆಗಳ ಖರೀದಿ. ಆಸ್ತಿ ವಾಹನ ಮನೆ ಸಂಪಾದನೆ ಮೊದಲಾದ ಶುಭ ಘಟನೆಗಳು ಜರುಗುವವು. ಗರ್ಭಿಣಿಯರಿಗೆ ಕೂಡ ಇದು ಮಿಶ್ರಫಲದಾಯಕ ವರುಷವಾಗಿದೆ. ವರುಷ ಪ್ರಾರಂಭದ ಮೂರು ತಿಂಗಳು ಹಾಗೂ ಕೊನೆಯ ನಾಲ್ಕು ತಿಂಗಳಲ್ಲಿ ಹೆರಿಗೆ ಆದರೆ ಸುಖಪ್ರಸವವು ಫೆಬ್ರುವರಿ ೧೨ ರಿಂದ ಜುಲೈ ೧೫ ರ ವರೆಗಿನ ಮಧ್ಯಗ ಐದು ತಿಂಗಳಲ್ಲಿ ಆದರೆ ಕಷ್ಟ ಪ್ರಸವವು.

ಈ ರಾಶಿಯ ರಾಜಕೀಯ ಸಾಮಾಜಿಕ ಕಾರ್ಯಕರ್ತರಿಗೆ ಮಿಶ್ರಫಲದಾಯಕ ವರುಷವಿದ್ದು. ಪೂರ್ವಾರ್ಧವು ಪ್ರತಿಕೂಲವಿದ್ದು ಉತ್ತರಾರ್ಧದಲ್ಲಿ ಜರುಗಬಹುದಾದ ಯಾವುದೇ ಚುನಾವಣೆಗೆ ಸ್ಪರ್ಧಿಸಿದಲ್ಲಿ ಯಶಸ್ಸು. ಪೂರ್ವಾರ್ಧದಲ್ಲಿ ಸ್ಪರ್ಧಿಸಿದರೆ ಅಪಜಯ.

ಈ ರಾಶಿಯ ವಿದ್ಯಾರ್ಥಿಗಳಿಗೆ ಮಿಶ್ರಫಲದಾಯಕ ವರುಷವಿದು. ಫೆಬ್ರುವರಿ ೧೨ ರಿಂದ ಜೂನ ೧೯ರ ವರೆಗಿನ ಐದು ತಿಂಗಳ ಕಾಲ ಆರನೇ ಗುರುವಿನಿಂದಾಗಿ ತಾಪದಾಯಕ ಕಾಲವಾಗಿದೆ. ಮನೆಯಲ್ಲಿಯ ವಿಷಮ ವಾತಾವರಣ ಶಿಕ್ಷಕರ ಅವಕೃಪೆ ಶಾರೀರಿಕ ಪೀಡೆಯಿಂದಲೂ ಪರೀಕ್ಷೆ ಕಟ್ಟುವುದೇ ದುಸ್ತರವಾಗುತ್ತದೆ. ಆದರೆ ಜೂನ ೧೯ ರ ನಂತರ ಅನುಕೂಲ ಕಾಲ ಬರುವುದರಿಂದ ಹೇಗೋ ತೇರ್ಗಡೆ ಆಗುವರು ಹಾಗೂ ಶಿಕ್ಷಣ ಮುಂದುವರೆಸುವರು.

ಒಟ್ಟಿನಲ್ಲಿ ಈ ರಾಶಿಯ ಎಲ್ಲ ವರ್ಗದವರಿಗೆ ವರುಷದ ಏಳು ತಿಂಗಳು ಶುಭವಿದ್ದರೆ ಐದು ತಿಂಗಳು ಅಶುಭವಿರುತ್ತವೆ.



ಧನು

ಈ ರಾಶಿಯ ಎಲ್ಲ ವರ್ಗದವರಿಗೂ ಎಲ್ಲ ದೃಷ್ಟಿಯಿಂಧ ಪ್ರತಿಕೂಲ ಹಾಗೂ ತಾಪದಾಯಕ ವರುಷವಿದು,

ಈ ರಾಶಿಯವರ ಈ ವರುಷದ ಗ್ರಹಗತಿಯನ್ನು ಅವಲೋಕಿಸಲಾಗಿ ೧೭-೧೨-೧೯೮೭ ರಿಂದ ಅಶುಭ ಫಲದಾಯಕ ಹನ್ನೆರಡನೇ ಶನಿ ನಿರ್ಗಮಿಸಿದರೂ ಅಂದಿನಿಂದಲೇ ಬರುವ ಜನ್ಮಸ್ಥ (ಒಂದನೇ) ಶನಿಯು ಕೂಡ ಹಾನಿದಾಯಕನೇ. ಇದರಂತೆ ವರುಷದ ಪ್ರಾರಂಭದ ಮೂರು ತಿಂಗಳು ನಾಲ್ಕನೇ ಗುರುವು. ವರುಷಾಂತ್ಯದ ನಾಲ್ಕು ತಿಂಗಳು ಆರನೇ ಅಶುಭ ಫಲದಾಯಕ ಗುರು, ಆದರೆ ಮಧ್ಯದ ಐದು ತಿಂಗಳು ಮಾತ್ರ ಐದನೇ ಗುರುವಿನ ಶುಭಫಲ ಸಿಗುತ್ತದೆ. ಇದರಂತೆ ಸಂವತ್ಸರಾಂತ್ಯದ ವರೆಗೆ ಚತುರ್ಥ ರಾಹುವಿನ ಅಶುಭ ಫಲವಿದ್ದು ೬-೩-೧೯೮೮ ರಿಂದ ೩ ನೇ ರಾಹುವಿನ ಶುಭ ಫಲ ದೊರೆಯುತ್ತದೆ. ಹೀಗೆ ಗ್ರಹಸ್ಥಿತಿ ಇರುವುದರಿಂದ ಈ ರಾಶಿಯ ವರ್ಗದವರಿಗೂ ಎಲ್ಲ ದೃಷ್ಟಿಯಿಂದಲೂ ತಾಪದಾಯಕ ವರುಷವಾಗಿದೆ. ಈ ಎಲ್ಲ ಸಂಕಟಗಳಿಂದ ಪಾರಾಗಲು ಆ ವಿಘ್ನೇಶ್ವರನನ್ನು ಪ್ರಾರ್ಥಿಸಿರಿ.

ಈ ರಾಶಿಯವರ ಆರೋಗ್ಯ ವರುಷವಿಡೀ ಚೆನ್ನಾಗಿರುವುದಿಲ್ಲ. ಒಂದಿಲ್ಲೊಂದು ಕಿರುಕುಳ ಪೀಡೆ ಉಪದ್ರವ ಇದ್ದೇ ಇರುತ್ತದೆ. ಅದರಲ್ಲಿಯೂ ನವೆಂಬರ ೧೫ ರಿಂದ ಜನೇವರಿ ೧೪ ರ ವರೆಗೆ ಜೂನ ೧೫ ರಿಂದ ಸಪ್ಟೆಂಬರ ೧೬ ರ ವರೆಗಿನ ಈ ಐದು ತಿಂಗಳ ಕಾಲವಂತೂ ತೀರ ಪ್ರತಿಕೂಲದ್ದು. ಈ ಕಾಲದಲ್ಲಿ ರೋಗ ಉಲ್ಬಣವಾಗುವುದಲ್ಲದೇ ಶತ್ರುಪೀಡೆ ಅಪಘಾತಾದಿ ಭಯ ಉಂಟು. ಆದ್ದರಿಂದ ವಾಹನ ಚಾಲಕರು ಮಶಿನರಿ ಕೆಲಸಗಾರರು ಬಾಹ್ಯ ಹಾಗೂ ತಾಂತ್ರಿಕ ಕೆಲಸಗಾರರು ಮೇಲೆ ಬರೆದ ಅವಧಿಯಲ್ಲಿ ವಿಶೇಷ ಎಚ್ಚರಿಕೆಯಲ್ಲಿರುವುದು ಅವಶ್ಯ. ನಿಮ್ಮ ಆರ್ಥಿಕ ಸ್ಥಿತಿಯು ಈ ವರುಷ ಗಂಭೀರ ಸ್ವರೂಪ ತಾಳುವುದು. ಡಾಕ್ಟರ ವಕೀಲರ ಬಿಲ್ಲುಗಳಿಗಾಗಿ ಅತಿಥಿ ಸತ್ಕಾರ್ಯದಲ್ಲಿಯೇ ನಿಮ್ಮ ಬಹಳಷ್ಟು ಹಣ ಖರ್ಚಾಗುತ್ತದೆ




ನಾವು ಪರಿಶುದ್ಧರು — ನಮಗೆ ಅವಕಾಶವೇ ಇಲ್ಲ!
ಅಮ್ಮಾ- ಅಂಗಡಿಯಿಂದ ಸಾಮಾನು ತಂದು ಕೊಟ್ರೆ ನನಗೆಷ್ಟು ಕಮಿಷನ್ ಕೊಡ್ತೀರ?
ಭ್ರಷ್ಟಾಚಾರ
ಭಯ ಯಾಕೆ, ಸಾರ್- ವ್ಯತಿರಿಕ್ತವಾಗಿ ಸಾಬೀತು ಆಗೋವರೆಗೂ ನಾವು ನಿರಪರಾಧಿಗಳೇ!

ಆದಾಯ ಅಲ್ಪ, ಖರ್ಚು ವಿಪರೀತ. ಸಾಲಗಾರರ ಕಾಟದಿಂದಾಗಿ ಹೊಸ ಸಾಲಕ್ಕೆ ಪರಿದಾಡುವುದ ರಲ್ಲಿಯೇ ಶಕ್ತಿಹ್ರಾಸವಾಗುತ್ತದೆ. ಆದರೆ ಫೆಬ್ರುವರಿ ೩ ರಿಂದ ಜೂನ ೧೯ ರ ವರೆಗಿನ ಮಧ್ಯದ ಐದು ತಿಂಗಳ ಕಾಲದಲ್ಲಿರುವ ಪಂಚಮ ಗುರುವಿನಿಂದಾಗಿ ನಿರೀಕ್ಷಿಸಿದ ಮೂಲದಿಂದ ಹಣ ಬರುವುದರಿಂದ ಅವಮಾನದ ಪ್ರಸಂಗದಿಂದ ಪಾರಾಗುವಿರಿ. ಆದರೆ ನವೆಂಬರ ೧೫ ರಿಂದ ಜನೇವರಿ ೧೪ ರ ವರೆಗೆ ಹಾಗೂ ಜೂನ ೧೫ ರಿಂದ ಸಪ್ಟೆಂಬರ ೧೬ ರ ವರೆಗಿನ ಈ ಐದು ತಿಂಗಳು ಕಾಲ ನಿಮ್ಮ ಆರ್ಥಿಕ ತಾಪತ್ರಯ ಪರಾಕಾಷ್ಠೆ ಮುಟ್ಟಿದರೂ ಅನಿರೀಕ್ಷಿತ ಸಹಾಯದಿಂದ ಸಂಕಟದಿಂದ ಮುಕ್ತರಾಗುವಿರಿ. ಕೋರ್ಟು ಕಚೇರಿ ಹಾಗೂ ಇತರ ಯಾವುದೆ ಪ್ರಕಾರದ ವ್ಯಾಜ್ಯಗಳಿಗೆ ಕೈ ಹಾಕದಿರುವುದೇ ಹಿತಕರವು.

ಗುರು ಶನಿಯರು ಬಹಳ ಅವಧಿಯ ವರೆಗೆ ಅಶುಭರಿರುವುದರಿಂದ ಈ ರಾಶಿಯ ನೌಕರದಾರರಿಗೆಲ್ಲ ತಾಪದಾಯಕ ವರುಷವಿದು. ಮೇಲಧಿಕಾರಿಗಳ ಉಪಟಳಕ್ಕೆ ಇಲ್ಲವೆ ಹಿಂಬಡತಿಯ ಮೂಲಕ ರಾಜೀನಾಮೆ ಕೊಡುವ ಪ್ರಸಂಗವೂ ಬರಬಹುದಾಗಿದೆ. ತಾಳಿದವನೇ ಬಾಳಿಯಾನು ಎಂಬುದನ್ನು ನೆನೆಪಿನಲ್ಲಿಡಿರಿ. ನಿರುದ್ಯೋಗಿಗಳಿಗೆ ಅಸಹನೀಯ ವರುಷವಾದರೂ. ಫೆಬ್ರುವರಿಯಿಂದ ಜೂನದ ವರೆಗಿನ ಕಾಲದಲ್ಲಿ ತುಸು ಆಸರೆ ಸಿಗುತ್ತದೆ. ಹಂಗಾಮಿ ನೌಕರ ವರ್ಗದವರಿಗೆ ಅಸ್ಥಿರತೆಯಲ್ಲಿಯೇ ಇದೊಂದು ವರ್ಷ ಕಳೆಯಬೇಕಾಗುತ್ತದೆ. ಈ ರಾಶಿಯ ಬಾಹ್ಯ ಹಾಗೂ ತಾಂತ್ರಿಕ ಕೆಲಸಗಾರರಿಗೂ ಶ್ರಮ ಜೀವಿಗಳಿಗೂ, ಗಿರಣಿ ಕಾರಖಾನೆಗಳ ಕಾರ್ಮಿಕರಿಗೂ ಶನಿ ರಾಹುಗಳು ಬಹಳ ಅವಧಿಯ ವರೆಗೆ ಅಶುಭರಿರುವುದರಿಂದ ನಿರುತ್ಸಾಹ ದಾಯಕ ವರುಷವಾಗಿದೆ. ಆದಾಗ್ಯೂ ಮಾರ್ಚ ೬ ರಿಂದ ಬರಲಿರುವ ಮೂರನೇ ರಾಹುವಿನಿಂದ ತುಸು ಅನುಕೂಲ ಕಾಲ ಬರುತ್ತದೆ. ರಾಜಿ ಹಾಗೂ ಹೊಂದಾಣಿಕೆ ಮನೋವೃತ್ತಿಯಿಂದ ಕೆಲ ಬೇಡಿಕೆಗಳು ಮಾರ್ಚದಿಂದ ಜೂನದ ವರೆಗೆ ಈಡೇರಬಹುದಾಗಿದೆ ಈ ರಾಶಿಯ ಕೃಷಿ ವರ್ಗದವರಿಗೆ ನಿರೀಕ್ಷಿಸಿದಂತೆ ಬೆಳೆ ಬರದಿರುವುದರಿಂದಲೂ, ಕಳವು. ತುಡುಗು ಬೆಂಕಿ ಮೊದಲಾದ ಅನಾಹುತಗಳಿಂದ ಸಾಲ ಮಾಡುವ ಇಲ್ಲವೆ ಹೊಲ ಮನೆಗಳನ್ನು ಒತ್ತಿ ಹಾಕುವ ಪ್ರಸಂಗ ಬರಬಹುದಾದರೂ ಹಿಂಗಾರಿ ಫಸಲು ತುಸು ಕೈ ಹಿಡಿಯುವುದರಿಂದ ತೊಂದರೆಗಳು ದೂರಾಗುತ್ತವೆ.


ಈ ರಾಶಿಯ ಸಾಹಿತಿ, ಲೇಖಕ, ಕಲಾವಿದ, ಪತ್ರಿಕೋದ್ಯಮಿ, ಚಾರ್ಟರ್ಡ ಅಕೌಂಟಂಟ ಶಿಕ್ಷಕ, ಅಧ್ಯಾಪಕ, ಡಾಕ್ಟರ, ವಕೀಲ, ನ್ಯಾಯಾಧೀಶ, ಮೊದಲಾದ ಬುದ್ಧಿ ಜೀವಿಗಳಿಗೆಲ್ಲ ವರುಷ ಪ್ರಾರಂಭದ ಮೂರು ತಿಂಗಳು ಚತುರ್ಥ ಗುರುವು. ವರುಷಾಂತ್ಯದ ನಾಲ್ಕು ತಿಂಗಳು ಆರನೇ ಅಶುಭ ಫಲದಾಯಕ ಗುರುವಿನಿಂದಾಗಿ ನಿರುತ್ಸಾಹದಾಯಕ ವರುಷವಾಗಿದೆ. ಆದರೆ ಫೆಬ್ರುವರಿ ೩ ರಿಂದ ಜೂನ ೧೯ ರ ವರೆಗಿನ ಮಧ್ಯದ ಐದು ತಿಂಗಳು ಕಾಲ ಪಂಚಮ ಗುರುವಿನಿಂದಾಗಿ ತುಸು ಪ್ರಗತಿ ಆದಾಗ್ಯೂ ಹೆಚ್ಚಿನ ಹವ್ಯಾಸಕ್ಕೆ ಈ ವರುಷ ಹೋಗದಿರುವುದೇ ಹಿತಕರವು. ಇದರಂತೆ ಈ ರಾಶಿಯ ಸ್ವತಂತ್ರ ವ್ಯಾಪಾರ ಉದ್ಯೋಗಸ್ಥರಿಗೂ, ಕಮಿಶನ ಏಜೆಂಟರಿಗೂ, ಹಂಚಿಕೆದಾರರಿಗೂ, ಗಿರಣಿ, ಕಾರಖಾನೆ, ಹೋಟೆಲ, ಚಾಳ, ಟಾಕೀಜಗಳ ಮಾಲಕ ವರ್ಗದವರಿಗೆ ಮಿಶ್ರ ಫಲದಾಯಕ ವರುಷವಿದು. ಪೂರ್ವಾರ್ಧವು ಪ್ರತಿಕೂಲವಿದ್ದು, ಸರಕಾರದ ನಿರ್ಬಂಧನೆ ಮತ್ತು ಕಾರ್ಮಿಕರ ನೌಕರರ ಅಸಹಕಾರ ಮಶಿನರಿ ತೊಂದರೆಯಿಂದ ಉದ್ಯೋಗ ಕುಂಠಿತವಾಗುತ್ತದೆ. ತನ್ಮೂಲಕ ಸಾಲ ಮಾಡುವ ಪ್ರಸಂಗ ಬರುತ್ತದೆ. ಆದರೆ ಉತ್ತರಾರ್ಧವು ಉತ್ತೇಜಕವಿದೆ. ಮಾರ್ಚ ೬ ರಿಂದಲೇ ಅನುಕೂಲ ಕಾಲ ಬರುತ್ತದೆ. ಉದ್ಯೋಗ ಚಟುವಟಿಕೆ ಪ್ರಾರಂಭವಾಗಿ ಪೂರ್ವಾರ್ಧದಲ್ಲಿ ಮಾಡಿದ ಸಾಲವನ್ನು ಉತ್ತರಾರ್ಧದಲ್ಲಿ ತೀರಿಸುವ ಶಕ್ತಿ ಬರುತ್ತದೆ.

ಈ ರಾಶಿಯ ವಧೂವರರಿಗೆ ಈ ವರುಷದ ಬಹಳ ಅವಧಿಯ ವರೆಗೆ ಗುರುವು ಅಶುಭನಿರುವುದರಿಂದ ವಿವಾಹಕ್ಕೆ ತೊಂದರೆ ಆದಾಗ್ಯೂ ಫೆಬ್ರುವರಿಯಿಂದ ಜೂನದ ವರೆಗಿನ ಮಧ್ಯದ ಕಾಲದಲ್ಲಿ ಬರುವ ಐದನೇ ಗುರುವಿನಿಂದಾಗಿ ನಿರ್ವಿಘ್ನವಾಗಿ ವಿವಾಹ ಜರುಗುವದು. ಉಳಿದ ಅವಧಿಯಲ್ಲಿ ವಿವಾಹ ಗೊತ್ತು ಮಾಡಿದಲ್ಲಿ ಮುಂದೂಡಬಹುದಾಗಿದೆ ಇಲ್ಲವೇ ಮುರುಗಡೆಯಾಗಬಹುದಾಗಿದೆ. ಈ ರಾಶಿಯ ವಿವಾಹಿತ ಪುರುಷರಿಗೂ, ಗೃಹಿಣಿಯರಿಗೂ ಅಶುಭ ಫಲದಾಯಕ ಗುರುವಿನಿಂದಾಗಿ ತಾಪದಾಯಕ ವರುಷವಾಗಿದೆ. ನಿತ್ಯದ ಗೃಹಕಲಹದಿಂದಲೂ, ಬಾಡಿಯ ಪ್ರಭಾವದಿಂದಲೂ, ಮನೆಯಲ್ಲಿಯ ವಿಷಮ ವಾತಾವರಣದಿಂದಲೂ ನಿದ್ರಾರಹಿತವಾದ ಹಲವು ರಾತ್ರಿಗಳನ್ನು ಕಳೆಯಬೇಕಾಗುತ್ತದೆ. ಅಲ್ಲದೇ ತಪ್ಪು ತಿಳಿವಳಿಕೆಯಿಂದಾಗಿ ಏಕತ್ರ ಕುಟುಂಬ ಒಡೆಯಬಹುದಾಗಿದೆ. ಆದರೆ ಫೆಬ್ರುವರಿ ೩ ರಿಂದ ಜೂನ ೧೯ ರ ವರೆಗಿನ ಕಾಲದಲ್ಲಿ ಬರುವ ಐದನೇ ಗುರುವಿನಿಂದಾಗಿ ಕೆದಡಿದ್ದ ಗೃಹ ಶಾಂತಿ ತುಸು ತಿಳಿಯಾಗುತ್ತದೆ. ಈ ರಾಶಿಯ ಗರ್ಭಿಣಿಯರಿಗೆ ಮಿಶ್ರ ಫಲದಾಯಕ ವರುಷವು. ಯಾರ ಹೆರಿಗೆಯು ಫೆಬ್ರುವರಿಯಿಂದ ಜೂನದ ವರೆಗೆ ಆಗುವುದೋ ಅವರದು ಸುಖಪ್ರಸವವು ಇದ್ದು. ಉಳಿದ ಅವಧಿಯಲ್ಲಿ ಹೆರಿಗೆ ಆದರೆ ಕಷ್ಟ ಪ್ರಸವವು. ಶಸ್ತ್ರಕ್ರಿಯೆ ಅನಿವಾರ್ಯವಾಗುತ್ತದೆ.

ಈ ರಾಶಿಯ ರಾಜಕೀಯ, ಸಾಮಾಜಿಕ ಕಾರ್ಯಕರ್ತರಿಗೆಲ್ಲ ತಾಪದಾಯಕ ವರುಷವಿದ್ದು. ಮಿತ್ರರೇ ಶತ್ರುಗಳಾಗುವುದರಿಂದ ಸ್ಥಾನ ಮಾನ ಅಧಿಕಾರಕ್ಕೆ ಚ್ಯುತಿ ಇದೆ. ಚುನಾವಣೆ ಮೊದಲಾದ ಜಂಜಾಟದಿಂದ ದೂರ ಇರುವುದೇ ಹಿತಕರ. ಆದಾಗ್ಯೂ ಫೆಬ್ರುವರಿಯಿಂದ ಜೂನದ ವರೆಗಿನ ಕಾಲದಲ್ಲಿ ಕಲುಷಿತ ವಾತಾವರಣ ತಿಳಿಯಾಗುತ್ತದೆ.

ವರುಷದ ಪ್ರಾರಂಭದ ಮೂರು ತಿಂಗಳ ಕಾಲ ನಾಲ್ಕನೇ ಗುರುವು. ಕೊನೆಯ ನಾಲ್ಕು ತಿಂಗಳ ಕಾಲ ಆರನೇ ಅಶುಭ ಫಲದಾಯಕ ಗುರುವಿನಿಂದಾಗಿ ಈ ರಾಶಿಯ ವಿದ್ಯಾರ್ಥಿಗಳಿಗೆ ಪ್ರತಿಕೂಲ ವರುಷವಿದು. ಶಿಕ್ಷಕರ ಅವಕೃಪೆಯಿಂದಾಗಿ, ಮನೆಯಲ್ಲಿಯ ವಿಷಮ ವಾತಾವರಣ ಶಾರೀರಕ ಪೀಡೆಯಿಂದಲೂ ಶಿಕ್ಷಣ ಮುಂದುವರೆಸುವುದೇ ಕಠಿಣವಾಗುತ್ತದೆ. ಆದಾಗ್ಯೂ ಫೆಬ್ರುವರಿ ೩ ರಿಂದ ಜೂನ ೧೯ ರ ವರೆಗಿನ ಕಾಲದಲ್ಲಿ ಬರುವ ಪಂಚಮ ಗುರುವಿನಿಂದಾಗಿ ತುಸು ಉತ್ತೇಜಕವಿದ್ದು. ಈ ಕಾಲದಲ್ಲಿ ಕಟ್ಟಿದ ವಿದ್ಯಾರ್ಥಿಗಳು ಹೇಗೋ ತೇರ್ಗಡೆ ಆಗುವರು. ಆದರೆ ಶ್ರೇಣಿ ದರ್ಜೆ ಸಿಗುವುದೇ ಕಠಿಣ, ವಿದ್ಯಾರ್ಥಿ ವೇತನ, ಶಿಷ್ಯವೃತ್ತಿಯನ್ನು ಕಳೆದುಕೊಳ್ಳಬಹುದಾಗಿದೆ.

ಒಟ್ಟಿನಲ್ಲಿ ಈ ರಾಶಿಯವರಿಗೆ ಮಿಶ್ರ ಫಲದಾಯಕ. ವರುಷದ ಏಳು ತಿಂಗಳು ಪ್ರತಿಕೂಲವಿದ್ದರೆ ಐದು ತಿಂಗಳುಗಳು ಪ್ರಗತಿದಾಯಕವಿರುತ್ತವೆ.



ಮಕರ

ಸಾಡೇಸಾತಿ ಹಾಗು ತೃತೀಯ, ಚತುರ್ಥ ಗುರುವಿನ ಅಶುಭ ಫಲದಿಂದ ಈ ರಾಶಿಯ ಎಲ್ಲ ವರ್ಗದವರಿಗೆ ಎಲ್ಲ ದೃಷ್ಟಿಯಿಂದಲೂ ತಾಪದಾಯಕ ಹಾಗು ಪ್ರತಿಕೂಲ ವರುಷವಿದು.

ಈ ರಾಶಿಯವರ ಈ ವರುಷ ಗ್ರಹಗತಿಯನ್ನು ಪರಿಶೀಲಿಸಲಾಗಿ ೧೬-೧೨-೧೯೮೭ರಿಂದ ಸಾಡೇ-ಸಾತಿ ಪ್ರಾರಂಭವಾಗುವುದರಿಂದ ವರುಷಾಂತ್ಯದ ವರೆಗೂ ಶನಿಯ ಅಶುಭ ಫಲದಾಯಕ ಅಲ್ಲದೇ ವರುಷದ ಪ್ರಾರಂಭದಿಂದ ಅಂದರೆ ಅಕ್ಟೋಬರ್ ೨೩ ರಿಂದ ಜೂನ್ ೧೮ ರ ವರೆಗೆ ೩ ನೇ ಹಾಗು ೪ ನೇ ಗುರುವಿನ ಅಶುಭಫಲ ಇರುತ್ತದೆ. ಆದರೆ ಜೂನ ೧೯ ರಿಂದ ವರುಷಾಂತ್ಯದವರೆಗೆ ಮಾತ್ರ ೫ ನೇ ಗುರುವಿನ ಶುಭಫಲ ದೊರೆಯುತ್ತದೆ. ಇದಲ್ಲದೇ ಕಳೆದ ವರುಷದಿಂದ ಶುಭಫಲ ಕೊಡುತ್ತಿದ್ದ ೩ ನೇ ರಾಹು ನಿರ್ಗಮಿಸಿ ೬-೩-೧೯೮೮ ರಿಂದ ಬರುವ ಎರಡನೇ ರಾಹು ಕೂಡ ಅಶುಭ ಫಲದಾಯಕನು. ಹೀಗೆ ಅನೇಕ ಗ್ರಹಗಳ ಅವಕೃಪೆಗೆ ಪಾತ್ರರಾದ ನಿಮಗೆ ಈ ವರುಷವೆಂದರೆ ಸತ್ವಪರೀಕ್ಷೆಯ ಕಾಲವು. ಪ್ರಾಮಾಣಿಕ. ಬುದ್ಧಿವಂತ ಪ್ರತಿಷ್ಠಿತರೆಂದು ಕೀರ್ತಿ ಪಡೆದ ನಿಮ್ಮನ್ನು ಜನ ಈಗ ತಿರಸ್ಕಾರದಿಂದ

ದೀಪಾವಳಿಯು ದೀಪ ಜ್ಯೋತಿಯು ಮನೆ-ಮನೆಗೂ ಹರುಷ ತರಲಿ

ಎಂ. ಎಸ್. ಶೇಬಣ್ಣವರ

ದಿನಪತ್ರಿಕೆ ಹಾಗೂ ಮ್ಯಾಗಝಿನ್‌ಗಳ ವಿತರಕರು

ಸಿ. ಬಿ. ಟಿ. ಧಾರವಾಡ-೫೮೦೦೦೧, (ಕರ್ನಾಟಕ)

ಇವುಗಳ ವಿತರಕರು : ಸಂಯುಕ್ತ ಕರ್ನಾಟಕ, ಡೆಕ್ಕನ ಹೆರಾಲ್ಡ್, ಇಂಡಿಯಾ ಟುಡೇ, ಲಿವಿಂಗ್ ಮಿಡಿಯಾ (ಪ್ರೈ.) ಲಿ., ಆನಂದ ಬಜಾರ ಪತ್ರಿಕಾ ಲಿ., ಸ್ಟಾರ ಆ್ಯಂಡ ಸ್ಟೈಲ್, ಮಿರರ್, ಈವ್ಸ್ ವಿಕ್ಲಿ, ದಿ ವೀಕ್ ಇಂಡಿಯಾ ಬುಕ್ ಹೌಸ, ಬ್ಲಿಝ್ ಪಬ್ಲಿಕೇಶನ್ (ಪ್ರೈ.) ಲಿ., ಕರಂಟ, ಪಬ್ಲಿಕೇಶನ್ಸ (ಪ್ರೈ.) ಲಿ:, ಮಿಡ್ಡಿ ವೇ, ಪಬ್ಲಿಕೇಶನ್ (ಪ್ರೈ.) ಲಿ., ಸ್ಪೋರ್ಟ್ಸ್‌ ವೀಕ್ ಸ್ಟಾರ ಡಸ್ಟ. ದೆಹಲಿ ಪ್ರೆಸ್ (ಪ್ರೈ.) ಲಿ., ಕಾಂಪಿಟೇಶನ್ ರಿವೀವ್, (ಪ್ರೈ.) ಲಿ., ಕಾಂಪಿಟೇಶನ್ ಎಡ್ವೈಜರ. ಕಾಂಪಿಟೇಶನ್ ಮಾಸ್ಟರ, ವಿಜಡಂ ಪಬ್ಲಿಕೇಶನ್, ಸಂಡೇ ಆಬ್ಜರ್‌ವರ್. ಸೈನ್ಸ ರಿಪೋರ್ಟರ್, ಸೈನ್ಸ ಏಜ್. ಮಿತ್ರ ಪ್ರಕಾಶನ (ಪ್ರೈ.) ಲಿ., ಮಲ್ಲಿಗೆ, ಬೊಂಬೆಮನೆ, ರಾಗಸಂಗಮ, ಉತ್ಥಾನ, ಬಾಲಮಿತ್ರ. ವಾರಪತ್ರಿಕೆ ಲಂಕಾ ದಹನ. ಅಭಿಮಾನ. ಸುಧಾ. ಮಯೂರ. ಕಸ್ತೂರಿ-ಕರ್ಮವೀರ. ಹಾಗೂ ವನಿತಾ ಚಂದಮಾಮಾ, ವಿಜಯಚಿತ್ರ ಇವುಗಳ ಠೋಕ ಮಾರಾಟಗಾರರು.

COMPETITION BOOK CENTRE

NO. 12, K.V.V. SANGH COMPLEX AZAD PARK ROAD,


DHARWAD-580 001.

An Exclusive Shop for Competition & Entrance Examination Books Women's Children's, Electronics, Computors, and General Readings

ಕಾಣತೊಡಗುವರು. ಬದಲಾದ ಪರಿಸ್ಥಿತಿಯನ್ನು ಧೈರ್ಯದಿಂದ ಎದುರಿಸಬೇಕಲ್ಲದೇ ಹತಾಶರಾಗ ಬೇಡಿರಿ. ಶ್ರೀ ಮಾರುತಿ ಹಾಗು ಶ್ರೀ ಗುರು-ದತ್ತನನ್ನು ಭಜಿಸಿರಿ ಇಲ್ಲವೇ ಶನಿ ಗುರು ಜಪ ಹಚ್ಚಿರಿ. ಎಲ್ಲವೂ ಸರಿಯಾಗುತ್ತದೆ.

ಈ ರಾಶಿಯವರ ಆರೋಗ್ಯ ವರುಷವಿಡೀ ಚೆನ್ನಾಗಿರದು. ಅದರಲ್ಲಿಯೂ ಡಿಸೆಂಬರ್ ೧೫ ರಿಂದ ಫೆಬ್ರುವರಿ ೧೨ ರ ವರೆಗೆ ಹಾಗು ಏಪ್ರಿಲ್ ೧೨ ರಿಂದ ಸೆಪ್ಟೆಂಬರ್ ೧೬ ರ ವರೆಗಿನ ಏಳು ತಿಂಗಳ ಅವಧಿಯಲ್ಲಿ ರೋಗ ಉಲ್ಬಣವಾಗುವುದಲ್ಲದೇ ಶತ್ರುಪೀಡೆ, ಅಪಘಾತದ ಭಯವೂ ಉಂಟು. ಆದುದರಿಂದ ಈ ಕಾಲದಲ್ಲಿ ವಾಹನ ಚಾಲಕರು, ಮಶಿನರಿ ಕೆಲಸಗಾರರು ವಿಶೇಷ ಬಾಹ್ಯ ಹಾಗೂ ತಾಂತ್ರಿಕ ಕೆಲಸಗಾರರು ಎಚ್ಚರಿಕೆಯಲ್ಲಿರುವುದು ಅವಶ್ಯವು. ನಿಮ್ಮ ಆರ್ಥಿಕ ಸ್ಥಿತಿಯು ಈ ವರುಷ ಗಂಭೀರ ಸ್ವರೂಪ ತಾಳುವುದು. ಡಾಕ್ಟರ, ವಕೀಲರ ಬಿಲ್ಲುಗಳಿ-ಗಾಗಿಯೇ ಹಾಗು ಅತಿಥಿಗಳ ಸತ್ಕಾರ್ಯದಲ್ಲಿಯೇ ಮುಕ್ಕಾಲು ಆದಾಯ ಖರ್ಚಾಗುವುದಲ್ಲದೆ. ಆದಾಯ ಅಲ್ಪ, ವೆಚ್ಚ ವಿಪರೀತ. ಹಳೇ ಸಾಲ ತೀರಿಸಲು ಹೊಸ ಸಾಲಕ್ಕೆ ಅಲೆಯುವುದ-ರಲ್ಲಿಯೇ ವರುಷವಿಡೀ ಕಳೆಯಬೇಕಾಗುತ್ತದೆ-ಯಾದರೂ ಜೂನ್ ೧೯ ರಿಂದ ಬರಲಿರುವ ಪಂಚಮ ಗುರುವಿನ ಶುಭಫಲದಿಂದ ನಿಮ್ಮ ಆರ್ಥಿಕ ಸ್ಥಿತಿ ಚೇತರಿಸಿಕೊಳ್ಳುತ್ತದೆ. ಇಷ್ಟೇ ಅಲ್ಲ, ಜೂನ್ ೧೯ ರಿಂದ ಆಗಸ್ಟ ೧೫ ರ ವರೆಗೆ ಹಾಗು ಅಕ್ಟೋಬರ ೧೮ ರಿಂದ ನವೆಂಬರ್ ೯ ರ ವರೆಗಿನ ಕಾಲದಲ್ಲಿ ನಿರೀಕ್ಷಿಸಿದ ಮೂಲದಿಂದ ದ್ರವ್ಯಾನುಕೂಲತೆಯಾಗುವುದರಿಂದ ಅವಮಾನದ ಪ್ರಸಂಗ ತಪ್ಪುವುದು. ಆದರೆ ಡಿಸೆಂಬರ್ ೧೫ ರಿಂದ ಫೆಬ್ರುವರಿ ೧೨ ರ ವರೆಗೆ, ಎಪ್ರಿಲ ೧೨ ರಿಂದ ಜೂನ್ ೧೮ ರ ವರೆಗೆ ಈ ಅವಧಿಯಲ್ಲಿ ನಿಮ್ಮ ಆರ್ಥಿಕ ಸ್ಥಿತಿಯು ಪರಾಕಾಷ್ಠೆ ಮುಟ್ಟಿ ಸತ್ವಪರೀಕ್ಷೆಯಾಗುವುದಾದರೂ ಅನಿರೀಕ್ಷಿತ ಧನಾಗಮನದಿಂದ ನೀವು ಪಾರಾಗುವಿರಿ. ಎರಡು ಪ್ರಬಲ ಗ್ರಹಗಳಾದ ಗುರು ಶನಿಯರು ಬಹಳ ಅವಧಿಯವರೆಗೆ ಅಶುಭರಿರುವುದರಿಂದ ಕೋರ್ಟು, ಕಛೇರಿ ಮೊದಲಾದ ಯಾವುದೇ ಪ್ರಕಾರದ ವ್ಯಾಜ್ಯಗಳಿಗೆ ಈ ವರುಷ ಕೈ ಹಾಕದಿರುವುದೇ ಹಿತಕರವು. ದಾವೆ ದಾಖಲು ಮಾಡುವುದು ಅನಿವಾರ್ಯವಿದ್ದಲ್ಲಿ ಜೂನ್ ೧೯ ರ ಮೇಲೆ ದಾಖಲು ಮಾಡಿ ವರುಷವಿಡೀ ಮುದ್ದತು ತೆಗೆದುಕೊಳ್ಳುತ್ತಾ ಮುಂದೂಡುವುದೇ ಹಿತಕರವು.

ಈ ರಾಶಿಯ ನೌಕರ ವರ್ಗದವರಿಗೆ ಪ್ರತಿಕೂಲ ವರುಷವಿದು. ಅದರಲ್ಲಿಯೂ ಡಿಸೆಂಬರ್ ೧೬ ರಿಂದ ಫೆಬ್ರುವರಿ ೧೨ ರ ವರೆಗೆ, ಏಪ್ರಿಲು ೧೨ ರಿಂದ ಜೂನ್ ೧೫ ರ ವರೆಗೆ ಹಾಗು ಜುಲೈ ೧೫ ರಿಂದ ಸೆಪ್ಟೆಂಬರ್ ೧೬ ರ ವರೆಗಿನ ಈ ಆರು ತಿಂಗಳ ಕಾಲ ತೀರ ಪ್ರತಿಕೂಲವಿದ್ದು ಈ ಅವಧಿಯಲ್ಲಿ ಅನಪೇಕ್ಷಿತ ಸ್ಥಳಗಳಿಗೆ ಬದಲಿ, ವರಿಷ್ಠರಿಂದ ಅಸಹನೀಯ ಕಿರುಕಳ, ಹಿಂಬಡತಿ



ಮೊದಲಾದ ಅಹಿತ ಘಟನೆಗಳಿಂದಾಗಿ ರಾಜಿನಾಮೆ ಕೊಡುವ ಪ್ರಸಂಗವೂ ಬರಬಹುದು. ಜೀವನವೆಂದರೆ ಸುಖ ದುಃಖಗಳ ಸಮ್ಮಿಶ್ರಣವು. ದು:ಖದ ನಂತರ ಸುಖವು ಬಂದೇ ಬರುತ್ತದೆ. ಅಶುಭಸ್ಯ ಕಾಲಹರಣಂ ಎಂಬಂತೆ ತಾಳ್ಮೆಯಿಂದ ಇದ್ದರೆ ಎಲ್ಲವೂ ಸರಿಯಾಗುತ್ತದೆ. ದುಡುಕಿನಿಂದ ಯಾವ ನಿರ್ಣಯ ಕೈಕೊಳ್ಳಬೇಡಿರಿ. ಇದ್ದುದರಲ್ಲಿಯೇ ಅಕ್ಟೋಬರ್ ೧೭ ರಿಂದ ಡಿಸೆಂಬರ್ ೧೬ ರ ವರೆಗೆ ಹಾಗು ಸಪ್ಟೆಂಬರ್ ೧೬ ರಿಂದ ನವೆಂಬರ್ ೯ ರ ವರೆಗಿನ ಕಾಲ ತುಸು ಅನುಕೂಲವಿದ್ದು ನಿರುದ್ಯೋಗಿಗಳಿಗೆ ಉದ್ಯೋಗ ಲಭಿಸುವಿಕೆ ನೌಕರ ವರ್ಗದವರಿಗೆ ವರಿಷ್ಠರ ಕಿರುಕಳ ಕಡಿಮೆ ಆಗುವಿಕೆ ಮೊದಲಾದ ಶುಭ ಘಟನೆಗಳು ಜರುಗಬಹುದಾಗಿದೆ. ಆದರೆ ಹಂಗಾಮಿ ನೌಕರ ವರ್ಗದವರಿಗೆ ಅಸ್ಥಿರತೆಯಲ್ಲಿಯೇ ಇದೊಂದು ವರುಷ ಕಳೆಯಬೇಕಾಗುತ್ತದೆ. ಈ ರಾಶಿಯ ಬಾಹ್ಯ ಹಾಗು ತಾಂತ್ರಿಕ ಕೆಲಸಗಾರರಿಗೆ, ಗಿರಣಿ ಕಾರಖಾನೆಯ ಕಾರ್ಮಿಕ ವರ್ಗದವರಿಗೂ ಶನಿ ರಾಹುಗಳು ಬಹಳ ಅವಧಿಯವರೆಗೆ ಅಶುಭರಿರುವುದರಿಂದ ಪ್ರತಿಕೂಲ ವರುಷವಿದು. ರಾಜಸಂಧಾನ ಮನೋಭಾವನೆಯಿಂದ ವರ್ತಿಸುವುದೇ ಹಿತಕರವು. ಇದ್ದುದರಲ್ಲಿಯೇ ಅಕ್ಟೋಬರ ೨೭ ರಿಂದ ಡಿಸೆಂಬರ್ ೧೬ ರ ವರೆಗೆ ಹಾಗು ಮಾರ್ಚ ೧೫ ರಿಂದ ಎಪ್ರಿಲ ೧೨ ರ ವರೆಗಿನ ಈ ಅಲ್ಪಾ-ವಧಿಯಲ್ಲಿ ಕೆಲ ಬೇಡಿಕೆಗಳು ಈಡೇರಬಹುದಾಗಿದೆ. ಎಲ್ಲ ಬೇಡಿಕೆಗಳಿಗೆ ಒತ್ತಾಯ ಮಾಡದೇ ಅರ್ಧಂ ತ್ಯಜತಿ ಪಂಡಿತಃ ಎಂಬ ನಾಣ್ಣುಡಿಯನ್ನು ನೆನಪಿನ-ಲ್ಲಿಡಿರಿ. ಶನಿ ರಾಹುಗಳು ಬಹಳ ಅವಧಿಯವರೆಗೆ ಅಶುಭರಿರುವುದರಿಂದ ಈ ರಾಶಿಯ ಕೃಷಿ ವರ್ಗದವರಿಗೆ ತಾಪದಾಯಕ ವರುಷವಾಗಿದೆ. ನಿರೀಕ್ಷಿಸಿದ ಮಟ್ಟಿಗೆ ಬೆಳೆ ಬಾರದಿರುವುದರಿಂದಲೂ ಕಳವು, ತುಡುಗು, ಬೆಂಕಿ ಮೊದಲಾದ ಅನಾ-ಹುತಗಳಿಂದಲೂ ಸಾಲ ಮಾಡುವ ಇಲ್ಲವೆ ಹೊಲ ಮನೆಗಳನ್ನು ವತ್ತಿ ಹಾಕುವ ಪ್ರಸಂಗ ಬರಬಹು-ದಾಗಿದ್ದು. ಹಿಂಗಾರಿ ಫಸಲು ಕೈ ಕೊಟ್ಟರೆ ಮುಂಗಾರಿ ಪೀಕು ಕೈ ಹಿಡಿಯುವುದರಿಂದ ಹೇಗೋ ಏನೋ ಮುಂದಿನ ವರುಷ ಬೇಸಾಯ ಮುಂದುವರೆಸಲು ಸಹಾಯವಾಗುತ್ತದೆ.

ಈ ರಾಶಿಯ ಸಾಹಿತಿ, ಕಲಾವಿದ ಪತ್ರಿಕೋದ್ಯಮಿ, ಶಿಕ್ಷಕ, ಅಧ್ಯಾಪಕ, ಚಾರ್ಟರ್ಡ ಅಕೌಂಟಂಟ್, ಡಾಕ್ಟರ, ವಕೀಲ, ನ್ಯಾಯಾಧೀಶ ಮೊದಲಾದ ಬುದ್ಧಿಜೀವಿಗಳಿಗೆಲ್ಲ ತೃತೀಯ ಹಾಗು ಚತುರ್ಥ ಗುರುವಿನ ಅಶುಭ ಫಲ ಬಹಳ ಅವಧಿಯ ವರೆಗೆ ಇರುವುದರಿಂದ ತಾಪದಾಯಕ ವರುಷವಿದು. ಉದ್ಯೋಗದಲ್ಲಿ ಚಟುವಟಿಕೆ ಕಂಡುಬರುವುದಿಲ್ಲ. ಮಿತ್ರರೇ ಶತ್ರುಗಳಾಗುವು-ದರಿಂದ ಮಿಥ್ಯಾಪವಾದವನ್ನು, ಸರಕಾರದ ನಿರ್ಬಂ-ಧನೆಗಳನ್ನು ಎದುರಿಸಬೇಕಾಗುತ್ತದೆ. ಆದಾಗ್ಯೂ ಜೂನ್ ೧೯ ರಿಂದ ಬರಲಿರುವ ಪಂಚಮ ಗುರುವಿನಿಂದಾಗಿ ತುಸು ನೆಮ್ಮದಿ ದೊರೆಯುತ್ತದೆ. ಇದರಂತೆ ಈ ರಾಶಿಯ ಸ್ವತಂತ್ರ ವ್ಯಾಪಾರ ಉದ್ಯೋಗಸ್ಥರಿಗೂ, ಕಮೀಶನ್ ಏಜಂಟರಿಗೂ ಹಂಚಿಕೆದಾರರಿಗೂ, ಚಾಳ, ಟಾಕೀಜ, ಹೋಟೇಲ ಗಿರಣಿ, ಕಾರಖಾನೆ ಮೊದಲಾದ ಮಾಲಕ ವರ್ಗ-ದವರಿಗೆಲ್ಲ ತಾಪದಾಯಕ ವರುಷವಾಗಿದ್ದು ಸರಕಾರದ ನಿರ್ಬಂಧನೆಗಳಿಂದಲೂ ನೌಕರ ಸಮಸ್ಯೆಯಿಂದಲೂ ಮಶಿನರಿ ತೊಂದರೆಯಿಂದಲೂ ಉದ್ಯೋಗ ಕುಂಠಿತವಾಗುತ್ತದೆ. ತನ್ಮೂಲಕ ಸಾಲ ಮಾಡುವ ಪ್ರಸಂಗ ಬರುತ್ತದೆ. ಆದರೆ ಜೂನ್ ೧೯ ರಿಂದ ವರುಷಾಂತ್ಯದ ವರೆಗೆ ಇರುವ ಶುಭಫಲದಾಯಕ ಪಂಚಮ ಗುರುವಿನಿಂದಾಗಿ ಎಲ್ಲ ಸಮಸ್ಯೆಗಳಿಗೂ ಪರಿಹಾರ ಲಭಿಸಿ, ಕುಂಠಿತವಾಗಿದ್ದ ಉದ್ಯೋಗ ಮತ್ತೆ ಪ್ರಾರಂಭವಾಗುವುದಲ್ಲದೇ ಜೂನ್ ೧೯ ರ ವರೆಗೆ ಮಾಡಿದ್ದ ಸಾಲವೆಲ್ಲ ತೀರಿಸುವ ಶಕ್ತಿ ಬರುತ್ತದೆ.


ತೃತೀಯ ಹಾಗು ಚತುರ್ಥ ಗುರು ಬಹಳ ಅವಧಿಯವರೆಗೆ ಇರುವುದರಿಂದ ಈ ರಾಶಿಯ ವಧೂವರರಿಗೆ ತಾಪದಾಯಕ ವರುಷವಿದ್ದು ಈ ಅವಧಿಯಲ್ಲಿ ವಿವಾಹ ಗೊತ್ತು ಮಾಡಿದಲ್ಲಿ ನೆರವೇರುವುದು ಕಠಿಣ. ಗೊತ್ತು ಮಾಡಿದ್ದ ಮದುವೆ ಮುಂದೂಡಬಹುದಾಗಿದೆ. ಇಲ್ಲವೆ ಮುರುಗಡೆಯಾಗಬಹುದಾಗಿದೆ. ಆದರೆ

ಅಕ್ಟೋಬರ್ ೨೩ ರಿಂದ ಫೆಬ್ರುವರಿ ೧೨ ರ ವರೆಗೆ ಹಾಗು ಜೂನ್ ೧೯ ರಿಂದ ನವೆಂಬರ ೯ ರವರೆಗಿನ ಕಾಲ ತುಸು ಪ್ರೋತ್ಸಾಹದಾಯಕವಾಗಿದ್ದು ಈ ಕಾಲದಲ್ಲಿ ನಿರ್ವಿಘ್ನವಾಗಿ ವಿವಾಹ ಸಾಂಗವಾಗುತ್ತದೆ. ಈ ರಾಶಿಯ ವಿವಾಹಿತ ಪುರುಷರಿಗೂ ಗೃಹಿಣಿಯರಿಗೂ ಅಶುಭ ಫಲದಾಯಕ ಗುರುವಿನಿಂದಾಗಿ ತಾಪದಾಯಕ ವರುಷವಿದ್ದು, ನಿತ್ಯದ ಗೃಹಕಲಹದಿಂದಲೂ, ಬಾಡಿಯ ಪ್ರಭಾವದಿಂದಲೂ, ಏಕತ್ರ ಕುಟುಂಬ ಒಡೆಯಬಹುದಾಗಿದೆ. ಅಲ್ಲದೇ ನಿದ್ರಾರಹಿತವಾದ ಅನೇಕ ರಾತ್ರಿಗಳನ್ನು ಕಳೆಯಬೇಕಾಗುತ್ತದೆ. ಆದರೆ ಜೂನ್ ೧೯ ರಿಂದ ವರುಷಾಂತ್ಯದ ವರೆಗೆ ಇರುವ ಪಂಚಮ ಗುರುವಿನಿಂದಾಗಿ ತಪ್ಪು ತಿಳುವಳಿಕೆ ದೂರಾಗಿ ಮತ್ತೆ ಪರಸ್ಪರ ವಿಶ್ವಾಸ ಹೆಚ್ಚುತ್ತದೆ. ಇದರಂತೆ ಈ ರಾಶಿಯ ಗರ್ಭಿಣಿಯರಿಗೆ ಮಿಶ್ರ ಫಲದಾಯಕ ವರುಷವಿದು. ಅಕ್ಟೋಬರ್ ೨೩ ರಿಂದ ಜೂನ್ ೧೮ ರ ವರೆಗೆ ಯಾರ ಹೆರಿಗೆ ಆಗುವುದೋ ಅದು ಕಷ್ಟ ಪ್ರಸವವಾಗುವುದಲ್ಲದೇ ಶಸ್ತ್ರಕ್ರಿಯೆ ಅನಿವಾರ್ಯವಾಗುತ್ತದೆ. ಆದರೆ ಜೂನ್ ೧೯ ರಿಂದ ನವೆಂಬರ ೯ ರ ವರೆಗೆ ಯಾರ ಹೆರಿಗೆಯು ಆಗುವುದೋ ಅವರದು ಸುಖಪ್ರಸವವಾಗುತ್ತದೆ.

ಗುರು ಶನಿಯರು ಬಹಳ ಅವಧಿಯ ವರೆಗೆ ಅಶುಭರಿರುವುದರಿಂದ ಈ ರಾಶಿಯ ರಾಜಕೀಯ ಹಾಗು ಸಾಮಾಜಿಕ ಕಾರ್ಯಕರ್ತರಿಗೆಲ್ಲ ತಾಪದಾಯಕ ವರುಷವಿದು. ಮಿತ್ರರೆ ಶತ್ರುಗಳಾಗುವುದರಿಂದ ಮಿಥ್ಯಾಪವಾದವನ್ನು ಎದುರಿಸಬೇಕಾಗುತ್ತಲ್ಲದೇ ಸ್ಥಾನಮಾನ, ಅಧಿಕಾರಕ್ಕೆ ಚ್ಯುತಿ ಇದೆ. ಚುನಾವಣೆ ಮೊದಲಾದ ಜಂಜಾಟದಿಂದ ದೂರ ಇರುವುದೇ ಹಿತಕರವು. ಜೂನ್ ೧೯ ರಿಂದ ವಾತಾವರಣ ತುಸು ತಿಳಿಯಾಗುತ್ತದೆ.

ಗುರುವು ಬಹಳ ಅವಧಿಯ ವರೆಗೆ ಅಶುಭನಿರುವುದರಿಂದ ಈ ರಾಶಿಯ ವಿದ್ಯಾರ್ಥಿಗಳಿಗೆ ತಾಪದಾಯಕ ವರುಷವಿದು. ಮನೆಯಲ್ಲಿಯ ವಿಷಮ ವಾತಾವರಣದಿಂದ ಶಿಕ್ಷಕರ ಅವಕೃಪೆಯಿಂದ ಆರ್ಥಿಕ ಮುಗ್ಗಟ್ಟಿನಿಂದ ಶಿಕ್ಷಣ ಮುಂದುವರೆಸುವುದೇ ದುಸ್ಸಾಧ್ಯವಾಗುತ್ತದೆ. ಯಾವ ವಿದ್ಯಾರ್ಥಿಗಳ ಪರೀಕ್ಷೆಯು ಅಕ್ಟೋಬರ್ ೨೩ ರಿಂದ ಜೂನ ೧೮ ರ ವರೆಗೆ ಜರುಗುವುದೋ ಅವರ ಪರೀಕ್ಷೆಯ ಫಲಿತಾಂಶ ಸಾರುವುದು ಕಠಿಣವು. ಆದರೆ ಯಾವ ವಿದ್ಯಾರ್ಥಿಗಳ ಪರೀಕ್ಷೆ ಜೂನ್ ೧೯ ರಿಂದ ನವೆಂಬರ್ ೯ ರ ವರೆಗೆ ಜರುಗುವುದೋ ಅವರು ಖಂಡಿತವಾಗಿ ತೇರ್ಗಡೆ ಆಗುವರು. ಆದರೆ ದರ್ಜೆ ಶ್ರೇಣಿ ದೊರೆಯುವುದಾಗಲಿ, ಶಿಷ್ಯ ವೃತ್ತಿ, ವಿದ್ಯಾರ್ಥಿವೇತನ ಪಡೆಯುವುದು ಇನ್ನೂ ಕಠಿಣ.

ಒಟ್ಟಿನಲ್ಲಿ ಈ ರಾಶಿಯ ಎಲ್ಲ ವರ್ಗದವರಿಗೆ ಎಲ್ಲ ದೃಷ್ಟಿಯಿಂದ ತಾಪದಾಯಕ ವರುಷವಾಗಿದ್ದು, ಜೂನ್ ೧೯ ರ ನಂತರ ವಾತಾವರಣ ತುಸು ತಿಳಿಯಾಗುತ್ತದೆ.




ಕುಂಭ

ಈ ರಾಶಿಯವರಿಗೆ ಮಿಶ್ರಫಲದಾಯಕ ವರುಷವು. ಪೂರ್ವಾರ್ಧವು ಪ್ರೋತ್ಸಾಹದಾಯಕವಿದ್ದರೆ ಉತ್ತರಾರ್ಧವು ನಿರುತ್ಸಾಹದಾಯಕ.

ಈ ರಾಶಿಯವರ ಈ ವರುಷದ ಗ್ರಹಗತಿಯನ್ನು ನೋಡಲಾಗಿ ಮುಂಬರುವ ಡಿಸೆಂಬರ ೧೭ ರಿಂದ ಬರುವ ಹನ್ನೊಂದನೆಯ ಶನಿಯ ಶುಭ ಫಲವು ವರುಷಾಂತ್ಯದ ವರೆಗೂ ಇರುತ್ತದೆ. ಆದರೆ ಶುಭ ಫಲದಾಯಕ ದ್ವಿತೀಯ, ತೃತೀಯ ಗುರು ಜೂನ ೧೮ ರಂದು ನಿರ್ಗಮಿಸಿ, ಜೂನ ೧೯ ರಿಂದ ಬರುವ ಅಶುಭ ಫಲದಾಯಕ ಚತುರ್ಥ ಗುರು ವರುಷಾಂತ್ಯದ ವರೆಗೂ ಇರುತ್ತಾನೆ. ಇದರಂತೆ ಇದುವರೆಗೆ ಮಧ್ಯಮ ಫಲದಾಯಕ ಎರಡನೇ ರಾಹು ನಿರ್ಗಮಿಸಿ, ಮಾರ್ಚ ೬ ರಿಂದ ಬರುವ ಜನ್ಮಸ್ಥ ರಾಹುವಿನ ಅಶುಭ ಫಲ ವರುಷಾಂತ್ಯದ ವರೆಗೂ ಇರುತ್ತದೆ. ಹೀಗೆ ಗ್ರಹಸ್ಥಿತಿ ಇರುವುದರಿಂದ ಮಿಶ್ರಫಲದಾಯಕ ವರುಷವಿದ್ದು, ಪೂರ್ವಾರ್ಧ ಪ್ರೋತ್ಸಾಹದಾಯಕವಿದ್ದರೆ, ಉತ್ತರಾರ್ಧ ನಿರುತ್ಸಾಹ ದಾಯಕವಿರುತ್ತದೆ.

ಆರೋಗ್ಯ ದೃಷ್ಟಿಯಿಂದ ನೋಡಿದರೆ ಮಿಶ್ರ ಫಲದಾಯಕವಿದೆ. ಪೂರ್ವಾರ್ಧವು ಉತ್ತಮ ವಿದೆ. ಆದರೆ ಉತ್ತರಾರ್ಧವು ಪ್ರತಿಕೂಲವಿದ್ದು ಒಂದಿಲ್ಲೊಂದು ಕಿರುಕಳ, ಪೀಡೆ ಉಪದ್ರವ ಇದ್ದೇ ಇರುತ್ತದೆ. ಅದರಲ್ಲಿಯೂ ಮೇ ೧೫ ರಿಂದ ಜುಲೈ ೧೫ ವರೆಗೆ ಹಾಗು ಸಪ್ಟೆಂಬರ ೧೭ ರಿಂದ ಅಕ್ಟೋಬರ ೧೮ ರ ವರೆಗಿನ ಕಾಲ ತೀರ ಪ್ರತಿಕೂಲವಿದ್ದು, ಈ ಕಾಲದಲ್ಲಿ ರೋಗ ಉಲ್ಬಣಿಸುವುದಲ್ಲದೇ ಶತ್ರುಪೀಡೆ, ಅಪಘಾತಾದಿ ಭಯವೂ ಉಂಟು. ಆದ್ದರಿಂದ ಈ ಅವಧಿಯಲ್ಲಿ ವಾಹನ ಚಾಲಕರು, ಮಶಿನರಿ ಕೆಲಸಗಾರರು, ಬಾಹ್ಯ ಹಾಗು ತಾಂತ್ರಿಕ ಕೆಲಸಗಾರರು ವಿಶೇಷ ಎಚ್ಚರಿಕೆ ವಹಿಸಬೇಕು. ಆರ್ಥಿಕ ದೃಷ್ಟಿಯಿಂದ ನೋಡಿದರೆ ಬಹಳ ವಿಚಿತ್ರವಾದ ವರುಷವಿದು. ಅಕ್ಟೋಬರ ೨೩ ರಿಂದ ಮೇ ೧೫ ರ ವರೆಗಿನ ಕಾಲ ಉತ್ತಮವಿದ್ದು, ಈ ಕಾಲದಲ್ಲಿ ನಿರೀಕ್ಷಿಸಿದ ಮೂಲದಿಂದ ಹಣ ಬರುವುದಲ್ಲದೇ ದತ್ತಕ, ವಾರಸಾ, ಭಕ್ಷಿಸ, ಬಹುಮಾನ, ಲಾಟರಿ, ಮೊದಲಾದ ರೀತಿಯಿಂದ ಆಕಸ್ಮಿಕ ದ್ರವ್ಯಾನುಕೂಲತೆ ಆಗುತ್ತದೆ. ಆದರೆ ಮೇ ೧೫ ರಿಂದ ನವೆಂಬರ ೯ ರ ವರೆಗಿನ ವರುಷಾಂತ್ಯದ ವರೆಗಿನ ಕಾಲ ಪ್ರತಿಕೂಲವಿದ್ದು, ಆದಾಯಕ್ಕಿಂತ ವೆಚ್ಚ ವಿಪರೀತ ಬೆಳೆಯುವುದರಿಂದ ಆರ್ಥಿಕ ತಾಪತ್ರಯವನ್ನು ಎದುರಿಸಬೇಕಾಗುತ್ತದೆ. ಪೂರ್ವಾರ್ಧ



ದೃಢ ಚಿತ್ತದ ದಡ
ಉತ್ತೇಜನ ಕೊಡ
ದಿದ್ದರೂ ಕೂಡಾ
ಮತ್ತೆ ಮತ್ತೆ
ಯತ್ನಿಸುತ್ತೆ
ಕಡಲು
ಮುತ್ತು ಕೊಡಲು.


—ಎಚ್. ಡುಂಡಿರಾಜ್

ದಲ್ಲಿ ಗಳಿಸಿ ಉಳಿಸಿದ್ದು ಉತ್ತರಾರ್ಧದಲ್ಲಿ ಖರ್ಚಾಗುವುದರಿಂದ ಜಮಾ ಖರ್ಚು ಸಮಾ ಆಗಿ ಶಿಲ್ಕು ಶೂನ್ಯವಾಗುತ್ತದೆ. ವಾದ ಸ್ಪರ್ಧೆ, ಕೋರ್ಟಿನ ವ್ಯವಹಾರದಲ್ಲಿ ಕೂಡ ಮಿಶ್ರಫಲವಿದೆ. ಪೂರ್ವಾರ್ಧ ಪ್ರಗತಿದಾಯಕವಿದ್ದು, ಯಾವುದೇ ಪ್ರಕಾರದ ವ್ಯಾಜ್ಯಗಳಲ್ಲಿ ಯಶಸ್ಸು ದೊರೆತರೆ ಉತ್ತರಾರ್ಧವು ಪ್ರತಿಕೂಲವಿದ್ದು ಎಲ್ಲ ಪ್ರಕಾರದ ವ್ಯಾಜ್ಯಗಳಲ್ಲಿ ಅಪಯಶಸ್ಸು ಇದೆ ಅಥವಾ ಪ್ರತಿಸ್ಪರ್ಧಿಯು ಅಪೀಲಿಗಾಗಿ ಮುಂದಿನ ಕೋರ್ಟಿಗೆ ಹೋಗಬಹುದಾಗಿದೆ.

ಈ ರಾಶಿಯ ನೌಕರ ವರ್ಗದವರಿಗೆ ಮಿಶ್ರ ಫಲದಾಯಕ ವರುಷವಿದು. ಅಕ್ಟೋಬರ ೨೩ ರಿಂದ ಮೇ ೧೫ರ ವರೆಗಿನ ಕಾಲ ಪ್ರೋತ್ಸಾಹದಾಯಕವಿದ್ದು, ನೌಕರಿಯಲ್ಲಿ ಬಡತಿ, ಇಚ್ಛಿಸಿದ ಸ್ಥಳಕ್ಕೆ ಬದಲಿ, ನಿರುದ್ಯೋಗಿಗಳಿಗೆ ಉದ್ಯೋಗ ಲಭಿಸುವಿಕೆ, ಹಂಗಾಮಿ ನೌಕರ ವರ್ಗದವರಿಗೆ ಉದ್ಯೋಗದಲ್ಲಿ ಸ್ಥಿರತೆ ಮೊದಲಾದ ಶುಭ ಘಟನೆಗಳು ಜರುಗಿದರೆ, ಉತ್ತರಾರ್ಧ ತಾಪದಾಯಕವಿದ್ದು, ಮೇಲಧಿಕಾರಿಗಳ ಕಿರುಕಳ ಅನಪೇಕ್ಷಿತ ಸ್ಥಳಕ್ಕೆ ಬದಲಿ ಮೊದಲಾದ ಅಶುಭಕಾರಿ ಘಟನೆಗಳು ಜರಗುವವು. ಈ ರಾಶಿಯ ಬಾಹ್ಯ ಹಾಗು ತಾಂತ್ರಿಕ ಕೆಲಸಗಾರರಿಗೂ, ಗಿರಣಿ ಕಾರಖಾನೆಗಳ ಕಾರ್ಮಿಕ ವರ್ಗದವರಿಗೂ ಶ್ರಮ ಜೀವಿಗಳಿಗೆಲ್ಲ ಶುಭ ಫಲದಾಯಕ ಶನಿಯಿಂದಾಗಿ ಪ್ರೋತ್ಸಾಹದಾಯಕ ವರುಷವಿದೆ. ಬಹಳ ದಿನಗಳಿಂದ ನೆನೆಗುದಿಗೆ ಬಿದ್ದ ಅವರ ಅನೇಕ ಬೇಡಿಕೆಗಳು ಈ ವರುಷ ಈಡೇರುವುದರಲ್ಲಿ ಸಂದೇಹವಿಲ್ಲ. ಈ ರಾಶಿಯ ಕೃಷಿ ವರ್ಗದವರಿಗೆ ಶನಿಯು ಶುಭನಿರುವ ಕಾರಣ ಪ್ರೋತ್ಸಾಹದಾಯಕ ವರುಷ. ನಿರೀಕ್ಷೆಗಿಂತ ಅಧಿಕ ಫಸಲು ಬರುವದರಿಂದ ಅದರಲ್ಲಿಯೂ ಹಿಂಗಾರಿಗಿಂತ ಮುಂಗಾರಿ ಫಸಲು ಸಾಕಷ್ಟು ಬರುವುದರಿಂದ ಹಿಂದಿನ ಸಾಲವೆಲ್ಲ ತೀರಿಸುವ ಶಕ್ತಿ ಬರುತ್ತದಲ್ಲದೇ ಹೊಸದಾಗಿ ಜಾಗ, ಹೊಲ, ಮನೆ, ಗದ್ದೆ, ತೋಟ, ದನಕರು ಟ್ರಕ್, ಟ್ರಾಕ್ಟರ, ಪಂಪಸೆಟ್ಟು ಮೊದಲಾದ ಕೃಷಿ ಉಪಕರಣಗಳನ್ನು ಕೊಳ್ಳುವ ಶಕ್ತಿ ಬರುತ್ತದೆ.

ಈ ರಾಶಿಯ ಸಾಹಿತಿ, ಲೇಖಕ, ಕಲಾವಿದ, ಪತ್ರಿಕೋದ್ಯಮಿ, ಶಿಕ್ಷಕ, ಅಧ್ಯಾಪಕ, ಚಾರ್ಟರ್ಡ ಅಕೌಂಟೆಂಟ್, ಡಾಕ್ಟರ, ವಕೀಲ, ನ್ಯಾಯಾಧೀಶ ಮೊದಲಾದ ಬುದ್ಧಿ ಜೀವಿಗಳಿಗೆಲ್ಲ ಮಿಶ್ರ ಫಲದಾಯಕ ವರುಷವಿದ್ದು ಅಕ್ಟೋಬರ ೨೩ ರಿಂದ ಮೇ ೧೫ರ ವರೆಗಿನ ಕಾಲ ಉತ್ತೇಜಕವಿದ್ದು, ಸರಕಾರದಿಂದಲೂ ಸಂಘ ಸಂಸ್ಥೆಗಳಿಂದಲೂ ಸ್ಥಾನಮಾನ ಅಧಿಕಾರ, ಪ್ರಶಸ್ತಿ ಪದಕ, ಬಹುಮಾನಾದಿ ಪಡೆಯುವರಲ್ಲದೇ ಗೌರವಧನ ಮಾಸಾಶನ ಪಡೆಯುವರು. ಅಲ್ಲದೇ ಉದ್ಯೋಗದಲ್ಲಿ ಪ್ರಗತಿ ಆಗಿ, ವಾಹನ ಮನೆ, ಆಸ್ತಿ ಸಂಪಾದನೆ ಪರದೇಶ ಪರ್ಯಟನ ಮೊದಲಾದ ಶುಭ ಹಾಗು ಸ್ಮರಣೀಯ ಘಟನೆಗಳು ಜರುಗಿದರೆ, ಮೇ ೧೬ ರಿಂದ ನವೆಂಬರ ೯ರ ವರೆಗಿನ ಕಾಲ ಪ್ರತಿಕೂಲವಿದ್ದು, ಉದ್ಯೋಗದಲ್ಲಿ ತೊಂದರೆ ಬರುವುದಲ್ಲದೇ ಮಿತ್ರರೇ ಶತ್ರುಗಳಾಗುವುದರಿಂದ ಮಿಥ್ಯಾಪವಾದವನ್ನು ಎದುರಿಸಬೇಕಾಗುತ್ತದೆ. ಇದರಂತೆ ಈ ರಾಶಿಯ ಸ್ವತಂತ್ರ ವ್ಯಾಪಾರ ಉದ್ಯೋಗಸ್ಥರಿಗೂ, ಚಾಳ, ಟಾಕೀಜ, ಹೊಟೇಲ, ಗಿರಣಿ ಕಾರಖಾನೆಗಳ ಮಾಲಕ ವರ್ಗದವರಿಗೂ ಮಿಶ್ರ ಫಲದಾಯಕ ವರುಷವಿದು. ಪೂರ್ವಾರ್ಧವು ಪ್ರೋತ್ಸಾಹದಾಯಕವಿದ್ದು, ಉದ್ಯೋಗದಲ್ಲಿ

ಈ ನಮ್ಮ ನಾಡಿನಲಿ



ಈ ನಮ್ಮ ನಾಡಿನಲಿ
ನೂರೊಂದು ಮರ, ನೂರೊಂದು ಸ್ವರ;
ಒಂದೊಂದರ ಹಿಂದೆಯೂ
ಒಂದೊಂದು ಭೂತ, ಒಂದೊಂದು
ಬೇತಾಳ!

ಅದಕ್ಕೆಂದೇ ಆಗಾಗ
ಸೂರ್ಯ-ಚಂದ್ರರಿಗೂ
ಗ್ರಹಣದ ಕಾಳ!

—ಎಂ. ಅಕಬರ ಅಲಿ


ಪ್ರಗತಿ ಆಗಿ ಹೊಸ ಉದ್ಯೋಗ ಇಲ್ಲವೆ ಇದ್ದ ಉದ್ಯೋಗದಲ್ಲಿ ಹೊಸ ಶಾಖೆಗಳನ್ನು ಪ್ರಾರಂಭಿಸುವರಲ್ಲದೇ ಹೊಸದಾಗಿ, ಜಾಗೆ, ಅಂಗಡಿ, ಮಶಿನರಿಗಳನ್ನು ಕೊಳ್ಳುವ ಶಕ್ತಿ ಬರುತ್ತದೆ. ಆದರೆ ಉತ್ತರಾರ್ಧವು ಪ್ರತಿಕೂಲವಿದ್ದು ಸರಕಾರದ ನಿರ್ಬಂಧನೆಗಳಿಂದಲೂ, ಕಾರ್ಮಿಕರ, ನೌಕರರ ಅಸಹಕಾರದಿಂದಲೂ, ಮಶಿನರಿ ತೊಂದರೆಯಿಂದಲೂ ಉದ್ಯೋಗ ಕುಂಠಿತವಾಗುತ್ತದೆ. ಅನುತ್ಪಾದಕ ವೆಚ್ಚ ಬಹಳ ಆಗುತ್ತದೆ.

ಈ ರಾಶಿಯ ವಧೂವರರಿಗೆ ಪ್ರೋತ್ಸಾಹದಾಯಕ ವರುಷವಿದೆ. ಅದರಲ್ಲಿಯೂ ಅಕ್ಟೋಬರ್ ೨೩ ರಿಂದ ಜೂನ್ ೧೯ರ ವರೆಗಿನ ಕಾಲವಂತೂ ಬಹಳ ಶುಭವಿದ್ದು ಈ ಕಾಲದಲ್ಲಿ ನಿರ್ವಿಘ್ನವಾಗಿ ವಿವಾಹ ಸಾಗುವುದರಲ್ಲಿ ಸಂದೇಹವಿಲ್ಲ. ಈ ರಾಶಿಯ ವಿವಾಹಿತ ಪುರುಷರಿಗೂ ಗೃಹಿಣಿಯರಿಗೂ ಮಿಶ್ರ ಫಲದಾಯಕ ವರುಷವಿದು. ಅಕ್ಟೋಬರ್ ೨೩ರಿಂದ ಮೇ ೧೫ರ ವರೆಗಿನ ಕಾಲ ಪ್ರಗತಿದಾಯಕವಿದ್ದು ಈ ಕಾಲದಲ್ಲಿ ಬೆಲೆಯುಳ್ಳ ವಸ್ತು ಒಡವೆಗಳ ಖರೀದಿ, ಆಸ್ತಿ ವಾಹನ ಮನೆ ಸಂಪಾದನೆ, ತೀರ್ಥಯಾತ್ರೆ, ಪರದೇಶ ಪರ್ಯಟನ ಮೊದಲಾದ ಶುಭ ಘಟನೆಗಳು ಜರುಗಿದರೆ ಮೇ ೧೬ ರಿಂದ ನವೆಂಬರ್ ೯ರ ವರೆಗಿನ ಕಾಲ ಪ್ರತಿಕೂಲವಿದ್ದು, ನಿತ್ಯ ಗೃಹಕಲಹದಿಂದಲೂ, ಚಾಡಿಯ ಪ್ರಭಾವದಿಂದಲೂ ಮನೆಯಲ್ಲಿಯ ಅಶಾಂತತೆಯಿಂದಲೂ ಏಕತ್ರ ಕುಟುಂಬ ಒಡೆಯಬಹುದಾಗಿದೆ. ಇದರಂತೆ ಈ ರಾಶಿಯ ಗರ್ಭಿಣಿಯರಿಗೂ ಕೂಡ ಮಿಶ್ರ ಫಲದಾಯಕ ವರುಷ. ಪೂರ್ವಾರ್ಧವು ಪ್ರಗತಿದಾಯಕವಿರುವುದರಿಂದ ಸುಖ ಪ್ರಸವವಾಗುವುದಲ್ಲದೇ ಗಂಡು ಸಂತಾನದ ಯೋಗವಿದೆ. ಆದರೆ ಉತ್ತರಾರ್ಧವು ತಾಪದಾಯಕವಿರುವುದರಿಂದ ಕಷ್ಟ ಪ್ರಸವವಿದ್ದು ಶಸ್ತ್ರಕ್ರಿಯೆ ಅನಿವಾರ್ಯವಾಗುತ್ತದೆ.

ಈ ರಾಶಿಯ ರಾಜಕೀಯ, ಸಾಮಾಜಿಕ ಕಾರ್ಯಕರ್ತರಿಗೆಲ್ಲ ಮಿಶ್ರ ಫಲದಾಯಕ ವರುಷವು. ಅಕ್ಟೋಬರ್ ೨೩ ರಿಂದ ಮೇ ೧೫ರ ವರೆಗಿನ ಕಾಲ ಬಹಳ ಪ್ರೋತ್ಸಾಹದಾಯಕವಾದದ್ದು, ಪ್ರತ್ಯಕ್ಷ ರಾಜಕೀಯದಲ್ಲಿ ಪ್ರವೇಶಿಸಿ, ವಿವಿಧ ಸಂಘ ಸಂಸ್ಥೆಗಳ, ನಿಗಮ, ಮಂಡಳಗಳ ಅಧ್ಯಕ್ಷ, ಚೇರಮನಗಳಂಥ ಸ್ಥಾನಮಾನ ಅಧಿಕಾರ ಪಡೆಯುವುದಲ್ಲದೇ ಜಿಲ್ಲೆ, ರಾಜ್ಯ, ರಾಷ್ಟ್ರ ಮಟ್ಟದ ಧುರೀಣರಾಗಬಹುದಾಗಿದೆ. ಅಲ್ಲದೇ ಈ ಅವಧಿಯಲ್ಲಿ ಜರುಗಬಹುದಾದ ಯಾವುದೇ ಪ್ರಕಾರದ ಚುನಾವಣೆಯಲ್ಲಿ ಸ್ಪರ್ಧಿಸಿದಲ್ಲಿ ಖಂಡಿತ ಆಯ್ಕೆ. ಮೇ ೧೬ ರಿಂದ ನವೆಂಬರ್ ೯ರ ವರೆಗಿನ ಕಾಲ ತಾಪದಾಯಕ. ಮಿತ್ರರೇ ಶತ್ರುಗಳಾಗುವುದರಿಂದ ಮಿಥ್ಯಾಪವಾದವನ್ನು ಎದುರಿಸಬೇಕಾಗಬಹುದಲ್ಲದೇ ಸ್ಥಾನಮಾನ ಅಧಿಕಾರಕ್ಕೆ ಚ್ಯುತಿ ಇದೆ.

ಈ ರಾಶಿಯ ವಿದ್ಯಾರ್ಥಿಗಳಿಗೆ ಕೂಡ ಮಿಶ್ರ ಫಲದಾಯಕ ವರುಷವು. ಅಕ್ಟೋಬರ್ ೨೩ ರಿಂದ ಮೇ ೧೫ರ ವರೆಗಿನ ಕಾಲ ಪ್ರೋತ್ಸಾಹದಾಯಕವಿದ್ದು, ಈ ಕಾಲದಲ್ಲಿ ಜರುಗಬಹುದಾದ ಯಾವುದೆ ಪರೀಕ್ಷೆಗೆ ಕಟ್ಟಿದರೂ ಖಂಡಿತವಾಗಿ ತೇರ್ಗಡೆ ಆಗುವುದಲ್ಲದೇ ದರ್ಜೆ ಶ್ರೇಣಿ ಪಡೆದು, ವಿದ್ಯಾರ್ಥಿ ವೇತನವನ್ನು ಶಿಷ್ಯ ವೃತ್ತಿಯನ್ನು ಸಂಪಾದಿಸುವರು. ಆದರೆ ಮೇ ೧೬ ರಿಂದ ನವೆಂಬರ್ ೯ರ ವರೆಗೆ ಜರುಗಬಹುದಾದ ಯಾವುದೇ ಪ್ರಕಾರ ಪರೀಕ್ಷೆಗೆ ಕಟ್ಟಿದ ವಿದ್ಯಾರ್ಥಿಗಳು ಸಾದಾ ತರಗತಿಯಲ್ಲಿ ತೇರ್ಗಡೆಯಾಗಲು ಶ್ರಮ ಪಡಬೇಕಾಗುತ್ತದೆ. ಶ್ರೇಣಿ ದರ್ಜೆ, ವಿದ್ಯಾರ್ಥಿ ವೇತನ, ಶಿಷ್ಯ ವೃತ್ತಿ ಸಿಗುವುದು ಕಠಿಣ.

ಒಟ್ಟಿನಲ್ಲಿ ಈ ರಾಶಿಯವರಿಗೆ ಮಿಶ್ರ ಫಲದಾಯಕ ವರುಷ.



ಮೀನ

ಈ ರಾಶಿಯು ಎಲ್ಲ ವರ್ಗದವರಿಗೂ ಎಲ್ಲ ದೃಷ್ಟಿಯಿಂದಲೂ ಶುಭದಾಯಕ ವಾಗಿದ್ದು ಜೀವನದಲ್ಲಿಯೇ ಸುವರ್ಣಕಾಲ ವಾಗಿದೆ.

ಈ ರಾಶಿಯುವರ ಈ ವರುಷದ ಗ್ರಹಗತಿ ಯನ್ನು ಅವಲೋಕಿಸಲಾಗಿ, ಮುಂಬರುವ ಡಿಸೆಂಬರ ೧೭ ರಿಂದ ಬರುವ ಅತ್ಯಂತ ಶುಭ ಫಲದಾಯಕ ೧೦ನೇಯ ಶನಿಯು ವರುಷಾಂತ್ಯದ ವರೆಗೂ ಶುಭ ಫಲವನ್ನೇ ಕೊಡುವನು. ಅಲ್ಲದೇ ಒಂದನೇ, ಎರಡನೇ, ಮೂರನೇ ಗುರುವಿನ ಶುಭ ಫಲವು ಕೂಡ ವರುಷಾಂತ್ಯದ ವರೆಗೂ ಇರುತ್ತದೆ. ಆದರೆ ಇದುವರೆಗೆ ಅಶುಭ ಫಲದಾಯಕ ಜನ್ಮಸ್ಥ ರಾಹು ನಿರ್ಗಮಿಸಿ, ಮಾರ್ಚ ೬ ರಿಂದ ಬರುವ ಹನ್ನೆರಡನೇ ರಾಹು ಕೂಡ ಅಶುಭಫಲದಾಯಕನೇ ಆದಾಗ್ಯೂ ಎರಡು ಪ್ರಬಲ ಗ್ರಹಗಳಾದ ಗುರು ಶನಿಯುರು ವರುಷವಿಡೀ ಶುಭಫಲದಾಯಕವಿರುವು ದರಿಂದ ಈ ವರುಷವೆಂದರೆ ನಿಮ್ಮ ಜೀವನ ದಲ್ಲಿಯೇ ಸುವರ್ಣ ಕಾಲವಿದ್ದು, ನಿಮ್ಮೆಲ್ಲ ಆಶೆ ಆಕಾಂಕ್ಷೆಗಳು ಈಡೇರುವುದರಲ್ಲಿ ಸಂದೇಹವಿಲ್ಲ.

ಆರೋಗ್ಯ ದೃಷ್ಟಿಯಿಂದ ನೋಡಿದರೆ ವರು-ಷದಮುಕ್ಕಾಲು ಅವಧಿಯುವರೆಗೆ ಚೆನ್ನಾಗಿರುವು ದಾದರೂ, ಫೆಬ್ರುವರಿ ೧೨ ರಿಂದ ಮಾರ್ಚ ೧೫ ರ ವರೆಗೆ ಹಾಗು ಜೂನ್ ೧೫ ರಿಂದ ಅಗಷ್ಟ ೧೫ ರ ವರೆಗಿನ ಮೂರು ತಿಂಗಳು ಕಾಲ ಮಾತ್ರ ತುಸು ಕಿರುಕಳ, ಪೀಡೆ ಇರುತ್ತದೆ. ಆರ್ಥಿಕ ದೃಷ್ಟಿ ಯಿಂದ ನೋಡಿದರೆ ಸಮಾಧಾನಾಕಾರಕ ವರುಷ ವಾಗಿದೆ. ಅದರಲ್ಲಿಯೂ ನವೆಂಬರ ೧೫ ರಿಂದ ಫೆಬ್ರುವರಿ ೧೨ ರ ವರೆಗೆ, ಎಪ್ರಿಲ ೧೨ ರಿಂದ ಜೂನ್ ೧೫ ರ ವರೆಗೆ, ಅಗಷ್ಟ ೧೫ ರಿಂದ ಅಕ್ಟೋಬರ ೧೮ ರ ವರೆಗಿನ ಈ ಏಳು ತಿಂಗಳ ಕಾಲವಂತೂ ಬಹಳ ಉತ್ತಮವಿದ್ದು, ಈ ಕಾಲ ದಲ್ಲಿ ನಿರೀಕ್ಷಿಸಿದ ಮೂಲದಿಂದಲೂ ಬರಬೇಕಾಗಿದ್ದ ಹಣವು ಬರುವುದಲ್ಲದೇ, ದತ್ತಕ, ವಾರಸಾ, ಬಕ್ಷೀಸ್, ಬಹುಮಾನ, ಲಾಟರಿ, ಮೊದಲಾದ ಆಕಸ್ಮಿಕ ಧನ ಪ್ರಾಪ್ತಿ ಆಗಿ ಆರ್ಥಿಕ ಸ್ಥಿತಿ ತೃಪ್ತಿ-ಕರವಿರುತ್ತದೆ. ವಾದ ಸ್ಪರ್ಧೆ, ಕೋರ್ಟು, ಕಚೇರಿ ಮೊದಲಾದ ಯಾವುದೇ ಪ್ರಕಾರದ ವ್ಯಾಜ್ಯಗಳಲ್ಲಿ ವಿಜಯಲಕ್ಷ್ಮೀ ನಿಮ್ಮ ಕೊರಳಿಗೆ ಮಾಲೆ ಹಾಕುವಳು.

ಈ ರಾಶಿಯ ನೌಕರ ವರ್ಗದವರರಿಗೆ ಪ್ರೋತ್ಸಾಹದಾಯಕ ವರುಷವಾಗಿದೆ. ಅದರ-ಲ್ಲಿಯೂ ನವೆಂಬರ ೧೫ ರಿಂದ ಫೆಬ್ರುವರಿ ೧೨ ರ ವರೆಗೆ, ಎಪ್ರಿಲ್ ೧೨ ರಿಂದ ಜೂನ್ ೧೫ರ ವರೆಗೆ ಅಗಷ್ಟ ೧೫ ರಿಂದ ಸಪ್ಟಂಬರ ೧೬ ರ ವರೆಗಿನ ಈ ಆರು ತಿಂಗಳ ಕಾಲವಂತೂ ತೀರ ಶುಭದಾಯಕ ವಿದ್ದು, ಈ ಕಾಲದಲ್ಲಿ ನೌಕರಿಯಲ್ಲಿ ಬಡತಿ, ಇಚ್ಛಿಸಿದ ಸ್ಥಳಕ್ಕೆ ಬದಲಿ, ನಿರುದ್ಯೋಗಿಗಳಿಗೆ ಉದ್ಯೋಗ ಲಭಿಸುವಿಕೆ, ಹಂಗಾಮಿ ನೌಕರವರ್ಗ ದವರಿಗೆ ಉದ್ಯೋಗದಲ್ಲಿ ಸ್ಥಿರತೆ ಮೊದಲಾದ ಸ್ಮರಣೀಯ ಘಟನೆಗಳು ಜರುಗುವವು. ಶನಿಯು ಇಡೀ ವರುಷ ಶುಭವಿರುವುದರಿಂದ ಈ ರಾಶಿಯ ಬಾಹ್ಯ ಹಾಗು ತಾಂತ್ರಿಕ ಕೆಲಸಗಾರರಿಗೂ ಗಿರಣಿ ಕಾರಖಾನೆಗಳ ಕಾರ್ಮಿಕರಿಗೂ, ಪ್ರೋತ್ಸಾಹದಾಯಕ ವರುಷವಿದ್ದು ಕಳೆದ ಅನೇಕ ವರುಷಗಳಿಂದ ನೆನೆಗುದಿಗೆ ಬಿದ್ದ ಅವರ ಅನೇಕ ಬೇಡಿಕೆಗಳು ಈಡೇರುವುದರಲ್ಲಿ ಸಂದೇಹವಿಲ್ಲ. ಈ ರಾಶಿಯ ಕೃಷಿ ವರ್ಗದವರಿಗೆ ಶನಿಯು, ಶುಭ ನಿರುವುದರಿಂದ ಪ್ರೋತ್ಸಾಹದಾಯಕ ವರುಷ ವಾಗಿದೆ. ನಿರೀಕ್ಷೆಗಿಂತ ಅಧಿಕ ಫಸಲು ಬಂದು ಹಿಂದಿನ ಸಾಲಗಳೆಲ್ಲ ತೀರಿಸಿ, ಹೊಸದಾಗಿ ಜಾಗೆ, ಹೊಲ ಮನೆ ದನಕರುಗಳನ್ನು, ಟ್ರಕ್, ಟ್ರ್ಯಾಕ್ಟರ್ ಪಂಪಸೆಟ್ಟು, ಮೊದಲಾದ ಉಪಕರಣ ಗಳನ್ನು ಖರೀದಿಸುವ ಯೋಗವಿದೆ.

ಈ ರಾಶಿಯ ಸಾಹಿತಿ, ಲೇಖಕ, ಕಲಾವಿದ, ಪತ್ರಿಕೋದ್ಯಮಿ, ಶಿಕ್ಷಕ, ಅಧ್ಯಾಪಕ, ಚಾರ್ಟರ್ಡ ಅಕೌಂಟಂಟ, ಡಾಕ್ಟರ, ವಕೀಲ, ನ್ಯಾಯಾಧೀಶ ಮೊದಲಾದ ಬುದ್ಧಿ ಜೀವಿಗಳಿಗೆಲ್ಲ ಪ್ರೋತ್ಸಾಹ ದಾಯಕ ವರುಷವಾಗಿದೆ. ಅದರಲ್ಲಿಯೂ ಅಕ್ಟೋಬರ ೨೩ ರಿಂದ ಜೂನ್ ೧೯ ರ ವರೆಗಿನ ಕಾಲವಂತೂ ಬಹಳೇ ಶುಭವಿದ್ದು, ಈ ಕಾಲದಲ್ಲಿ ಅನೇಕ ಸಂಘ ಸಂಸ್ಥೆಗಳಿಂದಲೂ, ಸರಕಾರದಿಂ ದಲೂ, ಪ್ರಶಸ್ತಿ, ಪದಕ, ಮನ್ನಣೆ, ಪುರಸ್ಕಾರ, ಗೌರವ ಧನ, ಮಾಸಾಶನ ಮೊದಲಾದವುಗಳು ದೊರೆಯುವದಲ್ಲದೇ, ಉದ್ಯೋಗದಲ್ಲಿ ಪ್ರಗತಿ ಆಗಿ, ಮನೆ ವಾಹನ, ಆಸ್ತಿ ಸಂಪಾದನೆ, ಪರ ದೇಶಪರ್ಯಟನ ಮೊದಲಾದ ಸ್ಮರಣೀಯ ಘಟನೆಗಳು ಜರುಗುವವು. ಇದರಂತೆ ಈ ರಾಶಿಯ ಸ್ವತಂತ್ರ ವ್ಯಾಪಾರ ಉದ್ಯೋಗಸ್ಥ ರಿಗೂ, ಕಮಿಶನ್ ಏಜಂಟರಿಗೂ, ಹಂಚಿಕೆದಾರ ರಿಗೂ, ಚಾಳ, ಟಾಕೀಜ, ಹೋಟೆಲ, ಗಿರಣಿ, ಕಾರಖಾನೆಗಳ ಮಾಲಕ ವರ್ಗದವರಿಗೆ ಪ್ರೋತ್ಸಾಹದಾಯಕ ವರುಷವಾಗಿದೆ. ನೌಕರ ಮಾಲಕರ ಸಮಸ್ಯೆಗಳು, ಪರಸ್ಪರ ಸಮ್ಮತಿಯಿಂದ ಬಗೆಹರಿಯುವವರಿಂದ ಉದ್ಯೋಗದಲ್ಲಿ ಉತ್ಕರ್ಷ ವಾಗುತ್ತದೆ. ಅದರಲ್ಲಿಯೂ ಅಕ್ಟೋಬರ ೨೩ ರಿಂದ ಜೂನ್ ೧೫ರ ವರೆಗಿನ ಕಾಲದಲ್ಲಿ ಹೊಸ ಉದ್ಯೋಗ ಕೈಗೊಳ್ಳುವಿಕೆ ಇಲ್ಲವೆ ಇದ್ದ ಉದ್ಯೋಗದಲ್ಲಿ ಹೊಸ ಶಾಖೆ ಪ್ರಾರಂಭಿಸುವಿಕೆ, ಹೊಸದಾಗಿ ಜಾಗೆ, ಅಂಗಡಿ, ಮಶಿನರಿ ಕೊಳ್ಳು ವಿಕೆ ಮೊದಲಾದ ಶುಭ ಘಟನೆಗಳು ಜರುಗು ವವು.

ಕಳೆದ ಅನೇಕ ವರುಷಗಳಿಂದ ಗೃಹಸ್ಥಾಶ್ರಮ ಕ್ಕಾಗಿ ಹಾತೊರೆಯುತ್ತಿರುವ ಈ ರಾಶಿಯ ವಧೂವರರಿಗೆ ಈ ವರುಷ ಅವರ ಮನೋರಥ ಈಡೇರುವುದರಲ್ಲಿ ಸಂದೇಹವಿಲ್ಲ. ಅದರಲ್ಲಿಯೂ ಅಕ್ಟೋಬರ ೨೩ ರಿಂದ ಜೂನ ೧೫ ರ ವರೆಗಿನ ಕಾಲದಲ್ಲಿ ನಿರ್ವಿಘ್ನವಾಗಿ ವಿವಾಹ ಸಾಂಗವಾಗಿ ಗೃಹಸ್ಥಾಶ್ರಮದ ಆನಂದ ಜೀವನವನ್ನು ಅನು ಭವಿಸುವರು. ಈ ರಾಶಿಯ ವಿವಾಹಿತ ಪುರುಷ ರಿಗೂ ಗೃಹಿಣಿಯರಿಗೂ, ಪ್ರೋತ್ಸಾಹದಾಯಕ ವರುಷವಾಗಿದೆ. ಆದರಲ್ಲಿಯೂ ಪೂರ್ವಾರ್ಧ ವಂತೂ ಬಹಳೇ ಶುಭದಾಯಕವಾಗಿದ್ದು ಈ ಕಾಲದಲ್ಲಿ ಬೆಲೆಯುಳ್ಳ ವಸ್ತು ಒಡವೆಗಳ ಖರೀದಿ, ಮನೆ ವಾಹನ, ಆಸ್ತಿಗಳ ಸಂಪಾದನೆ, ತೀರ್ಥ ಯಾತ್ರೆ, ಚಾಡಿಯ ಪ್ರಭಾವದಿಂದಲೂ ತಪ್ಪು ತಿಳಿವಳಿಕೆಯಿಂದಲೂ ಒಡೆದು ಹೋಗಿದ್ದ ಏಕತ್ರ ಕುಟುಂಬ ಮತ್ತೆ ಒಂದಾಗುವಿಕೆ ಮೊದಲಾದ ಸ್ಮರಣೀಯ ಘಟನೆಗಳು ಜರುಗುವವು. ಈ ರಾಶಿಯ ಗರ್ಭಿಣಿಯರಿಗೆ ಪ್ರೋತ್ಸಾಹದಾಯಕ ವರುಷವಾಗಿದೆ. ಈ ವರುಷದಲ್ಲಿ ಯಾವುದೇ ತಿಂಗಳು ಹೆಂಗೆ ಆದರೂ ಸುಖ ಪ್ರಸವವಾಗು ತ್ತದೆ. ಅದರಲ್ಲಿಯೂ ಪೂರ್ವಾರ್ಧದಲ್ಲಿ ಹೆಂಗೆ ಆದರೆ ಗಂಡು ಸಂತಾನದ ಯೋಗ ಉಂಟು.

ಈ ರಾಶಿಯ ಸಾಮಾಜಿಕ, ರಾಜಕೀಯ ಕಾರ್ಯಕರ್ತರಿಗೆ ಅವರ ಜೀವನದಲ್ಲಿಯೇ ಸ್ಮರಣೀಯ ಹಾಗೂ ಅಪೂರ್ವ ವರುಷವಾಗಿದ್ದು ಪ್ರತ್ಯಕ್ಷ ರಾಜಕೀಯದಲ್ಲಿ ಪ್ರವೇಶಿಸಿ ವಿವಿಧ ಸಂಘ ಸಂಸ್ಥೆಗಳ, ವಿವಿಧ ಮಂಡಳ, ನಿಗಮಗಳ ಗೌರವಾನ್ವಿತ ಸ್ಥಾನ ಮಾನ ಅಧಿಕಾರ ಪಡೆಯುವು ದಲ್ಲದೇ, ಜಿಲ್ಲೆ, ರಾಜ್ಯ, ರಾಷ್ಟ್ರ ಮಟ್ಟದ ಗಣ್ಯ ವ್ಯಕ್ತಿಗಳಾಗುವುದರಲ್ಲಿ ಸಂದೇಹವಿಲ್ಲ. ಶತ್ರುಗಳೇ ಮಿತ್ರರಾಗುವುದರಿಂದ ಈ ವರುಷದಲ್ಲಿ ಜರುಗ ಬಹುದಾದ ಯಾವುದೇ ಚುನಾವಣೆಯಲ್ಲಿ ಸ್ಪರ್ಧಿ-ಸಿದರೂ ಅವಿರೋಧ ಆಯ್ಕೆ ಇಲ್ಲವೇ ಅತ್ಯಧಿಕ ಬಹುಮತದಿಂದ ಆಯ್ಕೆ ಆಗಬಹುದಾಗಿದೆ.


ಈ ರಾಶಿಯ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ದಾಯಕ ವರುಷವಾಗಿದೆ. ಈ ವರುಷದಲ್ಲಿ ಜರುಗಬಹುದಾದ ಯಾವುದೇ ಪ್ರಕಾರದ ಪರೀಕ್ಷೆ ಕಟ್ಟಿದಲ್ಲಿ ಖಂಡಿತ ತೇರ್ಗಡೆ ಆಗುವರು, ಅದ-ರಲ್ಲಿಯೂ ಅಕ್ಟೋಬರ ೨೩ ರಿಂದ ಜೂನ ೧೯ರ ವರೆಗೆ ಜರುಗಬಹುದಾದ ಯಾವುದೇ ಪರೀಕ್ಷೆಗೆ ಕಟ್ಟಿದಲ್ಲಿ ಶ್ರೇಣಿ, ದರ್ಜೆಯಲ್ಲಿ ತೇರ್ಗಡೆ ಆಗುವು ದಲ್ಲದೇ ವಿದ್ಯಾರ್ಥಿ ವೇತನವನ್ನು, ಶಿಷ್ಯ ವೃತ್ತಿ ಯನ್ನು, ಪ್ರಶಸ್ತಿ ಪದಕಗಳನ್ನು ಪಡೆಯುವರು.

ಒಟ್ಟಿನಲ್ಲಿ ಈ ರಾಶಿಯ ಎಲ್ಲ ವರ್ಗದವರಿಗೆ ಎಲ್ಲ ದೃಷ್ಟಿಯಿಂದ ಪ್ರೋತ್ಸಾಹದಾಯಕ ವರುಷವಾಗಿದ್ದು, ಗಾಳಿ ಬಿಟ್ಟಾಗ ತೂರಿಕೋ ಎಂಬಂತೆ ಕಾರ್ಯತತ್ಪರರಾಗಿರಿ ಎಂಬುದೇ ಗ್ರಹ ಗಳ ಸಂದೇಶವಿದೆ.

"ಸರ್ವೇ ಜನಾಃ ಸುಖಿನೋ ಭವ...."


ಪ್ರೀತಿ

ಕನ್ನಿಕಾ ಹೆಗಡೆ



ಕನಸಿನ ಸರಸದಿ ಬದುಕುವ ಜಾಣೆಗೆ
ಗುಡಿಸಲೆ ಅರಮನೆಯು
ಹೊನ್ನಿನ ಆಸೆಯ ತೊರೆದಿಹ ಹೆಣ್ಣಿಗೆ
ಬಡತನ ದೊರೆತನವು
ಬಳಿಯಲಿ ಪ್ರಿಯತಮ ಕಿವಿಯಲಿ ಪಿಸುನುಡಿ
ಕೋಕಿಲ ಹಾಡುಗಳು
ಜಾರುವ ಕ್ಷಣಗಳ ಹಿಡಿಯುವ ಸೃಷ್ಟಿಯ
ಒಲುವೆಯ ಕುಸುರುಗಳು

ಪ್ರೀತಿಯ ಲೋಕದಿ ನೌಕೆಯು ಸಾಗಿದೆ
ಸಾಗರ ಸಂಪತ್ತು
ಯಾರನೊ ಬಯಸದೆ ಪ್ರೀತಿಯ ಬಯಸಿದೆ
ತುಡಿತದ ಫಲಹೊತ್ತು
ದೇವನ ನಂಬದ ನನ್ನೊಳ ದೇವಗೆ
ಪ್ರೀತಿಯ ಹೆಸರಿಟ್ಟೆ
ಮನದೊಳ ತಂಪಲಿ ದೇವನ ಪೂಜಿಸಿ
ಮಲ್ಲಿಗೆ ಕಂಪಿಟ್ಟೆ
ಒಲವಲಿ ಚೆಲುವನು ಹುಡುಕಿದ ಹುಡುಗನ
ಮನಸಿಗೆ ಮುದಕೊಟ್ಟೆ
ನನ್ನನೆ ನಂಬಿದ ಪ್ರಿಯತಮನೆದೆಯಲಿ
ಕನಸನು ತೆರೆದಿಟ್ಟೆ
ಕನಸಿಗ ಬಂದವ ಬರೆ ನೀನೆಂದರೆ
ಕವನವ ಬರೆದಿಟ್ಟೆ
ಕರುಬುವ ಲೋಕವನೆದುರಿಸಿ ಬದುಕನು
ಪ್ರೀತಿಗೆ ಮುಡಿಪಿಟ್ಟೆ



ಘನತೆಯ ರಕ್ಷಣೆ

✱ ಆದ್ಯ ರಾಮಾಚಾರ್ಯ

ಮರಾಠಾ ಸಾಮ್ರಾಜ್ಯದ ವೈಭವಕ್ಕೆ ಶೋಭಿಸುವ ರೀತಿಯಲ್ಲಿಯೇ ಬಾಪು, ನಿಜಾಮರ ಅಂದಿನ ದರ್ಬಾರಕ್ಕೆ ಹೋಗುವ ನಿರ್ಧಾರ ಮಾಡಿದ್ದರು. ಗೇಣಂಚಿನ ಪಂಚೆಯನ್ನುಟ್ಟು ಅದರ ಮೇಲೆ ರೇಶಿಮೆಯ ನಿಲುವಂಗಿಯನ್ನು ಧರಿಸಿದ್ದರು, ವಿಶಾಲವಾದ ಹಣೆಯ ಮೇಲೆ ಕೇಸರಿಯ ಗಂಧವನ್ನಿಟ್ಟು ಕೊಂಡಿದ್ದರು. ತಲೆಯ ಮೇಲೆ ಪಾಗೋಡ. ಸೊಂಟಕ್ಕೆ ಸುತ್ತಿದ ನೀಲ ಬಣ್ಣದ ಶಾಲು ಕಣ್ಣು ಕುಕ್ಕಿಸುವಂತಿತ್ತು. ಪಕ್ಕದಲ್ಲಿ ಕಠಾರಿ....



ಉದಗೀರ್ ಹಾಗೂ ರಾಕ್ಷಸಭುವನದ ಯುದ್ಧದಲ್ಲಿ ನಿಜಾಮರು ಎರಡು ಕೋಟಿ ಅರವತ್ತು ಲಕ್ಷ ಖಂಡಣೆ ಹಣವನ್ನು ಕೊಡುವುದಾಗಿ ಒಪ್ಪಿಕೊಂಡಿದ್ದರು. ಕಳೆದ ನಾಲ್ಕಾರು ವರುಷಗಳಿಂದ ಬಲಾಢ್ಯರಾದ ಆಂಗ್ಲರು ಹಾಗೂ ಟೀಪು ಇವರೊಂದಿಗೆ ನಡೆದ ಹೋರಾಟ ಮತ್ತು ಗೃಹಕಲಹಗಳಿಂದಾಗಿ ಮರಾಠರಿಗೆ ನಿಜಾಮರಿಂದ ಬರಬೇಕಾಗಿದ್ದ ಬಾಕಿ ಹಣದ ಕಡೆಗೆ ಹೆಚ್ಚು ಗಮನ ವಹಿಸುವುದಾಗಿರಲಿಲ್ಲ. ಆದರೆ ನಾನಾ, ತಮ್ಮ ವಕೀಲರಾದ ಗೋವಿಂದ ರಾವ್ ಕಾಳೆ ಇವರಿಗೆ ವಿಶೇಷ ಪತ್ರ ಬರೆದು ಹೇಗಾದರೂ ಮಾಡಿ ಈ ಹಣವನ್ನು ವಸೂಲು ಮಾಡಿಯೇ ತೀರಬೇಕೆಂದು ತಿಳಿಸಿದ್ದರು. ಆದುದರಿಂದ ಗೋವಿಂದ ರಾಯರು ನಿಜಾಮರ ದಿವಾನರಾಗಿದ್ದ ಮುಶೀರ್ ಉಲ್‌ಮುಲ್ಕರಿಗೆ ಹಣಕ್ಕಾಗಿ ಪೀಡಿಸತೊಡಗಿದ್ದರು. ಗೋವಿಂದರಾಯರಿಗೆ ಅನೇಕರು ಬಾಪೂ ಎಂಬ ಹೆಸರಿನಿಂದಲೂ ಕರೆಯುತ್ತಿದ್ದರು. ಬಹುಕಟ್ಟು ನಿಟ್ಟಿನ ಮನುಷ್ಯರೆಂದು ಖ್ಯಾತರಾಗಿದ್ದರು. ಮುಶೀರ್‌ಉಲ್‌ಮುಲ್ಕ ಮಹಾಚಾಣಾಕ್ಷ ರಾಜಕಾರಣಿ ಎಂದು ಖ್ಯಾತನಾಗಿದ್ದುದರಿಂದಲೇ ನಿಜಾಮರು ಆತನನ್ನು ತಮ್ಮ ಪಂತ ಪ್ರಧಾನರೆಂದು ಆಯ್ಕೆ ಮಾಡಿದ್ದರು. ಗೋವಿಂದರಾಯರು

ರಾಜಧಾನಿಯಲ್ಲಿ ಬಿಡಾರ ಮಾಡಿದುದು ಮಶೀರ್ ಖಾನನಿಗೆ ಸ್ವಲ್ಪವೂ ಹಿಡಿಸಿರಲಿಲ್ಲ. ಆತನು ಏಕಾಂತದಲ್ಲಿ ನಿಜಾಮರನ್ನು ಕಂಡು ಮರಾಠರ ಖಂಡಣೆ ಹಣದ ವಿಷಯವನ್ನು ಕುರಿತು ಚರ್ಚೆ ಮಾಡಿದ.

"ಹುಜೂರ್, ಎರಡುಕೋಟಿ ಅರವತ್ತು ಲಕ್ಷವೆಂದರೆ ಸಾಮಾನ್ಯ ಹಣವೇನಲ್ಲ. ಇದೇ ಹಣವನ್ನು ಬಳಸಿಕೊಂಡು ನಾವು ನಮ್ಮ ಹೊಸ ಸೇನೆಯನ್ನು ನಿಲ್ಲಿಸಬಹುದು. ಈಗಂತೂ ಮಹದಾಜಿ ಸಿಂಧೆ ಹಾಗೂ ಹರಿಪಂತ ಫಡಕೆಯವರಂತಹ ಶೂರ ಸರದಾರರೂ ಮರಣ ಹೊಂದಿದ್ದಾರೆ. ಇಂಗ್ರಜ ಬಹದ್ದೂರರು ಈಗ ನಮ್ಮ ಬೆಂಗಾವಲಿಗರಾಗಿದ್ದಾರೆ. ಸರ್ ಜಾನ್ ಶೋಅರ್ ನಮ್ಮ ತೋಫಖಾನೆಯ ಮುಖ್ಯಾಧಿಕಾರಿ ಎಂದು ಕೆಲಸ ಮಾಡುತ್ತಿದ್ದಾರೆ. ಆದುದರಿಂದ ನಾವು ಹಾಂ ಹಾಂ ಎನ್ನುವದರಲ್ಲಿ ಪುಣೆಯನ್ನು ಸ್ವಾಧೀನಪಡಿಸಿಕೊಳ್ಳಬಹುದು. ಅಲ್ಲದೇ ಸಾತಾರೆಯ ರಾಜಸಿಂಹಾಸನದ ಮೇಲೆ ಅಸಫಶಾಹೀ ಮನೆತನದವರೇ ಶೋಭಿಸುತ್ತಾರೆ. ಆದುದರಿಂದ ಈ ವಿಚಾರದಲ್ಲಿ ಚಿಂತಿಸಬೇಕಾದುದಿಲ್ಲ."

"ಹಾಗಾದರೆ ನಾನಾ ಹಾಗೂ ಪೇಶ್ವೆಯ ವಿಚಾರದಲ್ಲಿ ನೀವೇನು ಹೇಳುವಿರಿ"

"ಹುಜೂರ್, ತಾವು ಮನಸ್ಸು ಮಾಡಿದಲ್ಲಿ ಅವರಿಗೆ ಲಂಗೋಟಿಯನ್ನು ತೊಡಿಸಿ ಕಾಶಿಯಲ್ಲಿ ಭಿಕ್ಷೆ ಬೇಡುವಂತೆ ಮಾಡಬಹುದು". ವಜೀರರ ಮಾತಿನಿಂದ ನಿಜಾಮರಿಗೆ ಬಲು ಸಮಾಧಾನವೆನಿಸಿತು.

ಮರಾಠಾ ಸಾಮ್ರಾಜ್ಯದ ವೈಭವಕ್ಕೆ ಶೋಭಿಸುವ ರೀತಿಯಲ್ಲಿಯೇ ಬಾಪು ನಿಜಾಮರ ಅಂದಿನ ದರ್ಬಾರಕ್ಕೆ ಹೋಗುವ ನಿರ್ಧಾರ ಮಾಡಿದ್ದರು. ಗೇಣಂಚಿನ ಪಂಜೆಯನ್ನುಟ್ಟು ಅದರ ಮೇಲೆ ರೇಶಿಮೆಯ ನಿಲುವಂಗಿಯನ್ನು ಧರಿಸಿದ್ದರು. ವಿಶಾಲವಾದ ಹಣೆಯ ಮೇಲೆ ಕೇಸರಿಯ ಗಂಧನನ್ನಿಟ್ಟುಕೊಂಡಿದ್ದರು. ತಲೆಯ ಮೇಲೆ ಪಾಗೋಡ. ಸೊಂಟಕ್ಕೆ ಸುತ್ತಿದ ನೀಲ ಬಣ್ಣದ ಶಾಲು ಕಣ್ಣು ಕುಕ್ಕಿಸುವಂತಿತ್ತು, ಪಕ್ಕದಲ್ಲಿ ಕಠಾರಿ. ಅದಕ್ಕೆ ನಾನಾ ನವರತ್ನದ ಹಿಡಿಕೆಯಿತ್ತು, ಕೊರಳಲ್ಲಿ ಬಹು ಮೌಲ್ಯದ ಕಂಠಾಭರಣವನ್ನು ಹಾಕಿಕೊಂಡಿದ್ದರು. ಮೈ ಮೇಲೆ ಹೊದೆದ ಶಾಲಿಗೆ ಬಂಗಾರದ ಕುಸುರಿನ ಕೆಲಸ ಮಾಡಲಾಗಿತ್ತು, ಕಾಲಲ್ಲಿ ರಜಪೂತ ಶೈಲಿಯ ಚಡಾವನ್ನು ಧರಿಸಿ ಹೊರ ಬಂದೊಡನೆ ಬೆಳ್ಳಿಯ ಪಲ್ಲಕ್ಕಿಯನ್ನೇರಿದರು. ಮುಂಭಾಗದಲ್ಲಿ ಬೆಳ್ಳಿಯ ಬೆತ್ತವನ್ನು ಹಿಡಿದ ಸೇವಕರಿದ್ದರೆ ಎಡಬಲಗಳಲ್ಲಿ ಖಡ್ಗಧಾರಿಗಳಾದ ಸಿಪಾಹಿಗಳಿದ್ದರು. ದರ್ಬಾರಿನ ಮುಖ್ಯ ದ್ವಾರವು ಸಮೀಪಿಸಿದೊಡನೆ ರಾಜಾ ರಾಯ ರಾಯನ್ ಎಂಬುವವರು ಅವಸರದಿಂದ ಮುಂದೆ ಕರೆದು ಆದರದಿಂದ ಸ್ವಾಗತ ಕೋರಿ ಕೈ ಹಿಡಿದು ತಂದು ಅವರನ್ನು ಯಥೋಚಿತವಾದ ಆಸನದಲ್ಲಿ ಕೂಡಿಸಿದರು.

"ಅಸಫ ಜಾಹ, ಮುಝಫರ್ ಉಲ್ ಮದಾರುದ್ದೌಲಾ, ಖಾನ ನಿಜಾಮಅಲಿ ಖಾನ ಬಹದ್ದೂರ್, ಫತೇಜಂಗ್, ಫಿದ್ವೀಯ ಶಹನ್ ಶಹಾ, ಶಹಾ ಆಲಂ ಬಾದಶಹಾ ಯೆ ಗಾಜೀ, ಅಸಫ ಜಹಾ" ಎಂದು ಲಲಕಾರಿಗಳು ಕೂಗುತ್ತಿದ್ದಂತೆ ದರ್ಬಾರವೆಲ್ಲ ಎದ್ದು ನಿಂತಿತು. ನಿಜಾಮರ ಹಿಂದೆ ದಿವಾಣ ಮಶೀರ್ ಉಲ್ ಮುಲ್ಕರೂ ಸಹ ನಿಧಾನವಾಗಿ ಸಾಗಿ ಬರುತ್ತಲಿದ್ದರು. ಬಾದಶಹರು ಸಿಂಹಾಸನದಲ್ಲಿ ಮಂಡಿತರಾದ ನಂತರ ಅಂದಿನ ದರ್ಬಾರಿನ ಮುಖ್ಯ ವಿಷಯಗಳನ್ನು ಅರಿಕೆ ಮಾಡುತ್ತ ಮಶೀರ್ ಉಲ್ಮುಲ್ಕರು ನುಡಿದರು.

"ಹುಜೂರ್, ಪುಣೆಯ ದರ್ಬಾರಿನವರು ಮೇಲಿಂದ ಮೇಲೆ ತಮ್ಮ ಬೇಡಿಕೆಯನ್ನು ಮಂಡಿಸುತ್ತಿದ್ದಾರೆ. ಆ ವಿಚಾರದಲ್ಲಿ ತಮ್ಮ ಅಪ್ಪಣೆಯನ್ನು ಪಡೆಯಬೇಕಾಗಿದೆ"

"ಪುಣೆಯ ದರ್ಬಾರಿನವರಿಗೂ ನಮಗೂ ಅಂಥ ಮಹತ್ವದ ವಿಚಾರವೇನಿದೆ?" ನಿಜಾಮರು ಆಶ್ಚರ್ಯದ ಧ್ವನಿಯಲ್ಲಿ ಪ್ರಶ್ನೆ ಮಾಡಿದರು. ಅಷ್ಟರಲ್ಲಿ ದರ್ಬಾರಿನಲ್ಲಿ ನಾನಾ ಹಾಗೂ ಪೇಶ್ವೆಯವರಂತೆ ವೇಷಧರಿಸಿದವರಿಬ್ಬರು ಪ್ರವೇಶ ಮಾಡಿದರು. ಅವರ ಮೇಲೆ ಹರಕಲು ಬಟ್ಟೆ, ಮಾಸಿದ ಪಾಗೋಡ. ಅವರನ್ನು ನೋಡುತ್ತಿದ್ದಂತೆ ದಿವಾಣರು. ಅತ್ಯಾದರದ ಧ್ವನಿಯಲ್ಲಿ "ಆಯೀಯೇ, ಆಯೀಯೇ" ಎಂದು ನುಡಿದರು.

ದರ್ಬಾರಿಗಳ ಗಮನವೆಲ್ಲ ಆ ವೇಷಧಾರಿಗಳಲ್ಲಿ ಕೇಂದ್ರೀಕೃತವಾಯಿತು. ದಿವಾಣರೇ ನಕ್ಕಾಗ ಇನ್ನುಳಿದವರು ಸುಮ್ಮನಿರುತ್ತಾರೆಯೇ, ಎಲ್ಲರೂ ಒಂದೇ ಕಂಠದಿಂದ ವ್ಯಂಗ್ಯವಾಗಿ ನಗತೊಡಗಿದರು.

ಆ ವಿಡಂಬನೆಯನ್ನು ಕಂಡು ಗೋವಿಂದರಾಯರ ಸಿಟ್ಟು ನೆತ್ತಿಗೇರಿತು. ಆವೇಶದಿಂದ ತಮ್ಮ ಆಸನದಿಂದ ಮೇಲೆದ್ದು ನಿಂತರು.

"ಇದೇನು ಹುಡುಗಾಟ ನಡೆಸಿದ್ದೀರಿ? ಮೊದಲು ಈ ವಿಡಂಬನೆಯನ್ನು ನಿಲ್ಲಿಸಿರಿ. ಯಾರ ಮುಂದೆ ಈ ಚಲ್ಲಾಟ ಆಡುತ್ತಿರುವಿರಿ ಎಂಬುದಾದರೂ





ಗಮನವಿದೆಯೇ ? ಈ ವಿಡಂಬನೆಯ ಪರಿಣಾಮ ವೇನಾದೀತೆಂಬುದನ್ನು ಬಲ್ಲಿರಾ ?" ಸಿಂಹದಂತೆ ಘರ್ಜಿಸಿದರು.

"ವಕೀಲ ಸಾಹೇಬ, ತಾವು ನಗುವದಕ್ಕೂ ಬಿಡುವದಿಲ್ಲವೇನು"?ಮಶೀರ್ ಮತ್ತಷ್ಟು ವ್ಯಂಗ್ಯವಾಗಿ ನಗುತ್ತ ನುಡಿದರು.

"ಈ ದರ್ಬಾರಿನಲ್ಲಿ ಎಲ್ಲರಿಗೂ ಕೇಳಿಸುವಂತೆ ನುಡಿಯುತ್ತಿದ್ದೇನೆ. ನಿಮ್ಮ ಖಂಡಣಿಯ ಹಣವನ್ನು ಹೇಗೆ ವಸೂಲಿ ಮಾಡಿಕೊಳ್ಳಬೇಕೆಂಬುದನ್ನು ಮರಾಠರು ಚನ್ನಾಗಿ ಬಲ್ಲವರಾಗಿದ್ದಾರೆ. ದಿವಾಣ ಸಹಾಬ ನೀವು ಬಹುಬೇಗನೆ ಶ್ರೀಮಂತ ಪೇಶ್ವೆಗಳ ಮುಂದೆ ಕೈ ಕಟ್ಟಿಕೊಂಡು ನಿಲ್ಲುವ ದಿನಗಳು ಇನ್ನು ಬಹುದೂರಿಲ್ಲವೆಂಬುದನ್ನು ನೆನಪಿನಲ್ಲಿಡಿರಿ."

ಗೋವಿಂದರಾಯರು ಹೀಗೆ ಸಿಟ್ಟಿನಿಂದ ಕೂಗಾಡಿಕೊಳ್ಳುತ್ತಿರುವಾಗ ಅವರ ಮೈಮೇಲಿನ ಶಾಲು ಜಾರಿ ಕೆಳಗೆ ಬಿದ್ದು ಬಿಟ್ಟಿತು. ಅದನ್ನು ಗಮನಿಸಿಯೂ ಗಮನಿಸದಂತೆ ಅವರು ಆ ತುಂಬಿದ ದರ್ಬಾರನ್ನು ಬಿಟ್ಟು ಹೊರಟುಬಿಟ್ಟರು.

ಮರುದಿನವೇ ಆರಿಸಿದ ಭಟರೊಂದಿಗೆ ತಮ್ಮ ಪ್ರಯಾಣವನ್ನಾರಂಭಿಸಿದರು. ಪುಣೆಯನ್ನು ತಲುಪಿದೊಡನೆ ತಮ್ಮ ಮನೆಗೂ ಹೋಗದೆ ನೇರವಾಗಿ ನಾನಾಫಡನೀಸರನ್ನು ಭೇಟಿಯಾಗಿ ಹೈದರಾಬಾದಿನಲ್ಲಿ ನಡೆದ ಘಟನೆಗಳನ್ನೆಲ್ಲ ವಿವರಿಸಿದರು .

"ನಾನಾ, ನಿಜಾಮರ ತಲೆಕೆಡಿಸಿದವನು ಅವರ ದಿವಾಣರಾದ ಮಶೀರ ಉಲ್ಮುಲ್ಕನಾಗಿದ್ದಾನೆ. ಈ ವಿಡಂಬನೆಯು ವ್ಯಕ್ತಿಗತವಾದುದಲ್ಲ. ಅದು ನಮ್ಮ ದೌಲತ್ತಿನ ವಿಡಂಬನೆಯೆನಿಸುತ್ತದೆ. ಇದರ ಪ್ರತೀಕಾರವಾಗದಿದ್ದಲ್ಲಿ ನಾನು ಅನ್ನ ಸತ್ಯಾಗ್ರಹವನ್ನು ಮಾಡಿ ಪ್ರಾಣತ್ಯಾಗ ಮಾಡುವೆ"

"ಬಾಪೂ, ಚಿಂತಿಸಬೇಡಿರಿ. ಮೊದಲು ಮನೆಗೆ ಹೋಗಿ ವಿಶ್ರಾಂತಿಯನ್ನು ತೆಗೆದುಕೊಳ್ಳಿರಿ. ನಾಳೆ ಶ್ರೀಮಂತರ ಭೇಟಿಯಾಗಿ ತಿರ್ಮಾನಕ್ಕೆ ಬರೋಣ" ಎಂದು ಸಮಾಧಾನ ಹೇಳಿಕಳುಹಿಸಿದರು.

ಮರುದಿನ ಏಕಾಂತದಲ್ಲಿ ನಾನಾ ಫಡನೀಸ ಗೋವಿಂದರಾವ ಕಾಳೆ ಹಾಗೂ ಶ್ರೀಮಂತರು ಬಹು ಹೊತ್ತಿನವರೆಗೆ ಏಕಾಂತದಲ್ಲಿ ಕುಳಿತು ಮಾತನಾಡುತ್ತಿದ್ದರು.

"ಶ್ರೀಮಂತ ದೌಲತ್ತಿನ ಸರದಾರರಿಗೆ ತಮ್ಮ ಸೇನಾ ಸಮೇತರಾಗಿ ಬರಲು ಪತ್ರ ಬರೆಯುವಂತೆ ತಮ್ಮ ಅಪ್ಪಣೆಯಾಗಬೇಕಾಗಿದೆ" ಎಂದು ನಾನಾ ಕೇಳಿಕೊಂಡರು."

"ನಾನಾ ಈ ಕೆಲಸಕ್ಕೆ ವಿಳಂಬ ಬೇಡ. ನಿಮ್ಮ ವಿಚಾರವನ್ನು ನಾವು ಮನಸಾ ಒಪ್ಪಿದ್ದೇವೆ"

ಪುಣೆ ನಗರದಿಂದ ಗುಪ್ತಚಾರ ವರ್ಗದವರು ನಾನಾ ದಿಕ್ಕುಗಳಲ್ಲಿ ಸಂಚಾರವನ್ನಾರಂಭಿಸಿದರು. ಪ್ರತಿಯೊಬ್ಬ ಸರದಾರರಿಗೂ ಪತ್ರಗಳನ್ನು ರವಾನಿಸಲಾಯಿತು.

ಶಿಂಧೇ, ಹೊಳ್ಕರ್, ಪವಾರ, ಗಾಯಕವಾಡ, ಭೋಸಲೆ, ಆಂಟೋಳೆ, ಘೋರಪಡೆ, ಬಿಂಚೂರಕರ, ಜಯಸಿಂಗ ರಾವರಾಜೆ, ಆಂಗ್ರೆ, ಪುರಂದರೆ, ನಾಯಕ ನಿಂಬಾಳಕರ, ಸಾಂಗಲಿಕರ, ಪಾನಸೆ, ಬಕ್ಷಿ, ಶಿರ್ಕೆ, ಪಾಟಣಕರ, ಚಾಂದಲ, ಮೋಹಿತೆ, ಥೋರಾತ, ಜಗದಾಳೆ, ಚಕ್ರದೇವ ಇಂಗಳೆ, ತುಳಸಿ ಬಾಗವಾಲೆ, ಧಾಬಾಡೆ ಹೀಗೆ ಒಬ್ಬರೆ, ಇಬ್ಬರೆ ನೂರಾರು ಸರದಾರರು ತಮ್ಮ ಸೇನೆಗಳೊಂದಿಗೆ ಕೊಂಬು ಕಹಳೆಗಳೊಂದಿಗೆ ಮರಾಠಾ ರಾಜಧಾನಿಯಾದ ಪುಣೆಗೆ ಬಂದು ತಲುಪಿದರು. ಸೈನಿಕರಿಂದ ಪುಣೆಯಲ್ಲಿ ಕಾಲಿಡಲು ಸಹ ಸ್ಥಳವು ಇಲ್ಲದಂತಾಗಿತ್ತು. ಎಲ್ಲ ಸರದಾರರ ಆಗಮನವಾದೊಡನೆ ಶ್ರೀಮಂತ ಮಾಧವರಾವ್ ತಮ್ಮ ದರಬಾರನ್ನು ಕೂಡಿಸಿದರು. ಅವರು ದರ್ಬಾರಕ್ಕೆ ಆಗಮಿಸುತ್ತಿದ್ದಂತೆ ಲಲಕಾರಿಗಳು ಉಚ್ಚಕಂಠದಿಂದ ಅವರ ಗುಣಗಾನ ಮಾಡತೊಡಗಿದರು. ಕೊಂಬು, ಕಹಳೆ ನಗಾರಿ, ನೌಬತ್ತುಗಳು ಮೊಳಗ ತೊಡಗಿದವು. ಶ್ರೀಮಂತರು ದರ್ಬಾರಕ್ಕೆ ಆಗಮಿಸಿದರೆಂದು ಸಾರಲು ಕುಶಾಲು ತೋಪುಗಳ ಸಪ್ಪಳವು ಕೇಳಬರತೊಡಗಿತು.

ಶ್ರೀಮಂತರು ತಮ್ಮ ಆಸನದಲ್ಲಿ ಮಂಡಿತರಾದೊಡನೆ ಸರದಾರರು ನಜರಾಣೆಗಳನ್ನು ಸಮರ್ಪಿಸಿದರು. ಅವರ ಎಡ ಭಾಗದಲ್ಲಿ ನಾನಾ ಫಡನೀಸರು ಕುಳಿತಿದ್ದರೆ ಬಲಭಾಗದಲ್ಲಿ ಪುರಂದರೆಯವರು ಕುಳಿತಿದ್ದರು. ಹಿಂಬದಿಯಲಿ ಅಪ್ಪಾ ಸಾಹೇಬ ಬಳವಂತ ಮೆಹಂದಳೆಯು ಕುಳಿತುಕೊಂಡಿದ್ದರು. ಶ್ರೀಮಂತರ ಅಪ್ಪಣೆ ಪಡೆದ ನಂತರ ನಾನಾಫಡನೀಸರು ಅಂದಿನ ದರ್ಬಾರಿನ ಕಾರ್ಯಕ್ರಮವನ್ನು ವಿವರಿಸಿದರು.

ನಾನಾಫಡನೀಸರ ಮಾತುಗಳನ್ನು ಕೇಳಿದಾಗ ಅಲ್ಲಿ ಮಿಳಿತರಾದ ಸರದಾರರೆಲ್ಲ ಒಮ್ಮತದಿಂದ ಏಕೋಭಾವದಿಂದ ನಿಜಾಮರನ್ನೆದುರಿಸಲು ತಮ್ಮ ಬೆಂಬಲವನ್ನು ಸೂಚಿಸಿದರು.

ಪುರಂದರೆಯವರು ಬಂಗಾರದ ತಟ್ಟೆಯೊಂದರಲ್ಲಿ ವೀಳ್ಯವನ್ನು ತಂದು ಶ್ರೀಮಂತರ ಮುಂದೆ ಹಿಡಿದರು. ಆ ತಟ್ಟೆಗೆ ಪೇಶ್ವೆಯ ಹಸ್ತಸ್ಪರ್ಶ ಮಾಡೊಡನೆ ಅದನ್ನು ದರ್ಬಾರಿನ ಮಧ್ಯ ಭಾಗದಲ್ಲಿರಿಸಲಾಯಿತು.

ನಿಜಾಮರೊಂದಿಗೆ ನಮ್ಮ ಹೋರಾಟ. ಇದು ಸೇನಾಪತಿಯ ಪದದ ವೀಳ್ಯವಾಗಿದೆ. ನಿಮ್ಮೆಲ್ಲರ ಅನುಮೋದನೆಯು ದೊರೆತಲ್ಲಿ ನಾವು ಇದನ್ನು ಪರಶುರಾಮ ಭಾವು ಇವರಿಗೊಪ್ಪಿಸಬೇಕೆಂದಿದ್ದೇವೆ" ಎಂದು ನುಡಿದು ಸಭೆಯನ್ನು ಒಂದು ಕ್ಷಣ ವೀಕ್ಷಿಸಿದರು.

ಪರಶುರಾಮ ಭಾವು ಎಂದೊಡನೆ ಎಲ್ಲರ ಮುಖಗಳೂ ಅರಳಿದವು. ಎಲ್ಲರೂ ಒಂದೇ ಕಂಠದಿಂದ ತಮ್ಮ ಒಪ್ಪಿಗೆಯನ್ನು ಸೂಚಿಸಿದರು.

ಶ್ರೀಮಂತರು ಪಟವರ್ಧನರನ್ನು ಮುಂದೆ ಕರೆದು ರಣವೀಳ್ಯವನ್ನಿತ್ತು ರತ್ನ ಖಚಿತವಾದ ಖಡ್ಗವನ್ನು ದಯಪಾಲಿಸಿದರು. ಸೊಂಟಕ್ಕೆ ಭರ್ಜರಿ ಶಾಲನ್ನು ಸುತ್ತಿದರು.

ಅಂದಿನ ದರ್ಬಾರಿನಲ್ಲಿ ಗೋವಿಂದರಾವ ಕಾಳೆಯವರೂ ಇದ್ದರು. ಅವರಿಗಾದ ಆನಂದವಂತೂ ವರ್ಣಿಸಲಸದಳವಾಗಿತ್ತು.

ಪ್ರಯಾಣದ ಮುಹೂರ್ತವನ್ನು ನಿರ್ಧರಿಸಲಾಯಿತು. ಒಂದೂ ಕಾಲು ಲಕ್ಷ ಸೇನೆ ಪ್ರಯಾಣಕ್ಕೆ ಸಿದ್ಧವಾಗಿ ನಿಂತಿತ್ತು. ಶನಿವಾರ ವಾಡೆಯ ದಿಲ್ಲಿ ದರ್ಬಾರ ಮುಂಭಾಗದಲ್ಲಿ ಸಾಲು ಸಾಲಾಗಿ ಆನೆಗಳನ್ನು ತಂದು ನಿಲ್ಲಿಸಲಾಗಿತ್ತು. ಎಲ್ಲ ಆನೆಗಳ ಮುಂಭಾಗದಲ್ಲಿ ಅತಿ ಬಲಾಢ್ಯವಾದ ವಿನಾಯಕ ಎಂಬ ಹೆಸರಿನ ಆನೆಯನ್ನು ನಿಲ್ಲಿಸಿದ್ದರು. ಅದರ ಕೊರಳಲ್ಲಿ ಬಂಗಾರದ ಗಂಟೆಗಳಿಂದ ಕೂಡಿದ ಸರಪಳಿ, ಕಾಲಲ್ಲಿ ಬಂಗಾರದ ಎಳೆಗಳು, ಹಣೆಯ ಮೇಲೆ ಬಂಗಾರದಲ್ಲಿ ಕೆತ್ತಿದ ಸೂರ್ಯಚಂದ್ರರ ವಿಗ್ರಹ ವಿರುವ ಪದಕಗಳು, ಹಿಂಭಾಗದಲ್ಲಿ ಬಂಗಾರದ ಗೋಪುರಗಳಿಂದ ಕೂಡಿದ ಸರಮಾಲೆಗಳು. ಮೇಲೆ ಬಂಗಾರದಿಂದ ಮಾಡಿದ ಅಂಬಾರಿ ಅದರಲ್ಲಿ ಕುತನಿಯ ಲೇಪ, ಮಾವುತನಿಗೆ ಅದೇ ತರಹದ ಭರ್ಜರಿ ಪೋಷಾಕುಗಳಿದ್ದವು.

ಮರಾಠರು ದಂಡೆತ್ತಿ ಬರುತ್ತಿರುವ ಸಮಾಚಾರವನ್ನು ಕೇಳಿ ನಿಜಾಮರೂ ಸಹ ತಮ್ಮ ಸಿದ್ಧತೆಗಳಲ್ಲಿ ತೊಡಗಿದರು. ತಮ್ಮ ಜನಾನಾದ ಪರಿವಾರಕ್ಕಾಗಿಯೇ ಎಂಭತ್ತು ಆನೆಗಳನ್ನು ಮೀಸಲಿರಿಸಿದ್ದರು. ಒಳ್ಳೆ ಸಮಯದಲ್ಲಿ ಆಂಗ್ಲ ಅಧಿಕಾರಿಯಾಗಿದ್ದ ಜಾನ್ ಶೋರ ತಾನು ಈ ಯುದ್ಧದಲ್ಲಿ ಭಾಗವಹಿಸುವದಿಲ್ಲವೆಂದು ತಿಳಿಸಿದ. ಆಂಗ್ಲರೊಂದಿಗೆ ಮರಾಠರ ಒಪ್ಪಂದವಾದುದರಿಂದ ಆ ಒಪ್ಪಂದವನ್ನು ತಾನು ಪಾಲಿಸಲೇಬೇಕಾಗುವದೆಂಬುದಾಗಿ ಸ್ಪಷ್ಟ ಪಡಿಸಿದ. ಇದರಿಂದಾಗಿ ನಿಜಾಮರ ತೋಫುಖಾನೆಗೆ ಸರಿಯಾದ ಮುಖಂಡ ನಿಲ್ಲದಂತಾಗಿತ್ತು. ಆದರೂ ಸಹ ಮಶೀರ ಉಲ್ಮುಲ್ಕರು ಮಾತ್ರ ಹೆದರದೇ ತಮ್ಮ ಸೇನೆಯನ್ನು ಸಜ್ಜುಗೊಳಿಸಿದರು.

ನಿಜಾಮರ ಸೇನೆಯೂ ಕೂಡ ಜಾಮಖೇಡ ಎಂಬ ಪರಗಣಿಯಲ್ಲಿ ನುಗ್ಗಿತು. ಮರಾಠರಿಗೆ ಇದು ಅಗತ್ಯವಾಗಿ ಬೇಕಾಗಿತ್ತು. ಎರಡೂ ಸೇನೆಗಳಲ್ಲಿ ಯುದ್ಧವು ಪ್ರಾರಂಭವಾಯಿತು. ಪಾನಸೆಯವರ ತೋಫುಗಳು ಗರ್ಜಿಸತೊಡಗಿದವು. ಪರಗಣೆಯ ಭಾಗದಲ್ಲೆಲ್ಲ ಹಾ ಹಾ ಕಾರವು ಕೇಳಿಬರತೊಡಗಿತು.

ಜೀವದ ಮೇಲಿನ ಹಂಗಿಲ್ಲದೆ ಎರಡೂ ಕಡೆಯ ಸೈನಿಕರು ಹೋರಾಡುತ್ತಲಿದ್ದರು. ನಿಜಾಮರ ಸೈನ್ಯದಲ್ಲಿ ಜಾಪರ ಜಂಗ, ಸುಖಾನಖಾನ, ಮೀರ್ ಅಲೀ, ರಾಯ ರಾಯನ್ ರಘೋತ್ತಮರಾವ್ ರಾಜೇಂದ್ರ ರಾವರಂಭಾ, ನಿಂಬಾಳಕರ ಮೊದಲಾದ ಸರದಾರರು ಮರಾಠರನ್ನೆದುರಿಸುವದರಲ್ಲಿ ನಿರತರಾಗಿದ್ದರು. ಆದರೆ ಮರಾಠರ ಸೇನೆಯು ಮಾತ್ರ ನಾಲ್ಕೂದಿಕ್ಕಿನಿಂದ ನಿಜಾಮರ ಸೇನೆಯನ್ನಾವರಿಸಿತ್ತು. ಸಿಂಧೆ ಹಾಗೂ ಹೋಳ್ಕರರ ಸೈನ್ಯದಿಂದ ಪಾರಾಗಿ ಹೋಗುವದೇ ಸಾಧ್ಯವಾಗುತ್ತಿರಲಿಲ್ಲ. ಸ್ವತಃ ನಿಜಾಮರನ್ನೆದುರಿಸಲು ವಿಠ್ಠಲಪಂತ ಹಾಗೂ ರಾಮಚಂದ್ರ ಪಂತಬಂಧುಗಳು ಸಿದ್ಧರಾಗಿದ್ದರು. ಯಾವ ದಿಕ್ಕಿಗೆ ಹೊರಳಿದರೂ ಹರ ಹರ ಮಹಾದೇವ ಎಂಬ ಸಾಮೂಹಿಕ ಧ್ವನಿಯು ಗಗನಬಿರಿಯುವಂತೆ ಕೇಳಿ ಬರುತ್ತಿತ್ತು.

ಸಮಯ ಸರಿದಂತೆಲ್ಲ ನಿಜಾಮರ ಸೇನೆಯಲ್ಲಿ ಹೆದರಿಕೆಯ ಛಾಯೆ ಕಾಣಬರತೊಡಗಿತು. ಜೀವಬಾ ದಾದಾ ಹಾಗೂ ಪರಶುರಾಮ ಪಟವರ್ಧನರನ್ನೆದುರಿಸುವದಂತೂ ಯಾರಿಗೂ ಧೈರ್ಯವಿರಲಿಲ್ಲ, ಒಂದು ದಿನ ಇವರಿಬ್ಬರೂ ಸೇರಿಕೊಂಡು ನಿಜಾಮರ ಜನಾನಾಕ್ಕೆ ಸೇರಿದ ಎಂಭತ್ತು ಆನೆಗಳನ್ನೂ ಕೈವಶಮಾಡಿಕೊಂಡರಲ್ಲದೆ ಜನಾನಾದವರನ್ನೂ ಕೂಡ ಬಂಧಿಸಿದರು. ನಿಜಾಮ್ ಸೈನಿಕರಿಗೆ ಕುಡಿಯಲು ನೀರು ಸಿಗದಂತಾಯಿತು. ಅನ್ನ ನೀರಿಲ್ಲದೆ ಸೈನಿಕರು ಪರಿತಪಿಸತೊಡಗಿದರು. ಮಶೀರಉಲ್ಮುಲ್ಕನ ಕನಸು ಒಡೆದು ಚೂರು ಚೂರಾಗಿತ್ತು.

ಪದ್ಮಪಂಚಮಿಯ ದಿನ ಭುಯಿಕೋಟೆ ಕಿಲ್ಲೆಯ ತಳಪಾಯದಲ್ಲಿ ನಿಜಾಮರ ಸೇನೆ ಬೀಡು ಬಿಟ್ಟಿತ್ತು. ಆಗಾಗ ಛಾವಣಿಯಲ್ಲಿ ಗಸ್ತು ತಿರುಗುವುದರ ಕೂಗು ಕೇಳಿಬರುತ್ತಿತ್ತು. ಮರಾಠರು ತಮ್ಮ ಕುದುರೆಗಳಿಗೆ ನೀರು ಕುಡಿಸಲು ನದಿಗೆ ಹೋಗಿದ್ದರು. ಇದ್ದಕ್ಕಿದ್ದಂತೆ ಕುದುರೆಗಳ ಹೇಶಾರವ ಆರಂಭವಾಯಿತು. ಸವಾರರು ಎಷ್ಟು ಸಮಾಧಾನಪಡಿಸಿದರೂ ಹತೋಟಿಗೆ ಬರದಷ್ಟು ಸಪ್ಪಳ ಮಾಡತೊಡಗಿದವು. ಇದರಿಂದಾಗಿ ಮರಾಠರು ಕೂಟಯುದ್ಧವನ್ನಾರಂಭಿಸಿದರೆಂಬ ಶಂಕೆಯು ನಿಜಾಮರ ಸೇನೆಯಲ್ಲಿ ಹಬ್ಬುವಂತಾಯಿತು. ಬಳಲಿ ಬೆಂಡಾಗಿದ್ದ ಸೈನಿಕರೆಲ್ಲ ಪ್ರಾಣಭಯದಿಂದ ಕೋಟೆಯ ಆಶ್ರಯವನ್ನು ಹೊಂದಲು ಪ್ರಯತ್ನಿಸತೊಡಗಿದರು. ಈ ಗದ್ದಲದಲ್ಲಿಯೇ ಸಾವಿರಾರು ಜನ ಪ್ರಾಣವನ್ನು ಕಳೆದುಕೊಂಡರು. ಕೋಟೆಯಲ್ಲಿದ್ದ ನಿಜಾಮರಿಗೆ ಏನೂ ತೋಚದಂತಾಯಿತು.



ದೂರದಲ್ಲಿ ಬೀಡು ಬಿಟ್ಟಿದ್ದ ಮರಾಠ ಸೈನ್ಯಕ್ಕೆ ಈ ಕೋಲಾಹಲದಿಂದಾಗಿ ಎಚ್ಚರವಾಯಿತು. ಅವರು ಮೊದಲು ತಮ್ಮ ಗುಪ್ತಚಾರರನ್ನು ಕಳುಹಿಸಿ ಸತ್ಯ ಸಂಗತಿಯನ್ನೆಲ್ಲ ತಿಳಿದುಕೊಂಡರು. ಆಗ ಪರಶುರಾಮ ಭಾವು ಸ್ವಲ್ಪವೂ ವಿಳಂಬ ಮಾಡದೆ ಕೋಟೆಯನ್ನು ಮುತ್ತಿಗೆ ಹಾಕಿದರು. ನಾಲ್ಕು ದಿಕ್ಕಿನಿಂದ ತೋಫುಗಳು ಕಿಡಿಕಾರ ತೊಡಗಿದವು. ಇದರಿಂದಾಗಿ ನಿಜಾಮರ ಸೇನೆ ಧೂಳಿಪಟದಂತಾಗಿ ಪರಿಣಮಿಸಿತು. ಬೆಳಗಾಗುತ್ತಿದ್ದಂತೆಯೇ ನಿಜಾಮರು ತಮ್ಮ ಶರಣಾಗತಿಯನ್ನು ಸಾರಿದರು,

ಒಪ್ಪಂದದ ಮಾತು ಕತೆಗಳಿಗಾಗಿ ನಾನಾ ಫಡನೀಸ್ ತಮ್ಮ ವಕೀಲರೆಂದು ಗೋವಿಂದರಾವ್ ಕಾಳೆಯವರನ್ನೇ ಕಳುಹಿಸಿದರು.

ಎರಡು ಕೋಟಿ ಅರವತ್ತು ಲಕ್ಷದ ವಸೂಲಿಗಾಗಿ ಯಾವ ಯಾವ ಭಾಗಗಳನ್ನು ಮರಾಠರಿಗೆ ಒಪ್ಪಿಸಬೇಕೆಂಬ ತೀರ್ಮಾನವಾಯಿತು. ನಂತರಗೋವಿಂದರಾಯರು "ನಿಮ್ಮದಿವಾಣರಾದ ಮಶೀರಉಲ್ಮುಲ್ಕರನ್ನು ನಮಗೊಪ್ಪಿಸಬೇಕು" ಎಂದು ಕರಾರನ್ನು ಹಾಕಿದರು. "ವಕೀಲ ಮುತಾಲೀಕ, ಇದು ನಮ್ಮ ಮರ್ಯಾದೆಯ ಪ್ರಶ್ನೆಯಾಗಿದೆ. ದಯ ಮಾಡಿ ಈ ವಿಚಾರದಲ್ಲಿ ತಾವು ಆಗ್ರಹ ಪಡಿಸಬಾರದೆಂದು ನಾವು ಮರು ಅಪೇಕ್ಷಿಸುತ್ತೇವೆ."

ನಿಜಾಮರು ಬಹು ವಿನಯದಿಂದ ಕೇಳಿಕೊಂಡರು.

"ಸಾಧ್ಯವಿಲ್ಲ. ನೀವು ನಿಮ್ಮ ದಿವಾಣರನ್ನು ಒಪ್ಪಿಸದಿದ್ದಲ್ಲಿ ಮುಂದಾಗಬಹುದಾದ ಅನಾಹುತಗಳಿಗೆಲ್ಲ ನೀವೇ ಜವಾಬ್ದಾರರಾಗುತ್ತೀರಿ" ಎಂದು ಬಾಪು ಸ್ಪಷ್ಟವಾಗಿ ನುಡಿದರು. ಆಗ ಮಾತ್ರ ಸಮೀಪದಲ್ಲಿದ್ದ ಮಶೀರಉಲ್ಮುಲ್ಕರು ಸ್ವತಹ ಮುಂದೆ ಬಂದು

"ಹುಜೂರ್, ತಮ್ಮ ಮಾನ ಮರ್ಯಾದೆಗಳಿಗಿಂತ ನಾವು ದೊಡ್ಡವರಲ್ಲ. ದಯಮಾಡಿ ತಾವು ಮರಾಠರ ಕರಾರುಗಳನ್ನೊಪ್ಪಿಕೊಳ್ಳಬೇಕು. ಇದರಿಂದಲೇ ತಮ್ಮ ಕಲ್ಯಾಣವಿದೆ" ಎಂದು ಕೇಳಿಕೊಂಡರು.

ವಿಜಯಿಯಾದ ಮರಾಠಾ ಸೇನೆಯು ಮಶೀರಲ್ಮುಲ್ಕರನ್ನು ತಮ್ಮ ಸಂಗಡ ಕರೆದುಕೊಂಡು ಪುಣೆಯತ್ತ ಮರು ಪ್ರಯಾಣವನ್ನಾರಂಭಿಸಿತು.

ಶ್ರೀಮಂತರನ್ನು ಸ್ವಾಗತಿಸಲು ಪುಣೆ ನಗರವನ್ನು ನವವಧುವಿನಂತೆ ಶೃಂಗರಿಸಲಾಗಿತ್ತು. ಗಣಪತ ಮಹಲಿನಲ್ಲಿ ಕರೆಯಲಾಗಿದ್ದ ದರ್ಬಾರಿನಲ್ಲಿ ಪೇಶ್ವೆಯವರು ತಮ್ಮ ಸರದಾರರಿಗೆಲ್ಲ ಯಥೋಚಿತವಾದ ರೀತಿಯಲ್ಲಿ ಮಾನ ಮರ್ಯಾದೆಗಳನ್ನು ಮಾಡಿದರು.

ಅಂದು ತುಂಬಿದ ದರ್ಬಾರಿನಲ್ಲಿ ಗೋವಿಂದ ರಾವ್ ಕಾಳೆ (ಬಾಪು) ಇವರನ್ನು ಕರೆದು ಬೆಲೆಬಾಳುವ ಶಾಲನ್ನು ಹೊದಿಸಿ ಅನೇಕ ರತ್ನಾಭರಣಗಳನ್ನಿತ್ತರಲ್ಲದೆ, ದೌಲತ್ತಿನ ಸೇವೆಯನ್ನು ಅಭಿಮಾನಧನರಾಗಿ ಮಾಡಿದುದಕ್ಕಾಗಿ ಜಹಗೀರಿಯನ್ನು ಹಾಕಿಕೊಟ್ಟರು. ★

ಇಕ್ಕಟ್ಟಿನ ಬಿಕ್ಕಟ್ಟು!

ನಮ್ಮ ಗೋದಾಮಾಮಿ, ಅವರ ಕಾಲದ ತಮ್ಮ ಸೊಸೆತನದ ಅನುಭವಗಳನ್ನು ಸ್ವಾರಸ್ಯವಾಗಿ ಹೇಳುತ್ತಾರೆ...

ಹಿಡಂಬಿ ಅತ್ತೆಯ ತೀಕ್ಷ್ಣ ಕಣ್ಣುಗಳ ಕಾವಲಿನಲ್ಲಿ ಇವರು ಗಂಡಹೆಂಡತಿಗೆ ಹಗಲು ಹೊತ್ತು ಭೇಟಿಗೆ ಅವಕಾಶವಿಲ್ಲ !

ವೆಂಕ್ಟ್ಯಾಮಾಮಾ ಒಂದು ಪ್ಲಾನ್ ಹಾಕಿದ

ಅತ್ತೆಗೆ ಆನಂದವಾಯಿತು.

"ಸ್ವೆಟರ್ರು, ಶಾಲು ಮರೀಬೇಡ; ಊಟೀಲಿ ತುಂಬ ಚಳಿ..." ಎಚ್ಚರಿಸಿದ.

ಕಿಸಿ ಕಿಸಿ ನಕ್ಕು ಬಿಸಿ ಬಿಸಿ ಕಾಫಿ ಕುಡಿದು ಜಟಕಾ ಏರಲು ಬಂದರು.

ಗಾಡಿಯೊಳಗೆ......

ಟಿ. ಸುನಂದಮ್ಮ

ಗೊತ್ತು! ತಲೆ ಬರಹವನ್ನು ನೋಡಿಯೇ ಮುಖ ಗಂಟು ಹಾಕಿಕೊಂಡಿದ್ದೀರಿ. 'ಸುಲಿದ ಬಾಳೆಯ ಹಣ್ಣಿನಂದದಿ' ಎಂದು ಕವಿ ಹಾಡಿದ್ದರೂ ಕನ್ನಡ ಭಾಷೆಯಲ್ಲಿ ಹಬ್ಬಿಕೊಂಡಿರುವ ಒತ್ತು-ಕೊಂಬು – ಕೊಟ್ಟು - ವಟ್ರಸುಳಿಯಿಂದ ಅದು ಸುಲಿದ ಬಾಳೆಯಾಗದೆ ಕಬ್ಬಿಣದ ಕಡ್ಲೆಯಾಗಿದೆಯೆಂದೂ, ಆ ಬಾಲಂಗೋಚಿಗಳನ್ನು ತೆಗೆದುಹಾಕಿ ಭಾಷೆ ಸರಳವಾಗುವಂತೆ ಪರಿಷ್ಕರಿಸಬೇಕೆಂದೂ ಪ್ರಯತ್ನ ನಡೆಯುತ್ತಿರುವಾಗ. 'ಏಳಕ್ಷರದಲ್ಲಿ ನಾಲ್ಕು ಒತ್ತಕ್ಷರಗಳೇ ?' ಎಂದುಕೊಂಡು ಮುಂದಿನ ಲೇಖನಕ್ಕೆ ಪುಟ ತಿರುಗಿಸುತ್ತೀರೇನೋ !

ಹೆದರಬೇಡಿ ! ಕರ್ಜೀಕಾಯಿ ಎನ್ನುವ ಭಕ್ಷ್ಯಕ್ಕೆ ದೊಡ್ಡ ಮುಸುಕು. ಒಳಗೆ ಗೋಲಿಗಾತ್ರ ಹೂರಣ: ಈ ಲೇಖನ ಅದೇ ಮಾದರಿಯದು. ಜೀವನದಲ್ಲಿ ಎದುರಿಸುವ ಗೊಂದಲದ ಪ್ರಸಂಗಗಳ ಲಘುಚಿತ್ರಣಕ್ಕೆ ಹೆಸರೇನಿಡುವುದು ಎನ್ನುವ ಇಕ್ಕಟ್ಟಿಗೆ ಸಿಕ್ಕಿದೆ: ಆ ಬಿಕ್ಕಟ್ಟೇ ತಲೆಬರಹವಾದದ್ದು !

'ಶೀಬಾ' ಎಂದೊಬ್ಬಳು ರಾಣಿ ಇದ್ದಳಂತೆ. ಅವಳು ಬಹುಜಾಣೆ ! ಅವಳ ಜಾಣತನದ ಪರೀಕ್ಷೆ ತೆಗೆದುಕೊಂಡವನು 'ಸಾಲೋಮನ್' ರಾಜ.



ನಮ್ಮೆಲ್ಲ ಗ್ರಾಹಕರಿಗೂ, ಕೃತಬಾಂಧವರಿಗೂ, ಹಾಗೂ ಹಿತೈಷಿಗಳಿಗೂ

ದೀಪಾವಳಿಯ ಶುಭಾಶಯಗಳು !

ಶ್ರೀ ವಿಜಯ ಜವಳಿ ಅಂಗಡಿ



ಮಾಲಕರು :
ಸೋಮಲಿಂಗಪ್ಪ ವೀರಪ್ಪ
ಮರೇವಾಡ

ಜವಳಿಸಾಲ ಹಿಂದೆ, (ಹಿರೇಮಠದಲ್ಲಿ)
ಕುಬಸದ ಬಿಲ್ಡಿಂಗ ಹುಬ್ಬಳ್ಳಿ-೫೮೦೦೨೦

ನಮ್ಮಲ್ಲಿ ಲಗ್ನ ವ ಮುಂಜಿವೆಗಳಿಗೆ ಬೇಕಾಗುವ

- ಭರಜ್ಞರಿ ಬನಾರಸ ಪೀತಾಂಬರ
- ಧರ್ಮಾವರಂ, ಸೇಲಂ ಕೊಯಿಮುತ್ತೂರ ಹಾಗೂ ಹ್ಯಾಂಡಲೂಮ ಸೀರೆ ವ ಪತ್ತಲಗಳು
- ಹುಬ್ಬಳ್ಳಿ ಟೋಪತೆನಿ ನೀರಿಗೆಯ ಸೀರೆಗಳು
- ವಾಯಿಲ್. ಕ್ರೀಮಶಿಲ್ಕ್. ಪೂಲಿಸ್ಟರ. ವಗೈರೆ ಪ್ರಿಂಟ ಪತ್ತಲಗಳು
- ಶರ್ಟಿಂಗ, ಧೋತರ ಜೋಡಿ, ಟಾವೆಲ್ ವಗೈರೆ ಭರಪೂರ ಬಂದಿವೆ.

ಒಮ್ಮೆ ಸಂದರ್ಶಿಸಿ ಖಾತ್ರಿ ಮಾಡಿಕೊಳ್ಳಿರಿ !

ದೀಪಾವಳಿಯ ಶುಭಾಶಯುಗಳು



ಮುಖ ಶುದ್ಧಿಗಾಗಿ

ಚಮನ

'ಚಮನ' ಅತ್ಯಂತ ಸ್ವಾದಿಷ್ಟ ರುಚಿಕರ ಅಲ್ಲದೇ ಮಹಾ ಸುಗಂಧಿತ ಚೂರ್ಣವಿದೆ. ಇದರ ಸೇವನೆಯಿಂದ ಬಾಯಿಗೆ ರುಚಿ ಬರುವುದು ಮುಖವು ಸುಗಂಧಮಯವಾಗುವದು.

ಚಮನದಲ್ಲಿ ಏನಿರುವುದು ?


ಚಮನದಲ್ಲಿ ಜೇಷ್ಠಮಧು, ಕೇಸರಿ, ಕಸ್ತೂರಿ, ಲವಂಗ, ಏಲಕ್ಕಿ, ಜಾಯಪತ್ರೆ, ಕಂಕೋಳ, ಬಡೆಸೋಪು ಹಾಗೂ ಮೆಂಥಾಲ. ಮುಂತಾದ ನಾನಾ ಪ್ರಕಾರಗಳ ಸುಗಂಧಿತ ಮತ್ತು ರುಚಿಕರ ವಸ್ತುಗಳನ್ನು ಶಾಸ್ತ್ರೀಯ ಪದ್ಧತಿಯಂತೆ ಮಿಶ್ರ ಮಾಡಿರುವುದರಿಂದ ಅಬಾಲವೃದ್ಧರು ಇದನ್ನು ಸೇವಿಸಬಹುದು,

—: ಸಂಗ್ರಾಹಕರು :—

ಬೆಂಗಳೂರು: :
೧. ಸಿಟಿ ಮೆಡಿಕಲ್ ಆ್ಯಂಡ್ ಜನರಲ್ ಸ್ಟ್ರೋರ್ಸ ಚಿಕ್ಕಪೇಟೆ
೨; ಕಲ್ಕತ್ತಾ ಪಾನ ಹೌಸ ಚಿಕ್ಕಪೇಟೆ ಕ್ರಾಸ್,
೩. ಎಸ್. ವೆಲ್ಲಾಯಿಚಾಮಿ ಆ್ಯಂಡ್ ಸನ್ಸ್. ಅವಿನ್ಯೂ ರಸ್ತೆ
ಮೈಸೂರು : ಲಕ್ಷ್ಮೀ ಸ್ಟ್ರೋರ್ಸ, ಶ್ರೀರಾಮ ಪೇಟೆ,
ಬಳ್ಳಾರಿ: ಫ್ರುಟ್ ಸೇಲ್ ಪಾನ ಮಹಲ. ಕಾರಸ್ಟ್ರೀಟ್,

ಹುಬ್ಬಳ್ಳಿ : ನ್ಯೂ ಕರ್ನಾಟಕ ಏಜನ್ಸೀ ಸಿದ್ಧೇಶ್ವರ ರೋಡ
ಅತುಲ ಏಜನ್ಸೀ.
ಧಾರವಾಡ : ಎಚ್. ಎ. ಮಹೀಂದ್ರಕರ ಆ್ಯಂಡ್ ಸನ್ಸ,
ಮೇನ ರೋಡ.
ಹೊಸಪೇಟೆ : ಆರ್. ಸೋಮಪ್ಪ ಶೆಟ್ಟಿ ಆ್ಯಂಡ್ ಸನ್ಸ
ಮೇನ್ ರೋಡ,

ಸ್ಟಾರ ಕಂಪನಿ, ಬೆಳಗಾವಿ



ಮೇಜಿನ ಮೇಲೆ ಎರಡು ಹೂದಾನಿ ಇರಿಸಿತ್ತು : ಎರಡರಲ್ಲೂ ಒಂದೇ ರೀತಿಯ ಒಂದೇ ಬಣ್ಣದ ಹೂ ಜೋಡಣೆ, ರಾಜ ಕೇಳಿದ ! "ಇವುಗಳಲ್ಲಿ ಕೃತಕ ಯಾವುದು ಸಹಜಯಾವುದು ಹೇಳಬಲ್ಲಿರಾ ರಾಣಿ ಶೀಬಾ?"

ರಾಣಿ ಒಂದೆರಡು ನಿಮಿಷ ಯೋಚಿಸಿದಳು: "ಕಿಟಕಿಗಳನ್ನು ತೆರೆಯಿರಿ !" ಆಜ್ಞೆಮಾಡಿದಳು, ಕಿಟಕಿಗಳನ್ನು ತೆರೆದಾಗ ದುಂಬಿಗಳು ನುಗ್ಗಿದವು. ಸಹಜ ಪುಷ್ಪಗಳ ಮೇಲೆ ಕೂತವು !

ಇಕ್ಕಟ್ಟಿನ ಪ್ರಸಂಗದಲ್ಲಿ ಶೀಬಾರಾಣಿಯೇನೋ ಗೋಜಲು ಬಿಡಿಸಿಬಿಟ್ಟಳು ! ಆದರೆ, ಮೊನ್ನೆ ಪೂರ್ಣಿಮೆಯ ದಿನ ಪದ್ಮನಾಭರಾಯರ ಮನೆಯಲ್ಲಿ ಸತ್ಯನಾರಾಯಣ ಪೂಜೆ ನಡೆದಾಗ, ಪುರೋಹಿತ ಪ್ರಾಣೇಶಾಚಾರ್ಯರಿಗೆ ಆದ ಅನುಭವವೇ ಬೇರೆ ! ಮಂಟಪಕ್ಕೆ ಕಟ್ಟಿದ್ದದ್ದು ಸೊಗಸಾದ ಬಾಳೆ ಕಂದು ಜೋಡಿ ; ಅದರ ಒಂದು ಎಲೆ ಬಗ್ಗಿದ್ದು ದೀಪದ ಕಂಬಕ್ಕೆ ತಗುಲುವಂತಿದ್ದಾಗ "ಎಲೆ ಹಿಂದಕ್ಕೆ ಮಾಡಿ ರಾಯರೇ" ಎಂದಾಗ ಎಲ್ಲರೂ ಗೊಳ್ಳನೆ ನಕ್ಕರು. ಮಂಟಪಕ್ಕೆ ಕಟ್ಟಿದ್ದದ್ದು, ಪ್ಲಾಸ್ಟಿಕ್ ಬಾಳೆ ಕಂದು ! ಪಾಪ ! ಆನಂತರ ಆಚಾರ್ಯರ ಪೂಜೆ, ತೇಪೆದುಪಟಿಯಾಯ್ತು. ಯಾವ ಹೂವು ಅಸಲಿ ಯಾವ ಹೂವು ನಕಲಿ ಎಂದು ಅನುಮಾನಿಸುತ್ತಲೇ ಎತ್ತುವುದರಲ್ಲಿ, ಮಂತ್ರ ತಿರುಮಂತ್ರವಾದದ್ದೇನಾಶ್ಚರ್ಯ ?

ನಮ್ಮ ಗೋದಾಮಾಮಿ ಅವರ ಕಾಲದ ತಮ್ಮ ಸೊಸೆತನದ ಅನುಭವಗಳನ್ನು ಸ್ವಾರಸ್ಯವಾಗಿ ಹೇಳುತ್ತಾರೆ. ಹಿಡಂಬಿ ಅತ್ತೆಯ ತೀಕ್ಷ್ಣಕಣ್ಣುಗಳ ಕಾವಲಿನಲ್ಲಿ ಇವರು ಗಂಡಹೆಂಡಿರಿಗೆ ಹಗಲು ಹೊತ್ತು ಭೇಟಿಗೇ ಅವಕಾಶವಿಲ್ಲ ! ದುಡಿದು ಸೋತ ಹುಡುಗಿಗೆ ರಾತ್ರಿ ವೇಳೆಗೆ ಶೃಂಗಾರ ಅಂಗಾರವಾಗಿ ನಿದ್ದೆಯ ಮುದ್ದೇ ನಿಕ್ಷೇಪವಾಗುವ ಪರಿಸ್ಥಿತಿ.

ವೆಂಕ್ಣು ಮಾಮ ಒಂದು ಪ್ಲಾನ್ ಹಾಕಿದ : ಹೆಂಡತಿಗೆ ಹೇಳಿದ, 'ಶಾಭಾಸ್' ಎಂದಳು. ತಾಯಿಯ ಬಳಿ ಹೇಳಿಕೊಂಡ–" ಅಮ್ಮಾ ! ನೀನು ಮೊಮ್ಮಗೂನ ಕಂಡಿಲ್ಲ ಇನ್ನೂ ಅಂತ ಸದಾ ಕೊರಗ್ತೀಯ : ಅದಕ್ಕೆ ಮೇಳೂರು ಸಂತಾನ ಗೋಪಾಲಕೃಷ್ಣನ ಸೇವೆ ಮಾಡಿ ಬರೋಣಾಂತಿದೇವೆ. ಶನಿವಾರ ಭಾನುವಾರ ಹೋಗೋಣ ಅಂತ..."

ಅತ್ತೆಗೆ ಆನಂದವಾಯಿತು. ಶನಿವಾರ ಭಾನುವಾರ ಎರಡೇದಿನವೇ? ಗುರುವಾರ ಶುಕ್ರವಾರಾನೂ ರಜ ಹಾಕು, ನಾಲ್ಕ್ದಿನ ಸೇವೆ ನಡೆಸಿ "ಕಣ್ಣು ತೆರೀಪ್ಪಾ!" ಎಂದರು. ಸಂತಾನ ಕೃಷ್ಣಾ ! "ಕಣ್ಣು ! ಎಂದು ಕೆನ್ನೆಗೆ ಹೊಡೆದುಕೊಂಡರು.

ಅಚ್ಚುಕಟ್ಟಾಗಿ ಪ್ಯಾಕಿಂಗ್ ನಡೆಸಿದರು. "ಸ್ವೆಟರು ಶಾಲುಮರೀಬೇಡ; ಊಟೀಲಿ ತುಂಬ ಚಳಿ" ಎಚ್ಚರಿಸಿದ ವೆಂಕ್ಣುಮಾಮ "ಎರಡನೇ ಮಧುಚಂದ್ರಕಣೇ" ಅಂದ.

"ಅಲ್ರೀ ! ಅತ್ತೇಗೆ ಪ್ರಸಾದ ತಂದ್ಕೊಡ ಬೇಡವೇ ? "

"ಅದಕ್ಕೇನು? ವಾಪಸ್‌ಬರ್‍ವಾಗ ಚಾಮುಂಡೇಶ್ವರಿ ದರ್ಶನ ಮಾಡೋದು, ತರೋದು. ಮೈಸೂರಾದರೇನು ಮೇಳೂರಾದರೇನು ಪ್ರಸಾದ ಇದ್ರಾಯ್ತು !"

ಕಿಸಿಕಿಸಿ ನಕ್ಕು ಬಿಸಿ ಬಿಸಿ ಕಾಫಿ ಕುಡಿದು ಜಟ್ಕಾ ಏರಲು ಬಂದರು. ಗಾಡಿಯೊಳಗೆ........ ಹನ್ನೆರಡೂ ವರ್ಷದ ಹುಡುಗಿ, ನಾದಿನಿ ಸುಂದ್ರಿ!

"ನೀವಿಬ್ರೂ ರತಿಮನ್ಮಥರ ಹಾಗಿದೀರಿ, ಯಾರದಾದ್ರೂ ಕಣ್ಣು ಬಿಡಿದೀತು. ಜತೇಗೆ ಅದಕ್ಕೇ ಸುಂದ್ರೀನ ದೃಷ್ಟಿಪರಿಹಾರಕ್ಕೆ ಕಳ್ಸದೀನಿ." ಅತ್ತೆಯ ಗಡಸುಗಂಟಲು ಮೊಳಗಿದಾಗ, ದಂಪತಿಗಳ ಇಕ್ಕಟ್ಟು...? "

ಗೆಳತಿ ಕಮಲೆಗೆ 'ಏನಾದರೂ' ಬರೆಯುವ ಚಪಲ. ಆದರೆ 'ಸಾಹಿತಿ' ಎನ್ನಿಸಿಕೊಳ್ಳುವ ಸ್ಥಿತಿ ಇಲ್ಲ. ಅಂಥದರಲ್ಲಿ, ಭಾರೀ ಸಾಹಿತ್ಯ ಕೂಟಕ್ಕೆ ಆಹ್ವಾನ ಬಂದಾಗ–ಆಶ್ಚರ್ಯ, ಸಂತೋಷ, ಹೆಮ್ಮೆ.

ದುಂಡುಮೇಜು; ಸುತ್ತ ಮೆತ್ತೆ ಕುರ್ಚಿಗಳು; ಟೇಬಲ್ ಮೇಲೆ ತಿಂಡಿ ತಟ್ಟೆಗಳು. ಕಮಲ ಸೋಫಾಸೀನಳಾದಾಗಲೇ ಸ್ಥೂಲದೇಹಿ ಸ್ತ್ರೀರತ್ನ ಪಕ್ಕಕ್ಕೆ ಕೂತದ್ದು ; ಆ ರಭಸಕ್ಕೆ ಕಮಲ ಪುಟ ಹಾಕಿದ ಚೆಂಡಿನಂತೆ ಹಾರಿದ್ದು. ನಾರೀ ಪಲುಕಿದ ಆ ಹಿರಿ (?) ಸಾಹಿತಿ ಕಮಲೆಗೆ-ತಾನು ಧರ್ಮಪುರೀ ಧ್ರುವರಾಯರ ಪತ್ನಿ ಗೀತಾದೇವಿಯೆಂದೂ, ಅಂಕಿತ ನಾಮ 'ಧ. ಡಿ. ಗೀ., ಎಂದೂ ಪರಿಚಯಿಸಿಕೊಂಡಳು. ತನ್ನ ಕೃತಿಗಳ ದೊಡ್ಡ ಪಟ್ಟಿಯುದೇ ಪಾಠ ಒಪ್ಪಿಸಿದಳು.

ಈಕೆ ತನ್ನ ಹೆಸರು ಕಮಲಾಬಾಯಿ ಎಂದು ಹೇಳಿದಾಗ "ನೀವೇ ಕಮಲಾಬಾಯಿ ? ಹೊರೆ



"ಸಂತೋಷವಾಯ್ತು ನಿಮ್ಮ ಭೇಟಿ ಆದದ್ದು" ಎನ್ನುತ್ತ ತನ್ನ ಹೊರೆ ಹಿಗ್ಗನ್ನು ಪ್ರೂವ್ ಮಾಡಲು ತನ್ನ ಹೊರೆ ಕೈಗಳಲ್ಲಿ ಆಕೆಯ ಕಿರುಗೈಗಳನ್ನು ಹುದುಗಿಸಿ ಹಿಸುಕಿದಳು ಧ. ಡಿ. ಗೀ: ನೋವು ನುಂಗಿ ಹಲ್ಲು ಕಿರಿದ ಕಮಲೆಗೆ ಒಳಗೇ ಅಚ್ಚರಿ! ತಾನು ಬರೆದಿರುವುದು (ಪ್ರಕಾಶಿತ) 'ಮೌನಗೌರೀ ವ್ರತಾಚರಣೆ' (ಅಜ್ಜಿಯ ಒತ್ತಾಯಕ್ಕೆ ತಾನು ನಡೆಸಿದ್ದದ್ದು) ಹಾಗೂ 'ಅವಲಕ್ಕಿ ಸಂಡಿಗೆ ಹಾಕುವ ವಿಧಾನ' (ಅನುಭವಾಮೃತ!) ಅಷ್ಟಕ್ಕೆ ...?

"ನಿಮ್ಮ ಕೀಲುಗೊಂಬೆ" ಕಾದಂಬರಿ ಅದ್ಭುತ! "ಪತಿಯೂ ಪರ್ಸೂ" ಕವನ. "ಹೆಗ್ಗಣವೋ ಮೈದುನನೋ" ಕಿರುಗತೆ... "-ಗೀತಾದೇವಿಯ ಪಟ್ಟಿ ಮುಂದುವರಿಯುತ್ತಿದ್ದಾಗ ಎಚ್ಚರಾದ ಕಮಲ ಥಟ್ಟನೆ ಕಟ್ ಮಾಡಿದಳು. "ಅದೆಲ್ಲ ನಾನು ಬರೆದದ್ದಲ್ಲ!"

"ಹಾಗಾದರೆ...ನೀವು...ನೀ! ಈ! ಕಮಲಾ ಬಾಯಿ ಅಲ್ವೇ?"

"ಅಲ್ಲ! ಕಾ. ರಾ. ಕಮಲಾಬಾಯಿ"

"ಘುಸ್‌ಸ್‌ಸ್! ಮಿಸ್ಟೇಕ್ ಮಾಡ್ಕೊಂಡು ನಿಮಗೆ ಕಾರ್ಡ್ ಕಳ್ಸಿದಾರೆ ಹಪ್ಪ ಹಪ್ಪ!"

ಕಾರಾ ಕಮಲಾಬಾಯಿ ಬಾಯಿನಲ್ಲಿಟ್ಟುಕೊಂಡಿದ್ದ ಸಿಹಿ ತಿಂಡಿ, ಕಹಿಯಾಯ್ತು!

ದೀಪಾವಳಿ ಅಳಿಯನ ಹಬ್ಬ. 'ಅಳಿಯ ದೇವರು' ಎಂದನಿಸಿಕೊಳ್ಳುವವರು: ಕೆಲವರು "ಅಳಿಯ ಮನೆ ತೊಳಿಯ" ಬಿರುದು ಬಾಚಲಿ ಮತ್ತೆ ಕೆಲವರಿಗೆ!

ಸೀತೂರಾಮ ಎರಡನೆಯ ಬಾಬತ್ತಿನವನು. ಸರಿಯಾದ ಕೆಲಸ ಸಿಕ್ಕಿಲ್ಲವೆಂದು ಮದುವೆಯಾಗಿ ಮೂರುವರ್ಷ ತುಂಬುತ್ತಿದ್ದರೂ 'ಬ್ರಹ್ಮಚಾರಿ' ಜೀವನ ನಡೆಸುತ್ತಿದ್ದ. ತಾಯಿ ಸಾಕಮ್ಮ "ಮೂರನೇ ದೀಪಾವಳಿ ಆದರೇನಂತೆ?" ಎನ್ನುತ್ತ ಅವನ ಮಾವನ ಮನೆಗೆ ಅಟ್ಟಿದಳು! ಅತ್ತೆ ಆದರದಿಂದ ಒಳಕ್ಕೆ ಕರೆದರು, ಮಾವ ಬೆನ್ನಿಗೆ ಕೈಹಾಕಿ ಒಳಕ್ಕೆ ಒಯ್ದರು, ಕುಸುಮ ಹೂವಿನ ನಗೆ ನಕ್ಕಳು!... ಸೀತೂರಾಮ ಈ ಸ್ವಾಗತದ ಷಾಕ್‌ನಿಂದ ಸುಧಾರಿಸಿಕೊಳ್ಳಲು ಹತ್ತು ನಿಮಿಷಗಳೇ ಬೇಕಾದವು.

ಬೊಂಬಾಯಿನಲ್ಲಿ ಭಾರೀ ಕಂಪನಿಯೊಂದರ ಮ್ಯಾನೇಜರ್ ಆಗಿ ಚಾರ್ಜು ತೆಗೆದುಕೊಂಡಿದ್ದಾನೆ! ವಾರಗಳು ಕಳೆದವರೆಗೆ ಪೇರಿಕೆ ಆಗಿವೆ. ಕ್ಯಾಮರಾಗಳ 'ಫ್ಲ್ಯಾಷ್' ಎದುರು ಎಲ್ಲರ ಕೈ ಕುಲುಕುತ್ತಿದ್ದಾನೆ !...ಬಾಗಿಲು ಬಡಿಯಿತು: ಬೆಚ್ಚಿ ಎದ್ದು ಕೂತ ಸೀತೂರಾಮ.

"ಹಿಹಿ... ನಿದ್ದೆ ಆಯ್ತೇ? ಹಿಹಿ... ನಮ್ ಸೊಸೈಟಿ ನೋಡಿದೀರಲ್ವೇ? ಹೋದಸಾರಿ ಹಬ್ಬದಲ್ಲಿ ಅಲ್ಲೇ ಪಂಚೆ ಜೊತೆ ತೆಗೆಸ್ಕೊಂಡಿದ್ರಲ್ಲ ನನ್ನ ಕೈಲಿ... ಅಲ್ಲೇ! ಸ್ಪೆಷಲ್ಲಾಗಿ ಅಕ್ಕಿ ಸಕ್ರೆ ಕೊಡ್ತಾರೆ. ಬೇಗ ಹೋದರೆ... ಹಿಹಿ... 'ಕ್ಯೂ'ನಲ್ಲಿ ಮುಂದೆ ನಿಲ್ಲಬಹುದು" ಎನ್ನುತ್ತ ಎರಡೂ ಹೆಗಲಿಗೆ ಚೀಲಗಳನ್ನು ನೇತುಹಾಕಿದ. ಮಾವಯ್ಯ.

ಅರ್ಧ ಮೈಲುದ್ದದ 'ಕ್ಯೂ' ಅವರೆಲ್ಲ ಬಹುಶಃ ರಾತ್ರಿ ಅಲ್ಲೇ ಮಲಗಿದ್ದರೇನೋ? ಬಾಲಕ್ಕೆ ಅಂಟಿದ ಸೀತೂರಾಮ ಮನೆ ಸೇರಿದಾಗ ಹನ್ನೆರಡು ಬಡಿದಿತ್ತು :

ಮೂರನೇ ದಿನ ನೆರೆಮನೆ ಕಾರ್ಡಿನಲ್ಲಿ ದಿನಸಿ ಹೊರಮನೆ ದಾಕ್ಷಿಣ್ಯದಲ್ಲಿ ಸೀಮೆಎಣ್ಣೆ ಕಲೆಕ್ಟ್ ಮಾಡಿದ ಮೇಲೆ, ಮತ್ತಿನ್ನೇನು ಗ್ರಹಚಾರ ಕಾದಿದೆಯೋ ಎಂದು ಗಾಭರಿಯಾದ.

ಹಬ್ಬದ ಬೆಳಿಗ್ಗೆ ಜಗುಲಿಯ ಕಂಬ ಒರಗಿ ಕೂತ ಮಗನನ್ನು ಕಂಡ ಸಾಕಮ್ಮ ಹೌಹಾರಿದಳು: "ಹಬ್ಬದ ಇಕ್ಕಟ್ಟಿನಿಂದ ಪಾರಾದೆ ಅಮ್ಮಾ!" ಎಂದು ಹಲ್ಲು ಕಿಸಿದ, ಆ ಹಳಸು ಅಳಿಯ!

ಬೇಡದ ಅಳಿಯನನ್ನು ಕರೆಸಿ ಕಿರಿ ಮಕ್ಕಳನ್ನೂ ಮನೆಯನ್ನೂ ಅವನಿಗೊಪ್ಪಿಸಿ ಅವನ ಧರ್ಮಪತ್ನೀ ಸಹಿತ ಧರ್ಮಸ್ಥಳಕ್ಕೆ ಯಾತ್ರೆ ಹೋದವರು ಒಂದು ಘಾಟಿ ದಂಪತಿಗಳಾದರೆ. ಮಾವನ ಲೆಕ್ಕದಲ್ಲಿ ಜವಳಿ ಕೊಂಡು ತಂದು ಅವರಿಗೇ ಉಡುಗೊರೆ ಕೊಟ್ಟು ಊರಿಗೆ ಗಾಡಿ ಬಿಟ್ಟು ಭಂಡ ಅಳಿಯ ಇನ್ನೊಬ್ಬ!

ಇಂತಹ ವಿವಿಧ ವಿನೋದಾವಳಿಯ ಹಬ್ಬ, ದೀಪಾವಳಿ. ಮಾವ-ಅಳಿಯ "ಕಾರ್ಪೆಟ್ ಕೆಳಗೆ ನೀನು ತೂರಿದರೆ ಫ್ಲೋರಿಂಗ್ ಅಡಿ ನಾನು ತೂರುತ್ತೇನೆ" ಎಂದುಕೊಳ್ಳುತ್ತ ಪೈಪೋಟಿಯ ಮೇಲೆ ಇಕ್ಕಟ್ಟಿನ ಬಿಕ್ಕಟ್ಟನ್ನು ಬಿಡಿಸಿಕೊಳ್ಳುವ ಪ್ರಯತ್ನ, ನಡೆಯುತ್ತಲೇ ಇರುತ್ತದೆ.

ಹೊಚ್ಚ ಹೊಸ ಅಳಿಯನಿಗೆ ಯಾವ ತಾಪತ್ರಯವೂ ಇಲ್ಲ: ಮೂರು ದಿನಗಳ ಅತ್ತೆಮನೆ ವಾಸದ ವಿಪರೀತದ ಉಪಚಾರದಲ್ಲಿ ಏರಿರುವ ನಾಲ್ಕು ಸುತ್ತು ಬಳಸು 'ಬಾಡಿ'ಯನ್ನು ಮಾಮೂಲಿಳತೆಗೆ ಹಿಂದಿರುಗಿಸುವ ಮಾರ್ಗ ಹೇಗೆ ಅನ್ನುವದೊಂದೇ ಇಕ್ಕಟ್ಟು! ✡



"ಏನು? ಪಟಾಕಿ ಹಚ್ಚಬೇಕಾ! ಸಾಕಷ್ಟು 'ಸಿಕ್' ಲೀವ್ ಇದೆ ತಾನೆ!"



ಪರಸ್ಪರ


ಕಪ್ಪೇರುತ್ತಿದ್ದ ಮೋಡಗಳು ತಲೆಯ ಮೇಲೆ
ಹನಿಯಾಗಿ ಹೊರಟ ಮಳೆ
ಪಾರ್ಕಿನ ಬಳಿ ನಿನ್ನನ್ನು ಕಾಣುವಷ್ಟರಲ್ಲಿ
ಮುಸ್ಸಂಜೆಯ ಸ್ಲೇಟಿನಲ್ಲಿ
ನೀರಿನ ಗೆರೆಯಾಗುತ್ತಿತ್ತು
ಹೆಜ್ಜೆ ಹಾಕುತ್ತಿದ್ದಂತೆ ಗೇಟು ಹಿಂದಾಯಿತು
ನಿನ್ನ ಎಡಗೈಯಲ್ಲಿ ಮುದುಡಿದ ಕೊಡೆ
ನನ್ನ ಬಲ ಕೈಯಲ್ಲಿಯೂ.
ಸುರಿಯುತಿದ್ದ ಮಳೆ
ಒಳಗೊಳಗೇ ಬಿರುಸಾಗುತ್ತಿದ್ದರು
ಅರಳದವು ಕೊಡೆಗಳು ಮಾತ್ರ

ಆಕಾಶ ತಿಳಿಯಾಗಿತ್ತು
ಮರಗಳ ಮರೆಯಿಂದ ಹೊರಟಾಗ
ವಾಚು ನೋಡಿದೆ. ಒಂದೇ ಮುಳ್ಳು !
ಡಯಲು ಕತ್ತಲಿನಲ್ಲಿ ಅಂಕೆಯ ಮಿಂಚುಹುಳುಗಳು
ಒಂಬತ್ತಕ್ಕೆ ಕೆಲವೇ ನಿಮಿಷಗಳು.
ದಾರಿಯ ಕವಲಿನಲಿ ಕೈಹೆಣಿಗೆ ಸಡಿಲಿಸಿ
ಅಂಗಳಕ್ಕೆ ಬಂದೆ
ಅಂಚಿನ ತನಕ ಮಾಡು. ಕಟ್ಟದ ಬೆಳಕು.
ಅಲ್ಲೇ ಇದ್ದ ತಂಗಿ ಕೇಳಿದಳು:
ಕೊಡೆ ? ನಕ್ಕಳು. ಒಳಗೋಡಿದಳು.
ನೋಡಿದೆ, ಬದಲಿತ್ತು.
ಬಿಡಿಸಿದೆ, ಕಡ್ಡಿ ಕಿತ್ತು ಹೋಗಿತ್ತು
ನಿನಗೂ ಮತ್ತೆ ಗೊತ್ತಾಗಿರಬೇಕಲ್ಲ
ನನ್ನ ಕೊಡೆಗೆ ಇಲಿ ಬಾಯಿ ಹಾಕಿದ್ದು.

ಶ್ರೀಕೃಷ್ಣ ಚೆನ್ನಂಗೋಡ್

ಕನ್ನಡ ರಂಗಭೂಮಿ
ಎಂಬತ್ತರ ಒಲವುಗಳು

*ಕ. ವೆಂ. ರಾಜಗೋಪಾಲ



ರಂಗಭೂಮಿಯ 'ಆದ್ಯ' ಶ್ರೀರಂಗರು

ಕಳೆದ ದಶಕದಲ್ಲಿ ಕೊಂಚ ಸುಧಾರಿಸಿದ್ದ ಆದರೆ ಮತ್ತೆ ಕಾಣಿಸಿಕೊಂಡಿರುವ ಆತಂಕವೆಂದರೆ ಪ್ರೇಕ್ಷಕರದ್ದು ಎನ್ನಬಹುದು. ಇದಕ್ಕೆ ಕಾರಣಗಳೂ ಇವೆ. ನಮ್ಮ ಹವ್ಯಾಸಿ ಸಂಸ್ಥೆಗಳು ಸಿನಿಮಾದ ಹುಚ್ಚಿಗೆ ಗುರಿಯಾಗಿ ನಾಟಕದ ಅಭಿನಯವನ್ನು ತಮ್ಮ ಎರಡನೆ ಆಯ್ಕೆಯಂತೆ ನಡೆದುಕೊಳ್ಳತೊಡಗಿದ್ದಾರೆ. ಇಂದು ನಾಟಕಕಾರರಿಂದ ಹಿಡಿದು ರಂಗಭೂಮಿಯ ಸಕಲ ಸಿಬ್ಬಂದಿಯೂ ಬೆಳಕಿನವರೂ ಮೇಕಪ್ಪಿನವರೂ ಕೂಡ ಮಾಡುತ್ತಿರುವ ನೀತಿಯೇ ಆಗಿದೆ. ಆದುದರಿಂದ ಹವ್ಯಾಸಿ ಸಂಸ್ಥೆಗಳು ಕನ್ನಡ ಒಳ್ಳೆಯ ನಾಟಕಗಳನ್ನು ವೃತ್ತಿಕ ಪ್ರಯೋಗಗಳಾಗಿಸದೆ ಬಿಟ್ಟುಕೊಟ್ಟವೆ. ಈ ಇವರ ತುಯ್ದಾಟವು ಪ್ರೇಕ್ಷಕರನ್ನು ಉಳಿಸಿಕೊಳ್ಳುವಲ್ಲಿ ಸೋತಿದೆ ಎನ್ನಬಹುದು. ಎರಡನೆಯ ಕಾರಣ ಕೆಟ್ಟ ಪರಿಣಾಮ ಕೆಟ್ಟ ಸಿನಿಮಾ ಪ್ರವೃತ್ತಿಗಳನ್ನು ಪ್ರಸಾರಮಾಡುತ್ತಿರುವ ಮತ್ತು ಉತ್ತೇಜಿಸುತ್ತಿರುವ ನಮ್ಮ ಟಿ. ವಿ ಕೇಂದ್ರದ ಕಡೆಯಿಂದ ಎಂದು ಹೇಳಬೇಕಾಗಿದೆ.

Deepavali Greetings :

ಬಾಹುಬಲಿ ಸ್ಟೀಲ್ಸ

Bahubali STEELS

Dealers in :

IRON, STEEL & CEMENT

'Shantinath' Mahaveer galli,

HUBLI-580 028.

Phone : 63726 P. P.

ದೀಪಾವಳಿಯ ಶುಭಾಶಂಸೆಗಳು

ಬ್ಲಾಕ್ ಮೇಕರ್ಸ್ ಮತ್ತು

ಕಮರ್ಶಿಯಲ್ ಡಿಸೈನರ್ಸ್

ನಿಮ್ಮ ಬೇಡಿಕೆಗಳಿಗಾಗಿ ಇಂದೇ ಸಂದರ್ಶಿಸಿರಿ

ಮೆ. ಐಡಿಯಲ್ ಫೋಟೋ ಝಿಂಕೊ ವರ್ಕ್ಸ್

ಸಂಯುಕ್ತ ಕರ್ನಾಟಕ ಕಂಪೌಂಡ,

ಹುಬ್ಬಳ್ಳಿ-20. ಫೋನ್; 64117

"ಹಾಲ್ಟ"

ಶುದ್ಧವಾದ

ಕೊಬ್ಬರಿ ಎಣ್ಣೆಯಿಂದ ಹೇರಳ ಕೂದಲ ಬೆಳೆಸಿರಿ.

ನೈಸರ್ಗಿಕ ವಿಧಾನಗಳಿಂದ ತಯಾರಿಸಿದ
ತನ್ನದೇ ಆದ ವೈಶಿಷ್ಟತೆಯನ್ನು ಹೊಂದಿದ
"ಹಾಲ್ಟ" ಪರಿಶುದ್ಧವಾದ ಕೊಬ್ಬರಿ
ಎಣ್ಣೆಯು ಕೇಶವರ್ಧನೆಗೆ ಸೃಷ್ಟಿಯ
ಅಮೂಲ್ಯ ಕಾಣಿಕೆಯಾಗಿದೆ.
ಕೂದಲಿನ ಅಂದಕ್ಕೆ ಶೃಂಗಾರ ಸಾಧನೆ.
ಕೇಶರಾಶಿಯ ಶೃಂಗಾರ ಕಾಪಾಡಲು
ಇಂದೆ 'ಹಾಲ್ಟ' ಕೊಬ್ಬರಿ
ಎಣ್ಣೆಯನ್ನು ಕೊಳ್ಳಿರಿ.



Effective

ಹಾಜೀ ಅಬ್ದುಲ್ ಲತೀಫ್ ತಾಯುಬ

ಹಳೇ ತರಗುಪೇಟೆ, ಬೆಂಗಳೂರು-560 053.

ಎಂಬತ್ತರ ದಶಕದಲ್ಲಿ ಕನ್ನಡ ರಂಗಭೂಮಿಯ ವಿಚಾರ ಮಾಡುವುದು ಒಂದು ಸರಿಯಾದ ಪ್ರಯತ್ನವೆನ್ನಬಹುದು. ಆದರೂ ಈ ದಶಕವು ಮುಗಿಯುವಲ್ಲಿ ಕನ್ನಡ ರಂಗಭೂಮಿಯ ಭವಿಷ್ಯವು ಒಂದು ನಿಶ್ಚಿತ ರೂಪವನ್ನು ತಾಳಬಲ್ಲ ಆಶಯ ಈ ವೇಳೆಗಾಗಲೇ ಕಂಡು ಬರುತ್ತಿದೆ.

ಹಿಂದಿನ ಎರಡು ದಶಕಗಳಲ್ಲಿ ಕನ್ನಡ ರಂಗಭೂಮಿಯು ಅಸಂಗತ - ನವ್ಯ - ನಾಟಕಗಳಿಂದ ಕೂಡಿ ಪಾಶ್ಚಿಮಾತ್ಯ ದೇಶಗಳ ಗಮನ ಕೂಡ ಸೆಳೆಯಿತು. ನಮ್ಮ ನಾಟಕಕಾರರಲ್ಲಿ ಶ್ರೀರಂಗ ಮತ್ತು ಗಿರೀಶ್ ಕಾರ್ನಾಡ್ ಇಂಥ ಗೌರವಕ್ಕೆ ಪಾತ್ರರಾದವರಾದರು. ಕಾರ್ನಾಡರ ತುಘಲಕ ಮತ್ತು ಹಯವದನಗಳು ಸಮುದ್ರ ದಾಟಿದವು. ಅಲ್ಲದೆ ಸಿಂಹ ದಂಪತಿಗಳು ಕಳೆದ ವರ್ಷ ಅಮೇರಿಕದಲ್ಲಿ ಸಂಚರಿಸಿ ತಮ್ಮ ಟಿಪಿಕಲ್ ಕೈಲಾಸಂ (ನರಸಿಂಹನ್ ರಚನೆ ಮತ್ತು ನಿರ್ದೇಶನ) ನಾಟಕದಿಂದ ಜಯಭೇರಿ ಹೊಡೆದು ಬಂದರೆ ಈ ಬಾರಿ ಉಮೇಶರುದ್ರ ದಂಪತಿಗಳು ಅದೇ ಅಮೇರಿಕೆಯ ಪ್ರವಾಸಕ್ಕೆ ಕನ್ನಡ ಆಧುನಿಕ ನಾಟಕದ ಒಂದು ದಿಗ್ದರ್ಶನವನ್ನೇ ಕೊಂಡೊಯ್ದಿದ್ದಾರೆ. ಇಂಥ ಪ್ರಯತ್ನಗಳಿಗೂ ಅರವತ್ತರ ದಶಕದಲ್ಲಿ ಪಾಶ್ಚಾತ್ಯ ಸಂಸ್ಥೆಗಳು ಬಂದು ತಮ್ಮ ನಾಟಕ ಮತ್ತು ರಂಗಭೂಮಿಯ ಪರಿಚಯಿಸುವ ರೀತಿಯ ಪ್ರಭಾವವೇ ಇಲ್ಲಿಯೂ ಕಂಡು ಬಂದಿದೆ ಎನ್ನಬಹುದು. ಒಂದು ರೀತಿಯಲ್ಲಿ ಅಸಂಗತತನದಿಂದ ಹಿಡಿದು ಆಧುನಿಕ ನಾಟಕಗಳೂ ಪ್ರದರ್ಶನಗಳೂ ಪಾಶ್ಚಾತ್ಯರ ಪ್ರಭಾವದಿಂದ ಒಡಮೂಡಿದರೂ ನಮ್ಮದಾಗಿ ಪ್ರಸಿದ್ಧಿಯನ್ನು ಪಡೆದಿರುವುದನ್ನು ಯಾವ ವಿದ್ವಾಂಸರೂ ಗುರುತಿಸಬಹುದಾಗಿದೆ. ಇಂಥ ಪ್ರಸಿದ್ಧಿಯಲ್ಲದೆ ದೆಹಲಿ ನಾಟಕ ಶಾಲೆ (Delhi School of Drama) ಯಲ್ಲಿ ತರಬೇತಿ ಪಡೆದ ನಟನಟಿಯರೂ ಮುಖ್ಯವಾಗಿ ಬಿ. ವಿ ಕಾರಂತರೂ ಅಲ್ಲದೆ ಪಿ. ಚಂದ್ರಶೇಖರರಂಥ ನಿರ್ದೇಶಕರೂ ಕಾರಣರಾಗಿರುವುದನ್ನು ಮರೆಯುವಂತಿಲ್ಲ. ಒಟ್ಟಿನಲ್ಲಿ ಕನ್ನಡ ರಂಗಭೂಮಿಯ ಸಾಧನೆಗಳು ಕೇವಲ ಒಂದಿಬ್ಬರು ವ್ಯಕ್ತಿಗಳದಾಗದೆ ಹಾಗೆಯೇ ಒಂದೆರಡು ಹವ್ಯಾಸಿ ಸಂಸ್ಥೆಗಳದಾಗಿರದೆ ಎಲ್ಲ ಒಟ್ಟಿಂದದ ಜಾಗ್ರತಿ ಮತ್ತು ಪರಿಶ್ರಮಗಳಿಂದಾಗಿ ಸಾಧ್ಯ ಆಗಿವೆ ಎನ್ನಬೇಕಾಗುತ್ತದೆ.

ಕನ್ನಡ ರಂಗಭೂಮಿಯಲ್ಲಿ ಇಂತಹ ಮೊತ್ತದ ಸತ್ವವು ಈ ದಶಕದಲ್ಲಿ ಹೊಸದೊಂದು ತಿರುವನ್ನು ಪಡೆಯತೊಡಗಿತ್ತು. ಏಕೆಂದರೆ ನಮ್ಮ ಅಸಂಗತ ನಾಟಕಗಳು ರಚಿತವಾದಾಗ ರಂಗಪ್ರದರ್ಶನದ ರೀತಿನೀತಿಯು ಸ್ಪಾಟ್‌ಲೈಟ್‌ಗಳಿಂದ ಮೊದಲಾಗಿ ಅಭಿನಯದ ರೀತಿಯಲ್ಲಿ ಕೂಡ ಹಲವು ಬಗೆಗಳನ್ನು ಅಳವಡಿಸಿಕೊಂಡುದಾಗಿತ್ತು. ಇಲ್ಲಿ ಬ್ರೆಕ್ಟ್ ಕೂಡ ಪ್ರಭಾವಿಯಾದುದುಂಟು. ಆತನ "ತಾಯಿ" ಮೊದಲಾಗಿ "ಗೆಲಿಲಿಯೋ" ಅಲ್ಲದೆ ಅದರ ಅದ್ಭುತ ಜಾದುಗಾರನೆಂದು ಹೆಸರಿಸಬಹುದಾದ ಪ್ರೊ. ಬೆನವಿಟ್ಸ್ ಕೂಡ ಬೆಂಗಳೂರಿಗೆ ಬಂದು ನಾಟಕಗಳನ್ನು ತಯಾರು ಮಾಡಿದ್ದಾರೆ. ಸುಪ್ರಸಿದ್ಧವಾದ ಸಾಗರದ ಬಳಿಯ ಹೆಗ್ಗೋಡಿನ ಕೆ. ವಿ. ಸುಬ್ಬಣ್ಣನವರ ರಂಗ ಸಂಸ್ಥೆ ಕೂಡ ಇಂಥ ಪ್ರಯತ್ನ ಮಾಡಿ ನಟರನ್ನು ನಿರ್ದೇಶಕರನ್ನು ತಯಾರುಮಾಡಿ ಬಿಟ್ಟಿದೆಯಷ್ಟೆ. ಇನ್ನು ದಿಲ್ಲಿಯ ನಾಟಕಶಾಲೆಯ ವಿಚಾರವನ್ನು ಹೇಳಬೇಕಾಗುವುದಿಲ್ಲ. ಏಕೆಂದರೆ ಅದೊಂದು ಪಾಶ್ಚಾತ್ಯ ರಂಗನೀತಿಯ ಪ್ರಭಾವಕ್ಕೆ ಸದಾ ತೆರೆದ ಬಾಗಿಲಾಗಿರುತ್ತದೆ. ಇಂಥ ಕಡೆಯಲ್ಲಿ ತಯಾರಾದವರೇ ನಮ್ಮ ರಂಗಭೂಮಿಯ ವೃತ್ತಿತನವನ್ನು ಉಳಿಸಲು ಹೆಣಗುವವರಾಗಿದ್ದಾರೆ. ಇಷ್ಟೆಲ್ಲಾ ಸಿದ್ಧತೆ ಸರಂಜಾಮುಗಳಿಗೆ ನಮ್ಮ ನಾಟಕಕಾರರು ರಚಿಸಿದ ಆಧುನಿಕ ನಾಟಕಗಳು



ನಮ್ಮತನ ಗಳಿಸಿಕೊಟ್ಟ ಬಿ. ವಿ. ಕಾರಂತ

ನಿಜಕ್ಕೂ ಶ್ರೇಷ್ಠ ಮಟ್ಟದವಾಗಿದ್ದು ಉಳಿದು ಬಂದರೂ ನಮ್ಮ ರಂಗಭೂಮಿಯಲ್ಲಿ ನಿಂತನೀರಾಗದೆ ಝರಿಯೊಂದು ಹರಿಯತೊಡಗಿದಂತೆ ಇಂದಿನ ಸ್ಥಿತಿಗತಿಯೂ ಆಗಿದೆ. ಅಲ್ಲದೆ ಮತ್ತೊಂದು ಗಂಭೀರ ಅರಿವು, ಇವರಿಂದ ಮುಂದಿನ ದಶಕದಲ್ಲಿ ಒಡಮೂಡಬಲ್ಲ ಲಕ್ಷಣಗಳು ಕಂಡುಬರುತ್ತಿವೆ.

ಇಲ್ಲಿ ನಮಗಿದ್ದ, ಕಳೆದ ದಶಕದಲ್ಲಿ ಕೊಂಚ ಸುಧಾರಿಸಿದ್ದ ಆದರೆ ಮತ್ತೆ ಕಾಣಿಸಿಕೊಂಡಿರುವ ಆತಂಕವೆಂದರೆ ಪ್ರೇಕ್ಷಕರದ್ದು ಎನ್ನಬಹುದು. ಇದಕ್ಕೆ ಕಾರಣಗಳೂ ಇವೆ. ನಮ್ಮ ಹವ್ಯಾಸಿ ಸಂಸ್ಥೆಗಳು ಅತಿಯಾದ ಹುಚ್ಚಿಗೆ ಗುರಿಯಾಗಿ ನಾಟಕದ ಅಭಿನಯವನ್ನು ತಮ್ಮ ಎರಡನೆಯ ಆಯ್ಕೆಯಂತೆ ನಡೆದುಕೊಳ್ಳತೊಡಗಿದ್ದಾರೆ. ಇಂದು ನಾಟಕಕಾರರಿಂದ ಹಿಡಿದು ರಂಗಭೂಮಿಯ ಸಕಲ ಸಿಬ್ಬಂದಿಯೂ ಬೆಳಕಿನವರೂ ಮೇಕಪ್ಪಿನವರೂ ಕೂಡ ಮಾಡುತ್ತಿರುವ ರೀತಿಯೇ ಆಗಿದೆ. ಆದುದರಿಂದ ಹವ್ಯಾಸಿ ಸಂಸ್ಥೆಗಳು ಕನ್ನಡ ಒಳ್ಳೆಯ ನಾಟಕಗಳನ್ನು ವೃತ್ತಿ ಪ್ರಯೋಗಗಳಾಗಿಸದೆ ಬಿಟ್ಟುಕೊಟ್ಟವೆ. ಈ ಇವರ ತುಯ್ದಾಟವು ಪ್ರೇಕ್ಷಕರನ್ನು ಉಳಿಸಿಕೊಳ್ಳುವಲ್ಲಿ ಸೋತಿದೆ ಎನ್ನಬಹುದು. ಎರಡನೆಯ ಕಾರಣ ಕೆಟ್ಟ ಪರಿಣಾಮವು ಕೆಟ್ಟ ಸಿನಿಮಾ ಪ್ರವೃತ್ತಿಗಳನ್ನು ಪ್ರಸಾರ ಮಾಡುತ್ತಿರುವ ಮತ್ತು ಉತ್ತೇಜಿಸುತ್ತಿರುವ ನಮ್ಮ ಟಿ ವಿ ಕೇಂದ್ರದ ಕಡೆಯಿಂದ ಎಂದು ಹೇಳಬೇಕಾಗಿದೆ. ನಮ್ಮ ರಂಗಭೂಮಿಯ ಪ್ರೇಕ್ಷಕರನ್ನು ರಂಗಭೂಮಿಯ ಜೀವಂತ ಅನುಭವಗಳಿಂದ ದೂರ ಮಾಡಿದ ಕೀರ್ತಿ ಇದಕ್ಕೇ ಸಲ್ಲಬೇಕಾಗುತ್ತದೆ. ಕನ್ನಡ ನಾಟಕಗಳ ವಿಚಾರದಲ್ಲಿ ನಮ್ಮ ಟಿ. ವಿ. ಕೇಂದ್ರಕ್ಕೆ ಒಳ್ಳೆಯ (Taste) ಅಭಿರುಚಿ ಕೂಡ ಇಲ್ಲದಿರುವುದರಿಂದ ನಮ್ಮ ತರುಣ-ತರುಣಿಯರಾದ ಪ್ರೇಕ್ಷಕರು ನಮ್ಮ ರಂಗಭೂಮಿಯಿಂದ ದೂರವಾಗುತ್ತಿದ್ದಾರೆ. ಮೇಲಿನ ಎರಡೂ ಕಾರಣಗಳನ್ನು ಹಗುರವಾಗಿ ತೆಗೆದುಕೊಳ್ಳುವವರು ಕೇವಲ ಅಭಿನಯದವರು ಅಥವಾ ಅಭಿನಯವನ್ನು ಕಲಿಯುವ ಮತ್ತು ಕಲಿಸುವ ಹವ್ಯಾಸಿಗಳೆಂದು ಹೇಳಬಹುದು. ಇಂಥ ಪರಿಸ್ಥಿತಿಯಲ್ಲಿ ನಾವೀಗ ಮುಂದಿನ ದಶಕದ ಕನಸು ಕಾಣಬೇಕಾಗಿದೆ. ಅಂಥವರು ಕೆಲವರಾದರೂ ಕನ್ನಡ ರಂಗಭೂಮಿಯನ್ನು ಹವ್ಯಾಸಿತನದ ಹಸಿರಾದ ಹಿಡಿತದಲ್ಲಿರಿಸಲು ಪ್ರಯತ್ನ ಮಾಡುತ್ತಲೇ ಇದ್ದಾರೆ. ಇವರನ್ನೆಲ್ಲಾ ಕಾರಂತರ, ಬಿ. ಸಿ ಯವರ ಸಂತಾನದವರೆಂದು ಗೌರವಾರ್ಥದಲ್ಲಿ ಹೇಳಿದರೆ ತಪ್ಪಾಗಲಾರದು. ಏಕೆಂದರೆ ಇವರಿಗೆ ಕಳೆದ ಎರಡು ದಶಕಗಳಲ್ಲಿ ಕನ್ನಡ ಹವ್ಯಾಸಿ ನಾಟಕಗಳ ಪ್ರದರ್ಶನಗಳ ಸಾಕಷ್ಟು ಪರಿಣಾಮಗಳು ಅಂಟಿವೆ. ಕೆಲವರು ಅದರಲ್ಲೇ ಮುಂದುವರಿಯುತ್ತಿದ್ದಾರೆಯಾದರೆ ಹಿರಿಯ ತಲೆಮಾರೊಂದು ಮರೆಯಾಗಿದೆ. ಎಷ್ಟೆಂದರೆ ಇನ್ನು ಮುಂದೆ ಅವರು ಪೂರ್ತಿ ಮರೆತು ಹೋಗಬಹುದಾಗಿದೆ. ಈಗ ಹಳೆಯ ನಟರಿಲ್ಲ, ನಿರ್ದೇಶಕರಿಲ್ಲ, ನಾಟಕಗಳಿಲ್ಲ. ನಾಟಕಕಾರರೂ ಅಷ್ಟೆ. ಸುಪ್ರಸಿದ್ಧವಾದ ಆಧುನಿಕ ನಾಟಕಗಳೂ ಹಿಂಜರಿಯುತ್ತಿವೆ ಎನ್ನುವ ಹಂತದಲ್ಲಿ ಈ ಎಂಬತ್ತರ ಪ್ರಯೋಗಗಳೂ ಪ್ರಯತ್ನಗಳೂ ಕುಂಟುತ್ತಾ ಸಾಗಿವೆಯಷ್ಟೆ.

ಶ್ರೀರಂಗರು ತೀರಿಕೊಂಡಾಗ (೧೯೮೪) ಅವರ ಅಂಕಿತದ ಒಂದು ಯುಗ ಮುಗಿಯಿತೆಂದು ಗಂಭೀರವಾಗಿ ಹೇಳಬಹುದು. ಅವರ ಕೊನೆಯ ನಾಟಕ "ಅರ್ಧನಾರೀಶ್ವರ"ಕ್ಕೂ ಅವರದೇ ಹಳೆಯ ನಾಟಕವಾದ 'ಪ್ರಪಂಚ ಪಾಣಿಪತ್ತು' ಎಂಬ ದೊಡ್ಡ ನಾಟಕಕ್ಕೂ ಮುಖ್ಯ ಪಾತ್ರದಲ್ಲಿಯೇ ಹೋಲಿಕೆಯನ್ನು ಕಾಣಬಹುದು. ರಂಗಭೂಮಿಯನ್ನು ಅವರು ತಮ್ಮ ಪಾತ್ರಗಳಿಗಾಗಿ ಬಳಸಿಕೊಂಡ

ಕೊಂಡ ರೀತಿಯು ಕೂಡ ಬೇರೆಯಾದುದಲ್ಲ. ಅವರ ತಾತ್ವಿಕ ನಿಲುವಿಗೂ (ಗಾಂಧೀವಾದಿ ಪ್ರಗತಿಶೀಲರು), ಸುಮಾರು ಅರ್ಧಶತಮಾನಗಳಲ್ಲಿನ ಅವರ ನಾಟಕಾನುಭವ ಮತ್ತು ಅನುಭಾವಿಗಳಿಗೂ ಸಮಕಾಲೀನ ವ್ಯಕ್ತಿಗಳು ಜೀವಂತವಾಗಿ ಪ್ರೇಕ್ಷಕರನ್ನು ಕೆಣಕುತ್ತಿದ್ದ ಬಗೆಗೂ ತುಂಬ ಸರಳವಾದ ಒಂದು ರಂಗಮಂಟಪವನ್ನು ಅವರು ಸಾಧಿಸಿಕೊಟ್ಟಿದ್ದರು. ಇಂದಿಗೂ ಆಧುನಿಕ ನಾಟಕಗಳನ್ನು ಸಂಕೇತಗಳ ಮೂಲಕ ಹಾಗೂ ಸರಳ ಸಿದ್ಧತೆಗಳ ಮೂಲಕ ಪ್ರದರ್ಶನವನ್ನು ಸಾಧಿಸುವಾಗ ಅಭಿನಯವೇ ಎಲ್ಲದರ ಆಧಾರವೆನ್ನುವಂತೆ ತೋರಿಸಿಕೊಟ್ಟಿದ್ದರು ಅವರು. ಅಲ್ಲದೆ ಕಾರ್ನಾಡ್, ಕುರ್ತಕೋಟಿ, ಜಿ. ಬಿ. ಜೋಶಿ ಮೊದಲಾದವರು ಆಧುನಿಕ ನಾಟಕಗಳ ನಿಲುವನ್ನು ಹಿಡಿದಾಗಲೂ ಶ್ರೀರಂಗರು ತಮ್ಮ ತರುಣ–ತರುಣಿ– ಮತ್ತು ಯಜಮಾನ–ಗಳ ಸಂಬಂಧದಲ್ಲಿ 'ಕೇಳುಜನಮೇಜಯ' ಎಂಬ ಆಧುನಿಕ ನಾಟಕವನ್ನೇ ಬರೆದರಲ್ಲದೆ ಪಿರಾಂಡೆಲೊ ಛಾಯೆಯಲ್ಲಿದ್ದ ಯಶಸ್ವೀ ನಾಟಕಕಾರರಾದರು. ಇದು ಸುಮಾರು ೧೯೬೦ರ ಕಥೆಯೆನ್ನುವುದಾದರೂ ಕೊನೆತನಕವೂ ನಾಟಕಗಳನ್ನು ರಚಿಸಿ ರಾಜಕೀಯ ಮತ್ತು ಸಾಮಾಜಿಕ ಸಂದರ್ಭದಲ್ಲಿ ಅವರು ಯಶಸ್ವಿಯಾಗುತ್ತಲೇ ಬಂದಿದ್ದರು. ಕೊನೆಯ ನಾಟಕಗಳಲ್ಲಿ ಅವರ ಮನಸ್ಸು ಹೆಚ್ಚಾಗಿ ದಾಂಪತ್ಯದ ಸಂಬಂಧವನ್ನು ಮನೋವೈಜ್ಞಾನಿಕವೂ ಆಗಬಲ್ಲ ರೀತಿಯಲ್ಲಿ ಮಿಡಿಯುತ್ತಿದ್ದುದಕ್ಕೆ ನಾಟಕಗಳೇ ಆಧಾರವಾಗಿವೆ. ಶೋಕಚಕ್ರ, ಕತ್ತಲೆ – ಬೆಳಕು, 'ಸ್ವರ್ಗಕ್ಕೆ ಮೂರೇ ಬಾಗಿಲು' ಕೃತಿಗಳಿಂದ ಅವರು ಎಂದೆಂದಿಗೂ ಆಧುನಿಕರಲ್ಲಿ ಗಣಿಸಲ್ಪಡುವಂಥವರಾದಲ್ಲದೇ ಬಂಡಾಯದ ಗಾಳಿ ಬೀಸಿದಾಗಲೂ ಅವರು ತಮ್ಮ 'ಅಗ್ನಿಸಾಕ್ಷಿ' ಎಂಬ ಪ್ರಚಂಡ ಕೃತಿಯನ್ನು ನೀಡಿದ್ದರು.

ಶ್ರೀರಂಗರು ಕನ್ನಡ ರಂಗಭೂಮಿಗಾಗಿ ದುಡಿದಷ್ಟು ಬೇರೆ ಯಾರಿಗೂ ಮುಂದೆ ಸಾಧ್ಯವಾಗಲಾರದು. ಅವರು ಕಲಾಕ್ಷೇತ್ರದ ವಿಷಯದಲ್ಲಿ ತರುಣರೊಡನೆ ಬೆರೆತು ಕೊನೆತನಕವೂ ಹೋರಾಟದಲ್ಲಿ ತೊಡಗುತ್ತಿದ್ದ ತುಂಬ ಹಿರಿಯ ನಾಟಕಕಾರರಾಗಿದ್ದರು. ಕೊನೆತನಕವೂ ಅವರ ಜೀವನವನ್ನು ರಂಗಭೂಮಿಯಿಂದ ದೂರವಿರಿಸಲು ಯಾವುದೇ ರಾಜಕೀಯ ಸಾಮಾಜಿಕ ಅಥವಾ ತರುಣ ನಿರ್ದೇಶಕ ನಾಟಕಕಾರರಿಗೂ ಸಾಧ್ಯವಾಗಲಿಲ್ಲ– ಆದರೂ ಅವರ ಯುಗ ಮುಗಿಯಲು ಹೊಸ ಕಾಲವೇ ಹಲವು ಮಿತಿಗಳನ್ನು ರಚಿಸಿದಂತಿದೆ. ಕನ್ನಡದ ಆಧುನಿಕ ನಾಟಕಗಳಲ್ಲಿ ಇದರ ತಥ್ಯತೆಯನ್ನು ಯಾರು ಬೇಕಾದರೂ ಕಾಣಬಹುದು. ಶ್ರೀರಂಗರ ಟೆಂಪರಮೆಂಟಿಗೆ ಸೇರದಂಥ ಸತ್ವಯುತ ಸಾಮಾಜಿಕ ಎಳೆಗಳು ಇತರರ ಅಂದರೆ ಕಾರ್ನಾಡ್, ಚಂಪಾ, ಲಂಕೇಶ್, ಚಂದ್ರಶೇಖರ ಕಂಬಾರ, ಮೊದಲಾದವರಲ್ಲಿ ಇಂಥ ಅನುಭವಗಳನ್ನು ಗುರುತಿಸಬಹುದಲ್ಲದೆ ಇವರ ಕಾಲದಲ್ಲಿ ತರುಣರಾಗಿದ್ದು ರಂಗಕ್ರಿಯೆಯಲ್ಲಿ ತೊಡಗಿದ್ದ



ಮೌಲಿಕ ನಾಟಕಗಳನ್ನು ರಚಿಸಿದ
ಗಿರೀಶ ಕಾರ್ನಾಡ

ತರುಣರೆಲ್ಲರೂ ಹೊಸ ಹೊಸ ಬಗೆಯ ಪ್ರದರ್ಶನಗಳಲ್ಲಿ ಬೆಳೆಯತೊಡಗಿದ್ದರು. ಇದಕ್ಕೆ ಬಿ. ವಿ. ಕಾರಂತರ ತರಬೇತಿ ಅಥವಾ ಪ್ರಭಾವವೆಂದರೂ ಸರಿಯೆ. ಒಟ್ಟಿನಲ್ಲಿ ನಾಟಕವನ್ನು ನಮ್ಮ ಸಮಕಾಲಿಕ ಸಂದರ್ಭದ ಒಳಪದರಗಳಲ್ಲಿ ಮುಟ್ಟಬಲ್ಲ ಸಾಧನವನ್ನಾಗಿ ಮಾಡಿಕೊಳ್ಳುವ ಹಾಗೂ ಅದರ ಬಣ್ಣಗಳನ್ನು ಸದಾ ಜೀಕರಿಸುವ ಶ್ರೀರಂಗರಿಗಿಂತಲೂ ಭಿನ್ನವಾದ ರೀತಿಯ ದುಡಿಮೆಯಿಂದಲೂ ಶ್ರೀರಂಗರನ್ನು ಹಿಂದೆ ಹಾಕಲಾಯಿತು–ಎನ್ನಬಹುದು. ಆದುದರಿಂದಲೇ ಲಂಕೇಶ ಮತ್ತು ಕಾರ್ನಾಡರು ಆಧುನಿಕ ನಾಟಕಗಳಲ್ಲಿ ಅತ್ಯಂತ ಶ್ರೇಷ್ಠ ಕೃತಿಗಳನ್ನು ನೀಡಿ ವಿಮರ್ಶಕ ತಾರೀಫಿಗೆ ಪಾತ್ರರಾದವರಾಗಿದ್ದಾರೆ. ಅಂದರೆ ಈ ಶತಮಾನದ ಅತ್ಯಂತ ಶ್ರೇಷ್ಠ ಕೃತಿಗಳನ್ನು ನೀಡಿರುವವರು ಇವರೇ ಎನ್ನಬೇಕಾಗುತ್ತದೆ. ಒಂದು ತುಘಲಕ್ ಮತ್ತೊಂದು ಸಂಕ್ರಾಂತಿ...ಇವೆರಡೂ ಕನ್ನಡ ರಂಗಭೂಮಿಯಲ್ಲಿ ನನ್ನ ತಿಳಿವಿನ ಕಾಲದಲ್ಲಿ ಅದ್ವಿತೀಯವಾದವು. (ನನ್ನ ಸ್ವಂತ ನಿಲುವಿನಲ್ಲಿ 'ಸಂಕ್ರಾಂತಿ' ಒಂದು' ಸದಾಕಾಲ'ದ ಕೃತಿ. ಯಾರು ಬಂದರೂ ಯಾರು ಹೋದರೂ ಇದರ ಕಲಾತ್ಮಕತೆಗೆ ಅಡ್ಡಿ ಬರಲಾರದು ಮತ್ತು ಇದು ಆಧುನಿಕ ನಿರ್ದೇಶಕರಿಗೆ ಒಂದು ಸವಾಲಾಗಿಯೇ ಉಳಿಯುತ್ತದೆ, ನನ್ನ ಅಭಿಪ್ರಾಯವನ್ನು ಒಪ್ಪದ ತರುಣ ನಾಟಕಕಾರರೂ ನಟರೂ ನಿರ್ದೇಶಕರೂ ಇಂದಿನ ಚಲಾವಣೆಯಲ್ಲಿದ್ದಾರೆ. ಆದುದರಿಂದಲೇ ಕನ್ನಡ ರಂಗಭೂಮಿಯ ಬಣ್ಣಗಳು ಕಾಲದ ಪ್ರಭಾವದಿಂದ ಮಾತ್ರವೇ ಬದಲಾಗುತ್ತಿವೆ.

ಈ ದಶಕದ ಅಂದರೆ ಎಂಬತ್ತರ ನಂತರದಲ್ಲಿ ಒಂದು ಬಗೆಯ ರಾಜಕೀಯ–ಸಾಮಾಜಿಕ ಬಂಡಾಯವು ಒಂದು ಅತಿಯಾಗಿ ಕಾಣಿಸಿಕೊಂಡಿತಷ್ಟೆ. ಇದರಿಂದ ವೈಯಕ್ತಿಕ ನಿಲುವು ಕೂಡಾ ಆಧಾರವಾಗುತ್ತದೆ. ನನಗೂ ನನ್ನ ಮುಂದಿನ ತಲೆಮಾರಿಗೂ ತುಂಬ ವ್ಯತ್ಯಾಸಗಳಿವೆ. ಆದುದರಿಂದ ಕಲಾತ್ಮಕವಾದ ಕ್ರಿಯಾವಂತಿಕೆ ಕೂಡ ಹೊಸ ಬಣ್ಣಗಳಿಗೆ ಒಳಗಾಗುತ್ತಿದೆ. ತಮ್ಮ 'ಜೋಕುಮಾರ ಸ್ವಾಮಿ' ಯಿಂದ ಮುಂಚೂಣಿಗೆ ಜಿಗಿದ ಚಂದ್ರಶೇಖರ ಕಂಬಾರರು, ಬ್ರೆಕ್ಟ್ ನಾಟಕಗಳಿಂದ ಪ್ರೇರಣೆ ಪಡೆದು ನಿಂತ ಪ್ರಸನ್ನ-ಪತ್ರಿಕಾಪ್ರತಿನಿಧಿತ್ವದಿಂದ ಬದುಕನ್ನು ನೋಡಿದ ಬಿ. ವಿ. ವೈಕುಂಠರಾಜು ಅವರು ರಾಜಕೀಯ ಮತ್ತು ಸಾಮಾಜಿಕಗಳನ್ನು ಅಭಿನ್ನಗೊಳಿಸಿ ನಾಟಕಕಾರ–ನಟ–ಟಿ. ಎನ್. ಸೀತಾರಾಂ ಬದುಕಿನ ಒಳನೋಟಕ್ಕೆ ಪ್ರಾಧಾನ್ಯವನ್ನು ಕೊಟ್ಟು ತೀಕ್ಷ್ಣವಾದ ಹೊಸ ಸಂವೇದನೆಯನ್ನು ಬೆಳಗಿಗೊಡ್ಡಬಲ್ಲ ಚಿ. ಶ್ರೀನಿವಾಸರಾಜು, ಮತ್ತೆ ಶೇಕ್ಸಪಿಯರನ ಹಂತದಿಂದ ನಾಟಕ ಕಲೆಯನ್ನು ಗುರುತಿಸಿದ ರಾಮಚಂದ್ರದೇವ, ಮತ್ತು ಶಿವಪ್ರಕಾಶ್ ಎಲ್ಲ ರೀತಿಯಿಂದಲೂ ನಿಗೂಢ ಮತ್ತು ಅರ್ಥಾಂತರಿತ (Abstract) ಎನ್ನಬಹುದಾದ ಕೃತಿಗಳಲ್ಲಿ ತೊಡಗಿರುವ ಆರ್ಯ ಮೊದಲಾದವರನ್ನು ನಾವೀಗ ಅರ್ಥಮಾಡಿಕೊಳ್ಳಲು ತೊಡಗಬೇಕಾಗಿದೆ. ಇಂಥ ಬಗೆಯ ಸಂಕೀರ್ಣತೆಯನ್ನು ಪ್ರೇಕ್ಷಕನು ರೂಢಿಸಿಕೊಳ್ಳಬೇಕಾಗಿದೆ, ಈಗ.

ಇಲ್ಲಿ ಪ್ರೇಕ್ಷಕನಿಗೆ ಒಂದು ಸವಾಲು ಕಾದಿದೆ ಎನ್ನುವುದನ್ನು ಒಪ್ಪುವುದಾದರೆ ಹೊಸ ನಾಟಕಗಳ ಸಂಖ್ಯೆ ಕಡಿಮೆಯಾಗಿರುವುದಕ್ಕೂ ನಿರ್ದೇಶಕರೂ ಹವ್ಯಾಸಿ ಸಂಸ್ಥೆಗಳೂ ಆತಂಕ ಪಡುತ್ತಿರುವುದಕ್ಕೂ ಅರ್ಥವುಂಟಾಗುತ್ತದೆ. ಪ್ರಸನ್ನರ ಪ್ರದರ್ಶನಗಳು ತುಂಬ ವ್ಯಯದ ಹಾಗೂ ಕಡಿಮೆ ಆದಾಯದ ಪ್ರಯತ್ನಗಳಾದವು. ಅವರು ನಾಟಕ ಸಿದ್ಧತೆಗೆ ವಹಿಸುತ್ತಿದ್ದ ಅಥವಾ ತರಬೇತಿಗೆ ಕೊಡುತ್ತಿದ್ದ ಪ್ರಾಮುಖ್ಯತೆ ಆಯವ್ಯಯದ ಅಂಕಿಗಳಿಗೆ ಮೊದಲ ಸ್ಥಾನವನ್ನು ನೀಡಿದವು. ಇದರ ಫಲವನ್ನು ಪ್ರೇಕ್ಷಕನ ಸಂತೃಪ್ತಿಯಲ್ಲಿ ಕಾಣಬಹುದಾಯಿತು. ಇದರಿಂದ ಇವರ ನಾಟಕಗಳು ದೇಶ ಸಂಚಾರ ಮಾಡಬಲ್ಲುವಾದವು. ಅಲ್ಲದೆ ತಮ್ಮ ಜೊತೆಯ ನಿರ್ದೇಶಕರಿಗೂ ಹವ್ಯಾಸೀ ಸಂಸ್ಥೆಗಳಿಗೂ ಎಚ್ಚರಿಸಿದುವು. ಇವರ "ತಾಯಿ" ಮೊದಲಾಗಿ 'ಚದುರಂಗದ ಆಟಗಾರರು' ವರೆಗೂ ಒಂದೇ ಬಗೆಯ ಸ್ಪಂದನವನ್ನು ಗುರುತಿಸಬಹುದಾಗಿದೆ. ಅಲ್ಲದೆ 'ತದ್ರೂಪಿ' ಯನ್ನು ೧೯೮೫ರಲ್ಲಿ ತೀರ ಪ್ರಸಿದ್ಧಿಗೆ ತರುವ ಪ್ರಯತ್ನವೊಂದು ನಡೆದಾಗಲೂ ಅದರ ಪ್ರಚಾರವೇ ಭಾರವಾಗಿದ್ದಿತೆನ್ನಬಹುದು. ನಿಜವಾದ ಡಿಕ್ಟೇಟರ್‌ಶಿಪ್ಪಿನ ಅನುಭವವಾಗದಿರುವ ನಮ್ಮ ಜನಕ್ಕೆ ಇದನ್ನು ಒಂದು ವಿಡಂಬನಾತ್ಮಕ ಕೃತಿಯನ್ನಾಗಿ ನೀಡಿದಾಗ ಕೇವಲ ಮನರಂಜನೆಯ (ಅದರಲ್ಲೂ ಅಸಹ್ಯದ) ಹಂತದಲ್ಲಿ ಆಯಿತೆಂದುಹೇಳಬಹುದು. ಈಗ

ಪ್ರಸನ್ನರು ಬೆಂಗಳೂರಿನಿಂದ ಬಹುಶಃ ರಂಗಭೂಮಿಯಿಂದಲೂ ದೂರವಾಗಿರಬಹುದು.

ಇಂದು ಚಂದ್ರಶೇಖರ ಕಂಬಾರರು ರಂಗಭೂಮಿಯನ್ನು ಶ್ರೀರಂಗರಂತೆ ನಂಬಿದವರು ಎನ್ನಬಹುದು. ಈ ಹಿಂದೆ ನಾಟಕ ಅಕಾಡೆಮಿಯ ಅಧ್ಯಕ್ಷರಾಗಿ ಗಮನಾರ್ಹವಾದ ಕೆಲಸಮಾಡಿದ್ದಾರೆ. ವರ್ಷಕ್ಕೆ ಒಂದಾದರೂ ನಾಟಕವನ್ನು ಬರೆಯುವ ಚೈತನ್ಯ ಇವರದು– 'ಹರಕೆಯ ಕುರಿ' ತುಂಬ ಸೊಗಸಾದ ಕೃತಿ. ಇದಾದ ಮೇಲೂ ಎರಡು ನಾಟಕಗಳನ್ನು ಬರೆದಿದ್ದಾರೆ. ಇವರಿಗೆ ಜಾನಪದ ಮಟ್ಟುಗಳು ಸ್ವಂತ ಆಸ್ತಿಯಂತಿರುವುದರಿಂದ ನಾಟಕದ ರುಚಿಯಲ್ಲಿ ಒಂದು ವಿಶಿಷ್ಟತೆಯನ್ನೂ ಉತ್ತರ ಕರ್ನಾಟಕದ ಬದುಕಿನ ಸೊಗಡನ್ನೂ ತಮ್ಮ ಯಾವುದೇ ಕೃತಿಯಲ್ಲೂ ಸಾಧಿಸಿಕೊಂಡು ಬಂದಿರುತ್ತಾರೆ. ಒಳ್ಳೆಯ ಕವಿಯಾದ ಕಂಬಾರರ ನಾಟಕಗಳಲ್ಲಿ ಅದರ ಸತ್ವವು ಒಂದು ಮೌಲಿಕವಾಗಿ ರೂಪಕ ಸಾಮರ್ಥ್ಯವನ್ನು ಗೆಲುವಾಗಿಸುತ್ತದೆಯಷ್ಟೆ.

ಶ್ರೀ ಬಿ. ವಿ. ವೈಕುಂಠರಾಜು ಅವರು ಈಗ ಕಂಬಾರರ ನಂತರದಲ್ಲಿ ನಾಟಕ ಅಕಾಡೆಮಿಯ ಅಧ್ಯಕ್ಷರಾಗಿದ್ದಾರೆ. ಇವರ ಮುಖ್ಯ ರಕ್ಷಣಾ ಕವಚವು 'ಪತ್ರಿಕಾಕರ್ತ'ದಲ್ಲಿದೆಯಾಗಿ ಇವರ ಮೂರೂ ನಾಟಕಗಳಲ್ಲಿ ವಸ್ತುವಿನ ಆಯ್ಕೆಯಲ್ಲಿ ಕಂಡು ಬರುತ್ತದೆಯಲ್ಲದೆ ತುಂಬ ಯಶಸ್ವಿಯಾದ 'ಸನ್ನಿವೇಶ'ವು ಗಂಡು–ಹೆಣ್ಣುಗಳ ಸಂಬಂಧದಲ್ಲಿ 'ದಾಂಪತ್ಯ'ವನ್ನು ಸಾಂಪ್ರದಾಯಿಕ ಒರೆಗಲ್ಲಿಗೆ ಹಚ್ಚಿದಂತೆ ಮಾಡಿ ವೇಶ್ಯೆಯೊಬ್ಬಳನ್ನು ಉದ್ಧಾರ ಮಾಡಲು ಪಣತೊಟ್ಟು ಸೋತ ಪತ್ರಿಕಾ ಪ್ರತಿನಿಧಿಯ ಸೋಲಾಗಿದೆ, ಇದರಲ್ಲಿ ಇಡೀ ಸಮಾಜದ ದೂಷಣೆಗೆ ಗುರಿಯಾಗಿದ್ದ ಹೆಣ್ಣೊಬ್ಬಳು ಹಾಕುವ ಸವಾಲಿನಿಂದ ಪ್ರಗತಿಶೀಲ ಧೋರಣೆಯ ಕೃತಿಯಾಗಿ ಜೀವಂತವಾಗುತ್ತದೆ– ಒಂದು ಆಧುನಿಕ ಕಾದಂಬರಿಯಂತೆ ಈ ನಾಟಕವು ಧ್ವನಿಸುವುದೂ ಮುಖ್ಯವಾಗಿದೆ. ಏಕೆಂದರೆ ಇಂದಿನ ಸಾಹಿತ್ಯ ಪ್ರಪಂಚದಲ್ಲಿ ಹೆಚ್ಚು ಜನಪ್ರಿಯವೂ ಯಶಸ್ವಿಯೂ ಆದ ಪ್ರಕಾರವೇ ಕಾದಂಬರಿಯೆಂಬುದನ್ನು ನೆನೆದರೆ ಈ ನಾಟಕಕಾರರು ಮೊದಲು ಕಾದಂಬರಿಕಾರರಾಗಿದ್ದುದು ಅರ್ಥಪೂರ್ಣವಾಗುತ್ತದೆ.

ಶ್ರೀಯುತ ಟಿ. ಎನ್. ಸೀತಾರಾಂ ಒಳ್ಳೆಯ ನಟರಾದವರು. ತಮ್ಮ 'ಆಸ್ಫೋಟ' ದಿಂದ ತುಂಬ ಪ್ರಸಿದ್ಧಿಗೆ ಬಂದವರು. ಈಚೆಗೆ ಇವರು ನಮ್ಮೊಳಗೊಬ್ಬ ನಾಜೂಕಯ್ಯ... ಎಂಬ ಮತ್ತೊಂದು ಶ್ರೇಷ್ಠ ನಾಟಕವನ್ನು ನೀಡಿದ್ದಾರೆ. ಇವೆರಡರಲ್ಲೂ ಇವರೇ ನಾಯಕನ ಪಾತ್ರವನ್ನು ಸಾಧಿಸಿದ್ದಾರೆ. ಇವೆರಡೂ ನಾಟಕಗಳನ್ನು ನಾಗೇಶ್ ನಿರ್ದೇಶಿಸಿದ್ದಾರೆ. ಅವರ ಉಳಿದ ನಾಟಕಗಳಿಗಿಂತಲೂ ಹೆಚ್ಚು ಯಶಸ್ವಿಗಳಾಗಿದ್ದಾರೆ– ಎನ್ನಬಹುದು. ನಮ್ಮ ಇಂದಿನ ಜೀವನವು, ನಾಗರಿಕ ಹಂತದಲ್ಲಿ ರಾಜಕೀಯ, ಮತ್ತು ಇತರ ಅಸಾಮಾಜಿಕ ಶಕ್ತಿಗಳಿಂದ ಶೋಷಣೆಗೆ ಗುರಿಯಾಗುತ್ತಿರುವುದನ್ನು



'ಹಯವದನ' ಹಿಂದಿ ನಾಟಕದ ಒಂದು ದೃಶ್ಯ

ಸೀತಾರಾಂ ತುಂಬ ಮಾರ್ಮಿಕವಾಗಿ ಒಂದು ಕಾಮೆಡಿಯಂತೆ ದುಡಿಯುವ ದುರಂತ ಛಾಯೆಯು ರುಚಿಯಲ್ಲಿ ಬೆಳಕಿಗೊಡ್ಡುವುದರಿಂದ ಉಳಿದೆಲ್ಲ ನಾಟಕಕಾರರಿಗಿಂತಲೂ ಸ್ಪಷ್ಟವಾಗಿ ಪ್ರೇಕ್ಷಕರನ್ನು ಗೆದ್ದು ಬಿಡುತ್ತಾರೆ. ಇವರ ನಾಟಕದ ಸ್ವರೂಪವೇ ಇಂದಿನ ಅತ್ಯವಶ್ಯ ಸಾರ್ಥಕವಾದುದೆಂದೂ ಪ್ರೇಕ್ಷಕನ ಆತ್ಮಪ್ರಜ್ಞೆಯನ್ನು ಕೆರಳಿಸಬಲ್ಲುದೆಂದೂ ಹೇಳಬಹುದಾಗಿದೆ. ಇನ್ನು ಮುಂದೆ ಇಂತಹ ನಾಟಕಗಳು ನಮ್ಮ ಪ್ರಜಾಪ್ರಭುತ್ವದ ಅವಶ್ಯಕತೆಯೆಂದೂ ಹೇಳಬಹುದು. ನಮ್ಮೊಳಗೊಬ್ಬ ನಾಜೂಕಯ್ಯ– ಕೃತಿಯು ನಮ್ಮೊಳಗೊಬ್ಬ 'ಭ್ರಷ್ಟ'ನು, ಇಂದಿನ ರಾಜಕೀಯ ಮತ್ತು ಸಾಮಾಜಿಕ ಒತ್ತಡಗಳಲ್ಲಿ ಸೇರಿಕೊಂಡಿದ್ದಾನೆಂಬುದನ್ನು ನೆನಪಿಗೆ ತರುವಲ್ಲಿ ಯಶಸ್ವಿಯಾಗುತ್ತದೆ. ಇದರಿಂದ ನಮ್ಮ ಸಿನಿಮಾಗಳಾಗಲಿ ದೂರದರ್ಶನದ ಪ್ರದರ್ಶನಗಳಾಗಲಿ ಕೊಡಲಾರದ ಅಭಿರುಚಿಯನ್ನೂ ಬದುಕಿನ ಜಾಗ್ರತಿಯನ್ನೂ ಕೊಡಬಲ್ಲ ಇವರ ಎರಡೂ ನಾಟಕಗಳು ಯಾರೇ ಆದರೂ ಮೆಚ್ಚಿಕೊಳ್ಳಬೇಕಾದ ಕೃತಿಗಳಾಗಿರುತ್ತವೆ.


ಚಿ. ಶ್ರೀನಿವಾಸರಾಜು ಅವರು ತಮ್ಮ ಮೂಕ ನಾಟಕಗಳಿಂದ ಬೆಳಕಿಗೆ ಬಂದವರು. "ನಾಳೆ ಯಾರಿಗೂ ಇಲ್ಲ" ಎಂಬ ಮೂರು ನಾಟಕಗಳ ಸಂಗ್ರಹವನ್ನು ತಂದಿದ್ದಾರೆ. ಇಲ್ಲಿಯೂ ಒಂದು ಕವಿ ಹೃದಯವು ಪ್ರಗತಿಶೀಲ ಧೋರಣೆಯಿಂದ ನೊಂದುಕೊಳ್ಳುತ್ತಿರುವಂತೆ ಇವರ 'ನಾಳೆ ಯಾರಿಗೂ ಇಲ್ಲ' ಎಂಬ ಕೃತಿಯೇ ಹೇಳುತ್ತಿದೆ. 'ಹೆದ್ದಾರಿಯಲ್ಲಿ ಒಂದು ರಾತ್ರಿ' ಎಂಬುದು ಇವರ ಮತ್ತೊಂದು ಯಶಸ್ವಿ ನಾಟಕ. ಸ್ವತಃ ನಟಿಸಬಲ್ಲ ಈ ನಾಟಕಕಾರರ ಮುಂದಿನ ಕೃತಿಗಳನ್ನು ಕಾದು ನೋಡಬಹುದು. ನಮ್ಮ ಕಳೆದ ಇಪ್ಪತ್ತು ವರ್ಷಗಳ ರಂಗಭೂಮಿಯಲ್ಲಿ ಇವರ ಮೂಕ ಸಂವೇದನೆಯಿಂದ ಮೂಡಿರುವ ಈ ನಾಟಕಗಳು ತುಂಬ ಶಕ್ತಿಯುತವಾಗಿವೆ; ಹೊಸರೀತಿಯವಾಗಿವೆ ಹಾಗೂ ತುಂಬ 'ಒರಿಜಿನಲ್' ಎನ್ನಿಸುತ್ತವೆ.

ರಾಮಚಂದ್ರದೇವ ಮತ್ತು ನರಸಿಂಹನ್ ಜೊತೆಯಾಗಿ 'ಕುದುರೆ ಬಂತು ಕುದುರೆ' ಎಂಬ ನಾಟಕವನ್ನು ರಚಿಸಿದ್ದಾರೆಯಲ್ಲದೆ 'ರಥಮೂಸಲ'

ಎಂಬ ನಾಟಕವನ್ನೂ ರಚಿಸಿದ್ದಾರೆ. ಶೇಕ್ಸ್‌ಪಿಯರನ ಮ್ಯಾಕ್‌ಬೆತ್ ನಾಟಕವನ್ನು ಅನುವಾದಿಸಿದುದಲ್ಲದೆ, ಇತ್ತೀಚೆಗೆ ದೇಶೀಕರಿಸಿದಂತೆ ಹೊಸ ಪ್ರಯೋಗವೊಂದನ್ನು 'ರಂಗ.ನಿರಂತರ' ದಲ್ಲಿಯೂ ಬೆಳಕಿಗೊಡ್ಡಿದ್ದಾರೆ. ನರಸಿಂಹನ್ ನಮ್ಮ ನಿರ್ದೇಶಕರಲ್ಲಿ ತುಂಬ ಯಶಸ್ವಿಯಾದವರಲ್ಲೊಬ್ಬರು. ಇಂತಹ ಜಾಣ್ಮೆಯಿಂದ ಇವರು ರಾಷ್ಟ್ರಕವಿ ಕುವೆಂಪು ಅವರ "ಮಿೂನಾಕ್ಷಿ ಮನೆ ಮೇಷ್ಟರು" ಎಂಬ ಕಥೆಯನ್ನು ಆಧರಿಸಿ ಸೊಗಸಾದ ಒಂದು ಪ್ರಹಸನವನ್ನು, ರಚಿಸಿ, ನಟಿಸಿ, ನಿರ್ದೇಶಿಸಿದವರು. ಹೀಗೆಯೇ ಕೈಲಾಸಂರನ್ನು ಕುರಿತ 'ಟಿಪಿಕಲ್ ಕೈಲಾಸಂ' ಎಂಬ ಮತ್ತೊಂದು ಯಶಸ್ವಿ ಕೃತಿಯಾಗಿದೆ. ಆರ್ಯ- ರಚಿಸುವ ನಾಟಕಗಳು ಅಮೂರ್ತವಾಗಿಯೇ ಇದ್ದು ನಿಗೂಢ ಪರಿಣಾಮವನ್ನು ಬೀರುತ್ತದೆ- ಎನ್ನಬಹುದು. ಬದುಕಿನ **Mystery**ಯನ್ನು ಬುದ್ಧಿಪೂರ್ವಕವಾಗಿಯೇ ನಿರೂಪಿಸುವಂತೆ ಪ್ರಯತ್ನ ಮಾಡುವುದರಿಂದ ಇವರ ಕೃತಿಗಳು ಸಾಮಾನ್ಯ ಜನತೆಗೆ ಆತಂಕವನ್ನುಂಟುಮಾಡಬಲ್ಲವು. ಅರ್ಥಕ್ಲಿಷ್ಟತೆಯಿಂದಾಗಿ ಬೇಸರವನ್ನೂ ಉಂಟುಮೂಡಬಹುದು. ಕೆಲವು ಅಂದರೆ 'ಘಾಸಿರಾಂ ಕೊತ್ವಾಲ್,' ಮೊದಲಾಗಿ ಕಂಬಾರರ 'ಲಕ್ಷಾಪತಿ ರಾಜನಕಥೆ'ಯಿಂದ ಪ್ರಬುದ್ಧತೆಯನ್ನು ತೋರಿದ ಶ್ರೀಮತಿ ಜಯಶ್ರೀ' ಗೀತ-ನೃತ್ಯ ಸಂಯೋಜನೆಯನ್ನು ನಾಟಕದ ಅಭಿನಯಕ್ಕೆ ತುಂಬ ಸೊಗಸಾಗಿ ಸಾಧಿಸಿದ್ದಾರೆ. ಸ್ವತಃ ಶ್ರೇಷ್ಠ ನಟಿಯೂ ಆಗಿದ್ದಾರೆ. ನಾಟಕ ಪ್ರಯೋಗದ ಸವಾಲನ್ನು ಎದುರಿಸುವಲ್ಲಿ ಈ ದಶಕವು ಕೆಲವು ತರುಣರನ್ನು ನೀಡಿದೆ. ಪ್ರಸನ್ನ ಮತ್ತು ನರಸಿಂಹನ್‌ರನ್ನು ಕುರಿತು ಪ್ರಾಸಂಗಿಕವಾಗಿ ಹೇಳಿದೆಯಷ್ಟೆ. 'ಬೋಮ' ಮೊದಲಾದ ಕೃತಿಗಳನ್ನು ನಿರ್ದೇಶಿಸಿದ ನಾಗೇಶ್ ಹೆಚ್ಚಾಗಿ ರಂಗಭೂಮಿಯನ್ನೇ ನಂಬಿಕೊಂಡವರು. ದಿವಂಗತ ಸುಪ್ರಸಿದ್ಧ ನಟ ಸತ್ಯಸಂಧ- ನಾಯಕರಾಗಿ ಇತರ ಹಲವು ನಾಟಕಗಳಲ್ಲಿ ಮೆರೆದಿದ್ದರು- ಕೊನೆಯ ಪ್ರಯೋಗಗಳಲ್ಲಿ 'ಭುಜಂಗಯ್ಯನ ದಶಾವತಾರ' ಮತ್ತು ಸೂರಿ ನಿರ್ದೇಶಿಸಿದ ಅನುವಾದ ಕೃತಿ 'ಅಪ್ಪ' (ಸ್ಟ್ರಿಂಡ್‌ಬರ್ಗ ವಿರಚಿತ) ಇವೆರಡೂ ನೀಡಿದ ಅನುಭವಗಳನ್ನು ಕಂಡವರು ಮರೆಯ್ಯಲಾರರು. ಒಂದು ರೀತಿಯ ಸ್ವತಂತ್ರ ಧರ್ಮಿಯಾಗಿ ಅಭಿನಯಿಸುತ್ತಿದ್ದ 'ಸತ್ಯಸಂಧ' ಒಳ್ಳೆಯ ನಟರಿದ್ದರೆಂಬುದಂತೂ ಸರಿಯಾದೀತು.

ವೃತ್ತಿ ಮನೋಧರ್ಮದ ಹವ್ಯಾಸಿ ಸಂಸ್ಥೆಗಳು ಬಂದಲ್ಲದೆ ಕನ್ನಡ ರಂಗಭೂಮಿಯು ಸ್ಥಿರವಾಗಲಾರದೆಂದು ಶ್ರೀರಂಗರೂ ಹೇಳುತ್ತಿದ್ದರು. ಅದರ ಒಂದು ಪ್ರಯೋಗ ಪ್ರಯತ್ನವನ್ನು ಪ್ರಸನ್ನ ಮತ್ತು ನಾಗೇಶ್ ಪ್ರಯತ್ನಿಸಿದ್ದರೂ ಆದರ ಆರ್ಥಿಕ ಒತ್ತಡವನ್ನು ತಡೆಯಲಾರದೆ ಬಿಟ್ಟುಕೊಟ್ಟಿದ್ದರು. ಆದರೆ ಹೆಗ್ಗೋಡಿನ ಕೆ. ವಿ. ಸುಬ್ಬಣ್ಣ, ಸಂಚಾರ ಎಂಬತ್ತೈದು ಮತ್ತು ಎಂಬತ್ತಾರು ಎಂದು ನಾಲ್ಕೈದು ನಾಟಕಗಳನ್ನು ಸಿದ್ಧಮಾಡಿಕೊಂಡು ಇಡೀ ಕನ್ನಡನಾಡಿನ ಪ್ರಮುಖ ನಗರಗಳಲ್ಲಿ ಪ್ರದರ್ಶನ ನೀಡಿದ್ದಾರೆ. ಇದರಲ್ಲಿ ಲಾಭವೇ ಮುಖ್ಯ ಉದ್ದಿಶ್ಯವಲ್ಲ.- ಕನ್ನಡ ರಂಗಭೂಮಿಯ ಸ್ಥಿರತೆಯನ್ನು ಜನಪ್ರಿಯಗೊಳಿಸುವ ಪ್ರಯತ್ನವನ್ನು ಇವರ ಎರಡೂ ಉಪಕ್ರಮಗಳಲ್ಲಿ ಕಾಣಬಹುದಾಗಿದೆ. ಹೆಗ್ಗೋಡಿನ ನಾಟಕ ಶಾಲೆಯು ಇದರಿಂದ ಜನಪ್ರಿಯತೆಯಷ್ಟನ್ನು ಗಳಿಸಿತು ಅಷ್ಟೆ. ಆದರೂ ಇವರ ನಾಟಕಗಳ ಆಯ್ಕೆಯಿನ್ನೂ ಸಮರ್ಪಕವಾಗಿರುವುದಿಲ್ಲ- ಎಂಬುದು ವಿಮರ್ಶೆಗೆ ಥಾಳಾಗಿ ಕಂಡ ಅಂಶವಾಗಿದೆ. ಇವರು ಸಮಕಾಲಿಕವಾಗಿ ಧ್ವನಿಸುವ ಸ್ವತಂತ್ರ ಕನ್ನಡ ನಾಟಕಗಳನ್ನು ಪ್ರದರ್ಶಿಸದೇ ಹೋದಲ್ಲಿ ಇವರ ಪ್ರಯತ್ನವೆಲ್ಲಾ ಕೇವಲ ಪ್ರಯೋಗಪ್ರಿಯತೆ ಹಾಗೂ ತರಬೇತಿಯ ಹಂತದಲ್ಲೇ ಉಳಿದಂತಾಗುತ್ತದೆ. ಹೊಸ ನಾಟಕ ಮತ್ತು ಹೊಸ ಸಂವೇದನೆಗಳನ್ನು ಸಾಧಿಸುವಲ್ಲಿ ತುಂಬ ಯಶಸ್ವಿಯಾಗುತ್ತಿರುವ ನಿರ್ದೇಶಕ ಸಿ. ಜಿ. ಕೃಷ್ಣಸ್ವಾಮಿ ತರುಣರೆಲ್ಲರಿಗೂ ಮಾರ್ಗದರ್ಶಕರಾಗಿದ್ದಾರೆ. ರಷ್ಯಾ ಪ್ರವಾಸವನ್ನು ಕೈಗೊಂಡು ಬಂದಮೇಲೆ ಇವರ ರಂಗಪ್ರಯೋಗಗಳಲ್ಲಿ ಯಾವುದೂ ನೋಡಿಲ್ಲವೆನ್ನಬಹುದು. ಮೊದಲಿಗೆ 'ಬೆಲ್ಚಿ'ಯನ್ನು ರಚಿಸಿ ಪ್ರಯೋಗಿಸಿದ ಕೃಷ್ಣಸ್ವಾಮಿ ಈ ದಶಕದಲ್ಲಿ 'ಸನ್ನಿವೇಶ' (ವೈಕುಂಠರಾಜು) 'ಒಡಲಾಳ' (ದೇವನೂರು ಮಹಾದೇವರ ಕಥೆಯ ರೂಪಾಂತರ) ಶಿವಪ್ರಕಾಶರ 'ಮಹಾಚೈತ್ರ' ಮತ್ತು 'ಸುಲ್ತಾನ ಟಿಪ್ಪೂ' ಅಲ್ಲದೆ ಕೆ. ರಂ. ನಾಗರಾಜರ 'ನೀಗಿಕೊಂಡ ಸಂಸ' ಬೀದಿನಾಟಕವಾಗಿ 'ತಬರನಕಥೆ'ಕೃತಿಗಳ ಪ್ರಯೋಗದಲ್ಲಿ ಮುಂಚೂಣಿಯಲ್ಲಿರುವ ನಿರ್ದೇಶಕರಾಗಿದ್ದಾರೆ.

ಬೆಂಗಳೂರಿನಲ್ಲಿ ದೊಡ್ಡ ಪ್ರಯೋಗಗಳಿಗೆಲ್ಲಾ ರವೀಂದ್ರ ಕಲಾಕ್ಷೇತ್ರವೊಂದೇ ಸುಸಜ್ಜಿತ ಮತ್ತು ಅನೂಕೂಲವಾದ ಸ್ಥಳವಾಗಿದೆ. ಹವ್ಯಾಸಿ ತಂಡಗಳೆಲ್ಲವೂ ಇದರಲ್ಲಿ ಪ್ರದರ್ಶನವನ್ನು ಸಾಧಿಸಲು ಸಾಧ್ಯವಾಗುವದಿಲ್ಲ. ಏಕೆಂದರೆ ಪ್ರೇಕ್ಷಕ ವರ್ಗವು ಬಲವಾಗಿಲ್ಲ. ಆದರೆ ರಂಗಕರ್ಮಿಗಳೂ ನಾಟಕ ಪ್ರೇಮಿಗಳು ಹೆಚ್ಚಾಗಿದ್ದಾರೆ. ಇಂಥ ಸಂದರ್ಭದಲ್ಲಿ ಹೊಸ ನಾಟಕಗಳ ರಚನೆಗೂ ರಂಗಭೂಮಿಯನ್ನು ಉಳಿಸಿಕೊಂಡು ಹೋಗುವದಕ್ಕೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲದೆ ನಾಟಕ ಅಕಾಡೆಮಿಗಳು ನೆರವಾಗಿವೆ. ಸಿ ಜಿ.ಕೆ. ನೇತೃತ್ವದಲ್ಲಿ ಪ್ರಾಯೋಗಿಕ ರಂಗವೊಂದನ್ನು 'ರಂಗನಿರಂತರ' ಎಂಬ ಹೆಸರಿನಲ್ಲಿ ಫೆಬ್ರುವರಿಯಿಂದ ಜುಲೈ ತಿಂಗಳ ವರೆಗೂ ಒಂದನೂರಾಐವತ್ತು ದಿನಗಳಲ್ಲಿ ಒಟ್ಟು ಹದಿನೆಂಟು ನಾಟಕಗಳನ್ನು ಪ್ರದರ್ಶಿಸಿತು. ಇದಕ್ಕೆ ಪ್ರೇಕ್ಷಕರು ಕಡಿಮೆಯಾದರೂ ಮಾಡಿದ ಸಾಧನೆಯು ರಂಗಭೂಮಿಯ ಇತಿಹಾಸಕ್ಕೆ ಸೇರಿ ಹೋಗುತ್ತದೆ. ತರುಣ ನಿರ್ದೇಶಕರಿಗೆ ಇಲ್ಲಿ ಪ್ರಥಮ ಅವಕಾಶವಿದ್ದು ಕೆಲವು ಹೊಸ ನಾಟಕಗಳು ಯಶಸ್ವಿಯಾದವು. ಈ ಹದಿನೆಂಟು ನಾಟಕಗಳಲ್ಲಿ 'ಜಗನ್ನಾಥನ ರಥಚಕ್ರಗಳು', ಅಹಲ್ಯೆ ನನ್ನ ತಾಯಿ, ಮತ್ತು ತುಕ್ಕೋಜಿ- ಇವುಗಳು ಶ್ರೇಷ್ಠ ಮಟ್ಟದ ಪ್ರಯೋಗಗಳಿಗನುಗುಣವಾಗಿ ನಮ್ಮ ಸಮಕಾಲಿಕ ಸಂದರ್ಭದ ಪ್ರಯೋಜನವನ್ನು ಈ ಹಿಂದೆ ಕಾಣದಿದ್ದ ಕಲಾತ್ಮಕತೆಯನ್ನು ಇಲ್ಲಿ ಕಾಣಲು ಸಾಧ್ಯವಾಯಿತು. ಇವುಗಳಲ್ಲಿ ಅಲ್ಲದೆ ಹದಿನೆಂಟು ನಾಟಕ ಪ್ರಯೋಗಗಳಲ್ಲಿಯೂ ಮೊದಲನೆಯದೆಂದು 'ಜಗನ್ನಾಥನ ರಥಚಕ್ರಗಳು' ನ್ನು ಹೆಸರಿಸಬೇಕಾಗುತ್ತದೆ. ಇದರ ಕಲಾವಿದರೂ ಕೂಡ ಹೊಸಬರು. ಇದರ ರಚಕ ಮತ್ತು ನಿರ್ದೇಶಕ ಅಮರ್. ಕೇಂದ್ರ ನಾಟಕ ಶಾಲೆಯಂಥ ಸಂಸ್ಥೆಯಲ್ಲಿ ತರಬೇತಿಯನ್ನು ಪಡೆದವರಿಗಿಂತ



'ತದ್ರೂಪಿ' ನಾಟಕದ ಒಂದು ದೃಶ್ಯ

ಎಳ್ಳಷ್ಟೂ ಕಡಿಮೆಯಿಲ್ಲ ಎನ್ನಬಹುದು. ಒಟ್ಟಿನಲ್ಲಿ ಈ 'ರಂಗನಿರಂತರ' (ಸತ್ಯಸಂಧ ರಂಗೆಮಂಟಪ) ಒಂದು ಐತಿಹಾಸಿಕ ದಾಖಲೆಯಾಗಿದೆ. ಸಿ.ಜಿ.ಕೆ. ಮತ್ತು ಸಂಗಡಿಗರ ಈ ಪ್ರಯತ್ನದಿಂದ ಆದ, ಒದಗಿದ ಸಫಲತೆಯನ್ನು ಪ್ರತ್ಯೇಕವಾಗಿಯೇ ಚರ್ಚಿಸಬೇಕಾಗುತ್ತದೆ.

ಕಂಬಾರರು ನಾಟಕ ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ ತರಬೇತಿಯನ್ನು ಪಡೆದು ಬಂದ ಬಾದರದಿನ್ನಿ, ಬಸವಲಿಂಗಪ್ಪ, ಮೊದಲಾದವರಿಗೆ ನಾಡಿನ ಬೇರೆ ಬೇರೆ ಕೇಂದ್ರಗಳಲ್ಲಿ ಅಕಾಡೆಮಿಯ ನೆರವಿನಿಂದ ತರಬೇತಿ ಕೇಂದ್ರಗಳನ್ನು ನಡೆಸಲು ಸಾಧ್ಯವಾಯಿತು. ಇದರಿಂದ ದೂರದ ಬೆಳಗಾಂ ವಿಜಾಪುರ, ಕಲಬುರ್ಗಿ, ಧಾರವಾಡ, ಬೀದರ ಮಂಡ್ಯ ಮತ್ತು ಮಂಗಳೂರಗಳಲ್ಲೂ ಇಂಥ ಕೇಂದ್ರಗಳು ನಾಟಕ ಕಲೆಯ ಜಾಗೃತಿಯನ್ನು ತರುಣರಲ್ಲಿ ಒಡಮೂಡಿಸಲು ಸಾಧ್ಯವಾಗಿದೆ, ಇದರ ಫಲವಾಗಿ ಹಲವು ಹವ್ಯಾಸಿ ಸಂಸ್ಥೆಗಳೂ ತರುಣ ನಾಟಕಕಾರರೂ ಕ್ರಿಯಾಶೀಲರಾಗಲು ಅವಕಾಶವಾಗಿದೆಯಷ್ಟೆ. ಇಂಥ ಜಾಗೃತಿಯ ಪ್ರಯತ್ನದಲ್ಲಿ 'ಸಮುದಾಯ'ವು ಒಂದು ಪ್ರಮುಖ ಸಂಸ್ಥೆಯಾಗಿಯೇ ದುಡಿಯುತ್ತ ಇದೆ. ಮೊದಲಿಗೆ ಇವರು ಬೀದಿ ನಾಟಕಗಳನ್ನು ಮುಖ್ಯ ಸಾಧನೆಯನ್ನಾಗಿ ಮಾಡಿಕೊಂಡಿದ್ದವರು. ಈಚಿಗೆ ಜಾನಪದ ವಸ್ತುಗಳನ್ನು ಆಧರಿಸಿ ಅವುಗಳಿಗೆ ಪ್ರಸ್ತುತ ಸಾಮಾಜಿಕ ಜಾಗೃತಿಯನ್ನು ಧ್ವನಿಸುವಂತೆ ಮಾಡುತ್ತಿದ್ದಾರೆ. ಇವರಲ್ಲಿ ಮಾಲತಿ, ಬಸವಲಿಂಗಪ್ಪ, ರಘುನಂದನ ಈ ಸಂಸ್ಥೆಯ ಮೊಸಲು ಸೇವೆಯಲ್ಲಿ ತೊಡಗಿಸಿಕೊಂಡವರಾಗಿದ್ದಾರೆ.

ನಾಟಕ ಅಕಾಡೆಮಿ ಕಂಬಾರರ ನೇತೃತ್ವದಲ್ಲಿ ಕೊನೆಯದಾಗಿ ಸಾಧಿಸಿದ ಒಂದು ಹಬ್ಬವೆಂದರೆ ಫೆಬ್ರುವರಿ ಮಾರ್ಚಗಳಲ್ಲಿ ಇಪ್ಪತ್ತು ದಿನಗಳು ನಡೆದದ್ದು. ಇದನ್ನು ಕಲಾಕ್ಷೇತ್ರದ ಹಿಂಬದಿಯ ಬಾಗಿಲ ಮುಂದೆ 'ಸಂಸ ಬಯಲು ರಂಗ' ಎಂಬ ಹೆಸರಿನಲ್ಲಿ ನಡೆಸಲಾಯಿತು. ಇದನ್ನು ಒಂದು ಸುಸಜ್ಜಿತ ರಂಗವನ್ನಾಗಿಸಲು ನಮ್ಮ ಸರ್ಕಾರವು ನೇರವಾಗಿ ನಿಂತು ಸಾಧಿಸಿದಂತೆಯೂ ಆಯಿತು. ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ ನಾಟಕ ತಂಡಗಳು ಬಂದು ಇಲ್ಲಿ ಪ್ರದರ್ಶನಗಳನ್ನು ನೀಡಿವೆ. ಇದರಿಂದ ಕನ್ನಡ ರಂಗಭೂಮಿಯಲ್ಲಿ ತೊಡಗಿರುವ ಬೇರೆ ಬೇರೆ ಕೇಂದ್ರಗಳು ತಮ್ಮ ತಮ್ಮ ಸಾಧನೆಯನ್ನು ಚರ್ಚಿಸಲು ಅವಕಾಶವಾಯಿತು. ಈಚಿನ ದಿನಗಳಲ್ಲಿ ಇದೊಂದು ಬಹು ಮುಖ್ಯವಾದ ಪ್ರಯತ್ನ ವೆಂಬುದು ನಿರ್ವಿವಾದವಾಗಿದೆ.

ತರುಣ ನಿರ್ದೇಶಕರಲ್ಲಿ ಗೋಪಾಲಕೃಷ್ಣ ನಾಯಿರಿ ಅವರ ಪ್ರಯೋಗಗಳು ಬೇರೆ ರೀತಿಯವು ಮತ್ತು ... ಅಕಾಡೆಮಿಯಾಗಲಿ: ಕನ್ನಡ ಸಂಸ್ಕೃತಿ ... ಯದಾಗಲಿ ನೆರವನ್ನು ಪಡೆಯದೆ ಸ್ವತಂತ್ರ ಹವ್ಯಾಸಿ ತಂಡಗಳ ಮೂಲಕ ತಮ್ಮ ಪ್ರಯೋಗಗಳನ್ನು ಸಾಧಿಸುತ್ತಾ ಬಂದಿರುತ್ತಾರೆ. ಭಾಸನ ಏಕಾಂಕಗಳನ್ನು ಕನ್ನಡದಲ್ಲಿ ಯಶಸ್ವಿಯಾಗಿ ಪ್ರಯೋಗಿಸಿದ್ದಾರೆಯಲ್ಲದೆ, ಸಂಸ್ಕೃತದಲ್ಲಿ ಭಗವದಜ್ಜುಕೀಯಂ-ಪ್ರಹಸನವನ್ನು ಕಾಲೇಜು ವಿದ್ಯಾರ್ಥಿಗಳ ಬಳಕೆಯಿಂದ (ಎಂ. ಇ. ಎಸ್. ಕಾಲೇಜ ಕೇಂದ್ರದಲ್ಲಿ) ಸಾಧಿಸಿದ್ದಾರೆ. ಇದರಿಂದ ನಾಟಕದ ಅಭಿರುಚಿಗೆ ಒಂದು ಹೊಸ ಆಯಾಮ ದೊರಕಲು ಅವಕಾಶವಿದೆ. ಇವರ ಪ್ರಯೋಗಗಳಲ್ಲಿ ಪೂ. ಚಂ. ತೇ. ಯವರ 'ಕರ್ವಾಲೋ' ಎಂಬ ಕಾದಂಬರಿಯ ರೂಪಾಂತರ ಕೂಡ ಸೇರಿದೆಯಷ್ಟೆ.

ಇಂಥ ಪರಿಶೀಲನೆಯಲ್ಲಿ ಒಂದೆರಡು ಎಳೆಗಳು ತಪ್ಪಿಹೋಗಿವೆ—ಇದಕ್ಕೆ ಸೂರ್ಯ ಶಿಕಾರಿ ಮತ್ತು ಘಟ್ಟೋ ನಾಟಕ ಪ್ರಯೋಗಗಳು ಸೀನಾಸಂರವರ 'ಪೋಲಿಕಟ್ಟೆ' (ಒಂದು ನೂತನ ಪ್ರಯೋಗ) ಚಿತ್ರಕಲಾ ಮಂದಿರದ ಕೆಲವು ಪ್ರಯೋಗಗಳೂ ಸೇರಿಕೊಳ್ಳುತ್ತವೆ. ನಮಗೆ ಇಂಥ ಪ್ರಯೋಗಗಳೂ ನಾಟಕಗಳೂ ನಮ್ಮ ಪ್ರಜಾಪ್ರಭುತ್ವದ ಸಂದರ್ಭದಲ್ಲಿ ಅತ್ಯವಶ್ಯವಾಗಿ ಬೇಕಾಗಿವೆ.

ಒಟ್ಟಾರೆ ನೋಡಿದಲ್ಲಿ ಕನ್ನಡ ನಾಟಕ ರಂಗವು ಜೀವಂತವಾಗಿಯೂ ತನ್ನ ಆಧುನಿಕ ಸಮಕಾಲಿಕತೆಯಲ್ಲಿ ಅರ್ಥಪೂರ್ಣವಾಗಿಯೂ ಉಳಿದು ಬಂದಿರುವುದಲ್ಲದೆ ಮುಂದೆಯೂ ಉಳಿಯುವ ಶಕ್ತಿಯನ್ನು ಪಡೆದುಕೊಂಡಿದೆ. ಇದರಲ್ಲಿ ಸಿ. ಜಿ. ಕೆ. ಯನ್ನು ನಮ್ಮ ರಂಗಭೂಮಿಯ ಒಂದು ಸಂಸ್ಥೆಯೆಂದರೂ ತಪ್ಪಾಗಲಾರದು. ಹಾಗೆಯೇ ಜನಜಾಗೃತಿಗೆಂದು ಬೆಳ್ಚಿ ಮತ್ತು ಒಂದು ಕೋತಿಯ ಕಥೆಯಂಥವನ್ನು ನೀಡಿದ ಬೀದಿ ನಾಟಕರಂಗವು ಈ ವೇಳೆಗಾಗಲೇ ಅಳಿಸಿ ಹೋದಂತೆ ಆಗಿರುವುದೂ ಒಂದು ಐತಿಹಾಸಿಕ ಸತ್ಯವಾಗಿರುತ್ತದೆ. □

ಪೂರ್ಣಜ್ಞ ವಚನಗಳು

ಅದ್ವೈತ ಸಿದ್ಧನಿಗೆ, ಸದ್ದುಗದ್ದಲವಿಲ್ಲ !
ಬದ್ಧತೆಗಳಿಲ್ಲ; ಮೋಹಮಾಯೆಗಳಿಲ್ಲ !
ಚಿದ್ಯೋಗಿಯವನು ! ಪೂರ್ಣಜ್ಞ.

ಕಣ್ಣಿನಿಂದಲೇ ಪ್ರೇಮ, ಕಣ್ಣಿನಿಂದಲೆ ಕಾಮ
ಕಣ್ಣಿನಿಂದಲೇ ಬದುಕು, ಜಗವನೀಕ್ಷಿಸಲು
ಕಣ್ಣೇ ಬೇಕಯ್ಯ ! ಪೂರ್ಣಜ್ಞ

ಕಣ್ಣು ಒಳಗಾಡಿದರೆ ಚನ್ನರಿವು ತೋರುವದು
ಕಣ್ಣು ಹೊರಗಾಡಿದರೆ ಮನಮಲಿನವಾಗಿ
ಮಣ್ಣಿಗತಿಯೆಕ್ಕು ಪೂರ್ಣಜ್ಞ.

ಭಾವವಿಲ್ಲದ ಕವನ ! ಜೀವವಿಲ್ಲದ ಕಾಯ
ನಾವಿಕನಿರದ ನಾವೆ, ಇವುಗಳಿಂ ಜಗಕೆ
ಯಾವ ಉಪಯೋಗ? ಪೂರ್ಣಜ್ಞ.

ತಪ್ಪು ಮಾಡಿದೆನೆಂದು ಕೋಪಗೊಳ್ಳದಿರಯ್ಯ
ಅಪ್ಪ ಗುರುಸಿದ್ಧಪ್ಪ ನಿನ್ನ ಕಂದನನು
ಅಪ್ಪಿಕೊ ತಂದೆ ಪೂರ್ಣಜ್ಞ.

ವ್ಯಕ್ತಿತ್ವ ಸಾಧನೆಗೆ । ಭಕ್ತಿಯದು ದೃಢಮೂಲ
ವ್ಯಕ್ತಿತ್ವ ಬೆಳೆದಂತೆ ಬೆಳೆಗುವದು ಶಕ್ತಿ;
ಮುಕ್ತಿಗದು ಸುಪಥ; ಪೂರ್ಣಜ್ಞ

—ಶ್ರೀ ಮೂಜಗಂ—

ಏಕಾಂಕ ನಾಟಕ

ಕುಂಟ ಕಾಲಿಗೆ ವೈದ್ಯ

ಅನಂತ ಕಲ್ಲೋಳ



ಪಾತ್ರ ಪರಿಚಯ :-

ಮನೋಹರ: ೩೦–೩೫ ವರ್ಷದ ಗೃಹಸ್ಥ.

ಮಾಲತಿ : ಆತನ ಮಡದಿ.

ರಮೇಶ : ಮನೋಹರನ ತಮ್ಮ. ಸ್ವಲ್ಪ ಗಿಡ್ಡ ವ್ಯಕ್ತಿ.

ರಾಧೆ : ರಮೇಶನಿಗೆ ಅನುರೂಪಳಾದ ಮಡದಿ.

ಮೋಹನ : ಮನೋಹರನ ತಮ್ಮ ಮತ್ತು ರಮೇಶನ ಅಣ್ಣ ಅವಿವಾಹಿತ,

ತೆರೆ ಎದ್ದಾಗ

ಪ್ರಾತಃಕಾಲದ ೯ ಗಂಟೆಯ ಸಮಯ. ಸುಸಜ್ಜಿತವಾದ ಕೋಣೆಯ ದೃಶ್ಯ. ಮನೋಹರ ಕುರ್ಚಿಯ ಮೇಲೆ ಮಂಡಿಸಿ, ಎದುರಿಗಿನ ಮೇಜಿನ ಮೇಲೆ ಕೈ ಊರಿ ಬಹಳ ಯೋಚನೆಯಿಂದ ಏನೋ ಬರೆಯುತ್ತಿದ್ದಾನೆ. ನಡುನಡುವೆ ತಡೆತಡೆದು ಬರೆದುದನ್ನು ಮನಸ್ಸಿನಲ್ಲಿಯೇ ಓದುತ್ತಿದ್ದಾನೆ. ಮುಖದ ಮೇಲೆ ಸಮಾಧಾನದ ನಗೆ ತೇಲಿಸುತ್ತಾನೆ. ಕೈಯಲ್ಲಿಯ ಲೇಖನಿ ಮೇಜಿನ ಮೇಲಿಟ್ಟು ಬೇಜಾರು ಕಳೆದುಕೊಳ್ಳಲೆಂದು ಮೈಮುರಿಯುತ್ತ—





ಮನೋಹರ : ಮಾಲತೀ, ಏ ಮಾಲತೀ ಬಾರ ಇಲ್ಲೆ, ಎಲ್ಲ್ಯಾಡ್ಲಿ ಕತ್ತಿದೀ? ಬಾರ ಲಗೂನ.

ಮಾಲತಿ : (ಪ್ರವೇಶಿಸುತ್ತ) ಬಂದೆ, ಬಂದೆ, ಏನ್ರೀ ಅಂಥ ಜರೂರ ಕೆಲಸ ? ಯಾಕ ಹಾಂಗ ಒದರ್ತೀರಿ, ಮನೀಗ ಬೆಂಕಿ ಬಿದ್ದವರ ಹಾಂಗ ?

ಮನೋಹರ : ಮನೀಗ ಬೆಂಕಿ ಬಿದ್ದವರ ಹಾಂಗ ? ಏನ ಬರಷ್ಣ ಮಾತಾಡ್ತಿ ? ಮನೀಗ ಬೆಂಕಿ ಬಿದ್ದಿದ್ರ ನಿನ್ನ ಯಾಕ ಕರೀತಿದ್ದೆ, ಮುನ್ಸಿಪಾಲ್ಟೀ ಫೈರ್ ಬ್ರಿಗೇಡದ ಅಧಿಕಾರಿ ಏನು ನೀನು ? ಛೇ, ನಿನ್ನ ಕರೆದಾಗ ನಾ ಎಂಥಾ ಮೂಡಿನೊಳಗ ಇದ್ದೆ. ಯಾವತ್ತೂ ಹೀಂಗ ಏಂದು, ನಾನು ಛಂದಂಥ ಮೂಡಿನೊಳಗ ಕರೆದ ಸರತಿ ಗೊಮ್ಮೆ ನೀನು ನೀನು ಹೀಂಗ ರಂಗದ ಬೇರಂಗ ಮಾಡ್ತಿ.

ಮಾಲತಿ : ಅದು ಹೋಗ್ಲೀರಿ, ಏನ್ ಸುದ್ದಿ ಅಂಬೋದು ಹೇಳ್ತಿರೋ ಅಥವಾ ಮೂಡ ಹೋಯ್ತು ಗೂಡು ಹೋದ್ತು ಅಂತ ಹಾಡಿಕೋತ ಕೂಡ್ತಿರೊ ? ಹಾಂಗಾದ್ರ ನಾನು ಒಳಗ ಹೋಗಲ್ಯೋ ?

ಮನೋಹರ : ಮಾಲೀ, ಯು ಆರ್ ಸಿಂಪ್ಲೀ ಎ ಸಿಂಪಲ್‌ಟನ್. ಮನೀ ಒಳಗಿನ್ಹಂಗ ಮನೀ ಹೊರಗಿನ ಜಗತ್ತು ಎಷ್ಟು ವಿಶಾಲ ಅದ ಅಂಬೋದು ನಿನಗೇನರೇ ಗೊತ್ತದ ಏನು ? ನಿನ್ನ ಗಂಡ ಎಂಥ ವಿಜಯದ ಪತಾಕಿ ಹಾರಿಸಿ ಬಂದಾನ ಅಂಬೋದರ ಖಬರದ ಏನ್ ನಿನಗ ?

ಮಾಲತಿ : ಮನೀ ಹೊರಗ ಏನೇನು ಪತಾಕಿ ಹಾರಸ್ತೀರಿ ನನಗ ಗೊತ್ತಿಲ್ಲದೇ ಇರೋದ ಛಲೋ ; ಹುಂ, ಇಷ್ಟು ಬಾಯಬಿಟ್ಟು ಹೇಳಲಿಕ್ಕ ಹತ್ತೀರಲ್ಲ, ಹೇಳಿ ಬಿಡ್ರಿ, ನೀವು ಹಾರಿಸಿದ ಪತಾಕೆಯು ಬಣ್ಣಾವನ್ನ ?

ಮನೋಹರ : ಮೂರು ಕಾಲಿನ ಓಟ ಗೊತ್ತದೇನ ನಿನಗ ? ಥ್ರೀ ಲೆಗ್ಗಡ್ ರೇಸ್ ; ನಾವು ಮೊದಲು ಸ್ಥಾನ ಪಡೆದೇವಿ ಸ್ವಾತಂತ್ರ್ಯೋತ್ಸವದ ಕ್ರೀಡಾ ಸ್ಪರ್ಧೆಯೊಳಗ !

ಮಾಲತಿ : ನಾವು ಪಡೆದೀವಿ ? ಅಂದ್ರ ನೀವು ಮತ್ತ ಇನ್ನೊಬ್ರು ಯಾರು ?

ಮನೋಹರ : ನಾನು ಮತ್ತ ನಿನ್ನ ಕಿರಿಯ ಮೈದುನ ರಮೇಶ !

ಮಾಲತಿ : ಅವ್ವಾ ಇದೇನ ಕೇಳ್ತೀನೆ ? ನೀವು ಮತ್ತು ಭಾವಜೀ ಹಂಗಾರ ಮಾತಾಡಿದ್ರಿ ಅನ್ರೀ ? ಅಂತೂ ಒಳ್ಳೇ ಮುಹೂರ್ತದ ಮ್ಯಾಲ ಮತ್ತ ನೀವು ಕೂಡಿದಿರಿ ಅಂಥಂಗಾತು ?

ಮನೋಹರ : ನಾವು ಮಾತಾಡಲಿಲ್ಲ, ಕೂಡೋ ಪ್ರಶ್ನೇನ ಇಲ್ಲ. ಕ್ಲಬ್ಬಿನವರು ಚೀಟಿ ಎತ್ತಿದರು, ಅಕಸ್ಮಾತ ನಂದು ಆತನ ಹೆಸರಿನದು ಚೀಟಿ ಒತ್ತಟ್ಟಿಗೆ ಬಂತು. ನಾವು ಕೂಡಲಿಲ್ಲ, ನಮ್ಮ ಕಾಲು ಕೂಡಿದವು. ನನ್ನ ಬಲಗಾಲು ಮತ್ತು ಅವನ ಎಡಗಾಲು ಸೇರಿಸಿ ಕಟ್ಟಿದರು. ಸ್ಪರ್ಧೆ ಆರಂಭವಾಯ್ತು, ನಾವು ಓಡಿದೆವು ಮತ್ತು ಕೊನೆಗೆ ಗೆದ್ದೇ ಬಿಟ್ಟೆವು.

ಮಾಲತಿ : ವ್ಹಾ ಭೇಷ್, ಕಾಂಗ್ರಾಟ್ಸ್ .! ಆದ್ರ ನೀವು ಕೂಡಿಕೊಂಡು ಓಡಿದ ಮ್ಯಾಲ, ಅದೂ ಗೆದ್ದ ಮ್ಯಾಲ ಇನ್ನರೇ ಮಾತಡಲಿಕ್ಕೇನು ಹರಕತ್ ಅದ ? ಮೂರು ಕಾಲಿನ ಓಟದಾಗ ಮುಗ್ಗರಿಸಿ ಬೀಳದ ನೀವಿಬ್ಬರೂ ಸಹಭಾಗಿಗಳಾಗಿ ಗೆದ್ದಿರಿ. ಇದರರ್ಥ ನೀವು ಪರಸ್ಪರರನ್ನು ಚೆನ್ನಾಗಿ ತಿಳಿದುಕೊಂಡೀರಿ, ಪರಸ್ಪರರಿಗೆ ಪೂರಕವಾಗಿ, ಹೊಂದಿಕೆಯಾಗಿ ಓಡೋದನ್ನ ಮತ್ತ ಛಲದಿಂದ ಜಯ ಸಾಧಿಸೋದನ್ನ ಅರಿತುಕೊಂಡೀರಿ ಅಂಥಾಂಗ ಆತು. ನಿಮ್ಮ ವಿರೋಧ, ಪರಸ್ಪರರಲ್ಲಿಯ ವೈರತ್ವ ತೋರಿಕೇದು ಅಂತ ಅಂಥಾಂಗಾತು.

ಮನೋಹರ : ಇಲ್ಲೇ, ಇಲ್ಲೇ ನೀ ತಪ್ಪಾ ಇದ್ದಿ ಮಾಲತಿ. ಆದಕ್ಕ ನಾ ನಿನಗ ಸಿಂಪಲ್‌ಟನ್ ಅನ್ನೋದು —

ಮಾಲತಿ : (ಕೋಪಗೊಂಡು) ನೋಡ್ರಿ ಮತ್ತ ಮತ್ತ ನನ್ನ ಟನ್ನೂ, ಕ್ವಿಂಟಲ್ಲೂ ಅಂತ ಅನ್‌ಬ್ಯಾಡ್ರಿ. ಹಂ ನನ್ನಂಥ ಸಿಂಪಲ್ ನಿಮಗ ಸಿಕ್ಕದ್ದು ನಿಮ್ಮ ಪುಣ್ಯ ಅಂತ ತಿಳಿದುಕೊಳ್ರಿ. ಗೊತ್ತದ ಎಂಥಾ ಡಿಂಪಲ್ ನಿಮಗ ಸಿಗತಿದ್ಲು ಅಂಬೋದು — !

ಮನೋಹರ : ಛೇ, ಛೇ, ಏನ್ ಅರ್ಥಕ್ಕ ಅನರ್ಥ ಮಾಡಿ ವ್ಯರ್ಥ ಹಾರಾಡ್ತಿ ? ಏನ್ ಹೇಳ್ಲಿಕ್ಕ ಹತ್ತಿದಂದ್ರ, ಅಂ-ಹಂನೋಡು, ಏನೋ ಕರ್ಮ ಧರ್ಮ ಸಂಯೋಗದಿಂದ ನನ್ನ ಹೆಸರು ಮತ್ತು ರಮೇಶನ ಹೆಸರು ಒಟ್ಟಿಗೆ ಬಂದ್ವು, ನಾವು ಕಾಲು ಕಟ್ಟಿಸಿಕೊಂಡು ಮೂರು ಕಾಲಿನ ಓಟದಾಗ ಗೆದ್ದೆವು; ಖರೇ ಅದ. ಆದ್ರ ಇದರ ಅರ್ಥ ನಾನು ಮತ್ತು ಆತ ಒಂದು ಅದೆವು ಅಂತ ಅಲ್ಲ. ನಮ್ಮ್ಯಾಲ ಬ್ಯಾರೆ ಅವ; ನಮ್ಮ ನಡಿಗಿ ಬ್ಯಾರೆ ಅದ. ಅದರಿಗಿಂತ ಮುಖ್ಯ ವಾಗಿ ನಮ್ಮ ತಲೀ ಬ್ಯಾರೆ ಬ್ಯಾರೆ ಅವ. ನಾವು ಹುಟ್ಟಿದಾಗ ಸಹೋದರರಾಗಿದ್ದರೂ ಈಗ ಬೆಳೆದ ಮ್ಯಾಗ ದಾಯಾದಿ ಗಳಾಗೇವಿ—

ಮಾಲತಿ : ಆದ್ರ ನಿನ್ನಿನ ಪ್ರಸಂಗದ ಪ್ರಯೋಜನ ಪಡೆದು ಪುನಃ ಸಹೋದರತ್ವದ ಭಾವನೆ ಬೆಳೆಸ್ಕೋಬಹುದಲ್ಲ.

ಮನೋಹರ : ಮಾಲತೀ, ನಿನ್ನಿನ ಪ್ರಸಂಗದ ಮೊದಲನೇ ಭಾಗ ಮಾತ್ರ ನೀನು ಕೇಳಿದಿ, ಅದರ ಮುಂದಿನ ಭಾಗ ಕೇಳಿದಿ ಅಂದ್ರ ನೀನು ಹೀಂಗ ಮಾತಾಡುವುದಿಲ್ಲ.

ಮಾಲತಿ : ಏನದು ಮುಂದಿನ ಭಾಗ ?

ಮನೋಹರ : ಮುಂದಿನ ಭಾಗೇನ ಮಹತ್ವದ್ದು ! ನಿನ್ನೆ ನಾವು ಗೆದ್ದ ಮ್ಯಾಲ ನಮ್ಮ ದೋಸ್ತ ಮಂಡಳಿ ನಮ್ಮ ಹೆಸರ್ಲೇ ಜಯಜಯ ಕಾರ ಮಾಡಿದ್ರು, ನಮ್ಮ ಅಭಿನಂದನ ಮಾಡಲಿಕ್ಕೆ ಬಂದ್ರು. ಆಗ ನಾ ಸಹಜ ಅವರಿಗೆ ಅಂದೆ. ಥ್ರೀ ಲೆಗ್ಗಡ್ ರೇಸದಾಗ ನನ್ನ ಬಲಗಾಲವನ್ನು ರಮೇಶನ ಎಡಗಾಲಿಗೆ ಕಟ್ಟಿದ್ದು. ಯಾವತ್ತು ಶರೀರದಾಗ ಬಲಗಡೆಯ ಭಾಗಾನ ಹೆಚ್ಚು ಜವಾಬ್ದಾರಿ ಹೊರ್ತದ. ಆದ್ದರಿಂದ ನಮ್ಮ ವಿಜಯದ ಶ್ರೇಯಸ್ಸು ನನ್ನ ಬಲಗಾಲಿಗೇ ಸೇರಬೇಕು—ಎಂದಿದ್ದೆ.

ಮಾಲತಿ : ಹ್ಞೂ, ಮುಂದ. ?

ಮನೋಹರ : ಮುಂದೇನು, ? ನಿನಗ ಗೊತ್ತs ಅದಲ್ಲ. ರಮೇಶನ ಹಟಮಾರಿತನ. ಅವ ಒಮ್ಮೆಲೇ ಸಿಡಿದು ಕೂಗಿದ. ನಮ್ಮ ವಿಜ [illegible]

ಮಾಲತಿ : ಅಂತೂ ಗೆಲವಿನ ಆನಂದದೊಳಗೂ ನೀವಿಬ್ಬರೂ ನಿಮ್ಮ ಈರ್ಷಾಭಾವ ಬಿಡಲಿಲ್ಲ ಅನ್ರಿ,

ಮನೋಹರ : ಬಿಡೋದೆಲ್ಲಿಗೆ ಬಂತು' ಮತ್ತಿಷ್ಟು ವಿಕೋಪಕ್ಕ ಏಣ್ಣೆ ಸುರವಿತು ಈ ವಿಜಯ.

ಮಾಲತಿ : ಸ್ಸರಿ, ಹ್ಯಾಂಗ ಬಗೀಹರೀತು ಆ ವಿವಾದ ?

ಮನೋಹರ : ವಿವಾದ ನಿನ್ನೆ ಮುಗಿಲೇ ಇಲ್ಲ. ಅದು ಈ ಹೊತ್ತಿನ ತನಕ ಮುಂದುವರಿದದ.

ಮಾಲತಿ : ಮುಂದುವರಿದದ ಅನ್ನಬ್ಯಾಡ್ರಿ ಹಿಂದs ಉಳಕೊಂಡ ಬಂದದ ಅನ್ರಿ.

ಮನೋಹರ : ಹಾಂಗಂದ್ರೂ ಸರೀನ. ಹಿಂದ ಉಳದದ ಅಂದ್ರ ಇನ್ನೂ ಹೆಚ್ಚಿನ ಪ್ರಾಶಸ್ತ್ಯ ದಕ್ಕತದ.

ಮಾಲತಿ : ಅದೂ ಖರೇನ, ಇಂದ ನಿರ್ಣಯ ಆಗೋದದನ ? ಅದಕ್ಕ ನೀವು ನಿನ್ನೆ ಮನೀಗೆ ಬಂದವ್ರು ಒಂದ ಥರಾ ಇದ್ರಿ ಏನು s ? ಈಗ ತಿಳೀತು, ನನಗ ಅದರ ಕಾರಣ ! ಯಾರ ಮಾಡಾವ್ರಿದ್ದಾರ ಅದರ ನಿರ್ಣಯ ?

ಮನೋಹರ : ಅದರ ನಿರ್ಣಯ ಜನತಾ ಜನಾರ್ದನ ಮಾಡ್ತದ. ನಮ್ಮ ಕ್ಲಬ್ಬಿನ ಸಮಸ್ತ ಸದಸ್ಯರ ಸಭೆಯೊಳಗೆ ಅದರ ನಿರ್ಣಯ ಆಗೋದದ. ಈ ದಿವ್ಸ ಸರ್ವಸದಸ್ಯರ ಸಭಾ ಅದ, ನಾನು ಬಲ ಗಾಲಿನ ಬಲ ಭಾಗದ ಮಹತ್ವ ಹೇಳೋದು ಮತ್ತ ರಮೇಶ ತನ್ನ ಎಡ ಪಕ್ಷ ಮಂಡಿಸೋದು. ನಮ್ಮ ವಿಚಾರ ಕೇಳಿಕೊಂಡು ನಮ್ಮ ಕ್ಲಬ್ಬಿನ ಸಭೆಯೊಳಗ ಸಮಸ್ತ ಸದಸ್ಯರು ತೀರ್ಪು ಕೊಡೋದು ಅಂತ ನಿರ್ಣಯ ಆಗೇದ. ಯಾರ ವಾದಕ್ಕ ಹೆಚ್ಚು ಜನರು ಬೆಂಬಲ ನೀಡತಾರೋ ಅವರು ಗೆದ್ದ ಹಾಂಗ. ನಿನ್ನಿನ ವಿಜಯದ ಶ್ರೇಯಸ್ಸು ಅವರಿಗೆ ಸೇರಿಧಾಂಗ, ಇಂದು ನಿರ್ಣಯವಾಗಿ ಹೋಗಲಿದೆ ಎಡಾನೋ, ಬಲಾನೋ ಅಂಬೋದು ! ನನ್ನ ಪಕ್ಷದ ಕೈಫಿಯತ್ತು ತಯಾರ ಮಾಡೇನಿ ಇಷ್ಟೋತು ಕೂತು. (ಮಾತಿನ ಆವೇಶದಲ್ಲಿ ಎದ್ದು ಓಡಾಡುತ್ತ) ನಾನು ಮಂಡಿಸುವ ಒಂದೊಂದು ಪಾಯಿಂಟು ಅಂದ್ರ ರಮೇಶನ ಅಟ್ಟಹಾಸದ, ಅಭಿಮಾನದ ಮತ್ತು ಅವಿಚಾರಿ ಹೇಳಿಕೆಗಳನ್ನು ಚೂರು ಚೂರು ಮಾಡುವ ಗುಂಡುಗಳು ಫಿರಂಗಿ ಗುಂಡುಗಳು ! ಹಾಂ, ಅವಿವೇಕಿ ರಮೇಶ, ಇಂದಿನ ಸಭಾ ಸ್ಥಾನ ಅಂದ್ರ ನಿನ್ನ ಪಾಣಪತ್ತು. ವಾಟಲೂರ್ !

ಮಾಲತಿ : ಇದೇನ ಹುಡುಗಾಟಿಕೆ ನಿಮ್ದು ; ನನಗೇಗೂ ತಿಳೀವಲ್ದು. ಸಣ್ಣ ಪುಟ್ಟ ವಿಷಯಕ್ಕೆ ದೊಡ್ಡವರೆನಿಸ್ಕೊಂಡವರು ಹೀಂಗೆ ಹಗರಣ ಮಾಡಿದ್ರ ಏನಾಥಾಂಗಾತು ? ಗೆದ್ದಾಗ ವಿನಮ್ರ ಆಗಿದ್ದು ಹೆಚ್ಚಿನ ಪ್ರಗತಿ ಮಾಡೋದೋ ಏನ್ ಇಂಥ ಹುಡುಗಾಟ ಹೂಡೊದೋ ?

ಮನೋಹರ : ಮಾಲತಿ, ಇದು ಹುಡುಗಾಟ ಅಲ್ಲ ; ಹುಡುಕುವ ಆಟ ಅದ ; ತತ್ವದ ಪ್ರಶ್ನೀ ಅದ ; ಮರ್ಯಾದಿ ಪ್ರಶ್ನೀ ಅದ. ಇಂದ ನಿರ್ಣಯ ಆಗಿ ಹೋಗೋದದ. ಇಂದಿನ ದಿನ ನಿರ್ಣಾಯಕ ದಿನ. ಈಗ ನಾ ಒಂವ ಸ್ವಲ್ಪ ಹೊರಗೆ ಹೋಗಿ ಬರ್ತೇನಿ. ನಮ್ಮ ಕ್ಲಬ್ಬಿನ ಸದಸ್ಯರಿಗೆ ಭೆಟ್ಟಿ ಆಗಿಬರಬೇಕಾಗೇದ. ಅವರ ಮತದ ಮ್ಯಾಲೆ ವಿಜಯ ಯಾರದು ಅನ್ನೋದು ಅವಲಂಬಿಸೇದಲ್ಲ ; ನಾನು ಹೋಗಿ ಬರ್ತೇನಿ ; ಮುಂದಿನ ಬಾಗಿಲಾ ಹಾಕಿಕೋ. ಅದಕ್ಕ ನಿನಗ ಕರೆದಿದ್ದೆ. ಮಾತಿಗೆ ಮಾತು ಬೆಳೆಸಿದಿ. ಇಷ್ಟೊತ್ತ ಅಮೂಲ್ಯ ಹೊತ್ತು ಕಳೆದಿ. (ಮನೋಹರ ಹೊರಗೆ ಹೋಗಲು ಸಿದ್ಧತೆ ನಡೆಸುವನು. ಗೋಡೆಗೆ ತಗುಲಿಸಿದ ಕನ್ನಡಿಯಲ್ಲಿ ಮುಖನೋಡಿಕೊಂಡು ಬೈತಲ ಸರಿಮಾಡಿಕೊಳ್ಳುವನು)

"ಚಿನ್ನದೊಡವೆಗಳ ಕಾಂತಿ,
ಸೋನಾಪಾಲ್ ಕ್ರಾಂತಿ"



ಇಗೋ !

ನಿಮಗೊಂದು ವಿಶೇಷ ಕೊಡುಗೆ !

ಸಂಪೂರ್ಣ ವೈಜ್ಞಾನಿಕವಾಗಿ, ಸಂಪೂರ್ಣ ಸುರಕ್ಷತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ತಯಾರಿಸಿದ ಬಂಗಾರದೊಡವೆಗಳನ್ನು ಸ್ವಚ್ಛಗೊಳಿಸುವ ಹಾಗೂ ವಿಶೇಷ ಹೊಳಪು ನೀಡುವ ಹೊಸ ಪೌಡರ

ಸೋನಾಪಾಲ್

ನಿಮ್ಮ ಸೌಂದರ್ಯದ ಸಹಭಾಗಿಗಳಾದ ಬಂಗಾರದೊಡವೆಗಳ ಹೆಚ್ಚಿನ ಹೊಳಪಿಗಾಗಿ ಹಾಗೂ ವಿಶೇಷ ಮೆರುಗನ್ನು ನೀಡಲು "ಸೋನಾಪಾಲ್" ಉಪಯೋಗಿಸಿರಿ. ನಿಮ್ಮ ಹೊಳಪು ಕಳೆದುಕೊಂಡ ಬಂಗಾರದೊಡವೆಗಳಿಗೆ ನಿಮ್ಮ ಕೈಯಾರೆ ಅಲ್ಪ ಸಮಯದಲ್ಲಿ ಝಗ ಮಗ ಮೆರುಗನ್ನು ನೀಡಿರಿ.

ತಯಾರಕರು:

ಯು.ಆರ್.ಎನ್. ಪ್ರಾಡಕ್ಟ್ಸ (ಇಂಡಿಯಾ)

ಪೊ.ಬಾ. ನಂ. 44 ಹುಬ್ಬಳ್ಳಿ-580 020. ದೂರವಾಣಿ: 66770.

ವ್ಯಾಪಾರಿ ವಿಚಾರಣೆಗೆ ಸ್ವಾಗತ

URN ಉಪಯೋಗಿಸುವ ಕ್ರಮದ ವಿವರಣೆ ಸೋನಾಪಾಲ್‌ದೊಂದಿಗೆ ಲಭ್ಯ

AK/MRB

ಮಾಲತಿ : ಹೂಂ ; ಅಂತೂ ಯಾವ ಕಾಲು ಶ್ರೇಷ್ಠ ಅಂತ ಅನ್ನೋದು ನಿಮ್ಮ ಕ್ಲಬ್ಬಿನ ಸದಸ್ಯರ ಕೈಗಳ ಮ್ಯಾಲ ಅವಲಂಬಿಸೇದ ಅನ್ರೀ ಹಾಂಗಾದ್ರ, ಅವರು ಯಾರ ಬಾಜೂಕ್ಕ ಕೈ ಎತ್ತತಾರೋ ಅವರದು ಜಯ ! ಅದಕ್ಕ ನೀವು ಅವರನ್ನ ಕಾಣಲಿಕ್ಕ (ಕಾಣಲಿಕ್ಕ ಎಂಬ ಪದದ ಮೇಲೆ ವಿಶೇಷ ಒತ್ತು ಕೊಟ್ಟು) ಹೊರಟೀರೇನು? ಗೊತ್ತಾಯ್ತು ಅಂದೆ ನಿಮ್ಮ ವಿಚಾರ !

ಮನೋಹರ : ಕಾಣದಿದ್ರ ಹ್ಯಾಂಗ ಆದೀತು? ಬರೀ ತರ್ಕದ ಬಲದಿಂದ, ವಾದದ ಬಲದಿಂದ ಜನಾಭಿಪ್ರಾಯ ತನ್ನ ಕಡೆಗೆ ಹೊರಳಿಸಿಕೋತೇನನ್ನೋದು ಶಕ್ಯವಿಲ್ಲ ಈ ದಿವಸದಾಗ. ಮತ್ತ ನಾ ಕಾಣಲಿಕ್ಕ ಹೋಗದಿದ್ರೂ ನನ್ನ ತಮ್ಮ ಅವರನ್ನ ಕಾಣೋದು ಬಿಡ್ತಾನೇನು ? ಇದೂ ಒಂದು ಸ್ಟ್ರೇಟೇಜಿ ಅಂತ ಮಾನ್ಯತೆ ಪಡೆದದ. ಹ್ಞೂ: ನಾ ಹೋಗಿ ಬರ್ತೇನು, ವಿಷ್ ಮೀ ಗುಡ್‌ಲಕ್. (ಬಾಗಿಲು ಬಳಿ ಹೋಗಿ ಪಾದತ್ರಾಣ ಹಾಕಿಕೊಳ್ಳಲು ಬಾಗಿ ನೋಡುವನು. ಸ್ವಲ್ಪ ನಿರೀಕ್ಷಣೆಯ ನಂತರ) ಏ. ಏ ಮಾಲತಿ ಎಲ್ಲಿ ಅವ ನನ್ನ ಚಪ್ಪಲಿ ?

ಮಾಲತಿ : ಏನ್ರಿ, ಹಾಂಗ ಅಂದ್ರ? ನಿಮ್ಮ ಚಪ್ಪಲಿನ ನಾ ತೆಗೆದು ಇಟ್ಟಿರ್ತೇನೇನ್ರಿ ಚಹಾ ಸಕ್ರಿ ಡಬ್ಯಾಗ?

ಮನೋಹರ: ಅಲ್ಲ ಮಾಲತೀ, ನಿನಗ ಹ್ಯಾಂಗ ಹೇಳಬೇಕ ಮಾರಾಯ್ತಿ? ಇದೇನಿದು; ನನ್ನದು ಒಂದೇ ಒಂದು ಚಪ್ಪಲಿ ಅದ ಅಲ್ಲ ಇಲ್ಲಿ; ಇದೇನ ತಮಾಷೆ ಇದು: ಬರೀ ಬಲಗಾಲಿನ ಚಪ್ಪಲಿ ಮಾತ್ರ ಕಾಣಸ್ತದ. ಎಡಗಾಲಿನ ಪಾದತ್ರಾಣ ಎಲ್ಲಿಯೂ ಕಾಣವಲ್ದು.

ಮಾಲತಿ : (ಮುಂದೆ ಬಂದು ನೋಡುತ್ತ) ಏನು ? ಬರೀ ಬಲಗಾಲಿನ ಚಪ್ಪಲಿ ಮಾತ್ರ ಅದನ? ಇದೊಳ್ಳೆ ಮಜಾ ಆತು ! ಅಲ್ರೀ ನೀವು ಬಲಗಾಲಿನ ಮಹತ್ವದ ಕುರಿತು ನಿನ್ನೆ ಬಡಬಡಿ ಮನೆಗೆ ಬಂದ್ರ್ಯಲ್ಲಾ; ಬಹುತೇಕ ನಿನ್ನೆ ನಿಮ್ಮ ತಲ್ಯಾಗ ಎಡಗಾಲಿನ ವಿಚಾರ ಮರ್‍ತೇ ಹೋಗಿರಬೇಕು. ನಿನ್ನೆ ನೀವು ಬರುವಾಗ ಬರೇ ಬಲಗಾಲಿನ ಚಪ್ಪಲಿ ಮಾತ್ರ ಹಾಕ್ಕೊಂಡು ಬಂದಿರಬೇಕು ನೋಡ್ರಿ (ನಗುತ್ತ) ಹ ಹ ಒಳ್ಳೇ ಮಜಾ ಹಂ ಇದು!

ಮನೋಹರ : ನನ್ನ ತಲೀಗಿಲೀ ತಿರಗೇದ ಅಂತ ಮಾಡಿದಿ ಏನು; ಒಂಟಿಕಾಲಾಗ ಚಪ್ಪಲಿ ಮೆಟ್ಟಗೊಂಡು ಬರಲಿಕ್ಕ? ಎಲ್ಲಿ ಅದ ಹೇಳು ನನ್ನ ಮತ್ತೊಂದು ಚಪ್ಪಲಿ?

ಮಾಲತಿ : ಇದೊಳ್ಳೆ ಪಂಚೇತಿ ಬಂತಲ್ಲ, ಅಲ್ರೀ ನಾನೇನು ನಿಮ್ಮ ಚಪ್ಪಲಿ ಕಾಯುಕೋತ ಕೂಡಬೇಕೇನ್ರಿ? ನೋಡ್ರಿ ಅಲ್ಲೇ ಎಲ್ಲ್ಯರೇ ಆದ ಏನಂತ ?

ಮನೋಹರ : ನಾ ನೋಡಿದೆ, ನನಗೆ ಸಿಗವಲ್ದು. ಅದಕ್ಕ ನಿನಗ ಕೇಳಿದೆ.

ಮಾಲತಿ : ನಾ ಎಲ್ಲಿ ಇನ್ನ ಆ ಸುಡುಗಾಡು ಚಪ್ಪಲಿ ನೋಡಿಕೋತ ಕೂಡಲಿ? ಇದೇ ಈಗ ಮೈ ತೊಳಕೊಂಡು ಬಂದೇನಿ. ಇನ್ನೂ ತುಳಸೀ ಪೂಜೆ ಆಗಿಲ್ಲ. ಇಂಥಾದ್ರಾಗ ಚಪ್ಪಲಿ ಹುಡುಕಾಡಲೇನು? ಚಪ್ಪಲಿ ಇಲ್ದಿದ್ರ ಹೋಯ್ತು, ನಿಮ್ಮ ಬೂಟ್ ಹಾಕಿಕೊಂಡು ಹೋಗ್ರಿ, ಸಂಜೀನಾಗ ಹುಡುಕಾಡಿ ಇಡ್ತೇನಂತ ಚಪ್ಪಲೀನ. ಇದೊಳ್ಳೆ ಕರ್ಮ ನಂದು;

ಮನೋಹರ : ನಿನ್ನ ಕರ್ಮ ಅಲ್ಲ; ನನ್ನ ಕರ್ಮ; ಆದ್ರ ಇದರ ಕರ್ತೃ ಯಾರು? (ಬೂಟಿಗಾಗಿ ತಡಕಾಡಿ, ಬಲಗಾಲಿನ ಒಂದೇ ಬೂಟು ಸಿಕ್ಕಿದ್ದರಿಂದ, ಅದನ್ನೇ ಎತ್ತಿ ಹಿಡಿದು) ಥೂ ಇದ್ರ ಮಂಜಾಳ ಹೋಗಾ, ಈ ಬೂಟು ಸುದ್ದಾ ಒಂದ ಅದ ಅಲ್ಲ; ಬಲಗಾಲಿನದು; ಮತ್ತೊಂದು ಬೂಟು ಎಲ್ಲಿ ಹೋಯ್ತು ? ಇದೇನು ದೆವ್ವಿನ ಆಟ ನಡದದ ಅಂತೀನಿ?

ಮಾಲತಿ: ಹಂಗ್ಯಾಕ ಗಡಿಬಿಡಿಸ್ತೀರಿ ? ಅದೇನು ಅಲ್ಲಿ ಬಿದ್ದದಲ್ಲ ಮೂಲ್ಯಾಗ.

ಮನೋಹರ : (ಮಾಲತಿ ನಿರ್ದೇಶಿಸಿದ ಕಡೆಗೆ ಹೊರಳಿ ನೋಡಿ) ಎಲಾ ಇವು ಯಾರ ಬೂಟು ಮತ್ತು ಚಪ್ಪಲಿ ? ಅಂ ; ದೊಡ್ಡ ಗುಂಪ



ಒಟ್ಟ್ಯಾರಲ್ಲಾ ಬೂಟು ಮತ್ತು ಚಪ್ಪಲಿವು. ಆದರಲ್ಲಿಯ ಬೂಟು ಎತ್ತಿ ನೋಡುತ್ತಾನೆ. ಅದೂ ಬಲಗಾಲಿನದೇ) ಇವೂ ಎಲ್ಲಾ ಬಲಗಾಲಿನವೇ ಅವ ಅಲ್ಲಾ. ಈ ಸಣ್ಣ ಸೈಜಿನ ಬೂಟು ಚಪ್ಪಲಿಗಳು ಯಾರವು? ಹಾಂ: ಹೌದು. ಇದು ರಮೇಶನ ಬೂಟು; ನಿನ್ನೆ ಕಾಲು ಕಟ್ಟಿಸಿಕೊಳ್ಳುವ ಮೊದಲು ಕಳಚಿದ್ದನಲ್ಲ ಇಂಥ ಬೂಟನ್ನು. ಈ ಚಿಕ್ಕ ಸೈಜು ಆ ಕುಳ್ಳನದೇ ಹಾಂ; ಆತನದೇ ಏನೋ ಮಸಲತ್ತಿದೆ ಇದರಲ್ಲಿ. ನನ್ನ ಎಡಗಾಲಿನ ಪಾದರಕ್ಷೆಗಳೆಲ್ಲ ಮಾಯ ಆಗ್ಯಾವ. ಆತನ ಬಲಗಾಲಿನ ಪಾದತ್ರಾಣ ಇಲ್ಲಿ ಬಂದಾವ. ರಮೇಶನೇ ಏನೋ ಹೂಟ ಹೂಡ್ಯಾನ. ಎಲಾ ಕುಳ್ಳ, ಇದು ನಿನ್ನದೇ ತಂತ್ರ. ಕಳ್ಳನ್ನ ನಂಬಿದರೂ ಕುಳ್ಳನ್ನ ನಂಬಬಾರದು ಅಂತಾರಲ್ಲ ಅದೇನೂ ಸುಳ್ಳಲ್ಲ.

(ಮೋಹನನ ಪ್ರವೇಶ. ಮುಖದ ಮೇಲೆ ಬೆಪ್ಪುತನದ ಕಳೆ ಇದೆ. ಖಾಕಿ ಹಾಫ್‌ಪ್ಯಾಂಟನಲ್ಲಿ ಖಾಕಿ ಹಾಫ್‌ಶರ್ಟ ಒಳ ಸೇರಿಸಿ ತೊಟ್ಟಿದ್ದಾನೆ. ಸುಮಾರು ೨೮-೩೦ ವರ್ಷದ ಯುವಕ)

ಮೋಹನ; ಅದೂ ಸುಳ್ಳಲ್ಲ ಮತ್ತ ಅದರ ಜೊತೆಗೆ ಇನ್ನೊಂದು ಗಾದೀ ಮಾತು ಅದ ಅಲ್ಲ, ಉದ್ದ ಇದ್ದವರಿಗೆ ಬುದ್ಧಿ ಇಲ್ಲ, ಚೋಟುದ್ದ ಕಸಕೊಂಡ್ರು ಸುದ್ದಿ ಇಲ್ಲಾ ಅಂತ, ಅದೂ ಏನ್ ಸುಳ್ಳಲ್ಲ.

ಮನೋಹರ: (ಮೋಹನನ ಕಡೆಗೆ ತಿರಸ್ಕಾರದಿಂದ) ಎಲ್ಲಿ ಹೋಗಿತ್ತು ಮುಂಜಾನೆಯಿಂದ ಸವಾರಿ? ನನ್ನ ಚಪ್ಪಲಿ ಏನರೇ ನೋಡಿದೇನು?

ಮೋಹನ: ಚಪ್ಪಲೀನ? ನಿನ್ನ ಚಪ್ಪಲೀನ? ಹಾಂ, ಹಿಂದಕ ರಾಮಣ್ಣನ ಚಪ್ಪಲೀನ ಐ ಮೀನ್ ಪಾದುಕೇನ ಆತನ ತಮ್ಮ ಭರತ ನೋಡಿಕೊಂಡಿದ್ನಂತ; ಹಾಂಗೇನು ?

ಮನೋಹರ: ಷಟ್ ಅಪ್ ! ಗೊತ್ತಿದ್ರ ಹೇಳು, ಬಿಚ್ಚಬ್ಯಾಡಾ ರಾಮಾಯಣಾನ.

ಮಾಲತಿ: ಹಂಗ್ಯಾಕ ವಸಕ್ಕಂತ ಒದರ್‍ತೀರಿ ಅವರ ಮ್ಯಾಲ ? (ಮೋಹನನ್ನುದ್ದೇಶಿಸಿ) ಭಾವುಜೀ. ನೋಡ್ರಿ ಅವರ ಎಡಗಾಲಿನ ಚಪ್ಪಲಿ, ಬೂಟು ಎಲ್ಲಾ ಕಾಣೆ ಆಗ್ಯಾವ. ಬದಲಿಗೆ ರಮೇಶ ಭಾವುಜಿಯ ಬಲಗಾಲಿನ ಪಾದತ್ರಾಣಗಳೆಲ್ಲ ಬಂದು ಬಿದ್ದಾವ ಮನ್ಯಾಗ, ಸಂಜೆನಾಗ ಸರ್ವಸದಸ್ಯರ ಸಭಾ ಅದ ಅಂತ ಕ್ಲಬ್ಬಿನಾಗ—

ಮೋಹನ : ಸಭಾ ಕ್ಲಬ್ಬಿನ್ಯಾಗ ಮತ್ತ ಚಪ್ಪಲಿಗಳ ಶೇಖರಣೆ ಇಲ್ಲೇ. ಹ ಹ ಹ (ನಗುವನು)

ಮಾಲತಿ : ಹಾಂಗಲ್ಲರಿ ಭಾವುಜೀ, ಮಜಾದ ವಿಷಯ ಅಂದ್ರ ಇಲ್ಲಿ ಇರೋವು ಬರೀ ಬಲಗಾಲಿನ ಪಾದತ್ರಾಣಗಳು. ಎಡಗಾಲಿನವು ಎಲ್ಲೋ ಮಟಾಮಾಯ ಆಗ್ಯಾವ.

ಮೋಹನ : ಅರೇರೇ, ಹೌದಲ್ಲ. ಹ ಹ ಹ (ವಿಕಟವಾಗಿ ನಗುವನು) ಭೇಷ್, ಭೇಷ ಬರೀ ಬಲಗಾಲಿನ ಪಾದತ್ರಾಣಗಳು ! ಅಣ್ಣಾ, ಮನೋಹರಣ್ಣ ಎಂಥ ಮೋಜಿದು ಅಂತೀನಿ, ಹ ಹಾ ಹಾ ನಿನ್ನೆ ನೀನು ಮೂರುಕಾಲಿನ ಓಟದ ಪಂದ್ಯದಾಗ ಜಯ ಗಳಿಸಿದ ಮ್ಯಾಲ 'ಬಲಗಾಲೇ ಶ್ರೇಷ್ಠ' ಅಂತ ಕೂಗಾಡಿದೆ ನೋಡು, ಅದಕ್ಕ ಎಡಗಾಲಿನ ಪಾದರಕ್ಷೆ ಎಲ್ಲಾ ನಿನ್ನ ತ್ಯಾಗ ಮಾಡಿರಬೇಕು ಸಿಟ್ಟಿನಿಂದ. ಹ ಹ ಹ (ಹೊಟ್ಟೆ ಹಿಡಿದ ನಗುತ್ತ) ನಿರ್ಜೀವ ವಸ್ತುಗಳು ಕೂಡ ಸಿಟ್ಟಿಗೆ ಬಂದರೆ ಪಕ್ಷಾಂತರ ಮಾಡಿ ಓಡಿ ಹೋಗ್ತಾವ. ಬ್ಯಾರೆ ಆಗ್ತಾವ. ತನ್ನ ಯಜಮಾನನನ್ನು ತ್ಯಜಿಸ್ತಾವ. ಹ ಹ ನೀ ಯಾವತ್ತ ನಿನ್ನ ಮಾತ್ಸ ಖರೇ, ನಿನ್ನ ಅಭಿಪ್ರಾಯನ ಸತ್ಯ ಅಂತ ಹಟ ಹಿಡಿದ್ಯೋ ಆಗಲೇ ನಮ್ಮ ತಮ್ಮ ನಿಮ್ಮಿಂದ ದೂರ ಆಗಿದ್ದ. ಹಟ ಮಾರಿತನದಿಂದ ನಿರ್ಜೀವ ವಸ್ತುಗಳಿಗೂ ಒಂದಿಲ್ಲೊಂದು ದಿನ ಚೈತನ್ಯದ ಕಿಡಿ ತಾಗಿ ಅವು ಸಿಡಿದು ನಿಲ್ಲತಾವ. ಮೆಟ್ಟ ತುಳೀತೇನಿ ಅಂದುಕೊಂಡಿದ್ರ, ಅದು ಎಂದೂ ಶಕ್ಯವಿಲ್ಲ ಅಂತ ತೋರಿಸಲಿಕ್ಕೆ ನಿನ್ನ ಎಡಗಾಲಿನ ಮೆಟ್ಟುಗಳು ಮಟಾಮಾಯ ಆಗಿರಬೇಕು, ಹ ಹ ಹ.

ಮನೋಹರ : ಛೂ ಷಟ್ ಅಪ್, ಹಂಗ್ಯಾಕ ನಗ್ತೀ ? ಮತ್ತ ನಿನ್ನ ಹುಚ್ಚು ಮರುಕಳಿಸ್ತೋ ಏನೋ ? ಒಬ್ಬ ಹುಚ್ಚ, ಮತ್ತೊಬ್ಬ ಉದ್ಧಟ.

ಮೋಹನ : ಮಗದೊಬ್ಬ ಹಟಮಾರಿ, ಛಲೋ ಅದ ಅಲ್ಲಾ ಕಾಂಬಿನೇಷನ್ನು, ಹ ಹ ಹ.

ಮನೋಹರ : ಷಟ್ ಅಪ್ ಐ ಸೇ, ಡೋಂಟ್ ಲಾಫ್ ಲೈಕ್ ಎ ಡೆವಿಲ್, ಹುಚ್ಚಾ ಬಾಯಿ ಮುಚ್ಚ...

ಮೋಹನ : ಹುಚ್ಚು ? ಹುಚ್ಚು ಹೌದು ಹುಚ್ಚು ! ಬರಿ ಬಲಗಾಲಿನ ಪಾದತ್ರಾಣ ಹ ಹ ಹ. ಒಳ್ಳೆ ತಮಾಷೆ. ನಿನ್ನೆ ನೀನೇ ಅಂದಿದ್ದಿಯಲ್ಲಾ (ನಾಟಕೀಯವಾಗಿ ಮನೋಹರನ ಧನಿಯನ್ನು ಅನುಕರಿಸುತ್ತ) 'ಬರೀ ಬಲ ಪಾದದಲ್ಲಿ ತ್ರಾಣ ಇರೋದು' ಅಂತ. ಆದ್ದರಿಂದ ಬಲ ಪಾದ ತ್ರಾಣ ಇಲ್ಲಿ ಉಳಿದಾವೋ ಏನೋ ಹ ಹ ಹ.

ಮಾಲತಿ : (ಮನೋಹರನಿಗೆ) ನೋಡ್ರಿ ಇನ್ನು ಮೋಹನ ಭಾವುಜಿ ಕೂಡ ಸುಮ್ಮನ ಚರ್ಚೆ ಮಾಡಿಕೋತ ಕೂಡ್ರಬ್ಯಾಡ್ರಿ. ನಿಮಗ ಹೊರಗ ಹೋಗಬೇಕಾಗೇದ ಹೌದಲ್ಲೋ ಯಾರ್‍ಯಾರನ್ನೋ ಭೆಟ್ಟಿ ಆಗಲಿಕ್ಕೆ? ಹೀಂಗ ಮಾಡ್ರಿ, ಬರಿಗಾಲಿನಿಂದ ಹೋಗ್ರಿ ಮತ್ತ ಸಮೀಪದಾಗ ಎಲ್ಲ್ಯರ ಅಂಗಡಿ ಕಂಡ್ರ ಒಂದ ಜೋಡಿ ಚಪ್ಪಲಿ ತೆಗೊಳ್ರೀ. ಮತ್ತೇನು ಮಾಡೋದು ಈಗ.

ಮನೋಹರ : ಆದರ ನನ್ನ ಎಡಗಾಲಿನ ಚಪ್ಪಲಿ ಮತ್ತು ಬೂಟು ಎಲ್ಲಿ ಹೋದ್ವು ? ಅದಾರೇ ಗೊತ್ತಾಗಬೇಕಲ್ಲ ?

ಮಾಲತಿ : ಗೋತ್ತಾದೀತು ಇಂದಿಲ್ಲ ನಾಳೆ. ಅದು ಗೊತ್ತಾಗುವ ತನಕ, ಅಥವಾ ಸಿಗುವ ತನಕ ನೀವು ಮನ್ಯಾಗ ಕೂಡ್ಲಿಕ್ಕ ಆದೀತೇನು ? ಅದೂ ಯಾರ್‍ಯಾರಿಗೋ ಭೆಟ್ಟಿ ಆಗಾವರಿದ್ದೀರಲ್ಲ ?

ಮನೋಹರ : ಭೆಟ್ಟಿ ಆಗಲಿಕ್ಕ ಬೇಕು. ಭೆಟ್ಟಿ ಆಗದಿದ್ರ ಹ್ಯಾಂಗ ? ಇನ್ನು ನಾನು ಬರಿಗಾಲಿನಿಂದ ಹೋಗಲ್ಯಾ ?

ಮೋಹನ : ಬರಿಗಾಲಿನಿಂದ ಯಾಕ ಹೋಗ್ತಿ ? ಬಲಗಾಲಿನಾಗ ಮೆಟ್ಟಿಕೊಂಡು ಹೋಗು. ಹ ಹ ಹ.

ಮನೋಹರ : ಷಟ್ ಅಪ್ ರ್‍ಯಾಸ್ಕಲ್, ಡೋಂಟ್ ಟಾಕ್ ನಾನಸೆನ್ಸ.

ಮಾಲತಿ (ಮೆಲ್ಲಗಿನ ಧನಿಯಲ್ಲಿ ಮನೋಹರನಿಗೆ) ರೀ ಮತ್ತ ಮತ್ತ ಯಾಕ ಹಂಗ ಹಾಯ್ತೀರಿ ಮೋಹನ ಭಾವುಜಿ ಮ್ಯಾಲ, ಮೊನ್ನೆ ಮೆಂಟಲ್ ಹಾಸ್ಪಿಟಲ್‌ದಿಂದ ಹೊರಗೆ ಬಂದಾರ, ಹೂಂ; ಹೋಗು

ಮವರಿದ್ದರ ಲಗೂನ ಹೋಗ್ರಿ. ಏನ್ ಒಂದ ಸ್ವಲ್ಪ ಬರಿಗಾಲಿ ನಿಂದ ನಡೆದ್ರ ಏನೂ ಲುಕ್ಸಾನ ಆಗೂದಿಲ್ಲ.

(ಇದೇ ಸುಮಾರಿಗೆ, ರಮೇಶ ಮತ್ತು ಆತನ ಹೆಂಡತಿ ರಾಧೆ ನಿಧಾನವಾಗಿ ಪ್ರವೇಶಿಸುತ್ತಾರೆ. ಅವರೆಡೆಗೆ ಮೋಹನನ ಗಮನವಿರುವುದಿಲ್ಲ.)

ಮೋಹನ : (ಉಚ್ಚ ಸ್ವರದಲ್ಲಿ, ರಾಗವಾಗಿ) ಕರೆಯದಲೆ ಬರುವವನ, ಬರೆಯದೇ ಓದುವವನ, ಬರಿಗಾಲಿನಿಂದ ನಡೆವವನ ಕೆರೆದು ಕೆರವಿನಿಂದ ಹೊಡೆಯೆಂದ ಸರ್ವಜ್ಞ. ಆ ಆ

ರಮೇಶ : ಹೂಂ, ಕೆರವಿನಿಂದ ಹೊಡೆಯೆಂದ ಸರ್ವಜ್ಞ! ಹೌದು ಕೆರವಿನಿಂದ ಹೊಡೆಯಿರಿ ನಮ್ಮನ್ನು, ಕರೆಯದೇ ಬಂದೇವಿ ನಾವು; ಮತ್ತ ಬರಿಗಾಲಿನಿಂದಲೂ ಬಂದೇವಿ.

ಮಾಲತಿ : ಬರ್ರಿ ಭಾವುಜಿ; ಬಾ ರಾಧಾ (ರಾಧಾಳ ಕೈ ಹಿಡಿದು ಸೋಫಾದಲ್ಲಿ ಕೂಡ್ರಿಸುವಳು, ಮತ್ತು ತಾನೂ ಕೂಡ್ರುವಳು) ನಿಮಗ ಅನ್ನಲಿಲ್ಲ ಅವರು, ನೀವ್ಯಾಕ ಅನ್ವಯಿಸಿಕೋತೀರಿ.

ರಮೇಶ : ನಮಗಲ್ದ ಮತ್ಯಾರಿಗೆ ಅಂತಾನ ಆತ ? ಯಾಕ ಮುಚ್ಚು ಮರಿ ಮಾಡ್ತೀರಿ ? ನಾಂವ ಬಂದೇವಿ ನಿಮ್ಮ ಮನೀಗೆ ಕರೆಸಿಕೊಳ್ಳದ—

ಮಾಲತಿ : ತಮ್ಮ ಮನೀಗೆ ಬರ್ಲಿಕ್ಕೆ ಔತಣ ಬೇಕಾಗ್ತದೇನು ? ಮೋಹನ ಭಾವುಜಿ ನಿಮ್ಮನ್ನುದ್ದೇಶಿಸಿ ಅಂದಿಲ್ಲ. ತಪ್ಪು ತಿಳ್ಕೊಂಡೀರಿ ಭಾವುಜಿ—

ರಮೇಶ ! ಹೌದು ವೈನಿ ಹೌದು, ನಾವು ಯಾವಾಗಲೂ ಹಾಂಗ, ನಾವು ತಿಳ್ಕೊಳ್ಳೋದೇ ತಪ್ಪು, ನಮ್ಮ ಮಾತು ತಪ್ಪು— ನಮ್ಮ ಅಭಿಪ್ರಾಯಗಳು ತಪ್ಪು (ಮನೋಹರನ ಕಡೆಗೆ ತೀಕ್ಷ್ಣ ದೃಷ್ಟಿ ಬೀರುತ್ತ) ನಿಮ್ದು ಮಾತ್ರ ಎಲ್ಲಾ ಸರಿ, ಎಲ್ಲಾ ರೈಟ್.

ಮೋಹನ : ರೈಟ್ ಅಂದ್ರೆ ಬಲ, ಬಲ ಅಂದ್ರೆ ಯಾವಾಗಲೂ ರೈಟು. ಬಲ ಯಾವಾಗಲೂ ಬರೋಬರಿ. ಎಡ ಯಾವಾಗಲೂ ತಪ್ಪು. ಬಲ ಎಂದಿಗೂ ಒಪ್ಪು. ಇದನ್ನ ನೀ ಒಪ್ಪು. ರೈಟ್ ಎಂದರೆ ಬಲ, ಬಲ ಈಜ್ ರೈಟ್ ಎಂದರೆ ಬಲ, ಬಲ ಈಜ್ ರೈಟ್ ಹ ಹ ಹ.

ರಮೇಶ : ಮೋಹನ, ಚತುರ ಮಾತು ಆಡುವಷ್ಟು ಸುಧಾರಣಾ ಅಂಥಾಂಗ ಕಾಣಸ್ತದ ನಿನ್ನೊಳಗ. ಅದಿರಲಿ, ಕರೆಸಿಕೊಂಡ್ರೂ ಈ ಮನೆಗೆ ಬರಲಾರದ ನಾವು ನಿನ್ನ ಈ ಚಾತುರ್ಯಕ್ಕೆ ನಿನ್ನ ಚಳಕಕ್ಕೆ ಬಲಿ ಆಗಿ ಬರಬೇಕಾಯ್ತು.

ಮಾಲತಿ : ಅವರ ಚಳಕಕ್ಕೆ ಬಲೀ ಆಗಿ ಬಂದ್ರ್ಯಾ, ಏನು ಹಾಂಗ ಅಂದರ ? ಪಾಪ ಅವರೇನು ಮಾಡಿದರು ಅಂಥಾ ಚಾತುರ್ಯ ಅಥವಾ ಅಚಾತುರ್ಯ ?

ರಮೇಶ: ವೈನೀ, ಚಾತುರ್ಯ ಆತನದೋ ಅಥವಾ (ಮನೋಹರನ ಕಡೆಗೆ ತೀವ್ರ ಕಟಾಕ್ಷ ಬೀರಿ) ಮತ್ಯಾರದೋ ಗೊತ್ತಿಲ್ಲ. ಈ ದಿನ ಬೆಳಗ್ಗೆ ಬೆಳಕು ಹರಿಯೋದರೊಳಗೆ ನಿಮ್ಮ ಈ ಪ್ರೀತಿಯ ಮೈದುನ ಮೋಹನ ನಮ್ಮಲ್ಲಿಗೆ ಬಂದಿದ್ದ.ನಾನು ಇನ್ನೂ ಎದ್ದಿರಲಿಲ್ಲ.

ಮೋಹನ: ಈಗಲೆ ಎದ್ದಿರುವಿ ಏನು?

ರಮೇಶ: ಯಾಕ ಕಣ್ಣಿ ಕಾಣಾಂಗಿಲ್ಲೇನು ?

ಮೋಹನ: ಹೌದೌದು ಎದ್ದೀದಿ, ಆದರ ಎಚ್ಚರ ಆಗಿದಿ ಇಲ್ಲೋ ಅಂಬೋ ಖಾತ್ರಿ ಇಲ್ಲಾ–

ಮಾಲತಿ: ಆದ್ಸರಿ ರಮೇಶ ಭಾವುಜೀ, ಅವರು ನಿಮ್ಮ ಮನೆಗೆ ಬಂದ್ರ ತಪ್ಪಾತೇನು ? ತಮ್ಮನ ಮನೀಗೆ ಅಣ್ಣ ಬರಬಾರ್ದ ? ಅಲ್ಲೇನ ರಾಧಾ ?

ರಾಧಾ: ಅಂ ಹಾಂ, ಅದ್ರೊಳಗ ತಪ್ಪೇನಿಲ್ಲ ಬಿಡ್ರಿ ಅಕ್ಕಾ. ಮೋಹನ ಭಾವುಜೀ ಬಂದಿದ್ರು. ಇನ್ನೂ ಇವರು ಎದ್ದಿರಲಿಲ್ಲ. ಏನು ಭಾವುಜೀ, ಇತ್ತ ಕಡೆಗೆ ಅಪರೂಪದ ಸವಾರಿ ಅಂತ ಕೇಳಿದೆ.

ಮಾಲತಿ: ಕೇಳಿದ್ದರಲ್ಲಿ ತಪ್ಪೇನದ ?

ರಾಧಾ: ಅದಕ್ಕ–ಅದಕ್ಕ ಅವರು ಅಂದರು. ಅಪರೂಪ ಅಂದ್ರ ಕೆಟ್ಟ ರೂಪ ಅಂತ ಅಂತೀ ಏನು ? ಅಂತ. ನಾನು ಹೌಹಾರಿದೆ.

ಮಾಲತಿ: ಅವರ ಚಾಷ್ಟೀ ಸ್ವಭಾವ ನಿನಗೆ ಗೊತ್ತಿಲ್ಲೇನು, ಸುಮ್ಮ ನಕ್ಕು ಬಿಟ್ಟರಾತು.

ರಾಧಾ: ಕೂಡ್ರಿ. ಚಹಾ ಮಾಡತೇನು. ಇವರ್ನ ಎಬ್ಬಸತೇನು, ಅಂತ ಅಂದು ನಾನು ಅಡಿಗಿ ಮನಿಗ ಹೋದೆ. ಚಹಾ ಮಾಡಿ ತರೋದ್ರಾಗ ಅವರು ಕಾಣೆಯಾಗಿದ್ದರು.

ರಮೇಶ: ಅಂವಾ ಅಷ್ಟ ಕಾಣ ಆಗಿದ್ರ ನಮಗೇನೂ ದುಃಖ ಇರಲಿಲ್ಲ, ಆದ್ರ ಅದರ ಜೊತೆಗೆ ನಮ್ಮ ಪಾದರಕ್ಷೆಗಳೆಲ್ಲ ಮಾಯವಾದವು.

ಮೋಹನ: ಎಲ್ಲಾ ಪಾದರಕ್ಷೆಗಳು? ಶುದ್ಧ ಸುಳ್ಳು.

ರಮೇಶ: ನಮ್ಮ ಎಲ್ಲಾ ಪಾದರಕ್ಷೆಗಳ ಪೈಕಿ ಬಲಗಾಲಿನವೆಲ್ಲ ಮಾಯ ಆಗ್ಯಾವ. ಎಡಗಾಲಿನ ಪಾದತ್ರಾಣಗಳು ಮಾತ್ರ ನಮ್ಮ ಮನ್ಯಾಗ ಉಳದಾವ.

ಮೋಹನ: ನಿಮ್ಮುವಷ್ಟ ಅಲ್ಲ; ಆದ್ರ ಮತ್ತಿಷ್ಟು ಎಡಗಾಲಿನ ಚಪ್ಪಲಿ, ಬೂಟು ಬಂದಿರಬೇಕಲ್ಲ.

ರಮೇಶ: ಬಂದಾವ, ಬಂದಾವ, ಅವನ್ನೇನು ಸರ ಮಾಡಿ ಪೋಣಿಸಿಕೊಳ್ಳೋದದೇನು ?

ಮೋಹನ: ಹಾಂಗ ಮಾಡದಿದ್ರೂ ಏನ ನಿರರ್ಥಕ ಆಧಾಂಗ ಅಲ್ಲ. ವಾದವಿವಾದದಾಗ ಜಯಭೇರಿ ಗಳಿಸಿದಾಂವಗ ಜಯಮಾಲೆ ಹಾಕಿಧಾಂಗ ಆಗಬಹುದು. ಹ. ಹ.

ರಮೇಶ: ಇಂಥ ಹುಡುಗಾಟಕೆ ನನಗ ಸರಿ ಬೀಳಾಂಗಿಲ್ಲ. ಹಂ ಮೋನಣ್ಣ.

ಮೋಹನ: ವಾ ಭೇಷ ರಮೇಶ, ನಿನಗೂ ಶ್ರೀಮದ್ ಗಾಂಭೀರ್ಯದ ಆವಿರ್ಭಾವ ಚೆನ್ನಾಗಿ ತೋರ್ಪಡಿಸಲಿಕ್ಕೆ ಬರ್ತದಲ್ಲ. ಅಣ್ಣನಿಂದ ಪಡೆದ ಬಳುವಳಿ ಏನು ಇದು ?

ರಮೇಶ: ನನ್ನ ಉಳಿದ ಪಾದತ್ರಾಣಗಳೆಲ್ಲಿ ಅವ ?

ಮೋಹನ: (ನಾಟಕೀಯವಾಗಿ ರಮೇಶನನ್ನು ಅಣಕಿಸುವಂತೆ) ಎಡಗಾಲಿನ ಪಾತ್ರವೇ ವಿಜಯ ಸಂಪಾದನೆಯಲ್ಲಿ ನಿರ್ಣಾಯಕವಾಗಿದೆ. ಎಡಗಾಲಿನ ಚಾಕಚಕ್ಯತೆ, ಲವ-ಲವಿಕೆ ಬಲಗಾಲಿಗೆ ಎಂತು ಬಂದೀತು ? ಬಲಗಾಲು ಕೇವಲ ಹೆಸರಿಗಷ್ಟೇ ಕಾಲು, ಎಡಗಾಲೇ ನಿಜವಾದ ಊರುಗೋಲು; ಅದು ಅಂದರೆ ಬಲಗಾಲು ಒಂದು ಥರ ಪ್ಯಾರಾಸೈಟ್ ರೈಟ್ ಈಜ್ ಪ್ಯಾರಾಸೈಟ್ ಎಂದು ಪ್ರಾಸಬದ್ಧವಾಗಿ ಘೋಷಿಸಿದ್ದೆ ನೀನು.

ರಮೇಶ: ಎಸ್ ಆಯ್ ಹೇಟ್‌ರೈಟ್ ಎಂಡ್ ಆಲ್ಸೊದ ರೈಟ್ಟಿಸ್;

ಮೋಹನ: ಅಂದಮ್ಯಾಲ ಯಾಕಬೇಕು ನಿನಗ ಬಲಗಾಲಿನ ಪಾದರಕ್ಷೆ? ಮತ್ತ ಈ ನಮ್ಮ ಅಣ್ಣ ಗಂಟಲಾ ಹರಕೊಂಡಿದ್ದಾ (ನಾಟಕೀಯವಾಗಿ ಮನೋಹರನನ್ನು ಅನುಕರಿಸುತ್ತಿರುವಂತೆ) ಬಲವಾನ, ಬಲಶಾಲಿ ಮುಂತಾದ ಪದಗಳ ಆದ್ಯ ಪದವೇ ಬಲ. ಬಲ ಅಂದರೆ ರೈಟೂ, ರೈಟು ಯಾವಾಗಲೂ ರೈಟೇ ಅದು. ರಾಂಗ ಆಗೋದೇ ಇಲ್ಲಾ. ಆದ್ದರಿಂದ ಬಲಕ್ಕೇ ಪ್ರಾಧಾನ್ಯ, ಬಲಕ್ಕೆ ಪ್ರಾಮುಖ್ಯ. ಎಡ ಯಾವಾಗಲೂ ಗೌಣ, ತಿರಸ್ಕರಣೀಯ ಮತ್ತು ತ್ಯಾಜ್ಯ ಎಂದು ಹೇಳಿದ್ದನಲ್ಲ. ಅಂದಮ್ಯಾಲ ಆತನಿಗೆ ಯಾಕ ಬೇಕು ಎಡಗಾಲಿನ ಪಾದತ್ರಾಣಗಳು ?

ಮನೋಹರ: ಅಂದ್ರ ನೀ ಮಾಡಿದಿ ಏನು ಈ ಕಾರಸ್ಥಾನ ?

ಮೋಹನ: ಕಾರಸ್ಥಾನ ಏನು ಬಂತು? ನಿನ್ನೆ ನಿಮ್ಮ ಇಬ್ಬರ ಅಭಿಪ್ರಾಯ ಒಲವು, ನಿಲವು ಸ್ಪಷ್ಟವಾಗಿದ್ದುವಲ್ಲ. ನಿನಗೆ ಎಡ ಅಂದರೆ ತಿರಸ್ಕಾರ ಮತ್ತು ಅಂವಗ ಬಲ ಅಂದರ ತಾತ್ಸಾರ, ತ್ಯಾಜ್ಯ! ಅದಕ್ಕ ನಡೀತಲ್ಲ ಆ ವ್ಯಾಜ್ಯ. ಸ್ವಾತಂತ್ರ್ಯೋತ್ಸವದ ಒಳ್ಳೆ ದಿವಸದಾಗ ಗೆದ್ದದ್ದಕ್ಕಾಗಿ ಬಹುಮಾನ ಪಡೆಯೋದು ಬಿಟ್ಟು ಎಡ-ಬಲ ಅಂತ ವಾದ ವಿವಾದ ಮಾಡಿ ಶುಭಗಳಿಗ್ಯಾಗ ಅಮಂಗಲ ಮಾಡಿದ್ರಿ. ನಿನಗ ಬ್ಯಾಡಾದ್ದನ್ನ ನಿನ್ನಿಂದ ದೂರ ಮಾಡಿದೆ ಮತ್ತು ಅವನಿಗೆ ಬ್ಯಾಡಾದ್ದನ್ನ ಅವನಿಂದ ದೂರವಿಟ್ಟೆ. ನಾವು



ಮೂವರು ಸಹೋದರರೊಳಗ ನಾನು ನಡುವಿನಾಂವ. ಮಧ್ಯಸ್ಥನಾಗಿ ಈ ಕೆಲಸ ಮಾಡಿದ್ದು ಕೃಷ್ಣ ಕಾರಸ್ತಾನ ಆಗುದಿಲ್ಲ. ಕರ್ತವ್ಯ ಪಾಲನೆ ಆಗ್ತದ ಅಂಥಾಂಗ ಕರ್ತವ್ಯ ಅನ್ನೋ ಒಂದು ಶಬ್ದ ಅದ ಶಬ್ದಕೋಶದಾಗ ಅಂತ ಗೊತ್ತ ಅದ ಅಲ್ಲಾ.

ರಮೇಶ: ದೊಡ್ಡ ಕರ್ತವ್ಯ ಪರಾಯಣ ಮಹಾನುಭಾವ ಬಂದೀತ! ಎಲ್ಲಿ ಅವ ನನ್ನ ಬಲಗಾಲಿನ ಪಾದರಕ್ಷೆಗಳು ?

ಮೋಹನ: ಅಲ್ಲಿ ಬಿದ್ದಾವ ನೋಡು. (ಪಾದರಕ್ಷೆಗಳಿದ್ದ ಮೂಲೆಯ ಕಡೆಗೆ ನಿರ್ದೇಶಿಸುವನು)

ರಮೇಶ: (ಹಣೆ ಗಟ್ಟಿಸಿಕೊಂಡು) ಏನ ನನ್ನ ಕರ್ಮ ಇದು. ಇವನ್ನ ಹೊತ್ತುಕೊಂಡು ಹೋಗಬೇಕು. (ತೆಗೊಳ್ಳಲು ಹೋಗುವನು)

ಮನೋಹರ: ಹಾಂ, ನನ್ನ ಎಡಗಾಲಿನ ಪಾದರಕ್ಷೆ ಎಲ್ಲಿ ಅವ ? ಅವನ್ನ ತಂದಿಡದ ಈ ಪಾದತ್ರಾಣ ಮುಟ್ಟಕೂಡದು.

(ರಮೇಶ ತಡೆಯುವನು)

ಮೋಹನ: ಅವು ರಮೇಶನ ಮನೀಯೊಳಗ ಬಿದ್ದಾವ, ಬೇಕಾದರ ನೀನು ಹೋಗಿ ತೆಗೊಂಡು ಬಾ ಅಲ್ಲಿಂದ,

ರಮೇಶ: ನನ್ನ ಪಾದತ್ರಾಣವನ್ನಂತೂ ನಾ ಒಯ್ತೀನಿ. ತಮ್ಮ ಪಾದತ್ರಾಣ ಬೇಕಾದವರು ಸ್ವತಃ ಬಂದು ಒಯ್ಯಬಹುದು. ನಡೀ ರಾಧಾ ನಮ್ಮ-ನಮ್ಮೂ ಪಾದರಕ್ಷೆಗಳನ್ನು ಒಯ್ಯೋಣು.

ಮಾಲತಿ: ರಾಧಾ ಏನು ಈಗ ಬರೋದಿಲ್ಲ. ಮತ್ತ ನೋಡ್ರಿ, ಬರೂ ಹೊತ್ತಿನಾಗ ಬರಿಗಾಲಿನಿಂದ ಬಂದೀರಿ; ಈಗ ಹ್ಯಾಂಗ ಬರೀ ಬಲಗಾಲಿನ ಚಪ್ಪಲಿ ಮೆಟ್ಟಿಕೊಂಡು ಹೋಗಾವ್ರಿ? ಬರುವಾಗ ನಿಮ್ಮಲ್ಲಿದ್ದ ಎಡಗಾಲಿನ ಪಾದರಕ್ಷೆ ತಂದಿದ್ದರ ಈ ಪ್ರಶ್ನೆ ಇರತಿದ್ದಿಲ್ಲ.

ರಮೇಶ: ಹಾಂಗ ಹ್ಯಾಂಗ ಅಂತೀರಿ ? ಪ್ರಶ್ನಿ ಆಗಃಹುಟ್ಟಿದ್ದು ! ಬರೂ ಹೊತ್ತಿನಾಗಲೇ ಒಂದ ಕಾಲಾಗ ಮೆಟ್ಟಿಕೊಂಡು ಬರಬೇಕಾಗಿತ್ತಲ್ಲ! ರಾಧಾ, ಬಂದ್ರ ಬಾ, ಇಲ್ಲಿದಿದ್ರ ಇಲ್ಲಿ ಕೂಡ್ರು. ನಾನಂತೂ ಹೋಗತೇನಿ. (ರಮೇಶ ಬಲಗಾಲಿನಲ್ಲಿ ಒಂದು ಚಪ್ಪಲ ಮೆಟ್ಟಿಕೊಂಡು ಆ ಒಂದೇ ಕಾಲಿನ ಮ್ಯಾಲ ಕುಂಟುತ್ತ ನಿಷ್ಕ್ರಮಿಸುವನು. ಆತ ಕುಂಟುತ್ತಾ ಹೋಗುತ್ತಿರುವಂತೆ)

ಮೋಹನ. (ಚಪ್ಪಾಳೆ ತಟ್ಟುತ್ತ) ಕುಂಟ ಕಾಲಿಗೆ ವೈದ್ಯ, ಸಕ್ಕರಿ ತುಪ್ಪ ನೈವೇದ್ಯ, ಕುಂಟಕಾಲಿಗೆ ವೈದ್ಯ ಸಕ್ಕರಿ ತುಪ್ಪ ನೈವೇದ್ಯ. (ಮಾಲತಿ ಮತ್ತು ರಾಧೆಯ ಮುಖದ ಮೇಲೆ ತಿಳಿ ಹಾಸ್ಯ ಮೂಡವುದು. ಮನೋಹರ ಮಾತ್ರ ಇನ್ನೂ ಬಿಗಿದುಕೊಂಡೇ ನಿಂತಿರುವನು)

ಮಾಲತಿ: ಅಂತೂ ಮೋಹನ ಭಾವುಜೀ. ಮುಂಜಾನೆಯಿಂದ ಮಜಾ ಆಟ ಹೂಡೀರಿ. ಹಂ! ಆದ್ರ ಇಂದ ಕ್ಲಬ್ಬಿನಾಗ ಬಲಪಂಥದ ವಿರುದ್ಧ ಎಡಪಂಥದ ವಾದ ವಿವಾದ ನಡೆಯೋದದ ಅಂಬೋದು ನಿಮಗೆ ಗೊತ್ತದ ಹೌದಲ್ಲೋ. ಈ ಆಟದ ಪ್ರದರ್ಶನ ಅಲ್ಲಿ ಆಗಿದ್ರ ಭಲೋ ಆಗ್ತಿತ್ತು. ಅಂತೂ ತೀವ್ರ ಬಲಪಂಥೀಯರಿಗೆ ಮತ್ತು ಎಡಪಂಥೀಯರಿಗೆ ಬುದ್ಧಿ ಕಲಿಸಿದ್ರಿ ಹಂ.

ಮನೋಹರ: ಹುಂ, ಕಲಿಸ್ಯಾನ ಬುದ್ಧಿ! ಮಾಡು ಆತನ ಪ್ರಶಂಸಾ !! ಸುಮ್ಮನ ಇಲ್ಲಿ ಹಲ್ಲು ತೆಗೆದು ನಗೋದಕ್ಕಿಂತ ನಮ್ಮ ಎಡಗಾಲಿನ ಚಪ್ಪಲಿ ತೆಗೆದುಕೊಂಡು ಬಾ ಹೋಗು ಅಲ್ಲಿಂದ. ನಾನಂತು ಹೋಗಬೇಕಾಗೇದ. ಇದರ ಜೋಡಿ ಚಪ್ಪಲಿ ತರಲಿಕ್ಕ (ಒಂದೇ ಚಪ್ಪಲಿ ಮೆಟ್ಟಿಕೊಂಡು ಕುಂಟುತ್ತ ಹೊರಗೆ ಹೊರಡುವನು) (ಮೋಹನ ಮತ್ತೆ ಕೈ ತಟ್ಟಿ ಕುಂಟ ಕಾಲಿಗೆ ವೈದ್ಯ, ಸಕ್ಕರಿ ತುಪ್ಪಾ ನೈವೇದ್ಯ ಎಂದು ರಾಗವಾಗಿ ಅನ್ನಲಿಕ್ಕ ಆರಂಭಿಸುತ್ತಿದ್ದಂತೇ ಮನೋಹರ ಹೊರಳಿ ಕಿಡಿಗಣ್ಣಿನಿಂದ ಆತನನ್ನು ನೋಡಿದ್ದು ಕಂಡು ನಾಲಿಗೆ ಕಚ್ಚಿಕೊಳ್ಳುವನು.)


ಮೋಹನ: ವೈನಿ ನೋಡಿದ್ರೇನು ನನ್ನ ಬಂಧುದ್ವಯರ ಕುಂಟಲಪಿ ಆಟಾನ?

ಮಾಲತಿ: (ನಸುನಗುತ್ತ) ನೋಡ್ದೆ, ನೋಡಿದ್ವಿ

ಮೋಹನ: ಅವರಿಗೆ ಕಾಲಿದ್ದು ಕುಂಟಬೇಕು ಅಂತ ಆಸೆ. ಕುರುಡು ಧ್ಯೇಯ, ಕುಂಟು ವಿಚಾರ ಸರಣಿ, ಮತ್ತ ಮ್ಯಾಲ ತನ್ನದ ಖರೆ ಅಂಬೋ ಹಟಮಾರಿತನ. ಎರಡೂ ಕಾಲಮ್ಯಾಲ ಸಮ ಸಮಾ ಭಾರ ಹಾಕಿ ಸಾಗೋದು ಬಿಟ್ಟು ಬಲ, ಬಲ, ಬಲ ಅಂತ ಒಬ್ಬ ಅಂದ್ರ (ಹೀಗನ್ನುವಾಗ ಬಲಗಾಲ ಮ್ಯಾಲ ಕುಂಟುತ್ತ ಒಂದು ಪ್ರದಕ್ಷಿಣಿ ಹಾಕಿ) ಇನ್ನೊಬ್ಬ ಎಡ, ಎಡ, ಎಡ, ಅಂತ (ಈ ಸಲ ಎಡಗಾಲ-ಮೇಲೆ ಕುಂಟುತ್ತ ಅಪ್ರದಕ್ಷಿಣೆ ಹಾಕುತ್ತಾನೆ) ಎಡ ಬಡಸ್ತಾನ. ಬರಿ ಬಲ, ಬಲ, ಬಲ, ಅಂತ ಬಡಕೋ ಬ್ಯಾಡ್ರೋ ಒಕ್ಕಾಗಳಿರಾ ಮತ್ತ ಹಾಂಗಃ ಕೇವಲ ಎಡ, ಎಡ, ಎಡ, ಅಂತ ಎಡವಟ್ಟಾಗ ಬ್ಯಾಡ್ರಿ, ಎಡ ಬಲಾ, ಎಡ ಬಲಾ, ಎಡ ಬಲಾ, ಅಂತ ಸಮತೋಲದಾಗ ಸಾಗ್ರಿ ಅಂತ ಹೇಳಿದ್ರ ಕೇಳೂದಿಲ್ಲ. ಇದಕ್ಕೇನಂತೀರಿ ವೈನಿ ? ನೀವು ಇಬ್ಬರೂ ಹೇಳ್ರಿ.

ಮಾಲತಿ: ನಾವ ಹೇಳ್ತೇವಿ, ಕುಂಟ ಕಾಲಿಗೆ ವೈದ್ಯ ಅಂತ !


ರಾಧಾ: (ಪ್ರತಿ ಘೋಷಣೆ ಕೂಗುವಂತೆ)– ಸಕ್ಕರಿ ತುಪ್ಪಾ ನೈವೇದ್ಯ (ಘೋಷಣೆ ಮುಗಿಯುವ ತುಸು ಪೂರ್ವದಲ್ಲೇ ತೆರೆ) ●



ಮೇಷ್ಟ್ರ ಮಾತನ್ನು ನಾನು ಕೇಳ್ಲೇ ಇಲ್ಲ,
ಯಾಕಂದ್ರೆ, ನನ್ನ ಮಾತನ್ನು ಅವರು
ಕೇಳ್ಲೋಲ್ವಲ್ಲಾ !

ಹುಡುಗ– ಒಂದು, ಎರಡು

ಎಚ್. ಎಸ್. ವೆಂಕಟೇಶಮೂರ್ತಿ



ಒಂದು :

ಕ್ಲಾಸಿನ ಕೊನೆ ಡೆಸ್ಕಲ್ಲಿ
ಕೂತಿದ್ದಾನೆ ಆ ಹುಡುಗ

ತುಂಬು ತೋಳಿನ ಷರ್ಟು ತೊಟ್ಟವ
ಮುಖದಲ್ಲಿ ಚುಂಗು ಚುಂಗು ಗಡ್ಡ ಬಿಟ್ಟವ
ನೋಟ ಎಲ್ಲೋ ರೂಫಿನಲ್ಲಿ ಇಟ್ಟವ

ತರಗತಿ ಆದ ಮೇಲೆ ಒಬ್ಬನನ್ನೇ ಕರೆದು ಕೇಳಿದೆ
ಅಯ್ಯ, ಏನಾಗಿದೆ ನಿನಗೆ ?
ಉತ್ತರ : ತೊಟ್ಟು ಕತ್ತರಿಸಿದ ಹೂವಿನ ನಗೆ

"ನನ್ನ ಕನಸುಗಳಿಗೆ ನಿದ್ದೆಯ
ಆಸರೆ ಕೊಡುವಿರಾ ಸರ್ ?"

ಚುಚ್ಚಿದ ಹಾಗಾಯಿತು ಗಂಟಲ ಒಳಗೆ
ಮುಳ್ಳಾದ ಅವನ ಕಣ್ಣು ಗುಡ್ಡೆ. ಹುಡುಕಿದೆ
ಅವನ ಕಣ್ಣಲ್ಲಿ ಪಾಪೆಗಳೇ ಇಲ್ಲ.

ಎರಡು :

ಆ ಹುಡುಗ ಸಾಯಬೇಕು
ಎಂದುಕೊಂಡು
ಬಾತ್ ರೂಮ್ ಬಾಗಿಲು ಮುಚ್ಚಿಕೊಂಡ.

ಸೂರಿಗೆ ಹಗ್ಗ ಕಟ್ಟಿ ಜಗ್ಗಿ
ಕುಣಿಕೆ ಹಾಕಿದ
ಅವರಮ್ಮ ಬಾವಿಗೆ ಕೊಡ ಕಟ್ಟುತ್ತಿದ್ದದು
ಅದೇ ರೀತಿ

ಕುಣಿಕೆ ಕೊರಳಿಗೆ ಹಾಕಿ
ನಕ್ಕ ವಿಚಿತ್ರ ರೀತಿ
ಇದೊಂದು ಥರ ನೆಕ್‌ಟೈ !

ಹಗ್ಗಕ್ಕೆ ಜೋತು ಬಿದ್ದವ
ಕಾಲು ನೆಲಕ್ಕೆ ತಾಕುತ್ತದೆಂದು
ಮಂಡಿ ಮಡಿಚಿ ನೆಗೆದು ಬಿದ್ದ.

ನೆಲದಿಂದ ಜಿಗಿದು ಆಕಾಶಕ್ಕೆ
ಹಾರುವ ಭಂಗಿ ಅದು.



ನಾಟಕ
ಪ್ರಾರಂಭವಾಯಿತು....
ಗುರುಗಳು,
ಕುಟುಂಬದ ಸದಸ್ಯರು,
ಹಿತೈಷಿ
ಗಿರಿರಾಯರು
ಸೈಡ್ ವಿಂಗ್‌ನಲ್ಲಿ
ನಿಂತಿದ್ದರು.
"ನೋಡಮ್ಮ,
ನೀನು ಧೈರ್ಯವಾಗಿ
ಹೋಗಿ ಶ್ರೀರಾಮನಿಗೆ
ಹಾರ ಹಾಕಿ
ನಮಸ್ಕಾರ ಮಾಡಿ ಬಾ"
ಎಂದು
ದೊಡ್ಡ
ಹೂವಿನ ಹಾರವನ್ನು
ಜಯಮ್ಮನ ಕೈಗಿತ್ತರು.
....
ನಾಟಕ ರಂಗಕ್ಕೆ
ಜಯಮ್ಮ
ಪದಾರ್ಪಣ
ಮಾಡಿದ್ದು ಹೀಗೆ....

ಬಣ್ಣದ ಬದುಕಿಗೆ ಮೆರುಗು ನೀಡಿದ ಜಯಮ್ಮ

ಹ. ವೆಂ. ಸೀತಾರಾಮಯ್ಯ

ಸ್ತ್ರೀ ರಂಗಕ್ಕಿಳಿಯಲು ಮುಜುಗರಪಡುತ್ತಿದ್ದ ಕಾಲ. ಪುರುಷರೇ ಸ್ತ್ರೀಪಾತ್ರನಿರ್ವಹಿಸುವ ಪರಿಸ್ಥಿತಿ. ಇಂತಹ ಸಂದಿಗ್ಧ ಕಾಲದಲ್ಲಿ ನಾಟಕದಲ್ಲಿ ಪಾತ್ರನಿರ್ವಹಿಸಲು ದಿಟ್ಟತನದಿಂದ ಮುಂದೆ ಬಂದ ಕಲಾವಿದೆಯರಲ್ಲಿ ಬಿ. ಜಯಮ್ಮ ಒಬ್ಬರು. ಇವರ ಬದುಕು ಕನ್ನಡ ರಂಗಭೂಮಿ ಇತಿಹಾಸದ ಮನೋಜ್ಞ ಅಧ್ಯಾಯ. ರಂಗಭೂಮಿಗೆ ಇವರಿತ್ತ ಕೊಡುಗೆ ಅಪೂರ್ವ.

ಜಯಮ್ಮ ಬೆಂಗಳೂರಿನಲ್ಲಿ ೧೯೧೫ ನವೆಂಬರ ೨೬ ರಂದು ಜನಿಸಿದರು. ತಂದೆ ಮಲ್ಲಪ್ಪನವರು, ಪೋಲೀಸ ಅಧಿಕಾರಿ. ತಾಯಿ ಕಮಲಮ್ಮ. ರಂಗ ಕಲಾವಿದೆ-ತಾಯಿ ಕಡೆಯ ಬಳಗವೆಲ್ಲ ರಂಗ ಭೂಮಿಯಲ್ಲೇ ಬದುಕು ಕಳೆದ ಜನ. ದೊಡ್ಡಮ್ಮ ಸುಂದರಮ್ಮ, ರುದ್ರಮ್ಮ ಮತ್ತು ಕಿಟ್ಟಮ್ಮನವರು ಸಂಗೀತ ಹಾಗೂ ನಾಟಕ ಕಲೆಯಲ್ಲಿ ನಿರತರು. ಹೀಗಾಗಿ ಜಯಮ್ಮನವರ ಎಳೆತನದ ಬದುಕಿನ ತುಂಬಾ ನಟನೆ-ನಾಟಕದ ಸೊಗಡು.

ಬೆಂಗಳೂರಿನ ಬಳೆಪೇಟೆಯ ಪ್ರಾಥಮಿಕ ಶಾಲೆಯಲ್ಲಿ ಬಿ. ಜಯಮ್ಮ ಅಕ್ಷರಾಭ್ಯಾಸ ಆರಂಭಿಸಿದರು. ಈಕೆಗೆ ಶಾಲೆಯ ಸಂಗೀತ ಮತ್ತು ನೃತ್ಯ ತರಗತಿ ಬಿಟ್ಟರೆ ಉಳಿದೆಲ್ಲ ವಿಷಯಗಳೆಂದರೆ ಬೇಜಾರು. ನಾಟಕದ ಜನ ಕಂಡರೆ ಬಾಲೆ ಜಯಮ್ಮ ತನ್ನನ್ನೇ ಮರೆತು ಬಿಡುತ್ತಿದ್ದಳು. ಅವರ ಹಾವ-ಭಾವ ಮಾತು ಕೇಳಿ ಅವ್ಯಕ್ತ ಆನಂದ ಅನುಭವಿಸುತ್ತಿದ್ದಳು. ಆಗ ತನ್ನಲ್ಲಿಯ ಸುಪ್ತ ಅಭಿನಯ ಕಲೆಗೆ ಏನೋ ಜೀವ ತುಂಬಿದ ಅನುಭವ ಆಕೆಗೆ. ಇದನ್ನು ಮೊದಲು ಗುರುತಿಸಿದವರು ಮೇಡಂ ಮರಿಯಮ್ಮ.

ಈ ಮಧ್ಯೆ ತಂದೆ ಮಲ್ಲಪ್ಪನವರ ಮರಣದ ಆಘಾತ. ದುಃಖದಿಂದ ನೊಂದರೂ ಅಭಿನಯದ ಗೀಳಿನಲ್ಲಿ ಎಲ್ಲವನ್ನೂ ಮರೆತರು.

ಜಯಮ್ಮನವರ ಈ ಮಾನಸಿಕ ಪರಿವರ್ತನೆ ಹಾಗೂ ಕಲಾದಾಹವನ್ನು ಸ್ಕೂಲ್‌ಮಾಸ್ತರ್ ಶಾಮಣ್ಣ ಗುರುತಿಸಿದರು ಇವರು ಜಯಮ್ಮನವರ ಕುಟುಂಬದ ಮಿತ್ರರಾಗಿದ್ದರು. ಶಾಮಣ್ಣನವರು ಕೇವಲ ಸ್ಕೂಲ್ ಮಾಸ್ತರ್‌ರಾಗಿರದೆ ಉತ್ತಮ ಕಲಾಭಿಮಾನಿ, ಸಜ್ಜನ ಹಾಗೂ ನಾಟಕ ಕಲಿಸುವ ಮಾಸ್ತರ್‌ರೂ ಆಗಿದ್ದರು. "ರಸಿಕ ಜನಾನಂದ ನಾಟಕ ಸಭಾ"-ಇದು ಆಗ ಬೆಂಗಳೂರಿನಲ್ಲಿ ಸ್ಥಾಪಿತಗೊಂಡು ಆಗಾಗ ನಾಟಕಗಳನ್ನು ಪ್ರದರ್ಶಿಸುತ್ತಿತ್ತು. ಶಾಮಣ್ಣನವರು ಈ ನಾಟಕ ಸಂಸ್ಥೆಗೆ ತುಂಬಾ ನಿಕಟವರ್ತಿಗಳಾಗಿದ್ದರಲ್ಲದೆ ಆಧಾರಸ್ತಂಭ ಎನಿಸಿದ್ದರು.

ನಾಟಕಗಳಲ್ಲಿ ಅಭಿನಯಿಸುವ ತಮ್ಮ ಬಯಕೆಯನ್ನು ಜಯಮ್ಮ ಒಮ್ಮೆ ಶಾಮಣ್ಣನವರಲ್ಲಿ ತೋಡಿಕೊಂಡರು. ಅವರ ಹಿರಿಯರಿಂದ ಒಪ್ಪಿಗೆ ಪಡೆದುಕೊಂಡ ಶಾಮಣ್ಣನವರು ರಸಿಕ ಜನಾನಂದ ನಾಟಕ ಸಭೆಗೆ "ಜಯಮ್ಮನವರನ್ನು ಪರಿಚಯಿಸಿದರು." ಹೊಸದಾಗಿ ರಂಗವೇರಲಿದ್ದ "ಸೀತಾ ಕಲ್ಯಾಣ" ನಾಟಕದಲ್ಲಿ ಜಯಮ್ಮನವರಿಂದ ಸೀತೆಯ ಪಾತ್ರ ಮಾಡಿಸುವುದಾಗಿ ಅವರು ಹೇಳಿದರು. ಗುಬ್ಬಿ ಕಂಪನಿಯ ಪ್ರಸಿದ್ಧ ನಟ ನಾರಾಯಣರಾಯರು ರಾಮನ ಪಾತ್ರ ನಿರ್ವಹಿಸಲಿದ್ದರು, ಜಯಮ್ಮ ಉತ್ಸಾಹದಿಂದಲೇ ಹಾಡು ಸಂಭಾಷಣೆ ಎಲ್ಲ ಕಲಿತುಕೊಂಡರು.

ನಾಟಕ ಪ್ರಾರಂಭವಾಯಿತು. ಶಾಮಣ್ಣನವರು, ಅವರ ಸ್ನೇಹಿತರು, ಕುಟುಂಬದ ಸದಸ್ಯರು ಕುಟುಂಬದ ಮತ್ತೊರ್ವ ಹಿತೈಷಿ ಗಿರಿರಾಯರು ಸೈಡ್‌ವಿಂಗ್‌ನಲ್ಲಿ ನಿಂತಿದ್ದರು. ಗಿರಿರಾಯರು "ನೋಡಮ್ಮ. ನೀನು ಧೈರ್ಯವಾಗಿ ಹೋಗಿ ಶ್ರೀರಾಮನಿಗೆ ಹಾರಹಾಕಿ ನಮಸ್ಕಾರ ಮಾಡಿಬಾ" ಎಂದು ಹೇಳಿ ದೊಡ್ಡ ಹೂವಿನ ಹಾರವನ್ನು ಕೈಗಿತ್ತರು.ಎಲ್ಲರಲ್ಲೂ ದುಗುಡ! ಆದರೆ ಜಯಮ್ಮ ಯಾವ ಅಂಜಿಕೆ ಅಳುಕಿಲ್ಲದೇ ಸೀತೆ ರಾಮನಿಗೆ ಹಾರ ಹಾಕಿ ವಂದಿಸಿ ಸೈಡವಿಂಗಿಗೆ ಬಂದರು. ಹೀಗೆ ಜಯಮ್ಮ ನಾಟಕ ರಂಗಕ್ಕೆ ಅಡಿಯಿಟ್ಟು ಮಹತ್ತರ ಕೊರತೆ ತುಂಬಿಕೊಟ್ಟರು.

ಇದೇ ಕಂಪನಿಯ ಎರಡನೇ ನಾಟಕ "ಕವಿರತ್ನ ಕಾಳಿದಾಸ" ದಲ್ಲಿ ಸಖಿ ಪಾತ್ರ ಮತ್ತು ತೆರೆ ಏಳುವ ಮೊದಲು ಪ್ರಾರ್ಥನೆ ಮಾಡುವ ಹೊಣೆ ಜಯಮ್ಮನವರಿಗೆ ವಹಿಸಲಾಯಿತು. ಶೃತಿ ತಾಳ ಲಯ ಬಿಡದೆ "ಮದಲಾಲಸಮುಖಿ, ಮಂಜುಳ ಸಖಿ ಬಾರೆ ನೀ ಸಖಿ..." ಎಂದು ಭಾವ ಮಾಧುರ್ಯ ತುಂಬಿ ಹಾಡಿ ಲೀಲಾಜಾಲವಾಗಿ ಅಭಿನಯಿಸಿದರು ಜಯಮ್ಮ. ಪ್ರೇಕ್ಷಕರಿಂದ ಚಪ್ಪಾಳೆ ಮೆಚ್ಚುಗೆ ಸುರಿಮಳೆ. ಆಗ ಎಲ್ಲರಲ್ಲೂ, ಈ ಹುಡುಗಿಯ ಕೈಲಿ ಯಾವ ಪಾತ್ರವನ್ನಾದರೂ ಅಚ್ಚುಕಟ್ಟಾಗಿ ಮಾಡಿಸಬಹುದು ಎಂಬ ವಿಶ್ವಾಸ, ಜಯಮ್ಮನ ಕಲಾಸೇವೆ ಅಪ್ರತಿಮಗೊಳ್ಳಲು ಇದೂ ಒಂದು ಕಾರಣವಾಯಿತು.

ಜಯಮ್ಮನ ದೊಡ್ಡಮ್ಮನವರಾದ ಬಿ. ಸುಂದರಮ್ಮ ಶಾಂತರಾಜಪ್ಪನವರ ನೇತೃತ್ವದ ಗುಬ್ಬಿ ಕಂಪನಿಯಲ್ಲಿ ಪ್ರಧಾನ ಅಭಿನೇತ್ರಿಯಾಗಿದ್ದರು. ಇವರೊಂದಿಗೆ ಅಲ್ಲಿಗೆ ಹೋಗುತ್ತಿದ್ದ ಜಯಮ್ಮ ಮೇಕಪ್ ಪರಿಕರ ಹಾಗೂ ವಿಧಾನಗಳನ್ನು ಗಮನಿಸಿ ಅರಿತರು. ಅಭಿನಯ ಹಾಡು ಮಾತು ಅನುಕರಿಸಲೆತ್ನಿಸುತ್ತಿದ್ದರು. ಕೊನೆಗೆ ಎಲ್ಲರಂತೆ ತಾನೂ ಅಂಕಪರದೆಯನ್ನು ಕಣ್ಣಿಗೊತ್ತಿಕೊಂಡಾಗ ಕಲೆಯಲ್ಲೇ ಕರಗಿ ಹೋದ ಅನುಭವ!

ದಿನವೂ ಆಸಕ್ತಿಯಿಂದ ಎಲ್ಲ ನೋಡಿ ಅರಿತ ಜಯಮ್ಮ ಅವರಿಗೆ "ರಾಮಾಯಣ" ನಾಟಕದಲ್ಲಿ ಅಂಗದ ಹಾಗೂ ಕಬೀರ ನಾಟಕದಲ್ಲಿ ಕಬೀರನ ಪುತ್ರ ಕಮಾಲನ ಪಾತ್ರ ದೊರೆತವು. ನಂತರ ದೊಡ್ಡಮ್ಮನೊಡನೆ ಜಯಮ್ಮ ದಸ್ತಗೀರ ಸಾಹೇಬರ ನಾಟಕ ಸಂಸ್ಥೆ ಹಾಗೂ ಅಗಳಿ ತಿಪ್ಪಯ್ಯ ಕಂಪನಿ ಕಂಡು, ಬಾಳು ಬಸವೇಗೌಡರ ನಾಟಕ ಸಂಸ್ಥೆ ಸೇರಿದರು. ಆಗಲೇ ಅನುಭವದೊಂದಿಗೆ ನಾಟಕರಂಗ ಪರಿಸರ ಜ್ಞಾನವನ್ನೂ ಸ್ವಂತಾಸಕ್ತಿಯಿಂದ ಹೊಂದಿದ್ದ ಇವರಿಗೆ ಇಲ್ಲಿ ದ್ವಿತೀಯ ನಾಯಕಿ ಪಾತ್ರಗಳಿಗೆ ಪ್ರಮೋಷನ್! ಇಲ್ಲಿ ಅಭಿನಯಿಸಿದ 'ಸದಾರಮೆ' ನಾಟಕದ ಚಂಚಲಕುಮಾರಿ, "ಗುಲೇಬಕಾವಲಿ"ಯ ಚಿತ್ರತಾರೆ ಹಾಗೂ "ಮನ್ಮಥ ವಿಜಯ"ದ ರತಿ ಪಾತ್ರಗಳು ಬಹಳ ಪ್ರಸಿದ್ಧ



೧೯೪೨ ರಲ್ಲಿ ತೆರೆಕಂಡ 'ಜೀವನ ನಾಟಕ' ದಲ್ಲಿ ಕೆಂಪರಾಜ ಅರಸ್ ಮತ್ತು ಬಿ. ಜಯಮ್ಮ

ತಂದವು. ಫಲ ಸ್ವರೂಪವಾಗಿ. ಆಗ ಮೈಸೂರು ಸಂಸ್ಥಾನದ ದೊಡ್ಡ ಕಂಪನಿಯೆನಿಸಿದ್ದ ಗುಬ್ಬಿ ಕಂಪನಿಯಿಂದ ಬುಲಾವ್! ಇದು ಜಯಮ್ಮನವರ ಅಭಿನಯ ಹೊತ್ತಗೆಯಲ್ಲಿ ಹೊಸ ಅಧ್ಯಾಯವನ್ನೇ ತೆರೆಯಿತು.

ಸುವರ್ಣಯೋಗ

ಇಲ್ಲಿ ಅವರು ಪ್ರಥಮವಾಗಿ ನಿರ್ವಹಿಸಿದ "ವೀರನರಸಿಂಹ" ಚರಿತ್ರೆ ನಾಟಕದ "ನಟಿ" ಪಾತ್ರಸಹ ಒಳ್ಳೆಯ ಹೆಸರು ತಂದಿತು. ಹಿರಿಯ ನಟ ಗಾಯಕ ಗಂಧರ್ವ ಜಿ. ನಾಗೇಶರಾಯರು ಕೂಡ ಬೆನ್ನು ತಟ್ಟಿದರು. "ರಾಜಭಕ್ತಿ" ನಾಟಕದ ಮೃಣಾಲಿನಿ ಪಾತ್ರ ರಂಗಭೂಮಿಯಲ್ಲಿ ಸುಭದ್ರ ಸ್ಥಾನ ಒದಗಿಸಿತು. ಮೃಣಾಲಿನಿ ಪಾತ್ರದಲ್ಲಿ ಹಾಡಬೇಕಾಗಿದ್ದ ೨೫ ಗೀತೆ, ಕಂದಪದ್ಯ, ಸೀಸಪದ್ಯಗಳನ್ನು ಯಾವ ಲೋಪವೂ ಬಾರದಂತೆ ಹಾಡಿ ಸುಂದರವಾಗಿ ಅಭಿನಯಿಸಿದ್ದನ್ನು ಕಂಡು ಮೆಚ್ಚಿ ಗುಬ್ಬಿ ವೀರಣ್ಣನವರು ಬಂಗಾರದ ಬಳೆಗಳನ್ನು ಬಹುಮಾನವಾಗಿ ಕೊಟ್ಟರು.

ಜನಪ್ರಿಯತೆ ತಂದ ಸದಾರಮೆ

"ಸದಾರಮೆ" ಈ ಕಂಪನಿಯ ಜನಪ್ರಿಯ ನಾಟಕಗಳಲ್ಲೊಂದು. ಇದರಲ್ಲಿ ಸದಾರಮೆಯಾಗಿ ಜಯಮ್ಮ ತಮ್ಮ ಅಭಿನಯ ಮತ್ತು ಗಾಯನದಿಂದ ಪ್ರೇಕ್ಷಕರನ್ನು ದಂಗುಬಡಿಸುತ್ತಿದ್ದರು. ಸಂಗೀತದ್ದೇ ಮೇಲುಗೈಯಾದ ಈ ನಾಟಕದಲ್ಲಿ ಜಯಮ್ಮನವರು ವನವರ್ಣನೆ ಮಾಡಿ ಹಾಡುತ್ತಿದ್ದ "ಸುಂದರಾಂಗೀ ನೋಡಿವನ ಚಂದವನ್ನು ಮಾನಿನೀ ನೋಡೆ ಮಂದ ಮಾರುತಾಂಗೆ ಮಯಚಂದದಿಂದ ಬೀರುತಿರ್ಪನೋಡೆ" ಎಂಬ ಹಾಡು ಪ್ರೇಕ್ಷಕರನ್ನು ಹುಚ್ಚೆದ್ದು ಕುಣಿಸುತ್ತಿದ್ದಲ್ಲದೆ "ಒನ್ಸ್‌ಮೋರ"ನ ಬೇಡಿಕೆಯನ್ನೂ ತರುತ್ತಿತ್ತು.

ಗಂಡು ಉಡುಪಿನಲ್ಲಿನ ಸದಾರಮೆಯನ್ನು ಕಳ್ಳ ಅಪಹರಿಸಿ ಕರೆದುಕೊಂಡು ಹೋಗುವ ದೃಶ್ಯವೊಂದು "ಸದಾರಮೆ"ಯಲ್ಲಿ ಬರುತ್ತದೆ. ಈ ದೃಶ್ಯದಲ್ಲಿ ಗಂಡು ಡ್ರೆಸ್ಸಿನಲ್ಲಿ ಬಿ. ಜಯಮ್ಮನವರು ಮುಖಕ್ಕೆಲ್ಲಾ ಕಪ್ಪು ಬಣ್ಣ ಬಳಿದುಕೊಂಡು ಇಡೀ ದೇಹಕ್ಕೆಲ್ಲ ಕಪ್ಪು ಡ್ರೆಸ್ಸನ್ನು ಹಾಕಿಕೊಳ್ಳುತ್ತಿದ್ದ ಗುಬ್ಬಿವೀರಣ್ಣನವರ ಕೈ ಹಿಡಿದುಕೊಂಡು ಪ್ರವೇಶಿಸಿದಾಗ ಕರತಾಡನದ ಸ್ವಾಗತ ನಿತ್ಯನಿಯಮವಾಗಿತ್ತು. ಸದಾರಮೆಯ ಪಾತ್ರ ಜಯಮ್ಮನವರ ಹೆಸರನ್ನು ಕರ್ನಾಟಕದ ಉದ್ದಗಲಕ್ಕೂ ಹರಡಿತು.

ಸದಾರಮೆ ಪಾತ್ರವಲ್ಲದೆ "ಪ್ರಭಾಮಣಿ ವಿಜಯ" ನಾಟಕದಲ್ಲಿ ನಿರ್ವಹಿಸುತ್ತಿದ್ದ ಪ್ರಭಾಮಣಿ, "ಕಬೀರದಾಸ" ನಾಟಕದಲ್ಲಿ ವಹಿಸುತ್ತಿದ್ದ ಬೀಬಿ, "ನಿರುಪಮ" ನಾಟಕದ ಕಮಲೆಯ ಪಾತ್ರಗಳೂ ಜಯಮ್ಮನವರು ಖ್ಯಾತಿಯ ಶೃಂಗವನ್ನೇರಲು ನೆರವಾದವು.

ಚಿರಸ್ಮರಣೀಯ ಪಾತ್ರಗಳು

ಕನ್ನಡ ರಂಗಭೂಮಿಯಲ್ಲಿ ಜಯಮ್ಮನವರ ಚಿರಸ್ಮರಣೀಯ ಮೂರು ಪಾತ್ರಗಳೆಂದರೆ "ಕುರುಕ್ಷೇತ್ರ" ದ ದ್ರೌಪದಿ, "ದಶಾವತಾರ" ದಲ್ಲಿ ಹಿರಣ್ಯಕಶ್ಯಪುವಿನ ಪತ್ನಿ ಕಯಾದು ಪಾತ್ರ, ಮತ್ತು "ಹೇಮರಡ್ಡಿ ಮಲ್ಲಮ್ಮ" ನಾಟಕದ ಮಲ್ಲಮ್ಮ. ಕುರುಕ್ಷೇತ್ರ ತೆಲುಗು ಭಾಷೆ ಕಂಡು ಆಂಧ್ರದಲ್ಲೂ ಪ್ರದರ್ಶನಗೊಂಡಿತು. ದ್ರೌಪದಿ ಎಲ್ಲರ ಮನಸೂರೆಗೊಂಡಳು.

ಈ ಪಾತ್ರಗಳಲ್ಲಿ ಜಯಮ್ಮನವರನ್ನು ನೋಡಿದಾಗ ಅಭಿನಯ ಸರಸ್ವತಿಯೇ ಮೈವೆತ್ತು ಬಂದ ಅನುಭವ ಪ್ರೇಕ್ಷಕರಿಗೆ. ನಂತರ ಬಂದ "ಅಣ್ಣ ತಮ್ಮ" ನಾಟಕದಲ್ಲಿ ಜಯಮ್ಮ ಅಭಿನಯಿಸಿದ ಅನ್ನಪೂರ್ಣೆ ಪಾತ್ರ ಕೂಡ ಪ್ರೇಕ್ಷಕರಿಗೆ ಅಷ್ಟೇ ಸ್ವಾರಸ್ಯಮಯ. ಮತ್ತೆ ಮತ್ತೆ ನೋಡುವ ಕುತೂಹಲ.

ನಾಟಕರಂಗದಲ್ಲಷ್ಟೇ ಅಲ್ಲ. ಅಭಿನಯ ಕಲೆಯ ಇನ್ನೊಂದು ರಂಗ ಸಿನೇಮಾದಲ್ಲೂ ಜಯಮ್ಮ ಬೆಳಗಿ ಮಿಂಚಿದರು. ಕನ್ನಡ ತೆಲುಗು ಹಾಗೂ ತಮಿಳು ಚಿತ್ರಗಳಲ್ಲಿ ನಟಿಸಿದರು.

೧೯೩೦-೩೧ ರಲ್ಲಿ ಕರ್ನಾಟಕ ಫಿಲಂಸ್ ಕಾರ್ಪೊರೇಶನ್ ಚಿತ್ರ ಸಂಸ್ಥೆಯ ಮೂಕಿ ಚಿತ್ರ "ಹಿಸ್ ಲವ್ ಅಫೇರ್ಸ್" ನಲ್ಲಿ ಕಾಲೇಜು ಕನ್ಯೆಯ ಪಾತ್ರವನ್ನು ಕನ್ನಡ ರಂಗಭೂಮಿಯ ಪ್ರಸಿದ್ಧ



ಜಯಚಾಮರಾಜೇಂದ್ರ ಒಡೆಯರರಿಂದ ಬಹುಮಾನ ಸ್ವೀಕರಿಸುತ್ತಿರುವ ಬಿ. ಜಯಮ್ಮ.

ನಟ ಎಂ. ವಿ. ಸುಬ್ಬಯ್ಯನಾಯ್ಡು ಅವರ ಅಭಿಮುಖವಾಗಿ ಅಭಿನಯಿಸಿ, ಮೂಕಿ ಚಿತ್ರದ ತಾರೆಯೂ ಹೌದು ಎನಿಸಿದರು.

ಗುಬ್ಬಿ ವೀರಣ್ಣ, ಎಚ್. ಎಲ್. ಎನ್. ಸಿಂಹ, ಜಿ. ಸುಂದರಮ್ಮ, ಚಂದ್ರಮ್ಮ ಮೊದಲಾದ ಹೆಸರಾಂತ ರಂಗ ಕಲಾವಿದರೂ ಸಹ ಈ ಚಿತ್ರದಲ್ಲಿ ನಟಿಸಿದ್ದರು. ಹಾಲಿವುಡ್‌ನಿಂದ ಬಂದಿದ್ದ ಅಲ್ಲುಗಡ್ ಎಂಬ ವಿದೇಶಿಯ ಈ ಚಿತ್ರ ನಿರ್ದೇಶಕ. "ಹರಿಮಾಯ" ಎಂಬ ಮತ್ತೊಂದು ಮೂಕಿ ಚಿತ್ರದಲ್ಲೂ ಜಯಮ್ಮನವರು ನಟಿಸಿದ್ದಾರೆ. ವೈ. ವಿ. ರಾವ್ ಈ ಚಿತ್ರದ ಸೂತ್ರಧಾರರು.

ಜಯಮ್ಮನವರು ಒಟ್ಟು ೪೪ ಚಿತ್ರಗಳಲ್ಲಿ ನಟಿಸಿದ್ದಾರೆ. ಅವುಗಳಲ್ಲಿ ಪ್ರಾಮುಖ್ಯವಾದವು ಜೀವನ ನಾಟಕ (ಅ. ನ. ಕೃ. ಸಾಹಿತ್ಯ) ಸುಭದ್ರ, ಸ್ವರ್ಗಸೀಮ, ತ್ಯಾಗಯ್ಯ, ಹೇಮರೆಡ್ಡಿ ಮಲ್ಲಮ್ಮ, ನಾಟ್ಯರಾಣಿ, ಲವಂಗಿ, ಭರ್ತೃಹರಿ, ಮಂಗೈಯರ್ಕರಸಿ ಬ್ರಹ್ಮರಥಂ, ಗುಣಸಾಗರಿ ರಾಜಾ ವಿಕ್ರಮ, ಸಾಕ್ಷಾತ್ಕಾರ, ಅಣ್ಣ-ತಂಗಿ, ವಂಶೀ ಮೊದಲಾದವು.

"ತ್ಯಾಗಯ್ಯ" ತೆಲಗು ಚಿತ್ರದ ಧರ್ಮಾಂಬೆ, "ಸ್ವರ್ಗ ಸೀಮ" ತೆಲಗು ಚಿತ್ರದ ಸಂಪಾದಕನ ಮಡದಿ, "ಹೇಮರೆಡ್ಡಿ ಮಲ್ಲಮ್ಮ" ಕನ್ನಡ ಚಿತ್ರದ ಮಲ್ಲಮ್ಮನ ಪಾತ್ರಗಳು ಜಯಮ್ಮನವರ ಚಿತ್ರರಂಗದಲ್ಲಿನ ಚಿರಸ್ಮರಣೀಯ ಪಾತ್ರಗಳು.

ಜಯಮ್ಮನವರ ರಂಗಸೇವೆಯನ್ನು ಪರಿಗಣಿಸಿದ ಕರ್ನಾಟಕ ಸರ್ಕಾರ ವಿಧಾನಪರಿಷತ್ತಿಗೆ ಐದು ವರ್ಷಗಳಕಾಲ ನಾಮಕರಣ ಸದಸ್ಯೆಯನ್ನಾಗಿ ನೇಮಿಸಿ ಗೌರವಸಲ್ಲಿಸಿತು. ಕರ್ನಾಟಕ ನಾಟಕ ಅಕಾಡೆಮಿ ಸಹ ಜಯಮ್ಮನವರ ಕಲಾಸೇವೆಯನ್ನು ಪರಿಗಣಿಸಿ ಗೌರವಿಸಿದೆ. ಜಯಮ್ಮನವರ ವ್ಯಕ್ತಿತ್ವ, ದುಡಿಮೆ ವಿವಿಧ ಕಲಾ ನೈಪುಣ್ಯತೆ, ಸೇವಾದೃಷ್ಟಿ, ಮನಸ್ಸಿನ ವೈಶಾಲ್ಯತೆ, ದೈವಭಕ್ತಿ, ನಮ್ರತೆ ದೊಡ್ಡ ಪ್ರಮಾಣದವು.

ಸಂಗೀತಾಭಿನಯಗಳಲ್ಲಿ ಐದು ದಶಕಗಳ ಕಾಲ ಕನ್ನಡಿಗರ ಮತ್ತು ಇತರರ ಗೌರವಾದರಗಳಿಗೆ ಪಾತ್ರರಾಗಿರುವ ಈ ಹಿರಿಯ ಅಭಿನೇತ್ರಿ ಇಂದು ಎಪ್ಪತ್ತೆರಡು ದಾಟಿ ಎಪ್ಪತ್ತಮೂರನೇ ವಯಸ್ಸಿಗೆ ಪದಾರ್ಪಣ ಮಾಡಿದ್ದಾರೆ.

ಕನ್ನಡ ಚಿತ್ರರಂಗದ "ಹಿರಿಯ ಅಕ್ಕ" ಎಂದೆನಿಸಿರುವ ಈ ಅಭಿನೇತ್ರಿ ನೂರ್ಕಾಲ ನಮ್ಮೊಡನಿರಲಿ. ●



ಗುಬ್ಬಿ ವೀರಣ್ಣನವರೊಂದಿಗೆ ಬಿ. ಜಯಮ್ಮ

(ಪ್ರಸ್ತುತ ಲೇಖನ ಮುದ್ರಣಕ್ಕೆ ಸಿದ್ಧವಾಗುತ್ತಿರುವ ಹಂತದಲ್ಲಿಯೇ ಲೇಖಕ ಹ. ವೆಂ. ಸೀತಾರಾಮಯ್ಯ ವಿಧಿವಶರಾದರು)



ಕನ್ನಡ ಚಲನಚಿತ್ರ ರಂಗದಲ್ಲೀಗ ಹೊಸ ನೀರು ಹರಿದಿದೆ. ಹಳೆಯ ತಲೆಮಾರಿನ ನಟರು ಸದ್ದಿಲ್ಲದೆ ವಿಶ್ರಾಂತ ಜೀವನವನ್ನು ಅಪ್ಪಿಕೊಳ್ಳುತ್ತಿದ್ದಾರೆ. ಜತೆಗೆ ತಮ್ಮ ಜನಪ್ರಿಯತೆಯ ನೆರಳಿನಲ್ಲಿ ತಮ್ಮ ಮಕ್ಕಳನ್ನು ತಾರಾ ಪಟ್ಟಕ್ಕೇರಿಸುತ್ತಿದ್ದಾರೆ.

ಲೀಲಾವತಿ ಪುತ್ರ ವಿನೋದರಾಜ್, ಉದಯಕುಮಾರ್ ಪುತ್ರ ವಿಶ್ವವಿಜೇತ, ಸಿದ್ಧಲಿಂಗಯ್ಯನವರ ಪುತ್ರ ಮುರಳಿ, ಶಕ್ತಿಪ್ರಸಾದ್ ಪುತ್ರ ಅರ್ಜುನ್ ಸರ್ಜಾ ಹಾಗೂ ಡಾ|| ರಾಜ್‌ಕುಮಾರ್ ಪುತ್ರ ಶಿವರಾಜ್‌ಕುಮಾರ್ ಹೀಗೆ ಹೊಸ ತಾರೆಯರು ಕನ್ನಡ ರಜತ ಪರದೆಗೆ ಲಗ್ಗೆ ಇಡಲಾರಂಭಿಸಿದ್ದಾರೆ.

ಈಗ ಚಿತ್ರರಂಗದಲ್ಲಿ ತಲೆ ಎತ್ತಿರುವ ಈ ಹೊಸ ಪೀಳಿಗೆ ಕಲಾವಿದರಲ್ಲಿ ಶಿವರಾಜ್‌ಕುಮಾರ್ ತನ್ನದೇ ಆದ ಅಭಿಮಾನಿವೃಂದವನ್ನು ಈಗಾಗಲೇ ಗಳಿಸಿಕೊಂಡಿರುವುದು ಗಮನಾರ್ಹ.

"ಆನಂದ" ಚಿತ್ರದ ಮೂಲಕ ಚಿತ್ರರಂಗಕ್ಕೆ ಪದಾರ್ಪಣ ಮಾಡಿದ ಶಿವರಾಜ್‌ಕುಮಾರ್ ಮೂಲ ಹೆಸರು ಶಿವಣ್ಣ. ತನ್ನದೇ ಆದ ವಿಶಿಷ್ಟ ಅಭಿನಯ ಶೈಲಿಯನ್ನು ರೂಢಿಸಿಕೊಂಡು ಪ್ರೇಕ್ಷಕರ ಮನಗೆದ್ದಿರುವ ಈ ಹುಡುಗ "ರಥಸಪ್ತಮಿ" ಯಲ್ಲಿ ಅಪಾರ ಜನಪ್ರಿಯತೆ ಗಳಿಸಿಕೊಂಡ.

ಕಾಲೇಜು ಹುಡುಗನಂತೆ ಪ್ರಣಯ ದೃಶ್ಯಗಳಲ್ಲಿ ಮೆರೆಯುತ್ತಿದ್ದ ಶಿವರಾಜ್ ಅಭಿನಯದಲ್ಲಿ ಏಕತಾನತೆ ಇದೆ ಎಂದು ಮೂಗು ಮುರಿಯುತ್ತಿದ್ದವರಿಗೆ, ಅವರ ಇತ್ತೀಚಿನ ಚಿತ್ರ "ಮನ ಮೆಚ್ಚಿದ ಹುಡುಗಿ" ಸೂಕ್ತ ಉತ್ತರ ನೀಡಿದೆ.

ಗ್ರಾಮೀಣ ಹಿನ್ನೆಲೆಯ ಕಥಾವಸ್ತು, ವಿಭಿನ್ನ ಅಭಿನಯ ಪ್ರೇಕ್ಷಕರ ಮನಸೂರೆಗೊಂಡಿದೆ. ಕೇವಲ ತಂದೆಯ ತಾರಾ ವರ್ಚಸ್ಸೇ ತನ್ನ ಚಿತ್ರ ಜೀವನದ ಒಳಗುಟ್ಟು ಎಂಬುದನ್ನು ಸುಳ್ಳುಮಾಡಿ ತನಗೂ ಪ್ರತ್ಯೇಕ ಅಸ್ತಿತ್ವ ಇದೆ ಎಂದು ಶಿವಣ್ಣ ಸಾಬೀತು ಮಾಡಿದ್ದಾರೆ.

ಮದ್ರಾಸಿನ ಫಿಲ್ಮ್ ಇನ್‌ಸ್ಟಿಟ್ಯೂಟಿನಲ್ಲಿ ತರಬೇತಿ ಪಡೆಯುವ ಮುನ್ನ ಶಿವಣ್ಣ ವಿಜ್ಞಾನ ಪದವಿಯನ್ನು ಗಳಿಸಿದ್ದರು. ಚಿತ್ರರಂಗಕ್ಕೆ ಬರಬೇಕು ಎಂಬ ಮಹತ್ವಾಕಾಂಕ್ಷೆ ಅವರಲ್ಲಿ ಮನೆ ಮಾಡಿರಲಿಲ್ಲ. ಕಲಾದೇವಿ ಒಲಿದ ರೀತಿಯೇ ಆಶ್ಚರ್ಯ.

ಡಾ|| ರಾಜ್‌ಕುಮಾರ್ ಅಭಿನಯದ "ಶ್ರೀನಿವಾಸ ಕಲ್ಯಾಣ" ಚಿತ್ರದಲ್ಲಿ ಶಿವಣ್ಣನಿಗೊಂದು ಬಾಲ ನಟನ ಪಾತ್ರ. ಬಣ್ಣ ಬಳಿದುಕೊಂಡು ತನ್ನ ಸರದಿಗಾಗಿ ಬಾಲನಟ ಕಾಯುತ್ತಿದ್ದ. ಸೆಟ್‌ನಲ್ಲಿನ ಪ್ರಜ್ವಲ ಬೆಳಕು, ಗಜಿಬಿಜಿ ನೋಡಿ ನೋಡಿ ಹುಡುಗನಿಗೆ ಬೇಸರ ಬಂತು.

"ಆ್ಯಕ್ಟಿಂಗ್ ಯಾವಾಗ?" ಎಂದು ಅಮ್ಮನನ್ನು ಪೀಡಿಸತೊಡಗಿದ. ಬಣ್ಣ ಬಳಿದುಕೊಂಡ ತಕ್ಷಣ ಆ್ಯಕ್ಟಿಂಗ್ ಮುಗಿಯುತ್ತದೇನು? ಕಟ್, ಟೇಕ್, ಕಟ್‌ಗಳು ಎಷ್ಟೋ? ಹುಡುಗನಿಗೇನು ಗೊತ್ತು. ಬೆವರು ಹರಿಯಿತು. ಬೇಸರ ಇಮ್ಮಡಿಯಾಯ್ತು. ಹುಡುಗ ಸೆಟ್‌ನಿಂದ ಪರಾರಿಯಾದ!

ಆ್ಯಕ್ಟಿಂಗ್ ಬೇಡವೇ ಬೇಡ ಎಂದು ನಿರ್ಧರಿಸಿದ ಹುಡುಗ, ಕಾಲೇಜು ವಿದ್ಯಾಭ್ಯಾಸ ಮುಗಿಸಿ, ತಾನೇ ಇಷ್ಟಪಟ್ಟು ಫಿಲ್ಮ್ ಇನ್‌ಸ್ಟಿಟ್ಯೂಟ್ ಸೇರಿದ. ಕಲಾದೇವಿ ಒಲಿದಳು. ಅಂದು ಸೆಟ್‌ದಿಂದ ಓಡಿ ಹೋದ ಹುಡುಗ ಇಂದು ಸೂಪರ್‌ಸ್ಟಾರ್ ಪಟ್ಟಕ್ಕೇರುತ್ತಿದ್ದಾನೆಂದರೆ ಅಚ್ಚರಿಯ ಸಂಗತಿ ಅಲ್ಲವೇ ?

೧೯೮೫ ರಲ್ಲಿ ಚಲನಚಿತ್ರ ತರಬೇತಿ ಮುಗಿಸಿದ ಕೂಡಲೆ "ಆನಂದ್" ಮೂಲಕ ರಸಿಕರ ಮನ ಮುಟ್ಟಿದ ಶಿವರಾಜ್ ನಿಜಕ್ಕೂ ಅದೃಷ್ಟಶೀಲ.

"ಆನಂದ್" ಕನ್ನಡ ಚಿತ್ರ ರಂಗದಲ್ಲೇ ಗಳಿಕೆ ದೃಷ್ಟಿಯಿಂದ, ಪ್ರದರ್ಶನ ದೃಷ್ಟಿಯಿಂದ, ದಾಖಲೆ ನಿರ್ಮಿಸಿದ ಚಿತ್ರ.

ಬೆಂಗಳೂರು, ಮೈಸೂರುಗಳಲ್ಲದೆ ಚಿಕ್ಕಮಗಳೂರು, ತಿಪಟೂರು, ದಾವಣಗೆರೆ ಮುಂತಾದೆಡೆ ೨೫ ವಾರಗಳವರೆಗೆ 'ಆನಂದ್' ಸತತವಾಗಿ



ತುಂಬಿದ ಗೃಹಗಳಿಗೆ ಓಡಿದೆ. ಹೊಸ ನಟನೊಬ್ಬನ ಚಿತ್ರ ಹೀಗೆ ೨೫ ವಾರಗಳ ಕಾಲ ಕೆಲವು ಕೇಂದ್ರಗಳಲ್ಲಿ ಓಡಿರುವುದು ಒಂದು ದಾಖಲೆಯೇ.

ರಾಜ್ಯದ ಹನ್ನೊಂದು ಕೇಂದ್ರಗಳಲ್ಲಿ ೧೦೦ ದಿನಗಳ ವರೆಗೆ ಓಡಿದ ಚಿತ್ರ ಆನಂದ್. ರಥಸಪ್ತಮಿ ಸಹ ಕೋಲಾರ, ಬಳ್ಳಾರಿಯಂಥ ತೆಲುಗು ಪ್ರಾಬಲ್ಯದ ಕೇಂದ್ರಗಳಲ್ಲಿ ಸೂರು ದಿನಗಳನ್ನು ಕಂಡಿರುವುದು ಶಿವರಾಜ್‌ರ ಇಮೇಜ್‌ಗೆ ಒಂದು ಉದಾಹರಣೆ.

ನಿರುಪಮಾ ಆರ್ಟ ಕಂಬೈನ್ಸ್ ಅವರ ಆರನೇ ಚಿತ್ರ "ಶಿವ ಮೆಚ್ಚಿದ ಕಣ್ಣಪ್ಪ"ದಲ್ಲಿ ಶಿವರಾಜ್ ನಾಯಕನಾಗಿ ಅಭಿನಯಿಸಲಿದ್ದಾರೆ. ಅಕ್ಟೋಬರ ೩ ರಿಂದ ವಿಜಯ್ ನಿರ್ದೇಶನದಲ್ಲಿ ಚಿತ್ರೀಕರಣ ಆರಂಭ. ಇದರ ಸಂಗೀತ ನಿರ್ದೇಶಕರು ಟಿ. ಜಿ. ಲಿಂಗಪ್ಪನವರು. ಶಿವರಾಜ್‌ಕುಮಾರ್‌ಗೆ ಚಿತ್ರ ಜಗತ್ತಿನಲ್ಲಿ ತಂದೆಗೆ ಸಿಕ್ಕ ಸ್ಥಾನ ಲಭಿಸುತ್ತಿದೆ. ಆತ ಬೆಳೆಯಬಲ್ಲ ನಟ. ಉಳಿಯಬಲ್ಲ ನಟ.

ಡಾ|| ರಾಜ್‌ಕುಮಾರ್ ಅವರ ತಂದೆಯವರಾದ ದಿ|| ಪುಟ್ಟಸ್ವಾಮಯ್ಯನವರು ನಟರು. ಗುಬ್ಬಿ ಕಂಪನಿಯಲ್ಲಿದ್ದವರು. ತಮ್ಮ ಮಗ ಮುತ್ತುರಾಜ ಸಿನಿಮಾ ನಟನಾಗಿ ಪ್ರವರ್ಧಮಾನಕ್ಕೆ ಬರಬೇಕು ಎಂದು ಕನಸು ಕಂಡವರು.


ಡಾ|| ರಾಜ್ ಕನ್ನಡದ ವರನಟನೆಂಬ ಹೆಸರು ಗಳಿಸಿ ಉತ್ತುಂಗ ಶಿಖರಕ್ಕೆ ಏರಿದ್ದನ್ನು ಪುಟ್ಟಸ್ವಾಮಯ್ಯನವರು ನೋಡುವ ಭಾಗ್ಯ ಪಡೆಯಲಿಲ್ಲ.

ಆದರೆ ರಾಜ್‌ಕುಮಾರ್ ತಮ್ಮ ಪುತ್ರ, ತಮ್ಮ ದಾಖಲೆಗಳನ್ನೂ ಮುರಿಯುವಂಥವನಾಗಿ ಬೆಳೆಯುತ್ತಿರುವುದನ್ನು ನೋಡುವ ಭಾಗ್ಯ ಪಡೆದುಕೊಂಡಿದ್ದಾರೆ. ಇದಕ್ಕೆಲ್ಲಾ ಪಿತಾಜಿ ಪುಟ್ಟಸ್ವಾಮಯ್ಯನವರ ಆಶೀರ್ವಾದವೇ ಕಾರಣ ಎಂದು ಡಾ||ರಾಜ್ ಅಭಿಪ್ರಾಯ ಪಡುತ್ತಾರೆ.

ಡಾಕ್ಟರ್ ಆಗಿ, ವಿದೇಶಕ್ಕೆ ಹೋಗುವ ಆಸೆ ಹೊಂದಿದ್ದ ಶಿವಣ್ಣ ಇಂದು ಕನ್ನಡಿಗರ ಅಚ್ಚುಮೆಚ್ಚಿನ ನಟನಾಗುತ್ತಾನೆಂದು ನಾವು ಭಾವಿಸಿರಲಿಲ್ಲ ಎಂದು ಡಾ|| ರಾಜ್ "ಆನಂದ" ಚಿತ್ರದ ೨೫ ನೇ ವಾರದ ಉತ್ಸವ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಹೇಳಿದ್ದರು.


ಯಾವುದೇ ಪಾತ್ರವನ್ನು ಲೀಲಾಜಾಲವಾಗಿ ತನ್ನ ತಂದೆಯಂತೆ ನಿರ್ವಹಿಸಬಲ್ಲ ಸಾಮರ್ಥ್ಯ ಹೊಂದಿರುವ ಶಿವಣ್ಣ ತಂದೆಯಂತೆಯೇ ಸರಳ ಸ್ವಭಾವದ ಆತ್ಮೀಯ ವ್ಯಕ್ತಿ. ಅವರ ಸರಳ-ಸಜ್ಜನಿಕೆಯೇ ಕಲಾದೇವಿ ಅವರಿಗೆ ಒಲಿಯಲು ಮುಖ್ಯಕಾರಣ ಇರಬಹುದು.

ಮುಳ್ಳಹಳ್ಳಿ ಸೂರಿ



ನಮ್ಮ ಅಸಂಖ್ಯ ಅಭಿಮಾನಿಗಳಿಗೆ
ದೀಪಾವಳಿಯ ಶುಭಾಶಯಗಳು !

ಅತ್ಯುತ್ತಮ ಹಾಗೂ ಶ್ರೇಷ್ಠ ತರಗತಿಯ ಚಿತ್ರ ಪ್ರದರ್ಶಕರು



ಶ್ರೀ ಸಾಯಿ ಚಿತ್ರ ಮಂದಿರ

ಗೋಕಾಕ

ಮಾಲಕರು: ವಿನೋದ ಕೆ. ಶಹ

ಹಾಗೂ

ಕಾಮಧೇನು ಜನರಲ್ ಸ್ಟೋರ್ಸ್,
ಕಿರಾಣಿ ಅಂಗಡಿ

ಮಹಾಲಕ್ಷ್ಮಿ ಬಡಾವಣೆ,
ಗೋಕಾಕ




ಮಾಲಕರು: ವಿಜಯ ಕೆ. ಶಹ

ತಾರಾ

ಎತ್ತರಕ್ಕೇರಿದ ನಕ್ಷತ್ರ

ಹಳ್ಳಿಯೊಂದರ ಹುಡುಗಿಗೆ ನಮ್ಮೆಲ್ಲರ ಹಾಗೆ ಬೆಳ್ಳಿ ತೆರೆಯ ಕನಸುಗಳು ತೀರಾ ಸಹಜ. ಆದರೆ ಕನಸುಗಳನ್ನು ನೆಚ್ಚಿ, ನಕ್ಷತ್ರಗಳೆಡೆಗೆ ಕೈ ಚಾಚಿದ್ದು ಮಾತ್ರ ಈಕೆಯ ಬಹುದೊಡ್ಡ ಸಾಹಸ.



ನೆನ್ನೆ ಮನ್ನೆಯ ಹಾಗೆ ಅನ್ನಿಸುತ್ತದೆ. ಈ ಹುಡುಗಿ ನಮ್ಮ ಜಯನಗರ ಬಡಾವಣೆಯ ಇತರ ಚಂದ ಹೆಣ್ಣುಗಳ ಹಾಗೆ, ಸಂಜೆಯಲ್ಲಿ ದೊಡ್ಡಮ್ಮನ ಜತೆ ವಾಕಿಂಗ್ ಹೋಗುತ್ತಿದ್ದಳು; ತರಕಾರಿ ತರುತ್ತಿದ್ದಳು. ನಮ್ಮಲ್ಲಿನ ಪಡ್ಡೆ ಹುಡುಗರು ತಮ್ಮ ಮಹತ್ತರ ಗೋಷ್ಠಿಗಳಲ್ಲಿ ಕುತೂಹಲದಿಂದ ಈಕೆಯ ಬಗ್ಗೆ ಪಿಸುಗುಟ್ಟಿಕೊಳ್ಳುತ್ತಿದ್ದರು.

ಒಂದು ದಿನ ಇದ್ದಕ್ಕಿದ್ದ ಹಾಗೆ, ಈ ನೆರೆಮನೆಯ ಹುಡುಗಿಯ ಫೋಟೋಗಳು ಪತ್ರಿಕೆಯ ಸಿನೆಮಾ ಪುಟಗಳಲ್ಲಿ ಕಾಣಿಸತೊಡಗಿದ್ದೇ ನಮಗೆಲ್ಲ ಮತ್ತಷ್ಟು ನಿಗೂಢವಾಗಿಬಿಟ್ಟಳು.

ಬೆಂಗಳೂರು ಜಿಲ್ಲೆಯ ಆನೇಕಲ್ ಹತ್ತಿರದ ಹಳ್ಳಿಯೊಂದರ ಹುಡುಗಿಗೆ ನಮ್ಮೆಲ್ಲರ ಹಾಗೆ ಬೆಳ್ಳಿತೆರೆಯ ಕನಸುಗಳು ತೀರಾ ಸಹಜ. ಆದರೆ ಕನಸುಗಳನ್ನು ನೆಚ್ಚಿ, ನಕ್ಷತ್ರಗಳೆಡೆಗೆ ಕೈ ಚಾಚಿದ್ದು ಮಾತ್ರ ಈಕೆಯ ಬಹುದೊಡ್ಡ ಸಾಹಸ. ಇಂಟರ್ ಓದುತ್ತಿದ್ದ ತಾರಾ, ಓದಿಗೆಲ್ಲ ವಿದಾಯ ಹೇಳಿ, ಈಜುವುದು, ಭರತ ನಾಟ್ಯ ಮುಂತಾಗಿ ತಲೆ ಕೆಡಿಸಿಕೊಳ್ಳುತ್ತಿರುವಾಗಲೇ, ಕನ್ನಡದ ಈ ಜಪ್ಪನೆ ನೆರೆ ರಾಜ್ಯ ತಮಿಳುನಾಡಲ್ಲಿ ಮನೆಮಾತಾಗಿ ಬಿಟ್ಟಳು. ತಾರಾ ಪಟ್ಟದ ಈ ಮೊದಲ ಜಿಗಿತದ ಬಗ್ಗೆ ತಾರಾ ನನ್ನಲ್ಲಿ ಹೇಳಿಕೊಳ್ಳುವಾಗ ವರ್ಷಗಳೇ ಸಂದಿದ್ದರೂ, ಆ ಅನುಭವದ ಬಗ್ಗೆ ಹುಡುಗುತನದ ಆಕರ್ಷಣೆ, ಭಯಗಳಿನ್ನೂ ಮಾಸಿರಲಿಲ್ಲ. ಮದರಾಸ್‌ನ ಹತ್ತಿರದ ಹಳ್ಳಿಯೊಂದರಲ್ಲಿ, ಆಕೆಯ ಮೊದಲ ತಮಿಳು ಚಿತ್ರ 'ಇಲಿಗೆಯುಂ ಬರು ಗಂಗೈ' ಸಿನಿಮಾದ ಶೂಟಿಂಗ್. ಅದರ ನಾಯಕಿ ತಾರಾ. ಹಳ್ಳಿಯ ಜನಕ್ಕೆ ಸಿನಿಮಾ, ಸಿನಿಮಾ ಜನದ ಬಗ್ಗೆ ಮೆಚ್ಚುಗೆ, ಕುತೂಹಲ. ಹತ್ತಿರದ ಹಳ್ಳಿಗಳಿಂದೆಲ್ಲ ಜನ ಬುತ್ತಿ ಕಟ್ಟಿಕೊಂಡು ಬರುತ್ತಿದ್ದರಂತೆ. ಅವರಲ್ಲೊಬ್ಬ ಹುಡುಗಿ ಸುಮಾರು ದೂರದಿಂದ ಸೈಕಲ್‌ನಲ್ಲಿ ಬರುತ್ತಿದ್ದಳು. ಪ್ರತಿನಿತ್ಯ ಒಂದು ದಂಡೆ ಹೂ ಅವಳ ಕೈಯಲ್ಲಿ. ಅದನ್ನು ತಾರಾ ಕೈಗಿಡುವಾಗ ಏನೋ ಧನ್ಯತೆಯ ಭಾವ. ಶೂಟಿಂಗ್ ಎಲ್ಲ ಮುಗಿದು, ಕೊನೆಯ ದಿನ ಪ್ಯಾಕಪ್ ಮಾಡಿದಾಗ ಹೆಸರು ಕೂಡ ಸ್ಪಷ್ಟ ಗೊತ್ತಿರದ ಆ ತಮಿಳು ಹುಡುಗಿ ಬಿಕ್ಕಿ ಬಿಕ್ಕಿ ಅತ್ತದ್ದು ತಾರಾಗೆ ಇನ್ನೂ ಹಸಿ ನೆನಪು. ಸಿನಿಮಾದ ಭ್ರಮಾ ಲೋಕದಲ್ಲಿಯೂ ಇಂಥ ಮಧುರ, ಮಾನವೀಯ ಘಟನೆಗಳು ನಡೆದುಬಿಡುತ್ತವೆ. ಹಸಿರಾಗಿ ಚಿರಕಾಲ ಉಳಿಯುತ್ತವೆ. ತಾರಾ, ತನ್ನ ಮೊದಲ ಅಭಿಮಾನಿಯ ಬಗ್ಗೆ ನೆನಪು ಕೆದಕಿ ಹೇಳಿದ್ದು ಹೀಗೆ. ತಮಿಳಿನಲ್ಲಿ ನಾಯಕಿ ಪಟ್ಟ ಗಿಟ್ಟಿಸಿದ ಕನಸುಗಣ್ಣಿನ ಈಕೆಯನ್ನು ಕನ್ನಡದ ಯಾರೂ ಕರೆದು ಅಗ್ರಪೀಠ ನೀಡಲಿಲ್ಲ. ಅದರಿಂದಾಗಿ ನಿರಾಸೆಯಾದರೂ ಎದೆಗುಂದದ ಈ ನಟಿ, ಪಾಲಿಗೆ ಬಂದದ್ದು ಪಂಚಾಮೃತ ಎಂದು ಒಪ್ಪಿಕೊಳ್ಳುತ್ತಾ, ನಾಯಕನ ತಂಗಿಯಾಗಿ, ಮತ್ತೇನೋ ಆಗಿ ಅಭಿನಯಿಸುತ್ತಲೇ ಹೋದಳು.

ಮೊಟ್ಟ ಮೊದಲ ಸಲ ರಾಜ್ ಕುಮಾರ್ ಕ್ಯಾಂಪ್‌ನಿಂದ ಅಭಿನಯಕ್ಕೆ ಕರೆ ಬಂದಾಗ ಎಂಥ ಹಿಗ್ಗು! 'ಸರ್, ನನಗೆ ತುಂಬಾ ಅಂದ್ರೆ ತುಂಬಾ ಸಂತೋಷ ಆಗಿದೆ...!! ಎಂದಳು. ಶಿವರಾಜ್ ಕುಮಾರ ಅಭಿನಯದ 'ಆನಂದ್' ಚಿತ್ರದಲ್ಲಿ ಒಂದು ಪುಟ್ಟ ಪಾತ್ರ. ಕರಿವೆಣ್ಣಿನದು. ಅದರ ಹಿಂದೆಯೇ ರಾಜ್‌ಕುಮಾರ ಅಭಿನಯದ 'ಗುರಿ' ಚಿತ್ರದಲ್ಲೂ ಈಕೆಗೆ ಒಳ್ಳೆಯ ಪಾತ್ರ ದಕ್ಕಿದ ಸುದ್ದಿ ಬಂತು.

'ಆನಂದ್' ಸಿನಿಮಾ ಬಿಡುಗಡೆಯಾದಾಗ ಥಿಯೇಟರ್‌ನಲ್ಲಿನ ಹೆಂಗಳೆಯರಿಂದ ಕೇಳಿದ ವಿಮರ್ಶೆ ನನ್ನನ್ನು ಯೋಚಿಸಲು ಪ್ರೇರಿಸಿತು. 'ಈ ಹುಡುಗಿ ರೋಲ್ ಯಾಕೋ ಸರೀ ಹೋಗಲಿಲ್ಲ ಬಿಡು. ಅಂಥಾ


HIBA
Esquire
TIME VP
Magnum
Gold
IT
EXCEL
EMPIRE
BOMBINO
INDUS
SHALIMAR
MEDIA
HORSE
VP
ORIGINAL VIDEO CASSETTES
WITH COPYRIGHT CENSOR CERTIFICATE
NOW
HINDI, ENGLISH, KANNADA,
TAMIL, TELUGU, MALAYALAM
GUJRATI MARATHI
MOVIES ORIGINAL VIDEO CASSETTES
AVAILABLE UNDER ONE ROOF --
VISIT:
REST-WELL
KOPPIKAR ROAD, HUBLI PH: 66229
STATION ROAD, GADAG PH: 8689
REST-WELL ELE. PVT. LTD.
OPP: WOODLANDS KESHWAPUR, HUBLI PH 65417
Curb Piracy, See Original, Enjoy Original
WAVE
REST-WELL
MANTO VIDE
D PRODUCT
Star video
STALLONE
GOLD
VP HIBA
TNT
MEDIA
MAGNUM
BOMBINO
WAVE TNT
HORSE
GANESH ADS

ಒಳ್ಳೇ ಹುಡುಗೀಗೆ ಇಂಥಾ ಕೆಟ್ಟ ಪಾತ್ರಾನೇ...!" ಪ್ರೇಕ್ಷಕರ, ಅದರಲ್ಲೂ ಹೆಂಗಳೆಯರ ಮನಸ್ಸಿನಲ್ಲಿ 'ಭಾರತೀಯ ನಾರಿ' ಯಾಗಿ ಅಚ್ಚೊತ್ತಿ ಬಿಟ್ಟಿದ್ದ ತಾರಾನ್ನ ಯಾರೂ ದುಷ್ಟ ಪಾತ್ರಗಳಲ್ಲಿ ಒಪ್ಪಿಕೊಳ್ಳಲು ತಯಾರಿರಲಿಲ್ಲ.




ಇದೇ ಯೋಚನೆ ತಲೆ ತುಂಬಾ ತುಂಬಿಕೊಂಡು, ತಾರಾನ ಮನೆಗೆ ಹೋದಾಗ ಸಂಭ್ರಮದಿಂದ ಸ್ವಾಗತಿಸಿದಳು. ಅಭಿಮಾನಿಗಳ ಪತ್ರಗಳಿಗೆ ತನ್ಮಯತೆಯಿಂದ ಉತ್ತರಿಸುತ್ತಿದ್ದ ತಾರಾ ಕೈಯಲ್ಲಿನ್ನೂ ಪೆನ್ ಹಿಡಿದೇ ಇದ್ದದ್ದು ಕಂಡು ರೇಗಿಸುವ ಮನಸ್ಸಾಯಿತು. "ಏನು ತಾರಾ ದೇವಿಯವರೇ ?" ಎಂದಾಗ ಹುಸಿಮುನಿಸು ತೋರಿ, "ಹೀಗೆಲ್ಲಾ ಅಂದ್ರೆ ನಾನು ಮಾತೇ ಆಡೋಲ್ಲ" ಎನ್ನುತ್ತಾ ಅಭಿಮಾನಿಗಳು ಬರೆದಿದ್ದ ಪತ್ರಗಳನ್ನು ನನ್ನ ಮುಂದೆ ತೆರೆದಿಟ್ಟಳು. ಈಗ ಫೋನ್ ಬೇರೆ ಬಂದಿತ್ತು. ಬೆಳೆಯುತ್ತಿರುವ ಲಕ್ಷಣ.

ಆದರೆ ನಮ್ಮೊಡನೆ ಮಾತ್ರ ಎಂದಿನದೇ ಆತ್ಮೀಯತೆ, ಮಾತು. ತನ್ನ ಸಮಸ್ಯೆ, ಸಾಧನೆ ಮುಂತಾದವುಗಳನ್ನು ವಿವರಿಸಿ ಮನಸ್ಸು ಹಗುರಗೊಳಿಸಿಕೊಳ್ಳುವ ರೀತಿ ಮಾತ್ರ ಬದಲಾಗಿರಲಿಲ್ಲ. ಇದು ಕೇವಲ ಒಂದು ವರ್ಷದ ಹಿಂದಿನ ಮಾತು. ಈ ಒಂದು ವರ್ಷದಲ್ಲಿ ಆಕೆ ಮತ್ತಷ್ಟು ಮೇಲೇರಿದ್ದಾಳೆ. 'ತಾರಾ' ಅಭಿನಯದ ಚಿತ್ರಗಳು ಹಣ ವಾಪಸ್ ತರಬಲ್ಲವು ಎನ್ನುವ ಮಾತು ಕೂಡ ಗಾಂಧೀ ನಗರದಲ್ಲಿ ಕೇಳಬರುತ್ತಿದೆ. ತಾರಾಪಟ್ಟದ ಮೆಟ್ಟಿಲುಗಳನ್ನು ನಿಧಾನ ಏರುತ್ತ ಹೋದಾಕೆ ಈಕೆ. ಐದಾರು ತಿಂಗಳ ಹಿಂದೆ ನನ್ನ ಗೆಳೆಯನೊಬ್ಬ ಒಂದು ಪ್ರಶ್ನೆ ಕೇಳಿದ. "ತಾರನ್ನ ನಂಬಬಹುದೇ ?" ನನ್ನದು ಕಕ್ಕಾಬಿಕ್ಕಿಯಾಗುವ ಸರದಿ. ಕನ್ನಡದ ಈ ತಾರೆ ಕಲಾವಿದ ಎನಿಸಿಕೊಂಡ ನನ್ನ ಗೆಳೆಯನನ್ನು ಪ್ರೀತಿಸುತ್ತಿದ್ದಾಳೆ. ಮದುವೆಯಾಗುವ ನಿಶ್ಚಯ ಕೂಡ ಮಾಡಿದ್ದಾಳೆ ಎನ್ನುವಂಥ ಸಂಗತಿಗಳ ಬಗ್ಗೆ ಯಾವತ್ತೂ ನಿಖರವಾಗಿ ಏನನ್ನೂ ಹೇಳುವುದು ನನಗೆ ಸಾಧ್ಯವಿರಲಿಲ್ಲ. ಪ್ರೇಮ ಪ್ರೀತಿಯಂಥ ಕಟ್ಟುಗಳಿಂದ ಈಕೆಯನ್ನು ವ್ಯಕ್ತಿಯೊಬ್ಬ ಬಂಧಿಸುವುದಕ್ಕಿಂತ, ಚಿತ್ರರಂಗದ ಕಲೆಯ ಚೌಕಟ್ಟಿನಲ್ಲಿ ಈಕೆ ಬೆಳೆಯುತ್ತ ಹೋಗಬೇಕು ಎನ್ನುವ ಆಶಯವನ್ನು, ಅವ್ನ ಗೆಳೆಯನ ಮುಂದೆ, ಅದೂ ಭಾವನಾತ್ಮಕವಾಗಿ ತೊಡಗಿಕೊಂಡವನ ಮುಂದೆ ಹೇಳುವುದು ಹೇಗೆ ! ನನ್ನ ಆಶಯ ತಿಳಿಯಿತೇನೋ ಎನ್ನುವಂತೆ ಭ್ರಮಿತ ಭಾವನೆಗಳನ್ನು ನಾಜೂಕಾಗಿ ಸರಿಸಿ, ತನ್ನನ್ನು ಮತ್ತೆ ಚಿತ್ರರಂಗಕ್ಕೆ ತೆತ್ತುಕೊಂಡಳು ತಾರಾ. ಕೆಲವೇ ದಿನಗಳಲ್ಲಿ ಈ ಪ್ರೇಮ (!) ಮುರಿದು ಬಿದ್ದ ಸುದ್ದಿ ಕೂಡ ವರದಿಯಾಯಿತು. ತಾರಾನ ಬಗ್ಗೆ ಎದ್ದ ಈ ಮೊಟ್ಟ ಮೊದಲ ಹಗರಣ ಮಾತ್ರ ಪತ್ರಿಕೆಗಳಿಗೆ ಹೂರಣವಾಯಿತು.

ಇದೆಲ್ಲವನ್ನು ಮೀರಿ, ವೈಯಕ್ತಿಕ ಬದುಕಿನ ಆಸೆಗಳನ್ನೂ ತುಳಿದಿಟ್ಟು, ಕನ್ನಡದ ಅಗ್ರಮಾನ್ಯ ನಾಯಕಿಯಾಗುವ ಹಂಬಲ ತಾರಾಗೆ. ಅದನ್ನು ಆಕೆ ಹಲವಾರು ಬಾರಿ ನನ್ನಲ್ಲಿ ಹೇಳಿದ್ದುಂಟು. ಆದರೆ ಕನ್ನಡದ ಜಾಯಮಾನವೇ ವಿಚಿತ್ರ. ಏಳು ಬೀಳುಗಳನ್ನು ಇಲ್ಲಿ ಲೆಕ್ಕಾಚಾರವಾಗಿ ಹೇಳುವುದು ಕಷ್ಟ. ಕನ್ನಡದ ಸಿನಿಮಾಗಳಲ್ಲಿ ಅಭಿನಯಿಸುತ್ತಿರುವಾಗಲೇ ಕೆಲವು ತಮಿಳು ಸಿನಿಮಾಗಳಲ್ಲೂ ಅಭಿನಯಿಸುತ್ತಾ ಬೆಂಗಳೂರು, ಮದರಾಸು ಎಂದು ಸುತ್ತುತ್ತಿರುವ ತಾರಾ ಬಗ್ಗೆ ಗುಲ್ಲೆದ್ದಿದೆ. "ಈಕೆ ಕನ್ನಡ ಕಡೆಗಣಿಸುತ್ತಿದ್ದಾಳೆ" ಎಂದು ಹುಯಿಲು. ಈ ಎಲ್ಲ ಹುಯಿಲು, ಒತ್ತಡಗಳನ್ನು ಮೀರಿ ಎತ್ತರಕ್ಕೇರುವ ಛಲ. ಇಂದಲ್ಲ ನಾಳೆ, ಕನ್ನಡ ಚಿತ್ರರಂಗದ ಅಗ್ರಮಾನ್ಯ ನಾಯಕಿಯಾಗುವ ಬಯಕೆ, ಸಿದ್ಧತೆ ಈಕೆಯದು. ಬರೀ ಹುಚ್ಚು ಬಯಕೆಯಲ್ಲ, ಅಂಥ ಸತ್ವವೂ ಇದೆ ಈ ನಟಿಯಲ್ಲಿ.

—ಸುಹಾಸ್


ದೀಪಾವಳಿಯು ಸರ್ವರಿಗೂ ಶುಭದಾಯಕವಾಗಲಿ
SUITINGS WITH CERTAIN STYLE
FOR ALL OCCASIONS
ಮಾರುತಿ
MARUTI
DIGJAM
V.L.X.INDIA LTD.
AT
MARUTI
Koppikar Road, HUBLI-580020.
KBK


ದೀಪಾವಳಿಯ
ಶುಭಾಶಯಗಳು
Prabhat
ROLLING
SHUTTERS
OUR SECRET IS NOTHING,
BUT THE QUALITY
GIVES YOU
SATISFACTION.
MANUFACTURERS
ESTD-1945
Prabhat & COMPANY
ROLLING SHUTTERS PVT. LTD.
REGD OFFICE JAYACHAMARAJ NAGAR HUBLI-580 020.
PHONE 63303 GRAMS "PRABHATCO"
FACTORY SHED NO. D-22 & PLOT NO
INDUSTRIAL ESTATE HUBLI-580 030. PHONE 62514
YOUR SAFETY IS OUR TOP PRIORITY

ವಿವೇಚನೆ :

'ಬ್ರಿಜ್ ಸಿನಿಮಾಗಳು ಇಂದು ದಡ ಕಳೆದುಕೊಂಡಿವೆ'

ಕಾಶೀನಾಥ್ :

ಕನ್ನಡ ಚಿತ್ರರಂಗದಲ್ಲಿ ತುಸು ಎಚ್ಚರಿಕೆಯಿಂದ ಗಮನಿಸಬೇಕಾದ ವ್ಯಕ್ತಿ.

'ಅ'ಕಾರಪ್ರಿಯರಾದ ಇವರ "ಅಪರೂಪದ ಅತಿಥಿಗಳು", "ಅಪರಿಚಿತ", "ಅನುಭವ", "ಅನಾಮಿಕ" ಚಿತ್ರಗಳು ಕಾಶಿಗೆ ಕನ್ನಡದಲ್ಲೊಂದು ವಿಶಿಷ್ಟಸ್ಥಾನ ಕಲ್ಪಿಸಿಕೊಟ್ಟಿವೆ. ವಸ್ತುವಿನ ಆಯ್ಕೆಯಲ್ಲಿ ಹೊಸತನ. ನಿರೂಪಣೆಯಲ್ಲಿ ತಮ್ಮದೇ ಭಾಷೆ, ಹೊಸ ಮುಖಗಳನ್ನೇ ಆಯ್ದುಕೊಳ್ಳುವ ಧೈರ್ಯ, ಚಿತ್ರದ ಗತಿಯಲ್ಲಿ ಲವಲವಿಕೆ – ಕಾಶೀನಾಥ್ ಚಿತ್ರದಲ್ಲಿ ಮೆಚ್ಚುಗೆಯ ಅಂಶಗಳು.

ಗಂಭೀರವಾಗಿ ಯೋಚಿಸಬಲ್ಲ, ಮತ್ತೆ ತಮ್ಮ ಚಿಂತನೆಗಳನ್ನು ಕಾರ್ಯಗತಗೊಳಿಸುವ ತಾಕತ್ತು ಇರುವ ಕನ್ನಡದ ಕೆಲವೇ ನಿರ್ದೇಶಕರಲ್ಲಿ ಕಾಶೀನಾಥ್ ಒಬ್ಬರು. ನಮ್ಮಲ್ಲಿನ 'ಬ್ರಿಜ್' ಸಿನಿಮಾಗಳ ಪರಿಕಾರ ಇವರು ಎನ್ನುವುದುಂಟು. ಈಗ 'ಬ್ರಿಜ್' ಚಳವಳಿಯಲ್ಲಿ ಉಳಿದುಕೊಂಡಿರುವವರೂ ಇವರೊಬ್ಬರೇ.

ಕನ್ನಡದ "ಬ್ರಿಜ್" ಸಿನಿಮಾಗಳ ನೆಲೆ ಹಿನ್ನೆಲೆ, ಮುಂದಿನದಾರಿ ಕುರಿತು ಕಾಶೀನಾಥ್ ಇಲ್ಲಿ ವಿಶ್ಲೇಷಿಸಿದ್ದಾರೆ.



ಹೊಸತನ್ನು ಸೃಷ್ಟಿಸಲು ಸಾಧ್ಯವಿಲ್ಲ. ಹಿಂದೆಂದೋ ಖುಷಿ ಕೊಟ್ಟ ಒಂದು ಸಿನಿಮಾ, ಎಲ್ಲೋ ಕಂಡ ಘಟನೆಗಳು, ಸ್ವಂತ ಅನುಭವ–ಇವಿಷ್ಟು ಒಳ ಮನಸ್ಸಿನಲ್ಲಿ ಸುಪ್ತವಾಗಿರುತ್ತವೆ ಅಥವಾ ನಮ್ಮ ಮೇಲೆ ಪ್ರಭಾವ ಬೀರಿರುತ್ತವೆ. ಇದಕ್ಕೆ ಕಲ್ಪನೆಯನ್ನು ಬೆರೆಸಿ ಪುನಃ ಸೃಷ್ಟಿಸುವುದೇ ಸಿನಿಮಾ. ಆದರೆ ಇದು ಅನುಕರಣೆಯಲ್ಲ.

ಬ್ರಿಜ್ ಚಿತ್ರಗಳು ಯಾವಾಗ? ಹೇಗೆ? ಶುರುವಾಯಿತೆಂದು ನಿರ್ದಿಷ್ಟವಾಗಿ ಹೇಳುವುದು ಕಷ್ಟವೇನೋ. ಒಂದೇ ರೀತಿ, ಮಾಮೂಲೀ ಜಾಡಿನಲ್ಲಿ (ಬೀಟನ್-ಟ್ರ್ಯಾಕ್) ಚಿತ್ರಗಳು ತಯಾರಾಗುತ್ತಿದ್ದ ಸಮಯದಲ್ಲಿ ಪೂರ್ಣ ಭಿನ್ನ ದೃಷ್ಟಿಯಿಂದ ತಯಾರಾದ ಚಿತ್ರಗಳನ್ನು 'ಆಫ್-ಬೀಟ್' ಅಥವಾ 'ಪ್ರಾಯೋಗಿಕ ಚಿತ್ರ'ಗಳೆಂದು ಕರೆಯಲಾಯಿತು. ವ್ಯಾಪಾರೀ ಅಥವಾ ಕಮರ್ಶಿಯಲ್ ಚಿತ್ರಗಳ ಗಮನ ಹಣ ಸಂಪಾದನೆಯ ಕಡೆಗೆ. ಆದರೆ 'ಆಫ್– ಬೀಟ್' ಚಿತ್ರಗಳು ಯಾವುದೇ ಒಂದು ಸಾಮಾಜಿಕ ಸಮಸ್ಯೆಯ ಬಗ್ಗೆ ಮಾಡಿದ ನೈಜ ಚಿತ್ರಣ. ಇಲ್ಲಿ ವ್ಯಾವಹಾರಿಕ ದೃಷ್ಟಿ ಜೊತೆಗೆ ಆರ್ಥಿಕ ಭದ್ರತೆಯೂ ಕಡಿಮೆ.

ಈ ಎರಡೂ ಬಗೆಯ ಚಿತ್ರಗಳ ನಡುವಣ ಅಂತರ ಜಾಸ್ತಿ ಆಗುತ್ತಾ ಹೋದಾಗ ವ್ಯಾವಹಾರಿಕ ದೃಷ್ಟಿಯನ್ನು ಜೊತೆಗೆ ವಿಭಿನ್ನತೆಯನ್ನು ಕೊಡಬೇಕೆಂಬ ಉದ್ದೇಶದಿಂದಲೂ ಹುಟ್ಟಿದ ಮಧ್ಯವರ್ತಿಚಿತ್ರಗಳನ್ನು 'ಬ್ರಿಜ್ ಚಿತ್ರಗಳು' ಎಂದು ಕರೆಯಬಹುದು. ಯಾಕೆಂದರೆ ಇವುಗಳು ಕಮರ್ಶಿಯಲ್ ಮತ್ತು 'ಆಫ್ ಬೀಟ್' ಚಿತ್ರಗಳ ನಡುವಣ ಸೇತುವೆಯಿದ್ದಂತೆ. ಜೊತೆಗೆ ಈ ಎರಡು ಪ್ರಕಾರದ ಚಿತ್ರಗಳ ಕೆಲವು ಗುಣಗಳನ್ನು 'ಬ್ರಿಜ್' ಚಿತ್ರಗಳಲ್ಲಿ ಕಾಣಬಹುದು.

ಚಿತ್ರರಂಗದ ಹುಟ್ಟಿನಿಂದ ಚಿತ್ರಗಳ ತಯಾರಿಕೆಯ ರೀತಿ, ವಸ್ತು ಸ್ವರೂಪಗಳು ಬದಲಾಗುತ್ತಲೇ ಬಂದಿವೆ. ಆದರೆ ಇದರಿಂದ ತೀರಾ ಭಿನ್ನವಾದ ಒಂದು ಚಿತ್ರ ಬಂದಾಗ 'ಆಫ್ ಬೀಟ್' ನಂತಹ ಕವಲುಗಳು ಪ್ರಾರಂಭವಾಗುತ್ತವೆ. ಈ ರೀತಿಯ ಒಂದು ಕವಲು 'ಸಂಸ್ಕಾರ' ಚಿತ್ರದಿಂದ ಕನ್ನಡದಲ್ಲಿಯೂ ಶುರುವಾಯಿತೆನ್ನ



ಬಹುದು. 'ಕಾಡು' 'ವಂಶವೃಕ್ಷ', 'ಘಟಶ್ರಾದ್ಧ','ಚೋಮನ ದುಡಿ' 'ಪಲ್ಲವಿ', 'ತಬ್ಬಲಿಯು ನೀನಾದೆ ಮಗನೆ', ಮುಂತಾದವು ಅದೇ ಸಾಲಿಗೆ ಸೇರಿದ ಚಿತ್ರಗಳು. ಆದರೆ ಇವುಗಳಲ್ಲಿ ಹೆಚ್ಚಿನ ಚಿತ್ರಗಳು ಪ್ರೇಕ್ಷಕನನ್ನು ತಲುಪದೇ ಹೋದುದರಿಂದ ಆರ್ಥಿಕವಾಗಿ ಸೋಲನ್ನನುಭವಿಸಿದವು.


ಸಾಮಾನ್ಯ ಪ್ರೇಕ್ಷಕನ ರುಚಿ ಮನರಂಜನೆಯನ್ನು ಗಣನೆಗೆ ತೆಗೆದುಕೊಂಡು ವಿಭಿನ್ನತೆಯ ಜಾಡಿನಲ್ಲಿ ಹೊರಟಂತಹ ಮಧ್ಯಮ ಮಾರ್ಗದ ಚಿತ್ರಗಳ ಆರಂಭ ಬಹುಶಃ ನನ್ನ ಮೊದಲ ಚಿತ್ರ 'ಅಪರೂಪದ ಅತಿಥಿಗಳು' ಚಿತ್ರದಿಂದ ಇರಬಹುದೇನೋ ಎಂದು ಅನಿಸುತ್ತದೆ. ಭಾರೀ ಕಥೆಯ ಹಂದರವಿಲ್ಲದೆ, ತೆಳುವಾದ ಒಂದು ಎಳೆಯ ಮೇಲೆ ಹೆಣೆದಂತಹ, ಪೂರ್ಣ ಹೊಸ ಮುಖಗಳೊಂದಿಗೆ, ಹಾಡುಗಳಿಲ್ಲದೆ ತಯಾರಾದ, ವಿಭಿನ್ನ, ಸಂಪೂರ್ಣ ಹಾಸ್ಯಮಯ ಚಿತ್ರ ಇದು ಆನಂತರ ಬಂದ ಲಂಕೇಶರ 'ಅನುರೂಪ', ನನ್ನ ಚಿತ್ರ 'ಅಪರಿಚಿತ' - 'ಬ್ರಿಜ್' ಚಿತ್ರಗಳು ವ್ಯಾವಹಾರಿಕವಾಗಿಯೂ ಯಶಸ್ವಿಯಾಗಬಲ್ಲವು ಎಂಬುದನ್ನು ನಿರೂಪಿಸಿತು. ಆಮೇಲೆ ಆ ಸಾಲಿನಲ್ಲಿ 'ಚಿತೆಗೂ ಚಿಂತೆ', 'ಕೋಕಿಲಾ', 'ಮಿಂಚಿನ ಓಟ', 'ಪಲ್ಲವಿ- ಅನುಪಲ್ಲವಿ', 'ಆ್ಯಕ್ಸಿಡೆಂಟ್', 'ಅನ್ವೇಷಣೆ', ಮೊದಲಾದ ಹಲವಾರು ಚಿತ್ರಗಳು ಬಂದವು. ಆದರೆ ಬಾಕ್ಸಾಫೀಸ್ ಗಳಿಕೆಯಲ್ಲಿ ವ್ಯಾಪಾರೀ ಚಿತ್ರಗಳನ್ನು ಮೀರಿಸಬಲ್ಲವು ಎಂದು ನಿರೂಪಿಸಿದ ಚಿತ್ರ- 'ಅನುಭವ'.

ಅನುಕೂಲತೆಗಳು– ಅಪಾಯಗಳು


'ಬ್ರಿಜ್' ಚಿತ್ರಗಳಲ್ಲಿ ಅದ್ದೂರೀ ಸೆಟ್‌ಗಳು ಡ್ಯಾನ್ಸ್‌ಗಳು ಇರುವುದಿಲ್ಲ. ಹಾಗಾಗಿ ನಿರ್ಮಾಣ ವೆಚ್ಚ ದುಬಾರಿಯಾಗುವುದಿಲ್ಲ. ದೊಡ್ಡ 'ಸ್ಟಾರ್'ಗಳೂ ಬೇಕಿಲ್ಲದಿರುವುದರಿಂದ ಚಿತ್ರೀಕರಣವೂ ಬೇಗ ನಡೆಯುತ್ತದೆ. ಈ ಚಿತ್ರಗಳು ಜನಗಳಿಗೆ ಹಿಡಿಸಿದ ಪಕ್ಷದಲ್ಲಿ ಎರಡೂ ವರ್ಗದ ಜನಗಳು ಬೆಂಬಲಿಸಬಹುದು. ಆದರೆ ಹಿಡಿಸದೇ ಇದ್ದಲ್ಲಿ ಮಾತ್ರ ಚಿತ್ರದ ಸ್ಥಿತಿ ತ್ರಿಶಂಕು.. ವ್ಯಾಪಾರಿ ಚಿತ್ರಗಳು 'ಎ' ಕೇಂದ್ರಗಳಲ್ಲಿ ಓಡದಿದ್ದರೂ 'ಬಿ' ಮತ್ತು 'ಸಿ' ಕೇಂದ್ರಗಳಲ್ಲಿ ದುಡ್ಡು ಮಾಡುತ್ತವೆ. ಆದರೆ ಮಧ್ಯಮ ವರ್ಗದ ಚಿತ್ರಗಳು ಜನಪ್ರಿಯವಾದಲ್ಲಿ 'ಎ' ಕೇಂದ್ರದಲ್ಲಿ ಒಂದಿಷ್ಟು, 'ಬಿ', 'ಸಿ' ಕೇಂದ್ರಗಳಲ್ಲಿ ಸ್ವಲ್ಪ ಹಣ ಮಾಡಬಹುದು. ಇಲ್ಲದೇ ಇದ್ದಲ್ಲಿ ಎರಡೂ ಕಡೆ ಇಲ್ಲ. ಹೀಗಿರುವಾಗ ವ್ಯಾಪಾರಿ ಚಿತ್ರಗಳಿಗಿರುವ ಗ್ಯಾರಂಟಿ, 'ಬ್ರಿಜ್' ಚಿತ್ರಗಳಿಗಿಲ್ಲ.

ಟಿ. ವಿ. ಮತ್ತು ವಿಡಿಯೋ ಪ್ರಭಾವ

ಇತ್ತೀಚಿಗೆ ವಿಡಿಯೋ ಮತ್ತು ಟಿ. ವಿ. ಗಳಿಂದ ಸಂತೃಪ್ತಿ ಹೊಂದುತ್ತಿರುವ 'ಎ' ವರ್ಗದ ಜನಗಳು ಚಿತ್ರಮಂದಿರಗಳಿಗೇ



BALAJI



H
HL

ಎರುತ್ತಿಲ್ಲ. ಅವಲ್ಲದೆ ಹೀರೆಲ್ಲಾ ಬೆಲೆಗಳು ಏರಿದ ರೀತಿಯಲ್ಲೇ ಥಿಯೇಟರ್ ಬಾಡಿಗೆ ಮತ್ತು ನಿರ್ಮಾಣ ವೆಚ್ಚಗಳು ಹೆಚ್ಚಾಗಿರುವುದರಿಂದ ಕಲಾತ್ಮಕ ಚಿತ್ರಗಳು ಸಾರ್ವಜನಿಕವಾಗಿ ತೆರೆಕಾಣುವ ಅವಕಾಶಗಳೇ ಕಡಿಮೆಯಾಗುತ್ತಿದ್ದರೂ ಅವು ದೂರದರ್ಶನದಿಂದಾಗಿ ಸಾಕಷ್ಟು ಆರ್ಥಿಕ ಲಾಭ ಗಳಿಸುತ್ತಿರುವುದರಿಂದ ಅವು ಟಿ. ವಿ. ಮೂಲಕವೇ ತೆರೆಕಾಣುತ್ತಿವೆ.

ದಡ ಕಳಕೊಂಡ 'ಬ್ರಿಜ್'

ಇಂತಹ ಸನ್ನಿವೇಶದಲ್ಲಿ ಪ್ರೇಕ್ಷಕನ ಬುದ್ಧಿಮಟ್ಟಕ್ಕೆ ಸರಿಯಾಗಿ ಮನರಂಜನೆಯನ್ನೇ ಪ್ರಮುಖವಾಗಿಟ್ಟುಕೊಂಡು ಬರುವಂತಹ ವ್ಯಾಪಾರೀ ಚಿತ್ರಗಳ ಹಾವಳಿಯೇ ಜಾಸ್ತಿಯಾಗಿದೆ. ಹಾಗಾಗಿ 'ಬ್ರಿಜ್' ಚಿತ್ರಗಳು ಒಂದು ದಡವನ್ನೇ ಕಳಕೊಂಡ ಸೇತುವೆಯಂತಾಗಿ ಸೇತುವೆಯ ಮೇಲಿದ್ದವರೆಲ್ಲಾ ಇನ್ನೊಂದು ದಡ ಸೇರಬೇಕಾದ ಪರಿಸ್ಥಿತಿ ಬಂದಿದೆ. ಅಂದರೆ ಒಂದು ರೀತಿಯಲ್ಲಿ 'ಬ್ರಿಜ್' ಚಿತ್ರಗಳು ಹೆಚ್ಚಾಗಿ ವ್ಯಾಪಾರೀ ಚಿತ್ರಗಳ ಕಡೆಗೇ ವಾಲುತ್ತಿವೆ. ಈ ಹಿಂದೆ ಹಲವಾರು 'ಬ್ರಿಜ್' ಚಿತ್ರಗಳನ್ನು ಹಿಂದಿಯಲ್ಲಿ ಮಾಡಿದ ಹೃಷಿಕೇಶ ಮುಖರ್ಜಿ, ಗುಲ್ಜಾರ್, ಬಾಸು ಚಟರ್ಜಿ, ಸಾಯಿ ಪರಾಂಜಪೆ ಮೊದಲಾದವರು ಈಗ ಹಿಂದೆ ಸರಿದಿದ್ದಾರೆ. ಇನ್ನು ಕೆಲವರು ಉಳಿವಿಗೋಸ್ಕರ ವ್ಯಾಪಾರೀ ಚಿತ್ರಗಳನ್ನು ನಿರ್ದೇಶಿಸುತ್ತಿದ್ದಾರೆ. ಮತ್ತೆ ಕೆಲವರು ಟಿ. ವಿ. ಧಾರಾವಾಹಿಗಳ ಕಡೆಗೆ ತಮ್ಮ ಒಲವನ್ನು ಹರಿಸಿದ್ದಾರೆ.

ಭವಿಷ್ಯ

ಚಿತ್ರಗಳ ನಿರ್ಮಾಣ ವೆಚ್ಚ ಇತ್ತೀಚೆಗೆ ಜಾಸ್ತಿಯಾಗುತ್ತಿರುವುದರಿಂದ ವಿತರಕರ ಹಾಗೂ ಬಂಡವಾಳಗಾರರ ನೆರವಿಲ್ಲದೇ ಚಿತ್ರ ಮಾಡುವದು ಕಷ್ಟಸಾಧ್ಯ. ಅವರುಗಳು ವ್ಯಾಪಾರೀ ಚಿತ್ರಗಳನ್ನೇ ಬೆಂಬಲಿಸುತ್ತಾರೆ. ಅವರ ನೆರವಿಲ್ಲದೇ ತಮ್ಮ ಚಾತುರ್ಯದಿಂದಲೇ ಹಣವನ್ನು ಗಳಿಸುವಂಥ ಒಂದು ಭಿನ್ನ ಧಾಟಿಯ ಚಿತ್ರವನ್ನು ತೆಗೆಯಲು ಸಾಮರ್ಥ್ಯವುಳ್ಳ ನಿರ್ದೇಶಕ–ನಿರ್ಮಾಪಕ ಬಂದಾಗ ಮಾತ್ರ 'ಬ್ರಿಜ್' ಚಳವಳಿ ಹೊಸ ಜೀವಪಡೆದುಕೊಂಡೀತೇ ಹೊರತು ಈಗಿರುವ ವ್ಯವಸ್ಥೆಯಲ್ಲಿ ವ್ಯಾಪಾರಿ ಚಿತ್ರಗಳನ್ನು ದೂರ ಮಾಡಿ ಬದುಕುವದು ಅಸಾಧ್ಯ.

ಎಲ್ಲಾ ಭಾಷೆಯ ಚಿತ್ರರಂಗಗಳ ಪರಿಸ್ಥಿತಿ ಸದ್ಯಕ್ಕೆ ಇದೇ ಆಗಿದೆ. ಅಂದು ಆದಂತೆ ಇನ್ನೊಮ್ಮೆ ಪ್ರೇಕ್ಷಕ ವ್ಯಾಪಾರೀ ಚಿತ್ರಗಳನ್ನು ತಿರಸ್ಕರಿಸಿದಲ್ಲಿ 'ಬ್ರಿಜ್' ಚಿತ್ರಗಳು ಪುನರ್ಜನ್ಮ ತಾಳಬಹುದು. ಆದರೆ ಸದ್ಯದ ಪರಿಸ್ಥಿತಿಯಲ್ಲಂತೂ ವ್ಯಾಪಾರೀ ಚಿತ್ರಗಳೇ ಮುಂದಾಳುಗಳಾಗಿವೆ.

ನಿರೂಪಣೆ :

ಉದಯ ಮರಕ್ಕಿಣಿ

ಬದುಕು ಭ್ರಮೆಯಲ್ಲ!

✳ ಹಂಸಲೇಖಾ



ನಿಂತ ನೀರಾಗಿದ್ದ ಕನ್ನಡ ಸಿನಿಮಾ ಸಂಗೀತಕ್ಕೆ ಹೊಸ ಸ್ವರೂಪ, ಥಾಟ, ಆಯಾಮ ಗಳನ್ನಿತ್ತವರು ಹಂಸಲೇಖಾ. ಇವರ ಸಾಹಿತ್ಯ, ಸಂಗೀತದಲ್ಲಿ ಅಶ್ಲೀಲತೆ- ಅನುಕರಣೆ ಇದೆಯೆಂಬ ಆಕ್ಷೇಪಣೆ, ಆಪಾದನೆಗಳ ನಡುವೆಯೂ ಹಂಸಲೇಖಾ ಪ್ರತಿಭಾನ್ವಿತ ಎಂಬ ಮಾತನ್ನು ಎಲ್ಲರೂ ಒಪ್ಪುತ್ತಾರೆ. ಆಡುವ ಭಾಷೆಯ ಗತ್ತು ಗಡಸುತನ ತುಂಬಿದ ಹಾಡುಗಳು, ಹೊಸ ಭಾವವನ್ನು ಮೀಟುವ ಸಂಗೀತ. ಹಾಗಾಗಿ ಶಾಲೆಮಕ್ಕಳಿಂದ ಹಿಡಿದು ಪಡ್ಡೆ ಹುಡುಗರಿಗೂ 'ಈಗ ಹಂಸಲೇಖಾ ಕ್ರೇಜ್'. ಮೂಲತಃ ನಾಟಕ ರಂಗ ದಿಂದ ಬಂದ ಈ ವ್ಯಕ್ತಿ ಹೊಗಳಿಕೆ–ತೆಗಳಿಕೆಗಳನ್ನು ಸಮಾನವಾಗಿ ಸ್ವೀಕರಿಸುವ ನಿರ್ಲಿಪ್ತ, ಸದಾ ಹೊಸತನದತ್ತ, ಹೊಸ ಅನ್ವೇಷಣೆಯತ್ತ ತುಡಿಯುವ ಮನಸ್ಸು. ಗೊಂದಲಗಳಿಂದ, ಭ್ರಮೆಗಳಿಂದ ಮುಕ್ತರಾಗಿರುವ ಹಂಸಲೇಖಾ ತಮ್ಮ ಬದುಕು ಸಾಧನೆ–ಯೋಚನೆ ಸಿದ್ಧಾಂತಗಳ ಬಗ್ಗೆ ತಾವೇ ಹೇಳಿಕೊಂಡಿದ್ದಾರೆ.


ದಾವಣಗೆರೆ
ಫ್ಯಾಶನ್ ಫ್ಯಾಬ್ರಿಕ್
ನವಿರಾದ ನೇಯಿಗೆ ರಚನೆಯಲ್ಲಿ
ಪ್ರಿಯಾ ಮತ್ತು ಪ್ರೇಮಿಕಾ—
ವೈಯಕ್ತಿಕ ಅಭಿರುಚಿಗೆ ಮೆಚ್ಚುವ,
ಮನಮೋಹಕ ವರ್ಣ
ವೈವಿಧ್ಯತೆಯಲ್ಲಿ
ಮನಮೋಹಕ ಡಿಸೈನಗಳ
ಟೆರೀನ್* ಸೀರೆಗಳು.
ಸೂಟಿಂಗ್
ಶರ್ಟಿಂಗ್
ಡ್ರೆಸ್ ಮೆಟೀರಿಯಲ್
ಕ್ಯಾಂಬ್ರಿಕ್ಸ್
ಇವುಗಳೂ ದೊರೆಯುತ್ತವೆ.
T/8788/B KAN
ದಿ ದಾವಣಗೆರೆ ಕಾಟನ್ ಮಿಲ್ಸ್ ಲಿ.,
ಹನುಮಂತಪ್ಪ ಬಿಲ್ಡಿಂಗ್ಸ್, ಚಿತ್ರದುರ್ಗ ರೋಡ್, ದಾವಣಗೆರೆ 577 002.
ಶೋರೂಮ್‌ಗಳು : ಕಾವೇರಿ ಭವನ, ಬೆಂಗಳೂರು 560 009. ಚಿತ್ರದುರ್ಗ ರೋಡ್, ದಾವಣಗೆರೆ 577 002.
ವಾಜೀಬನ ಪೇಟೆ, ಹುಬ್ಬಳ್ಳಿ 580 020

ನನ್ನ ಹೆಸರು ವಿಚಿತ್ರವಾಗಿದೆ. 'ಹಂಸಲೇಖಾ'– ನನ್ನ ಕಾವ್ಯನಾಮ. ನಿಜನಾಮಧೇಯ–ರಂಗರಾಜು. ಹತ್ತನೇ ವಯಸ್ಸಿನಲ್ಲಿ ನನ್ನಲ್ಲಿ ಒಂದು 'ಸ್ವಾನ್' ಪೆನ್ನು ಇತ್ತು. ಅದರ ಮೇಲೆ ಒಂದು ಬಿಳಿಯ ಹಂಸದ ಚಿತ್ರ. ಆ ಪೆನ್ನನ್ನೇ ಹಿಡಿದು ಏನೇನೋ ಕಲ್ಪಿಸಿಕೊಳ್ಳುತ್ತಿದ್ದೆ. ಆಗ ಎಲ್ಲ ಸಾಹಿತಿಗಳಿಗೂ ಕಾವ್ಯನಾಮದ ಶೋಕಿ. 'ಸ್ವಾನ್ ಪೆನ್'ನ್ನು ಕನ್ನಡಕ್ಕೆ ಭಾಷಾಂತರ ಮಾಡಿದರೆ ಹೇಗಿರುತ್ತೆ ಎಂದು ಯೋಚಿಸಿದೆ. 'ಹಂಸಲೇಖನಿ' ಅಥವಾ 'ಹಂಸಲೇಖಾ' ಆಗಬಹುದು ಎನ್ನಿಸಿತು.



ಆಮೇಲೆ ಮನೆಗೆ ಬಂದ ಒಬ್ಬ ಲೇಖಕರನ್ನು ಕೇಳಿದೆ "ಹೆಸರು ಹೇಗಿದೆ" ಎಂದು. "ಪ್ರೇಮಲೇಖ"ಕ್ಕೆ ಅರ್ಥ ಇದೆ. 'ಹಂಸಲೇಖಾ'ಕ್ಕೆ ಯಾಕಿರಬಾರದು?" ಎಂದರು. ಆ ಬಳಿಕ ಸಣ್ಣ ಪುಟ್ಟ ಲೇಖನಗಳನ್ನು ಬರೆಯುವುದಕ್ಕೆ ಶುರುಮಾಡಿದೆ.

ಬಾಲ್ಯದ ನೆನಪುಗಳು

ಈಗ ಪುಟ್ಟ ಮಕ್ಕಳಲ್ಲಿ ಪ್ರತಿಭೆಯ ಒಂದು ಕಿಡಿ ಕಂಡರೆ ಸಾಕು. ಅದನ್ನು ಗುರುತಿಸಿ, ಪ್ರೋತ್ಸಾಹಿಸುತ್ತಾರೆ. ಆಗ ಇಂಥ ವಾತಾವರಣವಿರಲಿಲ್ಲ. ಆದರೆ ನಮ್ಮ ಮನೆತನಕ್ಕೆ 'ಕಲೆ' ಎನ್ನುವುದು ಒಂದು ಉಡುಗೊರೆ, ವರವಾಗಿ ಬಂದಿತ್ತು. ಅದರಲ್ಲೂ ಸಂಗೀತವಂತೂ ನಮ್ಮೆಲ್ಲರ ರಕ್ತದಲ್ಲೇ ಹರಿಯುತ್ತಿತ್ತು.

ನನ್ನ ತಂದೆ ಕೆ. ಎಚ್. ಗೋವಿಂದರಾಜು ಅವರಿಗೆ ನಾಟಕದ ಗೀಳು. ನಟಭಯಂಕರ ಗಂಗಾಧರ ರಾಯರ ಶಿಷ್ಯರು. 'ದಿನನಿತ್ಯ ಗಂಗಾಧರ ರಾಯರಿಗೆ ಐನೂರು ಇಡ್ಲಿ ಕೊಟ್ಟು ರಾಕ್ಷಸ ಪಾತ್ರ ನಿರ್ವಹಿಸಲು ಕಲಿತೆ' ಎಂದು ನನ್ನ ತಂದೆ ತಮಾಷೆಯಾಗಿ ಹೇಳುತ್ತಿದ್ದರು. ಅಪ್ಪನ ಅಭಿರುಚಿ ಅವರ ಹನ್ನೆರಡು ಮಕ್ಕಳಿಗೂ ಹಬ್ಬಿತು. ಮನೆಯಲ್ಲಿದ್ದ ಸಣ್ಣ ಮಗು ಕೂಡಾ 'ವಿರಹಾ......' ಎನ್ನುತ್ತಾ ತಲೆ ಬಾಚಿ ಕೊಳ್ಳುತ್ತಿತ್ತು. ನನ್ನ ಅಪ್ಪನದು ಒಂದು 'ಪ್ರಿಂಟಿಂಗ್ ಪ್ರೆಸ್' ಇತ್ತು. ಲಾವಣಿ ಕಲಾವಿದರೆಲ್ಲಾ ಒಟ್ಟಾಗಿ ಸೇರಿ ಅಲ್ಲಿ ಲಾವಣಿ ಹಾಡುತ್ತಿದ್ದರು. ಆ ಬಳಿಕ ಲಾವಣಿಗಳನ್ನು ಪ್ರಿಂಟ್ ಮಾಡಿ ಕೆಂಪೇಗೌಡ ಸರ್ಕಲ್‌ನಲ್ಲಿ ಪ್ರಚಾರ ಮಾಡಲಾಗುತ್ತಿತ್ತು. ಲಾವಣಿಗಳಲ್ಲಿ ಬರುವ ತಮಾಷೆ ಸಾಲುಗಳನ್ನು ನಾನೇ ಹಾಡುತ್ತಿದ್ದೆ.

ಆಗಲೇ ನನಗೆ ಹಾಸ್ಯದ ಕಡೆಗೆ ಒಲವು ಮೂಡಿದ್ದು. ಜೊತೆಗೆ ಸರಳವಾಗಿ ಹೇಳಿದರೆ ಜನಕ್ಕೆ ಖುಷಿಯಾಗುತ್ತೆ ಅನ್ನುವುದೂ ನನಗೆ ತಿಳಿಯಿತು. ಲಾವಣಿಯಲ್ಲಿ ಆಡುಭಾಷೆಯನ್ನೇ ಬಳಸುತ್ತಾರೆ ಚಿಕ್ಕ ವಯಸ್ಸಿನಿಂದ ಸಾಹಿತ್ಯ ಮತ್ತು ಹಾಡಿನ ಹುಚ್ಚು ಅಂಟಿಕೊಂಡಿತು. ಆಗ ನನ್ನ ಧ್ವನಿಯೂ ಚೆನ್ನಾಗಿತ್ತು.

ಏಕಲವ್ಯ ವಿದ್ಯಾಭ್ಯಾಸ

ನನ್ನಣ್ಣ ಜಿ. ಬಾಲಕೃಷ್ಣನದ್ದು ಒಂದು ಆರ್ಕೆಸ್ಟ್ರಾ ತಂಡ ಇತ್ತು. ಆದರೆ ನನಗೆ ಅಲ್ಲಿ ಪ್ರವೇಶವಿರಲಿಲ್ಲ. ಅದೇ ನನ್ನಲ್ಲಿ ಹಟ ಮೂಡಿಸಿತು. ಅಲ್ಲಿ ಮ್ಯಾಂಡೋಲಿನ್ ನುಡಿಸುವವನಿಂದ ಮ್ಯಾಂಡೋಲಿನ್ ತೆಗೆದುಕೊಂಡು ಬಂದು, ರಾತ್ರಿಯಿಡೀ ಮನೆಯಲ್ಲಿ ನನ್ನಷ್ಟಕ್ಕೇ ಕಲಿಯತೊಡಗಿದೆ. ಕೆಲವು ಹಾಡುಗಳನ್ನೂ ನುಡಿಸತೊಡಗಿದೆ. ಗುರುಗಳಿಲ್ಲದೇ ತಂತಿ ವಾದ್ಯಗಳನ್ನು ಕಲಿಯೋದು ಬಹಳ ಕಷ್ಟ. ಆದರೆ ಆಶ್ಚರ್ಯಕರ ರೀತಿಯಲ್ಲಿ ನನಗೆ ಆ ತಂತ್ರ ಸಿದ್ಧಿಸಿತು, ಮನೆಯವರಿಗೂ ಖುಷಿಯಾಯಿತು. ಆ ಬಳಿಕ ನನ್ನಣ್ಣ ನನ್ನನ್ನು ಆರ್ಕೆಸ್ಟ್ರಾಕ್ಕೆ ಸೇರಿಸಿಕೊಂಡ. ಕರ್ನಾಟಕ ಸಂಗೀತ ವಿದ್ವಾನ್ ಶಿವರಾಂ ಮತ್ತು ಹಿಂದುಸ್ತಾನೀ ವಾಯಲಿನ್ ವಿದ್ವಾಂಸ ದಾಸ್– ಇವರುಗಳಿಂದ ರಾಗಗಳ ಬಗ್ಗೆ ಒಂದಿಷ್ಟು ತಿಳಿದುಕೊಂಡೆ. ಅವುಗಳಲ್ಲಿ 'ಹಂಸಧ್ವನಿ' ನನ್ನ ಮೆಚ್ಚಿನ ರಾಗ. ಹಂಸಲೇಖಾಕ್ಕೂ 'ಹಂಸಧ್ವನಿ'ಗೂ ಏನೋ ಸಂಬಂಧವಿರಬೇಕು ಎನ್ನುವ ವಿಚಿತ್ರ ಸೆಂಟಿಮೆಂಟ್. ಆ ಕಾಲಕ್ಕೆ ಬೆಂಗಳೂರಿನಲ್ಲಿ ನಾನೇ ಅತ್ಯುತ್ತಮ ಮ್ಯಾಂಡೋಲಿನ್ ವಾದಕ ಎಂದು ಹೆಸರು ಪಡೆದಿದ್ದೆ.

ನಾಟಕರಂಗಕ್ಕೆ

ಆರ್ಕೆಸ್ಟ್ರಾ ಸಾಕೆನಿಸಿತು. ನಾಟಕಗಳಿಗೆ ಸಂಗೀತ ಮತ್ತು ಹಾಡುಗಳನ್ನು ಕಂಪೋಸ್ ಮಾಡುವುದಕ್ಕೆ ಶುರು ಮಾಡಿದೆ. ಆಗ ರಾಜ್‌ಗೋಪಾಲ್ ಎನ್ನುವವರು 'ಸೀತೆಯಲ್ಲ ಸಾವಿತ್ರಿ' ಚಿತ್ರಕ್ಕಾಗಿ ಹಾಡೊಂದನ್ನು ಬರೆದುಕೊಡಲು ಕೇಳಿದರು. "ನೀನಾ ಭಗವಂತ........" ಎಂಬ ಹಾಡನ್ನು ಇಪ್ಪತ್ತೆರಡು ನಿಮಿಷದಲ್ಲಿ ರಚಿಸಿದೆ. ಆಗ ನನಗೆ ಹತ್ತೊಂಬತ್ತು ವರ್ಷ. ಆ ಹಾಡನ್ನು ಘಂಟಸಾಲ ಹಾಡಬೇಕಿತ್ತು. ಆದರೆ ನನ್ನಣ್ಣನೇ (ಜಿ. ಬಾಲಕೃಷ್ಣ) ಹಾಡುತ್ತಾನೆ ಎಂದು ನಾನು ಚಾಲೆಂಜ್ ಮಾಡಿದೆ. ಹಾಡು ಚೆನ್ನಾಗಿ ಬಂತು. ಆಗಲೇ ನನ್ನಲ್ಲಿ ಆತ್ಮವಿಶ್ವಾಸ ಮೊಳಕೆಯೊಡೆದಿತ್ತು.

ನಾಟಕಗಳಿಗೆ ಐದು ವರ್ಷ ಸಂಗೀತ ನೀಡಿದ ಬಳಿಕ ಬೋರ್ ಆಗತೊಡಗಿತು. ಎಲ್ಲಾ ಹಳಸಿದ ನಾಟಕಗಳು. ಅದೇ ಸಮಯದಲ್ಲಿ ಕಲಾಕ್ಷೇತ್ರದಲ್ಲಿ ಹೊಸ ರೀತಿಯ ನಾಟಕಗಳು ಆರಂಭವಾಗಿದ್ದವು. ಅದನ್ನು ನೋಡಿ ನಾನು ಮೂಕನಾಗಿಬಿಟ್ಟೆ. ಅಲ್ಲಿಂದ ನಾನೂ ಏನಾದರೂ ಮಾಡಬೇಕು ಎಂದು ಗಾಢವಾಗಿ ಯೋಚಿಸುವುದಕ್ಕೆ ಶುರುಮಾಡಿದೆ. ಕಲಾಕ್ಷೇತ್ರ ನಾಟಕಗಳ ದೌರ್ಬಲ್ಯವೂ ನನಗೆ ಗೊತ್ತಿತ್ತು. ಅದು ಕೆಲವೇ ಮಂದಿಯನ್ನು ತಲುಪುತ್ತಿತ್ತು. ಹಾಗಾಗಿ ನಾನೇ

ಒಂದು 'ವಿವೇಕ ರಂಗ' ಎನ್ನುವ ನಾಟಕ ತಂಡ ಕಟ್ಟಿದೆ. ಕಲಾಕ್ಷೇತ್ರದಲ್ಲಿ ಆಡುತ್ತಿದ್ದ ನಾಟಕಗಳ ಹೊಸತನದ ಜೊತೆಗೆ ನನ್ನ ಹಾಡುಗಳು, ಸಂಗೀತ ಸೇರಿಸಿ 'ರೈತ ಜೀವಿ' ಎನ್ನುವ ನಾಟಕ ಮಾಡಿದೆ. ಹೋದಲ್ಲೆಲ್ಲಾ ಈ ನಾಟಕ ಭರ್ಜರಿ ಯಶಸ್ಸು ಗಿಟ್ಟಿಸಿತು. "ಸೆಮಿ ಪ್ರೊಫೆಷನಲ್ ವೇವ್"ನ್ನು ನಮ್ಮ ತಂಡ ಹುಟ್ಟುಹಾಕಿತ್ತು. ಈ ಉತ್ಸಾಹದ ಸಂಭ್ರಮದ ದಿನಗಳಲ್ಲೇ ಒಂದು ದಿನ ನಂಜನಗೂಡಿನಲ್ಲಿ ನಮ್ಮ ನಾಟಕದ ಡೇರೆ ಪೂರ್ತಿ ಸುಟ್ಟು ಹೋಯಿತು. ಏನೂ ಉಳಿಯಲಿಲ್ಲ. ನನ್ನ ಮಿತ್ರರು, ಸರ್ಕಾರ ಎಲ್ಲರೂ ಸುಮ್ಮನಿದ್ದರು. ನಾನು ಕನ್ನಡ ನಾಟಕಗಳಿಗೆ ಒಂದು ಹೊಸ ರೂಪ ಕೊಟ್ಟಿದ್ದೆ. ಅದು ಗೊತ್ತಿದ್ದೂ ಯಾರೂ ಸಹಾಯ ಮಾಡಲಿಲ್ಲ. ಇಂದಿನ ಯಶಸ್ಸಿನ ಬಗ್ಗೆ ನನಗೆ ಹೆಮ್ಮೆ ಎನಿಸುವುದಿಲ್ಲ. ಅಂದಿನ ನೋವು ಇನ್ನೂ ಇದೆ.

ಸಿನಿಮಾ ರಂಗ ಪ್ರವೇಶ

ಸಿನಿಮಾ ರಂಗದಲ್ಲಿ ಒಬ್ಬ ಅತ್ಯಂತ ಪ್ರತಿಭಾನ್ವಿತ ವ್ಯಕ್ತಿ ತನ್ನ ಪ್ರತಿಭೆಯಿಂದಾಗಿಯೇ ಮೇಲೇರುವುದು ಹೇಗೆ ಸಾಧ್ಯವೋ ಹಾಗೆಯೇ ಒಬ್ಬ ಪ್ರತಿಭೆಯಿಲ್ಲದವನೂ ತನ್ನ ಅದೃಷ್ಟ ಬಲದಿಂದ ಅದೇ ಸ್ಥಾನಕ್ಕೇರಬಹುದು. ನಾನೂ ಕೂಡಾ ಈ ಎರಡೂ ಥರದ ಜನಗಳ ಜೊತೆಯಲ್ಲಿದ್ದೀನಿ ಅಷ್ಟೆ. ಮೊದಲಿಂದಲೂ ನಾನು ಕೆಲಸದಲ್ಲಿ ಅಚ್ಚುಕಟ್ಟು ನಾಟಕರಂಗದಲ್ಲಿ ದ್ವಂದ್ವಾರ್ಥದ ಸಂಭಾಷಣೆಯನ್ನು ಬಳಸದೆ ಪ್ರಾಮಾಣಿಕವಾಗಿ ದುಡಿದೆ. ಅದು ನನಗೊಂದು ಹೋರಾಟವಾಗಿತ್ತು. ಸಿನಿಮಾರಂಗ ಬೇಡ ಎಂದುಕೊಂಡಿದ್ದೆ. ಸ್ನೇಹಿತರ ಒತ್ತಾಯಕ್ಕೆ ಬಂದೆ. ಇಲ್ಲಿಗೆ ಬಂದ ಮೇಲೆ ಇಲ್ಲ ಮಡಿವಂತಿಕೆ, ಮನಸ್ಸಿಗೆ ಬೇಜಾರು ಪಟ್ಟುಕೊಳ್ಳುವುದರಲ್ಲಿ ಅರ್ಥವಿಲ್ಲ. ಸಿನಿಮಾ ಅಂದ್ರೆ ಸಿನಿಮಾ ಥರಾನೇ ಇರಬೇಕು ಅಂತ ನಿರ್ಧರಿಸಿದ್ದೀನಿ. ಆದರೂ ಈ ಕೆಸರಲ್ಲಿ ಕಮಲವಾಗಬೇಕು ಎನ್ನುವ ಆಸೆ ನನ್ನದು. ಏನಾದರೊಂದು ಸಾಧಿಸಿ ತೋರಿಸ್ತೀನಿ ಅನ್ನೋ ವಿಶ್ವಾಸವೂ ಇದೆ.

ಮೊದಲ ಚಿತ್ರ

ಸ್ನೇಹಿತರ ಜೊತೆ ಸೇರಿಕೊಂಡು "ರಾಹು ಕೇತು" ಎಂಬ ಚಿತ್ರ ನಿರ್ದೇಶಿಸೋದಕ್ಕೆ ಹೊರಟೆ. ಆರ್ಥಿಕ ಪರಿಸ್ಥಿತಿ ಕೆಟ್ಟು ಚಿತ್ರಕ್ಕೆ ಅರ್ಧದಲ್ಲೇ ರಾಹು ಬಡಿಯಿತು. ಆಗ ತಿಳಿಯಿತು –ಈ ಇಂಡಸ್ಟ್ರೀವಲಯದಿಂದ ಹೊರಗಿದ್ದು ಚಿತ್ರ ಮಾಡುವ ನಿರ್ಮಾಪಕರನ್ನು ಇಂಡಸ್ಟ್ರಿ ವಲಯ ಯಾವತ್ತೂ ಅಸ್ಪೃಶ್ಯ ಎಂದೇ ಪರಿಗಣಿಸುತ್ತಿದೆ.

ಚಿತ್ರಸಾಹಿತಿ ಮತ್ತು ಸಂಗೀತ ನಿರ್ದೇಶಕನಾಗಿ

ಎಸ್. ಎಸ್. ರಾವ್ ಚಿತ್ರಕಥೆ ರಚಿಸುವುದಕ್ಕೆ ಕರೆದರು. ಬಾಲಕೃಷ್ಣ ಅವರ ಮಗ ಶೀನುವಿಗೆ 'ಪ್ರಣಯಕಾವ್ಯ' ಎಂಬ "ಸ್ಕ್ರಿಪ್ಟ್" ಮಾಡಿಕೊಟ್ಟೆ. ಇದು ಎಸ್. ಎಸ್. ರಾವ್‌ಗೆ ಬಹಳ ಹಿಡಿಸಿತು. ಆಮೇಲೆ ಅವರೆ ನನ್ನನ್ನು ರವಿಚಂದ್ರನ್‌ಗೆ ಪರಿಚಯಿಸಿದರು.

"ನಾನು ನನ್ನ ಹೆಂಡ್ತಿ"ಚಿತ್ರಕ್ಕೆ ನಾನೇ ಕಂಪೋಸ್ ಮಾಡಿದ್ದ "ಯಾರೇ ನೀನಾ ಚೆಲುವೆ" ಹಾಡು ಹಿಟ್ ಆಯ್ತು. ಆ ಬಳಿಕ 'ಪ್ರೇಮಲೋಕ' ನನಗೆ ದೊಡ್ಡ 'ಬ್ರೆಕ್' ನೀಡಿತು. ಅದರ ನಿಜವಾದ "ಕ್ರೆಡಿಟ್" ರವಿಚಂದ್ರನ್‌ಗೆ ಸಲ್ಲಬೇಕು, "ಪ್ರೇಮಲೋಕ"ಕ್ಕೆ ರವಿ ನನ್ನನ್ನು ಆರಿಸಿದಾಗ ಅವರ ಹಿತೈಷಿಗಳೆಲ್ಲಾ "ಸಂಗೀತಮಯ" ಚಿತ್ರ ಮಾಡ್ಬೇಕು ಅಂತಿದ್ರೆ ಇಳಯರಾಜ, ಲಕ್ಷ್ಮಿಕಾಂತ-ಪ್ಯಾರೆಲಾಲರನ್ನು ಹಾಕ್ಕೊಂಡು ತೆಗಿ ಎಂದು ಸಲಹೆ ಮಾಡಿದ್ದರು. ಆದರೆ ರವಿ ಒಂದು ಕೋಟಿ ನಷ್ಟವಾದ್ರೂ ತೊಂದರೆಯಿಲ್ಲ. ಹಂಸಲೇಖಾಗೆ ಮಾತು ಕೊಟ್ಟಿದ್ದೇನೆ. ಇನ್ನು ಬದಲಾಯಿಸುವುದಿಲ್ಲ ಎಂದು ಬಿಟ್ಟರು. ನನಗೋಸ್ಕರ ಇಷ್ಟು ರಿಸ್ಕ್ ತೆಗೆದುಕೊಂಡ ರವಿ ಏನೇ ಹೇಳಿದ್ರೂ ನಾನು ಮಾಡುತ್ತೇನೆ. ಅವರಿಗೆ ನನ್ನ ಮೊದಲ ಆದ್ಯತೆ.

ಅವಿಸ್ಮರಣೀಯ ಪ್ರಸಂಗ

ಅಂದು ಮದರಾಸಿನ ಪ್ರಸಾದ್ ಥಿಯೇಟರಿನಲ್ಲಿ 'ಪ್ರೇಮಲೋಕ' ಹಾಡುಗಳ ಧ್ವನಿಮುದ್ರಣ. ಇಳಯರಾಜರ ಸ್ಥಾನದಲ್ಲಿ ಬಂದ ಈ ಹಂಸಲೇಖಾ ಯಾರು? ಎಲ್ಲರಿಗೂ ಕುತೂಹಲ. ನೂರು ಜನ ವಾದ್ಯಗಾರರು ನನ್ನನ್ನು ನೋಡಲೆಂದೇ ಬಂದಿದ್ದರು. "ಹೂ ಈಸ್ ದಿಸ್ ಹಂಸಲೇಖ?" ಎಲ್ಲರ ಪ್ರಶ್ನೆ. ನಾನೊಂದು ಸರಳ ಅಂಗಿ ಧರಿಸಿದ್ದೆ. ರವಿ ಜೊತೆಗೆ ಅತ್ತಿತ್ತ ಸುತ್ತಾಡುತ್ತಿದ್ದಾಗ 'ರವಿ ಮತ್ತು ಆತ ಕ್ಲಾಸ್‌ಮೇಟ್ಸ್' ಎಂದು ಜನರು ಆಡಿಕೊಳ್ಳುವುದು ಕಿವಿಗೆ ಬೀಳುತ್ತಿತ್ತು. ಅದೊಂದು ಮರೆಯಲಾಗದ ದಿನ. ನಾನು ಆರು ತಿಂಗಳ ಕಾಲ ತಯಾರಿ ನಡೆಸಿದ್ದೆ. ನೂರಾಹತ್ತು ಜನ ವಾದ್ಯಗಾರರ ಎದುರು 'ಗೆಳೆಯರೇ......' ಸಾಂಗ್ ರೆಕಾರ್ಡ್ ಮಾಡಿಯಾಯಿತು. ಗುಣಮಟ್ಟ ಎಲ್ಲರಿಗೂ ಗೊತ್ತೇ ಇದೆ. ಅಲ್ಲಿಂದ ನನ್ನ ಜಯದ ಹಾದಿ ಶುರುವಾಯಿತು.

ಸಂಗೀತದ ಮೇಲೆ ಅನ್ಯರ ಪ್ರಭಾವ

ಭಾರತೀಯ ಸಂಗೀತದಲ್ಲಿ ಎರಡು ಮುಖ್ಯ ಪ್ರಕಾರಗಳು, ಕರ್ನಾಟಕ ಮತ್ತು ಹಿಂದುಸ್ತಾನಿ. ಇನ್ನು ಸಿನಿಮಾ ಸಂಗೀತಕ್ಕೆ ಏನೆನ್ನಬೇಕು? ಕರ್ನಾಟಕ ಹಿಂದುಸ್ತಾನಿ ಮಿಸಳಬಾಜಿಯಾಗಿ ಪಾಶ್ಚಾತ್ಯ ಸಂಗೀತದ ಶರ್ಟ್ – ಪ್ಯಾಂಟು ತೊಟ್ಟಾಗ ಸಿನಿಮಾ ಸಂಗೀತವಾಗುತ್ತದೆ. ಈ ರೀತಿ ಸಂಗೀತವಿರುವುದು ಭಾರತದಲ್ಲಿ ಮಾತ್ರ. ಈಗ ಚೈನಾ, ಜಪಾನ್ ಮೊದಲಾದ ದೇಶಗಳಲ್ಲಿ ನಮ್ಮ ಹಿಂದಿ ಹಾಡುಗಳನ್ನು ಕಾಪಿ ಮಾಡುತ್ತಿದ್ದಾರೆ. ನನಗೆ ನನ್ನದೇ ಆದ ಧಾಟಿ ಇದೆ. ಅದನ್ನು ತಂದೇ ತರ್‍ತೀನಿ. ಸ್ವಲ್ಪಕಾಲ ಹಿಡಿಯುತ್ತೆ. ಈಗೇನಾದರೂ ನನ್ನ ಸಂಗೀತದಲ್ಲಿ ಯಾವುದೇ ಪ್ರಭಾವ ಕಾಣಿಸಿದರೆ ಅದರ ಹಿಂದೆ ನಿರ್ಮಾಪಕರ ಪ್ರಭಾವ ಎಷ್ಟಿದೆ ಅಂತ ಕೇಳೋದು ಒಳ್ಳೆಯದು.

ಸಿನಿಮಾ ಸಂಗೀತಕ್ಕೊಂದು ಹೊಸ ತಿರುವು ಕೊಡಬೇಕು ಎಂದು ಪ್ರಯೋಗ ಮಾಡ್ತಾ ಇದ್ದೇನೆ. ಈಗ ಸ್ವಲ್ಪ ಕೊಟ್ಟಿದ್ದೇನೆ. ಅದಲ್ಲದೆ ಸಂಗೀತ ನನಗೆ ತುಂಬಾ ಹುಚ್ಚು ಹಿಡಿಸಿರೋದ್ರಿಂದ ಈಗ ಅದರ ಕಡೆಗೇ ಹೆಚ್ಚು ಗಮನ. ಮುಂದಿನ ವರ್ಷ (ಲನೇ ಗ್ರೇಡ್ ಪಾಸಿಂಗ್ ಟು ಪಿಯಾನೊ ಕ್ಲಾಸ್. ಗಾಗಿ)ಇಂಗ್ಲೆಂಡಿಗೆ ಹೋಗುತ್ತಾ ಇದ್ದೇನೆ. ಇದರಲ್ಲಿನ 'ಸೌಂಡ್ ಸೆನ್ಸ್' ಮತ್ತು ಗುಣಮಟ್ಟ ನಿರ್ಮಾಪಕರಿಗೆ ಮನವರಿಕೆಯಾದಾಗ ಅವರೇ ಪ್ರೇಕ್ಷಕರಿಗೆ ತಲುಪಿಸುತ್ತಾರೆ. ಒಮ್ಮೆಗೇ 'ಎಕ್ಸ್‌ಪೆರಿಮೆಂಟ್' ಮಾಡಿ ಬೀಳೋದಕ್ಕಿಂತ ನಿಧಾನವಾಗಿ ಕುಳಿತು ಮಲಗೋಣ ಅಂತ ಸುಮ್ಮನಿದ್ದೇನೆ.

ವಾದ್ಯಗಳ ಬಳಕೆ

ಇದೊಂದು ಕಲೆ. 'ಆರ್ಕೆಸ್ಟ್ರೇಷನ್' ಎನ್ನುತ್ತಾರೆ ಇದಕ್ಕೆ. ಹಾಡುಗಳಿಗೆ ಮಾಧುರ್ಯವನ್ನು ಸೃಷ್ಟಿಸಿ, ಕಂಪೋಸ್ ಮಾಡಿಕೊಂಡ ಬಳಿಕ ಯಾವ ವಾದ್ಯ ಬಳಸಿದರೆ ಅಚ್ಚುಕಟ್ಟಾಗಿರುತ್ತದೆ ಎಂದು ಕಲ್ಪನೆ ಮಾಡಿಕೊಳ್ಳಬೇಕು. ಇದನ್ನು ವಿವರಿಸುವುದು ಕಷ್ಟ. ಕವಿ ಕಲ್ಪನೆಯ ಮಟ್ಟ ಶ್ರೇಷ್ಟವಾಗಿದ್ದರೆ ಆ ಕಾವ್ಯವೂ ಶ್ರೇಷ್ಟವಾಗಿರುತ್ತದೆ. ಹಾಗೇ ಸಂಗೀತ ನಿರ್ದೇಶಕನ ವಿಷಯದಲ್ಲೂ ಹಾಡಿನ ಮೆಲೋಡಿಯನ್ನು ಕೇಳುತ್ತಿದ್ದಂತೆ ಅವನು ಇಷ್ಟಪಡುವ ವಾದ್ಯಗಳು ಮನಸ್ಸಿನಲ್ಲಿ ಹೊಳೆಯುತ್ತವೆ. ಎಲ್ಲಾ ಒಂದರ ಮೇಲೊಂದು ಜೋಡಿಸಲ್ಪಡುತ್ತಾ ಹೋಗುತ್ತದೆ.

ಈಗ ಕಾರ್ಯಗತಗೊಳಿಸಿರೋದು ನಾನು ಅಂದುಕೊಂಡಿದ್ದರ ಶೇಕಡಾ ಐದರಷ್ಟೂ ಇಲ್ಲ. ಆದರೆ ನನ್ನ ಆಸೆಯೇನೆಂದರೆ ಕರ್ನಾಟಕದ ಜನಪದ ಸೊಗಡನ್ನೆಲ್ಲಾ ಹಾಗೇ ತಂದು, ಅದಕ್ಕೆ ಒಂದಿಷ್ಟು ಪಾಶ್ಚಿಮಾತ್ಯ ಸಂಗೀತದ ಉಡುಗೆ ತೊಡಿಸಿ ರಂಗು ಬದಲಾಯಿಸಬೇಕು. ಈ ಬಗ್ಗೆ ಮೂಲಭೂತವಾದ ಮೂರು ಕ್ಯಾಸೆಟ್‌ಗಳನ್ನು ತರಲಿದ್ದೇನೆ. ಅದರಲ್ಲಿ ನನ್ನ ಯೋಚನೆಗಳ ಬಗ್ಗೆ ಸ್ವಲ್ಪ ಮಾಹಿತಿ ಸಿಗಬಹುದು. ಹಂಸಲೇಖಾನ ಹಾದಿ ಏನು ಎಂಬುದು ಸ್ಪಷ್ಟವಾಗಬಹುದು.

ಸ್ಟೀರಿಯೋ ಟೈಪ್ ಸಂಗೀತ

ಈಗಿರೋ ಹಾಡುಗಳೆಲ್ಲ ಸ್ಟೀರಿಯೋ ಟೈಪ್ ಆಗಿವೆ. ಹೊಸದಾಗಿ ಬರೆಯುವುದಕ್ಕೇ ಕಷ್ಟ ಆಗುತ್ತೆ. ಯಾಕೆಂದರೆ ಈಗಿನ ಕಥೆಗಳೇ ಸ್ಟಿರಿಯೋ ಟೈಪ್. ದೊಡ್ಡ ದೊಡ್ಡ ಕಥಾಚಿತ್ರಗಳನ್ನೇ ನಿರ್ಮಿಸಬೇಕೆಂದರೆ ಹೊಸ ಕಥೆ ಎಲ್ಲಿ ಸಿಗಬೇಕು. ಅದಕ್ಕಾಗಿ ಒಂದು ಘಟನೆ ಅಥವಾ ಎಳೆಯನ್ನು ಆಧಾರವಾಗಿಟ್ಟುಕೊಂಡು ಚಿತ್ರ ಬೆಳೆಸಬೇಕು. ವಸ್ತುವಿನಲ್ಲೇ ಬದಲಾವಣೆಯಾದಾಗ ಸನ್ನಿವೇಶಗಳು, ಹೇಳೋ ಧಾಟಿ, ಹಾಡುಗಳು ತನ್ಮೂಲಕ ಸಂಗೀತ—ಹೀಗೇ ಎಲ್ಲವೂ ಬದಲಾಗುತ್ತದೆ. ಅದಕ್ಕೆಲ್ಲಾ ತಂತ್ರಜ್ಞರು ನನಗೆ ಈಗ ಸಿಕ್ಕಿದ್ದಾರೆ.

ಮೂರು ಜನ ನಿರ್ದೇಶಕರೂ ದೊರಕಿದ್ದಾರೆ. ಹಿಂದೆ ಪುಟ್ಟಣ್ಣ ಈ ರೀತಿ ಚಿತ್ರ ಮಾಡುತ್ತಿದ್ದರು, ಆಗ ನಾನು ಚಿತ್ರರಂಗಕ್ಕೆ ಬಂದಿದ್ದರೆ ಚೆನ್ನಾಗಿರುತ್ತಿತ್ತು ಎಂದು ನಾನು ಆಲೋಚಿಸುವುದುಂಟು.

ಕರ್ನಾಟಕದ ರಿಕಾರ್ಡಿಂಗ್ ಗುಣಮಟ್ಟ

ಕರ್ನಾಟಕದ ಸ್ಟುಡಿಯೋಗಳಲ್ಲಿ ರಿಕಾರ್ಡಿಂಗ್ ಗುಣಮಟ್ಟ ಸರಿಯಿಲ್ಲ ಎನ್ನುವದು ಒಂದು ಸುದ್ದಿಯೇ ಆಗಿಬಿಟ್ಟಿತು ಇಲ್ಲಾದ ತಪ್ಪೇನೆಂದರೆ ಅವಸರದ ಕೆಲಸ. ರಿಕಾರ್ಡಿಂಗ್ ಸ್ಟುಡಿಯೋ ಆರಂಭಕ್ಕೆ ಮೊದಲು ಒಂದು ತಿಂಗಳು ಬಾಗಿಲ ಮುಚ್ಚಿಕೊಂಡು ಲೋಪದೋಷಗಳಿವೆಯೇ ಎಂದು ಪರಿಶೀಲಿಸಿ ತಿದ್ದಿಕೊಳ್ಳಬೇಕು. ಆ ಬಳಿಕ ರಿಕಾರ್ಡಿಂಗ್ ಶುರು ಮಾಡಬೇಕಿತ್ತು. 'ಪ್ರೇಮ ತಪಸ್ವಿ' ಎನ್ನುವ ಚಿತ್ರಕ್ಕೆ ಐದು ಮಂದಿ ಹೊಸ ಗಾಯಕರಿಂದ ಇಲ್ಲೇ (ಡೆಕ್ಕನ್ ಸ್ಟುಡಿಯೋ) ಹಾಡಿಸಿದ್ದೇನೆ. ಮದ್ರಾಸ್‌ನಲ್ಲೂ ಕೇಳಿದ್ದರು. 'ಎಲ್ಲಿ ರಿಕಾರ್ಡಿಂಗ್ ಮಾಡಿಸಿದಿರಿ ?' ಎಂದು. ಈಗಂತೂ ಬೆಂಗಳೂರಿನಲ್ಲಿ ರಿಕಾರ್ಡಿಂಗ್ ಉತ್ಕೃಷ್ಟವಾಗಿದೆ. 'ಲೂನಾ ಮೇಲೆ ನನ್ನ ಮೈನಾ' ಹಾಡು ಹೇಗೆ ಚೆನ್ನಾಗಿ ಬಂತು ? ನಿಜ ಹೇಳ್ಬೇಕೂಂದ್ರೇ ಇಡೀ ಭಾರತದಲ್ಲೇ ಥಿಯೇಟರ್‌ಗಳಲ್ಲಿ 'ಸೌಂಡ್ ಸೆನ್ಸ್' ಸರಿ ಇಲ್ಲ. ಬೆಂಗಳೂರು ಜನ ಮದ್ರಾಸನ್ನು ಹೊಗಳಿದರೆ ಅವರು ಮುಂಬೈಯನ್ನು ಹೊಗಳುತ್ತಾರೆ. ಕರ್ನಾಟಕ ಸರಿಯಿಲ್ಲ ಎನ್ನುವವರ ಬಾಯಿಗೆ 'ಪ್ಲಾಸ್ಟರ' ಹಾಕಬೇಕು.


ಸ್ಥಳೀಯ ಪ್ರತಿಭೆಗಳಿಗೆ ಪ್ರೋತ್ಸಾಹ

ಒಂದು ಕಾಲದಲ್ಲಿ ಮೈಸೂರಿನಿಂದ ಮದ್ರಾಸಿಗೆ ವೀಣಾವಾದಕರನ್ನು ಕರೆಸಿಕೊಳ್ಳುತ್ತಿದ್ದರು. ಈಗ ಅಲ್ಲಿಂದ ಇಲ್ಲಿಗೆ ಕರೆಸಿಕೊಳ್ಳುತ್ತಿದ್ದೇವೆ. ಸ್ಥಳೀಯರಿಗೆ ಅವಕಾಶ ಕೊಡಬೇಕು ಎಂದು ಸುಮ್ಮನೇ ಕೂಗೋದ್ರಲ್ಲಿ ಅರ್ಥ ಇಲ್ಲ. ನಮ್ಮ ಜನಕ್ಕೆ ಆಸಕ್ತಿ ಕಡಿಮೆ ಹೇಳಿದ್ದನ್ನು ಕಲಿಯೋ ಹುಮ್ಮಸ್ಸಿಲ್ಲ. ಸಿನಿಮಾ ರಂಗದಲ್ಲಿ ಯಾರೂ ವಾದ್ಯಗಾರರ ಮನೆಗೆ ಹೋಗಿ ಕಾಲು ಹಿಡಿಯೋದಲ್ಲ ಕೆಲಸ ಬೇಕಿದ್ದರೆ ಅವರೇ ಸುತ್ತಾಡಬೇಕು. ಎಲ್ಲೋ ಇದ್ದ ದುಂಬಿ ಜೇನನ್ನು ಹುಡುಕಿಕೊಂಡು ಬರುತ್ತೆ. ಯಾಕೆಂದರೆ ಅದಕ್ಕೆ ಜೇನು ಬೇಕು. ನಾನಿಷ್ಟು ಹಾಡುಗಳನ್ನು ರಿಕಾರ್ಡಿಂಗ್ ಮಾಡಿದ್ದೇನೆ. ಆದರೆ ನಮ್ಮ ಒಬ್ಬ ಮ್ಯುಜೀಷಿಯನ್ ಮುಖ ಕೂಡಾ ಕಂಡಿಲ್ಲ. ಆದರೂ ನನ್ನ ಬಳಿ ೧೦ ಜನ ಇಲ್ಲಿಯವರಿದ್ದಾರೆ. ಅವರನ್ನು ಬೆಳೆಸುತ್ತೇನೆ.

ಬದುಕು–ಸಿದ್ಧಾಂತ

ನಾನು ಯಾರ ಅಭಿಮಾನಿಯೂ ಅಲ್ಲ. ನಾನು ನನ್ನ ಅಭಿಮಾನಿಯೂ ಅಲ್ಲ. ನಾನು ಭ್ರಮೆಗಳಿಲ್ಲದ ವ್ಯಕ್ತಿ. ದಿಗ್‌ಭ್ರಮೆ ಆದರೆ ಸಂತೋಷವಾಗುತ್ತದೆ. ನಿರಾಶೆಯಲ್ಲೂ ಖುಶಿ ಕಾಣುತ್ತೇನೆ. ಹಾಗಿರುವಾಗ ಖುಷಿಯಲ್ಲಿ ಮಜಾ ತೆಗೆದುಕೊಳ್ಳೋದು ಕಷ್ಟ. ನಾನು ಮೊದಲಿಂದಲೂ ತುಂಬಾ 'ಬಿಜಿ' ಮನುಷ್ಯ. ಈಗ್ಲೂ ಅಷ್ಟೇ. ವ್ಯತ್ಯಾಸವೇನೆಂದರೆ ಈಗ ನನ್ನ 'ಬಿಜಿ' ಎಲ್ಲರಿಗೂ ಗೊತ್ತಾಗ್ತಾ ಇದೆ ಎಲ್ಲಾ ಕಲೆಗಳು ಇರೋದು ಪ್ರದರ್ಶನಕ್ಕೇ ಅಂತ ನಂಬಿದವ ನಾನು. ಹಳ್ಳೀ ಜನರಿಗೂ ಸಿನಿಮಾ ಅಭಿರುಚಿ ಇನ್ನಷ್ಟು ಬೆಳೆಯುವಂತೆ ಮಾಡಬೇಕು ಎನ್ನೋದು ನನ್ನಾಸೆ.

ಸಿನಿಮಾ ಮತ್ತು ನಾಟಕದಲ್ಲಿ–ನಾಟಕವೇ ನನಗಿಷ್ಟ. ನನ್ನ ಅಗತ್ಯಕ್ಕಿಂತ ಹೆಚ್ಚು ದುಡ್ಡು ಇಲ್ಲಿ ಸಿಕ್ಕಿದರೆ ಥಿಯೇಟರ್ ಮೂವ್‌ಮೆಂಟ್‌ಗೆ, ನನ್ನೊಂದಿಗಿದ್ದವರಿಗೆ ಕೊಡುತ್ತೇನೆ. ಆದರೆ ಸಂಗೀತ–ನನ್ನ ಕಡೆಗಾಲದ ಸಂಗಾತಿ. ಎಲ್ಲರಿಗೂ ನಾನು ಬೇಡೆನಿಸಿದ ದಿನ ಸಿನಿಮಾ ಬಿಟ್ಟು ಸಮಾಜ ಸೇವೆಗೆ ಇಳಿಯುತ್ತೇನೆ.



ನನ್ನ ಪತ್ನಿಯೂ ಚೆನ್ನಾಗಿ ಹಾಡುತ್ತಾಳೆ. ಅದಕ್ಕಿಂತ ಹೆಚ್ಚಾಗಿ ನನ್ನೆಲ್ಲಾ ಏರಿಳಿತಗಳ ಮಧ್ಯೆಯೂ ನನ್ನ ಪ್ರತಿಭೆ ಬಾಡದಂತೆ ಪೋಷಿಸಿದ್ದಾಳೆ. ಸಿನಿಮಾರಂಗಕ್ಕೆ ಬದುಕಿನ ಅನಿವಾರ್ಯತೆಗಾಗಿ ಬಂಧ ನನಗೆ, ಮೊದಲಲ್ಲೇ ಸಿಕ್ಕ ಬಿರುದು 'ದ್ವಂದ್ವಾರ್ಥ–ಅಶ್ಲೀಲತೆಯ' ಹಂಸಲೇಖಾ ಎಂದು. ಆದರೆ ಒಂದು ದಿನ ಈ ಮಾತನ್ನು ನಾನು ಬದಲಾಯಿಸುತ್ತೇನೆ. ಜೊತೆಗೆ ಈ ಮಣ್ಣಿನ ಋಣ ತೀರಿಸುವ ಜವಾಬ್ದಾರಿಯೂ ನನ್ನ ಮೇಲಿದೆ.

ನಿರೂಪಣೆ :
ಉಮ



ಕಳೆದ ಮೂರು ದಶಕಗಳಿಂದ ನಿರಾಂತಕವಾಗಿ
ನಡೆದು ವರ್ಷವರ್ಷಕ್ಕೂ ಅಖಂಡ
ಜನಾನುರಾಗ ಗಳಿಸುತ್ತ ಬಂದ ನಮ್ಮ
ಏಕಮೇವ ವಾರ್ಷಿಕ ಯೋಜನೆ



ದಸರಾ-ದೀಪಾವಳಿ

ಉಚಿತ ಕಾಣಿಕೆ ಯೋಜನೆ

ಈಗಾಗಲೇ ಪ್ರಾರಂಭವಾಗಿದೆ. ನೀವಿನ್ನೂ ಭಾಗವಹಿಸಿಲ್ಲವೇ?

ಹಾಗಾದರೆ ಬೇಗ ಬನ್ನಿ !



卐 ಬಟ್ಟೆ ಖರೀದಿಸಿದ ಪ್ರತಿಯೊಬ್ಬರಿಗೂ ಆಯಾ ಶ್ರೇಣಿಯಲ್ಲಿ ಉಚಿತ ಕಾಣಿಕೆ ನೀಡಲಾಗುವದು.

卐 ಕಾಣಿಕೆ ವಿಭಾಗದಲ್ಲಿ ಸ್ಟೇನಲೆಸ್ ಸ್ಟೀಲ, ಹಿತ್ತಾಳೆ ವ ಹಿಂಡಾಲಿಯಮ್, ಪಾತ್ರೆಗಳೂ ಹಾಗೂ ಅಮೂಲ್ಯವಾದ ನಿತ್ಯ ಗೃಹೋಪಯೋಗಿ ಪ್ಲಾಸ್ಟಿಕ್ ಸಾಮಾನುಗಳೂ ಧಾರಾಳವಾಗಿವೆ.

ಇಂದೇ ಬಂದು ನಿಮ್ಮ ಪಾಲಿನ ಕಾಣಿಕೆ ಪಡೆಯಿರಿ!

ಬಿ. ಬಾಬು ಮತ್ತು ಕಂ., ಹುಬ್ಬಳ್ಳಿ

ಮಹಾನಗರದ ಅಗ್ರಗಣ್ಯ ವಸ್ತ್ರ ಭಾಂಡಾರ



ಬಣ್ಣದ ಸನ್ಯಾಸಿ-ವಿನೋದ್ ಖನ್ನ

—ವಸಂತ ಕಲಕೋಟಿ

ರಾಜೇಶಖನ್ನಾ ಅಮಿತಾಬ್ ಬಚ್ಚನ್ ಸುಪರ್‌ಸ್ಟಾರ್ ಕಾಲಾವಧಿಯಲ್ಲಿ ಮಿಂಚಿದ ಮತ್ತೊಂದು ಧ್ರುವತಾರೆ ವಿನೋದಖನ್ನಾ. ಹಿಂದೀ ಚಿತ್ರರಂಗ ಪ್ರವೇಶಿಸಿದಾಗ ಆತನಿಗೆ ಪ್ರಚಂಡ ಸ್ಪರ್ಧೆಯಿತ್ತು. ಸುನೀಲದತ್ ನಿರ್ಮಿಸಿ ದಿಗ್ದರ್ಶಿಸಿದ "ಮನ್‌ಕಾ ಮೀತ್" ಚಿತ್ರದಲ್ಲಿ ಮೊಟ್ಟ ಮೊದಲು ಅಭಿನಯಿಸಿದ ವಿನೋದಖನ್ನಾನಿಗೆ ಆರಂಭದಲ್ಲಿಯೇ ನಿರಾಶೆ. ಆತನ 'ಮನ್‌ಕಾ ಮೀತ್' ಚಿತ್ರ ಯಶಸ್ವಿಯಾಗಲಿಲ್ಲ. ಬಿ ಗ್ರೇಡ್ ಹೀರೋ ಆಗಿ ಚಿತ್ರರಂಗ ಸೇರಿದ ವಿನೋದಖನ್ನಾನಲ್ಲಿಯ ಪ್ರತಿಭೆ, ಅಭಿನಯ ಸಾಮರ್ಥ್ಯ ಪ್ರೇಕ್ಷಕರನ್ನು ಸೆರೆಹಿಡಿದದ್ದು ಆತನು ಅಭಿನಯಿಸಿದ ಪ್ರಕಾಶ ಮೆಹರಾ ನಿರ್ಮಿಸಿ ದಿಗ್ದರ್ಶಿಸಿದ "ಮುಕದ್ದರ ಕಾ ಸಿಕಂದರ" ಹಾಗೂ ಮನಮೋಹನ ದೇಸಾಯಿ ಅವರು ನಿರ್ಮಿಸಿ ದಿಗ್ದರ್ಶಿಸಿದ "ಅಮರ್ ಅಕಬರ್ ಅಂತೋನಿ" ಚಿತ್ರಗಳು. "ಮುಕದ್ದರ ಕಾ ಸಿಕಂದರ್"ನಲ್ಲಿ ಸುಪರ್ ಸ್ಟಾರ್ ಅಮಿತಾಬ್‌ನೊಂದಿಗೆ ಅಭಿನಯಿಸಿದ್ದರೂ, ವಿನೋದಖನ್ನಾ ಅಮಿತಾಬನ ಮೋಡಿಯಲ್ಲಿ ತೇಲಿ ಹೋಗದೇ ತನ್ನದೇ ಆದ ವೈಶಿಷ್ಟ್ಯದಿಂದ ತನ್ನ ಪಾತ್ರಕ್ಕೆ ಮೆರುಗು ನೀಡಿದ "ಅಮರ್ ಅಕಬರ್ ಅಂತೋನಿ" ಸುಪರ್‌ಸ್ಟಾರುಗಳ ಮಲ್ಟೀಸ್ಟಾರ್ ಚಿತ್ರ. ಸುಪರ್‌ಸ್ಟಾರ್ ಅಮಿತಾಬ್ ಹಾಗೂ ಆಗ ಜನಪ್ರಿಯತೆಯಲ್ಲಿದ್ದ ರಿಷಿಕಪೂರ ಅವರ ಪ್ರಭಾವಗಳ ಮಟ್ಟದಲ್ಲಿಯೂ ವಿನೋದಖನ್ನಾ ತನ್ನ ಅಪ್ರತಿಮ ಅಭಿನಯದಿಂದ ಮೊಳಗಿದ. ಸುಪರಸ್ಟಾರ್ ಹಾಗೂ ಜನಪ್ರಿಯತೆಯ ಅತಿರಥ ಮಹಾರಥಿಗಳ ಮಧ್ಯದಲ್ಲಿಯೂ ಯಾವ ತಾರಾ ಪುತ್ರನಾಗಿಯಾಗಲೀ, ತಾರಾ ಸಂಬಂಧಿಕನಾಗಲೀ ಆಗಿ ವಿಶೇಷ ವರ, ಆಶ್ರಯವಿಲ್ಲದೇ ಆಗ ಹಿಂದೀ ಚಿತ್ರರಂಗದಲ್ಲಿ ತನ್ನದೇ ಪ್ರಕಾಶದಿಂದ ವಿನೋದಖನ್ನಾ ಬೆಳಗಿದ. "ಮೇರೆ ಅಪನೆ" "ಶಕ್" "ಅಚಾನಕ್" "ಇಮ್ತಿಹಾನ್" "ಇನಕಾರ್" ಚಿತ್ರಗಳಲ್ಲಿಯ ಆತನ ಸರಳ ಹಾಗೂ ವಾಸ್ತವಿಕತೆಯ ಅಭಿನಯ ಕೇವಲ ಆತನ ಅಭಿಮಾನಿ ಚಿತ್ರ ರಸಿಕರನ್ನು ಆಕರ್ಷಿಸದೇ ಚಿತ್ರ ವಿಮರ್ಶಕರ ಮನಸ್ಸನ್ನು ಗೆದ್ದುಕೊಂಡಿತು. ಬಾಕ್ಸ ಆಫೀಸಿನಲ್ಲಿ ಈ ಚಿತ್ರಗಳು ಹಿಟ್, ಸುಪರ್ ಹಿಟ್ ಎನಿಸದಿದ್ದರೂ ವಿನೋದಖನ್ನಾನ ಅಭಿನಯ ಸಾಮರ್ಥ್ಯವನ್ನು ಹೊರತರಲು ಸಹಾಯಕಾರಿಯೆನಿಸಿದವು. ಅಮಿತಾಬ್‌ನೊಂದಿಗೆ ವಿನೋದಖನ್ನಾ ಅಭಿನಯಿಸಿದ 'ಪರವರೀಶ್' ಬಾಕ್ಸ ಆಫೀಸನಲ್ಲಿ ಹಿಟ್ ಎನಿಸಿತು. ಆದರೆ ರಾಜೇಶಖನ್ನಾನೊಂದಿಗೆ ವಿನೋದಖನ್ನಾ ಅಭಿನಯಿಸಿದ 'ಕುದರತ್' ಚಿತ್ರ ಸೋಲನ್ನಪ್ಪಿತು. ವಿನೋದಖನ್ನಾ ಚಿತ್ರರಂಗದಲ್ಲಿ ಸೋಲಿಗಿಂತಲೂ ಗೆಲವು ಕಂಡದ್ದೇ ಹೆಚ್ಚು. ಆಗ ಪ್ರಚಂಡ ಸ್ಪರ್ಧೆಯಲ್ಲೂ ಆತ ಜಯಿಸಿದ. ವಿನೋದನ ಕೀರ್ತಿ ಇನ್ನೂ ಶಿಖರ ಮುಟ್ಟುತ್ತಿರುವಾಗಲೇ ಆತ ಚಿತ್ರರಂಗ ತ್ಯಜಿಸಿದ. ಪುಣೆಯಲ್ಲಿರುವ ಭಗವಾನ್ ರಜನೀಶ ಆಶ್ರಮದೊಂದಿಗೆ ಆಗಾಗ ಸಂಬಂಧ ಏರಿಸಿಕೊಂಡಿದ್ದ ವಿನೋದಖನ್ನಾ ಕೊನೆಗೂ ರಜನೀಶ ಮಾಯಾಜಾಲದಲ್ಲಿ ಸಿಲುಕಿದ. ರಜನೀಶ ಆಶ್ರಮದಲ್ಲಿಯೇ ಆತನಿಗೆ ಹಾಗೂ ಇಂದು ಖ್ಯಾತ ದಿಗ್ದರ್ಶಕನಾಗಿರುವ ಮಹೇಶ-ಭಟ್‌ರಿಗೂ ಪರಿಚಯವಾದದ್ದು. ಇಬ್ಬರೂ ರಜನೀಶರ ಭಕ್ತರು, ಅನುಯಾಯಿಗಳು. ರಜನೀಶ ಅಮೇರಿಕೆಯಲ್ಲಿ ಆಶ್ರಮ ತೆಗೆದು ಅಲ್ಲಿಯೇ ನೆಲೆಸಲು ಆರಂಭಿಸಿದಾಗ, ವಿನೋದಖನ್ನಾನ 'ಗುರುಭಕ್ತಿ' ಜಾಗ್ರತಗೊಂಡು ತನ್ನ ಮನೆ, ಕುಟುಂಬ, ಸಂಸಾರ, ಮಕ್ಕಳು, ಅಸಂಖ್ಯ ಚಿತ್ರಾಭಿಮಾನಿಗಳನ್ನು ತೊರೆದು ಒಮ್ಮಿಂದೊಮ್ಮೆಲೇ ರಜನೀಶರ 'ಶಿಷ್ಯತ್ವ' ಸ್ವೀಕರಿಸಿ ಓರೆಗಾನ್‌ದಲ್ಲಿರುವ ರಜನೀಶರ ಆಶ್ರಮ ಸೇರಿದ. ಆತನ ತ್ಯಾಗಕ್ಕೂ ಸಮ್ರಾಟ ಅಶೋಕ ಚಕ್ರವರ್ತಿಯ ತ್ಯಾಗಕ್ಕೂ ಏನು ವ್ಯತ್ಯಾಸ. ಅಮೇರಿಕೆಯ ರಜನೀಶ ಆಶ್ರಮದಲ್ಲಿ ವಿನೋದ ಖನ್ನಾನಿಗೆ ದೊರೆತ ಕೆಲಸ ಮಾಲಿಯದು. ಆದರೂ ಸಹ ವಿನೋದನಿಗೆ ಆ ಕೆಲಸದಲ್ಲಿ ತೃಪ್ತಿ. ಗುರು ಸಾನಿಧ್ಯದಲ್ಲಿ ಎಂತಹ ಕೆಲಸವಾದರೂ ಸರಿ ಎಂದು ಆತ್ಮಾನಂದದ ಭಾವ ಅವನಲ್ಲಿ ಬೆಳೆಯುತ್ತಲಿತ್ತು. ಮುಂಬಯಿ ಬಿಟ್ಟು ಹೋಗುವಾಗ ಇನ್ನೂ ನಾಲ್ಕು ಚಿತ್ರಗಳಲ್ಲಿ ವಿನೋದಖನ್ನಾ ಅಭಿನಯ ಪೂರ್ತಿಗೊಳಿಸಬೇಕಿತ್ತು. ಹೀಗಾಗಿ ನಿರ್ಮಾಪಕರ ಶಾಪಕ್ಕೂ ವಿನೋದ ಗುರಿಯಾಗಬೇಕಾಯ್ತು.



ಭಗವಾನ್ ರಜನೀಶರ ಮಾಯೆಯ ಛಾಯೆ ಬಹು ಸಮಯ ವಿನೋದಖನ್ನಾನನ್ನು ಬಂಧಿಸಿಡಲು ಸಾಧ್ಯವಾಗಲಿಲ್ಲ. ರಜನೀಶರ ಅವ್ಯವಹಾರಗಳು ಒಂದೊಂದಾಗಿ ಬಯಲಾದಾಗ ವಿನೋದಖನ್ನಾ ಕಣ್ಣು ತೆರೆದ. ರಜನೀಶರ 'ಗುರುಭಕ್ತಿ', ಮೋಕ್ಷ ಎಲ್ಲವೂ ಬರೀ ಭ್ರಮೆ. ರಜನೀಶ ಭಯಂಕರ ಕಪಟಿ ಎಂಬುದು ಗೊತ್ತಾಗಲು ವಿನೋದನಿಗೆ ಸಾಕಷ್ಟು ವೇಳೆ ಮಿಂಚಿತ್ತು. ಜೀವನದಲ್ಲಿ ವಿನೋದ ಹತಾಶನಾಗಿದ್ದ. ರಜನೀಶರಸಖ್ಯ ತೊರೆದು ಪುನಃ ತಾನೇ ತ್ಯಜಿಸಿ ಬಂದ ಹೆಂಡತಿ-ಮಕ್ಕಳು, ಸಂಸಾರ ಮನೆ, ಬಂಧು ಬಳಗ ಸೇರಲು ತವಕಪಡುತ್ತಿದ್ದ. ತಾನು ತೊರೆದು ಹೋಗಿದ್ದ ಪ್ರಪಂಚದ ಪ್ರತಿಕ್ರಿಯೆ ಹೇಗಿರಬಹುದೆಂಬುದನ್ನೂ ಲಕ್ಷಿಸದೆ. ವಿನೋದಖನ್ನಾ ಪುನಃ ತಾಯ್ನಾಡಿಗೆ ಮರಳಿದ. ಅಕ್ಟೋಬರ 1985 ವಿನೋದ ಖನ್ನಾ ಭಾರತಕ್ಕೆ ಮರಳಿದ ಸಮಯ. ಹಿಂದೀ ಚಿತ್ರರಂಗದಲ್ಲಿ ಬದಲಾವಣೆಗಳು ಆರಂಭವಾಗಿದ್ದವು. ಅಮಿತಾಬ್ ರಾಜಕೀಯ ಸೇರಿ ಸಂಸತ್ ಸದಸ್ಯನಾಗಿ ಚಿತ್ರ ರಂಗದಲ್ಲಿ ಆತನ ಪ್ರಖರತೆ ಕಡಿಮೆಯಾಗಿತ್ತು. ಆದರೆ ಆತನ ಪ್ರಭಾವ ಕಡಿಮೆಯಾಗಿರಲಿಲ್ಲ. ಆತನು ಅಭಿನಯಿಸುತ್ತಿರುವ ಚಿತ್ರಗಳ ಸಂಖ್ಯೆ ಕಡಿಮೆಯಾಗಿತ್ತು. ಮಿಥುನ್, ಅನಿಲ ಕಪೂರ, ಜಾಕಿಶ್ರಾಫ್ ಚಿತ್ರರಂಗದಲ್ಲಿಯ ಒಂದನೇ ನಂಬರ ಸ್ಥಾನಕ್ಕಾಗಿ ಸ್ಪರ್ಧಿಸುತ್ತಿದ್ದರು. 1986ರ ಮಟ್ಟದಲ್ಲಿ ರಾಜ ಖೋಸಲಾ ಅವರು ನಿರ್ಮಿಸಲಿದ್ದ 'ನಕಾಬ್' ಚಿತ್ರದಲ್ಲಿ ಅಭಿನಯಿಸಲು ವಿನೋದಖನ್ನಾನಿಗೆ ಅವಕಾಶ ನೀಡಿದರು. ಆದರೆ ಶಿಸ್ತು, ಸಂಯಮಗಳ ಛಾಯೆಯಲ್ಲಿ ರಜನೀಶ ಆಶ್ರಮದಲ್ಲಿ ವ್ಯಕ್ತಿತ್ವ ವನ್ನು ಅಳವಡಿಸಿಕೊಂಡಿದ್ದ ವಿನೋದಖನ್ನಾನಿಗೆ ಥಳಕು ಬೆಳಕಿನ ಚಿತ್ರರಂಗದಲ್ಲಿ ಅಧೀರತೆ ಅಸಹಾಯಕತೆ ಕಂಡಿತು. 'ನಕಾಬ್'ನಲ್ಲಿ ಪಾತ್ರ ವಹಿಸುತ್ತಿರುವಾಗ ಆತ ತುಂಬ ಹತಾಶನಾದ. ಸಂಭಾಷಣೆ ಅಸ್ಪಷ್ಟ. ಅನೇಕ ತಪ್ಪುಗಳಾದವು. ಅಳಲಿಕೆ ಹೆಚ್ಚಾಯಿತು. ಚಿತ್ರಗಳಲ್ಲಿ ಅಭಿನಯ ಸಾಧ್ಯವಿಲ್ಲವೆಂಬುದು ವಿನೋದಖನ್ನಾನಿಗೆ ತಿಳಿಯಿತು. "ಎಲ್ಲರೂ ನನ್ನನ್ನು ಗೇಲಿ ಮಾಡು ತ್ತಿದ್ದಾರೆ" ಎಂದು ವಿನೋದ ಅಳಲಾರಂಭಿಸಿದ. ಆತನಿಗೆ ಹುಚ್ಚು ಹಿಡಿದಿದೆ ಎಂದು ಆತನ ವಿರೋಧಿಗಳು ಪ್ರಚಾರ ಶುರು ಮಾಡಿದರು. ರಾಜ ಖೋಸಲಾ 'ನಕಾಬ್' ನಲ್ಲಿ ವಿನೋದ ಖನ್ನಾನನ್ನು ತೆಗೆದು ಹಾಕಿ ಆತನ ಪಾತ್ರವನ್ನು ರಿಷಿಕಪೂರನಿಗೆ ನೀಡಿದರು. ವಿನೋದಖನ್ನಾನ ಮಾನಸಿಕ ವೇದನೆ ಹೆಚ್ಚಾಯಿತು.

'ಇನಕಾರ್' ಚಿತ್ರದಲ್ಲಿ ಅವಕಾಶ ನೀಡಿ ಯಶಸ್ವಿಯಾಗಿದ್ದ ರಾಜ ಸಿಪ್ಪಿ ಪುನಃ ವಿನೋದ ಖನ್ನಾನಿಗೆ ತಾನು ನಿರ್ಮಿಸುತ್ತಿದ್ದ 'ಇನ್ಸಾಫ್' ಚಿತ್ರದಲ್ಲಿ ಪಾತ್ರ ನೀಡಿದ. 'ಇನ್ಸಾಫ್' ಚಿತ್ರ ವಿನೋದಖನ್ನನ ವ್ಯಕ್ತಿತ್ವಕ್ಕೆ ಪ್ರತಿಭೆಗೆ ಚಾಲೆಂಜ್ ನೀಡಿತು. ಈ ಚಿತ್ರದ ದಿಗ್ದರ್ಶಕ ಮುಕುಲ ಆನಂದನಿಗೆ ವಿನೋದಖನ್ನಾನ ಪ್ರತಿಭೆಯ ಬಗ್ಗೆ ಅಚಲ ವಿಶ್ವಾಸ. "ವಿನೋದ ಶ್ರೇಷ್ಠ ನಟ" ಎಂದು ಮುಕುಲ ಆನಂದ ಮುನ್ನಡೆದರು. ವಿನೋದಖನ್ನಾ ನಲವತ್ತರ ಅಂಚಿನಲ್ಲಿಯೂ ತನ್ನ ಶರೀರದ ಸೌಂದರ್ಯವನ್ನು ಅಂಗ ಸೌಷ್ಟವವನ್ನು ಕಾಪಾಡಿಕೊಂಡಿದ್ದಾನೆ. ಆತನ ಮುಖ ತೇಜಪೂರ್ಣ. ಎಂತಹ ಬಗೆಯ ಪಾತ್ರದಲ್ಲಿಯೂ ಆತ ಮಿಂಚುತ್ತಾನೆ. ನಾಯಕ ನಾಗಿ, ಖಳನಾಯಕನಾಗಿ, ಉಪನಾಯಕನಾಗಿ ಆತ ಸಮರ್ಥರೀತಿಯಲ್ಲಿ ನಟಿಸಬಲ್ಲನೆಂಬುದು ಎಲ್ಲರಿಗೂ ಗೊತ್ತು. 'ಇನ್ಸಾಫ್' ಚಿತ್ರದಲ್ಲಿ ವಿನೋದನೊಂದಿಗೆ ನಾಯಿಕೆಯಾಗಿ ಡಿಂಪಲ್ ಕಪಾಡಿಯಾ ಅಭಿನಯಿಸಿದ್ದಾಳೆ. ಇದೇ ಸಮಯ ದಲ್ಲಿ ರಾಜಬಬ್ಬರ್, ಮಿನಾಕ್ಷಿಶೇಷಾದ್ರಿ ಯರೊಂದಿಗೆ "ಸತ್ಯಮೇವ ಜಯತೆ" ಚಿತ್ರದಲ್ಲಿ

'ಸಂಸಾರದ ಬಂಧನ'ಗಳನ್ನು ಕಳಚಿ ಒಮ್ಮಿಂದೊಮ್ಮೆಗೆ ರಜನೀಶರ ಶಿಷ್ಯತ್ವ ಸ್ವೀಕರಿಸಿ ಓರೆಗಾನ್ ಆಶ್ರಮ ಸೇರಿದ ವಿನೋದ ಖನ್ನ ಇದೀಗ ಮತ್ತೊಮ್ಮೆ ಲೌಕಿಕ ಜೀವನಕ್ಕೆ ಮರಳಿದ್ದಾನೆ.

ವಿನೋದನಿಗೆ ಅವಕಾಶ ದೊರೆಕಿತು. ಎರಡೂ ಚಿತ್ರಗಳು ಇತ್ತೀಚಿಗೆ ಬಿಡುಗಡೆಯಾಗಿ ಹಿಂದೀ ಚಿತ್ರ ಪ್ರಪಂಚದಲ್ಲಿಯೇ ಅಪೂರ್ವ ಕ್ರಾಂತಿ ಮಾಡಿದವು. ವಿನೋದಖನ್ನಾನ ಅಪ್ರತಿಮ ಅಭಿನಯ ಸಂಭಾಷಣಾ ಚಾತುರ್ಯ ಕೋಟ್ಯಾವಧಿ ಚಿತ್ರಪ್ರೇಮಿಗಳನ್ನು ಸೆರೆಹಿಡಿಯಿತು. ಹಲವು ವರ್ಷ ವಿನೋದಖನ್ನಾನ ಚಿತ್ರರಂಗದಲ್ಲಿಯ ಅನುಪಸ್ಥಿತಿ ಆತನ ಲಕ್ಷಾವಧಿ ಅಭಿಮಾನಿಗಳಿಗೆ ತಮ್ಮ ಆರಾಧ್ಯದೇವತೆ ಪುನಃ ಚಿತ್ರರಂಗಕ್ಕೆ ಬಂದಿರುವದು ಉತ್ಸಾಹವನ್ನು ಇಮ್ಮಡಿಸಿತು. ಈ ಎರಡೂ ಚಿತ್ರಗಳು ಸುಪರ್‌ಹಿಟ್ ಆದವು ರಾಜಕೀಯ ಪ್ರಭಾವಗಳ ಮಧ್ಯೆ. ಅಮಿತಾಬ್ ಚಿತ್ರರಂಗದಿಂದ ದೂರ ಸರಿಯುತ್ತಿರುವ ಲಕ್ಷಣ ಕಂಡುಬಂದಾಗ, ವಿನೋದಖನ್ನನನ್ನ ಅಮಿ-ತಾಬನ ಸ್ಥಾನಕ್ಕೇರಿಸಲು ಆತನ ಅಭಿಮಾನಿಗಳು ಪ್ರಯತ್ನಿಸುತ್ತಿದ್ದಾರೆ, 'ಇನ್ಸಾಫ' 'ಸತ್ಯಮೇವ ಜಯತೆ' ಚಿತ್ರಗಳ ಪ್ರಚಂಡ ಯಶಸ್ಸು ವಿನೋದ ಖನ್ನನಿಗೆ ಸಮ್ರಾಟ ಪದ ನೀಡಿದೆ. ಈಗ ಆತ ಭಾರೀ ಬೇಡಿಕೆಯಲ್ಲಿರುವ ನಟ. ಒಂದು ಚಿತ್ರಕ್ಕೆ ಈಗ ಆತ ಮೂವತ್ತು ಲಕ್ಷ ಸಂಭಾವನೆ ಕೇಳುತ್ತಾನಂತೆ. ಹಿಂದೆ ರಾಜೇಶ ಖನ್ನ ಮೇಲೆ ಅಮಿತಾಬ್ ಮೇಲೆ ಕಂಡುಬಂದಂತೆ ಈಗ ಚಿತ್ರರಂಗದಲ್ಲಿ ವಿನೋದಖನ್ನಾ ಮೇಲೆ ಗೋಚರಿಸಿದೆ. ವಿನೋದನ ಇಮೇಜ ಈಗ ಎಲ್ಲೆಲ್ಲೂ ಎತ್ತರದ ಶಿಖರದಲ್ಲಿದೆ ಜೆ. ಪಿ ದತ್ತ ಅವರ "ಬಟವಾರಾ" ರಾವಲ್ ಶರ್ಮ ಅವರ "ಉಸ್ತಾದ್" ಮಹೇಶಭಟ್ ದಿಗ್ದರ್ಶಿತ "ರಕ್ಷಕ" ಇಸ್ಮಾಯಿಲ್ ಶ್ರಾಫ ಅವರ "ಸೂರ್ಯ" ರಾಜೀವ ಮೆಹತಾ ಅವರ "ಆಖರೀ ಅದಾಲತ್" ಜ್ವಾಲಾ ಪಿಕ್ಚರ್ಸ್‌ರವರ "ಶತ್ರುತಾ" ಸುರೇಶ ಇಂಟರ ನ್ಯಾಶನಲ್ ಲಾಂಛನದ "ವಕ್ತಕಾ ಬಾದಶಾಹ" ಬಿ. ಸುಭಾಷ ಮೂವ್ಹಿಯವರ "ಸನ್ ಆಫ್ ಗಾಡ್" ಹೀಗೆ ಸುಮಾರು ಇಪ್ಪತ್ತಕ್ಕೂ ಮಿಕ್ಕಿ ಚಿತ್ರಗಳಲ್ಲಿ ವಿನೋದಖನ್ನಾ ಅಭಿನಯಿಸುತ್ತಿದ್ದಾನೆ.

"ರಜನೀಶರ ಸಮೀಪ ವಲಯಗಳಲ್ಲಿ ನಾನು ಯಾವಾಗಲೂ ಇರಲಿಲ್ಲ" ಎನ್ನುತ್ತಾನೆ ವಿನೋದ ಖನ್ನಾ, ಆದರೆ ಇಪ್ಪತ್ತು ಲಕ್ಷದ ಮರ್ಸಿಡಿಸ್ ಬೆಂಜ್ ಕಾರೊಂದನ್ನು ಗುರುದಕ್ಷಿಣೆಯ ರೂಪ ದಲ್ಲಿ ರಜನೀಶನಿಗೆ ನೀಡಿದುದನ್ನು ವಿನೋದಖನ್ನಾ ಅಲ್ಲಗಳೆಯುತ್ತಿಲ್ಲ. ರಜನೀಶರಿಂದ ದೂರಾಗಿ ವಾಸ್ತವಿಕತೆಯ ಪ್ರಪಂಚಕ್ಕೆ ಮರಳಿದ ವಿನೋದ ಖನ್ನಾ ತನ್ನ ಸನ್ಯಾಸ ಜೀವನದ ಬಗ್ಗೆ ಯಾವ ನೆನಪನ್ನೂ ಮರುಕಳಿಸಲು ಇಷ್ಟಪಡುವದಿಲ್ಲ. "ನನ್ನ ಕೆಲಸದಲ್ಲಿ ಶ್ರದ್ಧೆಯಿದೆ, ಆಸಕ್ತಿಯಿದೆ, ಪ್ರೀತಿಯಿದೆ" ಎನ್ನುತ್ತಾನೆ ವಿನೋದ. ವಿನೋದಖನ್ನಾನ ಪತ್ನಿ ಗೀತಾಂಜಲಿಗೆ ಆತನ ಮೇಲೆ ತುಂಬ ರೋಷ. ಸನ್ಯಾಸಿಯಾಗಿ ಮನೆ ಮಕ್ಕಳು ಹೆಂಡತಿ–ಎಲ್ಲವನ್ನು ಬಿಟ್ಟು ಹೊರಟು ಹೋದ ವಿನೋದಖನ್ನಾನ ನೀತಿ ಅವಳಿಗೆ ಸಲ್ಲದು, ಆದರೂ ವಿನೋದಖನ್ನಾ ಮರಳಿ ಬಂದ ನಂತರ ಅವಳ ಪ್ರವೃತ್ತಿಯಲ್ಲಿ ಬದಲಾವಣೆಯಾಗುತ್ತಿದೆ. ವಿನೋದಖನ್ನಾನನ್ನು' ಪ್ರೀತಿಸದಿದ್ದರೂ ಆತನನ್ನು ವಿರೋಧಿಸುವದಿಲ್ಲ. ಅವನ ಮೇಲಿನ ರೋಷ ಕಡಿಮೆಯಾಗುತ್ತಿದೆ. ಆದರೆ ವಿನೋದಖನ್ನಾನ ಮಕ್ಕಳು ರಾಹುಲ ಹಾಗೂ ಅಕ್ಷಯ ತಂದೆಯ ಸ್ಥಿತ್ಯಂತರ ಗಮನಿಸದೇ ಮರಳಿ ಬಂದ ತಂದೆಗೆ ಪ್ರೇಮ ಹರುಷ ಧಾರೆಯೆರೆದಿವೆ. ವಿನೋದನ ವಿರೋಧಿಗಳು ಹಾಗೂ ಟೀಕಾಕಾರರ ಸಂಖ್ಯೆ ಕಡಿಮೆಯಾಗುತ್ತಿದೆ. ಚಿತ್ರೀಕರಣದಲ್ಲಿ ಆತನ ಬೇಡಿಕೆ ಹೀಗೆಯೇ ಏರುತ್ತ ನಡೆದು 'ಇನ್ಸಾಫ್' 'ಸತ್ಯಮೇವ ಜಯತೆ' ಯ ಹಾಗೆ ನಾಲ್ಕಾರು ಚಿತ್ರಗಳು ಸುಪರ್ ಹಿಟ್ ಆದರೆ ವಿನೋದಖನ್ನಾ ಅಮಿತಾಭನ ಒಂದನೇ ನಂಬರ್ ಸ್ಥಾನವನ್ನು ಗಿಟ್ಟಿಸಲ್ಲೂ ಬಹುದು. ಅಕಸ್ಮಾತ್ ಪರಿಸ್ಥಿತಿಯ ಸೆಳೆವಿನಲ್ಲಿ ಅಮಿತಾಬ್ ಚಿತ್ರರಂಗ ದಿಂದ ದೂರಾದರೆ ವಿನೋದಖನ್ನಾನಿಗೆ ಸುಪರ್ ಸ್ಟಾರ್ ಪಟ್ಟ ದೊರಕುವ ಚಿನ್ಹೆಗಳೂ ಕಾಣುತ್ತಿವೆ. **"Great-Come back with Thunders"**

ವಿನೋದಖನ್ನಾನಿಗೆ ಈ ಸ್ವಾಗತ ಸಾಕಷ್ಟೇ. ರಜನೀಶ ಆಶ್ರಮದಿಂದ ದೂರಾಗಿ ಮರಳಿ ಬಂದು ಹಿಂದೀ ಚಿತ್ರರಂಗದಲ್ಲಿ ಅದ್ಭುತ ಯಶಸ್ಸು, ಗಳಿಸಿದ ವಿನೋದಖನ್ನಾನ ಅನುಭವ ಪ್ರತಿಭೆಯನ್ನು ಗುರುತಿಸಿ ಇತ್ತೀಚಿಗೆ ಜಾಯಿಂಟ್ಸ ಇಂಟರ್ ನ್ಯಾಶನಲ್ ಆತನನ್ನು ಶ್ರೇಷ್ಠ ನಟನೆಂದು ಸನ್ಮಾನಿಸಿತು. ●

HERO HONDA ○ HERO HONDA ○ HERO HONDA ○ HERO HONDA



Heartiest Seasons Greetings :

HERO HONDA CD100

TOTAL PERFORMANCE, ECONOMY AND RELIABILITY

- Phenomenal 80 km/litre*
- Four stroke engine from Honda
- Prompt after sales service and easy availability of spare parts.
- All the power you will ever need.

*At 40 kmph. with a load of 130 kg.



ULKA-D-HH-362

HERO HONDA

Authorised Dealer :

CHADHA Auto Agencies

12, Neeligin Road, HUBLI-29.

Phone: 66619

HERO HONDA ○ HERO HONDA ○ HERO HONDA ○ HERO HONDA

ದೀಪಾವಳಿಯು ಸಕಲರಿಗೂ ಸನ್ಮಂಗಳವನ್ನೀಯಲೆಂದು ಹಾರೈಸುತ್ತೇವೆ

ಬಾಪೂಜಿ ವಿದ್ಯಾಸಂಸ್ಥೆ (ರಿ.) ದಾವಣಗೆರೆ.

ಶೈಕ್ಷಣಿಕ ಹಾಗೂ ಇತರೆ ಸಂಸ್ಥೆಗಳು

ಜಗದ್ಗುರು ಜಯದೇವ ಮುರುಘರಾಜೇಂದ್ರ ವೈದ್ಯಕೀಯ ಕಾಲೇಜು
(ಭಾರತೀಯ ವೈದ್ಯಕೀಯ ಮಂಡಳಿಯಿಂದ ಮಾನ್ಯತೆ ಪಡೆದಿದೆ)
ಬಾಪೂಜಿ ಆಸ್ಪತ್ರೆ
ಬಾಪೂಜಿ ದಂತಚಿಕಿತ್ಸಾ ಕಾಲೇಜು ಮತ್ತು ಆಸ್ಪತ್ರೆ
(ಭಾರತೀಯ ದಂತ ವೈದ್ಯಕೀಯ ಮಂಡಳಿಯಿಂದ ಮಾನ್ಯತೆ ಪಡೆದಿದೆ)
ಬಾಪೂಜಿ ಇಂಜನಿಯರಿಂಗ್ ಮತ್ತು ತಾಂತ್ರಿಕ ಕಾಲೇಜು
ಧರ್ಮರತ್ನಾಕರ ರಾಜನಹಳ್ಳಿ ಮದ್ದೂರಾಯಪ್ಪ ವಿಜ್ಞಾನ ಕಾಲೇಜು
ಅಜ್ಜಂಪುರದ ರಂಗಪ್ಪ ಗೋವಿಂದಸ್ವಾಮಿ ಕಲಾ ಮತ್ತು ವಾಣಿಜ್ಯ ಕಾಲೇಜು
ಅಜ್ಜಂಪುರದ ವಿರುಪಾಕ್ಷಪ್ಪ ಕಮಲಮ್ಮ ಮಹಿಳಾ ಕಾಲೇಜು
ರಾಜನಹಳ್ಳಿ ಲಕ್ಷ್ಮಣಶೆಟ್ಟಿ ಕಾಯ್ದೆ ಕಾಲೇಜು
ಬಾಪೂಜಿ ವಿದ್ಯಾ ಸಂಸ್ಥೆಯ ಶಿಕ್ಷಣ ಕಾಲೇಜು
ಮಾಗನೂರು ಸರ್ವಮಂಗಳಮ್ಮ ಬಸಪ್ಪ ಸಂಜೆ ಕಾಲೇಜು
ಬಾಪೂಜಿ ವಿದ್ಯಾ ಸಂಸ್ಥೆ ಕಲಾ ಮತ್ತು ವಾಣಿಜ್ಯ ಕಾಲೇಜು
ಬಾಪೂಜಿ ವಿದ್ಯಾ ಸಂಸ್ಥೆ ಫಾರ್ಮಸಿ ಶಾಲೆ
ದಾದಿಯರ ತರಬೇತಿ ಶಾಲೆ
ಬಾಪೂಜಿ ವಿದ್ಯಾ ಸಂಸ್ಥೆಯ ಕೇಂದ್ರೀಯ ಶಿಶುವಿಹಾರ ಮತ್ತು ಪ್ರಾಥಮಿಕ ಶಾಲೆ
ಜಗದ್ಗುರು ಜಯದೇವ ಮುರುಘರಾಜೇಂದ್ರ ವೈದ್ಯಕೀಯ ಕಾಲೇಜು ವಿದ್ಯಾರ್ಥಿ ನಿಲಯ
ಬಾಪೂಜಿ ಇಂಜನಿಯರಿಂಗ್ ಮತ್ತು ತಾಂತ್ರಿಕ ಕಾಲೇಜು ವಿದ್ಯಾರ್ಥಿ ನಿಲಯ
ಬಾಪೂಜಿ ಇಂಜನಿಯರಿಂಗ್ ಮತ್ತು ತಾಂತ್ರಿಕ ಕಾಲೇಜು ವಿದ್ಯಾರ್ಥಿನಿಲಯ (ನ್ಯೂಕ್ಯಾಂಪಾಸ್)
ಶ್ರೀಮತಿ ರತ್ನಮ್ಮ ಧರ್ಮರತ್ನಾಕರ ಆರ್. ಮದ್ದೂರಾಯಪ್ಪ ಮಹಿಳಾ ವಿದ್ಯಾರ್ಥಿ ನಿಲಯ
ಬಾಪೂಜಿ ಮಹಿಳಾ ವಿದ್ಯಾರ್ಥಿ ನಿಲಯ
ಬಾಪೂಜಿ ಪ್ರೌಢಶಾಲೆ
ಬಾಪೂಜಿ ಪಾಲಿಟೆಕ್ನಿಕ್, ಶಾಬನೂರು ದಾವಣಗೆರೆ ತಾಲ್ಲೂಕು

ಡಾ|| ಹೆಚ್. ಕೆ. ಕೃಷ್ಣಸ್ವಾಮಿ,
ಅಧ್ಯಕ್ಷರು,

ಶಾಮನೂರ ಶಿವಶಂಕರಪ್ಪ,
ಗೌರವ ಕಾರ್ಯದರ್ಶಿಗಳು,

ದೀಪಾವಳಿಯ ಹಾರ್ದಿಕ ಶುಭಾಶಯಗಳು

ಹೊಟೆಲ್ ಉದ್ದಿಮೆಯಲ್ಲಿ ದೀರ್ಘಾವಧಿಯ ವಿಶಿಷ್ಟ ಸೇವೆ,
ಸಕಲ ಸೌಕರ್ಯಗಳಿಂದ ಕೂಡಿದ

ಊಟ, ಉಪಹಾರ ಮತ್ತು ವಸತಿ ಗೃಹ,

ಶ್ರೀ ಕೃಷ್ಣ ಭವನ

ಲ್ಯಾಮಿಂಗಟನ್ ರಸ್ತೆ, ಹುಬ್ಬಳ್ಳಿ – 580 020
ಫೋನ್ : 62251 + 4 ಲೈನ್ಸ



ಮತ್ತು

ಶುಚಿ, ರುಚಿ ಮತ್ತು ಬಿಸಿ ಬಿಸಿ ತಿಂಡಿ–ತಿನಿಸುಗಳಿಗಾಗಿ

ಶ್ರೀ ಗಣೇಶ ವಿಲಾಸ

ಟ್ರಾಫಿಕ ಐಲೆಂಡ, ಹುಬ್ಬಳ್ಳಿ

ಸಂಸ್ಥಾಪಕರು : ದಿ. ಅನಂತಭಟ್ಟ. ಉಚ್ಚಿಲ.



(Shetty Publicity)

With best compliments from :

Tele : EMDIBOMB

PHONE : 62786
Factory : 66786

M. D. Nimbuwala & Sons

Manufacturers of :
Atom Bomb, Ashrafee & Tik Tik, Flower pots (Anars) & Others Fancy Items.

7, Ullagaddi Road, HUBLI

and

KAKA FIRE WORKS

MANUFACTURERS OF :

Laxmi Dhamka Sparklers,
Atom Bomb & Other Fancy Items


HUBLI-580 020


BOMBAY OFF : PHONE : Office : 329479 - 335665
Resi. : 240498 - 264198

3/5, Sham Shet Street, BOMBAY-400 002

(Shetty Publicity)

The Sensation of Suzuki







- Power • Pick-up
- Economy
- Low Maintenance
- Total Reliability



**TVS-Suzuki AX-100,
The Complete
Motorbike.**

TVS SUZUKI

TVS-SUZUKI LIMITED


Contact: Authorised Dealer :

RATNAKAR ASSOCIATES PRIVATE LIMITED

**"Siddheshwar Krupa' Dharwad Road,
Vidyanagar, HUBLI-580021**

AK/MRB

ದೀಪಾವಳಿಯ ಹಾರ್ದಿಕ ಶುಭಾಶಯಗಳು



ಎಲ್ಲಾ ಆಕಾರದ ಟಾಯರ ರಿಟ್ರೇಡಿಂಗ್
ಹಾಗೂ ರಿಸೋಲಿಂಗದಲ್ಲಿ ವಿಶೇಷ ಪರಿಣಿತರು :
ಲಾರಿ, ಟ್ರ್ಯಾಕ್ಟರ್ ಎಲ್.ಸಿ.ವ್ಹಿ. ಪ್ಯಾಸೆಂಜರ ಕಾರ,
ಮಾರುತಿ, ಅಟೋರಿಕ್ಷಾ ಮತ್ತು ದ್ವಿಚಕ್ರ ವಾಹನ
ಇತ್ಯಾದಿಗಳ ಟೈಯರ್ ರಿಟ್ರೇಡಿಂಗದಲ್ಲಿ
12 ವರ್ಷಗಳಿಗಿಂತ ಹೆಚ್ಚು ಅನುಭವ.



ಉತ್ತರ ಕರ್ನಾಟಕದಲ್ಲಿ ಮೊತ್ತಮೊದಲ ಬಾರಿಗೆ
59 H.P. ಟ್ರ್ಯಾಕ್ಟರ್‌ಟಾಯರ್ಸ್(16-9-29)ಮಾರುತಿ,
ಎಲ್ಲ ಎಲ್.ಸಿ.ವಿ., ಅಟೋರಿಕ್ಷಾ ಮತ್ತು ಸ್ಕೂಟರ್-
ಟಾಯರಗಳ ಸೇವೆಯನ್ನು ಆರಂಭಿಸಿದ್ದೇವೆ.

ನವೀನ ಟಾಯರ್ ರಿಟ್ರೆಡರ್ಸ

ಪ್ರಭು ಕೃಪಾ, ವಿದ್ಯಾನಗರ, ಹುಬ್ಬಳ್ಳಿ-580 021

ಸಂಪರ್ಕಿಸಿರಿ :
ವರ್ಕ್ಸ್ ಪ್ರಭುಕೃಪಾ ವಿದ್ಯಾನಗರ.
ಹುಬ್ಬಳ್ಳಿ-580 021
ಫೋನ : **72226**

ಶಾಖೆಗಳು :
ವಿಜಯ ರೋಡ ಟ್ಯಾಕ್ಸಿಸ್ಟ್ಯಾಂಡ
ಎದುರಿಗೆ. **ಧಾರವಾಡ-580001**
ಫೋನ : **80506**

ಸ್ಟಾಲ್ ನಂ. 23
ಸ್ವಿಮಿಂಗ್ ಪೂಲ್ ಕಾಂಪ್ಲೆಕ್ಸ್
ಸರಕಾರಿ ವೇ ಬ್ರಿಡ್ಜ ಎದುರಿಗೆ
ಹುಬ್ಬಳ್ಳಿ. ಫೋನ : **72226**

For More Information Please Write with
Name:
Address: **Type of Vehicle:**

AK/MRB



ನಮ್ಮೆಲ್ಲ ಗ್ರಾಹಕರಿಗೆ ದೀಪಾವಳಿಯ ಹಾರ್ದಿಕ ಶುಭಾಶಯಗಳು

ಕರ್ನಾಟಕದಾದ್ಯಂತ ಪ್ರಸಿದ್ಧವಾಗಿರುವ ಅಗರಬತ್ತಿಗಳಲ್ಲಿಯೇ ಶ್ರೇಷ್ಠ






ತಯಾರಕರು : ಪಾಟೀಲ ಪರಿಮಳ ವರ್ಕ್ಸ

ನಂ. ೮೨ ಒಂದನೇ ಮುಖ್ಯ ರಸ್ತೆ ಚಾಮರಾಜ ಪೇಟೆ

ಪೋಸ್ಟ ಬಾಕ್ಸ ೧೮೨೪ ಬೆಂಗಳೂರ–೫೬೦೦೧೮ ಫೋನ : ೬೦೩೬೧೩

Wish you a happy Deepavali





Catch the World Cup fever on the Uptron superteam of TVs.

UPTRON TELEVISIONS

Exclusive Authorised Main Dealers:

M/s. Jayshree Enterprises

A. V. Circle, College Road,

DHARWAD-580 001

Phone : 80047

Grams : REGMARK

Phones : Chairman 2733 / Office 2209

ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿ, ಚಿತ್ರದುರ್ಗ.

AGRICULTURAL PRODUCE MARKET COMMITTEE, CHITRADURGA.

ಪ್ರಕಟಣೆ

ರೈತ ಭಾಂದವರೇ,

ತಮ್ಮ ಹುಟ್ಟುವಳಿಗಳಿಗೆ ಸ್ಪರ್ಧಾತ್ಮಕ ಬೆಲೆ ದೊರೆಯಲು ಅನುಕೂಲವಾಗುವಂತೆ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿ, ಚಿತ್ರದುರ್ಗ. ಇವರು ಮಾರುಕಟ್ಟೆ ಆವರಣದಲ್ಲಿ ಸಕಲ ಸೌಲಭ್ಯಗಳನ್ನು ಒದಗಿಸಿರುತ್ತಾರೆ. ಕಾರಣ ತಾವು ಬೆಳೆದ ಉತ್ಪನ್ನವನ್ನು ಮಾರುಕಟ್ಟೆಯ ಸಮಿತಿಯ ಆವರಣದಲ್ಲಿಯೇ ಮಾರಾಟ ಮಾಡಿ ಹೆಚ್ಚಿನ ಲಾಭ ಪಡೆಯಲು ವಿನಂತಿಸಿದೆ.

ಅಲ್ಲದೆ ಮಾರುಕಟ್ಟೆ ವ್ಯವಹಾರಸ್ಥರಿಗೆ,

ಕರ್ನಾಟಕ ಸರ್ಕಾರದ ಸುಗ್ರಿವಾಜ್ಞೆಯ ಸಂಖ್ಯೆ : ೫ : ೮೭ ದಿನಾಂಕ ೧೦-೮-೧೯೮೭ ರ ಪ್ರಕಾರ ವ್ಯವಸಾಯೋತ್ಪನ್ನ ಮಾರಾಟ (ನಿಯಂತ್ರಣ) ಕಾಯಿದೆ ೧೯೬೬ರ ವಿಧಿಗಳಿಗೆ ತಿದ್ದುಪಡಿ ತಾರೀಖು ೧೦-೮-೧೯೮೭ ರಿಂದಲೇ ಜಾರಿಗೊಳಿಸಲಾಗಿದೆ. ಅವುಗಳ ಕೆಲವು ಮುಖ್ಯ ಅಂಶಗಳನ್ನು ಮಾರ್ಕೆಟ್ ವ್ಯವಹಾರಸ್ಥರ ತಿಳುವಳಿಕೆಗಾಗಿ ಮನವರಿಕೆ ಮಾಡಿಕೊಡಲಾಗಿದೆ.

ವಿಧಿ : ೮ : ತಿದ್ದುಪಡಿಯಾದ ಈ ಕಾಯ್ದೆಯ ಹಿನ್ನೆಲೆಯಲ್ಲಿ ಯಾವುದೇ ಲೈಸೆನ್ಸ್‌ದಾರರು ನಮ್ಮ ಚಿತ್ರದುರ್ಗ ವ್ಯವಸಾಯೋತ್ಪನ್ನ ಮಾರುಕಟ್ಟೆ ಕ್ಷೇತ್ರದ ಚಿತ್ರದುರ್ಗ ತಾಲೂಕಿನಲ್ಲಿ ಚಿತ್ರದುರ್ಗ ಮಾರುಕಟ್ಟೆ ಪ್ರಾಂಗಣದಲ್ಲಿ ಮಾತ್ರ ಮಾರಾಟ ಖರೀದಿ ಮಾಡಬಹುದಾಗಿರುತ್ತದೆ. ಎಲ್ಲಾ ನಿಯಂತ್ರಿತ ಹುಟ್ಟುವಳಿ ವ್ಯಾಪಾರ ವಹಿವಾಟನ್ನು ಮಾರುಕಟ್ಟೆ ಪ್ರಾಂಗಣಗಳನ್ನು ಹೊರತು ಪಡಿಸಿ ಬೇರೆ ಕಡೆ ಪ್ರತಿಬಂಧಿಸಲಾಗಿದೆ. ಇದನ್ನು ಉಲ್ಲಂಘಿಸಿ ವಹಿವಾಟು ನಡೆಸಿದರೆ, ವಿಧಿ ೧೧೭ ರಲ್ಲಿ ತಿಳಿಸಿರುವಂತೆ ಶಿಕ್ಷೆಗೆ ಒಳಪಡಬೇಕಾಗುವದು.

ವಿಧಿ : ೭೩ : ಮಾರುಕಟ್ಟೆ ಫೀ ಬಾಕಿಯಿಂದ ದಂಡ ಶುಲ್ಕ ಸಹಿತ ಪಾವತಿಸದ ಲೈಸೆನ್ಸ್‌ದಾರರು ಲೈಸೆನ್ಸ್ ರದ್ದತಿ ಅಮಾನತ್ತುಗಳಿಗೆ ಗುರಿಯಾಗುತ್ತಾರೆ.

ವಿಧಿ : ೮೫ : ಪ್ರಾಂಗಣದಲ್ಲಿ ದಲ್ಲಾಲರ ಮೂಲಕ ಕೃಷಿ ಉತ್ಪನ್ನಗಳನ್ನು ಖರೀದಿಸುವ ಖರೀದಿದಾರರು ಭದ್ರತಾ ಠೇವಣಿ ಇಡುವುದನ್ನು ಕಡ್ಡಾಯ ಮಾಡಲಾಗಿದೆ.

ವಿಧಿ : ೧೧೭: ಅಧಿಕೃತ ಲೈಸೆನ್ಸ್ ಪಡೆಯದೆ ವ್ಯವಹಾರ ಮಾಡುವವರಿಗೆ ಗುರಿ ಪಡಿಸಲಾಗುವ ಗರಿಷ್ಟ ದಂಡವನ್ನು ೨,೦೦೦-೦೦ ರೂ. ಗಳಿಂದ ೫,೦೦೦-೦೦ ರೂ. ಗಳಿಗೆ ಏರಿಸಲಾಗಿದೆ.

ವಿಧಿ : ೧೧೭ಎ: ಯಾವುದೇ ಲೈಸೆನ್ಸ್‌ದಾರರು ವಿಧಿ ೬೬ ರ ಅನ್ವಯ ತಮ್ಮ ವಹಿವಾಟಿಗೆ ಸಂಬಂಧಿಸಿದ ಲೆಕ್ಕ-ಪತ್ರಗಳನ್ನು ಸೂಚಿಸಿದ ಸಮಯದಲ್ಲಿ ಹಾಜರುಪಡಿಸದೆ ಇರುವುದು ದಂಡನಾರ್ಹ ಅಪರಾಧವಾಗಿದ್ದು ರೂ. ೧,೦೦೦-೦೦ ಗಳ ಗರಿಷ್ಟ ದಂಡಕ್ಕೆ ಗುರಿಯಾಗುತ್ತಾರೆ.

ವಿಧಿ : ೧೧೮ : ಯಾವುದೇ ಮಾರಾಟಗಾರರಿಂದ ಅನಧಿಕೃತ ರಿವಾಜುಗಳನ್ನು ಪಡೆಯುವುದು ಅಪರಾಧವಾಗಿದ್ದು ರೂ. ೫,೦೦೦-೦೦ ಗಳ ವರೆಗೆ ದಂಡಕ್ಕೆ ಗುರಿಯಾಗುತ್ತಾರೆ. ಮತ್ತು ಪುನರಾವರ್ತನೆ ಸಂದರ್ಭಗಳಲ್ಲಿ ಕನಿಷ್ಟ ಒಂದು ತಿಂಗಳ ಕಾರಾಗೃಹವಾಸ ಕಡ್ಡಾಯವಾಗಿರುತ್ತದೆ. ಎಲ್ಲಾ ಮಾರುಕಟ್ಟೆ ವ್ಯವಹಾರಸ್ಥರು ಸಮಿತಿಯೊಡನೆ ಸಹಕರಿಸಬೇಕಾಗಿ ಕೋರಲಾಗಿದೆ.

ಸಿ. ಎಸ್. ರಾಮಣ್ಣ
ಕಾರ್ಯದರ್ಶಿ
ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿ,
ಚಿತ್ರದುರ್ಗ

ಜಿ. ತಿಮ್ಮಾರೆಡ್ಡಿ
ಅಧ್ಯಕ್ಷರು
ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿ
ಚಿತ್ರದುರ್ಗ


ಫ್ಲೇರ್‌ನ ಜೊತೆ, ಮೋಜು ಮಜಾ!
FLAIR
ಫ್ಲೇರ್
ಡಿಲಕ್ಸ್ ಫಿಲ್ಟರ್
ಫ್ಲೇರ್ ನೀಡಿ ನಿಮ್ಮ ಸ್ಟೈಲ್‌ಗೆ ಬೆಡಗು ನೀಡಿ
STATUTORY WARNING: CIGARETTE SMOKING IS INJURIOUS TO HEALTH


ಈ ದೀಪಾವಳಿಯಂದು
ಸಮೃದ್ಧತೆಯ ಜ್ಯೋತಿಯನ್ನು ಬೆಳಗಿಸಿ


ನಿಮ್ಮ ಅಭಿವೃದ್ಧಿಯ ಜ್ಯೋತಿ ಬೆಳಗಲು ಲಾಭದಾಯಕ ಸಣ್ಣ ಉಳಿತಾಯ ಯೋಜನೆಗಳು



ಅಭಿವೃದ್ಧಿಯ ಜ್ಯೋತಿ ಬೆಳಗಲು
ಸಣ್ಣ ಉಳಿತಾಯವೆ ತೈಲ ಅಗತ್ಯ.


ಮಾಸಿಕ ಆದಾಯ ಯೋಜನೆ*

* ವೈಯಕ್ತಿಕ ಠೇವಣಿದಾರರಿಗೆ ಮಾತ್ರ ಸೀಮಿತ.
* ಬಡ್ಡಿಯ ದರ — ವಾರ್ಷಿಕ ಶೇಕಡಾ 12 ರಂತೆ ಪ್ರತಿ ತಿಂಗಳು ಸಂದಾಯ ಅವಧಿ ತುಂಬಿದ ಮೇಲೆ ಮೂಲಧನದ ಜೊತೆಗೆ ಶೇಕಡ 10 ರಷ್ಟು ಬೋನಸ್ ದೊರೆಯುತ್ತದೆ.
* ಅವಧಿ — ಆರು ವರ್ಷಗಳು.
* ಕನಿಷ್ಠ ಠೇವಣಿ ಮೊತ್ತ 5,000/- ರೂಪಾಯಿಗಳು ಮತ್ತು ಅದರ ಗಣಕಗಳಲ್ಲಿ ಹಣ ಇಡಬಹುದು. ವೈಯಕ್ತಿಕ ಗರಿಷ್ಠ ಠೇವಣಿ ಮೊತ್ತ 1,00,000/- ರೂಪಾಯಿಗಳು. ಜಂಟಿ ಗರಿಷ್ಠ ಠೇವಣಿ ಮೊತ್ತ 2,00,000/- ರೂಪಾಯಿಗಳು.
* ಅವಧಿಗೆ ಮೊದಲು ಒಂದು ವರ್ಷದ ನಂತರ ಠೇವಣಿ ಹಿಂತೆಗೆದುಕೊಳ್ಳುವ ಹಾಗೂ ನಾಮ ನಿರ್ದೇಶನ ಮಾಡುವ ಸೌಲಭ್ಯವಿದೆ.
* ಸೇವಾ ನಿವೃತ್ತಿ ಹೊಂದುವವರಿಗೆ ಅತ್ಯಂತ ಅನುಕೂಲವಾದ ಯೋಜನೆ.
* ಮುಖ್ಯ ಅಂಚೆ ಕಛೇರಿ ಮತ್ತು ಇನ್ನಿತರ ಆಯ್ದ ಅಂಚೆ ಕಛೇರಿಗಳ ಮುಖಾಂತರ ಕಾರ್ಯವೆಸಗುತ್ತದೆ.



ಹೊಸ ರಾಷ್ಟ್ರೀಯ ಉಳಿತಾಯ ಯೋಜನೆ — 1987*

* ಎಲ್ಲ ವ್ಯಕ್ತಿಗಳಿಗೆ ಮತ್ತು ಹಿಂದು ಅವಿಭಕ್ತ ಕುಟುಂಬದ ಸದ
ಅವಕಾಶವಿದೆ. ಕನಿಷ್ಠ ಠೇವಣಿ ಮೊತ್ತ 100/- ರೂಪಾಯಿಗಳ
ಠೇವಣಿ ಮೊತ್ತ ವರ್ಷವೊಂದಕ್ಕೆ 20,000/- ರೂಪಾಯಿಗ
* ಹಾಲಿ ಬಡ್ಡಿಯ ದರ — ವರ್ಷಕ್ಕೆ ಶೇಕಡಾ 9 ರಂತೆ.
* ಠೇವಣಿ ಮಾಡಿದ ಅರ್ಧ ಭಾಗದ ಮೊತ್ತಕ್ಕೆ ಸಂಪೂರ್ಣ ಆದಾಯ ತೆರಿಗೆ 80 ಸಿ.ಸಿ.ಎ. ಪ್ರಕಾರ ವಿನಾಯಿ
ದೊರೆಯುವುದು. ಮತ್ತು ಸಂಪತ್ತು ತೆರಿಗೆಯಿಂದ ಕೂಡ ಸೆಕ್ಷನ್ 5 (1) XXVb ಪ್ರಕಾರ ವಿನಾಯಿತಿ ಲಭ್ಯವಿದೆ.
* ಮೂರು ಆರ್ಥಿಕ ವರ್ಷಗಳ ನಂತರ ಹಿಂತೆಗೆದುಕೊಳ್ಳುವ ಅವಕಾಶವಿರುತ್ತದೆ.
* ಸಾರ್ವಜನಿಕ ಅಂಚೆ ಕಛೇರಿಯಲ್ಲಿ ಮತ್ತು ಎಲ್ಲ ಮುಖ್ಯ ಅಂಚೆ ಕಛೇರಿಗಳಲ್ಲಿ ಠೇವಣಿ ಸ್ವೀಕರಿಸಲಾಗುವುದು.




ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳು ಸೇರಿದಂತೆ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಜಾರಿಯಲ್ಲಿರುವ ಇಂದಿರಾ ವಿಕಾಸ ಪತ್ರ ಮತ್ತು ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟು ಬಹುಮಾನ ಯೋಜನೆ.

ನೀವು ಕೊಳ್ಳುವ ಪ್ರತಿ 250/- ರೂಪಾಯಿಗಳ ಇಂದಿರಾ ವಿಕಾಸಪತ್ರ ಅಥವಾ ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟು ಠೇವಣಿಗೆ ಒಂದು ಉಚಿತ ಗಿಫ್ಟ್ ಕೂಪನನ್ನು ಪಡೆದು ಆಕರ್ಷಕ ಬಹುಮಾನಗಳು ದೊರೆಯುವ ಅವಕಾಶವಿದೆ.

ಇಂದಿರಾ ವಿಕಾಸ ಪತ್ರ

ಬಡ್ಡಿಯ ದರ — ಸರಳ ಬಡ್ಡಿ ವರ್ಷಕ್ಕೆ ಶೇಕಡಾ 18.18 ರಂತೆ ದೊರೆಯುವುದು.



ರಾಷ್ಟ್ರೀಯ ಉಳಿತಾಯ ಸರ್ಟಿಫಿ

6 ಮತ್ತು 7ನೇ ಮಾಲಿಕೆ: ವಾರ್ಷಿಕ ಶೇಕಡಾ 11 ರ
ನೀಡಲಾಗುವುದು. ಅರ್ಧ ವರ
ಸಲ ಚಕ್ರಬಡ್ಡಿಯ ಲೆಕ್ಕ ಹಾಕಲಾ
ಹೊರನಾಡ ಭಾರತೀಯರಿ
ಶೇಕಡಾ 13 ರಂತೆ ಬ


ಅಂಚೆ ಕಛೇರಿಗಳಿಂದ ಇಂದಿರಾ ವಿಕಾಸ ಪತ್ರ ಮತ್ತು ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟು ಗಳನ್ನು ಕೊಳ್ಳಿರಿ. ಮತ್ತು ಸಂಬಂಧ ಪಟ್ಟ ರಾಜ್ಯ ಸರ್ಕಾರಿ ಕಛೇರಿಗಳಲ್ಲಿ ಗಿಫ್ಟ್ ಕೂಪನ್ನು ಗಳನ್ನು ಉಚಿತವಾಗಿ ಪಡೆಯಿರಿ.

ಇಂದಿರಾ ವಿಕಾಸ ಪತ್ರ ಮತ್ತು ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟುಗಳು ಅತ್ಯಧಿಕ ಲಾಭಗಳಿಸಲು ಹಣ ಹೂಡಿಕೆಯ ಅತ್ಯುತ್ತಮ ಮಾರ್ಗ. ಇದರಿಂದ ನಿಮಗೂ ರಾಜ್ಯಕ್ಕೂ ಮತ್ತು ರಾಷ್ಟ್ರಕ್ಕೂ ಲಾಭವಿದೆ

ಸಣ್ಣ ಉಳಿತಾಯ ನಿರ್ದೇಶನಾಲಯ

ವಿಶ್ವೇಶ್ವರಯ್ಯ ಕೇಂದ್ರ, ಬೆಂಗಳೂರು-560 0
ದೂರವಾಣಿ: 72785, 258470.

Printed and published by N. H. Wadavi on behalf of Loka Shikshana Trust, Hubli-Bangalore
at Samyukta Karnataka Press, Koppikar Road, Hubli - 580 020.



COVER PRINTED AT BHARAT PHOTO OFFSET WORKS I